ಕನ್ನಡ ಗ್ರಂಥಸಂಪಾದನೆಯಲ್ಲಿ ಮಹಿಳಾ ಪ್ರತಿನಿಧೀಕರಣ

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ(ಪಿಎಚ್.ಡಿ) ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಗೀತಾ ಸಿ.

ಮಾರ್ಗದರ್ಶಕರು

ಡಾ. ವೀರೇಶ ಬಡಿಗೇರ

ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೭

ಕನ್ನಡ ಗ್ರಂಥಸಂಪಾದನೆಯಲ್ಲಿ ಮಹಿಳಾ ಪ್ರತಿನಿಧೀಕರಣ

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ(ಪಿಎಚ್.ಡಿ) ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ಗೀತಾ ಸಿ.

ಮಾರ್ಗದರ್ಶಕರು

ಡಾ. ವೀರೇಶ ಬಡಿಗೇರ
ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩೨೭೬

೨೦೧೭

ಮಾರ್ಗದರ್ಶಕರ ದೃಢೀಕರಣ ಪತ್ರ

ಗೀತಾ ಸಿ. ಅವರು ನನ್ನ ಮಾರ್ಗದರ್ಶನದಲ್ಲಿ **ಕನ್ನಡ ಗ್ರಂಥಸಂಪಾದನೆಯಲ್ಲಿ ಮಹಿಳಾ ಪ್ರತಿನಿಧೀಕರಣ** ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರಕ್ಕೆ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿರುತ್ತಾರೆ.

ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

[signature]

ಡಾ. ವೀರೇಶ ಬಡಿಗೇರ

ಪ್ರಾಧ್ಯಾಪಕರು, ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ- ೫೮೩ ೨೭೬

ಸ್ಥಳ : ಹಂಪಿ. ವಿದ್ಯಾರಣ್ಯ
ದಿನಾಂಕ : 18/12/2017

ಸಂಶೋಧಕರ ಪ್ರಮಾಣ ಪತ್ರ

ಕನ್ನಡ ಗ್ರಂಥಸಂಪಾದನೆಯಲ್ಲಿ ಮಹಿಳಾ ಪ್ರತಿನಿಧೀಕರಣ ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ **ಡಾ.ವೀರೇಶ ಬಡಿಗೇರ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ.

ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟಣೆಗೊಳಿಸಿಲ್ಲ. ಇದು ನನ್ನ ಸ್ವತಂತ್ರವಾದ ಸಂಶೋಧನ ಅಧ್ಯಯನವಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

Geetha C

(ಗೀತಾ ಸಿ.)
ಸಂಶೋಧನಾ ವಿದ್ಯಾರ್ಥಿನಿ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ– ೫೮೩ ೨೭೬

ಸ್ಥಳ : ಹಂಪಿ. ವಿದ್ಯಾರಣ್ಯ
ದಿನಾಂಕ: 18/12/2017

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ಸ್ವರೂಪ

೧.೧. ಪ್ರಸ್ತಾವನೆ

೧.೧.೧. ಅಧ್ಯಯನದ ಉದ್ದೇಶ

೧.೧.೨. ಅಧ್ಯಯನದ ವ್ಯಾಪ್ತಿ

೧.೧.೩. ಅಧ್ಯಯನದ ಸ್ವರೂಪ

೧.೨. ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ಸ್ವರೂಪ

೧.೧. ಪ್ರಸ್ತಾವನೆ

"ಭಾರತೀಯ ಅಥವಾ ಕನ್ನಡ ಗ್ರಂಥಸಂಪಾದನೆಯನ್ನು ಸ್ವಯಂಪೂರ್ಣವಾದ ಜ್ಞಾನ ಶಿಸ್ತನ್ನಾಗಿ ಮತ್ತು ಏಕಮುಖೀ ಆಕೃತಿಗಳಲ್ಲಿ ಗ್ರಹಿಸಿದ ಸಂಗತಿಗಳೇ ನಮ್ಮೆದುರಿಗಿವೆ. ನಮ್ಮ ಬಹಳಷ್ಟು ಅಧ್ಯಯನ ನೆಲೆಗಳು ಅಭಿಜಾತ ಮತ್ತು ಪಶ್ಚಿಮದ ಜೊತೆಗಿನ ನಿಯಂತ್ರಿತ ಸಂಬಂಧವನ್ನು ಹೊಂದಿರುವುದು ಇದಕ್ಕೆ ಮುಖ್ಯ ಕಾರಣ. ಚರಿತ್ರೆ ಮತ್ತು ಸಮಾಜ ವಿಜ್ಞಾನಗಳಲ್ಲಿ ಸಾಂಪ್ರದಾಯಿಕ ಅಧ್ಯಯನಗಳು ಭಾರತದ ಏಕಮುಖಿ ಕಲ್ಪನೆಯೊಂದನ್ನು ರೂಪಿಸಿರುವ ಸಂಗತಿಗಳು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕನ್ನಡ ಸಾಹಿತ್ಯ ವಿಮರ್ಶೆ ಮತ್ತು ಗ್ರಂಥಸಂಪಾದನ ಶಿಸ್ತುಗಳನ್ನು ಗಾಢವಾಗಿ ಪ್ರಭಾವಿಸಿವೆ. ಭಾರತದ ಭೂತಕಾಲದ ಬಗೆಗೆ ನಿರ್ಮಿತವಾಗಿರುವ ಏಕೀಕೃತ ಪ್ರತಿಮೆಯೊಂದು ಭಾರತೀಯ ಸಮಾಜ ಸಂಸ್ಕೃತಿಗಳ ಬಗೆಗೆ ಅನೇಕ ಪರಿಕಲ್ಪನೆಗಳನ್ನು ಊಹೆಗಳನ್ನು ರೂಪಿಸಿವೆ. ಹೀಗಾಗಿ ಸಾಂಸ್ಕೃತಿಕ ಅಧ್ಯಯನ ಸಾಹಿತ್ಯಿಕ ಅಧ್ಯಯನ ಇವೆರಡರ ನಡುವೆ ನಿರಂತರ ಕೊಡುಕೊಳ್ಳುವಿಕೆ ಇರುತ್ತದೆ. ಈ ಕ್ರಿಯೆಯನ್ನು ಸಾಂಸ್ಕೃತಿಕ ಅಧ್ಯಯನ ನಿರ್ದೇಶಿಸುತ್ತದೆ. ಆದ್ದರಿಂದ ಭಾರತದ ಬಗೆಗಿನ ಅದರಲ್ಲೂ ಭೂತಕಾಲದ ಬಗೆಗಿನ ಪಶ್ಚಿಮದ ಸಮಾಜಶಾಸ್ತ್ರೀಯ ಮತ್ತು ಚಾರಿತ್ರಿಕ ಎಂಬ ರೂಪಗಳಿಂದ ಪ್ರಭಾವಿತವಾಗಿರುವ ಕನ್ನಡ ಸಾಹಿತ್ಯ ಅಧ್ಯಯನಗಳು ಯಾವಾಗಲೂ ತಮ್ಮನ್ನು ಓರಿಯಂಟಲ್ ಎಂದು ಕರೆಯಲಾಗುವ ಪರಂಪರಾನುಗತ ನಿಲುವುಗಳ ಜೊತೆಗೆ ಗುರುತಿಸಿಕೊಂಡಿವೆ. ಇದಕ್ಕೆ ಭಾರತೀಯ ಗ್ರಂಥಸಂಪಾದನೆಯೂ ಹೊರತಲ್ಲ. ಈ ಕಾರಣಕ್ಕಾಗಿ ಪ್ರಸ್ತುತ ಅಧ್ಯಯನವು ಕನ್ನಡ ಗ್ರಂಥಸಂಪಾದನೆಯು ಸಾಹಿತ್ಯ ಅಧ್ಯಯನಕ್ಕಿಂತ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಧ್ಯಯನಗಳಾಗಿ ಪರಿಭಾವಿಸಲು ಅಪೇಕ್ಷೆ ಪಡುತ್ತದೆ. ಇದಕ್ಕೆ ಕಾರಣ ಗ್ರಂಥಸಂಪಾದನೆಯಂಥ ಶಾಸ್ತ್ರೀಯ ಹಾಗೂ ಪುರುಷ ಪ್ರಧಾನವಾದ ಜ್ಞಾನ ಶಿಸ್ತಿನಲ್ಲಿ ಹುದುಗಿಕೊಂಡಿರುವ ಮಹಿಳೆಯ ಅರಿವಿನ ರೂಪಗಳನ್ನು ಗುರುತಿಸಿಕೊಳ್ಳಲು ಈ ಪರಿಕಲ್ಪನೆ ಇಂಬು ನೀಡುತ್ತದೆ.

ಬಹಳ ಮುಖ್ಯವಾಗಿ ಮೂಲ, ಶುದ್ಧ, ಪ್ರಮಾಣೀಕೃತ ಮತ್ತು ಆಧುನಿಕ ಯಜಮಾನಿ ಧೋರಣೆಗಳನ್ನು ರೂಪಿಸಿದ್ದೇ ಓರಿಯಂಟಲ್ ಹಾಗೂ ವಸಾಹತುಶಾಹಿ ಆಧುನಿಕ ಚಿಂತನೆಗಳು.

ಭೂತಕಾಲದ ಭಾರತೀಯ ಪರಂಪರೆಯಲ್ಲಿ ಈ ಗುಣಗಳಿದ್ದರೂ ಅವುಗಳ ಮಧ್ಯೆ ಶಕ್ತಿಯುತವಾದ ವಿನಿಮಯ ಎಂಬುದಿತ್ತು. ಆದರೆ ಓರಿಯಂಟಲ್ ಮನಸ್ಸುಗಳು ಭಾರತ ಭೂತಕಾಲದ ಹಾಗೂ ಪ್ರಾದೇಶಿಕ ಸಂವೇದನೆಗಳನ್ನು ಅತಾರ್ಕಿಕ, ಆದಿಭೌತಿಕ, ಅನಾಗರಿಕ, ಅಶುದ್ಧ ಎಂದು ಉಪೇಕ್ಷಿಸುತ್ತ ಬಂದಿವೆ. ಇಂಥ ಧೋರಣೆಗಳು ಗ್ರಂಥಸಂಪಾನೆಯಂತಹ ಶಾಸ್ತ್ರೀಯ ಕ್ಷೇತ್ರಗಳನ್ನು ಪ್ರಭಾವಿಸಿವೆ. ಕವಿಯನ್ನು ಮಹೋನ್ನತವಾಗಿಯೂ ಕೃತಿಯನ್ನು ಪ್ರಶ್ನಾತೀತವಾಗಿಯೂ ಸ್ವೀಕರಿಸುವ ನೆಲೆಗಳು ಲಿಂಗ, ಜಾತಿ, ಲಿಪಿಕಾರ, ಪ್ರತಿ ಕೃತಿ ಮತ್ತು ಪ್ರತಿಯೊಳಗಿನ ಸಾಂಸ್ಕೃತಿಕತೆಯ ವೈವಿಧ್ಯತೆಯನ್ನು ನಿರಾಕರಿಸುತ್ತವೆ. ಕೃತಿಯ ಸಾಮುದಾಯಿಕ ರಚನೆ ಹಾಗೂ ನಿರ್ವಹಣೆಯನ್ನು ತಟಸ್ಥಗೊಳಿಸುತ್ತವೆ. ಸಾಹಿತ್ಯಿಕ ಮತ್ತು ಸಾಂಸ್ಕೃತಿಕವಲ್ಲವೆಂದು ಬಗೆಯುತ್ತವೆ. ಶುದ್ಧ ಮತ್ತು ತಾರ್ಕಿಕ ರಚನೆಗಳ ದಾರಿ ಹಿಡಿದು ಹೊರಟವರಿಗೆ ಇವುಗಳ ಒಳ ಅರಿವು ಅರ್ಥವಾಗುವುದಿಲ್ಲ.

ಹೀಗೆ ಬಹು ಸಾಂಸ್ಕೃತಿಕ ಆವರಣದಲ್ಲಿ ಬಹು ಪ್ರಯೋಜನಾರ್ಥವಾಗಿ ಹುಟ್ಟಿಬಂದ ಹಸ್ತಪ್ರತಿಗಳ ಭಾಷಿಕ ಆಕೃತಿಗಳು, ಚಲನಶೀಲ ಸಂಸ್ಕೃತಿಯೊಂದು ತನ್ನ ಕಾಲದ ಅಗತ್ಯಗಳಿಗೆ ತಕ್ಕಂತೆ ಮುರಿದು ಕಟ್ಟುತ್ತಾ ಬಂದ ವಾಗ್ವಾದ ಹಾಗೂ ಅನುಸಂಧಾನದ ಫಲಗಳಾಗಿವೆ. ಕನ್ನಡ ಸಾಹಿತ್ಯ ಸಂಸ್ಕೃತಿಯಲ್ಲಿ ಅಧಿಕೃತ ಹಾಗೂ ಏಕಮೇವ ಪಠ್ಯ ಎಂಬ ಪರಿಕಲ್ಪನೆಯೇ ಅಸಂಗತವಾದದ್ದು. ಭಾರತೀಯ ಬರಹ ಮತ್ತು ಮೌಖಿಕ ಸಂಸ್ಕೃತಿಯು ಬಹುವಚನೀಯ ಪರಂಪರೆಗೆ ಸೇರಿದೆ ಎಂದು ಎ.ಕೆ. ರಾಮಾನುಜನ್ ಅವರು ಒಂದು ಕಡೆಗೆ ಹೇಳುತ್ತಾರೆ. ಭಾರತೀಯ ಸಾಹಿತ್ಯದ್ದಕ್ಕೂ ರಚನೆಯೊಂದನ್ನು ಹೀಗೆ ಒಡೆದು ಕಟ್ಟುವ ಹಲವು ಮಾದರಿಗಳು ಸಿಗುತ್ತವೆ. ಭಾಷಿಕ ಸಂಕಥನಗಳನ್ನು ಅವು ಮೌಖಿಕ ರೂಪದಲ್ಲಿರಲಿ ಅಥವಾ ಲಿಖಿತ ರೂಪದಲ್ಲಿರಲಿ ಮರು ರೂಪದಲ್ಲಿ ನಿರೂಪಿಸುವುದು ಸಂಸ್ಕೃತಿಯ ಒಂದು ಪ್ರವೃತ್ತಿ ಆಗಿರುತ್ತದೆ. ಇಂಥ ಸಾಂಸ್ಕೃತಿಕ ಸಂದರ್ಭದ ಭಾರತದಲ್ಲಿ ಚಾಲ್ತಿಯಲ್ಲಿರುವ ಗ್ರಂಥಸಂಪಾದನಾ ವಿಧಾನಗಳು, ಶಾಸ್ತ್ರೀಯ ನೆಲೆಗಟ್ಟುಗಳು, ಕರ್ತೃವಿನ ಮೂಲಪಾಠ ಹಾಗೂ ಮೂಲ ಅರ್ಥದ ಕಾಣ್ಕೆಗೆ ಒಲುಮೆ ತೋರುತ್ತವೆ. ಪಠ್ಯದೊಡನೆ ಸಂಸ್ಕೃತಿಯು ನಡೆಸಿದ ಅನುಸಂಧಾನಗಳನ್ನು ಇವು ಮುಖ್ಯವೆಂದು ಪರಿಗಣಿಸುವುದಿಲ್ಲ. ಹೀಗೆ ಪಠ್ಯವೊಂದರ ಜೀವಂತಿಕೆಯಿರುವುದು ಅದರ ಮರು ರೂಪಧಾರಣಾ ಸಾಮರ್ಥ್ಯದಲ್ಲಿದೆ ಎಂಬುದು ಗಮನಾರ್ಹ."[೧]

ಭಾರತೀಯ ಸಾಹಿತ್ಯ ಸಂದರ್ಭದಲ್ಲಿ ಗ್ರಂಥಸಂಪಾದನ ಶಾಸ್ತ್ರದ ಬೆಳವಣಿಗೆ ಬಹಳ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿದೆ. ಮುದ್ರಣ ತಂತ್ರಜ್ಞಾನದ ಮೂಲಕ ಗ್ರಂಥಸಂಪಾದನೆ ಭಾರತಕ್ಕೆ ಬಂದಿತಾದರೂ, ಗ್ರಂಥಗಳ ಶುದ್ಧಿ–ಅಶುದ್ಧಿ ಪ್ರಜ್ಞೆ ಈ ಮೊದಲು ಭಾರತೀಯರಿಗೆ ಇರಲಿಲ್ಲವೆಂದಲ್ಲ. ಗ್ರಂಥಸಂಪಾದನೆ, ಸಂಸ್ಕರಣೆಗೆ ಸಂಬಂಧಿಸಿದಂತೆ ಒಂದು ರೀತಿಯ ಶಾಸ್ತ್ರೀಯ ವಿಧಾನವನ್ನು ನಿರ್ಮಾಣ ಮಾಡಿಕೊಳ್ಳದೇ ಹೋದರೂ ಗ್ರಂಥ ರಕ್ಷಣೆ, ಗ್ರಂಥ ಲೇಖನ, ಪಾಠ ರಕ್ಷಣೆ, ಪಾಠ ಸಂಗ್ರಹ ಮತ್ತು ಪಾಠ ನಿರ್ಣಯ ಈ ಎಲ್ಲಾ ಅಂಶಗಳ ಅರಿವು ಪ್ರಾಚೀನ ವಿದ್ವಾಂಸರಿಗಿತ್ತು. ಹಾಗೆಯೇ ಈ ಕ್ಷೇತ್ರವು ಬಹುಮುಖ್ಯವಾಗಿ ಸ್ತ್ರೀ ಕೇಂದ್ರಿತವಾಗಿತ್ತು ಎಂಬುವುದನ್ನು ತಿಳಿಯಬಹುದು.

ಹಸ್ತಪ್ರತಿಗಳನ್ನು ಸರಸ್ವತಿ ರೂಪದಲ್ಲಿ ಆರಾಧಿಸುತ್ತಿದ್ದದ್ದು ಇದಕ್ಕೆ ಉತ್ತಮ ನಿದರ್ಶನ ಈ ಶಾಸ್ತ್ರ ಪಾಶ್ಚಾತ್ಯ ನೆಲೆಯಲ್ಲಿ ಪ್ರಾರಂಭವಾಗಿ ಸರ್ವತೋಮುಖ ಅಭಿವೃದ್ಧಿ ಪಡೆದು ೧೯ನೇ ಶತಮಾನದಲ್ಲಿ ಭಾರತಕ್ಕೆ ಆಗಮಿಸಿತು. ಅನೇಕ ವಿದೇಶಿ ವಿದ್ವಾಂಸರು ಸೇವೆ ಸಲ್ಲಿಸಿದ್ದಾರೆ(ಮ್ಯಾಕ್ಸ್‌ಮುಲ್ಲರ್, ಬ್ಯೂಲರ್, ಪೀಟರ್‌ಸನ್, ಓಪರ್ಟ್, ಕೋಲಬ್ರುಕ್, ಯೋಕೋಬಿ ಇತ್ಯಾದಿ.). ಕನ್ನಡ ಗ್ರಂಥಸಂಪಾದನೆಯ ಆಧ್ಯರಾದ ಹರ್ಮನ್ ಮೊಗ್ಲಿಂಗ್. ಕರ್ನಲ್ ಮೆಕೆಂಜಿ ಅವರು ಶಾಸನ, ಹಸ್ತಪ್ರತಿ, ಕೈಫಿಯತ್ತು, ಬಖೈರ್, ರಾಜರ ವಂಶಾವಳಿ ಮೊದಲಾದ ದಾಖಲೆಗಳನ್ನು ಸಂಗ್ರಹಿಸಿದ್ದಾರೆ. ಹಾಗೆಯೇ ಬಿ.ಎಲ್. ರೈಸ್‌ರವರು ಕುದುರೆ ಸವಾರಿ ಮಾಡಿ ಹಸ್ತಪ್ರತಿಗಳನ್ನು ಸಂಗ್ರಹಿಸಿರುವುದು. ಹಾಗೂ ಕಿಟ್ಟೆಲ್ ಅವರು ೧೮೭೨ರಲ್ಲಿ ಒಂಬತ್ತು ಹಸ್ತಪ್ರತಿಗಳ ನೆರವಿನಿಂದ ಶಬ್ದಮಣಿ ದರ್ಪಣವನ್ನು ಪರಿಷ್ಕರಿಸುವ ಮೂಲಕ ಶಾಸ್ತ್ರೀಯ ಗ್ರಂಥಸಂಪಾದನೆಯ ವಿಧಿವಿಧಾನಗಳನ್ನೂ ರೂಪಿಸಿದ್ದಾರೆ. ಇಲ್ಲಿ ಅಂದರೆ ಪ್ರತಿಯೊಂದು ಹಸ್ತಪ್ರತಿಗಳಿಗೆ ಸಂಕೇತ ನೀಡುವುದು, ವಿವಿಧ ಹಸ್ತಪ್ರತಿಗಳಿಂದ ಭಿನ್ನಪಾಠ ಗುರುತಿಸಿರುವುದಲ್ಲದೆ, ಅವುಗಳಿಗೆ ಅಡಿಟಿಪ್ಪಣಿಯಲ್ಲಿ ಪಾಠಾಂತರಗಳನ್ನು ನೀಡಿರುತ್ತಾರೆ. ಪ್ರತಿ ಸೂತ್ರಕ್ಕೂ ಪದಚ್ಛೇದ, ಅನ್ವಯ, ಟೀಕು ವೃತ್ತಿ, ಸೂಕ್ತ ಪೀಠಿಕೆ, ಪೂರಕ ಅನುಬಂಧಗಳನ್ನು ಕೊಡುವ ಮೂಲಕ ಕಿಟ್ಟೆಲ್ ಅವರು ಕನ್ನಡ ಶಾಸ್ತ್ರೀಯ ಗ್ರಂಥಸಂಪಾದನೆಯ ಮುನ್ನುಡಿ ಬರೆದರು.

ಇಂಗ್ಲೀಷ್ ಶಿಕ್ಷಣ ಪಡೆದ ದೇಸಿ ವಿದ್ವಾಂಸರಾದ ಭಂಡಾರಕರ್, ಪಿ.ಎಲ್. ವೈದ್ಯ ಮೊದಲಾದವರಿಂದ ಶಾಸ್ತ್ರಶುದ್ಧ ಸಂಪಾದನೆಗಳು ಹೊರಬಂದವು. ಅನಂತರದ ಅವಧಿಯಲ್ಲಿ ಸುಕ್ತಂಕರ್ ಅವರು ಜರ್ಮನಿಗೆ ಹೋಗಿ ಗ್ರಂಥಸಂಪಾದನೆಯ ವಿಧಿವಿಧಾನಗಳ ಬಗ್ಗೆ ಅಧ್ಯಯನ ಮಾಡಿ ಭಾರತದಲ್ಲಿ ಗ್ರಂಥಸಂಪಾದನೆಗೆ ಸಂಬಂಧಿಸಿದಂತೆ ಶಾಸ್ತ್ರೀಯ ತಳಪಾಯ ಹಾಕಿದರು. ಇದೇ ಸಂದರ್ಭದಲ್ಲಿ ವೇಲನಾಡು ಸುಬ್ರಹ್ಮಣ್ಯಶಾಸ್ತ್ರಿ, ಸೋಸಲೆ ಅಯ್ಯಾಶಾಸ್ತ್ರಿ, ಎನ್.ಆರ್. ಕರಿಬಸವ ಶಾಸ್ತ್ರಿ, ಪಿ.ಆರ್. ಕರಿಬಸವ ಶಾಸ್ತ್ರಿ, ನರಸಿಂಹಯ್ಯ ಹೊಳೆಕಲ್ಲ, ಕೆ.ಬಿ. ಪಾಠಕ್ ಮತ್ತು ಬಿ. ಮಲ್ಲಪ್ಪ ಅವರ ಪರಿಶ್ರಮ ಮತ್ತು ಶಾಸ್ತ್ರ ಸಾಹಿತ್ಯದ ಬಗೆಗಿನ ಆಸಕ್ತಿಯಿಂದಾಗಿ ಪ್ರಾಚೀನ ಕನ್ನಡ ಕಾವ್ಯಗಳು ಪ್ರಕಟವಾದವು.

ಅನಂತರದ ಕಾಲಾವಧಿಯಲ್ಲಿ ಕನ್ನಡ ಗ್ರಂಥಸಂಪಾದನ ಕಾರ್ಯ ಮತ್ತಷ್ಟು ಸಮೃದ್ಧಿಯಾಗಿ ನಡೆಯಿತು. ೧೮೯೭ರಲ್ಲಿ ಎಂ.ಎ. ರಾಮಾನುಜಯ್ಯಂಗಾರ್ ಮತ್ತು ಎಸ್.ಜಿ. ನರಸಿಂಹಾಚಾರ್ ಪ್ರಾರಂಭಿಸಿದ 'ಕರ್ನಾಟಕ ಕಾವ್ಯಮಂಜರಿ' ಮಾಸ ಪತ್ರಿಕೆ ಕರ್ನಾಟಕದ ಕಾವ್ಯಕಲಾನಿಧಿಯಾಗಿ ಮಾರ್ಪಟ್ಟಿತು. ಇದರ ಮುಖಾಂತರ ಅನೇಕ ಪ್ರಾಚೀನ ಕನ್ನಡ ಗ್ರಂಥಗಳು ಹೊರ ಬಂದವು. ನಂತರದಲ್ಲಿ ಟಿ.ಎಸ್. ವೆಂಕಣಯ್ಯ ಅವರು ಬಸವರಾಜ ದೇವರ ರಗಳೆ, ಸಿದ್ಧರಾಮ ಚಾರಿತ್ರ ಕೃತಿಗಳನ್ನು ಎ.ಆರ್. ಕೃಷ್ಣಶಾಸ್ತ್ರಿ ಅವರು ಕವಿ ಜಿಹ್ವಾಬಂಧನವನ್ನು ಮತ್ತು ಇಬ್ಬರೂ ಕೂಡಿ ಹರಿಶ್ಚಂದ್ರ ಕಾವ್ಯ ಸಂಗ್ರಹವನ್ನೂ ಪರಿಷ್ಕರಿಸಿ ಪ್ರಕಟಿಸಿದರು. ಇವು ಗಾತ್ರದಲ್ಲಿ ಸಣ್ಣ ಕೃತಿಗಳಾದರೂ ಪ್ರಾಮಾಣಿಕತೆ ಪರಿಶುದ್ಧಿಯ ದೃಷ್ಟಿಯಿಂದ ಗಮನಾರ್ಹವೆನಿಸಿವೆ. ಇದೇ ಅವಧಿಯಲ್ಲಿ ತೀನಂಶ್ರೀ

ಅವರು ನಂಬಿಯಣ್ಣನ ರಗಳೆ, ಗದಾಯುದ್ಧ ಸಂಗ್ರಹ, ಡಿ.ಎಲ್. ನರಸಿಂಹಾಚಾರ್ಯರು ಸಿದ್ಧರಾಮ ಚಾರಿತ್ರ ಸಂಗ್ರಹ, ವಡ್ಡಾರಾಧನೆ, ಪಂಪರಾಮಾಯಣ(ಪಂಪ ಭಾರತ ದೀಪಿಕೆ, ಶಬ್ದವಿಹಾರ, ಪೀಠಿಕೆ ಲೇಖನಗಳು), ಶಬ್ದಮಣಿದರ್ಪಣ, ಗೋವಿನ ಹಾಡು ಇನ್ನೂ ಮುಂತಾದ ಕೃತಿಗಳನ್ನು ಸಂಪಾದಿಸಿ ಕನ್ನಡ ಗ್ರಂಥಸಂಪಾದನಾ ಕ್ಷೇತ್ರಕ್ಕೆ ಮೌಲಿಕವಾದ ಕೊಡುಗೆ ನೀಡಿದ್ದಾರೆ. ಇವರ ನಂತರ ಡಿ.ಚಂಪಾಬಾಯಿ, ಆರ್. ಶಾಮಾಶಾಸ್ತ್ರೀ, ಬಸವಲಿಂಗಯ್ಯ, ಬಿ. ಶಿವಮೂರ್ತಿಶಾಸ್ತ್ರಿ, ಎನ್. ಅನಂತರಂಗಾಚಾರ್, ಕೆ. ವೆಂಕಟರಾಮಪ್ಪ, ದೇ. ಜವರೇಗೌಡ, ಎನ್.ಎಸ್. ಕೃಷ್ಣ ಜೋಯಿಸ್ ಅವರ ನಂತರದ ತಲೆಮಾರಿನಲ್ಲಿ ಎಲ್. ಬಸವರಾಜು, ಎನ್. ಬಸವಾರಾಧ್ಯ, ಬಿ.ಎಸ್. ಸಣ್ಣಯ್ಯ, ಎಸ್.ಎಸ್. ಮಾಳವಾಡ, ಆರ್.ಸಿ. ಹಿರೇಮಠ, ಎಂ.ಎಂ. ಕಲಬುರ್ಗಿ ಮುಂತಾದವರು ಹೊಸ ರೀತಿಯ ಕ್ರಮವನ್ನೇ ಗ್ರಂಥಸಂಪಾದನೆಯಲ್ಲಿ ಅಳವಡಿಸಿಕೊಂಡರು. ಇಷ್ಟೇ ಅಲ್ಲದೆ ಸಂಪಾದನ ಕಾರ್ಯ ವಿದ್ವಾಂಸರ ಸಹಕಾರದೊಂದಿಗೆ ಅನೇಕ ಮಠಗಳಲ್ಲಿ ಪ್ರಾರಂಭವಾಯಿತು. ಮುರುಘಾಮಠದ ಬಾಲ ಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ ಮಹತ್ವಪೂರ್ಣವಾದ ಕೃತಿಗಳನ್ನು ಪರಿಷ್ಕರಿಸಿ ಹೊರತಂದಿತ್ತು. ಇಲ್ಲಿಂದ ಮುಂದೆ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಪ್ರಾರಂಭವಾದ ಕನ್ನಡ ವಿಭಾಗಗಳು ಗ್ರಂಥಸಂಪಾದನ ಕಾರ್ಯವನ್ನು ವೃತ್ತಿಯಂತೆ ಮುಂದುವರೆಸಿಕೊಂಡು ಬಂದವು. ವಿಶ್ವವಿದ್ಯಾನಿಲಯಗಳ ಜೊತೆಗೆ ಅನೇಕ ಸಂಘ ಸಂಸ್ಥೆಗಳು, ಅನುದಾನಿತ ಸಂಸ್ಥೆಗಳೂ ಕನ್ನಡ ಗ್ರಂಥ ಸಂಪಾದನ ಕಾರ್ಯದಲ್ಲಿ ತೊಡಗಿಸಿಕೊಂಡು ಅನೇಕ ಪ್ರಾಚೀನ ಕೃತಿಗಳನ್ನು ಬೆಳಕಿಗೆ ತಂದವು.

ಒಟ್ಟಾರೆಯಾಗಿ ಸುದೀರ್ಘ ಕನ್ನಡ ಗ್ರಂಥಸಂಪಾದನೆಯ ಚರಿತ್ರೆಯನ್ನು ಅವಲೋಕಿಸಿದಾಗ ಮಹಿಳಾ ಪ್ರತಿನಿಧೀಕರಣ ಎನ್ನುವುದು ಅಷ್ಟಾಗಿ ಕಂಡು ಬರುವುದಿಲ್ಲ. ಕಾರಣ ಮಹಿಳೆಯರ ಪ್ರವೇಶದ ಹಿಂದಿರುವ ಶೂನ್ಯ ಸ್ಥಿತಿಯ ನೆಲೆಗಳಾವುವು, ಇದು ಪುರುಷ ಪ್ರಧಾನ ವ್ಯವಸ್ಥೆ ಅಥವಾ ಮಹಿಳಾ ಹಿಂಜರಿಕೆಯ ಪ್ರಶ್ನೆಯೇ, ಇಲ್ಲವೇ ಜ್ಞಾನದ ಪಂಡಿತ ಪ್ರಧಾನ ಪುರುಷ ನಿಷ್ಠತೆಯ ಸಮಸ್ಯೆಯೇ ಎನ್ನುವುದನ್ನು ಹುಡುಕುವುದು ಒಟ್ಟು ಈ ಅಧ್ಯಯನದ ಮುಖ್ಯ ಭಿತ್ತಿಯಾಗಿದೆ.

೧.೧.೧. ಅಧ್ಯಯನದ ಉದ್ದೇಶ

ಪ್ರಾಚೀನ ಕಾಲದಿಂದಲೂ ಭಾರತೀಯರು ಗ್ರಂಥಸಂಪಾದನೆಯಲ್ಲಿ ಹಲವಾರು ವಿಧಾನಗಳನ್ನು ಅನುಸರಿಸುತ್ತಾ ಬಂದಿದ್ದಾರೆ. ಇದು ಹೆಚ್ಚಾಗಿ ಸಂಗ್ರಹ, ಸಂಕಲನ ಮತ್ತು ಪ್ರತೀಕರಣದ ಸ್ವರೂಪವನ್ನು ಪಡೆದಿತ್ತು. ಕಾಲಾಂತರದಲ್ಲಿ ವಿದೇಶಿ ವಿದ್ವಾಂಸರು ಗ್ರಂಥಸಂಪಾದನೆಯಲ್ಲಿ ಹೊಸ ಹೊಸ ಮಾದರಿಗಳು ಮತ್ತು ವಿಧಾನಗಳನ್ನು ರೂಪಿಸಿಕೊಂಡು ಶಾಸ್ತ್ರಬದ್ಧ ಸಂಪಾದನೆಯನ್ನು ರೂಢಿಸಿದರು. ಈ ಮಾರ್ಗವನ್ನೇ ಅನುಸರಿಸಿದ ದೇಶಿ ವಿದ್ವಾಂಸರು, ಪಂಡಿತರು ಕನ್ನಡ ಗ್ರಂಥಸಂಪಾದನೆಯ ಕಾರ್ಯದಲ್ಲಿ ನಿರಂತರಾದರು. ಕನ್ನಡ ಗ್ರಂಥಸಂಪಾದನೆಯ ಇತಿಹಾಸವನ್ನು ಅವಲೋಕಿಸಿದಾಗ ಮಹಿಳೆಯರು ಈ ಕ್ಷೇತ್ರದಲ್ಲಿ ಕಡಿಮೆ ಸಂಖ್ಯೆಯಲ್ಲಿ ಭಾಗವಹಿಸಿರುವುದು ಕಂಡುಬರುತ್ತದೆ. ಆದ್ದರಿಂದ ಶಾಸ್ತ್ರ ಸಾಹಿತ್ಯದಲ್ಲಿ ಅಧಿಕ

ಸಂಖ್ಯೆಯಲ್ಲಿ ಮಹಿಳೆಯರು ತೊಡಗಿಸಿಕೊಳ್ಳದೆ ಇರುವುದಕ್ಕೆ ಕಾರಣಗಳೇನಿರಬಹುದು ಎಂಬುವುದನ್ನು ಗುರುತಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಹಾಗೆಯೇ ಕನ್ನಡ ಗ್ರಂಥಸಂಪಾದನೆಯಲ್ಲಿ ಮಹಿಳಾ ಪ್ರತಿನಿಧೀಕರಣವನ್ನು ಗುರುತಿಸುವುದು ಇಂದು ಜರೂರಾಗಿದೆ. ಆಧುನಿಕ ಪೂರ್ವದ, ಲಿಪಿ ಹಾಗೂ ಲಿಪಿಕಾರ್ತಿಯರ, ಪ್ರತಿಕಾರ್ತಿಯರ ಹಿನ್ನೆಲೆ ಮತ್ತು ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಮಹಿಳಾ ಕನ್ನಡ ಗ್ರಂಥಸಂಪಾದಕಿಯರ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಕಟ್ಟಿಕೊಳ್ಳುವುದು. ಈ ಅಧ್ಯಯನದ ಪ್ರಮುಖ ಉದ್ದೇಶಗಳಲ್ಲೊಂದಾಗಿದೆ. ಡಿ. ಚಂಪಾಬಾಯಿ ಅವರು ೧೯೪೦ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯಲ್ಲಿ ೧೪ನೇ ಕೃತಿಯಾಗಿ 'ಹದಿಬದೆಯ ಧರ್ಮ' ಕೃತಿಯನ್ನು ಪ್ರಕಟಿಸಿದರು. ಆ ಮೂಲಕ ಕನ್ನಡ ಗ್ರಂಥಸಂಪಾದನೆ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ ಮೊಟ್ಟ ಮೊದಲ ಮಹಿಳೆ ಎಂಬ ಸ್ಥಾನ ಪಡೆದುಕೊಂಡರು. ಅದೇ ರೀತಿ ವೈ.ಸಿ. ಭಾನುಮತಿ ಅವರು ಹಳೆಗನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ೨೪ಕ್ಕೂ ಹೆಚ್ಚು ಸಂಪಾದಿತ ಕೃತಿಗಳನ್ನು ಹೊರತಂದಿದ್ದಾರೆ. ಭಾನುಮತಿ ಅವರು ಜಾನಪದ, ಆಧುನಿಕ ಸಾಹಿತ್ಯ, ಪ್ರಾಚೀನ ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡಿದ್ದಾರೆ. ಟಿ.ಎನ್. ನಾಗರತ್ನ ಅವರು ಹರಿದಾಸ ಸಾಹಿತ್ಯದಲ್ಲಿ ಜನಪ್ರಿಯ ಹಾಗೂ ಪಂಡಿತ ಆವೃತ್ತಿಗಳನ್ನು ಪರಿಷ್ಕರಿಸಿ ಪ್ರಕಟ ಮಾಡಿದ್ದಾರೆ. 'ಟಿ.ಕೆ. ಇಂದೂಬಾಯಿ' ಅವರು ಹರಿದಾಸ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಮೂರು ಕೃತಿಗಳನ್ನು ಪರಿಷ್ಕರಿಸಿದ್ದಾರೆ. ಎಂ.ಎನ್. ಲೀಲಾವತಿ, ನಗುವನಳ್ಳಿ ಪಿ. ರತ್ನ ಮುಂತಾದವರು ಈ ಕ್ಷೇತ್ರದಲ್ಲಿ ತಮ್ಮದೇ ಆದ ಸೇವೆ ಸಲ್ಲಿಸಿದ್ದಾರೆ. ಹಾಗೇ ಸ್ವ-ಆಸಕ್ತಿಯಿಂದ ಕಮಲಾ ಹಂಪನಾ, ಟಿ.ಆರ್. ಶಾಂತ, ಡಿ. ವಿಜಯ ಹಾಗೂ ಎನ್.ಆರ್.ವಿಜಯಲಕ್ಷ್ಮೀ ಇವರು ಆಂಶಿಕವಾಗಿ ಕೆಲಸ ಮಾಡಿದರೂ ಸಹ ಮೌಲಿಕವಾದ ಸಂಪಾದನಾ ಕೃತಿಗಳನ್ನು ಹೊರ ತಂದಿದ್ದಾರೆ. ಹೀಗಾಗಿ ವಿವಿಧ ಕಾರಣಗಳಿಗಾಗಿ ಗ್ರಂಥಸಂಪಾದನೆಯಲ್ಲಿ ತೊಡಗಿಕೊಂಡ ಮಹಿಳೆಯರ ಶ್ರಮ ಮತ್ತು ಅವರ ಸಂಪಾದನ ಕೃತಿಗಳ ವೈಧಾನಿಕತೆಯನ್ನು ಅಧ್ಯಯನ ಮಾಡುವುದು ಇಲ್ಲಿನ ಮುಖ್ಯ ಉದ್ದೇಶವಾಗಿದೆ.

೧.೧.೨. ಅಧ್ಯಯನದ ವ್ಯಾಪ್ತಿ

ಕನ್ನಡ ಗ್ರಂಥಸಂಪಾದನ ಕ್ಷೇತ್ರದಲ್ಲಿ ಮಹಿಳಾ ಪ್ರತಿನಿಧೀಕರಣದ ಜೊತೆಗೆ ಮಹಿಳೆ ಮತ್ತು ಕನ್ನಡ ಜ್ಞಾನ ಸ್ವರೂಪವನ್ನು ಅರಿತುಕೊಳ್ಳುವುದು ಅಧ್ಯಯನದ ಪ್ರಮುಖ ವ್ಯಾಪ್ತಿಯಾಗಿದೆ. ಆಧುನಿಕ ಪೂರ್ವದಲ್ಲಿ ಹಸ್ತಪ್ರತಿ, ಲಿಪೀಕರಣ, ಪ್ರತೀಕರಣ, ಪ್ರಸರಣ ಕ್ರಿಯೆಗಳಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ತೊಡಗಿಕೊಂಡ ಮಹಿಳೆಯರ ಮೂಲಕ ಕನ್ನಡ ಗ್ರಂಥಸಂಪಾದನೆಯನ್ನು ಅರಿಯುವುದು. ಪ್ರಾಚೀನ ಹಾಗೂ ಆಧುನಿಕ ಕನ್ನಡ ಗ್ರಂಥಸಂಪಾದನೆಯ ಪರಿಷ್ಕರಣ ಕಾರ್ಯದಲ್ಲಿ ಪೂರ್ಣ ಪ್ರಮಾಣದಲ್ಲಿ ಮತ್ತು ಆಂಶಿಕವಾಗಿ ತೊಡಗಿಕೊಂಡ ಮಹಿಳೆಯರು ಸಂಪಾದಿಸಿರುವ ಕನ್ನಡ ಕೃತಿಗಳ ವೈಧಾನಿಕತೆಯನ್ನು ಗುರುತಿಸುವುದು, ಹಾಗೆಯೇ ಸಮಕಾಲೀನ ಸಂದರ್ಭದಲ್ಲಿ ವಿವಿಧ ಜ್ಞಾನ ಶಾಖೆಗಳಲ್ಲಿ ಸಂಪಾದನಕಾರ್ತಿಯರಾಗಿ ತೊಡಗಿಕೊಂಡ ಮಹಿಳೆಯರ ಜ್ಞಾನದ ನೆಲೆಗಳನ್ನು

ಅಧ್ಯಯನ ವ್ಯಾಪ್ತಿಗೆ ತರಲಾಗಿದೆ. ಅಂದರೆ ಲಿಪೀಕರಣ, ಪ್ರತೀಕರಣ, ಪೋಷಣೆ, ಪ್ರಸರಣ ಮತ್ತು ಮುದ್ರಣ ಹಂತದ ಸಂಪಾದನೆ, ಪರಿಷ್ಕರಣೆಯ ಹರಿವಿನಲ್ಲಿ ಮಹಿಳಾ ಗ್ರಂಥಸಂಪಾದಕಿಯರ ಸಂಖ್ಯಾತ್ಮಕ ಹಾಗೂ ಗುಣಾತ್ಮಕ ಪ್ರಾತಿನಿಧ್ಯವನ್ನು ಕಂಡುಕೊಳ್ಳುವ ಪ್ರಯತ್ನ ಈ ಅಧ್ಯಯನದ್ದಾಗಿದೆ.

ವಿಶೇಷವಾಗಿ ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಕೃತಿಗಳಲ್ಲಿ ಆಧುನಿಕ ಶಿಕ್ಷಣದಿಂದ ಪ್ರಭಾವಿತರಾದ ಸ್ತ್ರೀಯರು ಅನುಸರಿಸುವ ಪರಿಷ್ಕರಣ ವಿಧಾನವನ್ನು ಅಧ್ಯಯನ ಮಾಡುವುದು ಇಲ್ಲಿನ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ.

೧.೧.೩. ಅಧ್ಯಯನದ ಸ್ವರೂಪ

ಕನ್ನಡ ಗ್ರಂಥಸಂಪಾದನೆಯಲ್ಲಿ ಮಹಿಳಾ ಪ್ರತಿನಿಧೀಕರಣ ಎಂಬ ಮಹಾಪ್ರಬಂಧವು ಒಟ್ಟು ಆರು ಅಧ್ಯಾಯಗಳನ್ನು ಒಳಗೊಂಡಿದೆ. ಮೌಖಿಕ ಹಾಗೂ ಲಿಖಿತ ಆಕರಗಳ ಕ್ರೋಢೀಕರಣ ಮತ್ತು ವಿಶ್ಲೇಷಣೆಯ ಮೂಲಕ ಈ ಪರಿಕಲ್ಪನೆಯನ್ನು ಚರ್ಚಿಸಲಾಗುತ್ತದೆ. ಹಾಗೂ ಸಂಬಂಧವಾಗಿ ಪ್ರಮುಖ ಮಹಿಳಾ ಸಂಪಾದನಾಕಾರರು ಮತ್ತು ವಿದ್ವಾಂಸರನ್ನು ಸಂಪರ್ಕಿಸಿ ಮಾಹಿತಿ ಸಂಗ್ರಹಿಸಲಾಗಿದೆ. ಮತ್ತು ಸಂಗ್ರಹಿತ ಮಾಹಿತಿಯನ್ನು ವಿವಿಧ ಅಧ್ಯಾಯಗಳಲ್ಲಿ ಪೂರಕ ಮಾಹಿತಿಯೊಂದಿಗೆ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಮೌಖಿಕ-ಲಿಖಿತ ಪ್ರಕಟಿತ ಹಾಗೂ ಅಪ್ರಕಟಿತ ಆಕರಗಳ ಸಹಾಯದಿಂದ ಅಧ್ಯಯನಕ್ಕೆ ಸಂಬಂಧಿಸಿದಂತೆ ರಾಚನಿಕ ಸ್ವರೂಪವೊಂದನ್ನು ಸಿದ್ಧಪಡಿಸಿಕೊಳ್ಳಲಾಗಿದೆ.

ಅಧ್ಯಾಯ ಒಂದು

"ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ" ಹಾಗೂ ಇದುವರೆಗೂ ಬಂದಿರುವ ಕನ್ನಡ ಗ್ರಂಥಸಂಪಾದನೆಗೆ ಸಂಬಂಧಿಸಿದ ಕೃತಿಗಳು ಮತ್ತು ಲೇಖನಗಳು ಪಿಎಚ್.ಡಿ. ಮಹಾಪ್ರಬಂಧಗಳ ಕುರಿತು ಸಮೀಕ್ಷೆ ಮಾಡಲಾಗಿದೆ. ಇಲ್ಲಿ ಬಹುಮುಖ್ಯವಾಗಿ ಮಹಿಳೆಯರು ಗ್ರಂಥಸಂಪಾದನ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವಲ್ಲಿ ಅಥವಾ ತೊಡಗಿಸಿಕೊಳ್ಳಲಾರದ ಸಂದರ್ಭದಲ್ಲಿ ಅವರಿಗೆ ಒದಗಿಬಂದಂತಹ ಅಡ್ಡಿಗಳ, ಆತಂಕಗಳ ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ಎರಡು

"ಮಹಿಳೆ ಮತ್ತು ಕನ್ನಡ ಜ್ಞಾನದ ಸ್ವರೂಪ" ಎನ್ನುವ ಈ ಅಧ್ಯಾಯದಲ್ಲಿ ಮಹಿಳೆಯರು ಶಾಸ್ತ್ರ ಸಾಹಿತ್ಯದಲ್ಲಿ ತೊಡಗಿಸಿಕೊಳ್ಳಲು ಹಾಗೂ ತೊಡಗಿಸಿಕೊಳ್ಳದಿರುವುದಕ್ಕೆ ಕಾರಣಗಳನ್ನು ಕನ್ನಡ ಸಾಹಿತ್ಯ ಸಂಸ್ಕೃತಿಯ ವಿಸ್ತಾರದ ಹರಿವಿನಲ್ಲಿ ತಾತ್ವಿಕವಾಗಿ ಚರ್ಚಿಸಲಾಗಿದೆ. ಅಂದರೆ ಕಥೆ, ಕವಿತೆ, ಕಾವ್ಯ, ಕಾದಂಬರಿಯಂತಹ ಸೃಜನಶೀಲ ಸಾಹಿತ್ಯದಲ್ಲಿ ಅಧಿಕ ಸಂಖ್ಯೆಯಲ್ಲಿ ತೊಡಗಿಸಿಕೊಂಡ ಮಹಿಳೆಯರು ಗ್ರಂಥಸಂಪಾದನೆಯಂಥ ಕ್ಷೇತ್ರದಲ್ಲಿ ಯಾಕೆ ತೊಡಗಲಿಲ್ಲ, ಶಾಸ್ತ್ರ ಸಾಹಿತ್ಯದಲ್ಲಿ ನಿರಂತರವಾಗಿ ಅಧ್ಯಯನದಲ್ಲಿ ತೊಡಗಬೇಕು, ಕ್ಷೇತ್ರಕಾರ್ಯ ಮಾಡಬೇಕು ಎಂಬ ನಿಲುವುಗಳು ಮಹಿಳೆಯರ ಭಾಗವಹಿಸುವಿಕೆ ಕುಂಠಿತಗೊಳ್ಳಲು ಕಾರಣವೇ? ಗ್ರಂಥಸಂಪಾದನ ಕಾರ್ಯಕ್ಕೆ ಬೇಕಾದ

ಹಸ್ತಪ್ರತಿಗಳು ಸುಲಭವಾಗಿ ಕೈಗೆಟುಕುವಂತಿಲ್ಲ. ಇವುಗಳನ್ನು ಪರಿಶ್ರಮದಿಂದ ಪಡೆದುಕೊಳ್ಳಬೇಕು. ಪ್ರಾಚೀನ ಕನ್ನಡ ಲಿಪಿಯ ಪರಿಚಯ, ಛಂದಸ್ಸಿನ ಅರಿವು, ಪಾಂಡಿತ್ಯದ ಜ್ಞಾನ ಗ್ರಂಥಸಂಪಾದಕನಿಗಿರಬೇಕು ಎನ್ನುವ ಪುರುಷನಿಷ್ಠ ವ್ಯಾಖ್ಯಾನಗಳು ಕಾರಣವೇ? ಹೆಣ್ಣು ಆಳವಾದ ಅಧ್ಯಯನ ಮಾಡುವುದಕ್ಕೆ ಸಮಾಜ ಹಾಗೂ ಕುಟುಂಬದಲ್ಲಿ ಹಲವಾರು ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಇಂಥ ಪಾರಂಪರಿಕವಾದ ಪಾರ್ಶ್ವಿಕ ಜ್ಞಾನ ಮೀಮಾಂಸೆಗಳು ಗ್ರಂಥಸಂಪಾದನೆಯಲ್ಲಿ ಮಹಿಳಾ ಪ್ರತಿನಿಧೀಕರಣದ ಸಮಸ್ಯೆಗಳಿಗೆ ಕಾರಣವಾಗಿರಬಹುದೆ ಎನ್ನುವ ಆವರಣದ ಮುಖಾಂತರ ಚರ್ಚಿಸಲಾಗಿದೆ.

ಅಧ್ಯಾಯ ಮೂರು

"ಮಹಿಳಾ ಕನ್ನಡ ಗ್ರಂಥಸಂಪಾದನೆಯ ಇತಿಹಾಸ ಮತ್ತು ಸ್ವರೂಪ" ಎಂಬ ಈ ಅಧ್ಯಾಯದಲ್ಲಿ ಆಧುನಿಕ ಪೂರ್ವ ಮತ್ತು ಆಧುನಿಕ ಎಂದು ಸೂಚ್ಯವಾಗಿ ವಿಭಾಗಿಸಿಕೊಂಡು ಮಹಿಳಾ ಕನ್ನಡ ಗ್ರಂಥಸಂಪಾದನೆಯ ಇತಿಹಾಸವನ್ನು ಸಂಕ್ಷಿಪ್ತವಾಗಿ ರೂಪಿಸಿಕೊಳ್ಳಲಾಗಿದೆ. ಸಂಪೂರ್ಣವಾಗಿ ಹಾಗೂ ಆಂಶಿಕವಾಗಿ ಸಂದರ್ಭದ ಅಗತ್ಯಕ್ಕಾಗಿ ಗ್ರಂಥಸಂಪಾದನೆಯಲ್ಲಿ ತೊಡಗಿಕೊಂಡ ಮಹಿಳೆಯರ ಭಿನ್ನ ಸಂವೇದನೆಗಳನ್ನು ಮತ್ತು ಅವರು ಸಂಪಾದಿಸಿದ ಕೃತಿಗಳ ಸ್ವರೂಪವನ್ನು ಕುರಿತು ಚರ್ಚಿಸಲಾಗಿದೆ. ಆ ಮೂಲಕ ಕನ್ನಡ ಗ್ರಂಥಸಂಪಾದನಾ ಕ್ಷೇತ್ರದಲ್ಲಿ ರೂಪುಗೊಂಡ ಮಹಿಳಾ ಜ್ಞಾನದ ಹಲವು ಮಾದರಿಗಳನ್ನು ಕಟ್ಟಿಕೊಡಲಾಗಿದೆ.

ಅಧ್ಯಾಯ ನಾಲ್ಕು

"ಸಮಕಾಲೀನ ಸಂದರ್ಭ ಮತ್ತು ಮಹಿಳಾ ಸಂಪಾದನಕಾರರು" ಈ ಅಧ್ಯಾಯದಲ್ಲಿ ಸಮಕಾಲೀನ ಸಂದರ್ಭದಲ್ಲಿ ಗ್ರಂಥಸಂಪಾದನ ಕ್ಷೇತ್ರದಲ್ಲಿ ತೊಡಗಿಸಿಕೊಂಡ ಮಹಿಳೆಯರ ಸಂಪಾದಿತ ಕೃತಿಗಳನ್ನು ಕುರಿತು ಚರ್ಚಿಸಲಾಗಿದೆ. ಸಾಮಾನ್ಯವಾಗಿ ಗ್ರಂಥಸಂಪಾದನೆ ಎಂದರೆ ಕವಿಯ ಗೈರು ಹಾಜರಿಯಲ್ಲಿ ಆತನ ಕೃತಿಯ ಪ್ರತಿಗಳ ಸಹಾಯದಿಂದ ಕವಿಪಾಠವನ್ನು ಕಟ್ಟಿಕೊಡುವುದಾಗಿದೆ. ಸಮಕಾಲೀನ ಸಂದರ್ಭದ ಒತ್ತಡ ಹಾಗೂ ಅಗತ್ಯಕ್ಕಾಗಿ ಶಾಸ್ತ್ರೀಯ ಗ್ರಂಥಸಂಪಾದನೆಯಲ್ಲಾದ ಪಲ್ಲಟಗಳನ್ನು ಗುರುತಿಸುವುದು ಇಲ್ಲಿನ ಮುಖ್ಯ ಉದ್ದೇಶವಾಗಿದೆ. ಶಾಸ್ತ್ರೀಯ ಸಂಪಾದನ ವಿಧಾನಗಳ ಗಂಭೀರ ಅನುಸಾರಕರಾಗಿದ್ದ ಮಹಿಳಾ ವಿದ್ವಾಂಸರು ದೇಸಿ, ಜಾನಪದ ಮತ್ತು ಜನಪ್ರಿಯ ಸಂಪಾದನ ವಿಧಾನಗಳನ್ನು ಸಂದರ್ಭದ ಅಗತ್ಯಗಳಾಗಿ ಅನುಸರಿಸಿಕೊಳ್ಳುವಾಗ ತೋರಿದ ಕ್ರಿಯೆ ಪ್ರತಿಕ್ರಿಯೆಗಳನ್ನು ದಾಖಲಿಸುವುದು ಈ ಅಧ್ಯಾಯದ ಮುಖ್ಯ ಗುರಿ. ಜೊತೆಗೆ ಕುತೂಹಲಕ್ಕಾಗಿ ಮಹಿಳಾ ಜ್ಞಾನವಿಸ್ತಾರದ ಸಂಗತಿಯನ್ನಾಗಿ ಆಧುನಿಕ ಕಾಲಘಟ್ಟದ ಮತ್ತು ಸಂಪಾದನಶಾಸ್ತ್ರಕ್ಕೆ ಹೊರತಾದ ಕೃತಿಗಳ ಸಂಪಾದನೆಯಲ್ಲಿ ಮಹಿಳಾ ಪ್ರಜ್ಞೆ ತೋರಿದ ಆಸಕ್ತಿಗಳನ್ನು ಗ್ರಹಿಸುವುದು. ಅದಕ್ಕಾಗಿ ಪ್ರಾತಿನಿಧಿಕವಾಗಿ ಸಮಗ್ರ ಸಂಪುಟಗಳ ಸಂಪಾದನೆ, ವಿಮರ್ಶಾ ಲೇಖನಗಳ ಸಂಪಾದನೆ, ಅಭಿನಂದನ ಗ್ರಂಥಗಳ ಸಂಪಾದನೆಯನ್ನು ಕುರಿತು ಚರ್ಚಿಸಲಾಗಿದೆ. ಆ ಮೂಲಕ ಶಾಸ್ತ್ರೀಯ ಸಂಪಾದನೆ ಮತ್ತು ಜನಪ್ರಿಯ ಸಂಪಾದನೆಗಳ ನಡುವೆ ಇರುವ ವ್ಯತ್ಯಾಸಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ.

ಅಧ್ಯಾಯ ಐದು

"ಮಹಿಳಾ ಗ್ರಂಥಸಂಪಾದನಕಾರರ ವೈಶಿಷ್ಟ್ಯ" ಎಂಬ ಅಧ್ಯಾಯದಲ್ಲಿ ಮಹಿಳೆಯರು ಯಾವ ಸಾಹಿತ್ಯ ಪ್ರಕಾರದ ಕೃತಿಗಳನ್ನು ಹೆಚ್ಚು ಪರಿಷ್ಕರಣೆ ಮಾಡಿದ್ದಾರೆ? ಏಕೆ? ಹೇಗೆ ಮಾಡಿದ್ದಾರೆ? ಅವರು ಅನುಸರಿಸಿದ ವೈಧಾನಿಕತೆ ಯಾವುದು? ಸಂಪಾದಕಿಯರ ವಿವಿಧ ನೆಲೆಯ ಬರಹಗಳು ಮತ್ತು ಅವುಗಳ ವೈಶಿಷ್ಟ್ಯವನ್ನು ಕುರಿತು ಚರ್ಚೆ ಮಾಡಲಾಗಿದೆ. ಆ ಮೂಲಕ ಮಹಿಳೆಯರ ಗ್ರಂಥಸಂಪಾದನೆಯ ವೈಧಾನಿಕತೆಯ ನೆಲೆ ಪುರುಷ ವಿದ್ವಾಂಸರಿಗಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ.

ಅಧ್ಯಾಯ ಆರು

ಒಟ್ಟು ಅಧ್ಯಯನದ ಫಲಿತಗಳನ್ನು ದಾಖಲಿಸಲಾಗಿದೆ. ಗಂಡೆಜಮಾನಿಕೆಯುಳ್ಳ ಗ್ರಂಥಸಂಪಾದನ ಕ್ಷೇತ್ರವನ್ನು ಅಂಥದೇ ತರಬೇತಿ ಮೂಲಕ ಪ್ರವೇಶಿಸಿದ ಮಹಿಳಾ ಗ್ರಂಥಸಂಪಾದನಕಾರರು ಕಲಿಕೆ ಮತ್ತು ಸಂಪಾದನ ಸಂದರ್ಭದಲ್ಲಿ ಅನುಭವಿಸಿದ ಮುಜುಗರಗಳು, ಸಂಕಟಗಳು, ತಮ್ಮ ಪ್ರಬುದ್ಧ ಓದು ಮತ್ತು ಆಲೋಚನೆಗಳ ಮೂಲಕ ತಮ್ಮೊಳಗೆ ರೂಪಗೊಂಡಿದ್ದ ಪುರುಷನಿಷ್ಠ ಸಂಪಾದನ ವೈಧಾನಿಕತೆಗಳಿಂದ ಹೊರಬರಲು ಪ್ರಯತ್ನಿಸಿದ ಬಹುಮುಖ್ಯ ಸಂಗತಿಗಳ ಫಲಿತಗಳನ್ನು ಈ ಭಾಗದಲ್ಲಿ ಗುರುತಿಸಲಾಗಿದೆ. ವಿಪರೀತ ಪಾಂಡಿತ್ಯದ ಹಾಗೂ ಶಾಬ್ದಿಕ ಸಂಪಾದನೆಯ ಶಾಸ್ತ್ರೀಯ ನೆಲೆಗಳನ್ನ ತಮ್ಮ ವಿಸ್ತಾರ ಓದು ಹಾಗೂ ಲೋಕಾನುಭವಗಳ ಮೂಲಕ ಸಾಂಸ್ಕೃತಿಕ ಗ್ರಂಥಸಂಪಾದನ ವಿಧಾನಗಳನ್ನು ಮಹಿಳಾ ವಿದ್ವಾಂಸರು ಕಂಡುಕೊಳ್ಳಲು ಮಾಡಿದ ಅನೇಕ ಪ್ರಯತ್ನಗಳನ್ನು ಸಮಾರೋಪ ಭಾಗದಲ್ಲಿ ಸಂಲಗ್ನಗೊಳಿಸಲಾಗಿದೆ.

೧.೨. ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಪ್ರಾಚೀನ ಕಾಲದಿಂದಲೂ ಭಾರತೀಯ ಪಂಡಿತರು ವೇದ ವೇದಾಂಗಗಳನ್ನು ಮೌಖಿಕ ರೂಪದಲ್ಲಿ ಸೃಷ್ಟಿಸುತ್ತ ಅವು ಪಾಠಾಂತರಗಳಾಗದಂತೆ ಕಾಪಾಡಿಕೊಂಡು ಬಂದಿರುವುದು ಚರಿತ್ರೆಯಿಂದ ತಿಳಿದು ಬರುತ್ತದೆ. ಬರವಣಿಗೆಯ ರೂಪ ಪ್ರಾರಂಭವಾಗುವುದಕ್ಕೂ ಮೊದಲಿನಿಂದಲೂ ವೇದಾಧ್ಯಯನ ಕಂಠಸ್ಥ ರೂಪದಲ್ಲಿ ತಲೆಮಾರಿನಿಂದ ತಲೆಮಾರಿಗೆ ಸಾಗುತ್ತಾ ಬಂದಿದೆ. ಅಂದಿನ ಕಾಲದವರು ಪಾಠ ಶುದ್ಧಿಗೆ ಹಲವಾರು ವಿಧಾನಗಳನ್ನು ಅನುಸರಿಸಿಕೊಂಡು ಬರಲಾಗಿದೆ. ಇಂದಿಗೂ ಇವೇ ಕ್ರಮಗಳನ್ನು ಅಳವಡಿಸಿಕೊಂಡು ಪಾಠ ರಕ್ಷಣೆ ಮಾಡುತ್ತಾ ಬಂದಿದ್ದಾರೆ. ನಂತರ ಪ್ರಾಚೀನ ಈ ಜ್ಞಾನವನ್ನು ಹಸ್ತಪ್ರತಿಗಳಲ್ಲಿ ಬರೆದಿಡಲಾಯಿತು. ಇಂಥ ಕೃತಿಗಳನ್ನು ಪೌರ್ವಾತ್ಯ ಮತ್ತು ಪಾಶ್ಚಾತ್ಯ ವಿದ್ವಾಂಸರು ಶಾಸ್ತ್ರೀಯವಾಗಿ ಸಂಪಾದಿಸಿ ಪ್ರಕಟಿಸಲು ಅನೇಕ ವಿಧಾನಗಳನ್ನು ರೂಪಿಸಿದರು. ನಂತರ ಈ ಕುರಿತು ಹಲವಾರು ತಾತ್ವಿಕ ಕೃತಿಗಳು ರಚಿಸಲ್ಪಟ್ಟವು. ಅವುಗಳ ಸ್ಥೂಲ ಸಮೀಕ್ಷೆಯನ್ನು ಕೆಳಗಿನಂತೆ ಮಾಡಲಾಗಿದೆ.

ಕನ್ನಡ ಗ್ರಂಥಸಂಪಾದನೆಯ ಅರ್ಥ, ಸ್ವರೂಪ, ತಾತ್ವಿಕತೆ, ಇತಿಹಾಸ ಗ್ರಂಥಸಂಪಾದನಕಾರರ ಜೀವನ ಚರಿತ್ರೆ ಹಾಗೂ ಪಾಶ್ಚಾತ್ಯ ಮತ್ತು ದೇಶಿ ವಿದ್ವಾಂಸರು ಗ್ರಂಥಸಂಪಾದನ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಕುರಿತಂತೆ ವಿವಿಧ ರೀತಿಯ ಅಧ್ಯಯನಗಳು ಇತ್ತೀಚೆಗೆ ವ್ಯಾಪಕವಾಗಿ ನಡೆದಿವೆ. ಆದರೆ ಮಹಿಳಾ ಗ್ರಂಥಸಂಪಾದನೆಯ ಇತಿಹಾಸವನ್ನು ಕುರಿತಂತೆ ಪ್ರತ್ಯೇಕ ಅಧ್ಯಯನಗಳು ನಡೆದಿರುವುದು ತುಂಬಾ ಕಡಿಮೆ. ಹಾಗಾಗಿ ಕನ್ನಡ ಗ್ರಂಥಸಂಪಾದನೆಯ ಇತಿಹಾಸವನ್ನು ಕುರಿತು ಬಂದಿರುವ ಕೃತಿಗಳು ಹಾಗೂ ಲೇಖನಗಳು ಪಿಎಚ್.ಡಿ ಮಹಾಪ್ರಬಂಧಗಳ ಸ್ವರೂಪವನ್ನು ಚರ್ಚೆಗೆ ಒಳಪಡಿಸುವ ಮೂಲಕ ಅದರಲ್ಲಿ ಅಡಗಿರಬಹುದಾದ ಮಹಿಳಾ ಗ್ರಂಥಸಂಪಾದನಕಾರರ ತಾತ್ವಿಕತೆಯನ್ನು ಶೋಧಿಸುವುದು ಈ ಸಮೀಕ್ಷೆಯ ಉದ್ದೇಶವಾಗಿದೆ.

'ಕನ್ನಡ ಗ್ರಂಥಸಂಪಾದನೆ' ಕೃತಿಯನ್ನು ಡಿ.ಎಲ್. ನರಸಿಂಹಾಚಾರ್ಯರು ಬರೆದು ೧೯೬೪ರಲ್ಲಿ ಡಿ.ವಿ.ಕೆ.ಮೂರ್ತಿ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ತರಗತಿಗಳಿಗೆ ಗ್ರಂಥಸಂಪಾದನೆ ವಿಷಯವನ್ನು ಪಠ್ಯವಾಗಿ ನಿಗದಿಪಡಿಸಿದಾಗ ಡಿ.ಎಲ್. ನರಸಿಂಹಾಚಾರ್ಯರು ಇದನ್ನು ಬೋಧಿಸಿದ್ದರು. ಆ ಸಂದರ್ಭದಲ್ಲಿ ಮಾಡಿಕೊಂಡ ಪಾಠ ಟಿಪ್ಪಣಿ ಮುಂದೆ ಗ್ರಂಥಸಂಪಾದನೆಯ ಶಾಸ್ತ್ರೀಯ ವಿಶ್ಲೇಷಣೆಗೆ ಆಕರವಾಯಿತು. ಈ ಕೃತಿಯ ಹನ್ನೆರಡು ಅಧ್ಯಾಯಗಳಲ್ಲಿ ಗ್ರಂಥಸಂಪಾದನೆಯ ವಿವಿಧ ಆಯಾಮಗಳನ್ನು ವಿಶ್ಲೇಷಿಸಿದ್ದಾರೆ.

ಪ್ರಸ್ತುತ ಕೃತಿಯಲ್ಲಿ ಕನ್ನಡ ಗ್ರಂಥಸಂಪಾದನೆಯ ಇತಿಹಾಸ, ಲೇಖನ ಸಾಮಗ್ರಿಗಳು, ಲಿಪಿಕಾರರು ಹಾಗೂ ಅವರ ಆದರ್ಶ, ಹಸ್ತಪ್ರತಿಗಳ ಸ್ವರೂಪ ಮತ್ತು ವಿಂಗಡಣೆ, ಪಾಠಾಂತರ ಸಂಕಲನ, ಅಕ್ಷರ ಸ್ಖಾಲಿತ್ಯಗಳು ಇತರ ಸ್ಖಾಲಿತ್ಯಗಳು, ಹಸ್ತಪ್ರತಿಗಳ ಪರಸ್ಪರ ಸಂಬಂಧ, ಪಾಠ ಪರಿಷ್ಕರಣೆ ಹಾಗೂ ಗ್ರಂಥಸಂಪಾದಕನಿಗೆ ಇರಲೇಬೇಕಾದ ತಿಳುವಳಿಕೆಗಳು, ಮುದ್ರಿತ ಗ್ರಂಥಗಳ ಸಂಪಾದನೆ ಮುಂತಾದ ವಿಷಯಗಳ ಚರ್ಚೆಯಿದೆ. ಭಾರತೀಯರ ಶುದ್ಧಪಾಠದ ಪರಿಕಲ್ಪನೆ ಸಂಸ್ಕೃತ ಸಂದರ್ಭದಲ್ಲಿ ಹುಟ್ಟಿದ್ದನ್ನು ಹಾಗೂ ಪಾಶ್ಚಿಮಾತ್ಯರಲ್ಲಿ ಅದು ಬೆಳೆದ ಬಗೆಯನ್ನು ಆರಂಭಿಕ ಅಧ್ಯಾಯದಲ್ಲಿ ಚರ್ಚಿಸಿದ್ದಾರೆ. ಅನಂತರ ಬರವಣಿಗೆಗೆ ಬಳಸುವ ಲೋಹ ಮತ್ತು ಲೋಹೇತರ ವಸ್ತು ಸಾಮಗ್ರಿಗಳ ಕುರಿತು ವಿವರಿಸಿದ್ದಾರೆ. ಕಬ್ಬಿಣ, ಚಿನ್ನ, ಬೆಳ್ಳಿ ಮತ್ತು ಹಿತ್ತಾಳೆ, ಕಂಚು, ತಾಮ್ರ, ಮಣ್ಣು ಸ್ಫಟಿಕ, ಚರ್ಮ, ಮರದಿಂದ ಮಾಡಿದ ಹಲಗೆ, ಭೂರ್ಜ್ವಪತ್ರ, ತಾಳ ಪತ್ರ, ಕಡಿತ, ಶಿಲೆ ಇವುಗಳನ್ನು ತಯಾರಿಸುವ ಮತ್ತು ಬರವಣಿಗೆಗೆ ಬಳಸುವ ವಿಧಾನ ಮತ್ತು ಮಹತ್ವವನ್ನು ವಿವರಿಸಿದ್ದಾರೆ. ಹಸ್ತಪ್ರತಿಯ ಪ್ರಶಸ್ತಿ ಭಾಗದಲ್ಲಿ ಲಿಪಿಕಾರರ ಆದರ್ಶ ಮತ್ತು ಸಮಾಜದಲ್ಲಿ ಅವರಿಗಿದ್ದ ಸ್ಥಾನಮಾನಗಳ ವಿವರಣೆ ದೊರೆಯುತ್ತದೆ. ಹಸ್ತಪ್ರತಿಗಳಲ್ಲಿ ಕವಿಯು ಸ್ವಹಸ್ತಾಕ್ಷರ ಪ್ರತಿಗಳು ದುರ್ಬಲ ಏಕೈಕ ಹಸ್ತಪ್ರತಿ ಮಾತೃಕೆ, ಪರಂಪರಾನುಗತ ಪ್ರತಿ, ಮಿಶ್ರ ಪ್ರತಿ ಇತ್ಯಾದಿ ಹಲವು ರೀತಿಯ ಹಸ್ತಪ್ರತಿಗಳ ವಂಶಾವಳಿಯನ್ನು ಪರಿಚಯಿಸುತ್ತ ಕನ್ನಡದಲ್ಲಿ ಪರಂಪರಾನುಗತ ಪ್ರತಿಗಳೇ ಅಧಿಕವೆಂಬುದನ್ನು ಖಚಿತವಾಗಿ ಗುರುತಿಸಿದ್ದಾರೆ. ಭಿನ್ನಪಾಠ ನಮೂದಿಸುವ ವೈಧಾನಿಕತೆಗಳ ಬಗ್ಗೆ ಪಾಠಾಂತರ ಸಂಕಲನ ಭಾಗದಲ್ಲಿ ತಿಳಿಸಿದ್ದಾರೆ.

ಕನ್ನಡ ಕಾವ್ಯಗಳ ಮುದ್ರಿತ ಪ್ರತಿ ಮತ್ತು ಹಸ್ತಪ್ರತಿಗಳ ಅಪಾರ ಓದಿಗೆ ಸಾಕ್ಷೀಭೂತವಾಗಿ ಇಲ್ಲಿನ ಅಕ್ಷರ ಸ್ಖಾಲಿತ್ಯಗಳು ಎಂಬ ಭಾಗದಲ್ಲಿ ಲಿಪಿಕಾರರು ಪ್ರತಿಮಾಡಿದಂತಹ ಅನೇಕ ತಪ್ಪುಗಳನ್ನು ಮೂಲ ಪ್ರತಿಯನ್ನು ಆಧಾರವಾಗಿಟ್ಟುಕೊಂಡು ಸರಿಪಡಿಸುವ ಮಾರ್ಗಗಳ ಕುರಿತು ಚರ್ಚಿಸಿದ್ದಾರೆ. ಆಳವಾದ ಅಧ್ಯಯನ, ಶೋಧನೆ, ಪರಿಶ್ರಮ ಮೊದಲಾದ ಅಧ್ಯಯನದ ವೈಶಿಷ್ಟ್ಯಯಿಂದ ಗ್ರಂಥಸಂಪಾದನ ಕ್ಷೇತ್ರದಲ್ಲಿ ಇದೊಂದು ಆಚಾರ್ಯ ಕೃತಿಯೆಂದು ಪರಿಗಣಿತವಾಗಿದೆ.

ಎನ್.ಎಸ್. ಲಕ್ಷ್ಮೀನಾರಾಯಣಭಟ್ಟರು, ಎಸ್.ಎಂ.ಕತ್ರೆ ಅವರ "An Introducatin to Indian Textual Criticism' ಅನ್ನು 'ಭಾರತೀಯ ಗ್ರಂಥಸಂಪಾದನ ಪರಿಚಯ' ಎಂದು ಕನ್ನಡಕ್ಕೆ ಅನುವಾದ ಮಾಡಿ ೧೯೬೮ರಲ್ಲಿ ಪ್ರಕಟಿಸಿದ್ದಾರೆ. ಪ್ರಸ್ತುತ ಈ ಕೃತಿಯನ್ನು ಎಂಟು ಅಧ್ಯಾಯಗಳಾಗಿ ವಿಂಗಡಿಸಿಕೊಂಡಿದ್ದಾರೆ. ಪೀಠಿಕೆಯಲ್ಲಿ ಬರವಣಿಗೆಯ ಇತಿಹಾಸ ಹಾಗೂ ಗ್ರಂಥಸಂಪಾದನೆ ಕ್ಷೇತ್ರಕ್ಕೆ ಪಾಶ್ಚಾತ್ಯ ವಿದ್ವಾಂಸರು ನೀಡಿದ ವ್ಯಾಖ್ಯಾನವನ್ನು ಕುರಿತು ಚರ್ಚಿಸಿದ್ದಾರೆ. ಹಸ್ತಪ್ರತಿಗಳು ಗ್ರಂಥಸಂಪಾದನೆಯ ಮುಖ್ಯ ಭಾಗವಾಗಿದ್ದು ಪ್ರಧಾನವಾಗಿ ಪರಂಪರಾನುಗತ ಹಾಗೂ ಪ್ರಾಚೀನ ಪ್ರತಿಗಳನ್ನು ಸಂರಕ್ಷಿಸುವಾಗ ಅಥವಾ ಮರು ಲಿಪೀಕರಣ ಮಾಡುವಾಗ ಲಿಪಿಕಾರ ಮಾಡಿಕೊಂಡ ಬದಲಾವಣೆ, ಕಣ್ಣು ತಪ್ಪಿನಿಂದ ಆದ ಲಿಪಿದೋಷಗಳ ವಿವರವನ್ನು ಗುರುತಿಸಿದ್ದಾರೆ. ಇಡೀ ಗ್ರಂಥ ಪೋಸ್ಟ್‌ಗೇಟ್‌ನ ನಿರ್ದಿಷ್ಟ ಧೋರಣೆಯಿಂದ ಕೂಡಿದ್ದು ಭಾಷೆಯ ಲಿಖಿತರೂಪಕ್ಕೆ ಮಾತ್ರ ಆದ್ಯತೆ ನೀಡುತ್ತದೆ.

ಗ್ರಂಥಸಂಪಾದನೆಯ ಮೂಲಭೂತ ಸಮಸ್ಯೆಗಳನ್ನು ಬಿಡಿಸುವ ಮಾದರಿ ಹಾಗೂ ಪರಂಪರಾನುಗತವಾಗಿ ಸಾಗಿ ಬಂದ ಪ್ರತಿಲೇಖನ ಕಾರ್ಯದಲ್ಲಿ ಒಳಸೇರಿದ ತಪ್ಪುಗಳಿಗೆ ಸಂಪಾದಕನಾದವನು ಅವುಗಳನ್ನು ತಿದ್ದುವ ಮೊದಲು ತಾನು ಆಕರವಾಗಿ ಉಪಯೋಗಿಸುತ್ತಿರುವ ಗ್ರಂಥ ಚರಿತ್ರೆಯನ್ನು ಗಮನಿಸಲೇಬೇಕು ಎಂದಿದ್ದಾರೆ. ಹಾಗೇ ಸ್ಖಾಲಿತ್ಯ ರೂಪಗಳ ಅಥವಾ ಸ್ವೇಚ್ಛಾ ಪ್ರಯೋಗಗಳ ಆಧಾರದ ಮೇಲೆ ರೂಪುಗೊಂಡ ಸಂಪಾದನ ವಿಧಿಗಳ ಸಾಮಾನ್ಯ ಸೂತ್ರಗಳನ್ನು ಬಳಸುವಾಗ ಸಂಪಾದಕನು ಅವುಗಳ ಪ್ರಯೋಜನಗಳನ್ನು ತಿಳಿದಿರಬೇಕು. ಪರಿಷ್ಕೃತ ಮುದ್ರಣ ಸಂದರ್ಭದಲ್ಲಿ ವಿಮರ್ಶನೋಪಕರಣಗಳ ವಿವರಣೆಯೊಂದಿಗೆ ಆರಂಭಿಸಬೇಕು. ಗ್ರಂಥದ ಅಭ್ಯಾಸಕ್ಕೆ ಬಳಸಲಾದ ಪ್ರಾಚೀನ ವ್ಯಾಖ್ಯಾನಗಳು, ಸಾರಸಂಗ್ರಹಗಳು, ರೂಪಾಂತರಗಳು ಮತ್ತು ಕಾವ್ಯಮಂಜರಿಗಳಂಥ ಸಾಕ್ಷ್ಯಸಾಮಾಗ್ರಿಗಳ ವಿವರವನ್ನು ವಿಶ್ಲೇಷಿಸಿದ್ದಾರೆ. ಅನುಬಂಧದಲ್ಲಿ ಪಾಠ ಪರಿಷ್ಕರಣ ಇತ್ಯಾದಿ ವಿಷಯಗಳನ್ನು ಕುರಿತು ವಿವರ ನೀಡಿದ್ದಾರೆ.

ಎಂ.ಎಂ. ಕಲಬುರ್ಗಿ ಅವರು 'ಕನ್ನಡ ಗ್ರಂಥಸಂಪಾದನ ಶಾಸ್ತ್ರ' ಎಂಬ ಕೃತಿಯನ್ನು ೧೯೭೨ರಲ್ಲಿ ಪ್ರಕಟಿಸಿದ್ದಾರೆ. ಗ್ರಂಥಸಂಪಾದನ ಶಾಸ್ತ್ರದ ತಾತ್ವಿಕ ಬೆಳವಣಿಗೆಯ ಭಿನ್ನ ಆಯಾಮವನ್ನು ಇಲ್ಲಿ ಚರ್ಚಿಸಿದ್ದಾರೆ. ಇತಿಹಾಸ ಕಾಂಡ, ಲೇಖನ ಕಾಂಡ, ಹಸ್ತಪ್ರತಿ ಕಾಂಡ, ಸಂಪಾದನ ಕಾಂಡ ಮತ್ತು ಶೇಷ ಕಾಂಡ ಎಂದು ಆರು ಕಾಂಡಗಳಲ್ಲಿ ಗ್ರಂಥಸಂಪಾದನೆಯ ವಿವಿಧ ಮಜಲುಗಳನ್ನು

ನಿರೂಪಿಸಿದ್ದಾರೆ. ಇತಿಹಾಸ ಕಾಂಡದಲ್ಲಿ ಗ್ರಂಥಸಂಪಾದನೆಯ ಪ್ರಾಚೀನ ಇತಿಹಾಸ ಮತ್ತು ಆಧುನಿಕ ಇತಿಹಾಸ ಕುರಿತು ವಿವರಿಸಿದ್ದಾರೆ. ಲಿಪಿಕಾರ ಸ್ಖಾಲಿತ್ಯ ಮತ್ತು ಪಾಠ ಪರಿಷ್ಕರಣ ವಿಚಾರಗಳನ್ನು ಮಂಡಿಸಲು ಮಧ್ಯಕಾಲೀನ ವೀರಶೈವ ಸಾಹಿತ್ಯವನ್ನು ಬಳಸಿಕೊಂಡಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ.

ಸ್ಖಾಲಿತ್ಯ ಕಾಂಡದಲ್ಲಿ ಸ್ಖಾಲಿತ್ಯದ ಕಾರಣ ಮತ್ತು ಸ್ಖಾಲಿತ್ಯದ ಸ್ವರೂಪವನ್ನು ಕುರಿತು ವಿವರಿಸಿದ್ದಾರೆ. ಸ್ಖಾಲಿತ್ಯಗಳು ಕವಿಯ ಹಸ್ತಪ್ರತಿಯೊಂದಿಗೆ ಹುಟ್ಟಿ ಅದರ ನಕಲು, ಪ್ರತಿ ನಕಲು ಬಳಿ ನಕಲುಗಳೊಂದಿಗೆ ಬೆಳೆದು ಬರುತ್ತದೆ. ಇದಕ್ಕೆ ಜನತೆಯ ಅಲಕ್ಷ್ಯ ಮತ್ತು ನಿಸರ್ಗದ ಪರಿಣಾಮಗಳು ಕಾರಣವಾಗಿರಬಹುದು ಎಂದು ಹೇಳುತ್ತಾರೆ. 'ಹಸ್ತಪ್ರತಿ ಕಾಂಡ'ದಲ್ಲಿ ಹಸ್ತಪ್ರತಿಯ ಬಗೆಗಳು ಮತ್ತು ಹಸ್ತಪ್ರತಿಗಳ ವಂಶಾವಳಿ ಸಂಬಂಧವನ್ನು ಕುರಿತು ಹೇಳಿದ್ದಾರೆ. ಮೂಲ ಪ್ರತಿ, ಪರಂಪರಾನುಗತ ಪ್ರತಿ, ಶುದ್ಧಸಂತಾನ ಪ್ರತಿ, ಅಶುದ್ಧಸಂತಾನ ಪ್ರತಿ, ಏಕೈಕ ಹಸ್ತಪ್ರತಿ ಎಂದು ಹಸ್ತಪ್ರತಿಗಳನ್ನು ವಿಂಗಡಿಸಿ, ಹಸ್ತಪ್ರತಿಗಳ ಮಹತ್ವ ಮತ್ತು ಸಂಪಾದಕನಿಗೆ ಅವುಗಳ ಅಗತ್ಯವನ್ನು ಕುರಿತು ಚರ್ಚಿಸಿದ್ದಾರೆ.

'ಸಂಪಾದನಾ ಕಾಂಡ'ದಲ್ಲಿ ಸಂಪಾದನಾ ಕಾರ್ಯ ವಿಧಾನ ಸಂಕೇತಗಳು ಸಂಕ್ಷೇಪಗಳನ್ನು ವಿವರಿಸಿದ್ದಾರೆ. ಸಾಮಾಗ್ರಿ ಸಂಕಲನ, ವಂಶಾವಳಿ ನಿರ್ಣಯ, ಪಾಠ ಪರಿಷ್ಕರಣ, ಉನ್ನತ ವಿಮರ್ಶೆ ಈ ಒಂದೊಂದು ಹಂತಗಳ ಕಾರ್ಯ ವಿಧಾನ ಮತ್ತು ಸ್ವರೂಪಗಳನ್ನು ಕುರಿತು ವಿಶ್ಲೇಷಣೆ ಮಾಡಿದ್ದಾರೆ. ಶೇಷಕಾಂಡದಲ್ಲಿ ಸಂಪಾದಕನ ವ್ಯಾಸಂಗ ವ್ಯಾಪ್ತಿ ಸಂಪಾದನೆಯ ಮಹತ್ವ ಎಂದರೆ ಹಸ್ತಪ್ರತಿಗಳ ಸ್ವರೂಪದ ಅರಿವು, ಪ್ರಾಚೀನ ಅಕ್ಷರಗಳ ನಿಕಟ ಪರಿಚಯ, ಆ ಕಾಲದ ಹಸ್ತಪ್ರತಿಯ ಪ್ರದೇಶ, ಕವಿಯ ಭಾಷೆ–ನುಡಿಗಟ್ಟುಗಳ ಪರಿಜ್ಞಾನ, ಕವಿ ಬಳಸಿದ ಛಂದಸ್ಸು ಶೈಲಿಗಳ ಸೂಕ್ಷ್ಮ ಅಭ್ಯಾಸ, ಅನ್ಯಭಾಷೆ–ಅನ್ಯಸಾಹಿತ್ಯಗಳ ವ್ಯಾಸಂಗ, ಕಾವ್ಯ ವಸ್ತುವಿನ ಸ್ಪಷ್ಟ ತಿಳಿವಳಿಕೆ ಸಂಪಾದಕನಿಗೆ ಅತ್ಯಗತ್ಯ ಎಂದು ಹೇಳಿದ್ದಾರೆ. ಈ ಕೃತಿಯ ವಿಶೇಷವೆಂದರೆ ಪ್ರಾಚೀನ ಮಧ್ಯಕಾಲೀನ ಸಾಹಿತ್ಯಿಕ ಆಕರಗಳನ್ನೇ ಉದಾಹರಣೆಗೆ ಬಳಸಿದ್ದಾರೆ.

'ಸೀತಾರಾಮ ಜಾಗೀರದಾರ' ಅವರು 'ಗ್ರಂಥಸಂಪಾದನ ಶಾಸ್ತ್ರ ಪರಿಚಯ' ಎಂಬ ಕೃತಿಯನ್ನು ೧೯೭೭ರಲ್ಲಿ ಪ್ರಕಟಿಸಿದ್ದಾರೆ. ಈ ಗ್ರಂಥದಲ್ಲಿ ಗ್ರಂಥಸಂಪಾದನೆಯ ವೈಧಾನಿಕತೆಯನ್ನು ಹಂತ ಹಂತವಾಗಿ ಗುರುತಿಸಿದ್ದಾರೆ. ಗ್ರಂಥಸಂಪಾದನ ಶಾಸ್ತ್ರದ ಬೆಳವಣಿಗೆ, ಸಾಮಗ್ರಿಯ ಸಂಗ್ರಹಣೆ ಹಾಗೂ ವರ್ಗೀಕರಣ ಪಾಠ ಸಂಯೋಜನೆ, ಪಾಠ ಪರಿಷ್ಕರಣ, ಉನ್ನತ ವಿಮರ್ಶೆ, ಉಪಸಂಹಾರ ಎಂದು ಅಧ್ಯಾಯಗಳನ್ನು ವಿಂಗಡಿಸಿಕೊಂಡು ಗ್ರಂಥಸಂಪಾದನೆಯ ಬೆಳವಣಿಗೆಯನ್ನು ಚರ್ಚಿಸಿದ್ದಾರೆ. ಹಾಗೆಯೇ 'ಗ್ರಂಥ' ಎಂದರೆ 'ಲೇಖನ' ಎಂಬ ಅರ್ಥ ಬರುತ್ತದೆ. ಪ್ರಪಂಚದಲ್ಲಿ ಲೇಖನ ಕಲೆ ಬಹು ಪುರಾತನ ಕಾಲದಿಂದ ಬೆಳೆದು ಬಂದಿದೆ ಎನ್ನುವುದನ್ನು ನಿರೂಪಿಸುತ್ತಾರೆ. ಗ್ರಂಥಸಂಪಾದನ ಶಾಸ್ತ್ರದ ಬೆಳವಣಿಗೆ ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಸಾಂಪ್ರದಾಯಿಕ ವಿಧಾನಗಳಲ್ಲಿ ರೂಪುಗೊಂಡಿದೆ. ಆದರೆ ಪಾಶ್ಚಾತ್ಯರ ಪ್ರೇರಣೆ ಪ್ರಭಾವದಿಂದ ಒಂದು ಅಧ್ಯಯನ ಶಿಸ್ತಾಗಿ ಬೆಳವಣಿಗೆ

ಹೊಂದಿದೆ. 'ಪಾಠಸಂಯೋಜನೆಯಲ್ಲಿ ಇದ್ದದ್ದು ಏಕೈಕ ಹಸ್ತಪ್ರತಿಯಾದರೆ ಲಿಪಿಕಾರನು ಬರೆಯುವಲ್ಲಿ ಉಂಟಾದ ಸಣ್ಣಪುಟ್ಟ ಸ್ಖಾಲಿತ್ಯಗಳನ್ನು ಮಾತ್ರ ತಿದ್ದಬೇಕು. ಸಂಶಯ ಬರುವೆಡೆಯಲ್ಲಿ ತಿದ್ದುವುದನ್ನು ಕಂಸದಲ್ಲಿ ಬರೆದು ಅಡಿಟಿಪ್ಪಣಿಯಲ್ಲಿ ಸೂಚಿಸಬೇಕು. ಸಂಪಾದಕ ಪಾಠ ಸಂಯೋಜನೆಯಲ್ಲಿ ಕೆಲವು ಸಮಸ್ಯೆಗಳನ್ನು ಎಲ್ಲಾ ಭಾಷೆಗಳಲ್ಲಿಯೂ ಎದುರಿಸ ಬೇಕಾಗುತ್ತದೆ ಎಂದಿದ್ದಾರೆ. ಹಾಗೆಯೇ ಪಾಠ ಪರಿಷ್ಕರಣ ವಿಧಾನವು ಗ್ರಂಥಸಂಪಾದನೆಯಲ್ಲಿ ಮೂರನೆಯ ಹಂತ. ಪಾಠ ಸಂಯೋಜನೆ ಆದ ಕೂಡಲೆ ಶೋಧ ಪತ್ರಗಳನ್ನು ಪರಿಶೀಲಿಸಿ ಅಧಿಕೃತ ಪಾಠದ ಗ್ರಂಥ ನಿರ್ಮಾಣವೇ ಪಾಠ ಪರಿಷ್ಕರಣದಲ್ಲಿ ಆಗಬೇಕಾದ ಕಾರ್ಯ. ಉನ್ನತ ವಿಮರ್ಶೆ ಗ್ರಂಥಸಂಪಾದನೆಯ ಕಾರ್ಯ ವಿಧಾನದಲ್ಲಿ ಕೊನೆಯ ಹಂತದಲ್ಲಿ ಕೈಗೊಳ್ಳಬೇಕಾದ ಅಗತ್ಯ ಎಂಬುದನ್ನು ತಿಳಿಸಿದ್ದಾರೆ. ಹೀಗೆ ಗ್ರಂಥಸಂಪಾದನೆಯ ಇತಿಹಾಸದಿಂದ ಉನ್ನತ ವಿಮರ್ಶೆಯ ವರೆಗೆ ಸಂಕ್ಷಿಪ್ತವಾಗಿ ಗ್ರಂಥಸಂಪಾದಕನು ಅನುಸರಿಸ ಬೇಕಾಗಿರುವ ವಿಧಿವಿಧಾನಗಳನ್ನು ಕುರಿತು ಚರ್ಚೆ ಮಾಡಿದ್ದಾರೆ.

ಬಿ.ಎಸ್. ಸಣ್ಣಯ್ಯನವರು 'ಪ್ರಾಚೀನ ಕನ್ನಡ ಗ್ರಂಥಸಂಪಾದನೆ' ಕೃತಿಯನ್ನು ೨೦೦೨ರಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರಿನಿಂದ ಪ್ರಕಟಿಸಿದ್ದಾರೆ. ಈ ಗ್ರಂಥದಲ್ಲಿ ಹದಿಮೂರು ಅಧ್ಯಾಯಗಳನ್ನು ಮಾಡಿಕೊಂಡಿದ್ದಾರೆ. ಕನ್ನಡ ಗ್ರಂಥಸಂಪಾದನೆಯ ಪ್ರಕಾರದಲ್ಲಿ ಪ್ರಕಟವಾದ ಗ್ರಂಥಗಳನ್ನು ಚಂಪೂಕಾವ್ಯಗಳು, ಗದ್ಯಸಾಹಿತ್ಯ, ರಗಳೆಗಳು, ಷಟ್ಪದಿ ಕಾವ್ಯಗಳು, ಸಾಂಗತ್ಯ ಕೃತಿಗಳು, ತ್ರಿಪದಿ. ಧಾರ್ಮಿಕ ಗ್ರಂಥಗಳು, ಶಾಸ್ತ್ರ ಗ್ರಂಥಗಳು ಎಂದು ವರ್ಗೀಕರಿಸಿ ಇವುಗಳ ಸಂಪಾದನೆಯನ್ನು ಕುರಿತು ಚರ್ಚಿಸಿದ್ದಾರೆ. ಈ ಗ್ರಂಥಕ್ಕೆ ಪೀಠಿಕೆ ಮತ್ತು ಉಪಯುಕ್ತ ಗ್ರಂಥಗಳ ಅಕಾರಾದಿ ಪಟ್ಟಿ ಇದೆ.

ಯಾವುದೇ ಒಂದು ಕೃತಿಯ ಲಭ್ಯ ಹಸ್ತಪ್ರತಿ ಅಥವಾ ಹಸ್ತಪ್ರತಿಗಳ ಸಹಾಯದಿಂದ ತುಲನಾತ್ಮಕವಾಗಿ ಅಭ್ಯಾಸ ಮಾಡಿ ಕೃತಿಯ ಮೂಲ ಸ್ವರೂಪವನ್ನು ನಿರ್ಣಯಿಸಿ ಕರ್ತೃ ಕೃತಿಗಳ ಬಗೆಗೆ ವಿಚಾರ ವಿಮರ್ಶೆ ಮಾಡಿ ಟೀಕೆ, ಟಿಪ್ಪಣಿಗಳನ್ನು ನೀಡುವುದು ಗ್ರಂಥಸಂಪಾದನೆ ಎಂದು ಕರೆದಿದ್ದಾರೆ. ಪ್ರಸ್ತುತ ಕೃತಿಯಲ್ಲಿ ೧೯೦೦ ರಿಂದ ೧೯೯೯ರ ವರೆಗೆ ಅಂದರೆ ೨೦ನೆಯ ಶತಮಾನದಲ್ಲಿ ಗ್ರಂಥಸಂಪಾದನ ಕ್ಷೇತ್ರದಲ್ಲಿ ನಡೆದಿರುವ ಕೆಲಸವನ್ನು ಪರಿಚಯಮಾಡಿಕೊಡುವಲ್ಲಿ ಅನುಸರಿಸಿದ ಮಾರ್ಗಗಳನ್ನು ಚರ್ಚಿಸಿದ್ದಾರೆ.

ವೈ.ಸಿ. ಭಾನುಮತಿ ಅವರು 'ಗ್ರಂಥಸಂಪಾದನ ವ್ಯಾಸಂಗ' ಕೃತಿಯನ್ನು ೨೦೧೨ರಲ್ಲಿ ಸಂವಹನ ಪ್ರಕಾಶನ ಮೈಸೂರಿನಿಂದ ಪ್ರಕಟಿಸಿದ್ದಾರೆ. ಅಧ್ಯಯನದ ಅನುಕೂಲಕ್ಕಾಗಿ ಹಸ್ತಪ್ರತಿ ಸಂಗ್ರಹ, ಶಾಸ್ತ್ರಕೃತಿಗಳ ರಚನೆ, ಪ್ರಾಚೀನ ಕಾವ್ಯಗಳ ಸಂಪಾದನೆ, ಸಾಂಸ್ಥಿಕ ಸಂಪಾದನೆ, ಬಿಡಿ ಬರಹಗಳು ಎಂದು ವಿಭಾಗ ಮಾಡಿಕೊಂಡು ಚರ್ಚಿಸಿದ್ದಾರೆ. ಎಂ.ಎಂ.ಕಲಬುರ್ಗಿಯವರ 'ಮಾರ್ಗ'ದ ಆರು ಸಂಪುಟಗಳಲ್ಲಿ ಹಂಚಿ ಹೋಗಿದ್ದ ಗ್ರಂಥಸಂಪಾದನೆ ಹಸ್ತಪ್ರತಿ ಕುರಿತ ಲೇಖನಗಳನ್ನು ಮಾತ್ರ ಸಂಗ್ರಹಿಸಿ ಪರಿಷ್ಕರಣದ ವಿಧಿವಿಧಾನಗಳನ್ನು ಗುರುತಿಸಿದ್ದಾರೆ. ಇದರಲ್ಲಿ ಕಲಬುರ್ಗಿಯವರ ೨೯ ಸಂಪ್ರಬಂಧಗಳಿವೆ. ಇವುಗಳನ್ನು ವಸ್ತುವಿಗೆ ಅನುಗುಣವಾಗಿ ಶಾಸ್ತ್ರಸಾಧನೆ, ವಚನ ಸಾಹಿತ್ಯ, ಹಸ್ತಪ್ರತಿ

ಭಂಡಾರ, ಪಾಠ ಪರಿಷ್ಕರಣ ಎಂದು ನಾಲ್ಕು ವಿಭಾಗಗಳಲ್ಲಿ ಚರ್ಚಿಸಿದ್ದಾರೆ. ಮೇಲಿನ ಎಲ್ಲಾ ಕೃತಿಗಳು ಕನ್ನಡ ಗ್ರಂಥಸಂಪಾದನೆ ಇತಿಹಾಸ ಸ್ವರೂಪ ಹಾಗೂ ವೈಧಾನಿಕತೆ ಕುರಿತು ಚರ್ಚಿಸುವ ಸೈದ್ಧಾಂತಿಕ ಕೃತಿಗಳಾಗಿವೆ.

ಫ.ಗು. ಹಳಕಟ್ಟಿ ಜನ್ಮಶತಮಾನೋತ್ಸವ ಸಂಸ್ಮರಣ ಸಂಪುಟವಾದ 'ಮಣಿಹ' ಸಂಪುಟವು ೧೯೮೨ರಲ್ಲಿ ಎಂ.ವಿ. ಸೀತಾರಾಮಯ್ಯ ಮತ್ತು ಆರ್. ಶೇಷಶಾಸ್ತ್ರಿಯವರ ಸಂಪಾದಕತ್ವದಲ್ಲಿ ಪ್ರಕಟವಾಗಿದೆ. ಇದೊಂದು ಸಂಕಲನ ಗ್ರಂಥ ಇದರ ಮೊದಲ ಭಾಗದಲ್ಲಿ ಹಳಕಟ್ಟಿಯವರ ಬದುಕು ಸಾಧನೆಯನ್ನು ಕುರಿತು ಹಲವು ವಿದ್ವಾಂಸರು ಪ್ರಬಂಧ ಮಂಡಿಸಿದ ವಿವರಗಳು ಇವೆ. ಹಸ್ತಪ್ರತಿ ಮತ್ತು ಗ್ರಂಥಸಂಪಾದನ ಕ್ಷೇತ್ರವನ್ನು ಪ್ರವೇಶಿಸುವವರಿಗೆ ಇದೊಂದು ಮಾರ್ಗದರ್ಶಕ ಕೃತಿಯಾಗಿದೆ. ಹಾಗೆಯೇ ಇತರ ಭಾಷೆಗಳಲ್ಲಿರುವ ಹಸ್ತಪ್ರತಿ ಪರಿಚಯ, ಲಿಪಿ ವಿನ್ಯಾಸ, ಸಾಹಿತ್ಯೇತರ ಹಸ್ತಪ್ರತಿಗಳ ಪರಿಚಯ ಮೊದಲಾದ ಬರಹಗಳು ಹಸ್ತಪ್ರತಿಶಾಸ್ತ್ರಕ್ಕೆ ಪೂರಕವಾಗಿವೆ. ಪ್ರಮುಖವಾಗಿ ಈ ಸಂಪುಟದ ಎರಡನೇ ಭಾಗದಲ್ಲಿ ಗ್ರಂಥಸಂಪಾದನೆಯ ಇತಿಹಾಸ ಹಾಗೂ ಬದಲಾವಣೆ ಮತ್ತು ಹಿರಿಯ ವಿದ್ವಾಂಸರು ಈ ಕ್ಷೇತ್ರಕ್ಕೆ ನೀಡಿದ ಸಾಧನೆ ಹಾಗೂ ತಾತ್ವಿಕತೆಯನ್ನು ಕುರಿತು ಬರೆದ ಬರಹಗಳಾಗಿವೆ.

'ಗ್ರಂಥಸಂಪಾದನೆಗೆ ಕಿಟ್ಟೆಲ್ ಮತ್ತು ರೈಸ್ ಅವರ ಕೊಡುಗೆ' ಲೇಖನದಲ್ಲಿ ವೈ.ಸಿ.ಭಾನುಮತಿ ಅವರು ಗ್ರಂಥಸಂಪಾದನೆಯ ಇತಿಹಾಸಕ್ಕೆ ಮೌಲಿಕವಾದ ಕೊಡುಗೆಯನ್ನು ನೀಡಿದ್ದಾರೆ ಎಂದು ಅಭಿಪ್ರಾಯಪಡುತ್ತಾರೆ. 'ಎಪಿಗ್ರಾಫಿಯಾ ಕರ್ಣಾಟಕಾ' ಹಾಗೂ ಕವಿರಾಜಮಾರ್ಗ, ಕರ್ಣಾಟಕ ಭಾಷಾ ಭೂಷಣ, ಕರ್ಣಾಟಕ ಶಬ್ದಾನುಶಾಸನ, ಪಂಪ ಭಾರತ, ಅಮರಕೋಶ ಈ ಪ್ರಾಚೀನ ಕೃತಿಗಳನ್ನು ಸಂಪಾದಿಸುವಾಗ ಅನುಸರಿಸಿದ ವೈಧಾನಿಕತೆಯನ್ನು ಕುರಿತು ಅವರು ವಿವರಿಸಿದ್ದಾರೆ. 'ಗ್ರಂಥಸಂಪಾದನೆಗೆ ರಾ. ನರಸಿಂಹಾಚಾರ್ಯರ ಕೊಡುಗೆ' ವಿವಿಧ ಭಾಷೆಯ ೪೦೦ ಹೊಸ ಶಾಸನಗಳು, ೪೦೦೦ ನಾಣ್ಯಗಳು, ೧೦೦ ಕನ್ನಡ-ಸಂಸ್ಕೃತ ಗ್ರಂಥಗಳನ್ನು ಪ್ರತಿ ಮಾಡಿರುವುದನ್ನು ಗಮನಿಸಿದ್ದಾರೆ. ಕನ್ನಡ ಗ್ರಂಥಸಂಪಾದನಾ ದೃಷ್ಟಿಯಿಂದ ಅವರ ಕರ್ನಾಟಕ ಕವಿ ಚರಿತ್ರೆಯ ಮೂರು ಸಂಪುಟಗಳಲ್ಲಿ ೧೧೧೮ ಕೃತಿಗಳ ಮತ್ತು ಸುಮಾರು ೫೦೦೦ ಗ್ರಂಥಗಳನ್ನು ವಿಮರ್ಶೆ ಮಾಡಿರುವ ಹಾಗೂ ಅನುಸರಿಸಿರುವ ಸಂಪಾದನ ತಂತ್ರವನ್ನು ಸ್ಪಷ್ಟಪಡಿಸಿರುವುದನ್ನು ಈ ಲೇಖನದಲ್ಲಿ ಚರ್ಚಿಸಿದ್ದಾರೆ. 'ಗ್ರಂಥಸಂಪಾದನೆಗೆ ಎಂ.ಎ. ರಾಮಾನುಜಾಯ್ಯಂಗಾರ್ ಮತ್ತು ಎಸ್.ಜಿ. ನರಸಿಂಹಾಚಾರ್ಯ ಅವರ ಕೊಡುಗೆ' ಲೇಖನದಲ್ಲಿ ಜನ್ನನ ಯಶೋಧರ ಚರಿತ್ರೆ, ಪ್ರಬಂಧಾವಳಿ, ಆದಿಪರ್ವ ಮತ್ತು ಸಂಭಾಪರ್ವ ಮುಂತಾದ ಕೃತಿಗಳ ಸಂಪಾದನ ವೈಶಿಷ್ಟ್ಯವನ್ನು ಗುರುತಿಸಿದ್ದಾರೆ. ಗ್ರಂಥಸಂಪಾದನೆಗೆ ಚನ್ನಪ್ಪ ಉತ್ತಂಗಿ, ಟಿ.ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ, ಶಿ.ಶಿ. ಬಸವನಾಳ, ಎ. ವೆಂಕಟರಾವ್, ಎಚ್. ಶೇಷಯ್ಯಂಗಾರ್, ಎಂ. ಮರಿಯಪ್ಪಭಟ್ಟ, ಬಿ. ಶಿವಮೂರ್ತಿಶಾಸ್ತ್ರಿ, ತೀ.ನಂ.ಶ್ರೀ, ಡಿ.ಎಲ್. ನರಸಿಂಹಾಚಾರ್ಯ ಮುಂತಾದವರು ಕನ್ನಡ ಗ್ರಂಥಸಂಪಾದನ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು

ಕುರಿತು ಹಲವು ವಿದ್ವಾಂಸರ ಪ್ರಬಂಧಗಳು ಈ ಕೃತಿಯಲ್ಲಿವೆ. ಇದೊಂದು ವ್ಯಕ್ತಿಗತ ವೈಧಾನಿಕತೆಯ ಇತಿಹಾಸವನ್ನು ತೆರೆದಿಡುವ ಪ್ರಮುಖ ಕೃತಿಯಾಗಿದೆ.

ಹಸ್ತಪ್ರತಿ ಮತ್ತು ಗ್ರಂಥಸಂಪಾದನೆಯ ವಿವಿಧ ಆಯಾಮಗಳ ಕುರಿತು ಮಹಿಳೆಯರಿಂದ ರಚಿತವಾದ ಮೊದಲ ಸೈದ್ಧಾಂತಿಕ ಕೃತಿ 'ಗ್ರಂಥಸಂಪಾದನ ಸಂಕಥನ'. ಆದರೆ ಈ ಮೊದಲೇ ಇವರು ೧೯೯೬ರಲ್ಲಿ ಪ್ರಥಮ ಆವೃತ್ತಿಯಾಗಿ ಪ್ರಕಟವಾದ ಗ್ರಂಥಸಂಪಾದನೆ ಕೆಲವು ಅಧ್ಯಯನದಲ್ಲಿಯೇ ೧೯೮೪ರಲ್ಲಿ ಬರೆದ ಮಹಿಳೆಯರ ಗ್ರಂಥಸಂಪಾದನೆ ಎಂಬ ಲೇಖನವನ್ನು ಸೇರಿಸಿ ಈ ನಿಟ್ಟಿನ ಅಧ್ಯಯನಕ್ಕೆ ಕನ್ನಡದಲ್ಲಿ ಓನಾಮ ಹಾಡಿದರು. ಪ್ರಸ್ತುತ ಗ್ರಂಥಸಂಪಾದನ ಸಂಕಥನವನ್ನು ವೈ.ಸಿ. ಭಾನುಮತಿ ಅವರು ೨೦೧೩ರಲ್ಲಿ ಸಿವಿಜಿ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಈ ಲೇಖನ ಸಂಕಲನದಲ್ಲಿ ೪೨ ಲೇಖನಗಳಿವೆ. ಮೊದಲನೆ ಭಾಗದಲ್ಲಿ ಹಸ್ತಪ್ರತಿಯನ್ನು ಕುರಿತಂತೆ ಎರಡನೆ ಭಾಗದಲ್ಲಿ ಗ್ರಂಥಸಂಪಾದನೆಯನ್ನು ಕುರಿತ ಲೇಖನಗಳಿವೆ.

'ಗ್ರಂಥಸಂಪಾದನಶಾಸ್ತ್ರ' ಎಂಬ ಪ್ರಬಂಧದಲ್ಲಿ ಗ್ರಂಥಸಂಪಾದನೆಯ ಇತಿಹಾಸ, ಸ್ವರೂಪ, ತಾತ್ವಿಕ ಬೆಳವಣಿಗೆ, ಅನ್ವಯಿಕ ಬೆಳವಣಿಗೆ ಹಾಗೂ ಇಪ್ಪತ್ತೊಂದನೆಯ ಶತಮಾನದ ಹೊಸ್ತಿಲಲ್ಲಿ ನಿಂತು ಗ್ರಂಥಸಂಪಾದನ ಶಾಸ್ತ್ರದ ಸುಮಾರು ೧೪೦ ವರ್ಷಗಳ ಸುದೀರ್ಘ ಚರಿತ್ರೆಯನ್ನು ಹೆಣೆದುಕೊಟ್ಟಿದ್ದಾರೆ. 'ಹಸ್ತಪ್ರತಿ ಸಂಗ್ರಹ-ಸಂಪಾದನೆ ವ್ಯಾಖ್ಯಾನದ ಮಾದರಿಗಳು' ಲೇಖನದಲ್ಲಿ ಕರ್ನಾಟಕದಲ್ಲಿ ಹಸ್ತಪ್ರತಿ ಭಂಡಾರಗಳನ್ನು ಹೊಂದಿರುವ ಇಪ್ಪತ್ತೈದಕ್ಕೂ ಹೆಚ್ಚು ಸಂಸ್ಥೆಗಳು ವಿಶ್ವವಿದ್ಯಾಲಯ, ಖಾಸಗಿಯವರ ಆಶ್ರಯದಲ್ಲಿರುವ ಹಸ್ತಪ್ರತಿಗಳ ಸಂಗ್ರಹವನ್ನು ಕುರಿತು ಚರ್ಚಿಸಿದ್ದಾರೆ. ಹಸ್ತಪ್ರತಿಗಳ ಅಧ್ಯಯನ ಸಂಪಾದನೆ ವ್ಯಾಖ್ಯಾನದ ಮಾದರಿಗಳು ಸಂಪಾದನೆಯಲ್ಲಿ ಅನೇಕ ಮಾದರಿಗಳಾದ ಮಾರ್ಗ ಸಾಹಿತ್ಯ ಸಂಪಾದನೆ, ದೇಶಿ ಸಾಹಿತ್ಯ ಸಂಪಾದನೆ, ವಚನ ಸಾಹಿತ್ಯ ಸಂಪಾದನೆ, ಲಕ್ಷಣ ಗ್ರಂಥಗಳ ಸಂಪಾದನೆ, ದಾಸ ಸಾಹಿತ್ಯ ಸಂಪಾದನೆ, ಸ್ವರ ವಚನ ಸಾಹಿತ್ಯ ಸಂಪಾದನೆಯ ವಿವಿಧ ವ್ಯಾಖ್ಯಾನದ ಮಾದರಿಗಳನ್ನು ಕುರಿತು ವಿಭಿನ್ನವಾಗಿ ಚರ್ಚಿಸಿದ್ದಾರೆ.

'ಮಾರ್ಗ ಸಾಹಿತ್ಯ ಸಂಪಾದನೆ' ಲೇಖನದಲ್ಲಿ ಮಾರ್ಗ ಸಾಹಿತ್ಯದ ವಿಧಿ-ವಿಧಾನಗಳನ್ನು ಕುರಿತು ಚರ್ಚೆ ಮಾಡಿದ್ದಾರೆ. ಗ್ರಂಥದ ಆಯ್ಕೆ, ಹಸ್ತಪ್ರತಿ ಸಂಗ್ರಹ, ವಂಶಾವಳಿ ನಿರ್ಣಯ, ಪಾಠ ಸಂಕಲನ, ಪಾಠ ಪರಿಷ್ಕರಣ ಮತ್ತು ಉನ್ನತ ವಿಮರ್ಶೆ ಈ ತತ್ವಗಳನ್ನು ಒಂದು ಕೃತಿಗೆ ಹೇಗೆ ಅನ್ವಯಿಸಿಕೊಳ್ಳಬೇಕೆಂದು ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ. 'ಎಲ್.ಬಸವರಾಜು ಅವರ ಗ್ರಂಥಸಂಪಾದನೆಯ ಮಾರ್ಗ' ಲೇಖನದಲ್ಲಿ ಎಲ್. ಬಸವರಾಜು ಅವರು ಕನ್ನಡ ಗ್ರಂಥಸಂಪಾದನೆಗೆ ನೀಡಿದ ಭಿನ್ನವಾದ ವೈಧಾನಿಕತೆ ಕುರಿತು ವಿಶ್ಲೇಷಿಸುತ್ತಾರೆ. ವೀರಶೈವ ಸಾಹಿತ್ಯ ಸಂಪಾದನೆ, ಜೈನ ಸಾಹಿತ್ಯ ಸಂಪಾದನೆ, ಶಾಸ್ತ್ರ ಮತ್ತಿತರ ಸಾಹಿತ್ಯ ಸಂಪಾದನೆ ಎಂದು ವಿಭಾಗ ಮಾಡಿಕೊಂಡು ವೀರಶೈವದಲ್ಲಿ ಬಸವಣ್ಣನವರ ವಚನಗಳು, ಅಲ್ಲಮನ ವಚನ ಚಂದ್ರಿಕೆ, ದೇವರದಾಸಿಮಯ್ಯನ ವಚನಗಳಿಗೆ ಬಸವರಾಜು ಅವರು ಅಳವಡಿಸಿಕೊಂಡ ಗ್ರಂಥಸಂಪಾದನೆಯ ವಿಧಾನಗಳನ್ನು ಚರ್ಚಿಸಿದ್ದಾರೆ. 'ಸ್ವಾತಂತ್ರೋತ್ತರ ಕನ್ನಡ

ಗ್ರಂಥಸಂಪಾದನೆ' ಲೇಖನದಲ್ಲಿ ಐದು ಭಾಗ ಮಾಡಿಕೊಂಡು ವಿಶ್ವವಿದ್ಯಾಲಯಗಳಲ್ಲಿ ನಡೆದ ಗ್ರಂಥಸಂಪಾದನೆ, ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಗ್ರಂಥಸಂಪಾದನೆ, ಮಠ ಮಾನ್ಯಗಳಲ್ಲಿ ನಡೆದ ಗ್ರಂಥಸಂಪಾದನೆ, ಸಂಘಟನೆಗಳು ಮಾಡಿದಂಥ ಕಾರ್ಯಗಳು, ವೈಯಕ್ತಿಕ ನೆಲೆಯಲ್ಲಿ ಕೈಗೊಂಡ ಕಾರ್ಯಗಳು ಹೀಗೆ ಐದು ವಲಯಗಳಲ್ಲಿ ನಡೆದ ಗ್ರಂಥಸಂಪಾದನೆಯ ಹರವುಗಳ ಕುರಿತು ಚರ್ಚಿಸಿದ್ದಾರೆ.

'ಮಹಿಳೆಯರ ಗ್ರಂಥಸಂಪಾದನೆ(೧೯೮೩)' ಈ ಲೇಖನದಲ್ಲಿ ಹಳೆಗನ್ನಡ, ಜಾನಪದ ಗ್ರಂಥಸಂಪಾದನೆ ಕುರಿತು ಚರ್ಚೆಮಾಡಿದ್ದಾರೆ. ೧೯೮೩ರ ಅವಧಿಯಲ್ಲಿ ಮಹಿಳೆಯರು ಸಂಪಾದಿಸಿದ ಕೃತಿಗಳ ಸಂಖ್ಯೆ ಆರು. ಇವುಗಳಲ್ಲಿ ಕಮಲಾ ಹಂಪನಾ ಅವರು ಇತರರೊಂದಿಗೆ ಸಂಪಾದಿಸಿದ 'ಚಾವುಂಡರಾಯ ಪುರಾಣ' ಮತ್ತು ಮಂದಾಕಿನಿಬಾಯಿ ಅವರು ಅನ್ಯರೊಂದಿಗೆ ಸಂಪಾದಿಸಿರುವ 'ಪುರಂದರ ದಾಸರ ಪದಗಳು' ಹಾಗೂ ಹಳೆಗನ್ನಡ, ಜಾನಪದ ಮುಂತಾದ ಕೃತಿಗಳ ವಿಧಿವಿಧಾನಗಳನ್ನು ಚರ್ಚಿಸಿದ್ದಾರೆ. ಬಹುಶಃ ಮಹಿಳಾ ಗ್ರಂಥಸಂಪಾದನೆಯ ಇತಿಹಾಸವನ್ನು ರಾಚನಿಕವಾಗಿ ಕಟ್ಟಿಕೊಡುವ ಮೊದಲ ಲೇಖನ ಇದೇ ಆಗಿದೆ. ಆ ದೃಷ್ಟಿಯಿಂದ ಈ ಲೇಖನಕ್ಕೆ ವಿಶೇಷ ಮಹತ್ವವಿದೆ. 'ಒಂದು ದಶಕದ ಗ್ರಂಥಸಂಪಾದನೆ' ಪ್ರಬಂಧದಲ್ಲಿ ೧೯೮೧ ರಿಂದ ೧೯೯೦ರ ವರೆಗೆ ಹತ್ತು ವರ್ಷದ ಗ್ರಂಥಸಂಪಾದನೆಯ ಇತಿಹಾಸದ ವಿಶ್ಲೇಷಣೆ ಮಾಡಿದ್ದಾರೆ. ಹಾಗೆಯೇ ಇದೇ ಸಂದರ್ಭದಲ್ಲಿ ಪ್ರಕಟಗೊಂಡಿರುವ ಕೃತಿಗಳನ್ನು ಅಧ್ಯಯನದ ಅನುಕೂಲಕ್ಕಾಗಿ ಜೈನ, ವೀರಶೈವ, ವೈದಿಕ, ಅರಮನೆ ಸಾಹಿತ್ಯ, ಶಾಸ್ತ್ರಸಾಹಿತ್ಯ, ಹರಿದಾಸ ಸಾಹಿತ್ಯ, ಸಂಕೀರ್ಣ ಎಂದು ಸ್ಥೂಲವಾಗಿ ವಿಭಾಗ ಮಾಡಿಕೊಂಡು ಚರ್ಚಿಸಿದ್ದಾರೆ. ಗಂಗಾಧರ ಮಡಿವಾಳೇಶ್ವರ ತುರಮುರಿ, ಬಿ. ಮಲ್ಲಪ್ಪನವರು, ಶಾಂತಿರಾಜಶಾಸ್ತ್ರಿಗಳು, ಮಿಶನರಿಗಳು, ಕಿಟ್ಟೆಲ್, ಡಿ.ಎಲ್. ನರಸಿಂಹಾಚಾರ್, ಎಂ.ಆರ್.ಶ್ರೀ, ಎಂ.ಜಿ. ನಂಜುಂಡಾರಾಧ್ಯ, ಎನ್. ಬಸವಾರಾಧ್ಯ, ಬಿ.ವಿ. ಶಿರೂರ, ಎಲ್, ಬಸವರಾಜು, ಹಂಪಾ ನಾಗರಾಜಯ್ಯ, ಎಂ.ಎಂ. ಕಲಬುರ್ಗಿ, ವೀರಣ್ಣ ರಾಜೂರ ಇಂತಹ ಹಿರಿಯ ವಿದ್ವಾಂಸರು ಕನ್ನಡ ಗ್ರಂಥಸಂಪಾದನೆ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಕುರಿತು ವಿವರವಾಗಿ ಚರ್ಚಿಸಿದ್ದಾರೆ.

'ಕರ್ನಾಟಕ ಗ್ರಂಥಸಂಪಾದನೆ' ಪ್ರಸ್ತುತ ಈ ಕೃತಿಯನ್ನು ಎಸ್.ಎಸ್. ಅಂಗಡಿ ಅವರು ಸಂಪಾದಿಸಿ ೨೦೧೨ರಲ್ಲಿ ತನುಮನ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಗ್ರಂಥಸಂಪಾದನೆ ಪಾಠ ಪರಿಷ್ಕರಣ, ಗ್ರಂಥಸಂಪಾದನೆ ವಿದ್ವಾಂಸರ ಸಾಧನೆ, ಗ್ರಂಥಸಂಪಾದನೆ ಜನಪದ ಸಾಹಿತ್ಯ ಹೀಗೆ ವಿಭಾಗ ಮಾಡಿಕೊಂಡು ವಿಶ್ಲೇಷಣೆ ಮಾಡಿದ್ದಾರೆ. ಇಲ್ಲಿ ಗ್ರಂಥಸಂಪಾದನೆಯ ತಾತ್ವಿಕತೆಯ ಚರ್ಚೆಯನ್ನು ಸಂಕ್ಷಿಪ್ತವಾಗಿ ಮಾಡಿದ್ದಾರೆ. ಮಾರ್ಗ ಸಂಪ್ರದಾಯದ ಮೂಲ ಪಾಠ ನಿರ್ಣಯಕ್ಕೆ ಎಷ್ಟು ಸಹಾಯಕವೆಂಬುದನ್ನು ಉದಾಹರಣೆಗಳ ಮೂಲಕ ತೋರಿಸಿ ಕೊಟ್ಟಿದ್ದಾರೆ. ಹಾಗೆಯೇ ದೇಶಿ ಶೈಲಿಯ ಕೃತಿಗಳಲ್ಲಿ ಮೂಲ ಪಾಠದಷ್ಟೇ ಪಾಠಾಂತರಗಳೂ ಮುಖ್ಯವೆಂಬುದನ್ನು

ಉದಾಹರಿಸಿದ್ದಾರೆ. ಹೀಗೆ ಪ್ರಾಚೀನ ಕೃತಿಗಳ ಶಾಸ್ತ್ರೀಯ ಪರಿಷ್ಕರಣವನ್ನು ಅನೇಕ ವಿಧಿವಿಧಾನಗಳ ಮೂಲಕ ಚರ್ಚಿಸಿದ್ದಾರೆ.

'ಸಿರಿಸಂಪದ' (ಬಿ.ವ್ಹಿ ಶಿರೂರ ಅಭಿನಂದನ ಗ್ರಂಥ) ಕೃತಿಯನ್ನು ಎಫ್.ಟಿ. ಹಳ್ಳಿಕೇರಿ, ಕೆ. ರವೀಂದ್ರನಾಥ ಅವರು ಸಂಪಾದಿಸಿ ೨೦೦೨ರಲ್ಲಿ ಬಿ.ವಿ. ಶಿರೂರ ಅಭಿನಂದನ ಸಮಿತಿಯಿಂದ ಪ್ರಕಟಿಸಿದ್ದಾರೆ. ಭಾಗ–೧ ರಲ್ಲಿ ಕನ್ನಡ ಗ್ರಂಥಸಂಪಾದನೆ, ವಿದ್ವಾಂಸರ ಸಾಧನೆಯನ್ನು ಕುರಿತ ಲೇಖನಗಳಿವೆ. ಭಾಗ–೨ ರಲ್ಲಿ ಬಿ.ವಿ. ಶಿರೂರ ವ್ಯಕ್ತಿತ್ವ, ಭಾಗ–೩ ರಲ್ಲಿ ಬಿ.ವಿ. ಶಿರೂರ ಸಾಹಿತ್ಯ ಅನುಬಂಧಗಳು ಇವೆ. ಇಲ್ಲಿ ಮುಖ್ಯವಾಗಿ ಮೋಗ್ಲಿಂಗ್‌ನಿಂದ ವೈ.ಸಿ.ಭಾನುಮತಿಯವರೆಗೆ ಕನ್ನಡ ಗ್ರಂಥಸಂಪಾದನೆಗೆ ವಿವಿಧ ವಿದ್ವಾಂಸರು ನೀಡಿದ ಕೊಡುಗೆಯನ್ನು ಕುರಿತ ೬೦ ಲೇಖನಗಳು ಇವೆ. ಅದರಲ್ಲಿ ಮುಖ್ಯವಾಗಿ ಮಹಿಳೆಯರು ಕನ್ನಡ ಗ್ರಂಥ ಸಂಪಾದನೆಗೆ ನೀಡಿದ ಕೊಡುಗೆಯನ್ನು ಸಮೀಕ್ಷೆ ಮಾಡಲಾಗಿದೆ. ಟಿ.ಎನ್. ನಾಗರತ್ನ ಅವರು ಕನ್ನಡ ಗ್ರಂಥಸಂಪಾದನೆಗೆ ನೀಡಿದ ಕೊಡುಗೆಯನ್ನು ಇಲ್ಲಿನ ಲೇಖನದಲ್ಲಿ ಸಂಕ್ಷಿಪ್ತವಾಗಿ ವಿಶ್ಲೇಷಣೆ ಮಾಡಿದ್ದಾರೆ. ಅವರು ಮುಖ್ಯವಾಗಿ ಹರಿದಾಸ ಸಾಹಿತ್ಯದಲ್ಲಿ ಓರ್ವ ಮಹಿಳೆಯಾಗಿ ಮಾಡಿದ ಸಾಧನೆ ಗಮನಾರ್ಹವಾದ್ದು, ಹರಿದಾಸರ ಜನಪ್ರಿಯ ಮತ್ತು ಪಂಡಿತ ಆವೃತ್ತಿಗಳನ್ನು ಸಂಪಾದಿಸಿ ಸಾಮಾನ್ಯ ಜನರಿಗೂ ತಲುಪಿಸುವ ಉದ್ದೇಶದಿಂದ ಪ್ರಕಟಿಸಿದ ಕೃತಿಗಳ ವೈಶಿಷ್ಟ್ಯವನ್ನು ಚರ್ಚಿಸಿದ್ದಾರೆ.

'ವೈ.ಸಿ. ಭಾನುಮತಿ' ಅವರು ವಿದ್ಯಾರ್ಥಿ ದೆಸೆಯಿಂದಲೇ ಸಂಶೋಧನೆ ಮತ್ತು ಗ್ರಂಥಸಂಪಾದನೆಯ ಕ್ಷೇತ್ರದಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದಂತವರು. ಅವರು ಈ ಕ್ಷೇತ್ರದಲ್ಲಿ ಕೈಗೊಂಡ ಕಾರ್ಯ ಬಹಳ ಪ್ರಮುಖವಾಗಿದೆ. ಅವರು ವೈದಿಕ, ಜೈನ, ವೀರಶೈವ, ವಚನ ಹಾಗೂ ಮಾರ್ಗವಿಧಾನಗಳನ್ನು ಸಂಕ್ಷಿಪ್ತವಾಗಿ ಸಿರಿಸಂಪದಲ್ಲಿನ ಲೇಖನದಲ್ಲಿ ಚರ್ಚೆಮಾಡಿದ್ದಾರೆ. ವಿವಿಧ ವಿದ್ವಾಂಸರು ಕನ್ನಡ ಗ್ರಂಥಸಂಪಾದನೆಗೆ ನೀಡಿದ ಕೊಡುಗೆಯನ್ನು ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ. ಇಷ್ಟು ಕನ್ನಡ ಗ್ರಂಥಸಂಪಾದನೆಯನ್ನು ಭಿನ್ನ ಆಯಾಮಗಳಲ್ಲಿ ವಿಶ್ಲೇಷಿಸಿದ ಕೃತಿಗಳಾಗಿವೆ.

ಲೇಖನಗಳು

ಎಂ.ಎಂ. ಕಲಬುರ್ಗಿ ಅವರು ಸಂಪಾದಿಸಿರುವ 'ಮಹಾಮಾರ್ಗ'ದಲ್ಲಿ ವೈ.ಸಿ. ಭಾನುಮತಿ ಅವರು 'ಕನ್ನಡ ಹಸ್ತಪ್ರತಿ ಗ್ರಂಥಸಂಪಾದನೆ' ಲೇಖನವನ್ನು ಪ್ರಕಟಿಸಿದ್ದಾರೆ. ಜ್ಞಾನ ವೃಕ್ಷ ಬೇರು ಹಸ್ತಪ್ರತಿ ಶಾಸ್ತ್ರವಾದರೆ ಗ್ರಂಥಸಂಪಾದನೆ ಆ ವೃಕ್ಷದ ಕಾಂಡ ಎಂದಿದ್ದಾರೆ. ಹಸ್ತಪ್ರತಿ ಸಂಗ್ರಹ ವ್ಯಾಖ್ಯಾನ ಮಾದರಿ ಹಾಗೂ ಕನ್ನಡ ಗ್ರಂಥಸಂಪಾದನೆಯ ತಾತ್ವಿಕತೆಯನ್ನು ನಿರೂಪಿಸಿದ್ದಾರೆ. ಕನ್ನಡ ಗ್ರಂಥಸಂಪಾದನೆಯು ಒಂದು ಶಾಸ್ತ್ರೀಯವಾಗಿ ರೂಪಗೊಂಡ ಇತಿಹಾಸವನ್ನು ಪಾಶ್ಚಾತ್ಯ ಹಾಗೂ ದೇಶಿ ವಿದ್ವಾಂಸರ ನೆಲೆಯಲ್ಲಿ ಚರ್ಚಿಸಿದ್ದಾರೆ. ಹಾಗೆಯೇ ಕನ್ನಡ ನಾಡಿನಲ್ಲಿ ನಡೆದಂಥ ಗ್ರಂಥಸಂಪಾದನ ಕಾರ್ಯವನ್ನು ಅಧ್ಯಯನದ ದೃಷ್ಟಿಯಿಂದ ಮಿಶನರಿಗಳು ಆರಂಭಿಸಿದ ಗ್ರಂಥಸಂಪಾದನೆ.

ಉತ್ತರ ಕರ್ನಾಟದಲ್ಲಿ ನಡೆದ ಗ್ರಂಥಸಂಪಾದನೆ. ಮೈಸೂರು ಭಾಗದಲ್ಲಿ ಜರುಗಿದ ಗ್ರಂಥಸಂಪಾದನೆ, ಹೊರನಾಡಿನಲ್ಲಿ ನಡೆದ ಗ್ರಂಥಸಂಪಾದನೆ, ಮಠ ಮಾನ್ಯಗಳಲ್ಲಿ ಹಾಗೂ ವೈಯಕ್ತಿಕ ಆಸಕ್ತಿಯಿಂದ ನಡೆದ ಸಂಪಾದನೆಯನ್ನು ಮತ್ತು ವಿಶ್ವವಿದ್ಯಾಲಯಗಳಲ್ಲಿ ನಡೆದ ಸಂಪಾದನ ಕಾರ್ಯ ಹೀಗೆ ಶಾಸ್ತ್ರೀಯವಾಗಿ ಸಂಪಾದಿಸಿದ ಕೃತಿಗಳ ವೈಧಾನಿಕತೆಯನ್ನು ಕುರಿತು ಚರ್ಚಿಸಿದ್ದಾರೆ.

'ಮಹಿಳಾ ಸಾಹಿತ್ಯ ಸಮೀಕ್ಷೆ' ಕೃತಿಯನ್ನು ಆರ್ಯಾಂಬ ಪಟ್ಟಾಬಿ ಅವರು ಸಂಪಾದಿಸಿದ್ದಾರೆ. ಈ ಕೃತಿಯಲ್ಲಿ ವೈ.ಸಿ. ಭಾನುಮತಿ ಅವರ 'ಗ್ರಂಥಸಂಪಾದನೆ ಮತ್ತು ಸಂಶೋಧನೆ' ಎಂಬ ಲೇಖನ ಪ್ರಕಟವಾಗಿದೆ. ಸಂಶೋಧನೆ ಮತ್ತು ಗ್ರಂಥಸಂಪಾದನೆ ಒಂದೇ ನಾಣ್ಯದ ಎರಡು ಮುಖಗಳು ಎನ್ನುವ ಚರ್ಚೆ ಮಾಡಿದ್ದಾರೆ. ಗ್ರಂಥಸಂಪಾದನೆ ಮತ್ತು ಸಂಶೋದನೆಗಿಂತ ಮಹಿಳೆಯರು 'ಸೃಜನಶೀಲ' ಸಾಹಿತ್ಯದಲ್ಲಿ ಹೆಚ್ಚು ಕಂಡು ಬರುತ್ತಾರೆ. ಹಾಗೇ 'ಸೃಜನೇತರ' ಸಾಹಿತ್ಯ ಪ್ರಕಾರದಲ್ಲಿ ತೊಡಗಿಕೊಳ್ಳಲು ತಾಳ್ಮೆ, ಕಷ್ಟ, ಸಹಿಷ್ಣುತೆ, ಆಳವಾದ ಅಧ್ಯಯನ, ನಿರಂತರವಾದ ಆಸಕ್ತಿ, ಪ್ರಾಚೀನ ಕನ್ನಡ ಲಿಪಿಯ ಜ್ಞಾನ, ಸಾಹಿತ್ಯದ ಪರಿಚಯ, ಛಂದಸ್ಸಿನ ಅರಿವು, ಪಾಂಡಿತ್ಯದ ಬೆಂಬಲ, ಪ್ರತಿಭೆಯ ಬೆಳಕು ಇವು ಎಲ್ಲವುಗಳನ್ನು ರೂಢಿಸಿಕೊಂಡು ಪ್ರಾಚೀನ ಕಾಲದಿಂದಲೂ ಅಂದರೆ ಅತ್ತಿಮಬ್ಬೆಯಂಥ ಹಸ್ತಪ್ರತಿ ಪೋಷಕರಿಂದ ಹಿಡಿದು ಅನೇಕ ಮಹಿಳೆಯರು ಗ್ರಂಥಸಂಪಾದನೆಯಲ್ಲಿ ತೊಡಗಿಕೊಂಡಿದ್ದಾರೆ.

ಚಿದಾನಂದಮೂರ್ತಿ ಅವರು 'ಹೊಸತು-ಹೊಸತು' ಈ ಕೃತಿಯಲ್ಲಿ 'ಗ್ರಂಥಸಂಪಾದನೆ' ಎಂಬ ಲೇಖನವಿದೆ. 'ಗ್ರಂಥಸಂಪಾದನೆ' ಎಂದರೆ ಏನು? ಎಂಬ ಅರ್ಥವನ್ನು ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ. 'ಗ್ರಂಥ' ಎಂಬುದು ಮೂಲಭೂತವಾಗಿ ಒಂದು ಕಟ್ಟು (Bundle) ಎಂಬರ್ಥವನ್ನು ಪಡೆದಿದ್ದು ಅದು ಮುಂದೆ ಓಲೆಗರಿಗಳ ಅಥವಾ ಬೇರೆ ಬಗೆಯ ಪುಸ್ತಕವೆಂಬರ್ಥವಿದ್ದು, ಅದು ಸಂಸ್ಕೃತದ ಗ್ರಂಥ ಎಂಬುದಕ್ಕೆ ಸಮಾನವಾದುದು ಎಂದಿದ್ದಾರೆ. ಹಾಗೆಯೇ 'ಸಂಪಾದನೆ' ಎಂಬುದಕ್ಕೆ 'ಗ್ರಂಥಗಳ ಸಂಪಾದನೆ' ಅಥವಾ 'ಗ್ರಂಥ ಸಂಗ್ರಹವೇ ಸಂಪಾದನೆ' ಎಂದು ಅನೇಕರು ಭಾವಿಸಿರುವುದನ್ನು ವಿವರಿಸಿದ್ದಾರೆ. ಇಲ್ಲಿ 'ಗ್ರಂಥ' ಎನ್ನುವುದು ಕವಿ ಅಥವಾ ಗ್ರಂಥಕರ್ತೃ ರಚಿಸಿದ ಕೃತಿಯನ್ನು ಸೂಚಿಸುತ್ತದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಪ್ರಾಚೀನ ಕೃತಿಗಳ ಸಂಪಾದನೆಯ ವೈಶಿಷ್ಟ್ಯವನ್ನು ಈ ಲೇಖನದಲ್ಲಿ ಚರ್ಚಿಸಿದ್ದಾರೆ.

'ಹಸ್ತಪ್ರತಿ ಸಂಕಥನ' ಕೃತಿಯನ್ನು ವೀರೇಶ ಬಡಿಗೇರ ಅವರು ೨೦೧೪ರಲ್ಲಿ ಮಯ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿನ 'ಭಾರತೀಯ ಗ್ರಂಥಸಂಪಾದನೆ ಅನುಸಂಧಾನದ ಭಿನ್ನ ನೆಲೆಗಳು' ಎಂಬ ಲೇಖನದಲ್ಲಿ ಭಾರತೀಯ ಗ್ರಂಥಸಂಪಾದನೆ ಬಹುಸಂಸ್ಕೃತಿಯಲ್ಲಿ ಬೆಳೆದು ಬಂದ ಬಗೆಯನ್ನು ಚರ್ಚಿಸಿದ್ದಾರೆ. ಹಾಗೆಯೇ 'ಪಠ್ಯದ ಸ್ವರೂಪ' ಭಾರತೀಯ ಸಂದರ್ಭದಲ್ಲಿ ಗ್ರಂಥ, ಲೇಖನ, ಲಿಪಿ, ಹೊತ್ತಿಗೆ, ಕಟ್ಟು, ಕವಳಿಗೆ. ಪುಸ್ತಕ, ಹಸ್ತಪ್ರತಿ ಎನ್ನುವ ಶಬ್ದದಲ್ಲಿ ಬಳಕೆ ಆಗಿರುವುದನ್ನು ಗಮನಿಸಿ ಇತರೆ ಭಾಷೆಗಳಲ್ಲಿ ಅದಕ್ಕಿರುವ ಅರ್ಥಗಳೊಂದಿಗೆ ಚರ್ಚಿಸಿದ್ದಾರೆ. 'ಮಧ್ಯಕಾಲೀನ ಭಾರತೀಯ ಸಂದರ್ಭ ಮತ್ತು ಗ್ರಂಥಸಂಪಾದನ ಚಟುವಟಿಕೆಗಳು' ಈ ಲೇಖನದಲ್ಲಿ

ಪ್ರಾಚೀನ ಕೃತಿಗಳಲ್ಲಿ ಪಾಠಾಂತರ ದೋಷಗಳನ್ನು ತಿದ್ದುವ ಮತ್ತು ಗುರುತಿಸುವ ಜ್ಞಾನವನ್ನು ಭಾರತೀಯರು ಸಾಂಪ್ರದಾಯಿಕವಾಗಿ ಹೇಗೆ ಸರಿಪಡಿಸಿಕೊಳ್ಳುತ್ತಿದ್ದರು ಎಂಬುದನ್ನು ಚರ್ಚೆ ಮಾಡಿದ್ದಾರೆ. ಹಾಗೆಯೇ ಪಾಶ್ಚಾತ್ಯ ಸಂದರ್ಭ ಮತ್ತು ಕರ್ನಾಟಕದ ಸಂದರ್ಭದಲ್ಲಿ ಬೆಳೆದು ಬಂದ ಭಾರತೀಯ ಗ್ರಂಥಸಂಪಾದನೆಯ ವಿವಿಧ ಆಯಾಮಗಳೊಂದಿಗೆ ಅನುಸಂಧಾನ ಮಾಡಿದ್ದಾರೆ. ಗ್ರಂಥಸಂಪಾದನ ಇತಿಹಾಸದಲ್ಲಿ ಇದೊಂದು ಭಿನ್ನ ಆಲೋಚನ ಮಾದರಿಯ ಲೇಖನವಾಗಿದೆ.

'ಕಂಠ ಪತ್ರ–೨' ಈ ಕೃತಿಯನ್ನು ಎಫ್.ಟಿ. ಹಳ್ಳಿಕೇರಿ ಅವರು ೨೦೧೪ರಲ್ಲಿ ವಿಕಾಸ ಪ್ರಕಾಶನದಿಂದ ಪ್ರಕಟಿಸಿದ್ದಾರೆ. 'ಕನ್ನಡ ಗ್ರಂಥಸಂಪಾದನ ಶಾಸ್ತ್ರದ ಇತಿಹಾಸವನ್ನು' ಕುರಿತು ಈ ಲೇಖನದಲ್ಲಿ ಚರ್ಚಿಸಿದ್ದಾರೆ. ಪ್ರಾಚೀನ ಕಾಲದಿಂದಲೂ ಭಾರತೀಯ ಗ್ರಂಥಸಂಪಾದನ ಶಾಸ್ತ್ರ ಸಾಂಪ್ರದಾಯಿಕವಾಗಿ ಬೆಳೆದು ಬಂದಿರುವುದನ್ನು ಗಮನಿಸಿದ್ದಾರೆ. ಗ್ರಂಥ ರಕ್ಷಣೆ, ಗ್ರಂಥ ಲೇಖನ, ಪಾಠ ರಕ್ಷಣೆ, ಪಾಠ ಸಂಗ್ರಹ, ಪಾಠ ನಿರ್ಣಯ ಈ ಹಂತಗಳಲ್ಲಿ ಬೆಳೆದು ಬಂದ ಆಧುನಿಕ ಕಾಲದಲ್ಲಿ ಪಾಶ್ಚಾತ್ಯ ವಿದ್ವಾಂಸರ ಪ್ರಭಾವದಿಂದ ಗ್ರಂಥಸಂಪಾದನ ಶಾಸ್ತ್ರ ಶಾಸ್ತ್ರೀಯವಾಗಿ ಬೆಳೆದು ಬಂದಿರುವುದನ್ನು ಮಿಷನರಿ ವಿದ್ವಾಂಸರ ಕಾಲ, ದೇಶಿ ಪಂಡಿತರ ಕಾಲ. ವಿಶ್ವವಿದ್ಯಾಲಯಗಳ ಕಾಲ, ಮಠ ಮಾನ್ಯಗಳ ಕಾಲ ಎಂದು ವಿಂಗಡಿಸಿ ಕನ್ನಡ ಗ್ರಂಥಸಂಪಾದನೆ ಶಾಸ್ತ್ರೀಯವಾಗಿ ಬೆಳೆದು ಬಂದಿರುವ ಸಾಂಪ್ರದಾಯಿಕ ಇತಿಹಾಸವನ್ನು ಚರ್ಚೆಮಾಡಿದ್ದಾರೆ.

'ಹಸ್ತಪ್ರತಿ ವ್ಯಾಸಂಗ–೫' ಎನ್ನುವ ಹಸ್ತಪ್ರತಿ ಸಮ್ಮೇಳನದ ಲೇಖನಗಳನ್ನು ವೀರೇಶ ಬಡಿಗೇರ ಅವರು ಸಂಪಾದಿಸಿ ೨೦೦೬ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಿಸಿದ್ದಾರೆ. 'ಗ್ರಂಥ ಸಂಪಾದನೆಯ ಹಿಂದಿನ ಮನೋಧರ್ಮಗಳು' ಈ ಲೇಖನದಲ್ಲಿ ವೀರೇಶ ಬಡಿಗೇರ ಅವರು 'ಗ್ರಂಥ ಸಂಪಾದನೆಯಲ್ಲಿ ಮೂಲ ಪಠ್ಯ, ಶುದ್ಧ ಪಠ್ಯ, ಕವಿ ಪಾಠ, ಎನ್ನುವ ಪರಿಕಲ್ಪನೆಗಳು ತುಂಬ ಗಂಭೀರವಾದಂಥವು. ಆದರೆ ಭಾಷಿಕ ಆಕೃತಿಗಳನ್ನು ಲಿಖಿತ ಅಥವಾ ಮೌಖಿಕವಾದ ಚಲನಶೀಲ ಸಂಸ್ಕೃತಿಯೊಂದು ತನ್ನ ಕಾಲದ ಅಗತ್ಯಗಳಿಗೆ ತಕ್ಕಂತೆ ಮುಂದುವರೆದು ಕಟ್ಟುತ್ತ ಬಂದಿರುವ ಹಾಗೂ ನಡೆಸಿರುವ ವಾಗ್ವಾದ ಅನುಸಂಧಾನಗಳನ್ನು ವಿಶ್ಲೇಷಣೆ ಮಾಡಿದ್ದಾರೆ. ಸಾಂಪ್ರದಾಯಿಕ ಗ್ರಂಥಸಂಪಾದನ ಅಧ್ಯಯನಕ್ಕಿಂತ ಭಿನ್ನವಾದ ನೆಲೆಗಳ ಚರ್ಚೆಯನ್ನು ಈ ಲೇಖನದಲ್ಲಿ ಕಾಣಬಹುದು.

ಪಿಎಚ್.ಡಿ. ಮಹಾಪ್ರಬಂಧಗಳು

ರಂಗಸ್ವಾಮಿ ಬಿ.ಟಿ. ಅವರು ಪಿಎಚ್.ಡಿ ಪದವಿಗಾಗಿ ೨೦೦೩ರಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅರ್ಪಿಸಿದ (ಅಪ್ರಕಟಿತ ಮಹಾಪ್ರಬಂಧ) 'ಕನ್ನಡ ಗ್ರಂಥಸಂಪಾದನೆ ಒಂದು ಅಧ್ಯಯನ' ಮಹಾಪ್ರಬಂಧದಲ್ಲಿ ಕನ್ನಡ ಗ್ರಂಥಸಪಾದನೆಯ ಹಿನ್ನೆಲೆ, ಮಹತ್ವ, ಹಸ್ತಪ್ರತಿಗಳ ಸಂಗ್ರಹಣೆ ಮತ್ತು ಸಂರಕ್ಷಣೆ, ಹಸ್ತಪ್ರತಿಯ ಪರಂಪರೆ ಕುರಿತು ಅಧ್ಯಾಯ ಒಂದರಲ್ಲಿ ಚರ್ಚಿಸಿದ್ದಾರೆ. ಅಧ್ಯಾಯ ಎರಡರಲ್ಲಿ 'ಗ್ರಂಥಸಂಪಾದನೆ ನಡೆದು ಬಂದ ದಾರಿ' ಭಾಗದಲ್ಲಿ ಪಾಶ್ಚಾತ್ಯ ಸಾಹಿತ್ಯದಲ್ಲಿ ಭಾರತೀಯ ಸಾಹಿತ್ಯದಲ್ಲಿ ಹಾಗೂ ಕನ್ನಡದಲ್ಲಿ ಗ್ರಂಥಸಂಪಾದನೆ ಬೆಳೆದು ಬಂದ ಬಗೆಯನ್ನು ವಿಶ್ಲೇಷಣೆ

ಮಾಡಿದ್ದಾರೆ. ಹಾಗೆಯೇ ಕನ್ನಡದಲ್ಲಿ ಗ್ರಂಥಸಂಪಾದನೆ ಎಂಬ ಅಧ್ಯಾಯದಲ್ಲಿ ಪ್ರಾಚೀನ ಕಾವ್ಯಗಳ (ಗದ್ಯ, ಪದ್ಯ) ಸಂಪಾದನೆ, ಕುಮಾರವ್ಯಾಸ ಭಾರತ ಸಂಪಾದನೆ, ಕನ್ನಡ ಶಾಸ್ತ್ರಗ್ರಂಥಗಳು, ವಚನ, ಹರಿದಾಸ ಸಾಹಿತ್ಯ ಸಂಪಾದನೆಯ ವೈಧಾನಿಕತೆಯ ಕುರಿತು ಚರ್ಚಿಸಿದ್ದಾರೆ. ಹಾಗೆಯೇ ಕನ್ನಡ ಗ್ರಂಥಸಂಪಾದನೆಗೆ ವಿವಿಧ ಮೂಲಗಳ ಕೊಡುಗೆ ಎಂಬ ಅಧ್ಯಾಯದಲ್ಲಿ ಮಠಮಾನ್ಯಗಳು, ಸಂಘ ಸಂಸ್ಥೆಗಳು, ವಿದ್ಯತ್ ಪತ್ರಿಕೆಗಳ ವಿವಿಧ ವಿದ್ವಾಂಸರು ಕನ್ನಡ ಗ್ರಂಥಸಂಪಾದನೆಗೆ ನೀಡಿದ ಕೊಡುಗೆಯನ್ನು ಚರ್ಚಿಸಿದ್ದಾರೆ. ಈ ಮಹಾಪ್ರಬಂಧದಲ್ಲಿ ಮಹಿಳೆಯರ ಗ್ರಂಥಸಂಪಾದನೆಯ ಇತಿಹಾಸವನ್ನು ಕುರಿತು ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ.

ಸಿದ್ದಪ್ಪ ಎನ್. ಅವರು 'ಕನ್ನಡ ಗ್ರಂಥಸಂಪಾದನೆ ಆರ್.ಸಿ. ಹಿರೇಮಠ' ಕೃತಿಯನ್ನು ೨೦೦೫ ರಲ್ಲಿ ಹಂಸ ಪ್ರಕಾಶನ ಚಿತ್ರದುರ್ಗದಿಂದ ಪ್ರಕಟಿಸಿದ್ದಾರೆ. ಈ ಮಹಾಪ್ರಬಂಧದಲ್ಲಿ ಏಳು ಅಧ್ಯಾಯಗಳಿವೆ, ಅಧ್ಯಾಯ ಒಂದರಲ್ಲಿ ಪೀಠಿಕೆ, ಸಂಶೋಧನೆಯ ಉದ್ದೇಶ ಹಾಗೂ ವ್ಯಾಪ್ತಿ, ಅಧ್ಯಯನದ ಆಕರ ಸಾಮಾಗ್ರಿಗಳು, ಸಂಶೋಧನಗೆ ಅನ್ವಯಿಸಿದ ಸಂಶೋಧನ ಪದ್ದತಿಗಳನ್ನು ಚರ್ಚಿಸಿದ್ದಾರೆ. ಅಧ್ಯಾಯ ಎರಡರಲ್ಲಿ ಆರ್.ಸಿ. ಹಿರೇಮಠರ ಜೀವನ ಮತ್ತು ಸಾಹಿತ್ಯ ದರ್ಶನ, ಅಧ್ಯಾಯ ಮೂರರಲ್ಲಿ ಗ್ರಂಥಸಂಪಾದನೆಯ ಅರ್ಥ (ಸಂಗ್ರಹ, ಸಂಕಲನ, ಸಂಪಾದನೆ), ಜನಪದ ಸಂಪಾದನೆ, ಶಾಸನಗಳ ಸಂಪಾದನೆ, ಕಾವ್ಯಗಳ ಸಂಪಾದನೆ, (ಚಂಪೂ, ರಗಳೆ, ಷಟ್ಪದಿ ಇತ್ಯಾದಿ) ಅಧ್ಯಾಯ ನಾಲ್ಕರಲ್ಲಿ ಆರ್.ಸಿ. ಹಿರೇಮಠರವರ ವಚನ ಸಂಪಾದನೆಯ ವಿಧಿವಿಧಾನಗಳು, ವಚನ ಸಾಹಿತ್ಯ ಸಂಪಾದನೆ, ಅಧ್ಯಾಯ ಐದರಲ್ಲಿ ಪಠ್ಯಪುಸ್ತಕಗಳ ಸಂಪಾದನೆ, ಸಂಸ್ಮರಣೆ ಗ್ರಂಥಗಳ ಸಂಪಾದನೆ ಅಧ್ಯಾಯ ಆರರಲ್ಲಿ ಕನ್ನಡ ಕೋಶಗಳ ಸಂಪಾದನೆ, ಭಾಷಾಶಾಸ್ತ್ರಾಧ್ಯಯನ ಸಂಪಾದನೆ, ಪತ್ರಿಕೆಗಳ ಸಂಪಾದನೆ, ಅಧ್ಯಾಯ ಏಳರಲ್ಲಿ ಸಮಾರೋಪವಿದೆ. ಒಟ್ಟಿನಲ್ಲಿ ಕನ್ನಡ ಗ್ರಂಥಸಂಪಾದನೆಗೆ ಆರ್.ಸಿ. ಹಿರೇಮಠ ಅವರು ನೀಡಿದ ಕೊಡುಗೆಯನ್ನು ವಿಸ್ತೃತವಾಗಿ ಚರ್ಚಿಸಿದ್ದಾರೆ.

ಒಟ್ಟಾರೆಯಾಗಿ ಕನ್ನಡ ಗ್ರಂಥಸಂಪಾದನೆಯ ಸ್ವರೂಪ ಮತ್ತು ಇತಿಹಾಸವನ್ನು ಒಳಗೊಂಡಂತೆ ಕನ್ನಡದಲ್ಲಿ ಕೆಲವು ಅಧ್ಯಯನಗಳು ನಡೆದಿವೆ. ಈ ಅಧ್ಯಯನಗಳು ಗ್ರಂಥಸಂಪಾದನೆಯ ಇತಿಹಾಸ, ಗ್ರಂಥಸಂಪಾದನೆಯು ಭಾರತೀಯ ಸಂದರ್ಭದಲ್ಲಿ ಶಾಸ್ತ್ರೀಯವಾಗಿ ಬೆಳದು ಬಂದ ಬಗೆಯನ್ನು ಮತ್ತು ಪಾಶ್ಚಾತ್ಯ ಹಾಗೂ ದೇಶಿ ವಿದ್ವಾಂಸರು ಕನ್ನಡ ಗ್ರಂಥಸಂಪಾದನೆಗೆ ನೀಡಿದ ಕೊಡುಗೆಯನ್ನು ಕುರಿತು ವಿವರಿಸುತ್ತವೆ. ಆದರೆ ಸಮಸ್ಯೆ ಎಂದರೆ ಗ್ರಂಥಸಂಪಾದನೆಗೆ ಮಹಿಳೆಯರು ನೀಡಿದ ಕೊಡುಗೆ ಕುರಿತು ಗಂಭೀರ ಚಿಂತನೆ ಈ ಅಧ್ಯಯನಗಳಲ್ಲಿ ನಡೆದಿಲ್ಲ. ಪ್ರಾಸಂಗಿಕವಾಗಿ ನಡೆದ ಕೆಲವು ಮಾಹಿತಿಗಳನ್ನು ಬಿಟ್ಟರೆ ಅಂಥ ಹೇಳಿಕೊಳ್ಳುವಂಥ ಚರ್ಚೆ ಆಗಿಲ್ಲ ಎನ್ನುವುದು ಈ ಸಮೀಕ್ಷೆಯಿಂದ ತಿಳಿಯುತ್ತದೆ.

ಆದಾಗ್ಯೂ ಈ ಎಲ್ಲಾ ಕೃತಿಗಳು ಲೇಖನಗಳು ಸಹ ಪ್ರಸ್ತುತ ಅಧ್ಯಯನಕ್ಕೆ ಅಗತ್ಯವಾದ ಒಂದು ತಳಹದಿಯನ್ನು ಒದಗಿಸಿವೆ ಈ ಹಿನ್ನೆಲೆಯಲ್ಲಿ 'ಕನ್ನಡ ಗ್ರಂಥಸಂಪಾದನೆಯಲ್ಲಿ ಮಹಿಳಾ

ಪ್ರತಿನಿಧೀಕರಣ' ಎಂಬ ಶೀರ್ಷಿಕೆಯಡಿ ಕೈಗೊಳ್ಳುತ್ತಿರುವ ಈ ಅಧ್ಯಯನವು ಇದುವರೆಗೂ ನಡೆಸಲಾದ ಅಧ್ಯಯನಗಳಿಗಿಂತ ಭಿನ್ನವಾಗಿದೆ. ಏಕೆಂದರೆ ಮಹಿಳೆಯರ ಗ್ರಂಥಸಂಪಾದನೆಯನ್ನೇ ಮಾತ್ರ ಮುಖ್ಯ ಆಕರವನ್ನಾಗಿ ಕೊಂಡಿರುವ ಈ ಅಧ್ಯಯನದಿಂದ ಮಹಿಳೆಯರು ಗ್ರಂಥಸಂಪಾದನೆಗೆ ನೀಡಿದ ಗುಣಾತ್ಮಕ ಕೊಡುಗೆಯನ್ನು ವಿವಿಧ ನೆಲೆಯಲ್ಲಿ ಚರ್ಚಿಸಲಾಗಿದೆ. ಗ್ರಂಥಸಂಪಾದನೆಯಲ್ಲಿ ತೊಡಗಿಕೊಂಡ ಮಹಿಳೆಯರ ಕುರಿತು ಮೊದಲ ಬಾರಿಗೆ ನಡೆದ ಅಧ್ಯಯನ ಇದು ಎನ್ನುವುದು ಗಮನಾರ್ಹ ಸಂಗತಿ.

ಅಧ್ಯಾಯ ಎರಡು

ಮಹಿಳೆ ಮತ್ತು ಕನ್ನಡ ಜ್ಞಾನದ ಸ್ವರೂಪ

ಅಧ್ಯಾಯ ಎರಡು

ಮಹಿಳೆ ಮತ್ತು ಕನ್ನಡ ಜ್ಞಾನದ ಸ್ವರೂಪ

ಕನ್ನಡ ಜ್ಞಾನ ಸ್ವರೂಪ ಎನ್ನುವುದು ಅನುಭವಜನ್ಯವಾದದ್ದು, ಕನ್ನಡ ಜ್ಞಾನ ಎಂಬ ಪರಿಕಲ್ಪನೆಯನ್ನು ಕ್ರಿಯೆ ಮತ್ತು ಅರಿವಿನ ಸಾತತ್ಯತೆಯಿಂದ ಕೂಡಿದ ಗ್ರಾಂಥಿಕ ಸ್ವರೂಪದಿಂದ ಭಿನ್ನವಾದ ಅನೌಪಚಾರಿಕ ನೆಲೆಯಲ್ಲಿ ಪರಿಭಾವಿಸಲಾಗಿದೆ. ಜ್ಞಾನ ಎನ್ನುವುದು ಕೇವಲ ಪುಸ್ತಕಕೇಂದ್ರಿತ ಅಥವಾ ಅಕ್ಷರಕೇಂದ್ರಿತವಲ್ಲ. ಕೃಷಿಕರು, ಕುಶಲಕರ್ಮಿಗಳು ಈ ಜಗತ್ತಿನ ಜನಜೀವನವನ್ನು ಅಭಿವೃದ್ಧಿಗೊಳಿಸಿದ್ದಾಗಿದೆ. ಇಲ್ಲಿ ವೃತ್ತಿ ಎಂದರೆ ಬರೀ ಕೆಲಸವಾಗಿರಲಿಲ್ಲ. ಅದು ಒಂದು ಸಮಷ್ಠಿ ಜೀವನ ವಿಧಾನವಾಗಿತ್ತು. ನಿರಂತರ ಪ್ರಕ್ರಿಯೆ ಸ್ವರೂಪದ್ದಾಗಿತ್ತು. ಜಾತಿ, ಧರ್ಮ, ಲಿಂಗ, ಮೇಲು, ಕೀಳು ಮುಂತಾದ ಮಾನವ ನಿರ್ಮಿತ ಸಂಕೋಲೆಯನ್ನು ಮೀರಿದ್ದಾಗಿತ್ತು. ನಿಂತ ನೆಲವೇ ಇಂತಹ ಜ್ಞಾನ ಕೌಶಲ್ಯಗಳ ಜಗತ್ತು. ಇಂತಹ ಜ್ಞಾನ ಹಾಗೂ ಕಲಾ ಪ್ರಕಾರಗಳು ಮತ್ತು ಸಾಮಾಜಿಕ ವಿಧಾನಗಳು ವ್ಯಕ್ತಿಯೊಬ್ಬನನ್ನು ಜವಾಬ್ದಾರಿಯುತ ಸದಸ್ಯನನ್ನಾಗಿ ಮಾಡಲು ಅಗತ್ಯವಿದ್ದ ಬಹುತೇಕ ಎಲ್ಲಾ ಸಾಮಾಜಿಕ ನೆಲೆಗಟ್ಟುಗಳನ್ನು ಒದಗಿಸುತ್ತಿದ್ದವು.

ಸಾಂಪ್ರದಾಯಿಕ ಸಮಾಜದಲ್ಲಿ ಜೀವನ ವಿಧಾನದ ವಿಕಾಸವೆಂದರೆ ತಿಳುವಳಿಕೆಯ ವಿಕಾಸವೇ ಆಗಿತ್ತು. ತಾಳೆಗರಿ, ಕೋರಿಕಾಗದ, ಲೆಖ್ಖಣಿಕೆಗಳ ವಿಕಾಸವು ಒಂದು ಜೀವನ ವಿಧಾನವಾದರೆ, ಮುದ್ರಣಯಂತ್ರ, ಕಾಗದ ಮತ್ತು ಪೆನ್ನು ಇವುಗಳ ನಿರ್ಮಾಣ ಉದ್ಯಮದ ಉತ್ಪನ್ನಗಳಾಗಿವೆ. ಒಂದು; ಸಹಜ ಬದುಕಿನ ಗತಿಯನ್ನು ಹೇಳಿದರೆ ಮತ್ತೊಂದು; ಯಂತ್ರ ನಾಗರೀಕತೆಯ ಕೃತ್ರಿಮತೆಯನ್ನು ಹೇಳುತ್ತದೆ. ಸಾವಯವ ಪರಂಪರೆಯ ಒಳಗಡೆ ನಡೆಯುವ ಯಂತ್ರದ ಪ್ರವೇಶವು ಮಾನವನನ್ನು ವಿಮುಖಿಯಾಗಿಸುತ್ತದೆ.

ವಿಶೇಷವಾಗಿ ಪ್ರಾಚೀನ ಕರ್ನಾಟಕದಲ್ಲಿ ಕಾಳಾಮುಖ ಮಠಗಳು ಹಾಗೂ ಮಠಾಧೀಶರು ಆತ್ಮಜ್ಞಾನ ಪ್ರಧಾನವಾದ ವಿದ್ಯೆಗಿಂತ ಕ್ರಿಯೆ, ಅರಿವು, ಕೌಶಲ್ಯ ಹಾಗೂ ಶ್ರಮಪ್ರಧಾನವಾದ ವಿದ್ಯೆಗಳನ್ನು ಕಲಿಸಲು ಪ್ರಯತ್ನಪಟ್ಟರು. ಈ ಕುರಿತು ಹತ್ತರಿಂದ ಹನ್ನೊಂದನೆಯ ಶತಮಾನದಲ್ಲಿ ಸಿಗುವ ಹಲವು ಕನ್ನಡ ಶಿಲಾಶಾಸನಗಳು ಬೆಳಕು ಚೆಲ್ಲುತ್ತವೆ. ಒಂದೆಡೆ ವೈದಿಕ ಸಂಪ್ರದಾಯದಲ್ಲಿ ವೇದ, ವೇದಾಂಗಗಳಂತಹ ವಿದ್ಯೆಯನ್ನು ಸಂಸ್ಕೃತ ಭಾಷೆಯಲ್ಲಿ ಕಲಿಸುತ್ತಿದ್ದರು. ಇಲ್ಲಿ ಕನ್ನಡ ಭಾಷೆಯ

ಅಭ್ಯಾಸವಿರಲಿಲ್ಲ. ಸಂಸ್ಕೃತಿ ನಿರ್ಮಾಣದಲ್ಲಿ ನಿಜವಾದ ಪಾತ್ರ ವಹಿಸುವ ಕಾಯಕ ಜೀವಿಗಳು, ಕುಶಲ, ಕೆಲಸಗಾರರು, ವೈದಿಕರು ಹೇಳುತ್ತಿದ್ದ ವಸ್ತು ಮತ್ತು ಮಾಧ್ಯಮಗಳ ವಿರೋಧವನ್ನು ಮಾಡಬೇಕಾಗಿತ್ತು. ಅನುಭವ ಮಂಟಪದಲ್ಲಿ ಕಾಯಕದ ಮಹತ್ವವನ್ನು ಒತ್ತಿ ಹೇಳಿದ ಉದ್ದೇಶವೆಂದರೆ, ದೇವಸ್ಥಾನ, ಅಗ್ರಹಾರ ಮಠಗಳಲ್ಲಿ ಕುಳಿತು ಕಲಿಸುತ್ತಿದ್ದ ಕಾಯಕವಲ್ಲದ ವಿದ್ಯೆ ಎಂಬುದು ಮುಖ್ಯ ವಿಚಾರವಾಗಿತ್ತು.

ದೇವಸ್ಥಾನಗಳು ನೀಡುತ್ತಿದ್ದ ಅಲೌಕಿಕ ವಿದ್ಯೆಯು ಶ್ರಮಿಕ ವರ್ಗಗಳ ಪ್ರಜ್ಞೆಯನ್ನು ವೃತ್ತಿ ಹೆಸರಲ್ಲಿ ಜಾತೀಕರಿಸಲಾಗಿತ್ತು. ಸಾಲಿಮಠ, ಕೂಲಿಮಠ, ಓಲೆಮಠಗಳಲ್ಲಿ ನಡೆಯುತ್ತಿದ್ದ ಬಡಗಿತನ, ಕಮ್ಮಾರಿಕೆ, ನೇಕಾರಿಕೆ, ಚರ್ಮಗಾರಿಕೆ, ಟಂಕಸಾಲಿಕೆ ಮುಂತಾದ ಕೌಶಲ್ಯಗಳು ಜಾತಿ ಆಧಾರಿತವಾಗಿರದೇ ಅದೊಂದು ಕೌಶಲ್ಯವಾಗಿ, ಜ್ಞಾನವಾಗಿ, ಬೆಳೆದುಬಂದಿದ್ದು ತಿಳಿದುಬರುತ್ತದೆ. ಇಂತಹ ವೃತ್ತಿ ಕಲೆಗಳಿಂದ ಕೌಶಲ್ಯವನ್ನೂ ಜ್ಞಾನದಿಂದ ಅರಿವನ್ನೂ ಅರಿವಿನಿಂದ ಅನುಭವವನ್ನೂ ಬೇರ್ಪಡಿಸಿ ಸಾಂಪ್ರದಾಯಿಕ ವೃತ್ತಿಗಳ ತಾಂತ್ರಿಕ ತಿಳುವಳಿಕೆಯನ್ನು ಉಪೇಕ್ಷಿಸಲಾಯಿತು. ಇಂತಹ ಸಾಂಪ್ರದಾಯಿಕ ಕೌಶಲ್ಯಗಳು ಸೃಷ್ಟಿಶೀಲತೆಯ ಪ್ರತೀಕವಾಗಿದ್ದವು, ಜನಸಂಸ್ಕೃತಿಯ ನೆಲೆಗಳಾಗಿದ್ದವು. ತನ್ನ ಅವಶ್ಯಕತೆಗಳನ್ನು ತಾನೇ ಪೂರೈಸಿಕೊಳ್ಳುವ ತನ್ನಷ್ಟಕ್ಕೆ ತಾನೇ ಸ್ವಾವಲಂಬಿಯಾಗುವ ಗುಣವನ್ನು ಇಂತಹ ತಿಳುವಳಿಕೆಗಳು ಹೊಂದಿದ್ದವು.

ಇಂಥ ವೈದಿಕಶಾಹಿ ಹಾಗೂ ವಸಾಹತುಶಾಹಿ ಪ್ರಣೀತ ಅಲೋಚನಾ ಕ್ರಮಗಳು ಮನುಷ್ಯನಲ್ಲಿನ ಸೃಷ್ಟ್ಯಾತ್ಮಕ ಕ್ರಿಯೆಯನ್ನು ನಾಶಗೊಳಿಸಿವೆ. ಸಾಮೂಹಿಕ ಜ್ಞಾನದ ಕ್ರಿಯಾ ನೆಲೆಗಳು ಬಹುಮುಖಿ ಯಾಗಿದ್ದವು. ಪ್ರತಿಷ್ಠಿತ ವರ್ಗಗಳಿಗೆ ಮಾತ್ರ ಸೀಮಿತವಾದ ಜ್ಞಾನವನ್ನು ಇವು ಅನುಭವ ಜನ್ಯ ಜ್ಞಾನದ ನೆಲೆಗಳಾಗಿ ಸಾರ್ವತ್ರಿಕಗೊಳಿಸಿದ್ದವು. ಸಾರ್ವತ್ರಿಕತೆ ಎನ್ನುವುದು ಇಲ್ಲಿನ ಪ್ರತೀ ಚಿಂತನೆಯ ಹಿಂದಿನ ಪ್ರೇರಣೆಯಾಗಿತ್ತು. ವ್ಯಕ್ತಿ ಮುಖಿಯಾಗಿದ್ದ ಜ್ಞಾನವನ್ನು ಜನಮುಖಿಗೊಳಿಸಿದ ಕೀರ್ತಿ ಮಧ್ಯಕಾಲೀನ ಕನ್ನಡ ಸಾಹಿತ್ಯದ್ದು. ವಿಚಿತ್ರ ಎಂದರೆ ಜಾತೀಕರಣದ ವ್ಯಕ್ತಿ ಪ್ರಧಾನ ಹಾಗೂ ಜಾಗತೀಕರಣದ ಯಂತ್ರ ಪ್ರಧಾನ ಸ್ವರೂಪಗಳು ಜ್ಞಾನವನ್ನು ಪುನಃ ಅಧಿಕಾರಶಾಹಿ ಮತ್ತು ಬಂಡವಾಳಶಾಹಿಯ ಹಿಡಿತಕ್ಕೆ ಒಡ್ಡಿವೆ. ಪ್ರಾಬಲ್ಯದ ಗಳಿಕೆಯಾಗಿ ಮಾರುಕಟ್ಟೆಯ ಸರಕನ್ನಾಗಿ ಜ್ಞಾನವನ್ನು ನಿರ್ವಚಿಸುತ್ತಿರುವ ವಿದ್ಯಮಾನಗಳು ಅದರ ಬಹುಮುಖತೆಯನ್ನು ನಾಶಮಾಡಿ ಏಕತ್ರಗೊಳಿಸಿವೆ. ಇಂತಹ ಹೊತ್ತಲ್ಲಿ ಸಾಂಪ್ರದಾಯಿಕ ಕೌಶಲ್ಯಗಳ ಭಾಗವಾಗಿ ಅನೇಕ ಜೀವನ ಮಾದರಿಗಳನ್ನು ಹೊಮ್ಮಿಸುವ ಹಸ್ತಪ್ರತಿಗಳಂತಹ ಸಾಂಸ್ಕೃತಿಕ ಪರಿಕರಗಳನ್ನು ಅದರ ಬೌದ್ಧಿಕ ಹಾಗೂ ಭೌತಿಕ ಸ್ವರೂಪಗಳನ್ನು ಒಡಮುರಿದೇಳುವ ತಾಕತ್ತಿನೊಂದಿಗೆ ಪುನರ್ ಸೃಷ್ಟಿ ಮಾಡಬೇಕಾದ ಜರೂರು ಇದೆ. ತಾನು ನೀಡಿದ್ದನ್ನೇ ಜನಕೊಳ್ಳಬೇಕೆನ್ನುವ ಅವಿವೇಕವನ್ನು ರೂಪಿಸುತ್ತಿರುವ, ಆ ಮೂಲಕ ಸಾಂಪ್ರದಾಯಿಕ ಜ್ಞಾನ ಮಾದರಿಗಳನ್ನು ಕುಶಲಕಲೆಗಳನ್ನು ಹಾಗೂ ಕಲೆಗಾರರನ್ನು ಮೂರನೇ ದರ್ಜೆಗೆ ತಳ್ಳುತ್ತಿರುವ ಕಾಲದ ವೈಪರಿತ್ಯಗಳನ್ನು ಮೆಟ್ಟಿ ನಿಲ್ಲಬೇಕಾಗಿದೆ.

ಕುಶಲಕರ್ಮಿ ಜ್ಞಾನವಲಯದ ಸ್ವಾವಲಂಬಿ ಬದುಕಿನ ತಿಳುವಳಿಕೆಯ ಕಥೆ ಹೀಗಾದರೆ, ಹೆಣ್ಣು ಹಾಗೂ ತೀರ ಕೆಳವರ್ಗಗಳ ಅರಿವು ಮತ್ತು ಅಸ್ತಿತ್ವದ ನೆಲೆಗಳು ಇನ್ನೂ ಅವಮಾನಕ್ಕೆ ಒಳಗಾಗಿದ್ದವು. ಪಾರಮಾರ್ಥಿಕವಾಗಿ ಮಾಯೆ ಪ್ರಾಪಂಚಿಕವಾಗಿ ಶೂದ್ರ ಎನಿಸಿದ ಸ್ತ್ರೀ ಶರಣರ ದೃಷ್ಟಿಯಲ್ಲಿ ಅರಿವು ಹಾಗೂ ಅಸ್ತಿತ್ವದ ಮಾದರಿಯಾಗಿ ಮರುರೂಪಿಸಲ್ಪಟ್ಟಳು. ಸಂಪ್ರದಾಯಿಕ ಸಮಾಜ ಹೆಣ್ಣನ್ನು ಪಾಪಿ ಜನ್ಮಿಯಾಗಿ, ಮಾಯೆಯಾಗಿ, ಚಂಚಲೆಯಾಗಿ ರೂಪಿಸುವ ಮೂಲಕ ಅವಳ ತಿಳುವಳಿಕೆಯ ಜಗತ್ತನ್ನು ಸಂಕುಚಿತಗೊಳಿಸಿತ್ತು. ವಾಸ್ತವವಾಗಿ ನೋಡಿದರೆ ಅನುಭವ ಪ್ರಧಾನವಾದ ಸಾಂಪ್ರದಾಯಿಕ ಕೌಶಲ್ಯಶೀಲ ಸಮುದಾಯದಲ್ಲಿ ಹೆಣ್ಣಿನ ಭಾಷೆ ಮತ್ತು ಜ್ಞಾನಕ್ಕೆ ಗೌರವವಿತ್ತು. ಹಾಗೆಯೇ ಅವಳ ಅಸ್ತಿತ್ವಕ್ಕೂ ಒಂದು ಬೆಲೆ ಇತ್ತು. ಈ ಕಾರಣಕ್ಕಾಗಿಯೇ ಲೌಕಿಕ ಜಗತ್ತಿನ ಹಲವು ಗುಣಾತ್ಮಕ ಕರ್ತವ್ಯಗಳ ಜೊತೆಗೆ ಅವಳನ್ನು ದೈವೀಕತೆಯೊಂದಿಗೆ ಸಮೀಕರಿಸಲಾಗಿತ್ತು. ಹಾಗೆಯೇ ಪ್ರಾಕೃತಿಕ ಸತ್ಯಗಳೊಂದಿಗೆ ಅವಳನ್ನು ಹೋಲಿಸಲಾಗಿತ್ತು. ಮತ್ತು ವಿವೇಕದ ಪ್ರತೀಕವಾಗಿ ಪರಿಭಾವಿಸಲಾಗಿತ್ತು. ಅವಳ ದುಡಿಮೆ, ಲಾಲನೆ, ಪಾಲನೆ, ಹಾಡು, ಪಾಡು, ಪೋಷಣೆ, ಕುಟುಂಬದ ನಿರ್ವಹಣೆ ಮತ್ತು ಪಶುಸಂಗೋಪನೆ ಮುಂತಾದವು ಜೈವಿಕ ಅರಿವಿನ ಮಾರ್ಗದ ಸಬಲ ಶಕ್ತಿಯಾಗಿದ್ದವು. ಸಾಂಪ್ರದಾಯಿಕ ಸಮಾಜದ ಜ್ಞಾನದ ಎಲ್ಲ ಧಾರೆಗಳಲ್ಲಿ ಅವಳಿಗೆ ಆದ್ಯತೆಯಿತ್ತು. ಲಲಿತಕಲೆ ಸಂಗೀತ ಆದಿಯಾಗಿ ಗಂಧರ್ವ ವಿದ್ಯೆಗಳಲ್ಲಿ ಪರಿಣಿತಿ ಪಡೆದಿದ್ದಳು. ಇಂತಹ ಹೆಣ್ಣಿನ ಜ್ಞಾನದ ಆದ್ಯತಾ ವಲಯಗಳನ್ನು ವೈದಿಕಶಾಹಿ ಹಾಗೂ ವಸಾಹತುಶಾಹಿ ನೆಲೆಗಳು ಅಪಭ್ರಂಶಗೊಳಿಸಿದ್ದವು. ಈ ಅರಿವಿನಲ್ಲಿ ಕನ್ನಡದ ಮಹಿಳಾ ಜ್ಞಾನದ ವಿವಿಧ ಸ್ವರೂಪವನ್ನು ಇಲ್ಲಿ ತಿಳಿಯುವ ಪ್ರಯತ್ನ ಮಾಡಲಾಗಿದೆ.

ಕೃಷಿಯು ಆಯುಧ ಪ್ರಧಾನವಾಗಿ ವಿಸ್ತಾರಗೊಂಡಂತೆ ಎಲ್ಲಾ ಜವಾಬ್ದಾರಿಗಳು ಪುರುಷನ ಅಧೀನಕ್ಕೆ ಒಳಪಟ್ಟವು. ವಿಶೇಷವಾಗಿ ಕಬ್ಬಿಣದ ಬಳಕೆ ಗಂಡಸಿನ ಶಕ್ತಿಯ ಪ್ರತೀಕವಾಯಿತು. ಪುರುಷನು ಹೆಣ್ಣನ್ನು ಮತ್ತು ಅವಳ ತಿಳಿವಳಿಕೆಯನ್ನು ವಸ್ತುವಾಗಿ ತನ್ನ ಅಧೀನಳನ್ನಾಗಿ ಕಾಣಲಾರಂಭಿಸಿದನು. ಮಹಿಳೆ ಮಕ್ಕಳ ಲಾಲನೆ, ಪಾಲನೆ, ಪೋಷಣೆ ಇತ್ಯಾದಿ ಕೆಲಸಕಾರ್ಯದಲ್ಲಿ ತೊಡಗಿಕೊಂಡಳು. ಅವಳ ದುಡಿಮೆಯನ್ನು ಜ್ಞಾನವನ್ನು ಸಂಪಾದನೆಯ ಅರ್ಥಶಾಸ್ತ್ರವಾಗಿ ತಿಳಿವಳಿಕೆಯ ಭಾಗವಾಗಿ ಯಾವಾಗಲೂ ಪರಿಗಣಿಸಲಿಲ್ಲ.

ವೇದಗಳ ಕಾಲದ ಜ್ಞಾನ ಸ್ವರೂಪ

ವೇದಗಳ ಕಾಲದಲ್ಲಿ ಮಹಿಳೆಯರಿಗೆ ವೇದಾಧ್ಯಯನ ಮಾಡಲು ಅವಕಾಶವಿತ್ತು. ಅದರಲ್ಲೂ ಗಾರ್ಗಿ, ಮೈತ್ರೇಯಿ, ಅಪಾಲಾ, ಘೋಷಾ, ಜಹೂ, ವಿಶ್ವವರ, ಗೋದಾ ಇವರು ಅಪಾರವಾದ ವಿದ್ಯೆಯನ್ನು ಕಲಿತಿದ್ದರು ಎಂದು ಇತಿಹಾಸಕಾರರು ಹೇಳುತ್ತಾರೆ. ಇವರು ವೇದಾಧ್ಯಯನ ಮಾಡುವುದಕ್ಕೆ ಹಲವಾರು ಕಾರಣಗಳು ಸಹ ಇರುವುದನ್ನು ಇಲ್ಲಿ ಚರ್ಚಿಸಬಹುದಾಗಿದೆ. ಪ್ರಾಚೀನ ಕಾಲದಲ್ಲಿ

ವಿದ್ಯಾಭ್ಯಾಸ ಪಡೆದುಕೊಂಡವರು ಮೇಲ್ವರ್ಗದ ಹೆಣ್ಣು ಮಕ್ಕಳು, ಅದರಲ್ಲಿಯೂ ರಾಜಕುಮಾರಿಯರು, ಪಂಡಿತರ ಮಕ್ಕಳು, ಹಾಗೂ ಪುರೋಹಿತರ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ಕಲಿಯಲು ಅವಕಾಶವಿತ್ತು. ಅಂದರೆ ಪುತ್ರಸಂತಾನವಿರದಿದ್ದಾಗ ಅವರ ಪುತ್ರಿಯರು ಪುತ್ರನ ಸ್ಥಾನದಲ್ಲಿ ನಿಂತು ಯಜ್ಞಯಾಗಾದಿಗಳನ್ನು ಮತ್ತು ಪೂಜೆ ಪುನಸ್ಕಾರ ಕಾರ್ಯ ವಿಧಾನಗಳನ್ನು ನೆರವೇರಿಸಬೇಕೆಂಬ ಯೋಚನೆಯಿತ್ತು.

ವಚಕು ಮಹಾಮುನಿಯ ಮಗಳಾದ 'ಗಾರ್ಗಿ' ಮೈತ್ರೇಯಿಗಿಂತಲೂ ದೊಡ್ಡ ಪಂಡಿತೆ ಬ್ರಹ್ಮಜ್ಞಾನಿ ಎನಿಸಿದ್ದಳು. ಜನಕ ಮಹಾರಾಜನ ಸಭೆಯಲ್ಲಿ ವಿದ್ವತ್‌ಗೋಷ್ಠಿ ನಡೆಯುತ್ತಿರುವಾಗ ಯಾಗಾಂತ್ಯದಲ್ಲಿ ಕೊಡಲು ಸಾವಿರ ಆಕಳುಗಳನ್ನು ತರಿಸಿ ಅವುಗಳ ಕೊಂಬಿಗೆ ಸುವರ್ಣ ಮುದ್ರೆಗಳನ್ನು ಹಾಕಿಸಿ ಅಲ್ಲಿ ನೆರೆದಿದ್ದ ಪಂಡಿತರುಗಳನ್ನು ಕುರಿತು 'ನಿಮ್ಮಲ್ಲಿ ಶ್ರೇಷ್ಠ ಜ್ಞಾನಿಯಾದವರಿಗೆ ಈ ಸುವರ್ಣ ಮುದ್ರೆಯ ಹಸುಗಳು ಲಭಿಸುತ್ತವೆ. ಅಂತಹವರು ಮುಂದೆ ಬನ್ನಿ' ಅಂದಾಗ ಯಾರು ಮುಂದೆ ಬರಲಿಲ್ಲ. ಕೊನೆಯಲ್ಲಿ ಯಾಜ್ಞವಲ್ಕ್ಯನು ಮುಂದೆ ಬಂದನು. ಇವನ ಧೈರ್ಯ ನೋಡಿ ಗಾರ್ಗಿ ಸಹಿಸದೆ ಆತನೊಂದಿಗೆ ವಾದಕ್ಕಿಳಿದಳು. ಬ್ರಹ್ಮನಿಗೆ ಸಂಬಂಧಪಟ್ಟಂತೆ ಹಲವಾರು ಪ್ರಶ್ನೆಗಳನ್ನು ಹಾಕಿದಳು, ವಾದ ವಿವಾದ ನಡೆಯಿತು. ಬ್ರಾಹ್ಮಣ ಕುಮಾರಿಯೂ ಬ್ರಹ್ಮವಾದಿನಿಯೂ ಆದ ಗಾರ್ಗಿಯ ಪಾಂಡಿತ್ಯ ಪ್ರತಿಭೆಗಳನ್ನು ನೋಡಿ ಸಭೆಯಲ್ಲಿ ಇದ್ದವರು ಮುಗ್ಧರಾದರು. ಕೊನೆಯಲ್ಲಿ ಯಜ್ಞವಲ್ಕ್ಯನಿಗೆ ಸಮನಾದ ಬ್ರಹ್ಮಜ್ಞಾನಿ ಮತ್ತೆ ಯಾರು ಇಲ್ಲವೆಂದು ಗಾರ್ಗಿಯನ್ನೆ ಆಸ್ಥಾನಕ್ಕೇರಿಸುತ್ತಾರೆ. ಈ ಪ್ರಸಂಗವು ವಿದ್ವತ್ ಗೋಷ್ಠಿಗಳಲ್ಲಿ ಮಹಿಳೆ ತನ್ನಲ್ಲಿನ ಅರಿವಿನ ನೆಲೆಗಳನ್ನು ಸಾಬೀತುಪಡಿಸುತ್ತಿದ್ದ ಸಂಗತಿಯನ್ನು ಹೇಳುತ್ತದೆ.

ಅದಿತಿಯು ಋಗ್ವೇದ ಸಂಹಿತೆಯಲ್ಲಿ ನಾಲ್ಕನೇ ಮಂಡಲದ ಎಂಬತ್ತನೇ ಸೂಕ್ತದಲ್ಲಿನ ೫– ೬–೭ ಋಕ್ಕುಗಳನ್ನು ರಚಿಸಿರುವುದು ಕಂಡುಬಂದಿದೆ. ಒಮ್ಮೆ ವಾಮದೇವನೆಂಬ ಋಷಿಯು ತನ್ನ ತಾಯಿಗೆ ಕಷ್ಟವನ್ನುಂಟು ಮಾಡಲು ಆಕೆ ಇಂದ್ರನಿಗೂ ಹಾಗೂ ಅದಿತಿಗೂ ಮೊರೆ ಇಟ್ಟಳು. ಅದಿತಿ ಬಂದು ಮಂತ್ರವನ್ನು ರಚಿಸಿ ದುಷ್ಟರನ್ನು ಅಡಗಿಸಿದಳು ಎನ್ನುವ ಪ್ರತೀತಿ ಇದೆ.

ಮೈತ್ರೇಯಿ ದೊಡ್ಡ ವಿದ್ವಾಂಸಳು. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಈಕೆಯ ಪ್ರತಿಭೆಯ ವಿವರಗಳಿವೆ. ಇವಳು ಸುಪ್ರಸಿದ್ಧ ಪಂಡಿತನಾದ ಮಿತ್ರ ಎಂಬುವನ ಮಗಳು. ತನ್ನ ಮಗಳಿಗೆ ಬಾಲ್ಯದಿಂದಲೂ ಉನ್ನತವಾದ ವಿದ್ಯೆಯನ್ನು ಕಲಿಸಿ ಋಷಿ ಶ್ರೇಷ್ಠನಾದ ಯಜ್ಞ್ಯವಲ್ಕ್ಯನಿಗೆ ವಿವಾಹ ಮಾಡಿದನು. ಜಗದೀಶ್ವರನನ್ನು ಪ್ರಾರ್ಥಿಸುವ ಸ್ತೋತ್ರವು ಹೀಗಿದೆ,

'ಅಸತೋ ಮಾ ಸದ್ಗಮಯ ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾಮೃತಂಗಮಯಾ।
ಅವೀರಾ ವೀರ್‍ಯ ಏದಿರುದ್ರಯತ್ತೇ– ದಕ್ಷಿಣಾಮುಖಂ
ತೇನ ಮಾಂ ಪಾಹಿ ನಿತ್ಯಂ॥'

ಹೇ ಸತ್ಯ ಸ್ವರೂಪನೇ, ನನ್ನನ್ನು ಅಸತ್ಯದಿಂದ ಕಾಪಾಡಿ ಸತ್ಯ ಸ್ವರೂಪವನ್ನು ಪ್ರಸಾದಿಸು, ಓ ಜ್ಞಾನ ಸ್ವರೂಪನೇ ನನ್ನನ್ನು ಮೋಹಾಂಧಕಾರದಿಂದ ತಪ್ಪಿಸಿ ಜ್ಞಾನ ಪ್ರಕಾಶದ ಕಡೆ ಒಯ್ಯಿ, ಹೇ ದಯಾನಂದ ಸ್ವರೂಪನೇ ಮೃತ್ಯುವಿನಿಂದ ತಪ್ಪಿಸಿ ಅಮೃತ ತತ್ವದೆಡೆಗೆ ಒಯ್ಯಿ ಈ ಮಂತ್ರವು ಯುಗ ಯುಗಾಂತರಗಳಿಂದಲೂ ಹಿಂದೂ ಸಂಸ್ಕೃತಿಯಲ್ಲಿ ಪ್ರತಿಧ್ವನಿಸುತ್ತದೆ. ಈ ಪವಿತ್ರವಾದ ಪ್ರಾರ್ಥನೆಯು ದೇವಾಲಯಗಳಲ್ಲಿ, ವಿದ್ಯಾಲಯಗಳಲ್ಲಿ ಮಠಮಂದಿರಗಳಲ್ಲಿ ಹಾಗೂ ಮನೆಗಳಲ್ಲಿ ಇಂದಿಗೂ ಮೊಳಗುತ್ತದೆ. ವಿಚಿತ್ರವೆಂದರೆ ಈ ಸ್ತೋತ್ರ ಮಹಿಳಾ ಪ್ರಧಾನ ಆಶಯಗಳಿಗಿಂತ ಪುರುಷ ಪ್ರಧಾನ ಆಶಯಗಳನ್ನು ಪ್ರತಿಬಿಂಬಿಸುವಂತಿದೆ.

ಋಗ್ವೇದದ ಪ್ರಥಮ ಮಂಡಲದ ನೂರ ಇಪ್ಪತ್ತಾರನೇ ಸೂತ್ರದ ಏಳನೇ ಶ್ಲೋಕವನ್ನು ರಚಿಸಿದ ಬ್ರಹ್ಮಜ್ಞಾನಿ ರೋಮಾಶಾ ಹಾಗೂ ನೂರ ಎಪ್ಪತ್ತೊಂಬತ್ತನೆ ಸೂತ್ರದ ಎರಡು ಶ್ಲೋಕಗಳನ್ನು ರಚಿಸಿದ ರಚಿಯಿತ್ರಿ, ಲೋಪಮುದ್ರೆ ಇವರು ಈ ಕಾಲದಲ್ಲಿನ ಪ್ರಮುಖ ಲೇಖಕಿಯರು, ಅಪಾಲಾ ಮತ್ತು ಘೋಷಾರಂತಹ ಕವಯಿತ್ರಿಯರಲ್ಲದೇ ಋಗ್ವೇದದಲ್ಲಿ ಯಮಿ, ಪೌಲೋಮೀ, ಸಾರ್ಪರಾಜ್ಞೀ, ಶ್ರದ್ಧಾ, ಕಾಮಾಯಿನೀ, ವೈಪಸ್ವತೀ, ಶಚಿ, ಋಗ್ವೇದದ ಹತ್ತನೇ ಮಂಡಲದ ರಚನೆಯಲ್ಲಿ ಪಾಲ್ಗೊಂಡು ಋಕ್ಕುಗಳನ್ನು ರಚಿಸಿದ್ದು ತಿಳಿದುಬರುತ್ತದೆ. "ಹತ್ತನೆಯ ಮಂಡಲದ ೧೫೩ನೆಯ ಸೂಕ್ತವು ಕವಯಿತ್ರಿ ರಚಿಸಿರುವಂಥದು, ಆದರೆ ಹೆಸರು ತಿಳಿದು ಬಂದಿಲ್ಲ. ಸೂಕ್ತವು ಇಂದ್ರನ ಪೌರುಷವನ್ನು ಪ್ರಸ್ತಾಪಿಸಿ ಅವನ ಮಹತ್ಸಾಧನೆಯಾದ ವೃತ್ರವಧೆಯನ್ನು ವೈಭವೀಕರಿಸುತ್ತದೆ. ಅದನ್ನು ದೇವತೆಗಳ ಸೋದರಿಯರಾದ ಇಂದ್ರನ ತಾಯಂದಿರು ದೇವಾನುಸ್ವಸೃಭೂತಾ ಇಂದ್ರಮಾತರೋ ನಾಮ ಋಷಿಕಾ ರಚಿಸಿದ್ದೆಂದು ಸಾಯಣನು ಹೇಳಿದ್ದಾನೆ"[೧] "ಇವರೆಲ್ಲರೂ ಧಾರ್ಮಿಕ ಆಚರಣೆಗಳನ್ನು ಕುರಿತು ವಿವರಿಸಿದ್ದಾರೆ. ಪ್ರೇಮ, ವಿವಾಹ, ಅಭಿಸಾರಗಳ ಬಗ್ಗೆ ಬೆಳಕನ್ನು ಬೀರಿದ್ದಾರೆ. ಸ್ತ್ರೀಯರ ಸಾಹಿತ್ಯಿಕ ಅಭಿವ್ಯಕ್ತಿ ನೀಡುವುದಿರಲಿ, ಹೆಣ್ಣು ಮಕ್ಕಳು ಜನನವೇ ಅಪ್ರಿಯವಾಗಿ ಅವರ ಅಸ್ತಿತ್ವವೇ ಆ ಕಾಲದಲ್ಲಿ ಅನಾಧರಿಸಿತ್ತು. ಹೆಣ್ಣು ಹುಟ್ಟದೇ ಗಂಡು ಹುಟ್ಟುವಂತೆ ಮಾಡಬಹುದೆಂಬ ಆಶಯವೊಂದಿತ್ತು ಎಂಬಂಶವನ್ನು ಇದರಿಂದ ರಚಿತವಾದ ಶ್ಲೋಕ ಸಂಕೇತಿಸುತ್ತದೆ."[೨]

ಪ್ರಾಚೀನ ಕಾಲದಿಂದಲೂ ಗಾರ್ಗಿ, ಮೈತ್ರೇಯಿ, ವಿಶ್ವವರಾ, ಅಪಾಲಾ, ಇವರಷ್ಟೇ ಇತಿಹಾಸದ ಪುಟಗಳಲ್ಲಿ ಉಳಿದಿದ್ದಾರೆ. ಇನ್ನೂ ಅನೇಕ ಕವಯತ್ರಿಯರು ಅನಾಮಧೇಯವಾಗಿ ಇರುವುದನ್ನು ನಾವು ಕಾಣಬಹುದಾಗಿದೆ. ವೇದಗಳ ಕಾಲದಲ್ಲಿ ಸ್ತ್ರೀಯರು ಉನ್ನತವಾದ ಅರಿವನ್ನು ಪಡೆದಿದ್ದು. ಇತಿಹಾಸದಿಂದ ತಿಳಿದುಬಂದರೂ ಅಂಥ ವಿದ್ಯಾಭ್ಯಾಸ ಸಿಕ್ಕಿದ್ದು ಮೇಲ್ವರ್ಗದ ಮಹಿಳೆಯರಿಗೆ. ತಂದೆಯ ಆಶ್ರಯದಲ್ಲಿ ಅನೇಕ ಮಹಿಳೆಯರು ಅಕ್ಷರ ಕಲಿತರೆ ಇನ್ನೂ ಕೆಲವರು ಗಂಡನ ಮನೆಯಲ್ಲಿ ಅಭ್ಯಾಸ ಮಾಡಿದ್ದಾರೆ. ಇಂತಹ ಒಂದು ಕಾಲಘಟ್ಟದಲ್ಲಿ ಕೆಳವರ್ಗದ ಪುರುಷರಿಗೂ ಸಹ ವೇದಾಧ್ಯಯನ ಮಾಡುವುದಕ್ಕೆ ಅವಕಾಶವಿರಲಿಲ್ಲ. ಅದರಲ್ಲೂ ಕೆಳವರ್ಗದ ಮಹಿಳೆಯರಿಗೆ ವಿದ್ಯಾಭ್ಯಾಸ ಮರೀಚಿಕೆಯಾಗಿತ್ತು.

"ವಿದ್ಯೆ ಉದ್ಯೋಗಗಳೆಲ್ಲ ಪುರುಷಭೂಷಿತ ಸಂಗತಿಗಳೆಂದು ಸಾಮಾಜಿಕ ಮನ್ನಣೆ ಪಡೆಯುತ್ತಲೆ ಹೆಣ್ಣು ಆರ್ಥಿಕ ಆಸರೆಯನ್ನು ಕಳೆದುಕೊಳ್ಳುವಂತಾಯಿತು. ದುಡಿಮೆ, ಉದ್ಯೋಗಗಳೆಲ್ಲ ಹಣದ ಗಳಿಕೆಗೆ ಸೇರಲ್ಪಟ್ಟವು. ಹಣಗಳಿಕೆ ಮಾತ್ರ ಸಮಾಜದಲ್ಲಿ ಸ್ಥಾನಮಾನ ಪಡೆಯುತ್ತಾ ಹೋಯಿತು"[೩] ಮನೆಯಿಂದ ಹೊರಗಡೆ ಹೋಗಿ ಹಣ ಸಂಪಾದನೆ ಮಾಡುವುದು ಪುರುಷರ ಕರ್ತವ್ಯವಾಯಿತು. ಆದರೆ ಮಕ್ಕಳ ಲಾಲನೆ, ಪಾಲನೆ, ಪೋಷಣೆ, ಇಡೀ ಕುಟುಂಬದ ಹೊಣೆಗಾರಿಕೆ ನಿಭಾಯಿಸುವುದು ಹೆಣ್ಣಿನ ಜವಬ್ದಾರಿಯಾಯಿತು. ಆದರೆ ಪುರುಷ ಪ್ರಧಾನ ಸಮಾಜದಲ್ಲಿ ಅವಳ ಇಂಥ ದುಡಿಮೆಯನ್ನು ಗಂಭೀರ ಸಂಗತಿಯಾಗಿ ಯಾರು ಸಹ ಪರಿಗಣಿಸಿದ್ದಿಲ್ಲ. ಏಕೆಂದರೆ ನೇಗಿಲಿನ ಆವಿಷ್ಕಾರ ಹೆಚ್ಚು ಶ್ರಮ ಹಾಗೂ ಶಕ್ತಿದಾಯಕ ಕೆಲಸದ ಪ್ರತೀಕವಾಯಿತು. ಸಂಪಾದನೆಯ ಗುರುತಾಯಿತು. ಆದರೆ ಮಹಿಳೆಯರು ಮನೆಯಲ್ಲಿ ದುಡಿಯುವುದು ಶ್ರಮದಾಯಕವಲ್ಲದ, ವರಮಾನವಿಲ್ಲದ ಕೆಲಸವಾಯಿತು. ಈ ಸಂಗತಿಯು ಎಲ್ಲಾ ಕ್ಷೇತ್ರಗಳಲ್ಲಿಯೂ ಅವಳ ವ್ಯಕ್ತಿತ್ವ ಹಾಗೂ ಜ್ಞಾನವನ್ನು ಹತ್ತಿಕ್ಕಲು ಅನುಕೂಲವಾಯಿತು.

"ವೇದಗಳ ಕಾಲದಿಂದ ಈಚೆಗೆ ಸ್ತ್ರೀಯರ ಬಗ್ಗೆ ಅನಾಧರ ಭಾವ ಧಾರ್ಮಿಕವಾಗಿ ಹುಟ್ಟಿಕೊಂಡು ನಂತರ ಸಾಮಾಜಿಕ, ಸಾಂಸ್ಕೃತಿಕವಾಗಿಯೂ ಗಟ್ಟಿಗೊಂಡಿತ್ತು. ಸ್ಮೃತಿಗಳ ಉಗಮದಿಂದ ಹೆಣ್ಣಿನ ಹುಟ್ಟು ಅನಿಷ್ಟವಾಗಿ ಪರಿಣಮಿಸಿತು. ಮನು ಎಂಬ ನ್ಯಾಯ ಶಾಸ್ತ್ರಜ್ಞನು ಬರೆದ ಸ್ಮೃತಿ ಹಿಂದೂ ಧರ್ಮದ ಪವಿತ್ರ ಗ್ರಂಥವಾಗುತ್ತ ಮನುಷ್ಯರ ಮಧ್ಯೆ ಭಿನ್ನಾಭಿಪ್ರಾಯಗಳು ಬೆಳೆಯಲು ಕಾರಣವಾಯಿತು"[೪]. ಹೆಣ್ಣು ಮತ್ತು ಶೂದ್ರರನ್ನು ಸಮೀಕರಣಗೊಳಿಸಲಾಯಿತು. ಅವಳು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ, ಎಲ್ಲಾ ಬಗೆಯ ಹಕ್ಕುಗಳನ್ನು ಪಡೆಯಲು ಅನರ್ಹಳು ಎಂದು ಹೇಳಲಾಯಿತು.

"ಪಿತಾರಕ್ಷತಿ ಕೌಮಾರ್ಯೇರ್ಭರ್ತಾರಕ್ಷತಿ ಯೌವನೇ
ಸ್ಥವಿರೇ ರಕ್ಷಂತಿ ಪುತ್ರಾಃ ನಸ್ತ್ರೀ ಸ್ವಾತಂತ್ರ್ಯಮರ್ಹತೆ‖"[೫]

ಹೆಣ್ಣು ಮಗು ಜನಿಸಿದರೆ ಅದು ಬೆಳೆಯುವಾಗ ತಂದೆ ಆಶ್ರಯದಲ್ಲಿ, ಯೌವ್ವನಕ್ಕೆ ಬಂದಾಗ ಗಂಡನ ಅಧೀನದಲ್ಲಿ, ಮುಪ್ಪಿನ ಕಾಲದಲ್ಲಿ ಮಕ್ಕಳ ಆಶ್ರಯದಲ್ಲಿ ಇರಬೇಕು. ಹೀಗೆ ಹೆಣ್ಣನ್ನು ಪುರುಷರ ಅಧೀನದಲ್ಲಿರುವಂತೆ ಮಾಡಿದರು. ಕವಿಗಳಿಗೆ ವರ್ಣನೆ ಮತ್ತು ಅಲಂಕಾರದ ವಸ್ತುವಾಗಿ ಬಿಟ್ಟಳು. ಗಂಡ ಸತ್ತರೆ ಅವನ ಚಿತೆಯೇರಿ ಇವಳು ಸಾಯಬೇಕು, ಕೇಶಮುಂಡನೆ ಮಾಡಿಕೊಂಡು ಯಾವುದೇ ಸಾಮಾಜಿಕ ಕಾರ್ಯಗಳಿಗೆ ಭಾಗವಹಿಸದಂತೆ ಹಲವಾರು ನೀತಿಶಾಸ್ತ್ರ ಕಾನೂನುಗಳನ್ನು ಜಾರಿಗೆ ತಂದು ಇಡೀ ಸಮಾಜವೇ ಹೆಣ್ಣನ್ನು ದೂಷಿಸುವಂತೆ ಮಾಡಿದರು.

"ತನ್ನ ಪತಿ ಗುಣಹೀನನಾಗಿದ್ದರೂ, ಕಾಮುಕನಾಗಿದ್ದರೂ ಸದ್ಗುಣ ರಹಿತನಾಗಿದ್ದರೂ ಸತಿ ಅವನನ್ನು ಸದಾ ದೇವರೆಂದೇ ಭಾವಿಸಬೇಕೆಂದು ಮನು ಹೇಳುತ್ತಾನೆ."[೬]

“ಮಹಿಳೆಯರು ತಮ್ಮ ಪತಿಯ ವಚನವನ್ನೇ ಪಾಲಿಸಬೇಕು ಇದು ಅವರ ಪರಮಧರ್ಮ 'ಯಜ್ಞವಲ್ಕ್ಯ' ಹೇಳುತ್ತಾನೆ.”[೭]

“ಸ್ತ್ರೀಗೆ ಪ್ರತ್ಯೇಕವಾದ ಯಜ್ಞ ಸಂಸ್ಕಾರ ವಿಧಿ ಅಥವಾ ಉಪವಾಸ ಯಾವುದೂ ಇಲ್ಲ. ತನ್ನ ಪತಿ ಸೇವೆಯಿಂದ ಆಕೆ ಸ್ವರ್ಗದಲ್ಲಿ ಉನ್ನತ ಸ್ಥಾನ ಪಡೆಯುತ್ತಾಳೆ ಎಂದು ಮನು ಹೇಳಿದ್ದಾನೆ.”[೮] ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯರಿಗೆ ಯಾವುದೇ ಉದ್ಯೋಗಗಳಲ್ಲಿ ವಿದ್ಯಾಭ್ಯಾಸದಲ್ಲಿ ಸ್ವತಂತ್ರ ಹಾಗೂ ಮುಕ್ತ ಅವಕಾಶಗಳಿರಲಿಲ್ಲ. ಪತಿ ಸೇವೆ ಮಾಡುವುದರಿಂದ ಆಕೆ ಸತ್ತ ಮೇಲೆ ಸ್ವರ್ಗದಲ್ಲಿ ಉನ್ನತ ಸ್ಥಾನವನ್ನು ಪಡೆಯುತ್ತಾಳೆ. ಇಲ್ಲದಿದ್ದರೆ ನರಕಕ್ಕೆ ಹೋಗುತ್ತಾಳೆ ಎಂದು ಸ್ಮೃತಿಗಳು ಹೇಳುವ ಮೂಲಕ ಅವಳ ಅಸ್ತಿತ್ವ ಹಾಗೂ ಅಸ್ಮಿತೆಯನ್ನೇ ಕಬಳಿಸಿದವು.

“ತನ್ನ ಪತಿ ಜೀವಂತವಾಗಿರುವಾಗ ಯಾವ ಸ್ತ್ರೀ ಉಪವಾಸ ಮಾಡುವಳೋ ಸಂಸ್ಕಾರ ಕರ್ಮಗಳಲ್ಲಿ ತೊಡಗುವಳೋ ಅಕೆ ತನ್ನ ಪತಿಯ ಜೀವನದಿಂದ ಬೇರ್ಪಡೆ ಹೊಂದಿದಂತಾಗುತ್ತದೆ. ಆಕೆ ನರಕಕ್ಕೆ ಹೋಗುತ್ತಾಳೆ. ಪವಿತ್ರ ಜಲವನ್ನು ಬಯಸುವಾಕೆ ತನ್ನ ಪತಿಯ ಪಾದಗಳನ್ನು ಶರೀರವನ್ನು, ತೊಳೆದು ಅದನ್ನು ಕುಡಿಯಬೇಕು. ಇದರಿಂದ ಆಕೆಗೆ ಪರಮಪದ ದೊರೆಯುತ್ತದೆ.”[೯]

ವೇದಗಳ ರಚನೆಯ ಪ್ರಾರಂಭದಲ್ಲಿ ಇದ್ದಂತಹ ಅವಕಾಶ ಮಹಿಳೆಯರಿಗೆ ವೇದಗಳ ಕೊನೆಯ ಕಾಲಕ್ಕಾಗಲೆ ಇರಲಿಲ್ಲ. ಹಲವಾರು ಸ್ಮೃತಿಕಾರರು ಸ್ಮೃತಿಗಳನ್ನು ರಚನೆ ಮಾಡುವುದರ ಮೂಲಕ ಸ್ತ್ರೀಯರು ಯಾವ ಕೆಲಸಕಾರ್ಯಗಳಿಗೆ ಭಾಗವಹಿಸಬೇಕು, ಬೇಡ ಎಂಬುದನ್ನು ನಿರ್ಧರಿಸಿದರು. ಅವಳನ್ನು ಭಯಗ್ರಸ್ಥಳನ್ನಾಗಿಸಿ ಪತಿಯೇ ಪರಮದೈವ ಎಂಬಂತಹ ಘೋಷಣೆಯಲ್ಲಿ ಮುಳುಗಿಸಿದರು.

“ಯಾವ ಸ್ತ್ರೀ ತನ್ನ ಪತಿಯ ಮಾತನ್ನು ನಿರಾಕರಿಸುವಳೋ ಅಂಥವಳು ನೀಡುವ ಆಹಾರವನ್ನು ಯಾರು ತಿನ್ನಬಾರದು. ಆಕೆಯನ್ನು ವಿಷಯ ಲಂಪಟಳೆಂದು ಕರೆಯಬೇಕೆಂದು ಅಂಗೀರಸ ಹೇಳುತ್ತಾನೆ.”[೧೦] ಧಾರ್ಮಿಕವಾಗಿ, ಸಾಮಾಜಿಕವಾಗಿ, ಮಹಿಳೆಯರನ್ನು ಪ್ರಾಣಿಗಳಿಗಿಂತ ಕಡೆಯಾಗಿ ನೋಡುವಂತಹ ಸಂಗತಿಗಳು ರಚನೆಯಾಗಿರುವುದನ್ನು ಇಲ್ಲಿ ಕಾಣಬಹುದಾಗಿದೆ.

ಮನು ಮಹಿಳೆಯರನ್ನು ದ್ವೇಷಿಸುವಂತಹ ಶ್ಲೋಕಗಳನ್ನು ರಚನೆ ಮಾಡುತ್ತಾನೆ. ಸ್ತ್ರೀಯರನ್ನು ಉನ್ನತ ಮಟ್ಟಕ್ಕೇರಿಸುವಂತಹ ಶ್ಲೋಕಗಳನ್ನು ಸಹ ರಚನೆ ಮಾಡಿರುವುದನ್ನು ಗುರುತಿಸಬಹುದಾಗಿದೆ.

“ಯತ್ರನಾರ್ಯಂತು ಪೂಜ್ಯಂತೇ ರಮಂತೇ ತತ್ರದೇವತಾ, ಎಲ್ಲಿ ಸ್ತ್ರೀಯರಿಗೆ ಗೌರವ ಸನ್ಮಾನಗಳು ದೊರೆಯುತ್ತವೆಯೋ ಅಲ್ಲಿ ದೇವತೆಗಳು ಪ್ರಸನ್ನರಾಗುತ್ತಾರೆ. ಯಾವ ಮನೆಯಲ್ಲಿ ಸ್ತ್ರೀಯರು ಗೌರವಿಸಲ್ಪಡುವುದಿಲ್ಲವೋ ಅಲ್ಲಿ ಮಾಡುವ ಎಲ್ಲಾ ಯಜ್ಞ-ಪೂಜೆಗಳು ನಿಷ್ಫಲವಾಗುತ್ತವೆ.”[೧೧] ಸ್ತ್ರೀಯರಿಗೆ ಗೌರವ ಸಿಗುವಂತಹ ಮನೆಯಲ್ಲಿ ಅವಳನ್ನು ದೇವತೆಯಾಗಿ ಪೂಜಿಸುತ್ತಾರೆ. ಆ ಮನೆಯಲ್ಲಿ ಮಾಡುವಂತಹ ಪೂಜೆ, ಯಜ್ಞಯಾಗಾದಿಗಳು ಮತ್ತು ಅವರು ಮಾಡುವಂತಹ ಕಾರ್ಯಗಳಿಗೆ ಫಲ ಸಿಗುತ್ತದೆ ಎಂದು ಹೇಳುತ್ತಾನೆ.

"ಮಹಾಭಾಗ್ಯವಂತೆಯರಾದ, ಮನೆಯ ದೀಪಗಳಾದ ಪೂಜಾರ್ಹರಾದ ಸ್ತ್ರೀಯರು ಸಂತಾನವನ್ನು ಉತ್ಪಾದಿಸಲಿಕ್ಕೆಂದೇ ಇದ್ದಾರೆ. ಮನೆಯನ್ನು ತುಂಬುವ ಐಶ್ವರ್ಯದಂತೆ ಸ್ತ್ರೀಯರೂ ಮನೆಯನ್ನು ತುಂಬುತ್ತಾರೆ. ಸ್ತ್ರೀ ಹಾಗೂ ಐಶ್ವರ್ಯಗಳಲ್ಲಿ ಭೇದವೇ ಇಲ್ಲ."[೨] ಅಂದರೆ ಹೆಣ್ಣನ್ನು ಉನ್ನತ ಮಟ್ಟಕ್ಕೆ ಏರಿಸುತ್ತಲೇ ಅವಳು ಮಕ್ಕಳನ್ನು ಉತ್ಪಾದಿಸುವ ಯಂತ್ರವನ್ನಾಗಿ ಮಾಡಿರುವುದನ್ನು ಕಾಣಬಹುದಾಗಿದೆ. ಏಕೆಂದರೆ ಹೆಣ್ಣನ್ನು ಸಂಪತ್ತು ಐಶ್ವರ್ಯಗಳಿಗೆ ಹೋಲಿಸುವುದರ ಮೂಲಕ ಅವಳು ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಮಾತನಾಡದಂತೆ ಅಧೀನ ಮಾಡಿರುವುದನ್ನು ಈ ಶ್ಲೋಕದಿಂದ ಅರಿತುಕೊಳ್ಳಬಹುದಾಗಿದೆ.

ಮನು, ಅತ್ರಿ, ಅಂಗೀರಸ, ಯಾಜ್ಞ್ಯವಲ್ಕ್ಯ ಇನ್ನೂ ಅನೇಕ ಸ್ಮೃತಿಕಾರರು ಹೆಣ್ಣಿನ ಬಗ್ಗೆ ಋಣಾತ್ಮಕವಾದ ವ್ಯಾಖ್ಯಾನಗಳನ್ನು ಹಾಗೂ ಗ್ರಂಥಗಳನ್ನು ಬರೆದದ್ದು ಸ್ಪಷ್ಟವಾಗುತ್ತದೆ. ಇವುಗಳನ್ನು ಓದಿದಂತಹ ಸಾಮಾನ್ಯ ಜನರು ಹಾಗೂ ವಿದ್ವಾಂಸರು ಸಹ ಮಹಿಳೆಯರನ್ನು ಒಬ್ಬ ಸಾಮಾನ್ಯ ಪುರುಷನಿಗಿಂತ ತೀರ ಕೆಳಮಟ್ಟದಲ್ಲಿ ನೋಡುವಂತಹ ಮನೋಭಾವ ಬೆಳೆಯುವಂತೆ ಮಾಡಿದರು. ಹೆಣ್ಣು ಮನೆಯಿಂದ ಹೊರಗಡೆ ಹೋಗಿ ದುಡಿಯುವುದು, ವಿದ್ಯಾಭ್ಯಾಸ ಮಾಡುವುದು ಅಪರಾಧವೆಂಬಂತೆ ನೋಡುವುದು ಇಂದಿಗೂ ಇದೆ. ಹೆಣ್ಣು ಮಕ್ಕಳು ಎಲ್ಲಿ ವಾಸಿಸುತ್ತಾರೋ ಅಲ್ಲಿ ಐಶ್ವರ್ಯ ಹಾಗೂ ದೇವತೆಗಳು ವಾಸವಾಗಿರುತ್ತಾರೆ ಎಂದು ಹೇಳಿದ ಮನು ಇನ್ನೊಂದು ಕಡೆ ಅವರಿಗೆ ಅಧಿಕಾರ, ಹಣ, ಸಂಪತ್ತು, ಕೊಟ್ಟರೆ ಅವರನ್ನು ಹಿಡಿಯುವುದಕ್ಕೆ ಆಗುವುದಿಲ್ಲ. ಮತ್ತು ಪತಿಯನ್ನು ಬಿಟ್ಟು ಹೋಗುತ್ತಾಳೆ. ಆದ್ದರಿಂದ ಯಾವುದೇ ಸಭೆ ಸಮಾರಂಭಗಳಿಗೆ ಹೋಗದಂತೆ ಪೂಜೆ, ಉಪವಾಸ, ವ್ರತ, ವಿಧಿವಿಧಾನಗಳನ್ನು ಮಾಡದಂತೆ ನೋಡಿಕೊಳ್ಳಬೇಕು. ಪತಿಯ ಸೇವೆ ಮಾಡುವುದರಿಂದ ಸ್ವರ್ಗದಲ್ಲಿ ಸುಖವಾಗಿ ಇರುತ್ತಾರೆ ಎಂದು ಹೇಳಿ ಅವಳನ್ನು ಮೂಲೆಗುಂಪು ಮಾಡಲಾಯಿತು. ಆ ಮೂಲಕ ಅವಳ ಎಲ್ಲಾ ಜ್ಞಾನ ಧಾರೆಗಳನ್ನು ಕುಂಠಿತಗೊಳಿಸಲಾಯಿತು.

ಪುರಾಣ ಮತ್ತು ಮಹಾಕಾವ್ಯಗಳು

ಕನ್ನಡ ಮಹಾಕಾವ್ಯಗಳಲ್ಲಿ ಮಹಿಳೆಯರು ವರ್ಣನೆಯ ವಸ್ತುವಾಗಿ, ಚಂಚಲೆಯಾಗಿ, ಕ್ಷಮಾಯಾ ಧರಿತ್ರಿಯಾಗಿ, ಮಾಯೆಯಾಗಿ ಹಾಗೂ ಸೌಂದರ್ಯದ ಪ್ರತೀಕವಾಗಿ ದೇಹಕೇಂದ್ರಿತವಾಗಿ ವರ್ಣಿಸುವ ವಸ್ತುವಾಗಿ ಚಿತ್ರಿಸಲ್ಪಟ್ಟಿದ್ದಾರೆ. ಹೀಗೆ ವಿಭಿನ್ನ ಕಾಲಘಟ್ಟದಲ್ಲಿ ವಿವಿಧ ರೂಪಗಳಲ್ಲಿ ಹೆಣ್ಣನ್ನು ಬೌದ್ಧಿಕವಾಗಿ ಮತ್ತು ಭೌತಿಕವಾಗಿ ಹತ್ತಿಕಲ್ಪಟ್ಟ ಚರಿತ್ರೆಯೇ ನಮಗೆ ದೊರೆಯುತ್ತದೆ.

ಪುರಾಣಗಳನ್ನು ಮತ್ತು ಮಹಾಕಾವ್ಯಗಳನ್ನು ಸೃಷ್ಟಿಸಿದ ಪುರುಷರು ಪಿತೃಪ್ರಧಾನ ನೆಲೆಯಲ್ಲಿಯೇ ಅವುಗಳನ್ನು ರೂಢಿಸಿದರು. ಹೆಣ್ಣನ್ನು ದೇವತೆಯನ್ನಾಗಿ ಮಾಡಿ ಅವಳನ್ನು ಪುರುಷ ದೈವದ ಅಧೀನದಲ್ಲಿರುವಂತೆ ಪುರಾಣ ಕಥೆಗಳನ್ನು ಸೃಷ್ಟಿಸಿದರು. ಉದಾಹರಣೆ: ಶಿವನು ಒಬ್ಬ ದೇವತಾ ಪುರುಷ. ಇವನು ಗಂಗೆಯನ್ನು ತಲೆ ಮೇಲೆ ಕೂರಿಸಿಕೊಂಡ ಪಾರ್ವತಿಯನ್ನು ತೊಡೆಯ ಮೇಲೆ

ಕೂರಿಸಿಕೊಂಡು ಉನ್ನತ ಸ್ಥಾನವನ್ನು ಕಲ್ಪಿಸಿಕೊಟ್ಟಂತೆ ಚಿತ್ರಿತವಾಗಿದ್ದರೂ ಅವರು ಶಿವನ ಅಧೀನದಲ್ಲಿರುವವರೆ ಆಗಿದ್ದಾರೆ. ಹೆಣ್ಣನ್ನು ಲಕ್ಷ್ಮೀಗೆ ಹಾಗೂ ಐಶ್ವರ್ಯಕ್ಕೆ ಹೋಲಿಸುತ್ತಾರೆ. ಆದರೆ ಹಣ ಮತ್ತು ಅದರ ಒಡೆತನ ಅಧಿಕಾರ ಇರುವುದು ಪುರುಷರ ಕೈಯಲ್ಲಿ. ಹೀಗೆ ಉನ್ನತ ಸ್ಥಾನಕೊಟ್ಟು ವ್ಯವಸ್ಥೆಯ ವಿರುದ್ಧ ಮಾತನಾಡದಂತೆ ಹಲವಾರು ಪುರಾಣ ಮತ್ತು ಮಹಾಕಾವ್ಯಗಳನ್ನು ಸೃಷ್ಟಿಸಿ ಅವಳ ಸ್ಥಾನಮಾನವನ್ನು ಅಧೀನವಾಗಿಯೇ ಸ್ವೀಕರಿಸಿದರು.

ರಾಮಾಯಣ ಮತ್ತು ಮಹಾಭಾರತದ ಕಥೆಗಳಲ್ಲಿ ಸ್ತ್ರೀಯರನ್ನು ಹಲವು ರೀತಿಯಲ್ಲಿ ಚಿತ್ರಿಸಿರುವುದನ್ನು ಕಾಣಬಹುದಾಗಿದೆ. ರಾಮಾಯಣದಲ್ಲಿ ಸೀತೆ ಆದರ್ಶ ಮಹಿಳೆಯಾದರೂ ಅವಳು ಅನುಭವಿಸುವ ಕಷ್ಟಗಳು ಸಾಮಾನ್ಯ ಮಹಿಳೆಯರಿಗೂ ಮೀರಿದ್ದು. ರಾಜನ ಹೆಂಡತಿಯಾದರೂ ವನವಾಸದಲ್ಲಿ ಉಪವಾಸ, ಅಪಹರಣ ಹಾಗೂ ಕನ್ಯತ್ವದ ಪರೀಕ್ಷೆಗೆ ಒಳಗಾಗುತ್ತಾಳೆ. ಸ್ವಂತ ಹೆಂಡತಿಯನ್ನೇ ಬಿಟ್ಟ ರಾಮನನ್ನು ಆದರ್ಶ ವ್ಯಕ್ತಿಯನ್ನಾಗಿ ಮಹಾಕಾವ್ಯಗಳು ರೂಪಿಸಿವೆ. ಅದೇ ರೀತಿ ಮಹಾಭಾರತದಲ್ಲಿ ಧೃತರಾಷ್ಟ್ರ ಕುರುಡನಾಗಿದ್ದರಿಂದ ಗಾಂಧಾರಿಯು ಕಣ್ಣು ಇದ್ದರೂ ಕುರುಡಿಯಾಗ ಬೇಕಾಯಿತು. ಸಾಮ್ರಾಜ್ಞೆಯಾದ ದ್ರೌಪದಿಯು ಅರಮನೆಯಲ್ಲಿ ತನ್ನ ಮೈದುನರಿಂದಲೇ ಅಪಮಾನಕ್ಕೊಳಗಾಗುವ ಸಂಗತಿಗಳು ಪರಂಪರೆಯಲ್ಲಿ ಹೆಣ್ಣಿಗಿದ್ದ ಸ್ಥಿತಿಯನ್ನು ತೋರಿಸುತ್ತವೆ.

ಕುಂತಿ ಹಾಗೂ ರೇಣುಕೆಯರನ್ನು ಅವಿವೇಕ ಹಾಗೂ ನಿರ್ಲಜ್ಜತೆಯ ಪ್ರತೀಕವಾಗಿ ಚಿತ್ರಿಸಲಾಗಿದೆ. ದುರ್ವಾಸ ಮುನಿಗಳು ಐದು ವರಗಳನ್ನು ಕುಂತಿಗೆ ಕೊಡುತ್ತಾರೆ. ಅವುಗಳನ್ನು ಯಾವ ಸಮಯದಲ್ಲಿ ಪಡೆಯಬೇಕೆಂಬ ಪ್ರಬುದ್ಧ ತಿಳುವಳಿಕೆಯು ಅವಳಿಗೆ ಇರುವುದಿಲ್ಲ. ಕುತೂಹಲದಿಂದ ಒಂದು ವರವನ್ನು ಪಡೆಯುತ್ತಾಳೆ. ಕರ್ಣನ ಜನನವಾಗುತ್ತದೆ. ಸಮಾಜಕ್ಕೆ ಅಂಜಿ ಆ ಮಗುವನ್ನು ನದಿಯಲ್ಲಿ ಬಿಡುತ್ತಾಳೆ. ಜಮದಗ್ನಿ ಮಹರ್ಷಿ ದಿನನಿತ್ಯ ಪೂಜೆಗೆ ನದಿಯಿಂದ ನೀರು ತರಲು ತನ್ನ ಹೆಂಡತಿಯಾದ ಎಲ್ಲಮ್ಮನಿಗೆ ಹೇಳುತ್ತಾನೆ. ಅವಳು ತನ್ನ ಆದಿಶಕ್ತಿ ಬಲದಿಂದ ಮರಳಿನಲ್ಲಿ ಮಡಿಕೆ ಮಾಡಿ ಹಾವಿನ ಸಿಂಬೆ ಮಾಡಿಕೊಂಡು ನೀರನ್ನು ತಲೆ ಮೇಲೆ ತರುವಾಗ ಗಂಧರ್ವನೊಬ್ಬನನ್ನು ನೋಡಿ ಮನಸ್ಸಿನಲ್ಲಿ ವಿರಹಗೊಂಡಾಗ ಮಡಿಕೆ ಒಡೆದು ಸಿಂಬೆ ಮಾಡಿಕೊಂಡ ಹಾವು ಹರಿದುಹೋಗುತ್ತದೆ. ಇದನ್ನು ಸಂಶಯದಿಂದ ನೋಡಿದ ಜಮದಗ್ನಿ ತನ್ನ ಮಕ್ಕಳನ್ನು ಕರೆದು ತಾಯಿಯನ್ನು ಕೊಲ್ಲುವಂತೆ ಆಜ್ಞೆ ಮಾಡಿದಾಗ ಪರಶುರಾಮ ತಾಯಿಯನ್ನು ಕೊಲ್ಲುತ್ತಾನೆ. ತನ್ನ ಮಗನಿಗೆ ಏನು ಬೇಕು ನಿನಗೆ ವರ ಬೇಡಿಕೋ ಎಂದಾಗ ಮರಳಿ ತಾಯಿಯ ಜೀವವನ್ನೇ ಪರಶುರಾಮ ಪಡೆಯುತ್ತಾನೆ. ಆದರೆ ಪುರಾಣಗಳ ಕಾಲದಲ್ಲಿ ಪುರುಷರು ಎಷ್ಟು ಜನ ಸ್ತ್ರೀಯರನ್ನು ವಿವಾಹವಾದರೂ ಅವರಿಗೆ ಶಿಕ್ಷೆ ಇಲ್ಲ. ಆದರೆ ರೇಣುಕೆ ಗಂಧರ್ವನನ್ನು ನೋಡಿ ಸಂತೋಷ ಪಟ್ಟಿದ್ದಕ್ಕೆ ಎಂತಹ ಶಿಕ್ಷೆಯನ್ನು ಅನುಭವಿಸಬೇಕಾಯಿತು. ಇಲ್ಲಿ ಪಿತೃ ಪಾಧಾನ್ಯತೆಯನ್ನು ಪಾಲಿಸುವುದು ಮಗನ ಕರ್ತವ್ಯವಾದರೆ ಜಮದಗ್ನಿಗೆ ತನ್ನ ಹೆಂಡತಿಯನ್ನು ಕೊಲ್ಲುವಂತಹ ಕ್ರೂರತನ ಬರುತ್ತದೆ. ಪುರಾಣಗಳ ಕಾಲದಲ್ಲಿ

ಮಹಿಳೆಯರಿಗೆ ಉನ್ನತವಾದ ಸ್ಥಾನಮಾನಗಳು ಇದ್ದರೂ ವಿವೇಕವಂತರಾಗಿದ್ದರೂ ಅವು ಗಂಡಸು ಪ್ರಧಾನ ವ್ಯಾಖ್ಯಾನದಲ್ಲಿ ನೈತಿಕವಾಗಿ ಹಾಗೂ ಜೈವಿಕವಾಗಿ ಉಪೇಕ್ಷೆಗೊಳಗಾಗುತ್ತವೆ.

ಬುಡಕಟ್ಟು ಮಹಾಕಾವ್ಯಗಳು

ಶಿಷ್ಟ ಮಹಾಕಾವ್ಯಗಳಿಗಿಂತ ಭಿನ್ನವಾದ ಸ್ತ್ರೀಯರ ಚಿತ್ರಣವನ್ನಿಲ್ಲಿ ಕಾಣಬಹುದು. ಬುಡಕಟ್ಟು ಮಹಾಕಾವ್ಯಗಳಲ್ಲಿ ಸ್ತ್ರೀಯರು ಪುರುಷರ ಅಧೀನತೆಯನ್ನು ಮೀರುವಷ್ಟು ಕ್ರಿಯಾಶೀಲರಾಗಿ ಕಾಣುತ್ತಾರೆ. "ಸಿರಿ ಮಹಾಕಾವ್ಯ ಕೃಷಿಕ ಹಾಗೂ ಬಂಟ ಜಾತಿಯ ಕುಟುಂಬವೊಂದರ ಸುತ್ತ ಹೆಣೆದ ಮೂರು ತಲೆಮಾರುಗಳ ಸುದೀರ್ಘ ಮಹಾಕಾವ್ಯ. ಬೆರ್ಮೆರ ಹರಕೆ ಹೊತ್ತು ಪಡೆದ ಸಿರಿಗೆ ಬಸರೂರು ಗುತ್ತಿನ ಕಾಂತು ಪೂಂಜನೊಂದಿಗೆ ಮದುವೆಯಾಗುತ್ತದೆ."[೧೩] ಸಿರಿ ಬಸುರಿಯಾದಾಗ ತನ್ನ ಬಯಕೆಯನ್ನು ತೀರಿಸುವುದಕ್ಕೆ ಅವನ ಸೂಳೆ ಸಿದ್ದು ಉಟ್ಟ ಸೀರೆಯನ್ನು ತಂದು ಕೊಟ್ಟಾಗ 'ಸಿರಿ', ಆ ಸೀರೆಯನ್ನು ನಿರಾಕರಿಸಿ ತನ್ನ ತವರು ಮನೆಗೆ ಹೋಗಲು ಸಿದ್ಧಳಾಗಿ ಬಂಧನದ ಸಂಕೇತವಾಗಿದ್ದ ಕರಿಮಣಿ, ಬಳೆ, ಮೂಗುತಿ ಎಲ್ಲವನ್ನು ನಡುಮನೆಯ ಕಂಬಕ್ಕೆ ಹಾಕಿ ವಿಚ್ಛೇದನ ಹೇಳಿ ಹೋಗುತ್ತಾಳೆ. ಸಿರಿಯು ಪಿತೃಪ್ರಧಾನ ವ್ಯವಸ್ಥೆಯನ್ನು ಧೈರ್ಯವಾಗಿ ಎದುರಿಸಿದ ದಿಟ್ಟ ಬುಡಕಟ್ಟು ಹೆಣ್ಣಾಗಿ ಇಲ್ಲಿ ಕಾಣುತ್ತಾಳೆ. ಸಿರಿಯ ಪ್ರಜ್ಞಾವಂತಿಕೆಯನ್ನಿಲ್ಲಿ ಕಾಣಬಹುದು.

"ಮಲೆಮಾದೇಶ್ವರ ಕಾವ್ಯದಲ್ಲಿ ಬರುವಂತಹ ನೀಲಯ್ಯ ಮಲೆಯ ಸೋಲಿಗ ದೊಡ್ಡಿಯ ಚೆಲುವೆ ಸಂಕಮ್ಮನನ್ನು ಮದುವೆಯಾಗುತ್ತಾನೆ."[೧೪] ಒಂದು ದಿನ ನೀಲಯ್ಯನಿಗೆ ಸಂಪ್ರದಾಯದಂತೆ ಬೇಟೆಗೆ ಹೋಗುವುದಕ್ಕೆ ಕುಲಬಾಂಧವರಿಂದ ಕರೆ ಬಂದಾಗ ಅವನು ಒಂಟಿ ಗುಡ್ಲಿನಲ್ಲಿ ಒಂಟಿ ಹೆಣ್ಣು ಬಿಟ್ಟು ಹೋಗಲು ಸಂಶಯ ಪಟ್ಟು ಸಂಕಮ್ಮನನ್ನು ಬಲಗೈ ಭಾಷೆ ಕೊಡು ಎಂದು ಕೇಳುತ್ತಾನೆ. ಆದರೆ ಅವಳು ಬಲಗೈ ಭಾಷೆ ಕೊಡಲು ನಿರಾಕರಿಸುತ್ತಾಳೆ. ಒಬ್ಬ ಬುಡಕಟ್ಟು ಸಾಮಾನ್ಯ ಮಹಿಳೆ ಪಿತೃ ಪ್ರಧಾನತೆಯ ಮೌಲ್ಯಗಳನ್ನು ವಿಸರ್ಜಿಸುವ ವಿವೇಕ ಇಲ್ಲಿ ಢಾಳವಾಗಿದೆ.

"ನೀನು ಕಟ್ಟಿದ ತೆರುವ ತಕ್ಕಯ್ಯ
ನನ್ನ ಹಟ್ಟಿಂದಾಚೆ ಕಳುವಯ್ಯ
ನಿನ್ನ ದಾರಿಯ ನೀನು ನೋಡಯ್ಯ
ನನ್ನ ದಾರಿಯ ನಾನು ನೋಡ್ತೀನಿ
ನಾನು ಬಲಗೈಮುಟ್ಟಿ ಭಾಷೆ ಕೊಡುವಂತ
ಮಗಳಲ್ಲ ಹೋಗೋ ಯಜಮಾನ"[೧೫]

ಎನ್ನುವಲ್ಲಿ ಸಂಕಮ್ಮ ನೈತಿಕ ಪ್ರತಿಭಟನೆಯನ್ನು ಕಾಣುತ್ತೇವೆ.

'ಹೆಣ್ಣನ್ನು ಸಂಸ್ಕೃತಿಯ ರಕ್ಷಕಳು' ಎನ್ನುತ್ತಾರೆ. ಆದರೆ "ಸಂಸ್ಕೃತಿಯ ನಿರ್ಮಾಪಕಳು ಎನ್ನುವುದಿಲ್ಲ"[೧೬] ಪುರುಷರಿಂದ ನಿರ್ಮಿತವಾದ ಇತಿಹಾಸದಲ್ಲಿ ಅವಳ ಅಭಿವ್ಯಕ್ತಿ ಮತ್ತು ಅಸ್ತಿತ್ವಕ್ಕೆ ಯಾವುದೇ ರೀತಿಯಾದ ಮನ್ನಣೆ ನೀಡಿರುವುದಿಲ್ಲ. ನಮ್ಮ ಸಂಸ್ಕೃತಿಯನ್ನು ಪುರಾತನ ಕಾಲದಿಂದಲೂ

ಬೆಳೆಸಿಕೊಂಡು ಮತ್ತು ಉಳಿಸಿಕೊಂಡು ಬಂದಿರುವುದು ಮಹಿಳೆಯರು. ಒಂದು ಮಗು ಹುಟ್ಟಿದಾಗಿನಿಂದ ಅದು ಬೆಳೆಯುವವರೆಗೂ ಅದಕ್ಕೆ ಆಚಾರ ವಿಚಾರ ನಡೆ-ನುಡಿ ಕಲಿಸುವವಳು ತಾಯಿ ಆದ್ದರಿಂದ ಭಾರತೀಯ ಸಂಸ್ಕೃತಿಯ ರಕ್ಷಕಳು ಹೆಣ್ಣು ಎಂದು ಹೇಳುತ್ತಾರೆ ಆದರೆ ಅದರ ನಿರ್ಮಾಪಕಳು ಎಂದು ಯಾರು ಹೇಳುವುದಿಲ್ಲ.

'ಹೆಂಗಸರ ಬಾಯಲ್ಲಿ ಮಾತು ನಿಲ್ಲಲ್ಲ' 'ಹೆಣ್ಣಿನ ಬುದ್ಧಿ ಮೊಣಕಾಲು ಕೆಳಗೆ' 'ನಗುವ ಹೆಂಗಸನ್ನ ನಂಬಬಾರದು' ಹೆಂಗಸರ ಮಾತು ಮುಖ್ಯವಲ್ಲ ಇವೆಲ್ಲವೂ ಜಾನಪದ ನೆಲೆ ಹಾಗೂ ವೈದಿಕ ನೆಲೆಗಳಲ್ಲಿಯೂ ಹೆಣ್ಣಿನ ವ್ಯಕ್ತಿತ್ವಕ್ಕೆ ಬೆಲೆಯಿಲ್ಲದಿರುವುದನ್ನು ನೋಡಬಹುದಾಗಿದೆ. ಅವಳು ಮಾತನಾಡಿದರೆ ಸಾಕು ಬಾಯಿ ಮುಚ್ಚು ನಿನಗೆ ಏನು ತಿಳಿಯುತ್ತದೆ ಎನ್ನುವಂತಹ ಪುರುಷರನ್ನು ಗುರುತಿಸಬಹುದಾಗಿದೆ. ಹೆಣ್ಣು ನಗುವುದಕ್ಕೂ ಸ್ವಾತಂತ್ರ್ಯವಿಲ್ಲ ಏಕೆಂದರೆ ನಕ್ಕರೆ ಅವಳನ್ನು ನಂಬಬಾರದು ಚಲಾಕಿ ಹೆಣ್ಣು ಎಂದು ಕರೆಯುತ್ತಾರೆ.

ವೇದಕಾಲೀನ ಮಹಿಳೆಯ ಸ್ಥಾನಮಾನ ಸ್ವಲ್ಪ ಉನ್ನತ ಮಟ್ಟದಲ್ಲಿಯೇ ಇದ್ದಿತೆಂದು ಹೇಳಬಹುದು. ಕೆಲವರಿಗಾದರೂ ವೇದ ವಿದ್ಯೆ ಲಭಿಸಿತ್ತು. ಅದರ ಪರಿಣಾಮವಾಗಿ ತತ್ವಜ್ಞಾನ ಮುಂತಾದ ಗಹನ ವಿಚಾರದಲ್ಲಿ ಚರ್ಚೆ ನಡೆಸುವಷ್ಟು ವಿಚಾರವಂತೆಯರಿದ್ದರು. ಆದರೆ ಪುರಾಣ ಇತಿಹಾಸಗಳ ಕಾಲದಲ್ಲಿ ಹೆಣ್ಣು ಅಲಕ್ಷಿಸಲ್ಪಟ್ಟಳು. ಮಹಾಕಾವ್ಯಗಳ ಕಾಲಕ್ಕೆ ಅವಳ ಸ್ಥಿತಿ ಇನ್ನೂ ಹದಗೆಟ್ಟಿತು. ಇದಕ್ಕೆ ಕಾರಣ ಹೆಣ್ಣನ್ನು ಒಂದು ಭೋಗದ ವಸ್ತುವಾಗಿ ನೋಡಲಾರಂಭಿಸಿದ್ದು. ಊಳಿಗಮಾನ್ಯ ವ್ಯವಸ್ಥೆ "ನಮ್ಮ ಸಂಸ್ಕೃತಿಯ ಕೆಲವು ಮಾದರಿಗಳನ್ನು ಬಿಚ್ಚಿಡುವ ನಮ್ಮ ಶಾಸ್ತ್ರಗಳು, ಪುರಾಣಗಳು ಕೊನೆಗೆ ಅವುಗಳ ಛಾಯೆಯಲ್ಲಿ ನಮ್ಮ ಜನಪದ ನುಡಿಗಟ್ಟುಗಳು ಮತ್ತು ಗಾದೆಗಳು ಕೂಡಾ ಹೆಣ್ಣಿನ ಪರಾಧೀನ ಸ್ಥಿತಿಯ ಅನಿವಾರ್ಯತೆಯನ್ನು ಒತ್ತಿ ಹೇಳಿವೆ."[೧೭]

ಜನಪದ ಸಾಹಿತ್ಯ

ಕನ್ನಡ ಜ್ಞಾನ ಪರಂಪರೆ ಎನ್ನುವುದು ಪುಸ್ತಕ ಕೇಂದ್ರಿತವಲ್ಲ. ಅನುಭವ ಕೇಂದ್ರಿತವಾದದ್ದು. ಶಿಷ್ಟ ಸಾಹಿತ್ಯದಲ್ಲಿ ಅಕ್ಷರ ಕೇಂದ್ರಿತವಾದ ಜ್ಞಾನಕ್ಕೆ ಮಾನ್ಯತೆ ಹೆಚ್ಚು. ಜಾನಪದ ಮಹಿಳೆಯರ ಜ್ಞಾನ ಹೆಚ್ಚು ಲಯ ರೂಪದ್ದು. ಕುಟ್ಟುವ, ಬೀಸುವ, ಮದುವೆ, ಋತುಮತಿಯ ಸಂದರ್ಭದಲ್ಲಿ ಹಾಡುವ ಸೋಬಾನೆ ಹಾಡುಗಳು ಹೆಣ್ಣಿನ ಅಭಿವ್ಯಕ್ತಿ ರೂಪಗಳು. ಇಂತಹ ಮಹಿಳೆಯರ ಜ್ಞಾನ ಪರಂಪರೆಯನ್ನು ಜ್ಞಾನವೆಂದಾಗಲಿ, ಅಭಿವ್ಯಕ್ತಿಯೆಯಿಂದಾಗಲಿ ಶಿಷ್ಟ ಸಾಹಿತ್ಯದಲ್ಲಿ ಗುರುತಿಸಿರುವುದು ವಿರಳ. ಹಾಡಿನ ಗುಣವೇ ಸ್ವತಂತ್ರ ಸ್ವರೂಪದ್ದು ಮತ್ತು ನಿಬಂಧನೆಗಳನ್ನು ಮುರಿಯುವ ರೂಪದ್ದು.

ಉದಾರಹಣೆಗೆ:

ಕಲ್ಲಮ್ಮ ತಾಯಿ ಮೆಲ್ಲಮ್ಮ ರಾಗಿಯ
ಜಲ್ಲಜಲ್ಲನೆ ಉದುರಮ್ಮ।ನಾ। ನಿನಗೆ।
ನೆಲ್ಲಕ್ಕಿ ಪಡಿಯ ನಡೆಸೇನು

ಕಲ್ಲವ್ವ ಮಾತಾಯಿ ಮೆಲ್ಲವ್ವ ರಾಜನವ
ಜಲ್ಲ ಜಲ್ಲನೆ ಉದುರವ್ವ ನಾ। ನಿನಗೆ।
ಬೆಲ್ಲದಾರತಿಯ ಬೆಳಗೇನು॥

ಗರತಿಗೆ ರಾಗಿಯ ಕಲ್ಲು ಸರಸ್ವತಿಗೆ ಸಮಾನ. ಬೀಸುವ ಕ್ರಿಯೆಯೇ ಇಲ್ಲಿ ಅರಿವಿನ ಸಾಕಾರ. ಕ್ರಿಯೆ ಅರಿವು ಹಾಗೂ ಅಭಿವ್ಯಕ್ತಿಗಳು ಕೌಶಲ್ಯದ ನಿಷ್ಪನ್ನಗಳಾಗಿದ್ದ ಸಂದರ್ಭದಲ್ಲಿ ಶ್ರಮವೇ ಅಭಿವ್ಯಕ್ತಿಯಾಗಿ ಪರಿವರ್ತನೆಯಾಗುತ್ತದೆ. ಶ್ರಮ ಸಾಹಿತ್ಯವಾಗುವ ಈ ಬಗೆಯನ್ನು ಹೆಣ್ಣಿನ ಸೃಜನಶೀಲತೆ ಎಂದು ಅರಿಯಬೇಕಾಗಿದೆ.

ಜಾನಪದ ಸಾಹಿತ್ಯದಲ್ಲಿ ಅಥವಾ ಬುಡಕಟ್ಟು ಸಮುದಾಯದಲ್ಲಿ ಮಹಿಳೆಯರಿಗೆ ಮೊಟ್ಟ ಮೊದಲು ದೊರಕಿದ ಸ್ವಾತಂತ್ರ್ಯವೆಂದರೆ ಭಾಷಾಭಿವ್ಯಕ್ತಿ. ಜಾನಪದ ಸಾಹಿತ್ಯವು ಮಹಿಳೆಯರ ಕವಿತ್ವದ ಗಂಗೋತ್ರಿಯೆಂದು ಕರೆಯುತ್ತಾರೆ. ಇವರ ದೈನಂದಿನ ಬದುಕಿನ ನೋವು ನಲಿವು ಪಾಡು ಹಾಡಾಗಿ ಸಹಜ ಲಯ, ಪ್ರಾಸ ಛಂದಸ್ಸುಗಳ ತೊಡುಗೆ ತೊಟ್ಟಿದೆ. ಏಕೆಂದರೆ ಜಾನಪದ ಸಾಹಿತ್ಯ ಹೆಚ್ಚಾಗಿ ಮಹಿಳೆಯರಿಂದಲೇ ಬೆಳೆದಿದೆ. ಕಥೆ, ಹಾಡು, ಪದ, ಒಗಟು, ಗಾದೆ, ಇನ್ನೂ ಅನೇಕ ಪ್ರಕಾರಗಳು ಅವರ ಬದುಕಿನ ಪ್ರತಿಬಿಂಬಗಳಾಗಿವೆ.

"ಮೌಖಿಕ ಪರಂಪರೆಯಲ್ಲಿ ಹೆಣ್ಣಿಗೆ ಅಭಿವ್ಯಕ್ತಿ ಸ್ವಾತಂತ್ರ್ಯವಿದೆ. ಲಿಖಿತ ಪರಂಪರೆಯಲ್ಲಿ ಹೆಣ್ಣಿನ ಮೌನ ಇದೆ, ಅದು ಲಿಂಗ ರಾಜಕಾರಣಕ್ಕೆ ನೇರವಾಗಿ ಸಂಬಂಧಿಸಿದೆ."[೧೮] ಆಧುನಿಕ ಕಾಲದಲ್ಲಿ ಮಹಿಳೆಯರು ಹೆಚ್ಚು ಸುಶಿಕ್ಷಿತರಾಗುತ್ತಾ ಹೋದಂತೆಲ್ಲಾ ತನ್ನ ಕುಟುಂಬ ಮತ್ತು ಇತರೆ ವಲಯಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಕಡಿಮೆ. ಅವಳು ನೇರವಾಗಿ ಪ್ರಶ್ನಿಸುವುದಕ್ಕೆ ಆಗದೆ ಮೌನದಿಂದಲೇ ಕಥೆ, ಕಾವ್ಯ, ಕಾದಂಬರಿ ಪ್ರಕಾರಗಳಲ್ಲಿ ಅಡಗುತ್ತಾ ಹೋಗುತ್ತಾಳೆ.

"ಶಿಷ್ಟ ಸಂಸ್ಕೃತಿಗೂ ಜಾನಪದ ಸಂಸ್ಕೃತಿಗೂ ಇರುವ ಮೂಲಭೂತ ವ್ಯತ್ಯಾಸ ಎಂದರೆ ಅಕ್ಷರಗಳು. ಶಿಷ್ಟ ಸಂಸ್ಕೃತಿಗೆ ಲಿಖಿತ ಆಕರಗಳು ಸಾಮಗ್ರಿ ಆದರೆ ಜಾನಪದ ಸಂಸ್ಕೃತಿಗೆ ಮೌಖಿಕ ಸಾಮಗ್ರಿಗಳು ಮೂಲ ಆಕರಗಳಾಗಿವೆ. ಒಂದು ಅಕ್ಷರವನ್ನು ಬಯಸಿದರೆ ಇನ್ನೊಂದು ಅನುಭವವನ್ನು ಬಯಸುತ್ತದೆ. ಜಾತಿಬದ್ಧ ಸಮಾಜದಲ್ಲಿ ಅಕ್ಷರವು ಮೇಲ್ಜಾತಿಗಳ ಸ್ವತ್ತಾಗಿದ್ದು ಅವರಿಗೆ ಸಾಮಾಜಿಕ, ರಾಜಕೀಯ ಸ್ಥಿರತೆ ತಂದುಕೊಡುವ ಪ್ರಬಲಶಕ್ತಿಯಾಗಿದೆ. ಕೆಳವರ್ಗದ ಜನಗಳಿಗೆ ಅಂಥ ಅವಕಾಶಗಳು ಚಾರಿತ್ರಿಕವಾಗಿ ಸಿಕ್ಕಲಿಲ್ಲವಾದ್ದರಿಂದ ಅವರ ನಡುವೆ ಮಡಿ-ಮೈಲಿಗೆಗಳು ಉಳಿದು ಬಂದಿವೆ."[೧೯] ಮಹಿಳೆಯರು ಅಕ್ಷರ ಪಡೆದುಕೊಂಡದ್ದರಿಂದ ಸಾಹಿತ್ಯ ಕ್ಷೇತ್ರದ ಬೇರೆ ಬೇರೆ ವಲಯಗಳಲ್ಲಿ ಬರವಣಿಗೆಯ ಮೂಲಕ ಗುರುತಿಸಿಕೊಳ್ಳುವುದಕ್ಕೆ ಸಾಧ್ಯವಾಯಿತು.

ಕನ್ನಡ ಲಿಖಿತ ಸಾಹಿತ್ಯ ಚರಿತ್ರೆಯಲ್ಲಿ ಮೌಖಿಕ ಸಾಹಿತ್ಯದ ಅನೇಕ ಸಂಗತಿಗಳು ದಾಖಲೆಯಾಗದೆ ಉಳಿದಿವೆ. ಕೊರವಂಜಿಯಂತಹ ಅಭಿವ್ಯಕ್ತಿ ರೂಪವು ಹೆಚ್ಚು ಚರ್ಚೆಯಾಗದೆ ಹೋಗಿದೆ. ಕೆಳವರ್ಗದ

ಹೆಣ್ಣು ಕಣಿ ಹೇಳುವುದರ ಮೂಲಕ ತನ್ನ ಕುಟುಂಬ ನಿರ್ವಹಣೆ ಮಾಡಿಕೊಂಡು ಹೋಗುತ್ತಾಳೆ. ಒಂದು ಸಾಮಾನ್ಯ ಕುಟುಂಬದ ಮಹಿಳೆ ಇನ್ನೊಬ್ಬರ ಮನಸ್ಥಿತಿಯನ್ನು ಅರ್ಥ ಮಾಡಿಕೊಂಡು ಅವರಿಗೆ ಸಮಾಧಾನದ ಮಾತುಗಳನ್ನು ಸರಳವಾದ ಭಾಷೆಯಲ್ಲಿ ಹೇಳುವಂತಹ ವಾಕ್ ಚಾತುರ್ಯವನ್ನು ಪಡೆದುಕೊಂಡಿದ್ದಾಳೆ.

"ಛಪ್ಪನ್ನ ದೇಶವನೆಲ್ಲ ಸುತ್ತಿ ಸೊಲ್ಲ ಹೇಳಿ ಬಂದೆ
ತಪ್ಪ ಹೇಳುವ ಕೊರವಿ ನಾನಲ್ಲವೆಯಮ್ಮ
ಕರ್ಪೂರ ವೀಳ್ಯೆವ ತಾರೆ ಕಾಂತೆ ನಿನ್ನ ಕೈಯ ತೋರೆ
ಒಪ್ಪಾದರೆ ಕೇಳುಬಾರೆ ಕೊಪ್ಪಿನ ಕಿವಿಯವ್ವ
ಸೊಲ್ಲಕೇಳೆ ಸೊಲ್ಲ ಕೇಳೆ ಸಿರಿವಂತೆ ಬರೆ ॥೧೪॥"[೨೦]

ಅಕ್ಷರ ಜ್ಞಾನವನ್ನೇ ಪಡೆದುಕೊಳ್ಳದೆ ಇರುವಂತಹ ಸಾಮಾನ್ಯವರ್ಗದ ಮಹಿಳೆ ಹಳ್ಳಿ ಹಳ್ಳಿಗೆ ಹೋಗಿ ಕಣಿ ಹೇಳುವ ಸಂದರ್ಭದಲ್ಲಿ ದೇಶವನ್ನೇ ಸುತ್ತಿ ಬಂದಿದ್ದೇನೆ. ಸುಳ್ಳು ಹೇಳುವಂತಹ ಕೊರವಿ ನಾನಲ್ಲ, ತಪ್ಪು ಹೇಳುವುದಿಲ್ಲ ಎಂದು ಇನ್ನೊಬ್ಬ ಹೆಣ್ಣು ಮಗಳ ಹತ್ತಿರ ಹೇಳುವ ರೀತಿ ಅದ್ಭುತವಾದದ್ದು. ನಿನಗೆ ಒಪ್ಪಿಗೆ ಆದರೆ ಕೇಳು ಬಾರೆ ಎಂದು ಹೇಳುತ್ತಾಳೆ. ಒಂದು ಹೆಣ್ಣಿನ ಮನಸ್ಥಿತಿಯನ್ನು ಅರ್ಥ ಮಾಡಿಕೊಂಡು ಅವಳ ಜೀವನದ ಆಗು-ಹೋಗುಗಳ ಘಟನೆಗಳ ಬಗ್ಗೆ ಹೇಳುತ್ತಾಳೆ. ಕನ್ನಡ ಜ್ಞಾನ ಪರಂಪರೆ ಪುಸ್ತಕ ಕೇಂದ್ರಿತವಲ್ಲ ಅದು ತನ್ನ ಬದುಕಿನ ಕ್ರಮದಿಂದ ಪಡೆದುಕೊಂಡಂತಹದ್ದು ಎನ್ನುವ ಸತ್ಯ ಇಲ್ಲಿನದು. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಕೊರವಂಜಿಯಂಥ ಹೆಣ್ಣುಗಳ ಭಾಷೆ, ಸಾಹಿತ್ಯ ವೈಶಿಷ್ಟ್ಯ ಪೂರ್ಣವಾದದ್ದು. ಅಂಥ ನೆಲೆಗಳ ಅಧ್ಯಯನ ಗಂಭೀರವಾಗಿ ನಡೆದಿಲ್ಲ.

ಜಾನಪದ ಸಾಹಿತ್ಯವೆಂದರೆ ಅದು ಇಂಪಾದ ಲಯ, ಪ್ರಾಸಗಳ ಮೂಲಕ ಸಹೃದಯರನ್ನು ಆಹ್ಲಾದಗೊಳಿಸುವಂತಹದ್ದು. ಒಂದು ಲೋಕ ಗೀತೆಯನ್ನು ಈ ಕೆಳಕಂಡಂತೆ ಉದಾಹರಿಸಬಹುದಾಗಿದೆ.

ಹಲಗೆಯ ಹಿಡಿದಿಲ್ಲ ಬಳಪಾದಿ ಬರೆದಿಲ್ಲ
ಶ್ರೀಗುರುವು ನಮಗೆ ಕಲಿಸಿಲ್ಲ। ಕೇಳಿರಕ್ಕ
ಲೆಕ್ಕಣಿಕೆ ನಮಗೆ ಗೊತ್ತಿಲ್ಲ॥

ಎಂದು ಹೇಳುವ ಅವರ ಬಾಯಿಯಲ್ಲಿ ಅದೆಷ್ಟು ಬಗೆಯ ಗೀತ ಸಂಪತ್ತಿದೆ. ಮೊಗದಷ್ಟು ಅಕ್ಷಯವಾಗುವ ಹಾಡಿನ ಪರಂಪರೆ ಅವರದು. ಮದುವೆಯಲ್ಲಿ ಹಾಡುವ ಪದಗಳು, ಸುಗ್ಗಿ ಸಮಯದಲ್ಲಿ ಹಾಡುವ ಪದಗಳು, ಕೋಲಾಟ, ಕುಟ್ಟುವ ಬೀಸುವ ಪದಗಳು ಅವರ ನೆನಪಿನ ಕೋಶದಲ್ಲಿವೆ. ತನ್ನ ಬದುಕಿನ ಅನುಭವದಿಂದಲೇ ಪಡೆದುಕೊಂಡ ಅರಿವಿನಿಂದ ಸಾಂಪ್ರದಾಯಿಕ ವ್ಯವಸ್ಥೆಯನ್ನು ಮೀರಿ ಬೆಳೆಯುವಂತಹ ಜ್ಞಾನ ಪಡೆದುಕೊಂಡಿರುತ್ತಾಳೆ. ಮತ್ತು ನಾಗರೀಕ ಮಹಿಳೆಯರಿಗಿಂತ ಭಿನ್ನವಾಗಿ ತನ್ನನ್ನು ತಾನು ಗುರುತಿಸಿಕೊಂಡಿರುವುದು ವೈಶಿಷ್ಟ್ಯ ಪೂರ್ಣವಾದ ಸಂಗತಿಯಾಗಿದೆ.

ಪ್ರಾಚೀನ ಕಾಲದಿಂದಲೂ ಮಹಿಳೆ ತಾನು ಪಡೆದುಕೊಂಡ ಅನುಭವದಿಂದಲೇ ತನ್ನ ಇರುವಿಕೆಯನ್ನು ಅಥವಾ ಅಸ್ತಿತ್ವವನ್ನು ಗುರುತಿಸಿಕೊಳ್ಳುತ್ತಲೇ ಬಂದಿದ್ದಾಳೆ. ಇವರು ಅಕ್ಷರ ಜ್ಞಾನದಿಂದ ವಂಚಿತರಾಗಿದ್ದರೂ, ಸಹ ಆ ವ್ಯವಸ್ಥೆಯನ್ನು ಮೀರುವಂತಹ ಪ್ರಯತ್ನ ಮಾಡಿದ್ದಾರೆ. ನಾಗರೀಕ ಮಹಿಳೆಯರಿಗಿಂತ ಭಿನ್ನವಾಗಿ ಗುರುತಿಸಿಕೊಂಡಿದ್ದಾರೆ. ಶಿಷ್ಟ ಸಾಹಿತ್ಯದಲ್ಲಿ ಈ ಕ್ರಮ ಕಡಿಮೆ. ಆದ್ದರಿಂದ ಏಕೆ ಹೆಣ್ಣು ಶಾಸ್ತ್ರ ಸಂಬಂಧಿ ವಿಷಯ ಅಥವಾ ಸಾಹಿತ್ಯದಲ್ಲಿ ತನ್ನನ್ನು ತಾನು ಸಂಪೂರ್ಣವಾಗಿ ತೊಡಗಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಶಿಕ್ಷಣದ ಕೊರತೆಯೋ ಅಥವಾ ಆರ್ಥಿಕ ಅಡಚಣೆಯೇ ಇಚ್ಛಾಸಕ್ತಿ ಕೊರತೆ ಮತ್ತು ಕುಟುಂಬ ನಿರ್ವಹಣೆ ಕಾರಣವೋ, ಜ್ಞಾನದ ಕೊರತೆಯೋ ಎಂಬುದನ್ನು ತಿಳಿದುಕೊಳ್ಳುವುದು ಇಲ್ಲಿನ ಉದ್ದೇಶವಾಗಿದೆ.

ಶಿಷ್ಟ ಸಾಹಿತ್ಯ

"ರಾಜಶೇಖರನು ೧೦ನೇ ಶತಮಾನದಲ್ಲಿಯೇ 'ಪುರುಷರಂತೆ ಸ್ತ್ರೀಯರೂ ಕವಿಗಳಾಬಹುದು'. ಸಂಸ್ಕಾರವು ಆತ್ಮನಿಷ್ಠವೇ ಸರಿ. ಗಂಡು ಹೆಣ್ಣೆಂಬ ಭೇದವನ್ನು ಅದು ನೋಡುವುದಿಲ್ಲ. ಆಲೋಚನಾ ಶಕ್ತಿ ಇಬ್ಬರಲ್ಲಿಯೂ ಇರುತ್ತದೆ. 'ರಾಜಪುತ್ರಿಯರು ಮಹಾಮಾತ್ರರ ಪುತ್ರಿಯರು, ಗಣಿಕೆಯರು, ಸುಸಂಸ್ಕೃತರ ಮಡದಿಯರು ಇವರೆಲ್ಲಾ ಶಾಸ್ತ್ರ ಸಂಸ್ಕಾರವುಳ್ಳವರೂ ಕವಿಗಳೂ ಆಗಿದ್ದುದ್ದನ್ನು ಕೇಳಿ ಬಲ್ಲೆವು, ಕಂಡುಬಲ್ಲವೆ' ಎಂದು ಹೇಳುತ್ತಾನೆ. "ರಾಜಶೇಖರನ ಮಡದಿಯಾದ ಆವಂತಿ ಸುಂದರಿಯೇ ದೊಡ್ಡ ವಿದೂಷಿಯಾಗಿದ್ದಳು."[೨೧] ಶಾಸನಗಳಲ್ಲಿ ಮಹಿಳೆಯರು ಪುರುಷರಂತೆ ದಾನದತ್ತಿ ಕೊಟ್ಟಿರುವುದು ಕಂಡುಬರುತ್ತದೆ. ಗಂಗರ ಕಾಲದ ಬಹಳಷ್ಟು ಶಾಸನಗಳಲ್ಲಿ ಬ್ರಹ್ಮೇದೇಯದಂತೆ ಕೊಡುಗೆಗಳಿಗೆ ಪುರುಷರು ಮಾತ್ರ ಅರ್ಹರಾದುದರಿಂದ ಇಲ್ಲಿ ಮಹಿಳೆಯರಿಗೆ ಯಾವ ಪಾಲು ಇರಲಿಲ್ಲ. ಬ್ರಹ್ಮದೇಯಗಳೆಂದರೆ ಶ್ರೇಷ್ಠ ಪಂಡಿತರು ಇರುವ ಜಾಗವಾಗಿದ್ದವು. ಇಷ್ಟೇ ಅಲ್ಲ, ತನ್ನ ಗಂಡು ಸಂತಾನವನ್ನು ಹೆಸರಿಸುವ ಬ್ರಹ್ಮದೇಯದ ವೈದಿಕನು ತಾಯಿಯನ್ನಾಗಲೀ, ಹೆಂಡತಿಯನ್ನಾಗಲೀ ಸೋದರಿಯನ್ನಾಗಲೀ ಹೆಸರಿಸುವುದಿಲ್ಲ ಎನ್ನುವುದು ಆ ಕಾಲದ ಹೆಣ್ಣಿನ ಜ್ಞಾನ ಹಾಗೂ ವ್ಯಕ್ತಿತ್ವಕ್ಕಿದ್ದ ನೆಲೆಗಳಿಗಿದ್ದ ಉಪೇಕ್ಷೆಯನ್ನು ಗ್ರಹಿಕೆಗೆ ತರುತ್ತದೆ.

ಕರ್ನಾಟಕದ ದಾನ ಶಾಸನಗಳಲ್ಲಿ ಕಾಣುವ ದೇವದಾಸಿಯರ ಸಾಮಾಜಿಕ ದಾನ ಕಾರ್ಯಗಳನ್ನು, ಅವರ ಲಲಿತಕಲಾ ತಿಳುವಳಿಕೆಯನ್ನು ಗಂಭೀರವಾಗಿ ಪರಿಗಣಿಸಿದ್ದು ಕಡಿಮೆ, ಸಾಂಪ್ರದಾಯಿಕ ಅಧ್ಯಯನದ ನೆಲೆಯಲ್ಲಿ ಅವರ ಕ್ರಿಯಾಶೀಲತೆಯನ್ನು ನೋಡಿದ್ದೇ ಹೆಚ್ಚು. ತಮ್ಮುಕಲ್ಲಿನ ಗೋಯಿನ್ನಪೊಡಿಯ ಮಗಳಾದ ಬಾದಿಪೊಡ್ಡಿ, ಸೋಮನಹಳ್ಳಿಯ ದಾವೋರಿ ಮತ್ತು ಎಱೆಯಬ್ಬೆರಲ್ಲಿ ಮೊದಲಿನ ಇಬ್ಬರು ಸೂಳೆಯ ಸಂತಾನದವಳಾದರೆ ಮೂರನೆಯವಳು ಸಾಮಾನ್ಯ ಗೃಹಿಣಿ, ಇವರ ವಿದ್ವತ್ತನ್ನು ಭಿನ್ನ ನೆಲೆಯಲ್ಲಿ ಚರ್ಚಿಸಬೇಕಾಗುತ್ತದೆ.

ಕವಿ ನಾಗಲಾಂಬಿಕೆಯೂ ಜಿನಭಕ್ತ ಮಹಾಮಂಡಲೇಶ್ವರ ಗಂಡನಿಗೆ ಸರಿಸಮಾಳಾದ ಹೆಂಡತಿ, ಮೂಡುಬಿದಿರೆಯ ತ್ರಿಭುವನ ತಿಲಕ ಚೂಡಾಮಣಿ ಜಿನಾಲಯದ ಮುಂದುಗಡೆ ವಿರಾಜಮಾನವಾಗಿರುವ

ಐವತ್ತು ಅಡಿ ಎತ್ತರದ ಅತಿ ಚೆಲುವಿನ ಮಾನಸ್ತಂಭವನ್ನು ನಿಲ್ಲಿಸಿದಳಲ್ಲದೆ, ಸೊಗಸಾದ ಮುಖ ಮಂಟಪವನ್ನು ಮಾಡಿಸಿದಳು. ಇಷ್ಟು ಪ್ರಸಿದ್ಧಳೂ, ಪ್ರತಿಷ್ಠಿತಳೂ ಆದ ಅಭಿಲಷಿತಾರ್ಥ ದಾನವಿನೋದೆ ನಾಗಲದೇವಿಯು ಆಗಿದ್ದಳು. ಗೇರುಸೊಪ್ಪೆಯ ರಾಣಿ ನಗಿರೆ ನಾಡಿನ ಒಡತಿ ನಾಗಲದೇವಿಯು ಶ್ರೇಷ್ಠ ಕವಯಿತ್ರಿಯು ಸೊಗಸಾದ 'ಷೋಡಶ ಭಾವನೆಯ ನೋಂಪಿ' ಎಂಬ ಚಂಪೂ ಕಾವ್ಯವನ್ನು ರಚಿಸಿದ್ದಾಳೆ. ಪಂಪನಂತೆ ನಾಗಲದೇವಿಯು ಚಂಪೂ ಪ್ರಕಾರದಲ್ಲಿ ಕಾವ್ಯವನ್ನು ರಚಿಸುತ್ತಾಳೆ. ನಾಗಲಾಂಬಿಕೆಯು ಐವತ್ತು ಅಡಿ ಎತ್ತರದ ಅತಿ ಚೆಲುವಿನ ಮಾನಸ್ತಂಭವನ್ನು ಸ್ಥಾಪನೆ ಮಾಡುತ್ತಾಳೆ. ಇವಳು ಬೆಳಕಿಗೆ ಬಂದಿರುವುದು ವಿರಳ, ಶಾಸನ ಸಾತೇನಹಳ್ಳಿ ಹಿರೇಕೆರೂರು(ತಾ) ವೆಣ್ಣಲಶೆಟ್ಟಿಕವ್ವೆ (ಕಾಳಾಮುಖಿ) ಹರಿಹರೇಶ್ವರ ದೇವಾಲಯ ೧೨೦೪. ನಾವು ಅಡಿಗೆ ಮನೆ, ಮೊರ, ಒಳಕಲ್ಲು, ಒಣಿಕೆ, ಮುಸುರಿ ತೊಳೆಯುವುದರಲ್ಲಿಯೇ ನಮ್ಮ ಜೀವನ ಮುಗಿದು ಹೋಗುತ್ತದೆ. ಇದರ ಆಚೆ ಮಹಿಳೆಯರು ಬರಬೇಕು ಎನ್ನುತ್ತಾಳೆ. (ಮಾಹಿತಿ ನೀಡಿದವರು ಕಲವೀರ ಮನ್ವಾಚಾರ, ೨೩.೬.೨೦೧೭).

ಚಾಲುಕ್ಯ ಪುಲಕೇಶಿಯ ಸೊಸೆ ವಿಜಯಾಂಕ, ವಿಜಯಮಹಾದೇವಿಯು ಸಂಸ್ಕೃತದಲ್ಲಿ ಶ್ರೇಷ್ಠ ಕವಯಿತ್ರಿ ಆಗಿದ್ದಳೆಂದು ಒಂಭತ್ತನೆಯ ಶತಮಾನದಲ್ಲಿದ್ದ ರಾಜಶೇಖರ ಹೇಳಿದ್ದಾನೆ. ಅವಳು ಕಾಳಿದಾಸನಿಗೆ ಸಮನಾದ ಕವಯಿತ್ರಿ ಎಂದು ಅವನ ಹೇಳಿಕೆ. ಆದರೆ ಆಕೆಯ ಕೃತಿಗಳು ದೊರಕಿಲ್ಲ. ಒಮ್ಮೆ ದಂಡಿ ಹಾಗೂ ವಿಜಯ ಅವರ ಮಧ್ಯೆ ವಾಗ್ವಾದ ಏರ್ಪಟ್ಟಿತ್ತು. ಸರಸ್ವತಿಯನ್ನು ವರ್ಣಿಸುವ ಸ್ಪರ್ಧೆಯಲ್ಲಿ ಅವರು ಭಾಗವಹಿಸಿದ್ದರು. ಈ ಸ್ಪರ್ಧೆಯಲ್ಲಿ ದಂಡಿಯು ಸರಸ್ವತಿಯನ್ನು ಕುರಿತು ವರ್ಣನೆಯನ್ನು ಮಾಡುವಾಗ ವಿಜಯ ಮಹಾದೇವಿ ಪ್ರತಿಸ್ಪರ್ಧಿಯಾಗಿ ವರ್ಣಿಸುವ ಮೂಲಕ ದಂಡಿಯನ್ನು ವಾದದಲ್ಲಿ ಸೋಲಿಸುತ್ತಾಳೆ. ರನ್ನ ತನ್ನ ಕೃತಿಯ ಪರೀಕ್ಷಕನಿಗೆ ಎಂಟೆರ್ದೆ ಗಳಿರಬೇಕೆಂದು ಹೇಳುತ್ತಿದ್ದನು. ಆದರೆ ವಿಜಯಾ ತನ್ನ ಹೆಮ್ಮೆಯಲ್ಲಿ ರನ್ನನ್ನು ಮೀರಿಸಿದ್ದಾಳೆ. ನನ್ನ ಕೃತಿಯನ್ನು ಪರೀಕ್ಷಿಸಲು ಯಾರಾದರೂ ಮುಂದೆ ಬಂದರೆ 'ಅವರ ತಲೆಯ ಮೇಲೆ ನಾನು ಎಡಗಾಲನ್ನು ಇಡುತ್ತೇನೆ' ಎಂದು ಹೇಳುತ್ತಾಳೆ.

ರಾಜಶೇಖರ ತನ್ನ ಕಾಲದಲ್ಲಿ ಎಲ್ಲಾ ವರ್ಗಗಳಿಂದ ಬಂದಂತಹ ಸ್ತ್ರೀ ಪುರುಷರು ಕವಿಗಳು ಮತ್ತು ಸಂಸ್ಕಾರವುಳ್ಳವರು ಆಗಿದ್ದು ವಿಶೇಷ. ಪಾಂಡಿತ್ಯ ಮತ್ತು ಪ್ರತಿಭೆಯಲ್ಲಿ ಪುರುಷರಿಗಿಂತ ಮಹಿಳೆಯರು ಶ್ರೇಷ್ಠ ಸಾಧನೆ ಮಾಡಿದ್ದನ್ನು ರಾಜಶೇಖರ ಗುರುತಿಸುತ್ತಾನೆ. ಆತನೇ ಹೇಳುವಂತೆ 'ಸುಸಂಸ್ಕೃತರ ಮಡದಿಯರು ಶಾಸ್ತ್ರ ಸಂಸ್ಕಾರವುಳ್ಳವರೂ ಕವಿಗಳೂ ಆಗಿದ್ದರು ಎನ್ನುವುದನ್ನು ಕೇಳಿಬಲ್ಲೆವು ಕಂಡುದಿಲ್ಲ' ಎಂಬ ಮಾತು ಶಾಸ್ತ್ರ ಸಾಹಿತ್ಯದಲ್ಲಿ ಮಹಿಳೆಗಿದ್ದ ಪ್ರವೇಶ ಮಿತಿಯನ್ನು ಹೇಳುತ್ತದೆ. ಇದನ್ನು ಮೀರಿ ಪಾಂಡಿತ್ಯ ಸ್ಪರ್ಧೆಗಳಲ್ಲಿ ಯಾಜ್ಞವಲ್ಕನನ್ನು ಗಾರ್ಗೆ ಸೋಲಿಸುವ 'ದಂಡಿ'ಯನ್ನು ವಿಜಯಾಂಕ ಸೋಲಿಸಿ ಬ್ರಹ್ಮಜ್ಞಾನ ಪದವಿ ಪಡೆಯುವ ಸಂಗತಿಗಳು ಮಹತ್ವದ್ದು, 'ತನ್ನ ಕೃತಿ ಪರೀಕ್ಷಿಸುವವರ ತಲೆ ಮೇಲೆ ಎಡಗಾಲನ್ನಿಕ್ಕುವೆ' ಎನ್ನುವ ವಿಜಯಾಂಕಳ ದಿಟ್ಟತನಗಳು ಹೆಣ್ಣಿನ ಅರಿವು ಹಾಗೂ ಅಸ್ತಿತ್ವದ ಬಗ್ಗೆ ಪುರುಷ ಸಮಾಜ ತೋರುವ ನಿರ್ಲಕ್ಷ್ಯವನ್ನು ಮೆಟ್ಟಿ ನಿಲ್ಲುತ್ತವೆ. ಇವು ಕನ್ನಡ ಜ್ಞಾನಪರಂಪರೆಯಲ್ಲಿ ಹೆಣ್ಣಿಗಿದ್ದ ನಿಜಾರ್ಥಗಳನ್ನು ತೋರಿಸುತ್ತವೆ.

ಹನ್ನೆರಡನೆಯ ಶತಮಾನವು ಕನ್ನಡ ಸಾಹಿತ್ಯ ರಚನೆಯಲ್ಲಿ ಒಂದು ಪ್ರಮುಖವಾದ ಚಳುವಳಿಯಾಗಿದೆ. "ಸಾಮಾಜಿಕ ಸುಧಾರಣೆಯ ಸಂದರ್ಭದಲ್ಲಿ ಸೃಷ್ಟಿಯಾದ ವಚನ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು ಕಾಣಿಸಿಕೊಂಡು ಎಲ್ಲಾ ವರ್ಗದ ಸ್ತ್ರೀಯರೂ ಸಾಹಿತ್ಯ ಸಂವೇದನೆಯಲ್ಲಿ ತೊಡಗಿಕೊಂಡಿದ್ದು ಪ್ರಮುಖವಾದ ಘಟನೆ ಸ್ತ್ರೀಯರಿಗೆ ಆತ್ಮವಿಶ್ವಾಸವನ್ನು ಸಮಾನತೆಯನ್ನು ಅಭಿವ್ಯಕ್ತಿಯ ಅವಕಾಶವನ್ನು ಒದಗಿಸಿದ್ದು ವಚನಕಾರರು. ಆದ್ದರಿಂದ ಜೇಡರದಾಸಿಮಯ್ಯನ ವಚನ "ಮೊಲೆ ಮೂಡಿ ಬಂದರೆ ಹೆಣ್ಣೆಂಬರು ಗಡ್ಡ ಮೀಸೆ ಬಂದರೆ ಗಂಡೆಂಬರು ನಡುವೆ ಸುಳಿವಾತ್ಮ ಗಂಡೂ ಅಲ್ಲ, ಹೆಣ್ಣೂ ಅಲ್ಲ ಕಣಾ ರಾಮನಾಥ."[೨೨] ಸ್ತ್ರೀ–ಪುರುಷರಲ್ಲಿ ಜೈವಿಕವಾಗಿ ವ್ಯತ್ಯಾಸವಿದೆ. ಆದರೆ ಅನುಭಾವ ಮತ್ತು ಆಲೋಚನಾ ಕ್ರಮದಲ್ಲಿ ಇಬ್ಬರೂ ಒಂದೇ ಸಮಾಜದಲ್ಲಿ ಹೆಣ್ಣಿಗೆ ಆಗುವಂತಹ ಅನ್ಯಾಯ ಮತ್ತು ಲಿಂಗರಾಜಕಾರಣವನ್ನು ಹೊಡೆದು ಹಾಕುವಲ್ಲಿ ಜೇಡರದಾಸಿಮಯ್ಯನ ವಚನ ಪ್ರಮುಖವೆನಿಸುತ್ತದೆ. ಸ್ತ್ರೀಯರಿಗೆ ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ, ಆಧ್ಯಾತ್ಮಿಕ ಸ್ವಾತಂತ್ರ್ಯಗಳ ಜೊತೆಗೆ ಭಾಷಾ ಅಭಿವ್ಯಕ್ತಿ, ಸ್ವಾತಂತ್ರ್ಯವನ್ನು ತಂದುಕೊಟ್ಟ ಕೀರ್ತಿ ವಚನ ಚಳುವಳಿಯದ್ದು.

ಕನ್ನಡ ಮಹಿಳಾ ಆಲೋಚನೆಯ ಆರಂಭದ ಕುರುಹುಗಳನ್ನು ವಚನ ಚಳುವಳಿಯಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ. "ಅಕ್ಕಮಹಾದೇವಿ, ಅಕ್ಕಮ್ಮ, ರೆಮ್ಮವ್ವೆ, ಗಂಗಮ್ಮ, ಲಕ್ಕಮ್ಮ ಮೊದಲಾದ ಮೂವತ್ತಾರಕ್ಕೂ ಹೆಚ್ಚು ಶಿವಶರಣೆಯರು ವಚನಗಳನ್ನು ರಚಿಸಿದ್ದು ಇದೆ. ಸೂಳೆ ಸಂಕವ್ವೆ, ಹೊಲತಿ ಗುಡ್ಡವ್ವೆ, ಉರಿಲಿಂಗ ಪೆದ್ದಿಯ ಪತ್ನಿ ಕಾಳವ್ವೆ, ಕುಂಬಾರ ಕೇತಲದೇವಿ, ಲಕ್ಕವ್ವೆ ಮೊದಲಾದ ದಲಿತ ಸ್ತ್ರೀಯರೂ ವಚನಗಳಲ್ಲಿ ಮಾತನಾಡಿದರು."[೨೩] ಈ ಕಾಲಘಟ್ಟದಲ್ಲಿ ಬಂದ ಮಹಿಳೆಯರು ಹೆಣ್ಣಿನ ಅರಿವು ಮತ್ತು ಅಸ್ತಿತ್ವಕ್ಕಿದ್ದ ಪಾರಂಪರಿಕ ವ್ಯಾಖ್ಯಾನಗಳನ್ನು ಪಲ್ಲಟಗೊಳಿಸಿದರು.

ಮಹಾದೇವಿಯಕ್ಕ ಹೆಣ್ತನದ ಪಾರಂಪರಿಕ ನಿರ್ವಚನವನ್ನು ಪಲ್ಲಟಗೊಳಿಸಿದ ಧೀಮಂತ ಸಾಧಕಿ 'ಹೆಣ್ಣನ್ನು ಮಾಯೆ, ರಾಕ್ಷಸಿ' ಎಂದು ದೂಷಿಸುತ್ತಾ ಸ್ತ್ರೀ ಜನ್ಮವನ್ನು ಪಾಪದ ಫಲವೆಂದು ಅವಮಾನಿಸುತ್ತ ಆಧೀನತೆಗೆ ತಳ್ಳಿದ ಸಂದರ್ಭದಲ್ಲಿ ಹುಟ್ಟಿ ಬಂದ ಅಕ್ಕಮಹಾದೇವಿ ಹೆಣ್ತನಕ್ಕಂಟಿಸಿದ್ದ ಸೂತಕಗಳನ್ನು ಸುಳ್ಳಾಗಿಸಿದಳು. ಹೆಣ್ಣಿನ ಸ್ವಾತಂತ್ರ್ಯ ಹಾಗೂ ಪಾರಮಾರ್ಥ ಸಾಧನೆಯ ಮಹಾಸಾಧಕಿಯಾಗಿ ಬೆಳೆದು ನಿಂತ ಅಸಾಮಾನ್ಯ ಶಕ್ತಿ ಚೇತನವಾಗಿದ್ದಾಳೆ.

"ವೇದಶಾಸ್ತ್ರ ಆಗಮ ಪುರಾಣಗಳಲ್ಲೆವು ಕೊಟ್ಟಣ ಕುಟ್ಟಿದ ನುಚ್ಚು ತೌಡು ಕಾಣಿಭೋ ಇವ ಕುಟ್ಟಲೇಕೆ ಕುಸುಕಲೇಕೆ."[೨೪] ವೈದಿಕ ಯುಗದ ಜ್ಞಾನದ ಪ್ರಮಾಣಗಳನ್ನೆಲ್ಲ ಕುಟ್ಟಿ ಕೇರುತ್ತಾಳೆ.

ಅಕ್ಕಮಹಾದೇವಿಯಷ್ಟೇ ಮುಖ್ಯಳಾದವಳು ನೀಲಮ್ಮ. ನೀಲಮ್ಮ ಅಕ್ಕನಿಗಿಂತ ಹೆಚ್ಚಿಗೆ ಹೆಣ್ಣಿನ ಬಗ್ಗೆ ಪ್ರಶ್ನೆಗಳನ್ನು ಎತ್ತುತ್ತಾಳೆ. ಪಿತೃಸಂಸ್ಕೃತಿಯ ಭಾಷೆಯನ್ನು ಬಳಸುತ್ತಾ, ಪಿತೃ ಸಂಸ್ಕೃತಿಯ ಭಾಷೆಯನ್ನು ಒಡೆಯುವ ಪ್ರಯತ್ನವನ್ನು ಮಾಡುತ್ತಾಳೆ. ಆ ಮೂಲಕ ಹೆಣ್ಣಿನ ಅಭಿವ್ಯಕ್ತಿಯ ಭಾಷೆಯನ್ನು ಕಟ್ಟುವ ಪ್ರಯತ್ನ ನೀಲಮ್ಮನದು. ಇರುವ ಪುರುಷ ನೆಲೆಯ ಪರಿಭಾಷೆಗಳನ್ನು ಬಳಸುತ್ತಾ ಹೊಸ ಅರ್ಥಾಂತರವನ್ನು ಸಾಧಿಸುವ ಮಹತ್ವಾಕಾಂಕ್ಷೆ ನೀಲಮ್ಮನದು ಎಂದು

ಹೇಳಬಹುದಾಗಿದೆ. ಹೆಣ್ಣನ್ನು "ದೇವಿ" ಹಾಗೂ "ದೆವ್ವ" ಎಂದು ನೋಡುವ ಎರಡು ರೂಢಿಗತ ಬಗೆಗಳ ಬಗ್ಗೆ ಅವಳಿಗೆ ಸಮ್ಮತವಿಲ್ಲ. ಹೆಣ್ಣನ್ನು ಅವಾಸ್ತವಿಕ ನೆಲೆಯಲ್ಲಿ ದೇವಿಯೆಂದು ಕರೆಯುತ್ತಲೇ ಅವಳನ್ನು 'ದೆವ್ವ' ಎಂದು ಕರೆದು ಬದುಕಿನ ಎಲ್ಲಾ ಬಗೆಯ ಅವಕಾಶಗಳಿಂದ ವಂಚಿತಳಾಗಿಸಿರುವ ನೆಲೆಗಳನ್ನು ವಿಸರ್ಜಿಸುತ್ತಾಳೆ.

"ಏಕೆನ್ನ ಪುಟ್ಟಿಸಿದೆಯಯ್ಯಾ ಹೆಣ್ಣ ಜನ್ಮದಲ್ಲಿ, ಪುಣ್ಯವಿಲ್ಲದ ಪಾಪಿಯ ಆನು ಇಹಪರಕ್ಕೆ ದೂರಳಯ್ಯ ಎನ್ನ ನಾಮ ಹೆಣ್ಣು ನಾಮವಲ್ಲಯ್ಯಾ ನಾನು ಸಿರಿಯಿದ್ದ ವಸ್ತುವಿನ ವಧುವಾದ ಕಾರಣ ಎನಗೆ ಹೆಣ್ಣ ನಾಮವಿಲ್ಲವಯ್ಯಾ."[೨೫] ಸ್ತ್ರೀ ಕುಲಕ್ಕೆ ಅಂಟಿದ ಕಳಂಕವನ್ನು ತೊಡೆದು ಹಾಕುವಂತಹ ಪ್ರಯತ್ನ ಮಾಡುತ್ತಾಳೆ. ತಾನು ಅನುಭವದಲ್ಲಿ ಹೆಣ್ಣು ಗಂಡು ಎಂಬ ಲಿಂಗವನ್ನು ಮೀರಿ ಬೆಳೆದಿದ್ದೇನೆ. ನನಗೆ ಯಾವುದೇ ನಾಮರೂಪವಿಲ್ಲ ಎಂದು ರೂಢಿಗತ ನೆಲೆಗಳನ್ನು ಪ್ರಶ್ನಿಸುತ್ತಾಳೆ.

ಆಯ್ದಕ್ಕಿ ಲಕ್ಕಮ್ಮ "ಆಸೆಯೆಂಬುದು ಶಿವಭಕ್ತರಿಗುಂಟೆ ಅಯ್ಯ? ರೋಷವೆಂಬುದು ಯಮದೂತರಿಗಲ್ಲದೆ ಅಜಾತರಿಗುಂಟೇ ಅಯ್ಯ? ಈಸಕ್ಕಿಯಾಸೆ ನಿಮಗೇಕೆ ಈಶ್ವರನೊಪ್ಪ..."[೨೬] ಅನುಭವಗೋಷ್ಠಿಯಲ್ಲಿ ಆಯ್ದಕ್ಕಿ ಮಾರಯ್ಯ ಜ್ಞಾನ ಮಗ್ನನಾಗಿ ಇರುವಾಗ ಆಯ್ದಕ್ಕಿ ಲಕ್ಕಮ್ಮ ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆ" ಎಂದು ಗಂಡನಿಗೆ ಸಮಯ ಪ್ರಜ್ಞೆಯನ್ನು ತಿಳಿಸುತ್ತಾಳೆ. 'ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ' ಹೋಗಿ ಸುರಿದು ಬನ್ನಿ ಎಂದು ಹೇಳುತ್ತಾಳೆ. ಆಸೆ ಎಂಬುದು ಅರಸರಿಗೆ, ಶ್ರೀಮಂತರಿಗೆ, ಪುರೋಹಿತರಿಗೆ ಮಾತ್ರ ಇರಬೇಕು, ಶಿವಭಕ್ತರಾದವರಿಗೆ ಆಸೆ ಇರಬಾರದು ಎಂದು ಹೇಳುತ್ತಾಳೆ. ಈ ಒಂದು ವಚನ ರಾಜಪ್ರಭುತ್ವದ ವೈದಿಕಶಾಹಿ ಅಥವಾ ಊಳಿಗಮಾನ್ಯ ವ್ಯವಸ್ಥೆ ಹೆಣ್ಣಿನ ಬಗ್ಗೆ ರೂಢಿಸಿದ್ದ ವ್ಯಾಖ್ಯಾನಗಳನ್ನು ಮತ್ತು ಮೂಢನಂಬಿಕೆಗಳನ್ನು ಮುರಿದು ಹಾಕುತ್ತದೆ. ಜ್ಞಾನದ ಲಿಂಗಾತೀತ ನೆಲೆಯನ್ನು ಇಲ್ಲಿ ಕಾಣುತ್ತೇವೆ.

'ಕೂಟಕ್ಕೆ ಸತಿಪತಿ ಎಂಬ ನಾಮವಲ್ಲದೆ, ಅರಿವಿಂಗೆ ಬೇರೊಂದೊಡಲುಂಟೆ?; ಎಂಬಲ್ಲಿ ಅರಿವಿಂಗೆ ಬೇರೊಂದು ಒಡಲು ಇಲ್ಲ. ಅನುಭಾವದಲ್ಲಿ ಸ್ತ್ರೀ ಪುರುಷರು ಒಂದೇ. 'ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ?' ಎಂಬ ದೃಢತೆ 'ಮಾರಯ್ಯಪ್ರಿಯ ಅಮರೇಶ್ವರ ಲಿಂಗವುಳ್ಳನ್ನಕ್ಕ ನನಗಾರ ಹಂಗಿಲ್ಲ' ಎಂಬ ಆತ್ಮವಿಶ್ವಾಸ ಮಾತುಗಳನ್ನು ಹೇಳುತ್ತಾಳೆ. 'ಕೈದು ಕೊಡುವರಲ್ಲದೆ ಕಲಿತನವ ಕೊಡುವರುಂಟೆ? ಹೆಣ್ಣು ಕೊಡುವರಲ್ಲದೆ ಕೂಟಕ್ಕೊಳಗಾದವರುಂಟೆ? 'ನಡೆಯಿಲ್ಲದ ನುಡಿಹಾನಿ, ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ' 'ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು' ಎಂದು ವಿವೇಕ ಹೇಳಿ ಭಕ್ತಿಗೆ ಕೈಲಾಸಕ್ಕೆ ಹೋಗಬೇಕೆಂಬ ಪತಿಯ ಅಪೇಕ್ಷೆಯನ್ನು ನೀಡಿ ಹೋದಹೆನೆಂಬಾಗ ಕೈಲಾಸವೇನು ಕೈ ಕೂಲಿಯೇ? ಎನ್ನುವ ಲಕ್ಕಮ್ಮನ ವಿವೇಕ ಗಮನಾರ್ಹವಾದದ್ದು.

ಗೊಗ್ಗವ್ವೆ ಅನುಭಾವ ಸಾಧನೆಗೆ ಮತ್ತು ಆತ್ಮಜ್ಞಾನಕ್ಕೆ ಸ್ತ್ರೀ ಪುರುಷರ ಬೇದವನ್ನು ನಿರಾಕರಿಸುತ್ತಾಳೆ. "ಮೊಲೆ ಮೂಡಿ ಬಂದಡೆ ಹೆಣ್ಣೆಂಬರು, ಮೀಸೆ ಕಾಸೆ ಬಂದಡೆ ಗಂಡೆಂಬರು ಈ ಉಭಯದ ಜ್ಞಾನ ಹೆಣ್ಣೋ ಗಂಡೋ ನಾಸ್ತಿನಾಥ."[೨೭] ಪುರುಷ ಮತ್ತು ಸ್ತ್ರೀಯರಲ್ಲಿ ಜೈವಿಕವಾಗಿ ದೇಹದಲ್ಲಿ ವ್ಯತ್ಯಾಸವಿರಬಹುದು. ಅನುಭಾವಕ್ಕೆ ಇಬ್ಬರು ಒಂದೇ ಎನ್ನುವುದು ಗೊಗ್ಗವ್ವೆಯ ನಿಲುವಾಗಿದೆ. "ಗಂಡು ಮೋಹಿಸಿ ಹೆಣ್ಣ ಹಿಡಿದಡೆ ಅದು ಒಬ್ಬರ ಒಡವೆ ಎಂದು ಅರಿಯಬೇಕು. ಹೆಣ್ಣು ಮೋಹಿಸಿ ಗಂಡ ಹಿಡಿದಡೆ ಉತ್ತರವಾವುದರಿಯಬೇಕು ಈ ಎರಡರ ಉಭಯವ ಕಳೆದು ಸುಖಿ ತಾನಾಗಬಲ್ಲಡೆ ನಾಸ್ತಿನಾಥನ ಪರಿಪೂರ್ಣನೆಂಬೆ."[೨೮] ಪುರುಷ ಪ್ರಧಾನತೆಯನ್ನು ನೇರವಾಗಿ ವಿರೋಧಿಸುತ್ತಾಳೆ. ಹೆಣ್ಣನ್ನು ಒಂದು ವಸ್ತುವಾಗಿ ನೋಡುತ್ತಾ ಬಂದ ವ್ಯವಸ್ಥೆಗಳ ವಿರುದ್ಧ ಸಿಡಿದೇಳುತ್ತಾಳೆ.

ಕೀಳು ಕುಲವೆಂಬ ಅಪಮಾನಕ್ಕೆ ಒಳಗಾದ ಮಾದರ ಜಾತಿಯ ಪರವಾಗಿ ಮಾತನಾಡಿದ ಕಾಳವ್ವೆ ಮೇಲ್ವರ್ಗಗಳ ಶ್ರೇಷ್ಠತೆಯನ್ನು ಕಟುವಾಗಿ ಟೀಕಿಸುತ್ತಾಳೆ. "ಕುರಿಕೋಳಿ ಕೆರೆಮೀನು ತಿಂಬುವವರಿಗೆಲ್ಲ ಕುಲಜ ಕುಲಜರೆಂಬರು ಶಿವಗೆ ಪಂಚಾಮೃತವ ಕರೆವ ಪಶುವತಿಂಬ ಮಾದಿಗ ಕೀಳು ಜಾತಿಯೆಂಬರು. ಅವರೆಂತು ಕೀಳುಜಾತಿಯಾದರು. ಜಾತಿಗಳು, ನೀವೇಕೆ ಕೀಳಾದಿರೋ? ಬ್ರಾಹ್ಮಣನುಂಡುದು ಪುಲ್ಲಲಿಗೆ ಶೋಭಿತವಾಗಿ ನಾಯಿ ನೆಕ್ಕಿ ಹೋಯಿತು. ಮಾದಿಗರುಂಡುದು ಪುಲ್ಲಿಗೆ, ಬ್ರಾಹ್ಮಣನಿಗೆ ಶೋಭಿತವಾಯ್ತು."[೨೯] ಆಹಾರ ಪದ್ಧತಿಯಿಂದ ಜಾತಿಯನ್ನು ಕೀಳಾಗಿಸುವುದು ಯಾವ ನ್ಯಾಯ, ಕುರಿಕೋಳಿಗಳಂಥ ಪ್ರಾಣಿಗಳನ್ನು ತಿನ್ನುವರನ್ನು ಕುಲಜರೆಂದು ಕರೆಯುತ್ತಾರೆ. ಶಿವನ ಪೂಜೆಗೆ ಪಂಚಾಮೃತವನ್ನು ನೀಡುವ ಹಸುವನ್ನು ತಿನ್ನುವ ಮಾದಿಗ ಕೀಳಾಗಲು ಸಾಧ್ಯವಿಲ್ಲ ಎಂಬುದು ಈಕೆಯ ವಾದವಾಗಿದೆ. ಕಾಳವ್ವೆಯ ಮಾತಿನಲ್ಲಿ ಶತಶತಮಾನಗಳಿಂದಲೂ ತುಳಿಸಿಕೊಂಡವರ ನೋವಿನ ಧ್ವನಿಯಿದೆ.

"ಆಡಲಿಲ್ಲವಯ್ಯಾ ನಾನು ಹೆಣ್ಣು ರೂಪಧರಿಸಿ, ನುಡಿಯಲಿಲ್ಲವಯ್ಯ ನಾನು ಹೆಣ್ಣು ರೂಪಧರಿಸಿ ನಾನು ಹೆಣ್ಣಲ್ಲದ ಕಾರಣ, ನಾನು ಇಹಪರ ನಾಸ್ತಿಯಾದವಳಯ್ಯಾ ನಾನು ಉಭಯದ ಸಂಗವ ಕಂಡು ಕಾಣದಂತಿದ್ದೆನಯ್ಯಾ ಸಂಗಯ್ಯ, ಬಸವ ಬಯಲು ಕಂಡ ಕಾರಣ."[೩೦] ನೀಲಮ್ಮ ಮುಕ್ತಾಯಕ್ಕ, ಅಕ್ಕಮಹಾದೇವಿ, ಇನ್ನೂ ಅನೇಕ ವಚನಕಾರ್ತಿಯರು ಹೆಣ್ಣುತನವನ್ನು ಮೀರುವ ಮತ್ತು ಪುರುಷತ್ವದ ಅಹಂಕಾರಗಳನ್ನು ಪ್ರಶ್ನೆ ಮಾಡುವ ವ್ಯಕ್ತಿತ್ವವನ್ನು ಹೊಂದಿದ್ದರು. ವಿಶೇಷವೆಂದರೆ ಇವರೆಲ್ಲ ಗ್ರಂಥಸ್ಥ ತಿಳುವಳಿಕೆಗಿಂತ ಲೋಕಜ್ಞಾನದಿಂದ ಸಾಧನೆಯ ಶಿಖರ ಏರಿದವರು.

ಹದಿನೇಳನೆಯ ಶತಮಾನದಲ್ಲಿ ಕಾಣಿಸಿಕೊಂಡ ಬೆರಳಣಿಕೆಯಷ್ಟು ಕವಯತ್ರಿಯರಲ್ಲಿ ಸಂಚಿಹೊನ್ನಮ್ಮನ ಹೆಸರು ಮಹತ್ವಪೂರ್ಣವಾದದ್ದು. ಈಕೆ ಚಿಕ್ಕದೇವರಾಜನ ಆಸ್ಥಾನಕ್ಕೆ ಊಳಿಗದವಳಾಗಿ ಬರುತ್ತಾಳೆ. ರಾಜನು ಅವಳ ಪ್ರತಿಭೆಯನ್ನು ನೋಡಿ ಅವಳಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ತನ್ನ ಆಸ್ಥಾನದಲ್ಲಿ ಅವಕಾಶ ಮಾಡಿಕೊಡುತ್ತಾನೆ. ಅಳಸಿಂಗರಾಯನನ್ನು ಗುರುವಾಗಿ ಸ್ವೀಕರಿಸಿ ವಿದ್ಯೆಯನ್ನು ಕಲಿತಳು. ಇವಳ ಪ್ರತಿಭೆಯನ್ನು ಗುರುತಿಸಿದ ವಿದ್ಯಾಗುರು "ಅರಸ ಕೇಳೀ ಹೊನ್ನಿ ಸರಸ ಸಾಹಿತ್ಯದ

ವರದೇವತೆ ಇವಳು ಕಾವ್ಯಾಲಂಕಾರ ನಾಟಕ ಪವಣಿಗೆ ಬಲ್ಲವಳು ಎಂದು ರಾಜ ಸಭೆಯಲ್ಲಿ ಮುಕ್ತಕಂಠದಿಂದ ಹೇಳುತ್ತಾನೆ."[೩೧] ಸಂಚಿಹೊನ್ನಮ್ಮ ರಚಿಸಿದ ಹದಿಬದೆಯ ಧರ್ಮ ಕೃತಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಹತ್ವವಾದದ್ದು.

"ಕುವರನಾದೊಡೆ ಬಂದ ಗುಣವೇನು
ಕುವರಿಯಾದೊಡೆ ಕುಂದೇನು
ಇವರೀರ್ವರೊಳ್ ಏಳ್ಗೆವಡೆದವರಿಂದ
ಸವನಿಪುದು ಇಹಪರದೇಳ್ಗೆ"[೩೨]

ಕೇವಲ ಪುರುಷ ಪ್ರಧಾನತೆಯನ್ನು ಒಪ್ಪಿಕೊಳ್ಳದೇ ಸ್ತ್ರೀ–ಪುರುಷರು ಸಮಾನರು ಎಂದು ಹೇಳುತ್ತಾಳೆ. ಗಂಡಾಗಲಿ ಹೆಣ್ಣಾಗಲಿ ಯಾವ ಲಿಂಗವಾದರೂ ಸಮಾಜದಲ್ಲಿ ಇಬ್ಬರು ಸಮಾನರು. ಅವಳಿಗೂ ಸಮಾಜದಲ್ಲಿ ಬದುಕುವುದಕ್ಕೆ ಅವಕಾಶ ಮಾಡಿಕೊಡಿ. ಹೆಣ್ಣು ಎಂದು ಅಲಕ್ಷ್ಯದಿಂದ ಕಾಣಬೇಡಿ ಎಂದು ನಿರ್ಬಿಡೆಯಿಂದ ಹೇಳುತ್ತಾಳೆ.

ಹೊನ್ನಮ್ಮ ಹದಿಬದೆಯ ಧರ್ಮದಲ್ಲಿ ಸ್ತ್ರೀ ಧೋರಣೆಯನ್ನು ಅತಿ ಸೂಕ್ಷ್ಮವಾಗಿ ಗುರುತಿಸಿರುವುದನ್ನು ಕಾಣಬಹುದಾಗಿದೆ.

"ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
ಕಣ್ಣು ಕಾಣದ ಗಾವಿಲರು"[೩೩]

ಹೆಣ್ಣು, ಚಂಚಲೆ, ಮಾಯೆ, ಪುರುಷನ ಸಾಧನೆಗೆ ಅಡ್ಡಿಯಾಗುತ್ತಾಳೆ, ಹೆಣ್ಣನ್ನು ನಂಬಿದವರು ಕೆಟ್ಟು ಹೋಗುತ್ತಾರೆ. ಹೆಣ್ಣು ಹುಟ್ಟಿದ ಮನೆಯು ಬೆಳೆಯುವುದಿಲ್ಲ. ಇನ್ನು ಅನೇಕ ರೂಢಿಗತ ಮಾತುಗಳಿಂದ ಹೆಣ್ಣನ್ನು ಕೇಡೆಂದು ಹೇಳುತ್ತಿದ್ದರೆ, ಹೊನ್ನಮ್ಮ ತನ್ನ ಕಾವ್ಯದ ಮೂಲಕ ಹೆಣ್ಣು ಕೇಡು ಅಲ್ಲ, ಕೆಡುಕಳೂ ಅಲ್ಲ ಎಂದು ನಿರೂಪಿಸುತ್ತಾಳೆ. ತಮ್ಮನೆಲ್ಲ ಪಡೆದವಳು ತಾಯಿ ಅಲ್ಲವೆ, ಮನೆಯ ಬೆಳವಣಿಗೆಗೆ ಹಾಗೂ ವಂಶವೃದ್ಧಿಗೆ ಮತ್ತು ಕುಟುಂಬದ ನಿರ್ವಹಣೆ, ಅತ್ತೆ, ಮಾವ, ಗಂಡ, ಮಗಳ ಪೋಷಣೆ ಮಾಡುವವಳಲ್ಲವೆ, ಹೆಣ್ಣನ್ನು ಭೂಮಿ ತಾಯಿಗೆ ಹೋಲಿಸುತ್ತಾರೆ. ಭೂಮಿ, ನೀರು, ಮನುಷ್ಯನಿಗೆ ಅತ್ಯವಶ್ಯಕವಾಗಿ ಬೇಕಿರುವಂತಹ ವಸ್ತುಗಳು. ಹೀಗೆ ಹೆಣ್ಣು ಸಂಸಾರದ ಕಣ್ಣು ಎಂದು ಹೇಳುತ್ತಾಳೆ.

ಇದೇ ಕಾಲಘಟ್ಟದಲ್ಲಿ ಬಂದ ಶೃಂಗಾರಮ್ಮ ಮತ್ತು ರಾಣಿ ಚೆಲುವಾಂಬೆ ಸಹ ಸಂಚಿ ಹೊನ್ನಮ್ಮನಂತೆ ಸೂಕ್ಷ್ಮವಾದ ಬುದ್ಧಿವುಳ್ಳವರು ಮತ್ತು ಪ್ರತಿಭಾವಂತರು. ಶೃಂಗಾರಮ್ಮ ಚಿಕ್ಕದೇವರಾಯನ ಆಸ್ಥಾನದಲ್ಲಿ ಆಶ್ರಯ ಪಡೆದುಕೊಂಡಿದ್ದಳು. ಇವಳು ಸಾಂಗತ್ಯ ಪ್ರಕಾರದಲ್ಲಿ ಪದ್ಮಿನೀ ಕಲ್ಯಾಣವನ್ನು ೧೮೯ ಪದ್ಯಗಳಲ್ಲಿ ರಚನೆ ಮಾಡಿದ್ದಾಳೆ. ಇದು ಚಿಕ್ಕ ಕಾವ್ಯ. ಪಿತೃಪ್ರಧಾನ ಸಮಾಜದಲ್ಲಿ ಗಂಡು

ಸಂತಾನವಿಲ್ಲದವರಿಗೆ ಮೋಕ್ಷ ಸಿಗುವುದಿಲ್ಲ ಎಂಬ ನಂಬಿಕೆಯಿಂದ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಯಾಗ, ಯಜ್ಞ, ಪೂಜೆ, ಮಾಡುತ್ತಿದ್ದರು. ಈ ಕಾಲದಲ್ಲಿ ಮಹಿಳೆಯರಿಗೆ ಆಯ್ಕೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಇರಲಿಲ್ಲ. ಹಲವಾರು ಕಟ್ಟುಪಾಡುಗಳ ಮೂಲಕ ಅವಳನ್ನು ನಾಲ್ಕು ಗೋಡೆಗಳ ಮಧ್ಯೆ ಜೀವಿಸುವಂತೆ ಮಾಡಿರುವಂತಹ ಅನೇಕ ಸಮಸ್ಯೆಗಳನ್ನು ಪದ್ಮಿನಿ ಕಲ್ಯಾಣದಲ್ಲಿ ಚರ್ಚಿಸಿದ್ದಾಳೆ.

ದೊಡ್ಡಕೃಷ್ಣರಾಜ ಒಡೆಯರ ಪತ್ನಿ ಮತ್ತು ಕಳಲೆಯ ದಳವಾಯಿ ಕಾಂತನೃಪನ ಪುತ್ರಿ, ರಾಣಿ ಚೆಲುವಾಂಬೆ, ಅರಮನೆಯ ಪರಿಸರದಲ್ಲಿಯೆ ಬೆಳೆದವಳು, ಮೈಸೂರು ಅರಸರ ಕಾಲದಲ್ಲಿ ಸಾಹಿತ್ಯ ಕ್ಷೇತ್ರಕ್ಕೆ ಪ್ರವೇಶ ಪಡೆದ ಮೊಟ್ಟ ಮೊದಲ ರಾಣಿ ಎಂದು ಗುರುತಿಸಬಹುದಾಗಿದೆ. ಚೆಲುವಾಂಬೆ ಇದ್ದಂತಹ ಕಾಲಘಟ್ಟದಲ್ಲಿ ಗಂಡು ಮಕ್ಕಳಿಗೆ ಹೆಚ್ಚಿನ ಪ್ರೋತ್ಸಾಹ ಇತ್ತು. ಗಂಡು ಮಗು ಇದ್ದರೆ ಮೋಕ್ಷ ಸಿಗುತ್ತದೆ ಎಂಬ ನಂಬಿಕೆಯ ಕಾಲವಾಗಿತ್ತು. ಹೆಣ್ಣಿನ ಪರಾವಲಂಬಿ ನೆಲೆಗಳ ಕುರಿತು ಇದ್ದ ಸಂಗತಿಗಳನ್ನು ಟೀಕಿಸುತ್ತಾಳೆ.

ವರನಂದಿ ಕಲ್ಯಾಣ ಕೃತಿಯಲ್ಲಿ ದಿಲ್ಲಿಯ ಸುಲ್ತಾನ ಗಂಡು ಮಕ್ಕಳಿದ್ದರೂ ಹೆಣ್ಣು ಮಗುವಿಗಾಗಿ ಹಂಬಲಿಸುತ್ತಿರುವುದನ್ನು ವರ್ಣಿಸುವ ರೀತಿ ಹೀಗಿದೆ.

> "ತನಯರೆಲ್ಲವ ನೋಡಿ ಸುರತಾಳ ತನಗೋರ್ವ
> ತನುಜೆಯಿಲ್ಲೆಂದು ಚಿಂತಿಸುವ
> ಮನದೊಳು ನೆನೆಯುತ ಪಲವೇಣಿಕೆಗಳನು
> ಮನದನ್ನೆಯೊಡನೆ ಪೇಳಿದನು"

ಹೆಣ್ಣು ಮಗು ಹುಟ್ಟಿದರೆ ಅಪಶಕುನ ಮತ್ತು ಅವಳು ಭೂಮಿಗೆ ಭಾರವಾಗಿರುವಳು ಎಂಬಂತಹ ಮನೋಭಾವನೆ ಹೊಂದಿದ್ದಂತಹ ಕಾಲಘಟ್ಟದಲ್ಲಿ ದೆಹಲಿಯ ಸುಲ್ತಾನನು ಹೆಣ್ಣು ಮಗುವಿಗಾಗಿ ಹಂಬಲಿಸುತ್ತಿರುವ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಹೆಣ್ಣಿನ ಶ್ರೇಷ್ಠತೆಯ ಬಗ್ಗೆ ತನ್ನ ಕಾವ್ಯದ ಮೂಲಕ ಸಾಮಾನ್ಯ ಜನರಿಗೆ ತಲುಪುವಂತೆ ಮಾಡುತ್ತಾಳೆ. ಹೆಣ್ಣು ಮಕ್ಕಳು ಇದ್ದ ಮನೆ ಶೋಭಿಸುತ್ತದೆ. ಗಂಡು ಮಗು ಹುಟ್ಟಿದಾಗ ಸಿಹಿ ಹಂಚುವುದನ್ನು ಹೆಣ್ಣು ಹುಟ್ಟಿದಾಗ ಮೌನ ವಹಿಸುವುದನ್ನು ಇಂದಿಗೂ ಕಾಣಬಹುದಾಗಿದೆ. ಆದರೆ ದಿಲ್ಲಿಯ ಸುಲ್ತಾನನು ಹೆಣ್ಣು ಮಗು ಜನಿಸಿದಾಗ ಬ್ರಾಹ್ಮಣರಿಗೆ ಅಗಣಿತ ಚಿನ್ನವನ್ನು ದಾನ ಮಾಡಿದನಂತೆ. 'ಹತ್ತು ಗಂಡು ಹಡದರ ಮತ್ತೆ ಬಂಜೆಂಬುವರ ದಟ್ಟೀಯ ಉಡುವ ಧರಣೀಯ ಹಡದರ ಬಂಜೆಂಬು ಶಬುದ ಮರತಾರ' ಎನ್ನುವ ಜನಪದ ತ್ರಿಪದಿಯ ಪ್ರಭಾವ ರಾಣಿ ಚಲುವಾಂಬೆ ಮೇಲೆ ಆದಂತಿದೆ.

ಕೃಷ್ಣಕರ್ಣಾಮೃತ ವ್ಯಾಖ್ಯೆ, ಲಾಲಿಪದ, ಅಲಮೇಲುಮ್ಮಂಗೆ ಲಾಲಿಪದ, ವೆಂಕಟಾಚಲ ಮಹಾತ್ಮ್ಯೆ ತಲಕಾವೇರಿ ಮಹಾತ್ಮ್ಯೆ ಈ ಎಲ್ಲಾ ಕೃತಿಗಳು ವೈಷ್ಣವಪರ ಭಕ್ತಿಯ ಹಿನ್ನೆಲೆಯಲ್ಲಿ ರಚಿತವಾದಂಥವು.

ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣನ್ನು ಭೋಗ ಹಾಗೂ ಸಂತಾನದ ವಸ್ತುವಾಗಿ ಸ್ವೀಕರಿಸಿದ ಸಂದರ್ಭದಲ್ಲೂ ಮಹಿಳೆಯರು ಈ ಎಲ್ಲಾ ಅಡಚಣೆಗಳನ್ನು ಮೀರಿ ಬಂದು ಸಾಹಿತ್ಯ, ಕಲೆ, ಸಂಗೀತ ಹಾಗೂ ಸಾಂಸ್ಕೃತಿಕವಾಗಿ ಬೆಳೆದು ಬಂದಿರುವುದು ಗಮನಾರ್ಹವಾದ ಸಂಗತಿಯಾಗಿದೆ. ಚೆಲುವಾಂಬೆ ಪ್ರತಿಭಾವಂತಳು ಮತ್ತು ಸೂಕ್ಷ್ಮವಾದ ವಿಚಾರವಂತಳು, ಇವಳು ಛಂದಸ್ಸು, ಅಲಂಕಾರಗಳ ಬಗ್ಗೆ ಹೆಚ್ಚು ಜ್ಞಾನವನ್ನು ಪಡೆದುಕೊಂಡಿದ್ದಳು ಎನ್ನುವುದು ಹಿರಿಮೆ. ಇವಳು ಅರಮನೆಯಲ್ಲಿ ಪಂಡಿತರು, ವಿದ್ವಾಂಸರಿಂದ ಶಿಕ್ಷಣವನ್ನು ಪಡೆದುಕೊಂಡಿದ್ದಳು. ಹಾಗಾಗಿ ಈಕೆ ಮೊಟ್ಟ ಮೊದಲಬಾರಿಗೆ 'ಕೃಷ್ಣಾಕರ್ಣಾಮೃತ' ಎಂಬ ಸಂಸ್ಕೃತ ಗ್ರಂಥಕ್ಕೆ ಟೀಕೆ ಬರೆದಿದ್ದಾಳೆ.

ಹರಿದಾಸ ಸಾಹಿತ್ಯದಲ್ಲಿ ಮಹಿಳೆಯರು ಬಂದಿರುವುದು ತುಂಬಾ ಕಡಿಮೆ. ಕೀರ್ತನ ಸಾಹಿತ್ಯದಲ್ಲಿ ಬಂದಂತಹ ಮಹಿಳೆಯರು ಸಾಂಪ್ರದಾಯಿಕ ಕುಟುಂಬದಿಂದ ಬಂದವರು ಮತ್ತು ಚಿಕ್ಕವಯಸ್ಸಿನಲ್ಲಿಯೇ ವಯಸ್ಸಾದವರನ್ನು ಮಧ್ಯವಯಸ್ಸಿನವರನ್ನು ವಿವಾಹವಾಗಿ ಸಂಸಾರದಲ್ಲಿ ನೊಂದು ಬೆಂದಂಥವರು. ಅವರಲ್ಲಿ ವಿದ್ಯಾಭ್ಯಾಸ ಕಲಿತವರು ತುಂಬಾ ಕಡಿಮೆ, ಮನೆಯಲ್ಲಿ ಹರಿಭಜನೆ, ಮನೆಯ ಹಿರಿಯರಿಂದ ಮಹಾಭಾರತದ ಕಥೆ, ಪುರಾಣದ ಕಥೆಗಳನ್ನು ಕೇಳಿ ತಿಳಿದುಕೊಂಡಿದ್ದರು.

ಹರಿದಾಸ ಪರಂಪರೆಯಲ್ಲಿ ಪ್ರಸಿದ್ಧವಾದ ಕೀರ್ತನಕಾರ್ತಿಯರಲ್ಲಿ ಗಲಗಲಿ ಅವ್ವ, ಹೆಳವನಕಟ್ಟೆ ಗಿರಿಯಮ್ಮ, ಹರಪ್ಪನಹಳ್ಳಿ ಭೀಮವ್ವ ಇತ್ಯಾದಿ. ವಿಜಾಪುರ ಜಿಲ್ಲೆಯ ಗಲಗಲಿಯ ೯೫ ವರ್ಷದ ಮುದ್ಗಾಲಾಚಾರ್ಯರಿಗೆ ೧೨ ವರ್ಷದ ಅವ್ವನನ್ನು ಕೊಟ್ಟು ಮದುವೆ ಮಾಡುತ್ತಾರೆ. ವಿವಾಹದ ಎಂಟು ದಿನಗಳ ನಂತರ ಗಂಡನನ್ನು ಕಳೆದುಕೊಂಡು ವಿಧವೆಯಾಗುತ್ತಾಳೆ. ನಂತರ ಕನ್ನಡ ಸಂಸ್ಕೃತದಲ್ಲಿ ವಿದ್ವಾಂಸಳಾಗಿ ಬೆಳೆಯುತ್ತಾಳೆ. ತನ್ನ ಮಲಮಕ್ಕಳಿಂದಲೆ ಶಿಕ್ಷಣವನ್ನು ಕಲಿಯುತ್ತಾಳೆ.

ಗಲಗಲಿ ಅವ್ವ ಶ್ರೀರಾಮೇಶ ಅಥವಾ ಶ್ರೀರಮಿ ಅರಸ ಅಂಕಿತಗಳಿಂದ ಕನ್ನಡದಲ್ಲಿ ಹಾಡುಗಳನ್ನು ರಚಿಸಿದ್ದಾಳೆ. ಶೃಂಗಾರ ತಾರತಮ್ಯ ಕೃತಿಗೆ ಅಲಂಕಾರ ತಾರತಮ್ಯ ಎಂದು ಕರೆಯುತ್ತಾರೆ. ಮುಯ್ಯದ(ಆಯಿರಿ) ಹಾಡು, ಮೋರೆಗೆ ನೀರು ತಂದ ಹಾಡುಗಳು, ಬೀಗರ ಹಾಡುಗಳು ಮುಖ್ಯವಾಗಿ ಅವ್ವನ ಸುಮಾರು ೨೬೬ ಕೀರ್ತನೆಗಳು ದೊರೆತಿವೆ. ಇವನ್ನು ಬಾಗಲಕೋಟೆಯ ಹಣವಂತರಾವ ತಾಸಗಾಂವಕರ ಅವರು ಸಂಗ್ರಹಿಸಿ ಸಂಪಾದಿಸಿದ್ದಾರೆ. ಈಕೆ ವಿದ್ವತ್ ಗೋಷ್ಠಿಗಳಲ್ಲಿ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದಳು. ಅಪ್ರಾಪ್ತ ವಯಸ್ಸಿನಲ್ಲಿ ಮದುವೆ ಆದ್ದರಿಂದ ಆಗುವ ಸಂಕಟಗಳು ಪತಿರಹಿತ ಬದುಕಿನ ಸಾಂಪ್ರದಾಯಿಕ ದೃಷ್ಟಿಕೋನಗಳು ಹೆಣ್ಣನ್ನು ಹುರಿದು ಮುಕ್ಕುವ ಹಲವು ಇಕ್ಕಟ್ಟುಗಳನ್ನು ತನ್ನ ಕೀರ್ತನೆಗಳಲ್ಲಿ ಹಿಡಿದಿಟ್ಟಿದ್ದಾಳೆ.

ಹರಿದಾಸ ಸಾಹಿತ್ಯದ ರಚನೆಯಲ್ಲಿ ಅತಿ ಹೆಚ್ಚು ತೊಡಗಿಕೊಂಡವಳು ಹೆಳವನಕಟ್ಟೆ ಗಿರಿಯಮ್ಮ. ಬಾಲ್ಯದಲ್ಲಿಯೇ ತಂದೆ ತಾಯಿಯನ್ನು ಕಳೆದುಕೊಂಡಿದ್ದ ಆಕೆ ಹರಿ ಭಜನೆ ಮಾಡುವುದರ ಮೂಲಕ ಹೆತ್ತವರು ಅಗಲಿದ ನೋವನ್ನು ಮರೆಯುತ್ತಿದ್ದಳು. ಈಕೆ 'ಹೆಳವನಕಟ್ಟೆ ರಂಗಯ್ಯ' ಎನ್ನುವ

ಅಂಕಿತದಲ್ಲಿ ಕಾವ್ಯ ರಚಿಸಿದಳು. ಈಕೆಯ ಲಘು ಕಾವ್ಯಗಳು ೪೦ಕ್ಕಿಂತ ಹೆಚ್ಚು ಕೀರ್ತನೆಗಳು ದೊರೆತಿವೆ. ಚಂದ್ರಹಾಸನ ಕಥೆ, ಉದ್ದಾಳಿಕನ ಕಥೆ, ಸೀತಾಕಲ್ಯಾಣ, ಶಂಕರಗಂಡನ ಹಾಡು, ಲವಕುಶರ ಕಾಳಗ, ಬ್ರಹ್ಮಕೊರವಂಜಿ, ಕೃಷ್ಣಕೊರವಂಜಿ, ಪತಿದಾನ ಕೊಟ್ಟ ಹಾಡು, ಭಾಗವತ ರಾಮಾಯಣ ಇವು ಅವಳು ರಚಿಸಿದಂತಹ ಪ್ರಮುಖ ಕೃತಿಗಳು. ಹೆಳವನಕಟ್ಟೆ ಗಿರಿಯಮ್ಮ ಹೆಣ್ಣಾಗಿ ಹುಟ್ಟಿ ವೈಯಕ್ತಿಕ ಜೀವನದಲ್ಲಿ ಹಲವಾರು ನೋವುಗಳನ್ನು ಎದುರಿಸಿದ ಸಂಗತಿಗಳನ್ನು ತನ್ನ ಕಾವ್ಯ ಮತ್ತು ಕೀರ್ತನೆಗಳಲ್ಲಿ ಹೇಳಿದ್ದಾಳೆ.

ಓದು ಬರಹ ಕಲಿಯದ ಗ್ರಾಮೀಣ ಪ್ರದೇಶದಿಂದ ಬೆಳೆದು ಬಂದು ಸರಳವಾದ ಭಾಷೆಯಲ್ಲಿ ಜನಸಾಮಾನ್ಯರ ಮನಮುಟ್ಟುವಂತೆ ಕೃತಿಯನ್ನು ರಚಿಸಿರುವ ಕೀರ್ತಿ ಹರಪನಹಳ್ಳಿ ಭೀಮವ್ವನಿಗೆ ಸಲ್ಲುತ್ತದೆ. 'ಭೀಮೇಶ ಕೃಷ್ಣ'ನಾದ ಶ್ರೀಹರಿಯ ಅನುಗ್ರಹದಿಂದ ಕನ್ನಡ ಸಾಹಿತ್ಯ ಭಂಡಾರವನ್ನು ಶ್ರೀಮಂತಗೊಳಿಸಿದ್ದಾಳೆ. ಭೀಮವ್ವನ ಬದುಕು ಹೂವಿನ ಹಾಸಿಗೆಯಾಗಿರಲಿಲ್ಲ. ಶಿಕ್ಷಣದಿಂದ ವಂಚಿತಳಾದ ಆಕೆಗೆ ಚಿಕ್ಕವಯಸ್ಸಿನಲ್ಲಿಯೇ ವೈದವ್ಯ ಪ್ರಾಪ್ತವಾಯಿತು. ಜೀವನದ ಯೌವ್ವನಾವಸ್ಥೆಯಲ್ಲಿಯೇ ಒದಗಿದ ಈ ಆಘಾತದಿಂದ ಭೀಮವ್ವ ವಿಚಲಿತಳಾಗಲಿಲ್ಲ. ನಿರಾಶೆಯ ಕೂಪದಲ್ಲಿ ಬಿದ್ದು ಪಲಾಯನ ವಾದಿಯಾಗಲಿಲ್ಲ. ಬದುಕನ್ನು ಒಂದು ಸವಾಲಾಗಿ ಸ್ವೀಕರಿಸಿದಳು. "ಮನವೆ ಈ ಜನುಮ ತಪ್ಪಿದ ಮೇಲೆ ಯಾವ ಸಾಧನೆಯೂ ನಿಶ್ಚಯವಿಲ್ಲ. ವಿಜಯ ವಿಠಲ ಬಲ್ಲ" ಎಂಬ ವಿಜಯದಾಸರ ವಾಣಿಯನ್ನು ತನ್ನ ಬದುಕಿನ ಧ್ಯೇಯವಾಕ್ಯವಾಗಿ ಸ್ವೀಕರಿಸಿ ಇಡೀ ಸ್ತ್ರೀಕುಲ ಹೆಮ್ಮೆ ಪಡುವಂತಹ ಸಾಧನೆಯನ್ನು ಮಾಡಿದಳು.

ಭೀಮವ್ವನ ಮನೆಯಲ್ಲಿ ಹೆಣ್ಣಾದವಳು ಹರಿಕೀರ್ತನೆಗಳನ್ನು ಹಾಡಬಾರದೆಂಬ ಅಡ್ಡಿ ಆತಂಕಗಳಿದ್ದವು. ಆದರೂ ದೀರ್ಘವಾದ ಕೀರ್ತನೆಗಳು, ನಳಚರಿತ್ರೆ, ಮುಯ್ಯದ ಹಾಡು, ಪತಿದಾನಕೊಟ್ಟ ಹಾಡು, ಶಕುಂತಲ ದುಷ್ಯಂತ ಮಹಾರಾಜನ ಹಾಡು, ರತಿಕಲ್ಯಾಣ ಮತ್ತು ಸುಭದ್ರಾ ಕಲ್ಯಾಣ ಎಂಬ ದೀರ್ಘವಾದ ಕೀರ್ತನೆಗಳನ್ನು ರಚಿಸಿದ್ದಾರೆ. ಶ್ರೀ ಹರಿಯ ಗುಣ ಮಹಿಮೆಗಳನ್ನು ಕೊಂಡಾಡುತ್ತಾ ಆಕೆ ಕಾಶಿ, ಸೋದೆ, ಮಂತ್ರಾಲಯ, ತಿರುಪತಿ, ಉಡುಪಿ, ಮಳಖೇಡ ಮುಂತಾದ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿದಳು. ಕೆಲವು ಹೆಂಗಸರು ಅವಳ ಹಾಡಿನ ಮೋಡಿಗೆ ವಶವಾಗಿದ್ದರು. ತಮಗೆ ಇಷ್ಟವಾದ ಹಾಡುಗಳನ್ನು ಅವಳಿಂದ ಹೇಳಿಸುತ್ತಿದ್ದರು. ಪ್ರತಿನಿತ್ಯವೂ ಮನೆಯಲ್ಲಿ ಅವುಗಳನ್ನು ಭಕ್ತಿಯಿಂದ ಹಾಡಿಕೊಳ್ಳುತ್ತಿದ್ದರು.

ಬುಡಕಟ್ಟು, ಜಾನಪದ, ವಚನಕಾರ್ತಿಯರು, ಕೀರ್ತನಕಾರ್ತಿಯರು ಅಗಾಧವಾದ ಅನುಭವ ಲೋಕವನ್ನೆ ಅನಾವರಣ ಮಾಡಿದವರು. ತಮ್ಮ ಒಳಗನ್ನು ನೋಡಿಕೊಂಡವರು ಮನದ ಸಂಕಟಗಳಿಗೆ ಅಭಿವ್ಯಕ್ತಿಯ ರೂಪ ನೀಡಿದರು. ವಿಚಿತ್ರವೆಂದರೆ ಕನ್ನಡ ಗ್ರಂಥಸಂಪಾದನೆಯ ಶಾಸ್ತ್ರೀಯ ವಿಧಾನಗಳು ಇವರ ಅಭಿವ್ಯಕ್ತಿ ಜಗತ್ತನ್ನು ಸಾಹಿತ್ಯವೆಂದೇ ಪರಿಗಣಿಸಲಿಲ್ಲ. ಶತಮಾನಗಳ ಕಾಲ ಕಾಯಬೇಕಾಯಿತು. ಕನ್ನಡ ಭಾಷೆಗಿರುವ ದ್ರವಗುಣ ರೂಢಿಗತ ಶಾಸ್ತ್ರೀಯ ವೈಧಾನಿಕತೆಗೆ ನಿಲುಕದು.

ಹೆಣ್ಣಿನ ಭಾಷೆಗೂ ಇಂಥ ದ್ರವಗುಣವಿದೆ. ಆ ಕಾರಣ ಆಯ್ದಕ್ಕಿ ಲಕ್ಕಮ್ಮ, ಅಕ್ಕಮ, ಸಂಚಿಹೊನ್ನಮ್ಮ, ಗಲಗಲಿ ಅವ್ವ, ಹೆಳವನಕಟ್ಟೆ ಗಿರಿಯಮ್ಮನ್ನ ಮಾತನಾಡಿಸಲು, ಹಾಡಿಸಲು ಹಚ್ಚಿತು. ಹಾಡು ಅನ್ನುವುದೇ ಸ್ವಚ್ಛಂದ ರೂಪ. ಇವರೆಲ್ಲ ಹಾಡಿನರೂಪದ ಮೂಲಕವೇ ತಮಗೆ ಬೇಕಾದ ಬರಹದ ಸ್ವಾತಂತ್ರ್ಯವನ್ನು ತಾತ್ವಿಕ ನೆಲೆಗಟ್ಟನ್ನು ದಕ್ಕಿಸಿಕೊಳ್ಳುತ್ತಾರೆ. ಹರಿದಾಸ ಪಂಥದ ಮಹಿಳೆಯರು ಬರೆದ ಲಾಲಿಪದ, ಸೋಬಾನೆ ಹಾಡು, ಭೂಮದ ಪದ ಸ್ತ್ರೀಲೋಕದ ಕ್ರಿಯಾಶೀಲ ನೆಲೆಗಳನ್ನು ಬದುಕಿನ ಶ್ರದ್ಧೆಯನ್ನು ಕಟ್ಟಿಕೊಡುವಂಥವು. ಅದಕ್ಕೂ ಮೀರಿ ಆಹಾರ, ಸಂಸ್ಕೃತಿ, ಪಾಲಿನ ಸಂಸ್ಕೃತಿಯಲ್ಲಿ ಹೆಣ್ಣು ಪಡೆದ ತಜ್ಞತೆಯನ್ನು ಹೇಳುವಂಥವು. ಇಂಥ ಸ್ವಾನುಭವಲೋಕ ಶಾಸ್ತ್ರ ಶುದ್ಧತೆಯ ಹಂಗಿನಲ್ಲಿ ಉಪೇಕ್ಷೆಗೆ ಒಳಗಾಯಿತು. ಇದು ಸಾಹಿತ್ಯ ಅಥವಾ ಗ್ರಂಥಸಂಪಾದನೆ ವ್ಯಾಪ್ತಿಗೆ ಬರಲೇ ಇಲ್ಲ. ಹೆಣ್ಣಿನ ಸ್ವಾನುಭವಶೀಲತೆಯನ್ನು ನಿರಾಕರಿಸುವ ಗ್ರಂಥಸಂಪಾದನ ವೈಧಾನಿಕತೆಗಳನ್ನೇ ನಾವು ಇಂದು ಮರುಪರಿಶೀಲಿಸಬೇಕಾದ ಅಗತ್ಯವಿದೆ ಎನ್ನುವುದನ್ನು ಈ ಹೆಣ್ಣಿನ ಅಭಿವ್ಯಕ್ತಿಯ ವಿಧಾನಗಳು ಒತ್ತಿ ಹೇಳುತ್ತವೆ. ಮತ್ತೊಂದು ಅರ್ಥದಲ್ಲಿ ಹೇಳುವುದಾದರೆ 'ಸಾಹಿತ್ಯವೆಂಬ ಸಿದ್ಧ ಮತ್ತು ಶುದ್ಧ ಕಲ್ಪನೆಯನ್ನೇ ಪೆನ್ನು ಪೇಪರಿನ ಅಗತ್ಯವನ್ನೇ ನಿರಾಕರಿಸುತ್ತವೆ. ಇದು ಮಹಿಳೆ ಮತ್ತು ಕನ್ನಡ ಜ್ಞಾನ ಸ್ವರೂಪದ ನಿದರ್ಶನವಾಗಿದೆ.

ಒಟ್ಟು ಭಾರತೀಯ ಹಾಗೂ ಕನ್ನಡ ಸಾಹಿತ್ಯವನ್ನು ಸಿಂಹಾವಲೋಕನ ಮಾಡಿದಾಗ ಮುಖ್ಯವಾಗಿ ಇಲ್ಲಿ ಕಂಡುಬರುವ ವಿಚಾರವೆಂದರೆ ಹೆಣ್ಣಿನ ತಿಳುವಳಿಕೆಯನ್ನು ಲೌಕಿಕ ಹಾಗೂ ಬೌದ್ಧಿಕ ನೆಲೆಗಳು ತೀರ ಸರಳವಾಗಿ ಗ್ರಹಿಸಿದ್ದು. ಸ್ತ್ರೀ ಗರತಿಯಾಗಿರಲಿ, ವಾರಾಂಗನೆಯಾಗಿರಲಿ, ರಾಜ ಅಥವಾ ಪುರೋಹಿತ ಮನೆತನದವಳಾಗಿರಲಿ, ಸಾಮಾನ್ಯ ಸ್ತ್ರೀಯಾಗಿರಲಿ, ರಾಜಕಾರಣ, ಯುದ್ಧ ಅನೇಕ ಧಾರ್ಮಿಕ ಕಟ್ಟುಪಾಡುಗಳು, ಮೌಢ್ಯಗಳು ಅವಳನ್ನು ಅತಂತ್ರ ಸ್ಥಿತಿಗೆ ತಳ್ಳಿದೆ. ಹೆಣ್ಣಿನ ದೈಹಿಕ ಅಸ್ತಿತ್ವವನ್ನೇ ನಿರಾಕರಿಸುವ ವಾತಾವರಣದಲ್ಲಿ ಅವಳ ಲೋಕಜ್ಞಾನವನ್ನು ಗಂಭೀರವಾಗಿ ಪರಿಗಣಿಸಲಾದೀತೆ. ಆದರೂ ಕಾಲದ ಪ್ರವಾಹದಲ್ಲಿ ಹೆಣ್ಣು ತನ್ನ ದೈಹಿಕ ಹಾಗೂ ಬೌದ್ಧಿಕ ಅಸ್ತಿತ್ವಕ್ಕಾಗಿ ಹೆಣಗಾಡಿದ ಚರಿತ್ರೆ ಕುತೂಹಲವಾದಂಥದ್ದು. ಕುಟುಂಬ, ಅಧ್ಯಾತ್ಮ, ಓದು, ವಿದ್ಯೆ, ಬರಹ, ಶಿಕ್ಷಣ ಹೀಗೆ ವಿವಿಧ ರಂಗಗಳಲ್ಲಿ ಅನಿವಾರ್ಯವಾಗಿಯೋ ಇಲ್ಲವೆ ಸಾಂದರ್ಭಿಕವಾಗಿಯೋ ಪ್ರವೇಶ ಪಡೆದ ರೀತಿ ಅವಳದೇ ಆದ ವಿಚಾರ ಸ್ವಾತಂತ್ರ್ಯವನ್ನು ಸ್ಥಾಪಿಸಲು ಸಾಧ್ಯವಾಗಿರುವುದನ್ನು ಗ್ರಹಿಸಬಹುದಾಗಿದೆ. ವಿಶೇಷವಾಗಿ ಮಧ್ಯ ಹಾಗೂ ಆಧುನಿಕ ಕಾಲಘಟ್ಟದಲ್ಲಿ ಹೆಣ್ಣಿನ ಜ್ಞಾನದ ನೆಲೆಗಳು ಒಂದಷ್ಟು ನಿಖರವಾಗಿರುವುದನ್ನು ಗುರುತಿಸಿ ಸಮಾಧಾನ ಪಟ್ಟುಕೊಳ್ಳಬಹುದಾಗಿದೆ. ಏಕೆಂದರೆ ಸೃಜನಶೀಲ ಎಂದು ಗುರುತಿಸುವ ಬರಹ ಪ್ರಕಾರದಲ್ಲಿ ಕಾಣುವಷ್ಟು ನಿರರ್ಗಳತೆ ಶಾಸ್ತ್ರ ಸಾಹಿತ್ಯದಲ್ಲಿ ಕಾಣುವುದಿಲ್ಲ. ಈ ಕಾಣದಿರುವಿಕೆಗೆ ಕಾರಣಗಳೇನು ಎಂಬ ತೊಡಕನ್ನು ಬಿಡಿಸಿಕೊಳ್ಳುವುದೇ ಈ ಅಧ್ಯಯನದ ಬಹುಮುಖ್ಯ ಉದ್ದೇಶವಾಗಿದೆ. ಅದಕ್ಕಾಗಿ ಇಡೀ ಪರಂಪರೆಯನ್ನು ಮಹಿಳಾ ಸಂವೇದನೆಯ ನೆಲೆಯಲ್ಲಿ ಅವಲೋಕಿಸಿ ಮುಂದಿನ ಚಿಂತನೆಗೆ ಬೇಕಾದ ತಳಹದಿಯನ್ನು ಈ ಮೂಲಕ ಕಲ್ಪಿಸಿಕೊಳ್ಳಲಾಗಿದೆ.

ಅಡಿಟಿಪ್ಪಣಿಗಳು

೧. ಜಿ. ರಾಮಕೃಷ್ಣ, ಹೊಸತು, ಋಗ್ವೇದ ಪ್ರವೇಶಿಕೆ ಐತಿಹ್ಯ ಮತ್ತು ವಾಸ್ತವ, ಪು.೧೭, ೨೦೧೫ ಮಾರ್ಚ್

೨. ವೆಂಕಟಲಕ್ಷ್ಮಿ, ಕನ್ನಡ ಲೇಖಕಿಯ ನೆಲೆ-ಬೆಲೆ, ಪು.೪, ೧೯೯೧

೩. ಮಲ್ಲಿಕಾ ಘಂಟಿ, ತನುಕರಗದವರಲ್ಲಿ, ಪು.೧೮೩, ೨೦೦೦

೪. ಅದೇ, ಪು.೮೩, ೨೦೦೦

೫. ಅದೇ, ಪು.೮೪

೬. ಭಾರತೀಯರು, ಪು.೨೬(ಮಾಹಿತಿ ಅಪೂರ್ಣ)

೭. ಅದೇ, ಪು.೨೬

೮. ಅದೇ, ಪು.೨೭

೯. ಅದೇ, ಪು.೨೭

೧೦. ಅದೇ, ಪು.೨೭

೧೧. ಸತೀಶ ಎಂ.ಈ., ಸ್ತ್ರೀವಾದ ಮತ್ತು ಭಾರತೀಯತೆ, ಪು.೪, ೨೦೧೨

೧೨. ಅದೇ, ಪು.೬

೧೩. ಗಾಯಿತ್ರಿ ನಾವಡ, ಮಹಿಳಾ ಸಂಕಥನ, ಪು.೪೧, ೨೦೦೩

೧೪. ಅದೇ, ಪು.೪೨

೧೫. ಅದೇ, ಪು.೪೩

೧೬. ರೂಪ ಹಾಸನ, ಮಹಿಳೆ ಮತ್ತು ಆಧುನಿಕತೆಯ ಸವಾಲುಗಳು, ಪು.೩, ೨೦೧೦

೧೭. ಆರ್ಕೆ ಮಣಿಪಾಲ, ವಿಮರ್ಶೆಯ ಸವಾಲು, ಪು.೪೮, ೨೦೦೬

೧೮. ಗಾಯಿತ್ರಿ ನಾವಡ, ವಿರಚನೆ, ಪು.೯, ೧೯೯೭

೧೯. ರಂಗಾರೆಡ್ಡಿ, ಬಂಡಾಯ ಜಾನಪದ, ಪು.೫೮, ೧೯೯೫

೨೦. ಸಮಗ್ರದಾಸ ಸಾಹಿತ್ಯ ಸಂ.೧೮, ಭಾಗ-೧, ಪು.೨೧೦

೨೧. ತೀ.ನಂ.ಶ್ರೀಕಂಠಯ್ಯ, ಭಾರತೀಯ ಕಾವ್ಯಮೀಮಾಂಸೆ, ಪು.೨೯; ೨೦೧೩

೨೨. ವಿವಿಧ ಲೇಖಕರು, ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಪು.೬೮, ೨೦೦೬

೨೩. ಕನ್ನಡ ವಿಷಯ ವಿಶ್ವಕೋಶ, ಸಂ.೧, ಪು.೩೧೭, ೨೦೦೫

೨೪. ವೀರಣ್ಣ ರಾಜೂರ, ಶಿವಶರಣೆಯರ ವಚನ ಸಂಪುಟ, ಪು.೯೪, ೧೯೯೩

೨೫. ಎಚ್.ಎಸ್.ಶ್ರೀಮತಿ, ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪು.೧೧೮, ೨೦೧೦

೨೬. ವೀರಣ್ಣ ರಾಜೂರ, ಶಿವಶರಣೆಯರ ವಚನ ಸಂಪುಟ, ಪು.೨೦೦, ೧೯೯೩

೨೭. ಶ್ರೀಮತಿ ಆರ್ಯಾಂಬ ಪಟ್ಟಾಬಿ, ಮಹಿಳಾ ಸಾಹಿತ್ಯ ಸಮೀಕ್ಷೆ, ಪು.೯೪, ೨೦೦೪

೨೮. ವಿವಿಧ ಲೇಖಕರು, ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ, ಪು.೨೦. ೧೯೯೩

೨೯. ಅದೇ, ಪು.೧೯

೩೦. ಆಶಾದೇವಿ ಎಂ.ಎಸ್., ಸ್ತ್ರೀಮತವನುತ್ತರಿಸಲಾಗದೆ?, ಪು.೪೯

೩೧. ಎಚ್.ಎಸ್.ಶ್ರೀಮತಿ, ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪು.೧೭೪, ೨೦೧೦

೩೨. ಕಮಲಾ ಹಂಪನಾ, ಬೊಗಸೆ ಮಹಿಳೆ ಸುತ್ತಮುತ್ತ, ಪು.೧೮೮, ೨೦೦೩

೩೩. ವಿವಿಧ ಲೇಖಕರು, ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಪು.೭೪, ೨೦೦೬

ಅಧ್ಯಾಯ ಮೂರು

ಮಹಿಳಾ ಕನ್ನಡ ಗ್ರಂಥಸಂಪಾದನೆಯ ಇತಿಹಾಸ ಮತ್ತು ಸ್ವರೂಪ

೩.೧. ಆಧುನಿಕ ಪೂರ್ವ
೩.೨. ಆಧುನಿಕ

ಅಧ್ಯಾಯ ಮೂರು

ಮಹಿಳಾ ಕನ್ನಡ ಗ್ರಂಥಸಂಪಾದನೆಯ ಇತಿಹಾಸ ಮತ್ತು ಸ್ವರೂಪ

ಗ್ರಂಥಸಂಪಾದನೆ ಎಂದರೆ ಕವಿಯ ಗೈರುಹಾಜರಿಯಲ್ಲಿ ಆತನ ಕೃತಿ ಮತ್ತು ಪ್ರತಿಗಳ ಸಹಾಯದಿಂದ ಕವಿಪಾಠದ ಸ್ವರೂಪವನ್ನು ಖಚಿತಪಡಿಸುವ ಹಾಗೂ ಸಿದ್ಧಪಡಿಸುವ ಕಾರ್ಯ. ಈ ಕ್ರಿಯೆ ಪ್ರಾಚೀನ ಕಾಲದಿಂದಲೂ ಭಾರತೀಯರಲ್ಲಿ ಬೆಳೆದು ಬಂದಿದೆ. ಓಲೆಗರಿ, ತಾಳೆಪ್ರತಿ, ಕೋರಿಕಾಗದಲ್ಲಿ ಕವಿ ಬರೆದ ಅಥವಾ ಲಿಪಿಕಾರನು ಸಿದ್ಧಪಡಿಸಿದ ಪ್ರತಿಗಳಲ್ಲಿ ಅಕ್ಷರ ಸ್ಖಾಲಿತ್ಯ, ಲಿಪಿದೋಷ, ವ್ಯಾಕರಣ ಹಾಗೂ ಅರ್ಥದೋಷಗಳಿದ್ದರೆ ಕವಿಯ ಭಾವಕ್ಕೆ ಹತ್ತಿರವಾಗುವಂತೆ ಅದನ್ನು ವಿವಿಧ ಪ್ರತಿಗಳಿಂದ ಶೋಧಿಸಿ ಅಥವಾ ಊಹಿಸಿ ಸ್ಪಷ್ಟ ಅರ್ಥ ಗೋಚರವಾಗುವಂತೆ ಸಿದ್ಧಪಡಿಸುವುದೇ ಗ್ರಂಥಸಂಪಾದನೆ ಎಂಬುದು ಸಾಮಾನ್ಯ ಅರ್ಥ. ಗ್ರಂಥಸಂಪಾದನೆಯ ಈ ಪರಿಕಲ್ಪನೆಯೇ ಸ್ವಾನುಭವ ಪ್ರಧಾನವಾದ ಹೆಣ್ಣಿನ ಅಭಿವ್ಯಕ್ತಿ ಹಾಗೂ ಅರಿವಿನ ಪ್ರಜ್ಞೆಯನ್ನು ನಿರಾಕರಿಸುತ್ತದೆ ಎಂಬುದು ಗಮನಾರ್ಹ.

ಗ್ರಂಥಸಂಪಾದನೆಯ ವಿವರವನ್ನು ತಿಳಿಯುವ ಮೊದಲು ಗ್ರಂಥ ಎಂದರೇನು? ಎಂಬುದನ್ನು ತಿಳಿಯುವುದು ಬಹುಮುಖ್ಯವಾದ ವಿಷಯವಾಗಿದೆ. ಮೂಲತಃ ನಮ್ಮ ವಿದ್ವಾಂಸರು ಹೇಳುವಂತೆ 'ಗ್ರಂಥ' ಎಂದರೆ ಅರ್ಥವತ್ತಾದ ಬರವಣಿಗೆ ಅಥವಾ ಲೇಖನ. ಇದು ಇಂಗ್ಲೀಷ್‌ನ ಟೆಕ್ಸ್ಟ್ ಎಂಬ ಪದಕ್ಕೆ ಸಂವಾದಿಯಾದುದು. ಅಂದರೆ ಬರೆದ ದಾಖಲೆ ಅರ್ಥವತ್ತಾಗಿದ್ದರೆ ಗ್ರಂಥ ಎನಿಸಿಕೊಳ್ಳುತ್ತದೆ. ಗ್ರಂಥ ಎಂಬ ಶಬ್ದವನ್ನು ಸಾಧಾರಣವಾಗಿ ಪುಸ್ತಕ ಎಂಬರ್ಥದಲ್ಲಿ ಇತ್ತೀಚೆಗೆ ಬಳಸುವುದು ರೂಢಿಯಾಗಿದೆ.

ಒಟ್ಟಿನಲ್ಲಿ ಬರವಣಿಗೆಯನ್ನು 'ಗ್ರಂಥ'ವೆಂದು ಗುರುತಿಸಲಾಗಿದೆ. ಪ್ರಾಚೀನ ಶಾಸನಗಳಲ್ಲಿ ಕಂಡುಬರುವ ಬರವಣಿಗೆ ಒಂದು ರೀತಿಯ ಗ್ರಂಥವಾದರೆ, ಪುಸ್ತಕಗಳದ್ದು ಮತ್ತೊಂದು ಬಗೆ. ಪ್ರಾಚೀನ ಕಾಲದಲ್ಲಿ ಒಂದು ಸಾಲಿಗೆ 'ಗ್ರಂಥ' ಲೇಖನ, ಬರಹವೆಂಬ ಅರ್ಥವಿತ್ತು. ನಂತರದ ಕಾಲದಲ್ಲಿ ಪೂರ್ಣಪ್ರಮಾಣದ ಪುಸ್ತಕದ ಸ್ವರೂಪ ಗ್ರಂಥದ ಸ್ಥಾನವನ್ನು ಪಡೆಯಿತು. ಬ್ರಿಟಿಷರ ಪುಸ್ತಕ ರೂಪದ ವಿದ್ಯೆಯಿಂದಾಗಿ ಬರಹಕ್ಕೆ ಗ್ರಂಥಸ್ಥತೆ ಪ್ರಾಪ್ತಿಯಾಯಿತು.

ಆಕ್ಸ್‌ಫರ್ಡ್ ಇಂಗ್ಲಿಷ್ ನಿಘಂಟುವಿನಲ್ಲಿ Text ಪದಕ್ಕೆ Authometic words of a document or passage or book. ಮೂಲ ಗ್ರಂಥ, ಮೂಲ ಪಾಠ ಎಂಬರ್ಥ ನೀಡಲಾಗಿದೆ. ಕನ್ನಡ

ನಿಘಂಟುಗಳ ಪ್ರಕಾರ ಗ್ರಂಥವೆಂದರೆ ಒಂದು ಕಟ್ಟು, ಕಟ್ಟುವಿಕೆ, ಗದ್ಯ ಇಲ್ಲವೆ ಪದ್ಯ ಬರಹ ಎಂಬರ್ಥ ಬರುತ್ತದೆ. ಅನಂತರ ಅದು ಓಲೆ, ತಾಳೆಗರಿಗಳ ಅಥವಾ ಬೇರೆ ಬೇರೆ ಬಗೆಯ ಪುಸ್ತಕ, ಹೊತ್ತಿಗೆ ಎಂಬರ್ಥವನ್ನು ಪಡೆಯಿತು. ಸಂಸ್ಕೃತದ 'ಗ್ರಂಥ' ಎಂಬುದಕ್ಕೆ ಸಮಾನವಾಗಿ 'ಕಟ್ಟು' ಅಂದರೆ ಓಲೆಗರಿಗಳ ಪುಸ್ತಕ ಎಂಬರ್ಥ ಪ್ರಚಲಿತವಾಯಿತು.

ಇನ್ನು 'ಸಂಪಾದನೆ' ಎಂಬ ಪದದ ಅರ್ಥ ವಿಶಾಲಾರ್ಥದಲ್ಲಿ 'ಗಳಿಸು, ಸಂಗ್ರಹಿಸು, ಕೂಡಿಸು' ಎಂಬುದಾಗಿದೆ. ಆದ್ದರಿಂದ 'ಗ್ರಂಥ ಸಂಪಾದನೆ' ಅಂದರೆ 'ಗ್ರಂಥಗಳ ಸಂಗ್ರಹವೇ' ಗ್ರಂಥಸಂಪಾದನೆ ಎಂದು ಅನೇಕರು ಸರಳವಾಗಿ ಅರ್ಥೈಸುತ್ತಾರೆ. ಈ ಅರ್ಥದಿಂದಲೇ ಇತ್ತೀಚೆಗೆ ಬರಹಗಳ ಸಮೂಹವನ್ನೋ, ಲೇಖನಗಳ ಸಂಗ್ರಹವನೋ, ಕಾವ್ಯ, ಕತೆಗಳ ಸಂಗ್ರಹಕಾರನನ್ನೋ, ಪತ್ರಿಕೆಯ ಸಂಪಾದಕನನ್ನೋ 'ಸಂಪಾದಕ' ಎಂಬರ್ಥದಲ್ಲಿ ಬಳಸಲಾಗುತ್ತಿದೆ.

ಆದರೆ ಗ್ರಂಥಸಂಪಾದನೆಯೆಂಬುದು ಒಂದು ಪಾರಿಭಾಷಿಕ ಪದ. ಅದು ಪುಸ್ತಕ ಅಥವಾ ಗ್ರಂಥಗಳನ್ನು, ಲೇಖನಗಳನ್ನು, ವಾರ್ತೆಗಳನ್ನು ವರದಿಗಳನ್ನು ಸಂಗ್ರಹಿಸುವುದನ್ನು ಹೇಳುವುದಿಲ್ಲ. ನಿಘಂಟಿನ ಪ್ರಕಾರ 'ಗ್ರಂಥಸಂಪಾದನೆಗೆ' ಗ್ರಂಥದ ಪಾಠಗಳ ಪರಿಷ್ಕರಣ ಎಂದರ್ಥ. ಇಂಗ್ಲಿಷಿನ Textual criticismಗೆ ಸಂವಾದಿಯಾಗಿ 'ಗ್ರಂಥಸಂಪಾದನೆ' ಎಂಬ ಅರ್ಥವನ್ನು ನೀಡಲಾಗಿದೆ. ಶಾಸ್ತ್ರಬದ್ಧವಾಗಿ ಪಾಠ ವಿಮರ್ಶೆ, ಪಾಠ ಪರಿಷ್ಕರಣ ಎಂದರ್ಥ ಬರುತ್ತದೆ. ಇಲ್ಲಿ ಗ್ರಂಥವೆಂಬುದು ಕವಿ ಅಥವಾ ಗ್ರಂಥ ಕರ್ತೃ ರಚಿಸಿದ ಕೃತಿಯನ್ನು ನಿರ್ದೇಶಿಸುತ್ತದೆ. ಈ ಅರ್ಥದಲ್ಲಿಯೇ ಡಿ.ಎಲ್.ನರಸಿಂಹಾಚಾರ್ಯರು ತಮ್ಮ 'ಕನ್ನಡ ಗ್ರಂಥಸಂಪಾದನೆಗೆ Kannada Textual Criticism ಎಂಬ ಸಂವಾದಿ ಶೀರ್ಷಿಕೆಯನ್ನಿತ್ತಿದ್ದು ಗಮನಾರ್ಹ.

ಹಾಗೆಯೇ ಶ್ರೀ ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರು ಎಸ್.ಎಂ. ಕತ್ರೆಯರವರ Intruduction to Indian Textual Criticism ಎಂಬ ಆಂಗ್ಲ ಭಾಷೆಯ ಗ್ರಂಥವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಇದಕ್ಕೆ ಶೀರ್ಷಿಕೆಯಾಗಿ 'ಭಾರತೀಯ ಗ್ರಂಥಸಂಪಾದನಾ ಪರಿಚಯ' ಎಂದು ಅನುವಾದಿಸಿದ್ದಾರೆ.

ಅಂದರೆ ಉಪಲಬ್ಧವಿರುವ ಪ್ರತಿಗಳ ಆಧಾರದ ಮೇಲೆ ಸಂಪಾದನೆಗೆ ಎತ್ತಿಕೊಂಡ ಕೃತಿಯಲ್ಲಿನ ಸ್ಖಾಲಿತ್ಯಗಳನ್ನು ಶೋಧಿಸುವಾಗ ಮೂಲ ಪಾಠವೇನಿದ್ದಿರಬಹುದೆಂಬುದನ್ನು ವಂಶಾವಳಿ ಸಮೇತ ಗುರುತಿಸುವ ಹಾಗೂ ಸಮಗ್ರ ಗ್ರಂಥದ (Text) ಬಗೆಗೆ ಉನ್ನತ ವಿಮರ್ಶೆಯನ್ನು ನೀಡುವ ಕಾರ್ಯ ಎಂದು ಹೇಳಬಹುದು.

ಉಪಲಬ್ಧವಿರುವ ಪ್ರತಿಗಳ ಅಥವಾ ಹಸ್ತಪ್ರತಿಗಳು ಸಾಮಾನ್ಯವಾಗಿ ಪ್ರತಿಗಳ ಮರುಪ್ರತಿಗಳೇ ನಮಗೆ ಲಭ್ಯವಿರುವಂತಹವು. ಅಂದರೆ ಕವಿಯ ಮೂಲಕೃತಿ. ಸ್ವರಚಿತವೆಂಬ ಹಸ್ತಪ್ರತಿಗಳು ಈವರೆಗೆ ತಿಳಿದುಬರುವಂತೆ ಯಾವುದೂ ಲಭ್ಯವಾಗಿಲ್ಲ. ತಿಳಿದು ಬಂದಿದ್ದರೂ ಕ್ರಿ.ಶ.೧೫೫೪ರ ಕವಿ ಸದಾಶಿವನ ರಾಮನಾಥ ವಿಲಾಸ, ಕ್ರಿ.ಶ.೧೬೨೭ರ ಪದ್ಮಪಂಡಿತನ ಹಯಶಾಸ್ತ್ರ ಹಾಗೂ ೧೯ನೇ ಶತಮಾನದ

ಬಸಪ್ಪಶಾಸ್ತ್ರಿ ಮತ್ತು ಮುದ್ದಣ ಮುಂತಾದ ಅರ್ವಾಚೀನರ ಕೃತಿಗಳು. ಇವನ್ನು ಬಿಟ್ಟರೆ, ಪ್ರಾಚೀನ ಕವಿಗಳ ಮೂಲ ಮಾತೃಕೆಗಳು(Autograph Copies) ಯಾವುದೂ ಲಭ್ಯವಾಗಿಲ್ಲ. ಎಲ್ಲವೂ ಮೂಲದಂತೆಯೇ ದೊರೆತಿದ್ದರೆ ಗ್ರಂಥಸಂಪಾದನೆ ಶಾಸ್ತ್ರೀಯ ಕಾರ್ಯವೇ ಇರುತ್ತಿರಲಿಲ್ಲ. ಆದರೆ ನಮಗೆ ವಾಸ್ತವವಾಗಿ ಲಭ್ಯವಿರುವುದು ಮೂಲಗ್ರಂಥದ ಪ್ರತಿಯ ಹತ್ತನೆ ಪ್ರತಿಯಿರಬಹುದು. ಇಪ್ಪತ್ತನೆಯದಿರಬಹುದು. ಹೀಗೆ ಪ್ರತಿಯಿಂದ ಪ್ರತಿಗೆ ಪ್ರತಿಕಾರರಿಂದ ಪ್ರತಿಕಾರರಿಗೆ ಹೋದಂತೆ ಮೂಲಗ್ರಂಥದ ಪಾಠ ಅವರಿಗೆ ತಿಳಿಯದಂತೋ ಅಥವಾ ತಿಳಿದೋ ಅನೇಕ ವ್ಯತ್ಯಾಸ ಹಾಗೂ ಮಾರ್ಪಾಡುಗಳನ್ನು ಪಡೆಯುತ್ತದೆ.

ಹೀಗೆ ಲಭ್ಯವಾದ ಒಂದೇ ಕೃತಿಯ ಬೇರೆ ಬೇರೆ ಹಸ್ತಪ್ರತಿಗಳನ್ನು ಸಂಗ್ರಹಿಸುವುದು, ಆನಂತರ ದೊರೆತ ಹಸ್ತಪ್ರತಿಗಳನ್ನು ಪರಸ್ಪರವಾಗಿ ಹೋಲಿಸಿ ತಾಳೆ ನೋಡಿ ಅವುಗಳಲ್ಲಿ ಭಿನ್ನಪಾಠಗಳಿದ್ದರೆ ಗುರುತಿಸಬೇಕು. ಕವಿಯ ಮೂಲ ಪಾಠಕ್ಕೆ ಸಂಬಂಧಿಸಿದಂತೆ ಪಾಠಗಳನ್ನು ನಿಷ್ಕರ್ಷಿಸುವ ಶಾಸ್ತ್ರವೇ ಗ್ರಂಥಸಂಪಾದನ ಶಾಸ್ತ್ರವೆಂದು ಸ್ಥೂಲವಾಗಿ ಕರೆಯಲಾಗುತ್ತದೆ. ಹಾಗಾದರೆ ಮೂಲಪಾಠ ಯಾವುದೆಂದು ನಿರ್ಧರಿಸುವುದು ಹೇಗೆಂಬ ಪ್ರಶ್ನೆ ಮೂಡುವುದು ಸಹಜ. ಪ್ರಾಚೀನ ಕಾಲದಿಂದಲೂ ಉಳಿದು ಪ್ರತಿಯಿಂದ ಪ್ರತಿಗೆ ಹರಿದುಬಂದಿರುವ ಪಾಠ ಹಾಗೂ ಪ್ರತಿಯ ಪ್ರಾಚೀನತೆಯನ್ನು ನಿರ್ಧರಿಸುವಾಗ ಪ್ರತಿಯಲ್ಲಿ ಕಂಡುಬರುವ ಕಾಲದ ನಮೂದನ್ನು ಪರಿಗಣಿಸಲಾಗುತ್ತದೆ. ಇಲ್ಲವೇ ಪೀಳಿಗೆಯ ಮುಖಾಂತರ ಪ್ರಾಚೀನ ಪ್ರತಿಯನ್ನು ನಿರ್ಧರಿಸಲಾಗುತ್ತದೆ. ಪಾಠಗಳನ್ನು ನಿರ್ಣಯಿಸುವಾಗ ಸಂಪಾದನ ಶಾಸ್ತ್ರದ ತತ್ವಗಳು ಸಂಪಾದಕನಿಗೆ ನೆರವಾಗುತ್ತವೆ. ಅಲ್ಲದೆ ಸ್ವಲ್ಪಮಟ್ಟಿನ ನಿಖರತೆಯನ್ನು ತಂದುಕೊಡುತ್ತವೆ. ಈ ಹಂತದಲ್ಲಿ ಲಭ್ಯವಿರುವ ಪ್ರತಿಗಳ ಸಹಾಯದಿಂದ ಮೂಲವನ್ನು ಹುಡುಕುವ ಅಥವಾ ಮೂಲಕ್ಕೆ ಹತ್ತಿರವಾಗಿ ಗ್ರಂಥವನ್ನು ಪುನರ್‌ರಚಿಸುವ ಕಾರ್ಯವೇ ಗ್ರಂಥ ಸಂಪಾದನೆ ಎಂದು ಕರೆಸಿಕೊಳ್ಳುತ್ತದೆ.

ಹೀಗೆ ಬೆಳೆದು ಬಂದ ಗ್ರಂಥಸಂಪಾದನ ಶಾಸ್ತ್ರವನ್ನು ಹಾಗೂ ಅದರ ಕಾರ್ಯವನ್ನು ಕುರಿತಂತೆ ಹಲವಾರು ವಿದ್ವಾಂಸರು ವಿಭಿನ್ನ ದೃಷ್ಟಿಕೋನಗಳಿಂದ ವ್ಯಾಖ್ಯಾನಿಸಿದ್ದಾರೆ. ಡಿ.ಎಲ್.ನರಸಿಂಹಾಚಾರ್ಯರಂಥ ಹಿರಿಯ ವಿದ್ವಾಂಸರ ಅಭಿಪ್ರಾಯದಂತೆ "ಗ್ರಂಥಸಂಪಾದನೆಯು ಸ್ವಾಭಾವಿಕವಾಗಿಯೇ ಗ್ರಂಥಗಳಿಗೆ ಸಂಬಂಧಿಸಿದ್ದಾಗಿದೆ. ಪಾಠ ನಿರ್ಣಯದ ವಿಷಯದಲ್ಲಿ ತೋರುವ ವ್ಯವಸ್ಥಿತವೂ ಕೌಶಲ್ಯಪೂರ್ಣವೂ ಆದ ವಿವೇಚನೆಯೆಂದು ಗ್ರಂಥಸಂಪಾದನಾ ಶಾಸ್ತ್ರವನ್ನು ಸೂತ್ರೀಕರಿಸಬಹುದು"[೧] ಎಂದಿದ್ದಾರೆ.

ಮತ್ತೊಬ್ಬ ಹಿರಿಯ ವಿದ್ವಾಂಸರಾದ ದೇ.ಜವರೇಗೌಡರು "ಗ್ರಂಥಸಂಪಾದನ ಶಾಸ್ತ್ರವನ್ನು ಕುರಿತಂತೆ ಅಥವಾ ಸಂಪಾದನಾ ಕಾರ್ಯವನ್ನು ಕುರಿತಂತೆ ಪ್ರಾಚೀನ ಗ್ರಂಥಗಳನ್ನು ಪರಿಷ್ಕರಿಸಿ, ಹಲವು ಹಸ್ತಪ್ರತಿಗಳ ಸಹಾಯದಿಂದ ಶುದ್ಧ ಪಾಠಗಳನ್ನು ನಿರ್ಣಯಿಸುವುದೇ ಗ್ರಂಥಸಂಪಾದನೆ"[೨] ಎಂದು ಹೇಳಿದ್ದಾರೆ.

ವಿದ್ವಾಂಸರು ಹಾಗೂ ಸಂಪಾದಕರೂ ಆದ ಎಂ.ಎಂ.ಕಲಬುರ್ಗಿಯವರು "ವ್ಯವಸ್ಥಿತ ವಿಧಾನಗಳನ್ನವಲಂಬಿಸಿ, ವಿರೂಪವನ್ನು ಒರೆಸಿಹಾಕಿ, ಅವುಗಳನ್ನು ಮತ್ತೆ ಮೂಲರೂಪಕ್ಕೆ ತಿರುಗಿಸಬೇಕು. ಶುದ್ಧಗೊಳಿಸಬೇಕು. ಈ ಶುದ್ಧೀಕರಣಕ್ರಿಯೆ ಗ್ರಂಥಸಂಪಾದನೆ, ಶುದ್ಧೀಕರಣ ಕ್ರಿಯಾಶೀಲ ಗ್ರಂಥಸಂಪಾದಕ, ಶುದ್ಧೀಕರಣ ವಿಧಾನಗಳನ್ನು ನಿರೂಪಿಸುವ ಕೃತಿ ಗ್ರಂಥ ಸಂಪಾದನಶಾಸ್ತ್ರ ಎಂದಿದ್ದಾರೆ."[೩]

ಗ್ರಂಥಸಂಪಾದನೆಯನ್ನು ಕುರಿತಂತೆ ಮತ್ತೊಂದು ಅಭಿಪ್ರಾಯ ಹಾಗೂ ಸೂತ್ರವನ್ನು ನೋಡುವುದಾದರೆ ಪರಂಪರಾನುಗತವಾಗಿ ಬಂದಿರುವ ಲಭ್ಯ ಹಸ್ತಪ್ರತಿಗಳ ನೆರವಿಂದ ಮೂಲ ಗ್ರಂಥ ಅಥವಾ ಕವಿಯ ಸ್ವಹಸ್ತಾಕ್ಷರ ಪ್ರತಿಯ ಸ್ವರೂಪವೇನಿರಬಹುದೆಂಬುದನ್ನು ನಿರ್ಣಯಿಸಿ ಪರಿಷ್ಕರಣ ಮಾಡುವ ಕೆಲಸ ಗ್ರಂಥಸಂಪಾದನೆ. ಈ ಶಾಸ್ತ್ರದ ಮೂಲ ರೇಖೆಗಳನ್ನು ಪಾಶ್ಚಾತ್ಯ ವಿದ್ವಾಂಸರು ಗ್ರೀಕ್ ಲ್ಯಾಟಿನ್ ಭಾಷೆ ಮತ್ತು ಪುರಾತನ ಗ್ರಂಥಗಳು ಹಸ್ತಪ್ರತಿಗಳ ಸಹಾಯದಿಂದ ನಿರೂಪಿಸಿದ್ದಾರೆ ಎಂದು ವ್ಯಾಖ್ಯಾನಿಸುತ್ತಾರೆ.

ಕೆ.ಆರ್. ಶೇಷಗಿರಿಯವರು 'ಅನೇಕ ಪ್ರಾಚೀನ ಗ್ರಂಥಗಳು ಇಂದಿಗೂ ಓಲೆಗರಿಗಳಲ್ಲೋ ಕಾಗದದ ಹಸ್ತಪ್ರತಿಗಳಲ್ಲೋ ಇವೆ. ಅವುಗಳನ್ನು ಶಾಸ್ತ್ರೀಯವಾಗಿ ಮುದ್ರಿಸಿ ಸಾಮಾನ್ಯ, ಓದುಗನಿಗೆ ಎಟುಕುವಂತೆ ಮಾಡುವ ಪೂರ್ವಭಾವಿ ಕೆಲಸವೇ ಗ್ರಂಥಸಂಪಾದನೆ' ಎಂದಿದ್ದಾರೆ.

ಎನ್.ಅನಂತರಂಗಾಚಾರ್ ಅವರು 'ಪ್ರಾಚೀನ ಗ್ರಂಥಗಳಲ್ಲಿ ನಾನಾ ಕಾರಣಗಳಿಂದ ಆಗಬಹುದಾದ ಅಪಪಾಠಗಳನ್ನು ವಿವಿಧ ಪರಂಪರೆಯ ಹಸ್ತಲಿಖಿತ ಪ್ರತಿಗಳ ಸಹಾಯದಿಂದ ಮೂಲ ಗ್ರಂಥಕಾರನ ಪಾಠಕ್ಕೆ ಸಮಾನವಾಗುವಂತೆ ಪರಿಷ್ಕರಿಸಿ ಗ್ರಂಥದ ಪೂರ್ಣ ಮೌಲ್ಯ ಮಾಪನ ಮಾಡಿ ವಾಚಕರಿಗೆ ಒದಗಿಸುವುದು ಗ್ರಂಥಸಂಪಾದನೆ' ಎಂದಿದ್ದಾರೆ.

ಶ್ರೀಮತಿ ಕೆ. ಶಾಂತಾ ಅವರು 'ಪಾಠಪರಿಷ್ಕರಣದ ಮೂಲಕ ಕವಿ ಕೃತಿಯ ಮೂಲಪಾಠವನ್ನು ನಿಷ್ಕರ್ಷಿಸುವುದಕ್ಕೆ 'ಗ್ರಂಥಸಂಪಾದನೆ' ಎಂದು ಹೇಳುತ್ತಾರೆ. ಇಲ್ಲಿ ಸಂಪಾದನೆ ಎಂದರೆ ಬರುವ ಹಣವಲ್ಲ. ಗ್ರಂಥದ ಮೂಲಪಾಠದ ಹುಡುಕುವಿಕೆ ಅಥವಾ ಪರಿಷ್ಕರಣಕ್ಕೆ ಸಂಪಾದನೆ ಎಂದು ಹೆಸರು. ಇಂಗ್ಲಿಷಿನಲ್ಲಿ ಇದಕ್ಕೆ Editing ಎನ್ನುತ್ತಾರೆ Textual Criticism ಎಂದೂ ಕರೆಯುತ್ತಾರೆ.

ಸಂಪಾದನೆ ಎಂಬ ಪದಕ್ಕೆ ಸಾಹಿತ್ಯಿಕ ಸಂದರ್ಭದಲ್ಲಿ 'ಬೇರೊಬ್ಬರ ಬರವಣಿಗೆಗೆ ಸರಿಯಾದ ರೂಪ ಮುದ್ರೆ ಕೊಡುವುದು' ಎಂಬುದು ಎಂ.ಎಂ.ಕಲಬುರ್ಗಿ ಅವರ ಅಭಿಪ್ರಾಯ, ಅಂದರೆ ಸಂಪಾದನೆ ಎಂಬ ಹೆಸರಿನಲ್ಲಿ ಸಮಾವೇಶಗೊಳ್ಳುವ ಕವನ ಲೇಖನ ಸಂಪಾದನೆಗಳಿಗಿಂತ ತಲೆತಲಾಂತರದಿಂದ ಸಾಗಿ ಬಂದ ಲಿಖಿತ ಸಾಹಿತ್ಯ ಮತ್ತು ವಾಚಿಕ ಸಾಹಿತ್ಯಗಳನ್ನು ಸಂಪಾದಿಸುವುದು ಭಿನ್ನವಾಗಿದ್ದು ಇವುಗಳನ್ನು ಸಂಪಾದಿಸಲು ಬೇಕಾಗುವ ಮಾರ್ಗದರ್ಶಿ ಸೂತ್ರಗಳನ್ನೊಳಗೊಂಡ ಶಾಸ್ತ್ರಕ್ಕೆ Textual Criticism ಎಂದು ಹೆಸರು, 'ಪಾಠ ವಿಮರ್ಶೆ' ಎಂಬುದು ಇದರ ಕನ್ನಡ ಸಂವಾದಿರೂಪ, ಇದಕ್ಕೆ ಪರ್ಯಾಯವಾಗಿ ಪಾಠ ಪರಿಶೋಧನೆ, ಪಾಠಪರಿಷ್ಕರಣ, ಪಾಠ ಸಂಸ್ಕರಣ

ಮೊದಲಾದ ಪದಗಳು ನಮ್ಮಲ್ಲಿ ಬಳಕೆಯಲ್ಲಿದ್ದರೂ ಸಾಮಾನ್ಯವಾಗಿ Editing ಅರ್ಥದ ಆಂಗ್ಲ ಮೂಲದ ಸಂಪಾದನೆ ಎಂಬ ಪದವನ್ನೇ ವ್ಯಾಪಕವಾಗಿ ಬಳಸುತ್ತಾರೆ.

ವೈ.ಸಿ. ಭಾನುಮತಿ ಅವರು ಸರಳವಾಗಿ 'ಹಸ್ತಪ್ರತಿಗಳ ನೆರವಿನಿಂದ ಕವಿ ಪಾಠಗಳನ್ನು ಅನ್ವೇಷಿಸುವ ಪ್ರಕ್ರಿಯೆಯನ್ನು ಗ್ರಂಥಸಂಪಾದನೆ' ಎಂದಿದ್ದಾರೆ.

ಹೀಗೆ ಗ್ರಂಥ ಹಾಗೂ ಸಂಪಾದನೆ ಬಗೆಗೆ ಪಾಶ್ಚಾತ್ಯ ಹಾಗೂ ಪೌರ್ವಾತ್ಯ ವಿದ್ವಾಂಸರು ಹಲವು ರೀತಿಯಲ್ಲಿ ವ್ಯಾಖ್ಯಾನಿಸಿ ಸೂತ್ರೀಕರಿಸುವ ಕಾರ್ಯ ಮಾಡಿದ್ದಾರೆ. ಪಾಶ್ಚಾತ್ಯರಿಂದ ಗ್ರಂಥಸಂಪಾದನೆ ಭಾರತಕ್ಕೆ ಬಂದಿತು ಎಂಬುದು ಪ್ರಚಲಿತವಾದ ಮಾತು. ಇದರರ್ಥ ಗ್ರಂಥದ ಶುದ್ಧಿ ಹಾಗೂ ಅಶುದ್ಧಿ ಪ್ರಜ್ಞೆ ಈ ಮೊದಲು ಭಾರತೀಯರಿಗೆ ಇರಲಿಲ್ಲವೆಂದಲ್ಲ, ಗ್ರಂಥ ಸಂಸ್ಕರಣ ಒಂದು ಶಾಸ್ತ್ರೀಯ ವಿಧಾನವನ್ನು ರೂಪಿಸಿಕೊಳ್ಳದೆ ಹೋದರೂ ಗ್ರಂಥರಕ್ಷಣೆ, ಗ್ರಂಥಲೇಖನ, ಪಾಠರಕ್ಷಣೆ, ಪಾಠಸಂಗ್ರಹ ಮತ್ತು ಪಾಠನಿರ್ಣಯ ಈ ಎಲ್ಲಾ ಅಂಶಗಳ ಅರಿವು ಭಾರತೀಯರಿಗೆ ಮತ್ತು ಕನ್ನಡಿಗರಿಗೂ ಇತ್ತು.

ಒಟ್ಟಿನಲ್ಲಿ ಗ್ರಂಥಸಂಪಾದನೆ ಎಂಬುದು ಗ್ರಂಥಗಳಿಗೆ ಸಂಬಂಧಿಸಿದ ವಿಷಯ. ಪ್ರಾಚೀನ ಹಸ್ತಪ್ರತಿಗಳ ಮೂಲಕ ಕವಿಯ ಮೂಲಪಾಠಗಳನ್ನು ಅನ್ವೇಷಿಸುವ, ಪರಿಷ್ಕರಿಸುವ, ಮೂಲ ಪಾಠವನ್ನು ಕಂಡುಹಿಡಿದು ಕೃತಿಕಾರನ ಹತ್ತಿರದವೇ ಎನ್ನಬಹುದಾದ ಒಪ್ಪಿತ/ಪರಿಷ್ಕರಿಸಿ ಪಾಠಗಳ ಸಹಾಯದಿಂದ ಪಠ್ಯಗಳನ್ನು ಸಂಪಾದಿಸುವ ಮತ್ತು ಪ್ರಕಟಿಸುವ ಒಂದು ವಿಧಾನ ಅಥವಾ ಕ್ರಮವನ್ನು ಗ್ರಂಥಸಂಪಾದನೆ ಎಂದು ಹೇಳಬಹುದು.

ಈ ಹಿನ್ನೆಲೆಯಲ್ಲಿ ಕನ್ನಡ ಗ್ರಂಥಗಳಿಗೆ ಸಂಬಂಧಿಸಿದಂತೆ ಸಂಪಾದನಾ ಕಾರ್ಯ ಮತ್ತು ಯಾವ ರೀತಿಯಲ್ಲಿ ನಡೆದಿದೆ. ನಡೆಯುತ್ತಾ ಸಾಗಿದೆ. ಸಂಪಾದಕರು ಹಾಗೂ ವಿದ್ವಾಂಸರು ಕವಿಯ ಮೂಲಪಾಠಗಳನ್ನು ಅನ್ವೇಷಿಸುವಲ್ಲಿ ಕಂಡುಕೊಂಡಿರುವ ಮಾರ್ಗಗಳೇನು? ಸಾಹಿತ್ಯದ ವಿಭಿನ್ನ ಪ್ರಕಾರಗಳಾದ ಕಾವ್ಯ, ಗದ್ಯ ಶಾಸ್ತ್ರ, ವಚನ, ಕೀರ್ತನೆ, ಸಾಂಗತ್ಯ, ಷಟ್ಪದಿ, ಚಂಪೂ, ಜಾನಪದ ಮುಂತಾದ ಪ್ರಕಾರಗಳ ಗ್ರಂಥಸಂಪಾದನ ಕಾರ್ಯ ಹೇಗೆ ನಡೆದಿದೆ. ಇದರಲ್ಲಿ ಮಹಿಳೆಯರ ಕಾಣಿಕೆ ಏನು ಎಂಬುದನ್ನು ಗುರುತಿಸುವುದಾಗಿದೆ.

'ಸ್ವಾತಂತ್ರ್ಯೋತ್ತರ ಮಹಿಳಾ ಸಾಹಿತ್ಯವನ್ನು ಅವಲೋಕಿಸಿದಾಗ' ಕಥೆ, ಕಾದಂಬರಿ, ಕವಿತೆ, ಇತ್ಯಾದಿ ಸೃಜನಶೀಲ ಸಾಹಿತ್ಯದಲ್ಲಿ ಹೆಚ್ಚು ಮಹಿಳಾ ಬರಹಗಾರರು ಕಂಡು ಬರುತ್ತಾರೆ. ಆದರೆ ಕನ್ನಡ ಗ್ರಂಥಸಂಪಾದನೆ ಅಥವಾ ಪರಿಷ್ಕರಣದತ್ತ ಹೆಚ್ಚಿನ ಬಲವು ತೋರಿಲ್ಲ. ಇದಕ್ಕೆ ಕಾರಣಗಳು ಸಹ ಇರುವುದನ್ನು ಗುರುತಿಸಬಹುದಾಗಿದೆ. ಗ್ರಂಥಸಂಪಾದನೆ ಮತ್ತು ಪರಿಷ್ಕರಣ ಕಾರ್ಯ ಹಸ್ತಪ್ರತಿಗಳನ್ನು ಅವಲಂಭಿಸಿದೆ. ತಾಳೆಗರಿಗಳು ಅಥವಾ ಹಸ್ತಪ್ರತಿಗಳು ಎಲ್ಲಾ ಕಡೆಯಲ್ಲೂ ದೊರೆಯುವುದಿಲ್ಲ. ಆದ್ದರಿಂದ ಹಸ್ತಪ್ರತಿಗಳು ಲಭ್ಯವಾದ ನಂತರ ಸಂಪಾದನೆಯ ಕಾರ್ಯ ಹಂತ–

ಹಂತವಾಗಿ ಆರಂಭವಾಗುತ್ತದೆ. ಹಾಗೆಯೇ ಹಸ್ತಪ್ರತಿಗಳನ್ನು ಹೊಂದಿರುವವರೆಲ್ಲ ಸಂಪಾದಕರಾಗಲೂ ಸಾಧ್ಯವಿಲ್ಲ. ಏಕೆಂದರೆ ಪ್ರಾಚೀನ ಗ್ರಂಥಗಳ ಭಾಷಾಜ್ಞಾನ ಛಂದಸ್ಸಿನ ಅರಿವು ಹಾಗೂ ಪಾಂಡಿತ್ಯ, ಪ್ರತಿಭೆಗಳು ಇರಬೇಕಾಗುತ್ತದೆ. ಇಷ್ಟೆಲ್ಲ ಅಡೆತಡೆಗಳನ್ನು ದಾಟಿ ಬಂದು ಕೃತಿಯನ್ನು ಸಿದ್ಧಪಡಿಸಿದರೆ ಪ್ರಕಟಣೆಯ ಸಮಸ್ಯೆ ಎದುರಾಗುತ್ತದೆ. ಹಾಗೆಯೇ ಖಾಸಗಿಯಾಗಿ ಇಂಥ ಪ್ರಾಚೀನ ಮತ್ತು ಹಳಗನ್ನಡ ಕೃತಿಗಳ ಪ್ರಕಟಣೆ ಉದ್ಯಮದ ದೃಷ್ಟಿಯಿಂದ ಲಾಭದಾಯಕವಲ್ಲ. ಏಕೆಂದರೆ ಪ್ರಾಚೀನ ಕೃತಿಗಳನ್ನು ಓದುವವರ ಸಂಖ್ಯೆ ವಿರಳ. ಆದರೂ ಇತ್ತೀಚೆಗೆ ವಿಶ್ವವಿದ್ಯಾಲಯಗಳ ನೆರವಿನಿಂದ ವೃತ್ತಿ ಮತ್ತು ಹವ್ಯಾಸಕ್ಕಾಗಿ ಬೆರಳಣಿಕೆಯಷ್ಟು ಮಹಿಳೆಯರು ಕನ್ನಡ ಗ್ರಂಥಸಂಪಾದನ ಕ್ಷೇತ್ರದಲ್ಲಿ ಭಾಗಿಯಾಗಿರುವುದನ್ನು ಗುರುತಿಸಬಹುದು. ಹಾಗೆಯೇ ಮಹಿಳಾ ಕನ್ನಡ ಗ್ರಂಥಸಂಪಾದನೆಯ ಇತಿಹಾಸವನ್ನು ಸುಮಾರು ಹತ್ತನೆ ಶತಮಾನದಿಂದಲೂ ಗುರುತಿಸಬಹುದು. ಮಹಿಳೆಯರು ಹಸ್ತಪ್ರತಿಗಳ ಪೋಷಕರಾಗಿ, ಲಿಪಿಕಾರ್ತಿಯರಾಗಿ, ಪ್ರತಿಕಾರರಾಗಿ, ಲೇಖಕರಾಗಿ ಪ್ರವೇಶ ಪಡೆದಿದ್ದಾರೆ. ಆದ್ದರಿಂದ ಮುಂದಿನ ಅಧ್ಯಯನಕ್ಕೆ ಅನುಕೂಲ ಆಗುವಂತೆ ಆಧುನಿಕ ಪೂರ್ವ ಮತ್ತು ಆಧುನಿಕ ಎಂದು ವಿಂಗಡಿಸಿಕೊಂಡು ಎರಡು ಕಾಲಘಟ್ಟದಲ್ಲಿ ಮಹಿಳೆಯರು ಕನ್ನಡ ಗ್ರಂಥಸಂಪಾದನ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ.

೩.೧. ಆಧುನಿಕ ಪೂರ್ವ

ಪ್ರಾಚೀನ ಕಾಲದಿಂದಲೂ ಮಹಿಳೆಯರು ಹಸ್ತಪ್ರತಿ ನಿರ್ಮಾಣದ ಚಟುವಟಿಕೆಗಳಲ್ಲಿ ವಿವಿಧ ರೀತಿಯಲ್ಲಿ ಭಾಗವಹಿಸಿದ್ದಾರೆ. ಪುರುಷ ಲಿಪಿಕಾರರಂತೆ ಹಸ್ತಪ್ರತಿಗಳಲ್ಲೂ ಸಹ ಲಿಪಿ ಮಾಡಿದ ಪ್ರತಿ ಮಾಡಿದ ವಿವರಗಳು ಹಸ್ತಪ್ರತಿಗಳ ಆದಿ ಅಂತ್ಯದಲ್ಲಿನ ಪ್ರಶಸ್ತಿ ವಾಕ್ಯಗಳಿಂದ ಗುರುತಿಸಬಹುದಾಗಿದೆ. ಸ್ತ್ರೀಯರು ಧಾರ್ಮಿಕ ಚೌಕಟ್ಟಿನಲ್ಲಿದ್ದುಕೊಂಡು ಲಿಪಿ ಹಾಗೂ ಪ್ರತಿ ಮಾಡಿರುವುದು ಗಮನಾರ್ಹ. ಜ್ಞಾನಾರ್ಜನೆ, ಶುದ್ಧಿಯಾರ್ಜನೆ, ಪುಣ್ಯ ಸಂಪಾದನೆ ಮತ್ತು ಜ್ಞಾನ ಸಂಪಾದನೆ ಮುಂತಾದ ಲೌಕಿಕ ಕಾರಣಗಳಿಗಾಗಿ ಕೃತಿ ರಚಿಸಿರುವುದು ಕಂಡುಬರುತ್ತದೆ. ಜೈನಮುನಿ ತನ್ನ ಮಗಳಿಗೆ ಗಣಿತಶಾಸ್ತ್ರವನ್ನು ತಿಳಿಸಿದ ಸಂಗತಿ, ಪಂಪನ ಆದಿಪುರಾಣದಲ್ಲಿ 'ವೃಷಭದೇವನು' ತನ್ನ ಹೆಣ್ಣು ಮಕ್ಕಳಾದ ಬ್ರಾಹ್ಮಿ ಮತ್ತು ಸುಂದರಿಯರಿಗೆ ಲಿಪಿಯನ್ನು ಹಾಗೂ ಗಣಿತಶಾಸ್ತ್ರವನ್ನು ಕಲಿಸಿದನೆಂಬ ಉಲ್ಲೇಖಗಳು ಲಿಪಿ ಹಾಗೂ ಬರವಣಿಗೆಯ ಮಹಿಳಾ ದೃಷ್ಟಿಕೋನದಿಂದ ಗಮನಿಸುವಂಥವು. ಭಾರತೀಯ ಅಥವಾ ಕನ್ನಡ ಲಿಪಿ ಚರಿತ್ರೆಯನ್ನು ಈ ಸಂಗತಿಗಳಿಂದಲೇ ಕಟ್ಟಿಕೊಂಡಿರುವುದು ಕುತೂಹಲದ ವಿಷಯ. ಲಿಪಿ ಹಾಗೂ ಬರಹವನ್ನು ಅಧಿಕಾರ ಮತ್ತು ಪುರುಷ ಪ್ರಧಾನವಾಗಿ ನಿರ್ವಚಿಸಿದ ಸಂಗತಿಗಳನ್ನು ಪುನರ್ ವಿಮರ್ಶಿಸಲು ಇವು ಬಹುಮುಖ್ಯ ಸಂಗತಿಗಳಾಗಿವೆ. ಇಷ್ಟೇ ಅಲ್ಲದೆ ವಡ್ಡಾರಾಧನೆಯ ವಿದ್ಯಚ್ಚೋರನ ಕಥೆಯಲ್ಲಿ ಬರುವಂತೆ ಮಹಿಳೆ ಚಿತ್ರಕಲೆ, ಪತ್ರಚ್ಛೇದ, ಸಂಗೀತ ಮುಂತಾದ ಅರವತ್ನಾಲ್ಕು ಕಲೆಗಳಲ್ಲಿ ನಿಪುಣರಾಗಿದ್ದನ್ನು ಇಲ್ಲಿ ವಿಶೇಷವಾಗಿ ನೆನೆಯಬಹುದು. ಆದರೆ ವೈದಿಕ ಮಹಿಳೆಯರಿಗೆ ಈ ಅವಕಾಶ ಇರಲಿಲ್ಲ.

ಜೈನರಲ್ಲಿ ಹೆಣ್ಣಿಗೆ ಹಿರಿಯ ಸ್ಥಾನ ಕೊಟ್ಟಿರುವುದನ್ನು ಕಾಣಬಹುದು. ಆರ್ಯಿಕೆಯರು ಅಥವಾ ಕಂತಿಯರು ಎಂಬ ಸನ್ಯಾಸಿನಿಯರ ವರ್ಗವಿದ್ದು ಅವರು ಕಠಿಣ ತಪಸ್ವಿನಿಯರು ವಿದ್ಯಾವತಿಯರು ಆಗಿರುತ್ತಿದ್ದರು. ಏಕೆಂದರೆ ಮಹಾವೀರನು ಸ್ತ್ರೀಯರನ್ನು ಗೌರವದಿಂದ ಕಾಣಬೇಕೆಂದು ಹೇಳುತ್ತಿದ್ದನು. ಅವನು ಉದಾರ ನೀತಿಯಿಂದ ಅವರಿಗೆ ಆತ್ಮೋನ್ನತಿಯ ಶಿಕ್ಷಣ ದೊರಕುವಂತಾಯಿತು. ಅದರ ಫಲವಾಗಿಯೇ ಮೂವತ್ತಾರು ಸಾವಿರ ಶ್ರಾವಿಕೆಯರು ಜೈನ ಧರ್ಮವನ್ನು ಪ್ರಸಾರ ಮಾಡಿದರೆಂಬ ಪ್ರತೀತಿಯಿದೆ. ಹಾಗೆಯೇ ಕನ್ನಡದಲ್ಲಿ ಮೊಟ್ಟ ಮೊದಲ ಕವಿಯಿತ್ರಿ 'ಕಂತಿಯೂ' ಇದೇ ವರ್ಗಕ್ಕೆ ಸೇರಿರಬಹುದು ಎಂಬ ಊಹೆ ಇದೆ. "ಹದಿಮೂರನೆಯ ಶತಮಾನದ ಕವಿಯಿತ್ರಿ ಕಂತಿಯ ಸಾಧನೆಯ ಮಟ್ಟ ಮಿಗಿಲೆನಿಸಿದೆ, ಧೋರನ ಆಸ್ಥಾನದಲ್ಲಿ 'ಅಭಿನವ ವಾಗ್ದೇವಿಯಾಗಿ' ಆಕೆ ಬರೆದ 'ಕಂತಿ ಹಂಪರ ಸಮಸ್ಯೆ'ಗಳು ಮಹತ್ವದ ಕೃತಿಯಾಗಿದೆ."[೪] ಈ ಕಂತಿಯು ಕವಿ ಕಾವ್ಯ ವಿಚಾರ ದೃಷ್ಟಿಯಿಂದ ವಿವಾದಾತ್ಮಕ ವ್ಯಕ್ತಿಯಾಗಿದ್ದಾಳೆ. ಈಕೆಯ ಯಾವ ಕೃತಿಯೂ ಇದುವರೆಗೂ ಸಿಕ್ಕಿಲ್ಲ. ಕಂತಿ ಎಂಬ ಶಬ್ಧವು ಅಂಕಿತನಾಮವಾದಂತೆ ತೋರುವುದರಿಂದ ಅದು ಆ ವ್ಯಕ್ತಿಗೆ ಇಟ್ಟ ಹೆಸರೇ ಅಥವಾ ಕೊಟ್ಟ ಹೆಸರೇ ಎನ್ನುವುದನ್ನು ಸ್ಪಷ್ಟವಾಗುವುದಿಲ್ಲ.

ಶಾಸ್ತ್ರದಾನ ಮತ್ತು ಮಹಿಳೆ

ಜೈನರಲ್ಲಿ ಶಾಸ್ತ್ರದಾನ ಕೊಡುವ ಪದ್ಧತಿ ಇದ್ದುದರಿಂದ ಹತ್ತನೆಯ ಶತಮಾನದಲ್ಲಿ ಅತ್ತಿಮಬ್ಬೆ ಪೊನ್ನನ ಶಾಂತಿ ಪುರಾಣದ ಸಾವಿರ ಪ್ರತಿಗಳನ್ನು ಬರೆಸಿ ದಾನ ಮಾಡಿದ ಉಲ್ಲೇಖವಿದೆ. ಉದಾಹರಣೆಗೆ:

"ಎಸೆಯದೆ ಪೊಟ್ಟು ಕೆಟ್ಟಪುದು ಶಾಂತಿಪುರಾಣಮದಂ ನೆಗಟ್ಟುವೆಂ
ವಸುಧೆಯೊಳೆನ್ನ ತಂದೆಯ ಪರೋಕ್ಷದೊಳೊಂದು ಸಹಸ್ರ ಪುಸ್ತಕ
ಪ್ರಸರಮನತ್ತಿಮಬ್ಬೆ ಪರಮಾದರದಿಂ ಬರೆಯಲೆವೇಟ್ಟಿಪೆಂ
ಪ್ರಸದಳಮದ್ವಿತೀಯ ಮಸಮಂ ಸಲೆ ಭಾವಿಸಲೆಯ್ದೆ ಬಣ್ಣಿಸಲ್"[೫]

ಅತ್ತಿಮಬ್ಬೆ ಪೊನ್ನಕವಿಯ 'ಶಾಂತಿಪುರಾಣ' ಕೃತಿಯನ್ನು ಸಾವಿರ ಪ್ರತಿ ಮಾಡಿಸಿ ಶಾಸ್ತ್ರದಾನ ಮಾಡಿದ್ದಾಳೆ. ಆದ್ದರಿಂದ ಸಾಕಷ್ಟು ಮಹಿಳೆಯರ ಮೇಲೆ ಅತ್ತಿಮಬ್ಬೆಯ ಪ್ರಭಾವ ಬೀರಿರುತ್ತದೆ. ಏಕೆಂದರೆ ಲಿಪಿ ಮಾಡುವಾಗ ಸಾಕಷ್ಟು ಮಹಿಳೆಯರು ಹಸ್ತಪ್ರತಿಯನ್ನು ಸಿದ್ಧಗೊಳಿಸಲು ಅಥವಾ ಲಿಪಿ ಮಾಡುವ ಕಾರ್ಯದಲ್ಲಿ ತೊಡಗಿ ಕೊಂಡಿರಬಹುದು.

ಹಾಗೆಯೇ "ಪವಿತ್ರ ಜೈನ ಗ್ರಂಥಗಳಾದ ಧವಲಾ, ಜಯಧವಲಾ ಮಹಾಧವಲಾ ಗ್ರಂಥಗಳ ಉಪಲಬ್ಧ ಹಸ್ತಪ್ರತಿಗಳನ್ನು ಮಹಿಳೆಯರು ಶಾಸ್ತ್ರದಾನವಾಗಿ ನೀಡಿರುವ ಉಲ್ಲೇಖಗಳಿವೆ. 'ದೇವಿಯಕ್ಕ' ಎಂಬ ಮಹಿಳೆ ಶ್ರುತ ಪಂಚಮಿ ನೋಂಪಿಯನ್ನು ನೋಂತು 'ಬನ್ನಿಗೆರೆಯ ಉತ್ತುಂಗ ಚೈತ್ಯಾಲಯದ ಆಚಾರ್ಯ ಶುಭಚಂದ್ರ ಸಿದ್ಧಾಂತ ದೇವರಿಗೆ ಧವಲ ಗ್ರಂಥದ ಪ್ರತಿಯನ್ನು ಪದ್ಮಸೇನ ಮುನೀಂದ್ರರಿಗೆ

ಅಣ್ಣ ಶ್ರೇಷ್ಠಿಯು ಜಯಧವಲದ ಪ್ರತಿಯನ್ನು ಶ್ರೀಮತಿಯ ಶ್ರೀ ಪಂಚಮಿ ಉದ್ಯಾಪನಾ ಸಂದರ್ಭದಲ್ಲಿ ಮಾಘನಂದಿ ಆಚಾರ್ಯರಿಗೆ ಮಹಾಧವಲಾ ಪ್ರತಿಯನ್ನು ಗ್ರಂಥದಾನವಾಗಿ ಅರ್ಪಿಸಿದ್ದಾರೆ"[೬] ಇಂತಹ ಪ್ರಾಚೀನವಾದ ಗ್ರಂಥಗಳನ್ನು ಮಹಿಳೆಯರು ಶಾಸ್ತ್ರದಾನವಾಗಿ ನೀಡಿರುವುದು ಮಹತ್ವದ್ದಾಗಿದೆ.

"ಪ್ರಭಾ ಚಂದ್ರರ ಕ್ರಿಯಾ ವ್ಯಾಖ್ಯಾ ಎಂಬ ಟೀಕು ಗ್ರಂಥವು ಸುಮಾರು ೧೧೦೦ರಲ್ಲಿಯೇ ರಚಿತವಾಗಿತ್ತು. ಇದರ ಒಂದು ಹಸ್ತಪ್ರತಿ ಮುನ್ನೂರು ವರ್ಷಗಳ ಬಳಿಕ ಗೇರುಸೊಪ್ಪೆಯಲ್ಲಿ ಸಿದ್ಧವಾಗಿದೆ. ಈ ಪ್ರತಿಯಲ್ಲಿ [ಸಂ ೧೮೮] ಲಿಪಿಕಾರ ತನ್ನ ಹೆಸರನ್ನು ಹೇಳಿಕೊಳ್ಳದಿದ್ದರೂ ಇದು ಯಾರಿಗಾಗಿ ಬರೆಯಲಾಯಿತೆಂದು ತಿಳಿಸುವಾಗ ನಗರಿಯ ಮಲ್ಲಿರಾಯ ಅರಸಿನ ಪಟ್ಟಮಹದೇವಿಯ ಲಲಿತಾದೇವಿಯವರು ತಮಗೆ ಕೇವಲ ಜ್ಞಾನಕಾರಣವಾಗಿ ಅಯ್ಯಗಳ ಶಿಷ್ಯರು ಗುಮ್ಮಣ್ಣಗಳಿಗೆ ಬರೆಸಿಕೊಟ್ಟ ಕ್ರಿಯಾ ವ್ಯಾಖ್ಯಾನ ಗ್ರಂಥಕ್ಕೆ ಮಂಗಳ ಮಹಾಶ್ರೀ."[೭] ಇವರು ಲೋಕಾಲೋಕಗಳಲ್ಲಿಯ ತ್ರಿಕಾಲಗಳಲ್ಲಿಯ ಸರ್ವ ವಸ್ತುಗಳ ಸಮಗ್ರ ಜ್ಞಾನ ಪಡೆದುಕೊಳ್ಳಲು ಕ್ರಿಯಾ ವ್ಯಾಖ್ಯಾನ ಟೀಕು ಗ್ರಂಥವನ್ನು ಬರೆಸಿ ದಾನವಾಗಿ ಕೊಟ್ಟಿರುವುದು ವಿಶೇಷವಾಗಿದೆ. ಏಕೆಂದರೆ ವೇದ–ಪುರಾಣಗಳು ಮಹಿಳೆಯರಿಗೆ ಶಿಕ್ಷಣವನ್ನು ಕಲಿಯಲು ಹಾಗೂ ಧಾರ್ಮಿಕವಾಗಿ, ಸಾಮಾಜಿಕವಾಗಿ ಹಲವಾರು ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ನಿರ್ಬಂಧಿಸಲಾಗಿತ್ತು. ಅಂಥ ನಿರ್ಬಂಧಗಳನ್ನು ದಾಟಿ ಶಾಸ್ತ್ರ ವ್ಯಾಖ್ಯಾನ ಗ್ರಂಥಗಳನ್ನು ಪ್ರತಿ ಮಾಡಿಸಿ ಶಾಸ್ತ್ರದಾನ ಮಾಡಿರುವುದು ಜ್ಞಾನ ಪ್ರಸಾರ ಕಾರ್ಯದಲ್ಲಿ ಮಹಿಳೆಯರಿಗಿದ್ದ ಆದ್ಯತೆಯನ್ನು ಹೇಳುತ್ತವೆ.

"ಧನಂಜಯ ನಿಘಂಟನ್ನು ಶಿವಮ್ಮನು 'ತನ್ನ ಮಗನಿಗೆ ವಿದ್ಯೆ ಪೂರ್ಣವಾಗಲೆಂದು ಪ್ರತಿ ಮಾಡಿಸಿದ್ದಾಳೆ"[೮] 'ತಾಯಿಯೇ ಮೊದಲ ಗುರು' ಎನ್ನುವುದಕ್ಕೆ ಇದು ಒಳ್ಳೆಯ ನಿದರ್ಶನವಾಗಿದೆ. ಏಕೆಂದರೆ ತನ್ನ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಶಿವಮ್ಮನಿಗೆ ಇದ್ದ ಕಾಳಜಿ ತಿಳಿಯುತ್ತದೆ. ಪ್ರಾಚೀನ ಕಾಲದಿಂದಲೂ ಮಹಿಳೆ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಇತ್ಯಾದಿ ಚೌಕಟ್ಟಿನಲ್ಲಿ ಬದುಕುತ್ತಿರುವಾಗ ಧನಂಜಯ ನಿಘಂಟನ್ನು ಪ್ರತಿಮಾಡಿಸಿಕೊಟ್ಟಿರುವುದು ಹೆಣ್ಣಿನ ಶಾಸ್ತ್ರ ತಿಳುವಳಿಕೆ ದೃಷ್ಟಿಯಿಂದ ಬಹುಮುಖ್ಯವಾದ ಸಂಗತಿಯಾಗಿದೆ.

> "ಲಲಿತಕೀರ್ತಿ ಭಟ್ಟಾರಕ ದೇವರುಗಳ ಪಾದಪದ್ಮಕ್ಕೆ ತುಂಬಿಯೆನಿಸಿದ
> ವರ್ಧಮಾನಕ್ಕಗಳು ಸೇನಗಣದ ನೇಮಕ್ಕಳಿಗೆ ಶಾಸ್ತ್ರಧಾನವಾಗಿ
> ಬರೆದುಕೊಟ್ಟ ಧನ್ಯಕುಮಾರ ಚರಿತೆ"[೯]

ವರ್ಧಮಾನಕ್ಕಳು ಲಲಿತ ಕೀರ್ತಿ ಭಟ್ಟಾರಕರ ಶಿಷ್ಯಳಾಗಿದ್ದು. ಇವರು ಸೇನಗಣದ ನೇಮಕ್ಕಗಳಿಗೆ ಶಾಸ್ತ್ರದಾನವಾಗಿ ತಾವೇ ಸ್ವತಃ ಪ್ರತಿಮಾಡಿ ಧನ್ಯಕುಮಾರ ಚರಿತೆಯನ್ನು ಬರೆದು ಕೊಟ್ಟಿದ್ದಾರೆ.

ಮೇಲೆ ತಿಳಿಸಿದ ಇಷ್ಟು ಜನ ಮಹಿಳೆಯರು ತಮ್ಮ ಜ್ಞಾನಕ್ಕಾಗಿ, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಇನ್ನೂ ಅನೇಕ ಪರಾರ್ಥ ಕಾರಣಗಳಿಗಾಗಿ ಧಾರ್ಮಿಕ ಕೃತಿಗಳನ್ನು ಪ್ರತಿ ಮಾಡಿಸಿ ಇಲ್ಲವೇ ಸ್ವತಃ

ಪ್ರತಿಮಾಡಿಸಿ ಶಾಸ್ತ್ರದಾನ ಮಾಡಿದ್ದಾರೆ. ಹೆಣ್ಣಿನ ಶಾಸ್ತ್ರ ತಿಳುವಳಿಕೆ ಮತ್ತು ಶಾಸ್ತ್ರದಾನದ ದೃಷ್ಟಿಯಿಂದ ಇದು ಗಮನಿಸುವಂಥದ್ದು.

ಮಹಿಳಾ ಪ್ರತಿಕಾರರು/ಲಿಪಿಕಾರರು

ಪುರುಷ ಲಿಪಿಕಾರರಂತೆ ಮಹಿಳಾ ಲಿಪಿಕಾರ್ತಿಯರು ಓದು ಬರಹದ ಬಗ್ಗೆ ಆಸಕ್ತಿ, ಶ್ರದ್ಧೆ ಹೊಂದಿದ್ದರು. ಮಹಿಳೆಯರಿಗೆ ವಿದ್ಯಾಭ್ಯಾಸ ಮಾಡಲು ಗುರುಕುಲಗಳು, ಮಠಗಳಲ್ಲಿ ನಿಷೇಧವಿದ್ದಂತಹ ಸಂದರ್ಭದಲ್ಲಿ ಅಕ್ಷರ ಕಲಿತು ಲಿಪಿ ಮಾಡಿದ ಮಹಿಳಾ ಲಿಪಿಕಾರ್ತಿಯರ ಗಟ್ಟಿತನ ಗಮನಿಸುವಂಥದ್ದು.

ಪದ್ಮಪ್ರಭ ತ್ರೈವಿದ್ಯದೇವನ ವಿಂಶತಿ ಪ್ರರೂಪಣೆ ಎಂಬ ಪ್ರಾಕೃತ ಗ್ರಂಥವನ್ನು 'ಚಂದ್ರಮತಿ ಅಕ್ಕುಳಜಿ' ಎಂಬ ಲಿಪಿಕಾರ್ತಿ ಶಾಂತಿಮತಿ ಅಜ್ಜಿಕೆಗಾಗಿ ಪ್ರತಿ ಮಾಡಿದ್ದಾಳೆ. "ಶಕವರ್ಷ ೧೬೯೧ ವಿರೋಧಿನಾಮ ಸಂವತ್ಸರೆ ಮಾಘಮಾಸೆ ಶುಕ್ಲಪಕ್ಷ ಬಿದಿಗೆ ರವಿವಾರದಲ್ಲಿ ಧನಿಷ್ಠ ನಕ್ಷತ್ರ ಶುಭಲಗ್ನದಲ್ಲಿ ಪ್ರತಮಪ್ರಹಾರದಲ್ಲಿ ಹನಗಡಿಗೆರೆ ಶ್ರೀ ಪಾರ್ಶ್ವನಾಥ ಪಾದ ಮೂಲದಲ್ಲಿ ವಿಂಶತಿ ಪ್ರರೂಪಣೆ ಬರೆದು ಮುಗಿದಿತು, ಮಂಗಳ ಮಹಾಶ್ರೀ, ಚಂದ್ರಮತಿ ಅಕ್ಕುಳಜಿಯನವರು ಸ್ವಹಸ್ತದಿ ಬರದ, ದೋಷ ಬಂದಲ್ಲಿ ಬಲ್ಲವರು ತಿದ್ದಿಕೊಂಬುದು."[೧೦] ಹೀಗೆ ಕ್ರಿ.ಶ. ೧೭೬೯ರಲ್ಲಿ ಮಹಿಳೆಯಿಂದ ಸಿದ್ಧವಾದ ಹಸ್ತಪ್ರತಿಯನ್ನು ಶಾಂತಿಮತಿ ಅಜ್ಜಿಕೆಯು ೧೭೭೫ರಲ್ಲಿ ಶಾಸ್ತ್ರದಾನವಾಗಿ ಕೊಟ್ಟಳು. ಲಿಪಿಕಾರ್ತಿಯು ನೇಮಿತೀರ್ಥಂಕರರನ್ನು ನೆನೆದಿದ್ದಾಳೆ. ಬರಹ ದೋಷ ಕಂಡು ಬಂದಲ್ಲಿ ಬಲ್ಲವರು ತಿದ್ದಿಕೊಂಡು ಓದಬೇಕು ಎಂದು ವಿನಂತಿಸಿಕೊಂಡಿದ್ದಾಳೆ.

ಧಾರವಾಡದ ವಚನ ಭಂಡಾರಕ್ಕೆ ಸೇರಿದ ಲಿಂಗಲೀಲಾ ವಿಲಾಸ ಚಾರಿತ್ರದ ಒಂದು ಹಸ್ತಪ್ರತಿಯಲ್ಲಿ ಸಿಗ್ಗಾವಿಯ ಚೆನ್ನಗೌಡರ ಸೊಸೆ ಭೈರಾಜಿಯು "ಶ್ರೀ ಗುರುವಿನ ಕೃಪೆಯಿಂದ ಲಿಂಗಲೀಲಾ ವಿಲಾಸದ ಪುಸ್ತಕವನ್ನು ಪ್ರತಿ ಮಾಡಿ ಮಹಾಗಣಂಗಳು ಕೇಳಿ ಓದಿ ನಮ್ಮನ್ನು ಕೃತಾರ್ಥರನ್ನಾಗಿ ಮಾಡಿ ಎಂದು ಮಹಾಗಣಂಗಳಿಗೆ ಪ್ರತಿಮಾಡುತಿರ್ದೆನು."[೧೧] ಅಂದರೆ ಮಹಿಳೆಯರಿಗೆ ಶಿಕ್ಷಣ ಸಿಗದೆ ಇರುವಂತಹ ಸಂದರ್ಭದಲ್ಲಿ ಪ್ರತಿ ಮಾಡುವುದೇ ದುಸ್ತರವಾದ ಸಂದರ್ಭದಲ್ಲಿ ಹೆಣ್ಣು ಕೃತಿಯೊಂದನ್ನು ಪ್ರತಿ ಮಾಡಿ ಹಂಚುವುದು ಹಾಗೂ ಸ್ವತಃ ಪ್ರತಿ ಮಾಡಿರುವುದು ಮಹತ್ವ ಪೂರ್ಣವಾಗಿದೆ. ಹಾಗೆಯೇ ತನ್ನ ಗುರುವಿನ ಕೃಪೆಯಿಂದ ಪ್ರತಿ ಮಾಡಲಾಗಿದೆ ಎಂದಿರುವುದನ್ನು ಗುರುತಿಸಬಹುದು. ಅವಳು ತಪ್ಪು ಇದ್ದರೆ ತಿದ್ದಿ ಓದಿ ಕೃತಾರ್ಥರನ್ನಾಗಿ ಮಾಡಿ ಎಂದು ಭಿನ್ನವಿಸಿಕೊಂಡಿರುವುದು ವಿನಯದ ಜೊತೆಗೆ ಗಂಡು ವಿದ್ವತ್ತಿನ ಕುರಿತು ಇರುವ ಅಳುಕನ್ನು ತೋರಿಸುತ್ತದೆ.

"ಕನ್ನಡ ಅಧ್ಯಯನ ಸಂಸ್ಥೆಯ ಕೆ.ಎ. ೪೫೦ ಸಂಖ್ಯೆಯ ಸರ್ವಜ್ಞನ ಪದಗಳ ಹಸ್ತಪ್ರತಿಯನ್ನು ಚೆನ್ನಾಜಮ್ಮ ಪ್ರತಿ ಮಾಡಿದ್ದಾಳೆ"[೧೨] ಈಕೆ ಸರ್ವಜ್ಞನ ಪದಗಳ ಹಸ್ತಪ್ರತಿಯನ್ನು ಸರ್ವಜ್ಞನ ಲೋಕನೀತಿಯನ್ನು ತಿಳಿದುಕೊಳ್ಳುವ ಉದ್ದೇಶದಿಂದ ಪ್ರತಿ ಮಾಡುತ್ತಾಳೆ.

"ಸ್ವಸ್ತಿಶ್ರೀ ಸೇನಗಣಾಗ್ರಗಣ್ಯರು ಕರವೀರ ಕ್ಷೇತ್ರ ಕೊಲ್ಲಾಪುರದ ಶ್ರೀ ಜಿನಸೇನ ಭಟ್ಟಾರಕರ ಸ್ವಾಮಿ ಕರಕೃತ ಸಂಜಾತ ಗುಣಭದ್ರ ಸ್ವಾಮಿಗಳ ಶಿಷ್ಯರು ಶಾಂತಿಮತಿ ಕಂತಿಯು ಅಷ್ಟಿಗೆ ಪುರದ ಶ್ರೀ ಅಜಿತನಾಥನ ದಿವ್ಯ ಚೈತ್ಯಾಲಯದಲ್ಲಿ ಪ್ರತಿ ನೋಡಿ ಬರೆದೆವು."[೧೩] ಶಾಂತಿಮತಿ ಕಂತಿಯು ಶ್ರೀ ಅಜಿತನಾಥನ ದಿವ್ಯ ಚೈತ್ಯಾಲಯದಲ್ಲಿ ಪ್ರತಿ ನೋಡಿ ಬರೆದೆವು ಎಂದಿದ್ದಾಳೆ.

"ಶ್ರೀಮತಿ ಅಕ್ಕಗಳು ಬರೆದರು ಜಿನಮುನಿತನಯ"[೧೪] ಶ್ರೀಮತಿ ಅಕ್ಕಗಳು ಜಿನಮುನಿ ತನಯ ಗ್ರಂಥಗಳನ್ನು ಪ್ರತಿ ಮಾಡಿರುವುದು ಕಂಡುಬರುತ್ತದೆ.

"ಜೈನಾಚಾರದ ಒಂದು ಪ್ರತಿಯಲ್ಲಿ 'ಧರೆನುತ ಬೆಳ್ಗುಳ ಗ್ರಾಮದೊಳೊಪ್ಪುವ ಶ್ರೀ ಗೊಮ್ಮಟೇಶಾಲಯದೊಳೊ ಗುರುಪ್ರಭಾ ಚಂದ್ರಸ್ವಾಮಿಯವರ ಶಿಷ್ಯೆ ಪಾರಿಶ್ವ ಅಜ್ಜಿಗಳು'[೧೫] ಜೈನ ಧರ್ಮದ ಬೆಳವಣಿಗೆಗೆ ಕಾರಣವಾದ ಶ್ರವಣಬೆಳಗೊಳದಲ್ಲಿ ಪ್ರಭಾಚಂದ್ರಸ್ವಾಮಿ ಅವರ ಶಿಷ್ಯೆ ಪಾರಿಶ್ವ ಅಜ್ಜಿಗಳು ಚಂದಯ್ಯ ಕವಿಯ ಜೈನಾಚಾರದ ಕೃತಿಯನ್ನು ಪ್ರತಿಮಾಡಿದ ಸಂಗತಿ ತಿಳಿದುಬರುತ್ತದೆ.

"ಪೆನಗೊಂಡೆಯ ಶ್ರೀ ಶಾಂತಿಮತಿ ಅವ್ವಗಳ ಜೀಯನವರು ತಮಗೆ ಕೇವಲ ಜ್ಞಾನ ಪ್ರಾಪ್ತಿ ನಿಮಿತ್ತವಾಗಿ ಬರೆದಂಥಾ ಹಿರಿಯ ಪಂಚಪರಮೇಷ್ಠಿಗಳ ವ್ಯಾಖ್ಯಾನ"[೧೬] ಶಾಲಿವಾಹನ ಶಕೆ ೧೫೪೨ರ ರೌದ್ರನಾಮ ಸಂವತ್ಸರ ಮಾಘ ಶುದ್ಧ ೧೦ರಂದು ಹಿರಿಯ ಪಂಚ ಪರಮೇಷ್ಠಿಗಳ ವ್ಯಾಖ್ಯಾನ ಗ್ರಂಥವನ್ನು ಕೇವಲ ಜ್ಞಾನಕ್ಕಾಗಿ ಎಂದರೆ ಸರ್ವಜ್ಞತ್ವ, ಸಮಗ್ರ ಜ್ಞಾನವನ್ನು ಪಡೆದುಕೊಳ್ಳುವ ನಿಮಿತ್ತವಾಗಿ ತೀರ್ಥಂಕರ ಜಿನ ಅಥವಾ ಅರ್ಹಂತ, ಆಚಾರ್ಯ, ಉಪಾಧ್ಯಾಯ, ಸಾಧು ಮತ್ತು ಸಿದ್ದರೆಂಬ ಐದು ಜನ ಜೈನ ಗುರುಗಳ ವ್ಯಾಖ್ಯಾನ ಗ್ರಂಥವನ್ನು ಪ್ರತಿಮಾಡಿರುವುದು ಮಹತ್ತರವಾಗಿದೆ.

"ಯಲ್ಲಣ್ಣನ ಪುತ್ರಿ ಕಾಳೌವ್ವ ರಕ್ತಾಕ್ಷಿ ಸಂವತ್ಸರದ ಚೈತ್ರ ಬಹುಳ ಪದ್ಮಾವತಿ ಚರಿತೆಯನ್ನು ಪ್ರತಿ ಮಾಡಿರುವುದು ಕಂಡುಬಂದಿದೆ."[೧೭] ಯಲ್ಲಣ್ಣ ತನ್ನ ಮಗಳಿಗೆ ವಿದ್ಯೆಯನ್ನು ಕಲಿಯಲು ಸ್ಥಾನ ಕಲ್ಪಿಸಿಕೊಟ್ಟಿರುವುದು ವಿಶೇಷವಾಗಿದೆ. ಏಕೆಂದರೆ ಪುತ್ರರು ಅಕಾಲ ಮರಣಕ್ಕೀಡಾಗಿರಬೇಕು ಅಥವಾ ಪುತ್ರ ಸಂತತಿ ಇಲ್ಲದಿದ್ದಾಗ ಪುತ್ರಿಗೆ ವಿದ್ಯೆಯನ್ನು ಕಲಿಯಲು ಅವಕಾಶಮಾಡಿಕೊಟ್ಟಿರಬೇಕು.

"ವಿಕ್ರಮ ಸಂವತ್ಸರದ ಶ್ರಾವಣ ಶುದ್ಧ ಸಪ್ತಮಿ ಸ್ಥಿರವಾರದಲ್ಲು ಭೂ ಕೈಲಾಸ ಉಳುವೆ ಮಹಾಮನೆ ಸೂತ್ರಾನುವರ್ತಿಗಳಾದ ಬಾಳಪ್ಪ ಸ್ವಾಮಿಗಳ ಕರಸಂಜಾತಳಾದ ಪುಟ್ಟನಂಜಮ್ಮದು"[೧೮] ಪುಟ್ಟನಂಜಮ್ಮ ಉಳುವೆ ಮಹಾಮನೆ ಸೂತ್ರಾನುವರ್ತಿಗಳಾದ ಬಾಳಪ್ಪ ಸ್ವಾಮಿಗಳ ಶಿಷ್ಯೆ ಇವಳು ಅದೃಶ್ಯ ಕವಿಯ ಪ್ರೌಢರಾಯನ ಕಾವ್ಯ ಎಂಬ ಷಟ್ಪದಿ ರೂಪದ ದೇಶೀ ಕೃತಿಯನ್ನು ಪ್ರತಿ ಮಾಡಿದ್ದಾಳೆ. ಗುರುವಿನಿಂದ ಶಿಷ್ಯೆಗೆ ಜ್ಞಾನ ಪ್ರಸಾರವಾಗಿದೆ.

"ರಾಮನ ಸಾಂಗತ್ಯವ ಬರೆದವಳು ಓದಿಸುವ ಗುರುಬಸಪ್ಪ ದೇವರ ಮಗಳು ಸಿಂಗಮ್ಮ"[೧೯] ಓದಿಸುವ ಗುರು ಬಸಪ್ಪನವರು ತಮ್ಮ ಮಗಳಿಗೆ ವಿದ್ಯಾಭ್ಯಾಸ ಮಾಡಲು ಹೆಚ್ಚಿನ ಪ್ರೋತ್ಸಾಹ ನೀಡಿರುವುದು ಕಂಡುಬರುತ್ತದೆ.

"ಚಿದಾನಂದಾವಧೂತರ ಚಾರಿತ್ರವನ್ನು ಬರೆದವರು ಸರಸ್ವತೀಬಾಯಿ ತಂದೆ ಸಣ್ಣವೀರಪ್ಪ ಕುದುರಿ ಮೋತಿಯುವರು ಇದನ್ನೋದುವವರು ಇದರಲ್ಲಿ ಏನಾದರೂ ಹಸ್ತದೋಷಗಳಿದ್ದರೆ ತಮ್ಮ ಪುತ್ರಿಯೆಂದು ಭಾವಿಸಿ ತಿದ್ದಿಕೊಂಡು ಓದಬೇಕೆಂದು ಭಿನ್ನಹಗಳು."[೨೦] ಈಗಿನ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಕುದುರಿಮೋತಿ ಗ್ರಾಮದ ಸಣ್ಣವೀರಪ್ಪನವರ ಮಗಳಾದ ಸರಸ್ವತಿ ಬಾಯಿ ಅವರು ಶ್ರೀ ಚಿದಾನಂದ ಅವಧೂತ ರಾಜಯೋಗಿಗಳ ಚಾರಿತ್ರವನ್ನು ಸಾಧನೆ ಹಾಗೂ ಗುರಿ ಮುಟ್ಟುವಿಕೆಗೆ, ಒಳ್ಳೆಯ ಕಾರ್ಯ ಮತ್ತು ಆರೋಗ್ಯವಾಗಿ ಸಿರಿವಂತಿಕೆಯಿಂದ ಸತಿಪುತ್ರರು ಮಕ್ಕಳೊಂದಿಗೆ ಎಲ್ಲಾ ಸಕಲ ಸಮೃದ್ಧಿಯಾಗಿ ಬಾಳಲಿ ಎಂದು ಬರೆಯುತ್ತಾಳೆ.

"ನೈಜಾಂ ಇಲಾಖಾ ಸಿದ್ಧರಾಮಪುರದ ಶ್ರೀ ವಿರೂಪಾಕ್ಷಯ್ಯನವರ ಆಜ್ಞೆಯಂತೆ ಶ್ರೀಮತಿ ಕೆಂಚನ ಗುಡ್ಡದ ವೀರಮ್ಮನವರು ಬರೆದುಕೊಂಡು ಬಂದ ಪುಸ್ತಕ."[೨೧] ಶ್ರೀಮತಿ ಕೆಂಚನ ಗುಡ್ಡದ ವೀರಮ್ಮ ಎಂಬ ಮಹಿಳೆ ಕಾಡಸಿದ್ದೇಶ್ವರ ವಚನಗಳನ್ನು ಪ್ರತಿಮಾಡಿದ ಸಂಗತಿಯನ್ನು ತಿಳಿಸುತ್ತದೆ.

"ಸ್ವಸ್ತಿಶ್ರೀ ಮಡ್ಡಿಳ್ಳಿ ಕೊಲ್ಲಾಪುರ ಜಿನಕಂಚಿ ಪೆನುಗೊಂಡೆ
ಚತುಸಿದ್ಧ ಸಿಂಹಾಸನಾಧೀಶ್ವರರಾದಂಥಾ ಅಭಿಜಿತು ಜಿನಶೇನ
ಭಟ್ಟಾರಕ ಪಟ್ಟಾಚಾರ್ಯ್ಯ ಧರ್ಮಗುರುಗಳ ಪ್ರಿಯಾಗ್ರ
ಶಿಷ್ಯರಾದಂಥಾ ಅನಂತಮತಿ ಕಂತಿಕೆಯರ ಸ್ವ ಹಸ್ತದ ಬರಹ"[೨೨]

ಅಭಿಜಿತು ಜಿನಶೇನ ಭಟ್ಟಾರಕ ಪಟ್ಟಾಚಾರ್ಯ್ಯರ ಶಿಷ್ಯರಾದಂಥಾ ಅನಂತಮತಿ ಕಂತಿಕೆಯರು ಸ್ವ ಹಸ್ತದ ಬರಹದಿಂದ ಶಾಸ್ತ್ರದಾನಕ್ಕಾಗಿ ಅಂತಿಮಗೊಂಡನ ತತ್ಪುತ್ರ ಸಮ್ಯಾಕ್ತ್ವ ಚೂಡಾಮಣಿಯೆನಿಸಿದ ಸಿದ್ದಪ್ಪನು ಚಾವುಂಡರಾಯನ ತ್ರಿಷಷ್ಟಿ ಲಕ್ಷಣ ಮಹಾಪುರಾಣವನ್ನು ಶಾಸ್ತ್ರದಾನಕ್ಕಾಗಿ ಬರೆಯಿಸಿದ ಪ್ರತಿ ಆಗಿದೆ.

"ಹಸ್ತಾಂಜಲಿತರಾದ ರುದ್ರಾಕ್ಷಿಮಠದ ಸ್ವಾಮಿಗಳು ಬರೆಸಿದ
ವಚನಗಳು। ಹಸ್ತಾಕ್ಷಿರ ಖನಿವಂಣೆವ್ವ ಗುಜಮಾಗಡಿ।
ಈಕೆಯು ೮೮೨ ವಚನ ಬರೆದು ಸ್ವರ್ಗವಶವಾದಳು।
ತರುವಾಯ ಚಿರಂಜೀವಿ ಹುಚ್ಚಯ್ಯ ಮಲ್ಲಿಕಾರ್ಜುನಯ್ಯ
ಗುಜುಮಾಗಡಿ ಈತನು ೭೫ ವಚನಗಳು ಬರೆದು
ಸಮಾಪ್ತ ಮಾಡಿರುತ್ತಾನೆ।"[೨೩]

ಖನಿವಂಣೆವ್ವ ಗುಜಮಾಗಡಿ ಅವರು ಬಸವಣ್ಣ ಅವರ ೮೮೨ ಷಟ್ಸ್ಥಲ ವಚನಗಳನ್ನು ರುದ್ರಾಕ್ಷಿಮಠದ ಸ್ವಾಮಿಗಳ ಅಪ್ಪಣೆಯಿಂದ ಪ್ರತಿ ಮಾಡುತ್ತಿರುವ ಸಂದರ್ಭದಲ್ಲಿ ನಿಧನಳಾಗುತ್ತಾಳೆ. ಇಂತಹ ಸಂದರ್ಭದಲ್ಲಿ ಈಕೆಯ ಮಗ ಹುಚ್ಚಯ್ಯ ಮಲ್ಲಿಕಾರ್ಜುನಯ್ಯ ಗುಜುಮಾಗಡಿ ಅವರು ೭೫ ವಚನಗಳನ್ನು ಬರೆದು ಪೂರ್ಣಗೊಳಿಸುವ ಸಂಗತಿಯು ತಿಳಿದುಬರುತ್ತದೆ.

"ಸಿದ್ಧಾರ್ಥಿ ಸಂವತ್ಸರದ ಮಾಘ ಶುದ್ಧ ೧೦ ರಲ್ಲೂ ಶ್ರೀ ಮತ್ತು ಆಲದಹಳ್ಳಿ ಮಗ ಗುರು ಬಸವಯ್ಯಗೆ ಓದಿಸುವ ಶೇಷಪ್ಪನು ಬರೆದುಕೊಟ್ಟ ಕೋಡಗದ ಸಾಂಗತ್ಯ. ಈ ಪ್ರತಿಯನ್ನು ದಿನಾಂಕ

೨೩.೧೦.೧೯೫೬ರಲ್ಲಿ ಶ್ರೀಮತಿ ಬಿ.ಕೆ. ಪ್ರಭಾಮಣಿಯವರು ಪ್ರತಿ ಮಾಡಿದ್ದಾರೆ."[೨೪] ಬಿ.ಕೆ. ಪ್ರಭಾಮಣಿ ಅವರು ಕೋಡಗದ ಸಾಂಗತ್ಯ ಪ್ರತಿಯನ್ನು ಸ್ವಾತಂತ್ರ್ಯ ನಂತರದಲ್ಲಿ ಪ್ರತಿಮಾಡಿದ್ದಾರೆ.

"ಉರಿಲಿಂಗ ಪೆದ್ದಿಗಳ ಸ್ತ್ರೀಯರ ವಚನ ಕಾಳವ್ವ"[೨೫] ಕಾಳವ್ವೆ ಉರಿಲಿಂಗ ಪೆದ್ದಿಗಳ ವಚನಗಳನ್ನು ಪ್ರತಿಮಾಡಿರುವುದು ಕಂಡು ಬರುತ್ತದೆ. ಇದು ಪರಿಶೀಲಿಸಬೇಕಾದ ಸಂಗತಿಯಾಗಿದೆ.

"ಹೇಮಳಂಬಿ ಸಂವತ್ಸರದ ರತ್ನಕರಂಡಕ ಶ್ರಾವಣ ಶುದ್ಧ ೧೪ರಲು ರತ್ನಕರಂಡಕದ ಪ್ರತಿಯನ್ನು ಹಂಗುಳದ ದೇವುರವುಪಾಧ್ಯಾಯರು ಬರದ್ದು. ವಿಕ್ರಮನಾಮ ಸಂವತ್ಸರದ ಫಾಲ್ಗುಣ ಮಾಸ ಬಹುಳ ದಶಮಿಯೊಳು ಬರೆದರು ಪಾರೀಶ್ವಮತಿ ಬಾಯೀಜಿಯವರು."[೨೬] ರತ್ನಕರಂಡಕದ ಪ್ರತಿಯನ್ನು ಹಂಗುಳದ ದೇವುರವುಪಾಧ್ಯಾಯರು ಬರೆದಿದ್ದು ಆ ಪ್ರತಿಯನ್ನು ನೋಡಿಕೊಂಡು ಪಾರೀಶ್ವಮತಿ ಬಾಯೀಜಿಯವರು ಪ್ರತಿ ಮಾಡಿದ್ದಾರೆ.

ಮಲ್ಲಿಕಬ್ಬೆಯ ಉಲ್ಲೇಖ "ಕುಮುದೇಂದು ವಲನಿಯು ಬರೆದ ಮೂಲ ಪ್ರತಿಯನ್ನು ನೋಡಿದವರು, ಓದಿದವರು ಓದಿಸಿದವರು ಎಂದರೆ ಮಹಾತಾಯಿ ಮಲ್ಲಿಕಬ್ಬೆಯೊಬ್ಬಳು ಕನ್ನಡ ಕವಿ ರನ್ನನ ಪೋಷಕಳಾದ ದಾನಚಿಂತಾಮಣಿ ಅತ್ತಿಮಬ್ಬೆಯಂತೆ ಇವಳು ಒಂದು ಪ್ರತಿಯನ್ನೇ ಮಾಡಿಸಿದಳು"[೨೭] ಸಿರಿಭೂವಲಯದ ಒಂದು ಪ್ರತಿಯ ಮೇಲೆ ಮಲ್ಲಿಕಬ್ಬೆಯರ ಪ್ರತಿ ಬಂದಿದೆ. ಇದರಿಂದ ಮಲ್ಲಿಕಬ್ಬೆ ಲಿಪಿಕಾರ್ತಿಯೂ ಆದಂತೆ ಸಾಹಿತ್ಯ ಆಸಕ್ತಳು ಪೋಷಕಳೂ ಆಗಿದ್ದು ಕಂಡುಬರುತ್ತದೆ.

ಕ್ರಿ.ಶ. ೯೦೫ರಲ್ಲಿ ಸರಸ್ವತೀ ಪ್ರತೀಕದಂತಿದ್ದ ಸಿದ್ಧರ್ಷಿಯ ಉಪಮಿತಭವ ಪ್ರಪಂಚ ಕಥಾ ಗ್ರಂಥವನ್ನು ಕುರಿತು ಉಪನ್ಯಾಸ ಮಾಡಿದಾಗ ಅಲಂಕಾರವನ್ನು ಕೇಳಿ ಮೊಟ್ಟ ಮೊದಲು ಪ್ರತಿಯನ್ನು ಸಿದ್ಧಗೊಳಿಸಿದವಳು 'ಗುಣಸಾಧ್ವಿ' ಎಂಬ ಜೈನಕಂತಿ. ಇವಳು 'ಉಪಮಿತ ಭವ ಪ್ರಪಂಚ ಕಥಾವನ್ನು ಕುರಿತು ಉಪನ್ಯಾಸ ಮಾಡಿದಾಗ ಆ ಕೃತಿಯ ಅಲಂಕಾರವನ್ನು ಕೇಳಿ ಬರೆದಿದ್ದಾಳೆ.'

"ಕ್ರಿ.ಶ. ೧೧೧೮ರಲ್ಲಿ ಸಿದ್ಧರಾಜ ಜಯಸಿಂಹನ ಕಾಲದಲ್ಲಿ ಮಹಾನಂದ ಶ್ರೀ ಮಹತ್ತರಾ ಮತ್ತು ಗಣನಿವೀರಮತಿ ಎಂಬ ಇಬ್ಬರು ಕಂತಿಯರು ಜಿನ ಭದ್ರನ 'ವಿಶೇಷಾವಶ್ಯಕ ಭಾಷಾ' ಎಂಬ ಗ್ರಂಥಕ್ಕೆ ವಿವರವಾದ ಟೀಕೆಯನ್ನು ಬರೆಯಲು ಹೇಮೇಂದ್ರನಿಗೆ ಸಹಾಯ ಮಾಡಿದರು." ಇವರು ಹಸ್ತಪ್ರತಿಯ ಪೋಷಕರಾಗಿ ಸಂರಕ್ಷಣೆ ಮತ್ತು ಕೃತಿ ಬರೆಯಲು ಸಹಾಯ ಮಾಡಿದ್ದಾರೆ.

"ಕ್ರಿ.ಶ. ೧೧೫೦ರಲ್ಲಿ ಗುಣಸಮೃದ್ಧಿ ಮಹತ್ತಾರ ಎಂಬ ಜೈನ ಕಂತಿಯರು 'ಅಂಜನ ಸುಂದರೀ ಚರಿತ್ರ' ಎಂಬ ಪ್ರಾಕೃತ ಗ್ರಂಥವನ್ನು ರಚಿಸಿದ್ದಾರೆ."

ಹಸ್ತಪ್ರತಿ ಲಿಪಿಕಾರರಲ್ಲಿ ಲಿಪಿಕಾರ ವೃತ್ತಿಯನ್ನು ಅಧಿಕ ಸಂಖ್ಯೆಯಲ್ಲಿ ಕೈಕೊಂಡವರು ಪುರುಷರೇ ಆಗಿದ್ದರು. ಇವರಿಗೆ ಹೋಲಿಸಿದರೆ ಮಹಿಳಾ ಲಿಪಿಕಾರ್ತಿಯರು ಸಂಖ್ಯಾತ್ಮಕವಾಗಿ ತುಂಬಾ ಕಡಿಮೆ ಕಂಡು ಬರುತ್ತಾರೆ. ಮಹಿಳೆಯರು ಲಿಪೀಕರಣ ಹಾಗೂ ಪ್ರತೀಕರಣ ಕೆಲಸಕ್ಕೆ ಈ ಕ್ಷೇತ್ರಕ್ಕೆ ಮೊದಲು ತೊಡಗಿಕೊಂಡಿದ್ದು ಧಾರ್ಮಿಕ ಕೃತಿಗಳನ್ನು ಶಾಸ್ತ್ರದಾನ ಕೊಡುವುದರ ಮೂಲಕ. ೨೦ಕ್ಕೂ ಹೆಚ್ಚಿನ

ಸಂಖ್ಯೆಯಲ್ಲಿ ಮಹಿಳಾ ಲಿಪಿಕಾರ್ತಿಯರು ಕಂಡು ಬರುತ್ತಾರೆ. ಪ್ರಾಚೀನ ಕಾಲದಲ್ಲಿ ಹಸ್ತಪ್ರತಿಗಳನ್ನು ದೇವಿ ಸರಸ್ವತಿಯ ಅವತಾರದಲ್ಲಿ ಪೂಜೆ ಪುನಸ್ಕಾರಕ್ಕೆ ಒಳಪಟ್ಟಿದ್ದವು. ಇಂತಹ ಸಂದರ್ಭದಲ್ಲಿ ಲೌಕಿಕ ಗ್ರಂಥಗಳಿಗಿಂತ ಧಾರ್ಮಿಕ ಕೃತಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿ ಮಾಡಿರುವುದು ಕಂಡು ಬಂದಿದೆ. ಇಲ್ಲಿ ಮಹಿಳೆಯರು ಧರ್ಮ ಪ್ರಚಾರಕ್ಕಾಗಿ ಹಾಗೂ ತಮ್ಮ ಧರ್ಮದ ತತ್ತ್ವವನ್ನು ತಿಳಿದುಕೊಳ್ಳುವುದಕ್ಕಾಗಿ ಪ್ರತಿ ಮಾಡುತ್ತಿದ್ದರು. ಏಕೆಂದರೆ ಇವರಿಗೆ ಅನಿವಾರ್ಯ ಕಾರಣಗಳಿಂದ ಧಾರ್ಮಿಕ ಕೃತಿಗಳನ್ನೇ ವಿದ್ಯಾಭ್ಯಾಸದ ಅಥವಾ ಕಲಿಕೆಯ ಭಾಗವಾಗಿ ಅಧ್ಯಯನ ಮಾಡಲು ಅನುಕೂಲವಾಗುವಂತೆ ಪ್ರತಿ ಮಾಡುತ್ತಿದ್ದರು. ಹೆಚ್ಚಿನ ಸಂಖ್ಯೆಯಲ್ಲಿ ಗುರುಶಿಷ್ಯರ ಸಂಬಂಧದಿಂದ ಪ್ರತಿ ಮಾಡಿರುವುದು ಕಂಡು ಬರುತ್ತದೆ. ಯಾವ ಕಾಲದಲ್ಲಿ ಮತ್ತು ಯಾವ ಧರ್ಮದಲ್ಲಿ ಸ್ತ್ರೀಯರಿಗೆ ಶಿಕ್ಷಣ ಕಲಿಯಲು ನಿಷೇಧಿಸಿದರೋ ಅಂತಹ ಒಂದು ವರ್ಗದಲ್ಲಿ ಅಥವಾ ಸಂದರ್ಭದಲ್ಲಿ ಮಹಿಳೆಯರು ಸಾಹಿತ್ಯ ಕ್ಷೇತ್ರಕ್ಕೆ ಪ್ರವೇಶ ಪಡೆದಿರುವುದು ವಿಶೇಷವಾಗಿದೆ. ಮಹಿಳೆಯರು ಇಲ್ಲಿ ಕೇವಲ ಲಿಪೀಕರಣ ಮತ್ತು ಪ್ರತೀಕರಣ ಕೆಲಸ ಮಾಡಿದರೂ ಗ್ರಂಥಸಂಪಾದನೆ ದೃಷ್ಟಿಯಿಂದ ಅದೊಂದು ಗಂಭೀರವಾಗಿ ಪರಿಗಣಿಸುವ ಸಂಗತಿಯಾಗಿದೆ.

ಮಹಿಳೆಯರಿಗೆ ಪ್ರತಿಮಾಡಿ ಕೊಟ್ಟವರು

ಎಲ್ಲಾ ಧರ್ಮಗಳಲ್ಲಿಯೂ ಶಾಸ್ತ್ರದಾನ ಕೊಡುವ ಪದ್ಧತಿ ಇರುವುದನ್ನು ಕಾಣಬಹುದು. ಮುಖ್ಯವಾಗಿ ಜೈನಧರ್ಮೀಯರಲ್ಲಿ ಹೆಚ್ಚು ದಾನ ಕೊಡುವ ಮತ್ತು ಕೊಟ್ಟಿರುವ ಉಲ್ಲೇಖಗಳು ಇವೆ. ಏಕೆಂದರೆ ಮಹಿಳೆಯರು ಪುರಾಣ ಪುಣ್ಯಕಥೆಗಳನ್ನು ಓದಿ ತಿಳಿದುಕೊಳ್ಳುವಂತೆ ಅವರ ಕಲಿಕೆಗಾಗಿ, ಜ್ಞಾನಾರ್ಜನೆಗಾಗಿ ಪುರುಷರು ಮತ್ತು ಮಹಿಳೆಯರು ಪ್ರತಿಮಾಡಿಸಿ ಧಾರ್ಮಿಕ ಮತ್ತು ಲೌಕಿಕ ಕೃತಿಗಳನ್ನು ಕೊಟ್ಟಿರುವುದನ್ನು ಗಮನಿಸಬಹುದು. ಹಾಗೆಯೇ ಸ್ತ್ರೀ ಶಿಕ್ಷಣ ಶೂನ್ಯವಾಗಿದ್ದ ಕಾಲದಲ್ಲಿ ವಿಶೇಷವಾಗಿ ಧಾರ್ಮಿಕ ಗ್ರಂಥಗಳ ಅಭ್ಯಾಸದಲ್ಲಿ ಸ್ತ್ರೀಯರು ಸಾಕಷ್ಟು ತೊಡಗಿದ್ದು ಕಂಡುಬರುತ್ತದೆ.

ಗಜೇಂದ್ರ ಮೋಕ್ಷ ಎಂಬ ಗ್ರಂಥವು ವಿಷ್ಣುವನ್ನು ಸ್ತುತಿಸಿ ಸಂಕಟಗಳಿಂದ ಮುಕ್ತನಾದವನ ಕಥೆಯನ್ನು ಹೇಳುತ್ತದೆ. ಈ ದೃಷ್ಟಿಯಿಂದ ಕೆ. ೮೩೨ಸಂಖ್ಯೆಯ ಗಜೇಂದ್ರ ಮೋಕ್ಷ ಹಸ್ತಪ್ರತಿಯಲ್ಲಿರುವ "ಸುತ್ತೂರ ಸಿದ್ಧಕ್ಕನಿಗೆ ಸಮಸ್ತ ಕಂಟಕ ನಿವೃತ್ತಿರಸ್ತು ರಂಗಧಾಮ ಕೃಪಾ ನಿತ್ಯಾಸ್ತು."[೨೮] ಮನುಷ್ಯನಿಗೆ ವಿಪತ್ತುಗಳು ಎದುರಾದಾಗ ಗ್ರಂಥವಾಚನ ಮತ್ತು ಧಾರ್ಮಿಕ ಕೃತಿಗಳನ್ನು ಬರೆಸಿ ದಾನ ಮಾಡುವ ಮೂಲಕ ಕಷ್ಟದಿಂದ ದೂರವಾಗಬಹುದು ಎಂಬ ನಂಬಿಕೆಯನ್ನು ಇಟ್ಟುಕೊಂಡಿದ್ದರು.

"ದೊಡ್ಡಯ್ಯನ ಚಂದ್ರಪ್ರಭ ಚರಿತೆಯ ಕೆ, ೧೫೧೯ ಸಂಖ್ಯೆಯ ಪ್ರತಿ ಅಕ್ಕಮ್ಮ ಎಂಬ ಮಹಿಳೆಗಾಗಿ ಸಿದ್ಧಪಡಿಸಿದುದಾಗಿದೆ. ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರುಷ ೧೬೨೧ನೇಯ ಪ್ರಮಾತಿ ಸಂವತ್ಸರದ ಪುಷ್ಯ ಶುದ್ಧ.೧೩ರಲ್ಲು ಶುಭದಿವಸದಲ್ಲೂ ಮೈಸೂರು ಬಸ್ತಿಯ ದೊಡ್ಡೈಯನವರ ಮಗನು ಶಾಂತೈಯನು ಯಳವಂದೂರ ಮುದ್ದೈಯ್ಯ ಪಂಡಿತರ

ಮಗಳು ಅಕ್ಕಮ್ಮನವರಿಗೆ ಬರೆದುಕೊಟ್ಟಂಥ ಶ್ರೀ ಚಂದ್ರಪ್ರಭ ಚರಿತ್ರಕ್ಕೆ ಭದ್ರಂ ಶುಭಂ ಮಂಗಳಂ ಎಂದಿದೆ"[೨೯] ಮಹಿಳೆಯರ ಓದು ಬರಹವನ್ನು ವಿಸ್ತರಿಸಲು ಧಾರ್ಮಿಕ ಕೃತಿಯನ್ನು ದೊಡ್ಡೈಯನವರ ಮಗನು ಶಾಂತೈಯನು ಯಳವಂದೂರ ಮದ್ದೈಯ್ಯ ಪಂಡಿತರ ಮಗಳಿಗೆ ಬರೆದು ಕೊಟ್ಟಿದ್ದಾರೆ.

"ವಡ್ಡಾರಾಧನೆಯ ಕೆ.ಎ. ೨೯೭ ಸಂಖ್ಯೆಯ ಹಸ್ತಪ್ರತಿಯನ್ನು 'ಕಮಳಶ್ರೀ' ಅವ್ವೆಗಳಿಗಾಗಿ ಭಾನುಮುನಿಗಳ ಆದೇಶದ ಮೇಲೆ ಬರೆಯಲಾಗಿದೆ. ಬರೆಸಿಕೊಟ್ಟವರು ಓಜಣ್ಣ ಸೆಟ್ಟಿಯರ ಮಗ ಕಲ್ಲಣ್ಣ ಸೆಟ್ಟಿ."[೩೦] ವಿಶೇಷವಾಗಿ ಕಥಾಕೋಶಗಳು ಮಹಿಳಾ ಲೋಕದಲ್ಲಿ ಜನಪ್ರಿಯವಾಗಿದ್ದವು. ಏಕೆಂದರೆ ವಡ್ಡಾರಾಧನೆಯ ಕಥೆಗಳನ್ನು ಭಾನುಮುನಿಗಳ ಆದೇಶದ ಮೇರೆಗೆ ಓಜಣ್ಣ ಸೆಟ್ಟಿಯರ ಮಗ ಕಲ್ಲಣ್ಣ ಸೆಟ್ಟಿ ಅವರು 'ಕಮಳಶ್ರೀ ಅವ್ವೆಗಳಿಗಾಗಿ ಬರೆಯಿಸಿದ ಪ್ರತಿ, ಅಂದರೆ ಜೈನ ಧರ್ಮದಲ್ಲಿ ಮಹಿಳೆಯರು ವಡ್ಡಾರಾಧನೆಯ ಕಥೆಗಳನ್ನು ಅಭ್ಯಾಸ ಮಾಡಿರುವುದು ಮಹತ್ತರವಾಗಿದೆ.'

"ಸ್ವಸ್ತಿಶ್ರೀ ಶಕವರ್ಷ ೧೪೬೮ನೆಯ ಪರಾಭವ ಸಂವತ್ಸರದ ವೈಶಾಖ ಶುದ ೧೬ ಶುಕ್ರವಾರದಲ್ಲಿ ಯೇದಲಾಪುರದ ಚೆನ್ನಪಾರ್ಶ್ವನಾಥನ ಶ್ರೀಪಾದ ಸನ್ನಿಧಾನದಲ್ಲಿ ಅಕ್ಕನೂರ ಸಿರಗಪನು ಮಂಡಿಗೆಯ ಪಾಯಣನ ಮಗಳು ಪದುಮಾಯಿಗೆ ಬರೆದು ಕೊಟ್ಟ ಸುಕುಮಾರ ಚರಿತ್ರೆಯ ಪುಸ್ತಕಕ್ಕೆ ಮಂಗಳ ಮಹಾಶ್ರೀ."[೩೧] ಇದು ತನ್ನ ಮೂವರು ಪುತ್ರಿಯರನ್ನು ಓದಿಸುವುದಕ್ಕೆ ಬರೆದ ಪ್ರತಿಯಾಗಿದೆ. ಹಾಗೆಯೇ ಸುಕುಮಾರ ಚರಿತೆ ಸಾಂಗತ್ಯದ ಕೃತಿಯನ್ನು ಹೆಣ್ಣು ಮಕ್ಕಳ ಕಲಿಕೆಗೆ ಅನುಕೂಲವಾಗುವಂತೆ ಪ್ರತಿ ಮಾಡಿಕೊಟ್ಟಿರುವುದು ವಿಶೇಷವಾಗಿದೆ.

"ಪುಣ್ಯಾಸ್ರವ ಕಥಾಕೋಶದ ಕೆ.ಎ. ೬೦೪ ಹಸ್ತಪ್ರತಿಯನ್ನು 'ಧರಣೇಂದ್ರನೆಂಬ' ಲಿಪಿಕಾರ ಕ್ರಿ.ಶ. ೧೮೪೨ರಲ್ಲಿ ಸತೀ ಸ್ವರಪಾಠನಾರ್ಥವಾಗಿಯುಂ ಜ್ಞಾನೋದಯ ನಿಮಿತ್ತವಾಗಿಯುಂ ಬರೆದಿರುವುದಾಗಿ ತಿಳಿದು ಬರುತ್ತದೆ."[೩೨] ಪುಣ್ಯಾಸ್ರವ ಕಥಾಕೋಶದ ಹಸ್ತಪ್ರತಿಯನ್ನು ಧರಣೇಂದ್ರನೆಂಬ ಲಿಪಿಕಾರ ತನ್ನ ಹೆಂಡತಿಯು ಸ್ವತಃ ಓದುವುದಕ್ಕಾಗಿ ಹಾಗೂ ಜ್ಞಾನೋದಯದ ನಿಮಿತ್ತವಾಗಿಯೂ ಬರೆದಿರುವುದು ತಿಳಿದು ಬರುತ್ತದೆ.

"ಕೆಸ್ತೂರು ಉಪಾಧ್ಯಾಯರ ಮಗ ರಂಗಪ್ಪ ಬರದುಕೊಟ್ಟ ತಳಕಾಡು ನಾಯಿಕಶ್ಯಾನಿ ಕೆಂಪಿ ಮಗಳು ನಂಜಿಗೆ ಬರದುಕೊಟ್ಟದು."[೩೩] ವೇಶ್ಯಾವಾಟಿಕೆಯ ಹೆಣ್ಣು ಮಕ್ಕಳು ಕೂಡ ಕಲೆಯ ಜೊತೆಗೆ ಸಾಹಿತ್ಯದಲ್ಲಿಯೂ ಅಭಿರುಚಿ ಉಳ್ಳವರಾಗಿದ್ದರು. ಏಕೆಂದರೆ ಗಣಿಕಾ ಕುಲದ ಕೆಂಪಿ ತನ್ನ ಮಗಳು ನಂಜಿಗೆ ಕೆಸ್ತೂರು ಉಪಾಧ್ಯಾಯರ ಮಗ ರಂಗಪ್ಪನವರಿಂದ ಭಾಮಿನಿಷಟ್ಪದಿ ರೂಪದ ಐರಾವತ ಗ್ರಂಥವನ್ನು ಬರೆಸಿಕೊಟ್ಟಿರುವುದು ಮಹತ್ವವಾಗಿದೆ. ಏಕೆಂದರೆ ಧಾರ್ಮಿಕ ಕೃತಿಯನ್ನು ಪೂಜ್ಯಭಾವನೆಯಿಂದ ಮೇಲ್ವರ್ಗದ ಮಹಿಳೆಯರು ಹಾಗೂ ಪುರುಷರು ಪ್ರತಿ ಮಾಡಿ ಪಠಣ ಮಾಡುತ್ತಿದ್ದರು. ಇಂತಹ ಐರಾವತ ಗ್ರಂಥವನ್ನು ಕೆಳವರ್ಗದ ಮಹಿಳೆಯೊಬ್ಬಳು ತನ್ನ ಮಗಳಿಗೆ ಪ್ರತಿ ಮಾಡಿಸಿಕೊಟ್ಟಿರುವುದು ವಿಶೇಷವಾಗಿದೆ. ಏಕೆಂದರೆ ಆ ಕಾಲದಲ್ಲಿ ಕೆಳವರ್ಗದ ಸ್ತ್ರೀಯರಿಗೂ

ವಿದ್ಯೆಯನ್ನು ಕಲಿಯಬೇಕೆಂಬ ಆಕಾಂಕ್ಷೆ ಹಾಗೂ ಅವಕಾಶ ಇದ್ದಿತು ಎಂಬುವುದು ಇದರಿಂದ ಗೊತ್ತಾಗುತ್ತದೆ.

"ಅಮರೇಂದ್ರವಂದಿತ ಶ್ರೀ ಸುಕುಮಾರನ ಚಾರುಚರಿತದ ಪ್ರತಿಯನು ಜಿನಚಂದ್ರನು ತನ್ನ ಪುತ್ರಿತ್ರಯರ ನೋದಿಸಲೆಂದು."[೩೪] ಬರೆಯಲಾಗಿದೆ ಎಂಬುದು ಸುಕುಮಾರ ಚರಿತೆ ಹಸ್ತಪ್ರತಿಯಿಂದ ವ್ಯಕ್ತವಾಗುತ್ತದೆ. ಹೀಗೆ ಮಹಿಳೆಯರ ವಿದ್ಯಾಭ್ಯಾಸಕ್ಕಾಗಿ ಪ್ರಾಚೀನ ಕೃತಿಗಳನ್ನು ಪ್ರತಿಮಾಡಿ ಕೊಟ್ಟಿರುವುದು ವಿಶೇಷವಾಗಿದೆ.

"ಅತ್ತಣೂರ ಮಾಕವೆಗೆ ಬರೆದುಕೊಟ್ಟರು ಅನಂತ ಕೀರ್ತಿದೇವರು ಬಡಗನವರು ಪ್ರಿಯಾರ್ಥ ನಿಮಿತ್ತವಾಗಿ."[೩೫] ಅನಂತ ಕೀರ್ತಿದೇವರು ಬಡಗನ ಅವರು ಅತ್ತಣೂರ ಮಾಕವೆಗೆ ಅಧ್ಯಯನ ಮಾಡುವುದಕ್ಕೆ ಬರೆದುಕೊಟ್ಟಿದ್ದಾನೆ.

"ಬತ್ತಿ ಬುದ್ದಪ್ಪನ ಪುತ್ರ ಧರ್ಮನು ಕೊಲ್ಲಾಪುರದ ಪಾರಿಶ್ವಿಮತಿ ಬಾಯಿಜೀಯರಿಗೆ ದ್ವಾದಶಾನುಪೇಕ್ಷೆ ಗ್ರಂಥವನ್ನು ಬರೆದುಕೊಟ್ಟನು."[೩೬]

"ಬರೆದು ಧರ್ಮಮತಿ ಅಕ್ಕಳ ಜೀಯವರಿಗೆ ಕೊಟ್ಟರು ಶ್ರೀ ಚಾರುಕೀರ್ತಿಯವರ ಶಿಷ್ಯ ಧರ್ಮಕೀರ್ತಿವರ್ಣಿಯು."[೩೭]

ಕೊಲ್ಲಾಪುರದ ಪಾರಿಶ್ಚಿಮತಿ ಬಾಯಿಜೀ ಅವರಿಗೆ ದ್ವಾದಶಾನುಪೇಕ್ಷೆ ಎಂಬ ಚಂಪೂ ಕೃತಿಯನ್ನು ಓದುವಷ್ಟು ಭಾಷಾ ತಿಳಿವಳಿಕೆ ಇತ್ತು. ಹಾಗೆಯೇ ಧರ್ಮಮತಿ ಅಕ್ಕಳಜೀಯ ಅವರಿಗೆ ಶ್ರೀ ಚಾರುಕೀರ್ತಿ ಅವರು ಧಾರ್ಮಿಕ ಕೃತಿಗಳನ್ನು ಹೆಣ್ಣು ಮಕ್ಕಳು ಅಭ್ಯಾಸ ಮಾಡುವುದಕ್ಕೆ ಪ್ರತಿ ಮಾಡಿಕೊಟ್ಟಿರುವುದು ಕಂಡು ಬಂದಿದೆ.

"ಬುಕ್ಕುಸೆಟ್ಟಿ ಅಕ್ಕವ್ವನವರಿಗೆ ಸಮ್ಯಕ್ತ್ವ ಪ್ರಾಪ್ತಿ ನಿಮಿತ್ತವಾಗಿ ಪಂಚಪರಮೇಷ್ಠಿಗಳ ಬೊಲ್ಲಿ ಕರ್ಮ ಪ್ರಕೃತಿ, ಷಟ್, ಪ್ರಾಬೃತ, ಆತ್ಮಧ್ಯಾನ ಲಕ್ಷಣ, ಈರ್ಯ್ಯಾಪದಿ, ಸಮಾಯಿಕ ಈ ಜಿನಸಿದ್ಧಾಂತದ ಶಾಸ್ತ್ರದಾನಾರ್ಥವಾಗಿ ದ್ರಾವಿಡ ದೇಶ ಅಪ್ಪಣ ವಿದ್ಯಾರ್ಥಿ."[೩೮] ಬುಕ್ಕುಶೆಟ್ಟಿ ಅವ್ವನವರು ಜಿನಮತದ ಬಗ್ಗೆ ಇರುವ ಆತ್ಮವಿಶ್ವಾಸಕ್ಕಾಗಿ ಹಾಗೂ ಸಮ್ಯಕ್‌ದ್ದರ್ಶನ ಮತ್ತು ಐದು ಜನ ತೀರ್ಥಂಕರ ಅಥವಾ ಜಿನ ಸಾಧು ಸಿದ್ದರೆಂಬ ಜೈನ ಗುರುಗಳ ಕಥೆ ಅಥವಾ ಉಕ್ತಿಗಳನ್ನು ತಮ್ಮ ಆತ್ಮಧ್ಯಾನದಲ್ಲಿ ಮಗ್ನರಾಗುವುದಕ್ಕೆ ದ್ರಾವಿಡ ದೇಶದ ಅಪ್ಪಣ ವಿದ್ಯಾರ್ಥಿಯ ಮೂಲಕ ಪ್ರತಿ ಮಾಡಿಸಿಕೊಂಡಿದ್ದಾರೆ.

"ಚಿಗನಾಯಕನಹಳ್ಳಿ ಲಿಂಗಪ್ಪನು ಮಹಾರಾಜೇಶ್ರೀ ಚೆನ್ನಾಜಮ್ಮನವರಿಗೆ ಪಾರಮಾರ್ಥಿಕ ಬರೆದು ಒಪ್ಪಿಸಿದಂತ."[೩೯] 'ತ್ರಿಪದಿ' ರೂಪದ ಸರ್ವಜ್ಞನ ವಚನಗಳು ಪುಸ್ತಕಗಳನ್ನು ಬರೆದು ಮಹಾರಾಜೇಶ್ರೀ ಚೆನ್ನಾಜಮ್ಮನ ಅವರಿಗೆ ಒಪ್ಪಿಸಿದ್ದಾರೆ.

"ಚಿಕ್ಕದೇವರಾಯ ಸ್ವಾಮಿಯವರ ಕೊಮಾರತಿಯಾದ ಚಿಕ್ಕ ಅಮೃತಾಜಮ್ಮಣ್ಣಿಯವರ ಪಾದದಯಕ್ಕೆ ಪಾತ್ರನಾದ ಬೊಕ್ಕಸ ಬಾಳೈಯನವರ ಮಕ್ಕಳು ಚನ್ನರಾಜಯ್ಯನವರ ಮಗ ಮರ್‍ರೈಯನುಬರೆದು

ವಪ್ಪಿಸಿದ ಕನ್ನಡ ಕಾದಂಬರಿ ಪುಸ್ತಕಕ್ಕೆ ಶುಭವಸ್ತು, ಶೋಭನಮಸ್ತು, ಅಷ್ಟಪುತ್ರ ಬಹುದನಮಸ್ತು, ಸಕಲಕಾರ್ಯ ಸಿದ್ದಿರಸ್ತು."[೪೦] ಚಿಕ್ಕ ಅಮೃತಾಜಮ್ಮಣ್ಣಿ ಅವರು ಚೆನ್ನರಾಜಯ್ಯನವರ ಮಗ ಮರೈಯನಿಂದ ಬಾಣಭಟ್ಟನ ಸಂಸ್ಕೃತ ಕಾದಂಬರಿಯ ಕನ್ನಡ ಗದ್ಯಾನುವಾದ ಕವಿಯ ವ್ಯಾಖ್ಯಾನದ ಪ್ರತಿಯನ್ನು ಸ್ವೀಕರಿಸಿದ್ದಾಳೆ.

"ಪೊರಮಾವ ತಿಮ್ಮಪ್ಪಯ್ಯನ ಮಗ ವೆಂಕಟಯ್ಯ ಯುವನಾಮ ಸಂವತ್ಸರ ಬಹುಳ ೩ರಲ್ಲು ಇಮ್ಮಡಿ ಕೆಂಪರಾಯನ ಪದಗಳು ಎಂಬ ಕೃತಿಯನ್ನು ಬರೆದು ಚಿಕ್ಕಕುಪ್ಪಕ್ಕನಿಗೆ ಆಯುರಾರೋಗ್ಯ ಧನಕನಕ ವಸ್ತುವಾಹನ ಪುತ್ರ ಪೌತ್ರಭಿವೃದ್ಧಿಯಾಗಿ ಶೀಘ್ರದಲ್ಲಿ ಗಂಡುಸಂತಾನವಾಗಲಿಯೆಂದು ತ್ರಿಸಂಧ್ಯಾ ಕಾಲದಲ್ಲಿಯೂ ಹರಿಸಿದ್ದಾಳೆ."[೪೧] ತಿಮ್ಮಪ್ಪಯ್ಯನ ಮಗ ವೆಂಕಟಯ್ಯನು ಇಮ್ಮಡಿ ಕೆಂಪರಾಯನ ಪದಗಳು ಎಂಬ ಐತಿಹಾಸಿಕ ಕೃತಿಯನ್ನು ಚಿಕ್ಕಕುಪ್ಪಕ್ಕನಿಗೆ ಆರೋಗ್ಯಕ್ಕಾಗಿ, ಧನಕನಕ, ಪುತ್ರ ಸಂತಾನಕ್ಕಾಗಿ ಅಂದರೆ ಅತೀ ಶೀಘ್ರದಲ್ಲಿಯೇ ಗಂಡು ಮಗು ಜನಿಸಲಿ ಎಂದು ಬರೆದುಕೊಟ್ಟಿದ್ದಾರೆ. ಇದರಿಂದಾಗಿ ಮಹಿಳೆಯರು ಸಹ ಐತಿಹಾಸಿಕ ಕಾವ್ಯವನ್ನು ಓದುತ್ತಿದ್ದರು ಎಂಬುದು ತಿಳಿದು ಬರುತ್ತದೆ.

"ಲಿಪಿಕಾರ ತೊಂಡಾಳ್ಯ ಅಮರಯ್ಯ ಬರೆಸಿದವರು ಸೌಭಾಗ್ಯವತಿ ರುದ್ರವ್ವ ಜ್ಞಾನ ಸಿಂಧು."[೪೨] ಸೌಭಾಗ್ಯವತಿಯಾದ ರುದ್ರವ್ವ ಅವರು 'ಜ್ಞಾನಸಿಂಧು' ಎಂಬ ಕೃತಿಯನ್ನು ಬರೆಯಿಸಿದ್ದಾರೆ.

"ಬಂಡಗೇರಿಯ ರಾಮಸೆಟ್ಟಿಯ ಪುಣ್ಯ ಸ್ತ್ರೀಯಳಾದ ಶಾಂತಂಮನ ಪುತ್ರಿಯಳಾದ ಸಂಗಮನವರಿಗೆ ಪುರಾಣದ ಮಹಾಸ್ವಾಮಿಗಳು 'ರಾಜಶೇಖರ ವಿಳಾಸ' ಬರೆಸಿಕೊಟ್ಟರು."[೪೩] ಪುಣ್ಯ ಸ್ತ್ರೀಯಳಾದ ಶಾಂತಮ್ಮನ ಮಗಳಿಗೆ ಸಂಗಮ್ಮ ಅವರಿಗೆ ಪುರಾಣದ ಸ್ವಾಮಿ ಎಂದು ಪ್ರಸಿದ್ಧರಾದ ಮಹಾಸ್ವಾಮಿಗಳು ಷಡಕ್ಷರದೇವ ಕವಿಯ 'ರಾಜಶೇಖರ ವಿಳಾಸ' ಕೃತಿಯು ಚಂಪೂ ಶೈಲಿಯಲ್ಲಿ ರಚನೆಯಾದ ಈ ಕೃತಿಯನ್ನು ಹೆಣ್ಣು ಮಕ್ಕಳು ಸಹ ಅಭ್ಯಾಸ ಮಾಡುತ್ತಿದ್ದರು ಎನ್ನುವುದಕ್ಕೆ ನಿದರ್ಶನ ಸಿಗುತ್ತದೆ.

"ಚಿತ್ತಾಪುರದ ದೇಸಾಯಿಣಿ ಪಾರ್ವತಿ ಅವ್ವ ತನ್ನ ಭಕ್ತಿ ಪೂರ್ವಕದಿಂದ ಬರಸಿದಳು ಪ್ರೌಢರಾಯನ ಕಾವ್ಯ."[೪೪] ಪಾರ್ವತಿ ಅವ್ವ ಅವರು ತಮ್ಮ ಭಕ್ತಿಗಾಗಿ ಪ್ರೌಢರಾಯನ ಕಾವ್ಯವನ್ನು ಬರೆಯಿಸಿದ್ದಾರೆ. ಮಹಿಳೆಯರು ಸಹ ಭಕ್ತಿಪೂರ್ವಕವಾಗಿ ಸ್ವಂತ ಹಸ್ತಪ್ರತಿ ಮಾಡಿಸಿಕೊಟ್ಟಿರುವುದು ಕಂಡು ಬಂದಿದೆ.

"ಮೌಜೆ ತಲೆಕಟ್ಟಿನ ಗೌಡಸಾನಿ ಸಾಂತವ್ವನು ವೋದಲಿಕ್ಕೆ ಬರಸಿಕೊಂಡದ್ದು ಪಾರಮಾರ್ಥಗೀತೆ"[೪೫] ನಿಜಗುಣ ಶಿವಯೋಗಿ ಪಾರಮಾರ್ಥಗೀತೆ ಕೃತಿಯನ್ನು ಸಾಂತವ್ವನು ವೋದುವುದಕ್ಕೆ ಬರೆಸಿಕೊಂಡಿದ್ದಾಳೆ.

"ತಾವರಗೇರಿ ನಾಡಗೌಡಸಾನಿ ಅವ್ವನೊಡ್ಡವ್ವನವರು ಬರೆಸಿದರು ತಂಮ್ಮ ಮನೋಪ್ರೀತಿಲಿ ಬರಸಿ ಪುಣ್ಯವಿಗೋಸ್ಕರವಾಗಿ ಬರೆಸಿದರು ಶಿವಕವಚ."[೪೬] ಅವ್ವನೊಡ್ಡವ್ವ ಅವರು ತಮ್ಮ ಪುಣ್ಯಪ್ರಾಪ್ತಿಗೋಸ್ಕರವಾಗಿ ಪ್ರೀತಿಯಿಂದ 'ಶಿವಕವಚ' ಕೃತಿಯನ್ನು ಬರೆಯಿಸಿಕೊಂಡಿದ್ದಾರೆ.

ಹಸ್ತಪ್ರತಿಗಳನ್ನು ಹೀಗೆ ಪೂಜ್ಯ ಭಾವನೆಯಿಂದ ಪೂಜಿಸುತ್ತಿದ್ದರೋ ಹಾಗೆಯೇ ಮಹಿಳಾ ಹಸ್ತಪ್ರತಿ ಲಿಪಿಕಾರರಿಗೆ, ಪೋಷಕರಿಗೆ ಪೂಜ್ಯನೀಯವಾದ ಸ್ಥಾನ ನೀಡಿರುವುದನ್ನು ವಿಶೇಷವಾಗಿ ಗುರುತಿಸಬಹುದು. ಏಕೆಂದರೆ ಯಾವ ಕಾಲಘಟ್ಟದಲ್ಲಿ ಸ್ತ್ರೀ ಶಿಕ್ಷಣಕ್ಕೆ ಮಾನ್ಯತೆ ಇರಲಿಲ್ಲವೋ ಅದೇ ಸಂದರ್ಭದಲ್ಲಿ ಸ್ತ್ರೀಯರಿಗೆ ಜ್ಞಾನಾರ್ಜನೆಗಾಗಿ, ಆರೋಗ್ಯಕ್ಕಾಗಿ, ಹಣಸಂಪಾದನೆಗಾಗಿ, ಪುತ್ರಸಂತಾನಕ್ಕಾಗಿ, ಓದಿಗಾಗಿ, ಶುದ್ಧಿಯಾರ್ಜನೆಗಾಗಿ, ಪುಣ್ಯಸಂಪಾದನೆಗಾಗಿ, ಕೇವಲ ಜ್ಞಾನಕ್ಕಾಗಿ ಮಕ್ಕಳ ವಿದ್ಯಾಭ್ಯಾಸ ಪೂರ್ಣಗೊಳ್ಳುವುದಕ್ಕಾಗಿ ಮಹಿಳೆಯರು ಧಾರ್ಮಿಕ, ಲೌಕಿಕ, ಪಾರಮಾರ್ಥಿಕ ಹಾಗೂ ಐತಿಹಾಸಿಕ ಗ್ರಂಥಗಳನ್ನು ಪ್ರತಿಮಾಡಿಸಿ ಹಾಗೂ ಸ್ವತಃ ಪ್ರತಿಮಾಡಿ ಕೊಟ್ಟಿರುವುದು ವಿಶಿಷ್ಟವಾಗಿದೆ.

ಪ್ರಕಟಿತ ಸಾಹಿತ್ಯವನ್ನು ಆಧರಿಸಿ ನಡೆದ ನಮ್ಮ ಸಾಹಿತ್ಯಿಕ ಅಧ್ಯಯನಗಳು ತಿಳಿಸಲಾರದ ಹೊಸ ಸಂಗತಿಗಳನ್ನು ಹಸ್ತಪ್ರತಿಗಳ ಸೂಕ್ಷ್ಮ ಅಧ್ಯಯನದಿಂದ ತಿಳಿಯಬಹುದಾಗಿದೆ. ಆ ಮೂಲಕ ಶಿಷ್ಟ ಸಾಹಿತ್ಯ ಅಧ್ಯಯನಗಳು ತೋರಿಸುವ ಮಹಿಳಾ ಪ್ರಾತಿನಿಧ್ಯದ ಆರೋಪಿತ ಸಂಗತಿಗಳನ್ನು ಮರು ಆಲೋಚನೆಗೆ ಒಡ್ಡಬಹುದಾಗಿದೆ.

ಲಿಪಿ ಭಾಷೆ, ಸಾಹಿತ್ಯವನ್ನು ಪುರುಷಾಧಿಕಾರದ ನೆಲೆಯಲ್ಲಿ ವ್ಯಾಖ್ಯಾನಿಸುವಾಗ ಮಹಿಳಾ ಪಾಂಡಿತ್ಯದ ನೆಲೆಗಳನ್ನು ಅನುಬಂಧದ ರೂಪದಲ್ಲಿ ಅಥವಾ ಉಪೇಕ್ಷಿತ ದೃಷ್ಟಿಕೋನಗಳಲ್ಲಿ ಅಳೆಯಲಾಗುತ್ತದೆ. ಹಸ್ತಪ್ರತಿ ಪೋಷಕರು, ಲಿಪಿಕಾರ್ತಿಯರು, ಪ್ರತಿಕಾರರು ಓದುಗರು ಆಸಕ್ತ ಹೆಣ್ಣುಮಕ್ಕಳು ಸೇರಿ ನಿರ್ಮಿಸಿರುವ ಮಧ್ಯಕಾಲೀನ ಕನ್ನಡ ಸಾಹಿತ್ಯ ಸ್ವರೂಪವು ಹೆಚ್ಚು ಸಾಮುದಾಯಿಕವೂ ಹಾಗೂ ಮಹಿಳಾ ಕೇಂದ್ರಿತವಾಗಿರುವುದನ್ನು ಮೇಲಿನ ಎಲ್ಲ ಉಲ್ಲೇಖಗಳಲ್ಲಿ ಕಾಣಬಹುದು. ಬ್ರಾಹ್ಮಣ ಮಹಿಳೆಯರನ್ನು ಹೊರತುಪಡಿಸಿ ಸಮಾಜದ ವಿವಿಧ ಅಂಚಿನ ಸಮುದಾಯದ ಮಹಿಳೆಯರು ಬರಹಕಾಯಕ ಹಾಗೂ ಸಂರಕ್ಷಣೆ ಕಾಯಕ ಮಾಡಿರುವುದು ಹೊಸ ಚಿಂತನೆಗೆ ಪ್ರೇರೇಪಣೆ ನೀಡುತ್ತದೆ.

ಸು.೫೦ಕ್ಕೂ ಹೆಚ್ಚು ಮಹಿಳೆಯರು ಜ್ಞಾನದ ಸಂರಕ್ಷಣೆ ಮತ್ತು ಸಂವರ್ಧನೆಯಲ್ಲಿ ತೊಡಗಿಕೊಂಡದ್ದು ಮಧ್ಯಕಾಲೀನ ಕನ್ನಡ ಸಾಹಿತ್ಯದ ವೈಶಿಷ್ಟ್ಯವಾಗಿದೆ. ಆಧುನಿಕ ಕಾಲಕ್ಕೆ ಹೋಲಿಸಿಕೊಂಡರೆ ಇದು ದೊಡ್ಡ ಸಂಖ್ಯೆ ಎಂದೇ ಹೇಳಬೇಕು. ಈ ಸಂಗತಿಗಳು ಹಸ್ತಪ್ರತಿ ಮತ್ತು ಗ್ರಂಥಸಂಪಾದನೆಯನ್ನು ಶುದ್ಧ ಸಾಹಿತ್ಯಿಕ ಅಥವಾ ಸಾಹಿತ್ಯಕವಲ್ಲದ ಧೋರಣೆಯಿಂದ ನೋಡದೆ ಅದರ ಸಾಮಾಜಿಕ, ಸಾಮುದಾಯಿಕ, ರಾಜಕೀಯಾರ್ಥಿಕ ನೆಲೆಗಳಿಂದ ನೋಡಲು ಒತ್ತಾಯಿಸುತ್ತವೆ. ಹಸ್ತಪ್ರತಿಗಳ ಕಚ್ಚಾ ಸಾಮಗ್ರಿಗಳ ಕ್ರೋಢೀಕರಣ, ಬರಹಕ್ಕೆ ಸಿದ್ಧತೆ, ಲಿಪೀಕರಣ, ಪ್ರತೀಕರಣ, ಪೋಷಣೆ, ದಾನ, ಇವು ಧಾರ್ಮಿಕ ತಳಹದಿಯಲ್ಲಿ ನಡೆದಂತೆ ವ್ಯವಹಾರಿಕ ನೆಲೆಯಲ್ಲಿಯೂ ನಡೆದಿವೆ. ಈ ಇಡೀ ಪ್ರಕ್ರಿಯೆಗಳು ದುಡಿವ ವರ್ಗದ ಕುಟುಂಬಗಳಲ್ಲಿ ಕುಟುಂಬದ ಕಸುಬಾಗಿ ಸಮುದಾಯದ ಕೌಶಲ್ಯವಾಗಿ ಬಹುಜನ ಸಹಭಾಗಿತ್ವದಲ್ಲಿ ಬೆಳೆದುಬಂದಿವೆ. ಇಂಥ ಪಾರಂಪರಿಕ ಸಂಗ್ರಹ ಹಾಗೂ ನಿರ್ವಹಣ ಕೆಲಸದಲ್ಲಿ ಹೆಣ್ಣಿಗೆ ಪ್ರಾಧಾನ್ಯತೆಯಿತ್ತು. ಹೆಣ್ಣೇ ಅಲ್ಲಿ ಸಂಗ್ರಹ,

ಸಂರಕ್ಷಣೆ, ನಿರ್ವಹಣೆ ಹಾಗೂ ಸಂವರ್ಧನೆಯ ಹಕ್ಕು ಪಡೆದಿದ್ದಳು. ಸಾಂಪ್ರದಾಯಿಕ ಸಂವರ್ಧನೆ ಮತ್ತು ಉತ್ಪಾದಿತ ಮೌಲ್ಯಗಳು ಪ್ರಕೃತಿ ಪರವಾಗಿ ಹಾಗೂ ಹೆಂಗಸರ ಪರವಾಗಿದ್ದವು. ವ್ಯವಹಾರ ರೂಪಿಯಾದ ವೈಜ್ಞಾನಿಕ ಧೋರಣೆಗಳು ಹೆಣ್ಣಿನ ಈ ಪಾರಮ್ಯವನ್ನು ನಾಶಮಾಡಿದವು. ಆದರೆ ಹಸ್ತಪ್ರತಿಗಳಲ್ಲಿ ಕಾಣುವ ಸಾಂಪ್ರದಾಯಿಕ ಜ್ಞಾನದ ಸಂಗ್ರಹ, ನಿರ್ವಹಣೆ ಹಾಗೂ ಸಂವರ್ಧನ ರೂಪಗಳು ಹೆಣ್ಣು ಪ್ರಧಾನವಾಗಿರುವ ಕಾರಣ ಜ್ಞಾನ ಸಂಪಾದನೆ ಹಾಗೂ ಸಂವರ್ಧನೆಯ ಭಾಗವಾಗಿ ಆಧುನಿಕ ಪೂರ್ವದ ನೆಲೆಗಳು ಮಹಿಳಾ ಗ್ರಂಥಸಂಪಾದನೆಯ ಪ್ರತಿನಿಧೀಕರಣದಲ್ಲಿ ಹೆಚ್ಚು ಮಹತ್ವ ಪಡೆಯುತ್ತವೆ.

೩.೨. ಆಧುನಿಕ

ಕನ್ನಡ ಗ್ರಂಥಸಂಪಾದನೆ ಶಾಸ್ತ್ರೀಯವಾಗಿ ಬೆಳವಣಿಗೆ ಹೊಂದಿದ್ದು ಹತ್ತೊಂಬತ್ತನೆಯ ಶತಮಾನದಿಂದ ಈಚೆಗೆ ಎನ್ನುವುದು ರೂಢಿಮಾತು. ಇದಕ್ಕಿಂತ ಮೊದಲು ಸಾಂಪ್ರದಾಯಿಕ ಮಾದರಿಯಲ್ಲಿ ಭಾರತದಲ್ಲಿ ಬೆಳವಣಿಗೆ ಆಗಿತ್ತು. ಪಾಶ್ಚಿಮಾತ್ಯರ ಪ್ರಭಾವದಿಂದ ಶಾಸ್ತ್ರೀಯವಾಗಿ ಬೆಳವಣಿಗೆ ಹೊಂದಲು ಕಾರಣವಾಯಿತು. ಅವರು ಹಾಕಿಕೊಟ್ಟ ಮಾರ್ಗದಲ್ಲಿಯೇ ದೇಶೀ ವಿದ್ವಾಂಸರು ವೈಜ್ಞಾನಿಕವಾಗಿ ಸಂಪಾನೆ ಮತ್ತು ಪರಿಷ್ಕರಣ ಕಾರ್ಯದಲ್ಲಿ ತೊಡಗಿಕೊಂಡರು. ಪುರುಷರಂತೆ ಮಹಿಳೆಯರೂ ಈ ಕ್ಷೇತ್ರಕ್ಕೆ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಏಕೆಂದರೆ ಪುರುಷರು ಸಹ ಈ ಕ್ಷೇತ್ರದಲ್ಲಿ ಪ್ರವೇಶಿಸುವುದಕ್ಕೆ ಹಿಂಜರಿಯುತ್ತಿದ್ದ ಸಂದರ್ಭದಲ್ಲಿ ಅಲ್ಪ ಸ್ವಲ್ಪವಾಗಿಯಾದರೂ ಮಹಿಳೆಯರು ತಮ್ಮ ಹೆಜ್ಜೆ ಗುರುತು ಮೂಡಿಸಿರುವುದನ್ನು ಗುರುತಿಸಬಹುದು.

ಆಧುನಿಕ ಮಹಿಳಾ ಕನ್ನಡ ಗ್ರಂಥಸಂಪಾದನೆಯ ಇತಿಹಾಸವನ್ನು ಮೊಟ್ಟ ಮೊದಲು 'ನಂಜನಗೂಡು ತಿರುಮಲಾಂಬ' ಅವರು 'ತಿಮ್ಮಪ್ಪದಾಸ ವಿರಚಿತ ದ್ರೌಪದೀ ವಸ್ತ್ರಾಪಹರಣ' ಎಂಬ ಹಸ್ತಪ್ರತಿಯನ್ನು 'ರಂಗಮ್ಮ' ಮತ್ತು 'ಗರುಡಮ್ಮ' ಎಂಬುವರಿಂದ ಪಡೆದು ೧೯೧೪ರಲ್ಲಿ ಕರ್ನಾಟಕ ನಂದಿನಿಯ ದ್ವಿತೀಯ ವರ್ಷದ ಪ್ರಕಟಣೆಗಾಗಿ ಹೊರತಂದ ಸಂಗತಿಯಲ್ಲಿಯೂ ಕನ್ನಡ ಮಹಿಳಾ ಗ್ರಂಥಸಂಪಾದನೆಯ ಹೊಳಹುಗಳಿವೆ. ಹಾಗೆಯೇ ಸ್ವಾತಂತ್ರ್ಯ ಪೂರ್ವದಲ್ಲಿ ಅನೇಕ ಉದ್ದಾಮ ಗ್ರಂಥಸಂಪಾದಕರು ಪುರುಷರಲ್ಲಿ ಕಂಡುಬಂದರೂ ಮಹಿಳಾ ಗ್ರಂಥಸಂಪಾದಕಿಯನ್ನು ಕಾಣಲು ೧೯೪೦ರವರೆಗೆ ಕಾಯಬೇಕಾಯಿತು. ಡಿ. ಚಂಪಾಬಾಯಿ ಅವರು ಬಹುಹಸ್ತಪ್ರತಿಗಳನ್ನು ಬಳಸಿಕೊಂಡು ಸಂಚಿಹೊನ್ನಮ್ಮನ ಹದಿಬದೆಯ ಧರ್ಮವನ್ನು ಪರಿಷ್ಕರಿಸಿ ಉತ್ತಮ ಪ್ರಸ್ತಾವನೆ ಹಾಗೂ ಅನುಬಂಧಗಳೊಂದಿಗೆ ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟಿಸಿದರು. ಮಹಿಳಾ ಗ್ರಂಥಸಂಪಾದನೆಗೆ ಉತ್ತಮವಾದ ತಳಪಾಯ ಹಾಕಿಕೊಟ್ಟ ಮೊದಲ ಸಂಪಾದಕಿ. ಇವರ ನಂತರ ಹಲವು ವರ್ಷಗಳ ಕಾಲ ಮಹಿಳೆಯರ ಗ್ರಂಥ ಸಂಪಾದನೆ ಕೆಲಸ ಸ್ಥಗಿತಗೊಂಡಿತ್ತು. ನಂತರ ಮಲ್ಲಬಾದಿ ಚನ್ನಬಸಮ್ಮ ಅವರು ಮಲ್ಲಬಾದಿ ವೀರಭದ್ರಪ್ಪ ಅವರೊಂದಿಗೆ ೧೯೫೬ರಲ್ಲಿ 'ಮಲುಹಣದೇವರ ರಗಳೆಯನ್ನು' ಸಂಪಾದಿಸಿದ್ದರು. ಹಾಗೆಯೇ ಜಾನಕಿ ಅವರು ೧೯೫೯ರಲ್ಲಿ ಅಖಂಡೇಶ್ವರ ವಚನಗಳನ್ನು ಖಾಸಗಿಯಾಗಿ ಪ್ರಕಟಿಸಿದ್ದರು.

ಇವರ ನಂತರ ೧೯೭೦ರ ದಶಕದಲ್ಲಿ ಮಹಿಳೆಯರು ಕನ್ನಡ ಗ್ರಂಥಸಂಪಾದನೆಯಲ್ಲಿ ಗಂಭೀರವಾಗಿ ತೊಡಗಿಕೊಂಡವರು. ವೈ.ಸಿ. ಭಾನುಮತಿ, ಟಿ.ಎನ್. ನಾಗರತ್ನ, ಎಂ.ಎನ್. ಲೀಲಾವತಿ, ಟಿ.ಕೆ. ಇಂದುಬಾಯಿ, ನಗುವನಹಳ್ಳಿ ಪಿ. ರತ್ನ ಇವರಲ್ಲಿ ಪ್ರಮುಖರು. ಹೀಗೆ ಆಧುನಿಕ ಕನ್ನಡ ಗ್ರಂಥಸಂಪಾದನೆಯನ್ನು ಮಹಿಳೆಯರು ಪೂರ್ಣವಾಗಿ ಮತ್ತು ಆಂಶಿಕವಾಗಿ ತೊಡಗಿಕೊಂಡರು. ಅಂಥ ಮಹಿಳೆಯರು ಪರಿಷ್ಕರಿಸಿ ಪ್ರಕಟಿಸಿದ ಕೃತಿಗಳ ವೈಧಾನಿಕತೆಯನ್ನು ಅವರ ವೈಯಕ್ತಿಕ ವಿವರಗಳೊಂದಿಗೆ ಈ ಕೆಳಕಂಡಂತೆ ಚರ್ಚಿಸಲಾಗಿದೆ. ಈ ಕ್ಷೇತ್ರದಲ್ಲಿ ಇದೊಂದು ಮೊದಲ ಪ್ರಯತ್ನವಾಗಿರುವ ಕಾರಣ ಈ ದಾಖಲಾತಿಯೂ ಮುಖ್ಯವಾಗುತ್ತದೆ.

೩.೨.೧. ಡಿ. ಚಂಪಾಬಾಯಿ

ನಂಜನಗೂಡು ತಿರುಮಲಾಂಬ(೧೯೧೪) ಅವರ ನಂತರ ಅಂದರೆ ೨೬ ವರ್ಷಗಳ ನಂತರ ಡಿ. ಚಂಪಾಬಾಯಿ ಅವರು ಕನ್ನಡ ಗ್ರಂಥಸಂಪಾದನ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದವರು. ಶಾಸ್ತ್ರೀಯ ಗ್ರಂಥಸಂಪಾದನ ವಿಧಾನವನ್ನು ಅಳವಡಿಸಿಕೊಂಡು ಸಂಪಾದನೆ ಕೆಲಸ ಮಾಡಿದ ಮೊದಲ ಮಹಿಳೆ ಎಂದು ಇತಿಹಾಸದಲ್ಲಿ ದಾಖಲಾಗಿದ್ದಾರೆ. ಈ ವೇಳೆಗಾಗಲೇ, ಕನ್ನಡ ಗ್ರಂಥ ಸಂಪಾದನೆಯಲ್ಲಿ ವಿದೇಶಿ ವಿದ್ವಾಂಸರು ಶಾಸ್ತ್ರೀಯವಾಗಿ ಪರಿಷ್ಕರಿಸಿ ಪ್ರಕಟಣೆ ಕೆಲಸ ಆರಂಭಿಸಿದರು. ವಿದೇಶಿ ವಿದ್ವಾಂಸರಲ್ಲಿ ಶಾಸ್ತ್ರೀಯವಾಗಿ ಸಂಪಾದನೆಯ ಕಾರ್ಯದಲ್ಲಿ ಮೊಟ್ಟ ಮೊದಲು ತೊಡಗಿಕೊಂಡವರು ಕಿಟೆಲ್, ಇವರು ೧೮೭೨ರಲ್ಲಿ ಒಂಬತ್ತು ಹಸ್ತಪ್ರತಿಯನ್ನು ಬಳಸಿಕೊಂಡು ಶಬ್ಧಮಣಿ ದರ್ಪಣವನ್ನು ಪರಿಷ್ಕರಿಸಿ ಪ್ರಕಟಿಸಿದರು. ಇದೇ ಮಾದರಿಯಲ್ಲಿ ೧೪ ಹಸ್ತಪ್ರತಿಗಳನ್ನು ಬಳಸಿಕೊಂಡು ಛಂದೋಂಬುಧಿಯನ್ನು ಪರಿಷ್ಕರಿಸಿ ೧೮೭೫ರಲ್ಲಿ ಪ್ರಕಟಣೆ ಮಾಡಿದ್ದರು. ಹಾಗೆಯೇ ಈ ಮಾದರಿಯಲ್ಲಿ ದೇಶಿ ವಿದ್ವಾಂಸರಾದ ಡಿ.ಎಲ್.ನರಸಿಂಹಾಚಾರ್ಯ, ಆರ್. ನರಸಿಂಹಚಾರ್ ಇನ್ನೂ ಮುಂತಾದ ವಿದ್ವಾಂಸರು ಕನ್ನಡ ಗ್ರಂಥಸಂಪಾದನ ಕಾರ್ಯದಲ್ಲಿ ನಿರಂತರವಾಗಿ ತೊಡಗಿಸಿಕೊಂಡು ಬಂದರು. ಇಂತಹ ಘಟಾನುಘಟಿ ವಿದ್ವಾಂಸರ ಕಾಲದಲ್ಲಿಯೇ ಮಹಿಳೆಯರು ಸಾಹಿತ್ಯ ಕೃಷಿಯಲ್ಲಿ ಹೆಜ್ಜೆ ಗುರುತು ಮೂಡಿಸಿರುವುದು ಕಂಡು ಬರುತ್ತದೆ. ಸೃಜನಶೀಲ ಸಾಹಿತ್ಯ ಪ್ರಕಾರಗಳಾದ ಕಥೆ, ಕಾದಂಬರಿ, ಕವಿತೆ, ಪ್ರಬಂಧ ಕ್ಷೇತ್ರದಲ್ಲಿ ಸಾಕಷ್ಟು ಮಹಿಳೆಯರು ಪ್ರವೇಶ ಮಾಡಿದ್ದಾರೆ. ಆದರೆ ಕನ್ನಡ ಗ್ರಂಥಸಂಪಾದನೆ ಕಡೆಗೆ ಲಕ್ಷ್ಯಹರಿಸಿದ್ದು ಬಹಳ ಕಡಿಮೆ.

ಡಿ. ಚಂಪಾಬಾಯಿ ಅವರು ಮೈಸೂರು ಮಹಾರಾಣಿ ಕಾಲೇಜಿನಲ್ಲಿ ಅಧ್ಯಾಪಕಿ ಆಗಿದ್ದರು. ಈ ಸಂದರ್ಭದಲ್ಲಿ ಮೈಸೂರು ಪರಿಸರದಲ್ಲಿ ತೀವ್ರಗತಿಯಲ್ಲಿ ನಡೆಯುತ್ತಿದ್ದ ಸಂಶೋಧನೆಯ ಚಟುವಟಿಕೆಯನ್ನು ಸಮೀಪದಿಂದ ನೋಡಿ ಆ ಕ್ಷೇತ್ರದ ಬಗ್ಗೆ ಒಲವು ಬೆಳೆಸಿಕೊಂಡರು ಎಂದು ವೈ.ಸಿ. ಭಾನುಮತಿ ಅವರ ಅಭಿಪ್ರಾಯ ಪಟ್ಟಿದ್ದಾರೆ. ಡಿ. ಚಂಪಾಬಾಯಿ ಅವರು ಪರಿಷ್ಕರಿಸಿದ ಪ್ರಾಚೀನ ಕೃತಿಗಳನ್ನು ಹಾಗೂ ಲೇಖನಗಳನ್ನು ಈ ಕೆಳಕಂಡಂತೆ ಚರ್ಚಿಸಲಾಗಿದೆ.

೩.೨.೧.೧. ಹದಿಬದೆಯ ಧರ್ಮ

ಪ್ರಸ್ತುತ ಕೃತಿಯನ್ನು ಡಿ. ಚಂಪಾಬಾಯಿ ಅವರು ಸಂಪಾದಿಸಿ ೧೯೪೦ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯನ್ನು ಮೊದಲು ರಾಮಾನುಜಯ್ಯಂಗಾರರು ಸಂಪಾದಿಸಿದ್ದರು. ಆದರೆ ಪಾಠ ಪರಿಷ್ಕರಣೆ ವ್ಯವಸ್ಥಿತವಾಗಿಲ್ಲದ್ದನ್ನು ಮನಗಂಡ ಚಂಪಾಬಾಯಿ ಅವರು ನಾಲ್ಕು ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಲು ಮುಂದಾದರು. ಎರಡು ಓಲೆ ಪ್ರತಿ, ಒಂದು ಕೈ ಬರಹ ಪ್ರತಿ ಒಂದು ಮುದ್ರಿತ ಪ್ರತಿಗಳನ್ನು ಪರಿಷ್ಕರಣೆಗೆ ಬಳಸಿಕೊಂಡರು. "ಇವರಿಗೆ ಹಸ್ತಪ್ರತಿಯ ಜ್ಞಾನ ಎಷ್ಟು ನಿಖರವಾಗಿತ್ತೆಂದರೆ ಪರಿಷ್ಕರಣಕ್ಕೆ ಆಧಾರವಾದ ಪ್ರತಿಗೆ 'ಕ' ಎಂಬ ಸಂಕೇತ ನೀಡಿ ಇದೆ ಶುದ್ಧಪಾಠ ಉಳ್ಳದ್ದೆಂದು ಬರಹದ ಸ್ಪಷ್ಟತೆ ಸಮರ್ಪಕತೆಗಳಿಂದ ತೋರಿಬರುತ್ತದೆ" ಎಂದು ವೈ.ಸಿ. ಭಾನುಮತಿ ಅವರು ಗುರುತಿಸುತ್ತಾರೆ. 'ಹದಿಬದೆಯ ಧರ್ಮ' ಒಂಬತ್ತು ಸಂಧಿಗಳನ್ನು ಒಳಗೊಂಡ ಒಂದು ಚಿಕ್ಕ ಕಾವ್ಯ. ಈ ಕಾವ್ಯ ಸಾಂಗತ್ಯದಲ್ಲಿ ರಚನೆಯಾಗಿದೆ. ಸಂಚಿಹೊನ್ನಮ್ಮ ಸ್ತ್ರೀಯರನ್ನು ಕೇಂದ್ರವಾಗಿಟ್ಟುಕೊಂಡು ಹದಿನೇಳನೆ ಶತಮಾನದಲ್ಲಿ ರಚನೆ ಮಾಡಿರುವುದರಿಂದ 'ಱ.ೞ' ಕುಳದ ಉಪಯೋಗ ಕಡಿಮೆ ಎಂದು ಚಂಪಾಬಾಯಿ ಗುರುತಿಸುತ್ತಾರೆ. ಪರಿಷ್ಕರಣಕ್ಕೆ ಬಳಸಿಕೊಂಡ ನಾಲ್ಕು ಪ್ರತಿಗಳು ಶುದ್ಧವಾಗಿದ್ದರಿಂದ ಪರಿಷ್ಕರಣೆ ಮಾಡುವಾಗ ಯಾವುದೇ ಸಮಸ್ಯೆ ತಲೆದೋರಿಲ್ಲ ಎಂದಿದ್ದಾರೆ.

ಡಿ. ಚಂಪಾಬಾಯಿ ಅವರ ವೈಧಾನಿಕತೆಯ ವೈಶಿಷ್ಟ್ಯವೆಂದರೆ ಪಾಠಪರಿಷ್ಕರಣೆ ಜೊತೆಗೆ ವಿವಿಧ ಆಕರಗಳ ಮೂಲಕ ಸಂಪಾದಿತ ಪಠ್ಯವನ್ನು ವ್ಯಾಖ್ಯಾನ ಮಾಡುವುದು. ಸಂಚಿಹೊನ್ನಮ್ಮನ ಹದಿಬದೆಯ ಧರ್ಮ ಕೃತಿಯಲ್ಲಿ ಮೈಸೂರು ಒಡೆಯರ ಕಾಲದಲ್ಲಿ ಸ್ತ್ರೀಯರ ಶಿಕ್ಷಣ ಹಾಗೂ ಅವರಿಗಿದ್ದ ಸ್ಥಾನಮಾನಗಳನ್ನು ಬಹಳ ಸೂಕ್ಷ್ಮವಾಗಿ ಗುರುತಿಸಿದ್ದಾರೆ. ಪತಿವ್ರತ ಧರ್ಮದ ಬಗ್ಗೆ, ಸಮಾಜದಲ್ಲಿ ಏಕೆ ಹೆಣ್ಣನ್ನು ಹೀಗಳೆಯುತ್ತಾರೆ ಎಂಬುದನ್ನು 'ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು ಕಣ್ಣು ಕಾಣದ ಗಾವಿಲರು' ಎಂದು ಪ್ರಶ್ನಿಸುವುದನ್ನು ಕಾಣಬಹುದು. ಉತ್ತರರಾಮ ಚರಿತೆ, ಶಾಕುಂತಲ, ಮನುಸ್ಮೃತಿ, ಶ್ರೀಭಾಗವತ ಈ ಗ್ರಂಥಗಳಲ್ಲಿರುವ ಶ್ಲೋಕಗಳು ಹದಿಬದೆಯ ಧರ್ಮ ಕೃತಿ ರಚನೆಗೆ ಹೇಗೆ ಪ್ರೇರಣೆ ಆಗಿವೆ ಎಂಬುದನ್ನು ಸಂಪಾದಕರು ತೌಲನಿಕ ವಿಮರ್ಶೆಗೆ ಒಡ್ಡುತ್ತಾರೆ. ಹಾಗೆಯೇ ಚಿಕ್ಕ ಕಾವ್ಯಕ್ಕೆ ೪೮ ಪುಟಗಳ ಅಧ್ಯಯನ ಪೂರ್ಣ ಪ್ರಸ್ತಾವನೆಯನ್ನು ಬರೆದಿದ್ದಾರೆ. ಈ ಕಾವ್ಯವನ್ನು ಸಂಗ್ರಹಿಸುವಾಗ ಸಂಧಿ ಪ್ರಕಾರ ವಿಷಯದ ವಿವರಣೆ ನೀಡಿದ್ದಾರೆ. ಅನುಬಂಧದಲ್ಲಿ ಕೆಲವು ತಪ್ಪುಗಳನ್ನು ತಿದ್ದುಪಡಿಮಾಡಿ ಸರಿಯಾದ ಪಾಠಾಂತರ ಗುರುತಿಸಿದ್ದಾರೆ. ಉದಾಹರಣೆಗೆ:– ತಪ್ಪು 'ಅಮರಂರತಚ್ಚರಿವಡೆಯೇ' ಎನ್ನುವ ಅಪಪಾಠವನ್ನು 'ಅಮರಂರತಚ್ಚರಿವಡೆಯೇ' ಎಂದು ಸರಿ ಮಾಡಿದ್ದಾರೆ. ಹಾಗೇ ಕಾವ್ಯದ ಉದ್ದೇಶ. ಹದಿಬದೆಯ ಧರ್ಮದ ಸಾಧ್ವಿಯ ಚಿತ್ರ. ಹದಿಬದೆಯ ಧರ್ಮದಲ್ಲಿ ನೀತಿಯ ಸ್ಥಾನ, ಸ್ತ್ರೀಯರ ಸ್ಥಾನ, ಆಧುನಿಕ ದೃಷ್ಟಿ, ಕೃತಿಯ ಶೈಲಿ, ಛಂದಸ್ಸು, ಕನ್ನಡ ಕಬ್ಬಿಗಿತಿಯರು, ಸ್ತ್ರೀಯರ ಬಗೆಗೆ ಕನ್ನಡ ಕವಿಗಳು ನೀಡಿದ ಕವಿಗಳ ಉಕ್ತಿಗಳು ಇತ್ಯಾದಿ ಸಂಗತಿಗಳನ್ನು

ಕೃತಿಯ ಪ್ರಸ್ತಾವನೆಯಲ್ಲಿ ಚರ್ಚೆಮಾಡಿದ್ದಾರೆ. ಹೀಗೆ ಶಾಸ್ತ್ರೀಯವಾಗಿ ಪರಿಷ್ಕರಿಸಿದ ಕೀರ್ತಿ ಡಿ. ಚಂಪಾಬಾಯಿ ಅವರಿಗೆ ಸಲ್ಲುತ್ತದೆ.

೩.೨.೧.೨. ಡಿ. ಚಂಪಾಬಾಯಿ ಅವರ ಲೇಖನ ಸಾಹಿತ್ಯ

೩.೨.೧.೨.೧. ಸ್ತ್ರೀಯರ ವಿದ್ಯಾಭ್ಯಾಸ

ಪ್ರಸ್ತುತ ಈ ಲೇಖನ ಬಿ.ಎಂ.ಶ್ರೀ ಸ್ಮಾರಕದಿಂದ ಪ್ರಕಟವಾಗಿರುವ 'ಸಂಭಾವನೆ' ಎಂಬ ಕೃತಿಯಲ್ಲಿ ಅಚ್ಚಾಗಿದೆ. ಈ ಲೇಖನದ ಮುಖ್ಯ ಉದ್ದೇಶ ಎಂದರೆ ಸ್ತ್ರೀಯರಿಗೆ ವಿದ್ಯಾಭ್ಯಾಸ ನೀಡುತ್ತಿರುವ ಸಂಘಸಂಸ್ಥೆಗಳಾದ ಮಠಮಾನ್ಯಗಳಲ್ಲಿ, ಗುರುಕುಲಗಳಲ್ಲಿ, ಕೂಲಿ ಮಠಗಳಲ್ಲಿ, ಕನ್ನಡ ಸಾಹಿತ್ಯ ಪರಿಷತ್ತು, ರವೀಂದ್ರನಾಥ ಠಾಕೂರ ಅವರ 'ಶಾಂತಿನಿಕೇತನ', ವಿಶ್ವಭಾರತಿ ಇತ್ಯಾದಿ ಸಂಸ್ಥೆಗಳಲ್ಲಿ ಕಲಿಸುತ್ತಿರುವ ಪಾಶ್ಚಾತ್ಯ ಮಾದರಿಯ ಶಿಕ್ಷಣ ವ್ಯವಸ್ಥೆಯಲ್ಲಿ ಮಹಿಳೆಯರು ಕಲಿಯುತ್ತಿರುವ ಶಿಕ್ಷಣ ಪದ್ಧತಿಯನ್ನು ಕುರಿತು ಚರ್ಚಿಸುತ್ತಾರೆ. ಹಾಗೆಯೇ ಮುಖ್ಯವಾಗಿ ಮೈಸೂರು ಪರಿಸರದಲ್ಲಿ ಕಲಿತಿರುವ ಮಹಿಳೆಯರ ಇತಿಹಾಸವನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಮಹಿಳಾ ಸಾಕ್ಷರತೆಯನ್ನು ವಿವರಿಸುವ ಉತ್ತಮ ಲೇಖನವಿದು. ಗ್ರಂಥಸಂಪಾದನೆಯ ಜೊತೆಗೆ ಸಾಹಿತ್ಯದ ವಿವಿಧ ಆಯಾಮಗಳಲ್ಲಿ ಕೆಲಸ ಮಾಡಿದ್ದಾರೆ.

೩.೨.೨. ಎಂ.ಎನ್. ಲೀಲಾವತಿ

೩.೨.೨.೧. ಹರಿಹರನ ಐದು ರಗಳೆಗಳು

ಪ್ರಸ್ತುತ ಕೃತಿಯನ್ನು ಎಂ.ಎನ್. ಲೀಲಾವತಿ ಅವರು ಸಂಪಾದಿಸಿ ೧೯೭೩ರಲ್ಲಿ ಮೈಸೂರಿನ ಯು.ಎಸ್. ಪ್ರಿಂಟರ್ಸ್ ಅವರಿಂದ ಪ್ರಕಟಿಸಿದ್ದಾರೆ. ಈ ಕೃತಿಯನ್ನು ಎರಡು ಹಸ್ತಪ್ರತಿಗಳು ಹಾಗೂ ಫ.ಗು. ಹಳಕಟ್ಟಿ ಅವರ ಅಚ್ಚಿನ ಪುಸ್ತಕದ ಸಹಾಯದಿಂದ ಪರಿಷ್ಕರಿಸಿದ್ದಾರೆ. ಈ ಐದು ರಗಳೆಗಳಲ್ಲಿ ಶಿವಭಕ್ತಿಯನ್ನು ಕುರಿತು ವರ್ಣನೆ ಮಾಡಲಾಗಿದೆ. 'ಸುರಗಿಯ ಚೌಡಯ್ಯನ' ಕನಸಿನಲ್ಲಿ ಶಿವ ಬಂದು 'ಹಸಿದೆನೆಲೆ ಮಗನೆ ಹಸಿದೆಂದೆಂ ಕಂದ' ಎಂದು ಕೇಳಿದಾಗ ಮರುದಿನ ಚೌಡಯ್ಯನು ನಾಗಕುಂಡಲನಿಗಾಗಿ ಓಗರ ಮೋಲೋಗರ ದಿವ್ಯಾನ್ನ ಅಮೃತಾನ್ನಗಳನ್ನು ಸಿದ್ಧ ಮಾಡಿಸಿ ದೇವಾಲಯದ ಮುಂದಿಟ್ಟು ಶಿವನನ್ನು ಒಲಿಸಿಕೊಳ್ಳುವ ಪ್ರಸಂಗ ಈ ರಗಳೆಯಲ್ಲಿ ಬರುತ್ತದೆ. 'ಮುಸುಟೆಯ ಚೌಡಯ್ಯನ' ರಗಳೆಯಲ್ಲಿ ಚೌಡಯ್ಯನನ್ನು ನಾನಾ ವಿಧದಲ್ಲಿ ಪರೀಕ್ಷಿಸಿ ಅವನು ಕೈಲಾಸಕ್ಕೆ ತೆರಳಿದ ಮೇಲೆ ಗಣ ಪದವಿಯನ್ನು ಪಡೆಯುವಂತಹ ಸನ್ನಿವೇಶ ಕಂಡುಬರುತ್ತದೆ. 'ತೆಲುಗು ಜೊಮ್ಮಯ್ಯ' ಶಿವಭಕ್ತನು ಹಾಗೂ ಭೀಮನಾಥನ ಆರಾಧಕನಾಗಿದ್ದನು. ಆದ್ದರಿಂದ ಶಿವನು ತನ್ನ ಭಕ್ತನನ್ನು ಹಲವಾರು ಪರೀಕ್ಷೆಗೆ ಒಳಪಡಿಸುವಂತಹ ಪ್ರಸಂಗ ಕಂಡುಬರುತ್ತದೆ. 'ಬಾಹೂರ ಬೊಮ್ಮಯ್ಯನ' ರಗಳೆಯಲ್ಲಿ ಕಲ್ಯಾಣ ನಗರದ ಹಾಗೂ ಜೋಳದ ವರ್ಣನೆಯನ್ನು ಮಾಡಲಾಗಿದೆ. ಈ ಐದು ರಗಳೆಗಳಲ್ಲಿಯೂ ಒಂದು ಪಟ್ಟಣ ಅಲ್ಲಿ ಒಬ್ಬ ಶಿವಭಕ್ತ ಆತನ ವಿವಿಧ ರೀತಿಯ ಪರೀಕ್ಷೆಗಳು,

ನಂತರ ಕೈಲಾಸಕ್ಕೆ ಹೋಗಿ ಉನ್ನತ ಪದವಿಯನ್ನು ಪಡೆಯುವಂತಹ ಸನ್ನಿವೇಶಗಳು ಹೆಚ್ಚಾಗಿ ಕಂಡುಬರುತ್ತವೆ.

ಸಂಪಾದಕರು ಕಥಾಸಾರದ ಅವಲೋಕನದಿಂದ ಹರಿಹರನ ರಗಳೆಗಳನ್ನು ಸ್ಥೂಲವಾಗಿ ಒಂದೇ ಚೌಕಟ್ಟಿನಲ್ಲಿ ರಚಿತವಾಗಿವೆ ಎಂದಿದ್ದಾರೆ. ಹಾಗೆಯೇ ಪ್ರತಿಯೊಂದು ರಗಳೆಯ ಆರಂಭದಲ್ಲಿ ಕಥಾನಾಯಕನ ಸ್ತುತಿ ರೂಪವಾದ ಒಂದು ಕಂದ ಅಥವಾ ವೃತ್ತವಿರುತ್ತದೆ ಎಂದು ಗುರುತಿಸಿದ್ದಾರೆ. ಒಳ್ಳೆಯ ಕವಿಗಿರಬೇಕಾದ ಸಮಕಾಲೀನ ಪ್ರಜ್ಞೆ ಹರಿಹರನಲ್ಲಿ ಚೆನ್ನಾಗಿ ಕಂಡುಬಂದಿದೆ. ಅಂದಿನ ಸಮಾಜದ ಪ್ರಧಾನ ಅಂಶವಾದ ವೀರಶೈವ ಮತ್ತು ಜೈನ ಧರ್ಮದ ಘರ್ಷಣೆ ಈ ಸಂಕಲನದ ರಗಳೆಗಳ ಮುಖ್ಯವಸ್ತು ಎನ್ನುವುದನ್ನು ಗುರುತಿಸುತ್ತಾರೆ. ಈ ಕೃತಿಯಲ್ಲಿ ಕೆಲವೊಂದು ಕಠಿಣ ಪದಗಳಿಗೆ ಅರ್ಥವನ್ನು ಹಾಗೂ ಪಾಠಾಂತರವನ್ನು ಗುರುತಿಸಬೇಕಾದ ಅವಶ್ಯಕತೆ ಇದೆ. ಆದ್ದರಿಂದ ಇನ್ನೂ ಶಾಸ್ತ್ರೀಯವಾಗಿ ಪರಿಷ್ಕರಣೆ ಮಾಡಬೇಕಾಗಿದೆ.

೩.೨.೩. ವೈ.ಸಿ. ಭಾನುಮತಿ

ಕನ್ನಡ ಗ್ರಂಥಸಂಪಾದನೆ ಕ್ಷೇತ್ರಕ್ಕೆ ವೈ.ಸಿ. ಭಾನುಮತಿ ಅವರು ನೀಡಿದ ಕೊಡುಗೆ ಅನುಪಮವಾದುದು. ಅವರು ಸಂಪ್ರದಾಯಿಕ ಶಿಕ್ಷಣವನ್ನು ವಿಜ್ಞಾನದ ವಿದ್ಯಾರ್ಥಿಯಾಗಿ ಮುಗಿಸಿ ಮಂಗಳೂರಿನ 'ಮಂಗಳ ಗಂಗೋತ್ರಿಯಲ್ಲಿ' ಕನ್ನಡ ಎಂ.ಎ. ಪದವಿ ಪಡೆದು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನ ವಿಭಾಗದಲ್ಲಿ ಸುಮಾರು ೪೦ ವರ್ಷಗಳ ಕಾಲ ಹಿರಿಯ ಸಂಶೋಧಕಿಯಾಗಿ ಸೇವೆ ಸಲ್ಲಿಸಿದ್ದಾರೆ. ಭಾನುಮತಿಯವರಿಗೆ ಉಪನ್ಯಾಸ ಹುದ್ದೆಗೆ ಅವಕಾಶ ಸಿಕ್ಕಿದ್ದರೂ ನಿರಾಕರಿಸಿ ಅವರು ತಮ್ಮ ವೃತ್ತಿ ಜೀವನವನ್ನು ಆಯ್ಕೆ ಮಾಡಿಕೊಂಡಿದ್ದು ಹಸ್ತಪ್ರತಿಕೇಂದ್ರಿತವಾಗಿ. ಪ್ರಾಚೀನ ಕೃತಿಗಳ ಅಧ್ಯಯನ ಪರಿಷ್ಕರಣೆ ಸಂಶೋಧನೆಯನ್ನು ತಮ್ಮ ಅಧ್ಯಯನ ಕ್ಷೇತ್ರವನ್ನಾಗಿಸಿಕೊಂಡರು. ವಿಜ್ಞಾನ ಕ್ಷೇತ್ರದ ಹಿನ್ನೆಲೆಯಿಂದ ಬಂದರೂ ಹಾ.ಮಾ.ನಾಯಕ, ಎನ್.ಬಸವಾರಾಧ್ಯ, ಎಂ.ಎಂ.ಕಲುಬುರ್ಗಿ ಇತಂಹ ವಿದ್ವಾಂಸರ ಪ್ರೇರಣೆ ಹಾಗೂ ಪ್ರಭಾವದಿಂದ ಕನ್ನಡ ಗ್ರಂಥಸಂಪಾದನೆ ಕ್ಷೇತ್ರದಲ್ಲಿ ತಮ್ಮ ಹೆಜ್ಜೆ ಗುರುತು ಮೂಡಿಸಿರುವುದು ವಿಶೇಷವಾಗಿದೆ.

ಓಲೆಗರಿ, ಕೋರಿಕಾಗದ ಹಾಗೂ ಕಡತಗಳಲ್ಲಿರುವ ಕೃತಿಗಳನ್ನು ಪರಿಷ್ಕರಿಸುವಾಗ ಅಪಾರವಾದ ವಿದ್ವತ್ ಬೇಕಾಗುತ್ತದೆ. ಮುಖ್ಯವಾಗಿ ಕನ್ನಡ ಲಿಪಿಯ ಜ್ಞಾನ, ಪ್ರಾಚೀನ ಕನ್ನಡ ಸಾಹಿತ್ಯದ ಪರಿಚಯ ಮತ್ತು ಛಂದಸ್ಸಿನ ಅರಿವು ಬೇಕಾಗುತ್ತದೆ ಅಲ್ಲದೆ ಪಾಂಡಿತ್ಯದ ಬೆಂಬಲ, ಪ್ರತಿಭೆ, ವ್ಯುತ್ಪತ್ತಿ ಹಲವು ಭಾಷೆಗಳ ಪರಿಚಯದ ಜೊತೆಗೆ ನಿರಂತರವಾದ ಅಧ್ಯಯನ ಶೀಲತೆ, ತಾಳ್ಮೆ ಇರಬೇಕಾಗುತ್ತದೆ. ಇಂತಹ ಎಲ್ಲ ಗುಣಗಳನ್ನು ಭಾನುಮತಿಯವರಲ್ಲಿ ಕಾಣಬಹುದು. ಇದರ ಬಲದಿಂದಾಗಿ ಗ್ರಂಥಸಂಪಾದನೆಗೆ ಸಂಬಂಧಿಸಿದಂತೆ ಸುಮಾರು ೨೮ಕ್ಕೂ ಹೆಚ್ಚು ಕೃತಿಗಳನ್ನು ಪರಿಷ್ಕರಿಸಿ ಪ್ರಕಟಿಸಿದ್ದಾರೆ.

ಗ್ರಂಥಸಂಪಾದನ ಕ್ಷೇತ್ರಕ್ಕೆ ಅಷ್ಟೇ ಸೀಮಿತವಾಗದೆ ಜಾನಪದ ಕ್ಷೇತ್ರದಲ್ಲಿ ಸುಮಾರು ೧೧ ಕೃತಿಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಅದೇ ರೀತಿ ವಿಮರ್ಶೆ ಮತ್ತು ಸಂಶೋಧನೆಯಲ್ಲಿ ೭ ಕೃತಿಗಳನ್ನು ಪ್ರಕಟಿಸಿದ್ದಾರೆ. ಸ್ವತಂತ್ರ ಸಂಪಾದನೆ ಜೊತೆಗೆ ಹಲವು ಲೇಖನ ಸಂಕಲನಗಳಿಗೆ, ಸಂಪಾದಕರಾಗಿಯೂ ಕೆಲಸ ಮಾಡಿದ್ದಾರೆ. ಒಟ್ಟು ಹೇಳಬೇಕೆಂದರೆ ಶಿಶುಸಾಹಿತ್ಯ, ಆಧುನಿಕ ಮಹಿಳಾ ಸಾಹಿತ್ಯ, ಗ್ರಂಥಸಂಪಾದನೆ, ಜಾನಪದ ಇತರೆ ಲೇಖನ ಸಂಕಲನ ಕೃತಿಗಳು ಸೇರಿ ಸುಮಾರು ೧೫೦ಕ್ಕೂ ಹೆಚ್ಚು ಲೇಖನಗಳನ್ನು ಪ್ರಕಟಿಸಿದ್ದಾರೆ. ಅವರ ಈ ಕೃತಿಗಳಿಗೆ ಸುಮಾರು ೨೧ಕ್ಕೂ ಹೆಚ್ಚು ಪ್ರಶಸ್ತಿ-ಪುರಷ್ಕಾರಗಳು ಲಭಿಸಿವೆ.

ಪ್ರಾಚೀನ ಹಾಗೂ ನಡುಗನ್ನಡಕ್ಕೆ ಸಂಬಂಧಿಸಿದಂತೆ ಸುಮಾರು ೨೯ ಕೃತಿಗಳನ್ನು ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಈ ಕೃತಿಗಳನ್ನು ಅಧ್ಯಯನದ ಅನುಕೂಲಕ್ಕಾಗಿ ವೀರಶೈವ ಕಾವ್ಯಗಳು, ವೈದಿಕ ಕಾವ್ಯಗಳು, ಜೈನ ಕಾವ್ಯಗಳು, ಐತಿಹಾಸಿಕ ಕಾವ್ಯಗಳೆಂದೂ ವಿಭಾಗಿಸಿಕೊಳ್ಳಬಹುದು. ಇದು ಅಲ್ಲದೆ ಅಧ್ಯಯನದ ಅನುಕೂಲದ ದೃಷ್ಟಿಯಿಂದ ಇವುಗಳನ್ನು 'ಮಾರ್ಗ ಸಾಹಿತ್ಯ' ಕೃತಿಗಳು ಮತ್ತು 'ದೇಶಿ ಸಾಹಿತ್ಯ' ಕೃತಿಗಳು ಎಂದು ವಿಭಾಗೀಕರಿಸಿಕೊಳ್ಳಬಹುದು. ನಾನಿಲ್ಲಿ ಮಾರ್ಗ ಸಾಹಿತ್ಯ ಮತ್ತು ದೇಸಿ ಸಾಹಿತ್ಯವೆಂದು ವಿಭಾಗಿಸಿಕೊಂಡು ಭಾನುಮತಿ ಅವರ ಒಟ್ಟು ಸಂಪಾದನೆಯ ವೈಧಾನಿಕತೆಯನ್ನು ಅರ್ಥೈಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ.

೩.೨.೩.೧. ಮಾರ್ಗಸಾಹಿತ್ಯ ಸಂಪಾದನೆ

೩.೨.೩.೧.೧. ಮಲ್ಲರಸ ವಿರಚಿತ ದಶಾವತಾರ ಚರಿತೆ

ಸುಮಾರು ೧೬೫೦ರಲ್ಲಿದ್ದ ಮಲ್ಲರಸನು ಚಂಪೂ ಶೈಲಿಯಲ್ಲಿ ರಚಿಸಿದ ದಶಾವತಾರ ಚರಿತೆಯನ್ನು ವೈ.ಸಿ. ಭಾನುಮತಿ ಅವರು ಸಂಪಾದಿಸಿ ೧೯೭೮ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸಿದ್ದಾರೆ. ಈ ಕೃತಿಯ ಸಂಪಾದನೆಗೆ ಮೂರು ಹಸ್ತಪ್ರತಿಗಳನ್ನು ಬಳಸಿಕೊಂಡಿದ್ದಾರೆ. ಕ.ಗ.ಚ ಪ್ರತಿಗಳಲ್ಲಿ 'ಗ' ಪ್ರತಿ ಅಸಮಗ್ರವಾಗಿದ್ದು ಯಾವ ಪದ್ಯಗಳು ಶುದ್ಧವಾಗಿಲ್ಲ ಮತ್ತು ಸಮಗ್ರವಾಗಿಲ್ಲ. ಕ ಮತ್ತು ಚ ಪ್ರತಿಗಳು ಒಂದೇ ಮಾತೃಕೆಯ ರೂಪಗಳಾಗಿದ್ದು ಏಕೈಕ ಹಸ್ತಪ್ರತಿಯಿಂದ ಪರಿಷ್ಕರಿಸಿದ್ದಾರೆ. ದಶಾವತಾರಗಳ ಕುರಿತು ಹಲವಾರು ಭಾರತೀಯ ಭಾಷೆಗಳಲ್ಲಿ ಕೃತಿಗಳು ರಚಿತವಾಗಿದ್ದರೂ ಕನ್ನಡದಲ್ಲಿ ಇಡಿಯಾಗಿ ದಶಾವತಾರ ಚರಿತೆಯನ್ನು ಕಾವ್ಯರೂಪದಲ್ಲಿ ಬರೆದವರಲ್ಲಿ ಮಲ್ಲರಸನೇ ಮೊದಲಿಗನೆಂದು ಕೃತಿಯ ವೈಶಿಷ್ಟ್ಯವನ್ನು ಸಂಪಾದಕರು ಗುರುತಿಸುತ್ತಾರೆ. ಇದರಲ್ಲಿ ಹನ್ನೊಂದು ಆಶ್ವಾಸಗಳು ೧೧೭೯ ಪದ್ಯಗಳು ಇವೆ.

ಮಲ್ಲರಸನು ದಶಾವತಾರ ಚರಿತೆಯಲ್ಲಿ ಹತ್ತು ಅವತಾರಗಳನ್ನು ಹನ್ನೊಂದು ಆಶ್ವಾಸಗಳಲ್ಲಿ ಬಿತ್ತರಿಸಿದ್ದಾನೆ. ಮೂಲದ ವಸ್ತುವನ್ನು ಯಥವತ್ತಾಗಿ ಸ್ವೀಕರಿಸಿದರೂ ಪ್ರಸ್ತುತ ಕೃತಿ ಮೂಲದ ಪಡಿಯಚ್ಚಾಗಿಲ್ಲ. ಕವಿ ತನ್ನ ಕಾವ್ಯ 'ಮಹಾಕಾವ್ಯ' ಎನಿಸಿಕೊಳ್ಳಬೇಕು ಎಂದು ವ್ಯಕ್ತಪಡಿಸಿರುವ

ಅಭಿಲಾಷೆಯನ್ನು ಸಂಪಾದಕರು ವಿಶಿಷ್ಟವಾಗಿ ಗುರುತಿಸಿದ್ದಾರೆ. ಹಾಗೆಯೇ ಛಂದಸ್ಸಿಗಾಗಿ ಕೆಲವು ವ್ಯತ್ಯಾಸಗಳನ್ನು ಮಾಡಿಕೊಂಡಿರುವುದನ್ನು ಗುರುತಿಸಿ ಅದಕ್ಕೆ ಸರಿಯಾದ ಪಾಠಾಂತರಗಳನ್ನು ಕೊಟ್ಟಿದ್ದಾರೆ. ಉದಾಹರಣೆಗೆ 'ಗಭೀರ–ಗಾಂಭೀರ', 'ಅಂಬರ–ಅಂಬಾ', ಕುರ್ಮಾವತಾರ–ಕುರ್ಮವತಾರ', ಮಾಡುವುದೇನು–ಮಾಡೂದೇನು', 'ಪೇಟುವುದು–ಪೇಟೂದು', 'ಸೂರ್ಯೋದಯ–ಸೂರ್ಯುದಯ', 'ಕಾರ್ಯ–ಕಾರಿಯ'೪೬ ಇತ್ಯಾದಿ ವ್ಯತ್ಯಾಸಗಳನ್ನು ಗುರುತಿಸುತ್ತಾರೆ.

ಹಾಗೆಯೇ ಈ ಕಾವ್ಯದಲ್ಲಿ ಕವಿ ಖ್ಯಾತ ಕರ್ನಾಟಕ ಆರು ವೃತ್ತಗಳಿಂದ ತೃಪ್ತನಾಗದೆ, ಈ ಪುಟ್ಟ ಕಾವ್ಯದಲ್ಲಿ ವಿವಿಧ ವೃತ್ತಗಳ ಪ್ರಯೋಗಗಳನ್ನು ಮಾಡಿಕೊಂಡಿರುವುದನ್ನು ಸಂಪಾದಕರು ಪ್ರಸ್ತಾವನೆಯಲ್ಲಿ ಹೀಗೆ ಗುರುತಿಸುತ್ತಾರೆ. ಅನಂತ, ಮಣಿರಂಗ, ಇಂದ್ರವಜ್ರ, ಮತ್ತೇಭವಿಕ್ರೀಡಿತ, ಉತ್ಪಲ, ಮಹಾಸ್ರಗ್ಧರೆ, ಉಪೇಂದ್ರವಜ್ರ, ಮಾಲಿನೀ, ಚಂಪಕ, ರಥೋದ್ಧತ ಇತ್ಯಾದಿ ವೃತ್ತಗಳನ್ನು ಬಳಸಿಕೊಂಡು ಕವಿ ಅಪಾರ ಪ್ರಯೋಗಶೀಲತೆಯನ್ನು ಮೆರೆದಿದ್ದಾನೆ. ಇಪ್ಪತ್ತಾರು ಪುಟಗಳ ಪ್ರಸ್ತಾವನೆಯಲ್ಲಿ ದಶಾವತಾರ ಕಥೆಯ ವಿಶ್ಲೇಷಣೆ ಮತ್ತು ವೈಷ್ಣವೇತರ ದಶಾವತಾರಗಳನ್ನು ಆಕರವಾಗಿ ಬಳಸಿಕೊಂಡಿದ್ದಾರೆ. ಶಿವತತ್ವ ಚಿಂತಾಮಣಿ ಹಾಗೂ ಸಮಯ ಪರೀಕ್ಷೆಗಳನ್ನು ಉದಾಹರಿಸಲಾಗಿದೆ. ಉತ್ತಮವಾದ ವಿಮರ್ಶಾ ಭಾಗವಿದೆ. ಕಾವ್ಯದ ಆಕರಗಳಾದ ಸಂಸ್ಕೃತದ ವಿಷ್ಣುಪುರಾಣ ಮತ್ತು ಪಂಚರಾತ್ರಾಗಮಗಳು, ಕೃಷ್ಣಾವತಾರದ ಭಾಗ ಮಾತ್ರ ಭಾಗವತದ ದಶಮಸ್ಕಂಧವನ್ನು ಅವಲಂಬಿಸಿದೆ. ಯುದ್ಧವರ್ಣನೆ ಸಮಕಾಲೀನ ಜನಜೀವನ ನಿರೂಪಣೆಗೆ ಪದ್ಯಗಳನ್ನು ಆಧರಿಸಲಾಗಿದೆ. ಈತನ ಕಾವ್ಯ ಸಮಕಾಲೀನ ಮೌಲ್ಯಗಳ ಅಭಿವ್ಯಕ್ತಿಯಾಗಿದ್ದು, ಈತ ಮಹಾಕವಿಯಲ್ಲದಿದ್ದರೂ ವಿವಿಧ ಛಂದಸ್ಸುಗಳ ಪ್ರಯೋಗ ಸರಳ ನಿರೂಪಣೆಯಿಂದಾಗಿ ಒಂದು ವಿಶಿಷ್ಟ ಕಾವ್ಯವಾಗಿದೆ ಎಂಬ ಅಭಿಪ್ರಾಯವನ್ನು ಸಂಪಾದಕರು ವ್ಯಕ್ತಪಡಿಸಿದ್ದಾರೆ. ಅನುಬಂಧದಲ್ಲಿ ಸಪ್ತಮಾಶ್ವಾಸದಲ್ಲಿ ೭೪ನೆಯ ಹಾಗೂ ೭೫ನೆಯ ಪದ್ಯದ ಬಳಿಕ 'ಚ' ಪ್ರತಿಯಲ್ಲಿ ಸಿಕ್ಕುವ ಹೆಚ್ಚಿನ ಪದ್ಯಗಳು ಹಾಗೂ ಪುರಂದರದಾಸ ಮತ್ತು ಕನಕದಾಸರ ಕೀರ್ತನೆಗಳಲ್ಲಿ ದಶಾವತಾರ ಪದ್ಯಗಳ ಅಕಾರಾದಿ. ಅರ್ಥಕೋಶಗಳನ್ನು ಹೆಚ್ಚಿನ ಅಧ್ಯಯನಕ್ಕಾಗಿ ನೀಡಿದ್ದಾರೆ.

೩.೨.೩.೧.೨. ಕೃಷ್ಣಶರ್ಮ ವಿರಚಿತ ಸರಜಾ ಹನುಮೇಂದ್ರ ಯಶೋವಿಲಾಸಂ

ಪ್ರಸ್ತುತ ಕೃತಿಯನ್ನು ಸಂಪಾದಿಸಿ ೧೯೯೬ರಲ್ಲಿ ವೈ.ಸಿ.ಭಾನುಮತಿ ಅವರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸಿದ್ದಾರೆ. ಮೂರು ಹಸ್ತಪ್ರತಿಗಳ ನೆರವಿನಿಂದ ಈ ಗ್ರಂಥವನ್ನು ಪರಿಷ್ಕರಿಸಿದ್ದಾರೆ. ಇದೊಂದು ಐತಿಹಾಸಿಕ ಕಾವ್ಯ. ಮುದ್ರಣ ಪ್ರತಿಗಾಗಿ 'ಕ' ಕಾಗದ ಪ್ರತಿಯನ್ನು ಬಳಸಿಕೊಂಡಿದ್ದಾರೆ. 'ಗ' ಓಲೆ ಪ್ರತಿ ಶಿಥಿಲವಾಗಿದ್ದು ಸಮಗ್ರವಾಗಿದೆ. 'ಚ' ಕಾಗದದ ಪ್ರತಿಯಾಗಿದ್ದು 'ಗ' ಪ್ರತಿಯ ನಕಲಾಗಿದೆ. ಪಾಠಾಂತರಗಳು ವಿರಳ. ಅನುಬಂಧದಲ್ಲಿ 'ಸಂತೆಬೆನ್ನೂರು ವೃತ್ತಾಂತ' ಎಂಬ ಭಾಗವನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕೆ.ಎ. ೧೩೬ ಪ್ರತಿಯ ಸಹಾಯದಿಂದ ಪರಿಷ್ಕರಿಸಿದ್ದಾರೆ. ಮತ್ತೊಂದು ಕಿರುಕೃತಿ ತರೀಕೆರೆ ಕೈಫಿಯತ್ತು. ಪಾಂಡವಪುರವ ಪಿ.ಅಬ್ದುಲ್ ಸತ್ತಾರ ಅವರಲ್ಲಿದ್ದ ದಾಖಲೆಯಿಂದ ಇದನ್ನು ಪ್ರತಿಮಾಡಲಾಗಿದೆ. ಕವಿ ಎಲ್ಲಿಯೂ ತನ್ನ ಕಾಲವನ್ನು

ಖಚಿತವಾಗಿ ಹೇಳಿಕೊಂಡಿಲ್ಲ. ಆದರೆ ಸಂಪಾದಕರು ಹಾಗೂ ಕವಿಚರಿತೆಕಾರರು ಈತನ ಕಾಲವನ್ನು ಸುಮಾರು ೧೭೭೦ ಆಗಿರಬಹುದು ಎಂದು ಗುರುತಿಸಿದ್ದಾರೆ.

ಸರಜಾ ಹನುಮೇಂದ್ರ ಯಶೋವಿಲಾಸ ಕೃತಿಯು ಪಾಳೆಯಗಾರರ ವಿಚಾರವಾಗಿ ತಿಳಿಸುವ ಐತಿಹಾಸಿಕ ವಸ್ತುವನ್ನೊಳಗೊಂಡ ವಿಶಿಷ್ಟ ಬಗೆಯ ಚಂಪೂ ಕಾವ್ಯವಾಗಿದೆ. ಕಂದ, ವೃತ್ತ, ವಚನಗಳ ನಡುವೆ ವಿರಳವಾಗಿ ಸಾಂಗತ್ಯ ಮತ್ತು ಷಟ್ಪದಿಗಳು ಕಾಣಿಸಿಕೊಂಡಿವೆ. ಐದು ಆಶ್ವಾಸಗಳು ೩೯೨ ಪದ್ಯಗಳಿವೆ. ೨೪ ಪುಟಗಳ ಪ್ರಸ್ತಾವನೆಯನ್ನು ಬರೆಯಲಾಗಿದೆ. ಮೊದಲ ಆಶ್ವಾಸದಲ್ಲಿ ಸರಜಾ ಹನುಮೇಂದ್ರನಾಯಕನ ವಂಶಾವಳಿಯ ಮೂಲ ಹಾಗೂ ಧೈರ್ಯ ಸಾಹಸಗಳನ್ನು ಸಂಕ್ಷಿಪ್ತವಾಗಿ ಕವಿ ವರ್ಣಿಸಿದ್ದಾನೆ. ದ್ವಿತೀಯಾಶ್ವಾಸದಲ್ಲಿ ಹನುಮಪ್ಪನಾಯಕ ಮತ್ತು ಆತನ ರಮಣಿ ಗಂಗಾಂಬಿಕೆಯ ಮೋಹಕ ವರ್ಣನೆಗಳಿವೆ. ಪ್ರಾಚೀನ ಕಾವ್ಯ ಸಂದರ್ಭಕ್ಕೆ ಅನುಗುಣವಾಗಿ ಗಂಗಾಂಬೆಯನ್ನು ಅಡಿಯಿಂದ ಮುಡಿಯ ವರೆಗೆ ಕವಿ ಉತ್ಸಾಹದಿಂದ ವರ್ಣಿಸಿದ್ದನೆ. ತೃತೀಯಾಶ್ವಾಸದಲ್ಲಿ ರಾಜಪರಿವಾರ ಬೇಟೆಗೆ ಹೋದ ಸಂಗತಿಯಿದೆ. ಪಕ್ಷಿ ಬೇಟೆ, ಪ್ರಾಣಿಬೇಟೆಯ ಕೆಲವೊಂದು ನೈಜಚಿತ್ರಗಳು ಇಲ್ಲಿ ದೊರೆಯುತ್ತಿದ್ದು ಕವಿಯೂ ಇದರಲ್ಲಿ ನೇರವಾಗಿ ಭಾಗವಹಿಸಿರುವ ಸಾಧ್ಯತೆಯಿದೆ. ಚತುರ್ಥಾಶ್ವಾಸದಲ್ಲಿ ಸರಜಾಹನುಮ ದೈವ ಭಕ್ತಿಯ ದ್ಯೋತಕವಾಗಿ ಯಗಟಿ ಮಲ್ಲಿಕಾರ್ಜುನನ ಜಾತ್ರೆಗೆ ಹೋದ ವಿವರಗಳಿವೆ. ಪಂಚಮಾಶ್ವಾಸವೂ ರಾಜ್ಯಭಾರ ವರ್ಣನೆಗೆ ಮೀಸಲಾಗಿದೆ. ಹಾಗೆಯೇ "ಸರಜಾ ಹನುಮೇಂದ್ರ ಯಶೋವಿಲಾಸಂ ಚಾರಿತ್ರಿಕ ವ್ಯಕ್ತಿಯನ್ನು ಆಧರಿಸಿದ ಕೃತಿ. ಆದರೆ ಶುದ್ಧ ಐತಿಹಾಸಿಕ ಕಾವ್ಯವಲ್ಲ ಕಲ್ಪನೆ ಮತ್ತು ಇತಿಹಾಸ ಮಿಶ್ರವಾದ ಕಾವ್ಯ ಹಾಗೂ ವರ್ಣನಾ ಪ್ರಧಾನವಾದ ಕಾವ್ಯ. ಇದಕ್ಕೆ ಸಮಕಾಲೀನ ಓದುಗರ ಅಭಿರುಚಿಯೂ ಕಾರಣವಾಗಿರಬಹುದು"[೪೮] ಎಂದು ಸಂಪಾದಕರು ಗುರುತಿಸಿದ್ದಾರೆ.

ಹಾಗೆಯೇ ಈ ಕೃತಿಯನ್ನು ಪರಿಷ್ಕರಿಸುವಾಗ ಪ್ರಾಚೀನ ಕನ್ನಡ ಕಾವ್ಯಗಳು, ಕೈಫಿಯತ್ತು. ಜಾನಪದ ಲಾವಣಿಗಳು ಹಾಗೂ ಪಾಳೆಗಾರರ ಚರಿತ್ರೆಯ ಸಹಾಯ ಪಡೆದಿದ್ದಾರೆ. ಶ್ರೀ ಕೃಷ್ಣ ತಂತ್ರಿಯವರಿಂದ ಹನುಮಪ್ಪನಾಯಕನನ್ನು ಕುರಿತ ಕಾದಂಬರಿ ರಚನೆಯಾಗಿರುವ ವಿಚಾರವನ್ನು ಸಂಪಾದಕರು ಗಮನಿಸಿದ್ದಾರೆ. ಕೃಷ್ಣಶರ್ಮಕವಿಗೆ ಸರಜಾಹನುಮೇಂದ್ರನ ದೈನಂದಿನ ಭೋಗ ಜೀವನ ಪ್ರೇರಣೆ ನೀಡಿರುವುದರಿಂದ ಸಮಕಾಲೀನ ಚಾರಿತ್ರಿಕ ಸಂಗತಿಗಳು ಪ್ರಖರವಾಗಿ ಮೂಡಿ ಬಂದಿಲ್ಲವೆಂದು ಸಂಪಾದಕರು ಅಭಿಪ್ರಾಯಪಡುತ್ತಾರೆ. ಅನುಬಂಧವು ಸಂತೆಬೆನ್ನೂರು ವೃತ್ತಾಂತ, ತರೀಕೆರೆ ಕೈಫಿಯತು, ಮಾಸ್ವಾಮಿಧೀರ, ತರೀಕೆರೆ ರಂಗಪ್ಪನಾಯಕನ ಪದ್ಯಗಳ ಆಕಾರಾದಿ, ಅರ್ಥಕೋಶ ಹೀಗೆ ಹೆಚ್ಚು ವಿಷಯಗಳನ್ನೊಳಗೊಂಡಿದ್ದು ಯಾವುದೇ ರಾಜಕೀಯ ಆತಂಕಗಳಿಲ್ಲದ ಸಂದರ್ಭದಲ್ಲಿ ಈ ಕಾವ್ಯ ರೂಪಗೊಂಡಿರಬೇಕೆನ್ನುವುದನ್ನು ಭಾನುಮತಿಯವರು ಗುರುತಿಸುತ್ತಾರೆ.

೩.೨.೩.೧.೩. ಭೈರವೇಶ್ವರ ಪುರಾಣ

ಪ್ರಸ್ತುತ ಕೃತಿಯ ಕರ್ತೃ 'ಸಿದ್ಧಲಿಂಗ ಶಿವಯೋಗಿ' ಈತನ ಕಾಲ ೧೬೦೦ ಎಂದು ಕವಿ ಚರಿತೆಕಾರರು ಉಲ್ಲೇಖಿಸಿದ್ದಾರೆ. ಈ ಕೃತಿಯನ್ನು ವೈ.ಸಿ.ಭಾನುಮತಿ ಅವರು ಸಂಪಾದಿಸಿ ೨೦೦೭ರಲ್ಲಿ

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯಿಂದ ಪ್ರಕಟಿಸಿದ್ದಾರೆ. ಈ ಕಾವ್ಯವನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿರುವ ಏಕೈಕ ಕಾಗದದ ಪ್ರತಿಯನ್ನು ಬಳಸಿಕೊಂಡು ಪರಿಷ್ಕರಿಸಲಾಗಿದೆ. ಏಕೈಕ ಹಸ್ತಪ್ರತಿಯಿಂದ ಚಂಪೂ ಕಾವ್ಯವನ್ನು ಸಂಪಾದಿಸುವುದು ಸಂಪಾದಕನಿಗೆ ಸವಾಲೇ ಸರಿ, ಈ ಪ್ರತಿಯಲ್ಲಿ ಬಹುತೇಕ ವೃತ್ತಗಳು ಛಂದೋ ದೋಷದಿಂದ ಕೂಡಿವೆ. ಪಾಠ ಪರಿಷ್ಕರಣೆಯಲ್ಲಿ ನಂಜುಂಡ ಕವಿಯ ಭೈರವೇಶ್ವರ ಕಾವ್ಯವನ್ನು ಒಂದು ಪ್ರತಿ ಎಂಬಂತೆ ಬಳಸಿಕೊಂಡಿರುವುದು ಈ ಕೃತಿಯ ಸಂಪಾದನೆಯ ವೈಶಿಷ್ಟ್ಯವಾಗಿದೆ. ಊಹಾಪಾಠವನ್ನು ಕಂಸದಲ್ಲಿ ತೋರಿಸಿ ಕವಿಪಾಠವನ್ನು ಅಡಿಟಿಪ್ಪಣಿಯಲ್ಲಿ ಕೊಟ್ಟು 'ಮೂ' ಎಂದು ಸೂಚಿಸಿದ್ದಾರೆ. ಎರಡು ಕಾವ್ಯಗಳ ಸಂಪಾದನೆಗೆ ಹಾಕುವ ಶ್ರಮ ಸಮಯ ಅನುಭವ ಹಾಗೂ ಅಧ್ಯಯನಗಳನ್ನು ಈ ಕೃತಿಗೆ ಧಾರೆ ಎರೆದಿದ್ದರೂ ಸಮಾಧಾನವಿಲ್ಲ ಎಂಬುದನ್ನು ಸಂಪಾದಕರು ಪ್ರಾಮಾಣಿಕವಾಗಿ ಹೇಳುತ್ತಾರೆ.

ಭೈರವೇಶ್ವರನ ಕಥಾವಸ್ತು ಕನ್ನಡ ವೀರಶೈವ ಸಾಹಿತ್ಯದಲ್ಲಿ ಪ್ರಸಿದ್ಧವಾಗಿದೆ. "ಸಿದ್ಧಲಿಂಗ ಶಿವಯೋಗಿಯ ಭೈರವೇಶ್ವರ ಪುರಾಣವು ಐತಿಹಾಸಿಕತೆ ಪೌರಾಣಿಕತೆ ಮತ್ತು ಕಾಲ್ಪನಿಕತೆ ಮೇಳೈಸಿರುವ ಕಾವ್ಯ. ಹಾಗಾಗಿ ಐತಿಹಾಸಿಕವಾಗಿಯೂ ಪರಿಶೀಲನಾರ್ಹ ಗ್ರಂಥವಾಗಿದೆ. ಸಿದ್ಧಲಿಂಗ ಶಿವಯೋಗಿ ತನ್ನ ಕೃತಿಗೆ ನಂಜುಂಡ ಕವಿಯ ಭೈರವೇಶ್ವರ ಕಾವ್ಯವು ಆಕರವಾಗಿರುವುದನ್ನು ಪರೋಕ್ಷವಾಗಿ ಸೂಚಿಸಿದ್ದಾನೆ. ಹಾಗೆಯೇ ಇಲ್ಲಿನ ಕಥೆಗಳು ಹನ್ನೆರಡನೆಯ ಶತಮಾನದಲ್ಲಿ ಬಂದ ಶರಣರು ಹಾಗೂ ತಮಿಳುನಾಡಿನ ಚೋಳರು ಮೊದಲಾದವರ ಕಥೆಗಳು ಕೃತಿಯ ತುಂಬಾ ವ್ಯಾಪಿಸಿವೆ. ಕಾವ್ಯದ ಉದ್ದೇಶ ಶಿವಭಕ್ತಿ ಮತ್ತು ಧರ್ಮದ ಮಹತ್ವವನ್ನು ಶ್ರುತಪಡಿಸುವುದರಿಂದ ಚಾರಿತ್ರಿಕ ಸಂಗತಿಗಳು ತೆರೆಯ ಮರೆಯಲ್ಲಿ ಅಡಗಿಕೊಂಡಿವೆ"[೪೯] ಎಂದಿದ್ದಾರೆ.

ಭೈರವೇಶ್ವರ ಪುರಾಣ ೨೧ ಆಶ್ವಾಸಗಳುಳ್ಳ ದೀರ್ಘವಾದ 'ಚಂಪೂ' ಕಾವ್ಯವಾಗಿದೆ. ಇದರ ಪ್ರಸ್ತಾವನೆ ೨೪ ಪುಟಗಳಷ್ಟು ಇದ್ದು, ಇದರಲ್ಲಿ ಕಥಾಸಾರ ಚಾರಿತ್ರಿಕ ಸಂಗತಿಗಳು ಆಕರ ತೌಲನಿಕ ಅಧ್ಯಯನ ವಿಮರ್ಶೆ ಮಾಡುವುದರ ಮೂಲಕ ಪರಿಷ್ಕರಿಸಲಾಗಿದೆ. ಈ ಕಾವ್ಯದ ಮುಖ್ಯ ಕಥೆ ಭೈರವ ರಾಜನು ರಾಜ್ಯ ಪದವಿ ಐಶ್ವರ್ಯಗಳನ್ನು ತೊರೆದು ಶಿವಭಕ್ತನಾಗಿ ವೀರಶೈವ ಧರ್ಮವನ್ನು ಸ್ಥಾಪಿಸಿ ಮುಕ್ತಿಗೆ ಸಂದ ಕಥೆಯಾಗಿದೆ. ಈತನ ಕಥೆಗೆ ಪೂರಕವಾಗಿ ವೀರಶೈವ ಸಾಹಿತ್ಯದಲ್ಲಿ ಕಂಡು ಬರುವ ಶರಣರ ಕಥೆಗಳೆಲ್ಲ ಒಂದು ಕಡೆ ಬರುವುದರಿಂದ ಇದೊಂದು ಕಥಾಕೋಶವಾಗಿದೆ ಎಂಬುದನ್ನು ಸಂಪಾಕರು ಗಮನಿಸಿದ್ದಾರೆ. ಅನುಬಂಧದಲ್ಲಿ ಹೆಚ್ಚಿನ ಪದ್ಯಗಳು ಹಾಗೂ ಪದ್ಯಗಳ ಅಕಾರಾದಿ, ಅರ್ಥಕೋಶ ನೀಡುವುದರ ಮೂಲಕ ಶಾಸ್ತ್ರೀಯವಾಗಿ ಸಂಪಾದಿಸಿದ್ದಾರೆ.

೩.೨.೩.೧.೪. ಇಮ್ಮಡಿ ಗುಣವರ್ಮನ ಪಾರ್ಶ್ವಪಂಡಿತರ ಸಂಪುಟ

ಪ್ರಸ್ತುತ ಕೃತಿಗಳನ್ನು ಸಂಪಾದಿಸಿದ ವೈ.ಸಿ.ಭಾನುಮತಿ ಅವರು ೨೦೦೭ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಿಸಿದ್ದಾರೆ. ಪಾಶ್ವ ಪಂಡಿತನ ಪಾರ್ಶ್ವನಾಥ ಪುರಾಣವನ್ನು ಎಂ.ಮರಿಯಪ್ಪ ಭಟ್ಟ ಮತ್ತು ಎಂ. ಗೋವಿಂದರಾವ್ ಅವರು ೧೯೫೪ರಲ್ಲಿ ಏಕೈಕ ಹಸ್ತಪ್ರತಿಯಿಂದ ಸಂಪಾದಿಸಿ

ಮದ್ರಾಸ್ ವಿಶ್ವವಿದ್ಯಾನಿಲಯದಿಂದ ಪ್ರಕಟಿಸಿದ್ದರು. ಆ ನಂತರ ಎಸ್.ಬೊಮ್ಮರಸ ಪಂಡಿತರು ೧೯೫೬ರಲ್ಲಿ ಹಿಂದೆ ಅಚ್ಚಾದ ಪ್ರತಿಯ ಜೊತೆಗೆ ಶ್ರವಣಬೆಳಗೊಳದ ಜೈನ ಮಠದ ಓಲೆಪ್ರತಿ, ಮದರಾಸಿನ ಶೇಷಯ್ಯಂಗಾರರ ಪ್ರತಿ ಮತ್ತು ಮೂಡಬಿದಿರೆಯ ಎರಡು ಓಲೆ ಪ್ರತಿಯನ್ನು ಬಳಸಿಕೊಂಡು ಪರಿಷ್ಕರಿಸಿ ಪ್ರಕಟಿಸಿದ್ದರು. ಇದಾದ ಬಳಿಕ ಎಚ್.ಶೇಷಯ್ಯಂಗಾರರು ೧೯೬೦ರಲ್ಲಿ ಮೂರು ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಿ ಪ್ರಕಟಿಸಿದ್ದರು. ವೈ.ಸಿ. ಭಾನುಮತಿ ಅವರು 'ಬೊಮ್ಮರಸ ಪಂಡಿತರ' ಆವೃತ್ತಿಯನ್ನು ಆಕರವಾಗಿಟ್ಟುಕೊಂಡು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಕೆ ೧೧೧೩ ಕೆ ೧೧೧೪ ಕೆಬಿ, ೫೮,೫೯ ಹಸ್ತಪ್ರತಿಗಳನ್ನು ಬಳಸಿಕೊಂಡು ಮರುಪರಿಷ್ಕರಣ ಮಾಡಿ ಪ್ರಕಟಿಸಿದ್ದರು.

ಎರಡನೆಯ ಗುಣವರ್ಮನು ಹದಿನಾರನೆಯ ಶತಮಾನದ ಆರಂಭದಲ್ಲಿ ಜೀವಿಸಿದ್ದನು. 'ಪುಷ್ಪದಂತ ಪುರಾಣಂ' ಎಂಬ ಚಂಪೂ ಸಾಹಿತ್ಯದಲ್ಲಿ ಹದಿನಾಲ್ಕು ಆಶ್ವಾಸಗಳಲ್ಲಿ ೧೩೬೫ ಪದ್ಯಗಳನ್ನು ರಚಿಸಿದ್ದಾನೆ. ಈತ ಗುಣಭದ್ರಾಚಾರ್ಯನ ಉತ್ತರ ಪುರಾಣದ ಪುಷ್ಪದಂತ ಚರಿತದ ಭಾಗವನ್ನು ಬಳಸಿಕೊಂಡಿರುವುದನ್ನು ಸಂಪಾದಕರು ಗುರುತಿಸಿದ್ದಾರೆ. ಹಾಗೆಯೇ ಮಹಾಪದ್ಮನೇ ಮುಂದಿನ ಜನ್ಮದಲ್ಲಿ ಪುಷ್ಪದಂತನಾಗಿ ತೀರ್ಥಂಕರನಾಗುವ ಕಥಾವಸ್ತು ಇಲ್ಲಿದೆ. ಚಂದ್ರನಾಥಾಷ್ಟಕದಲ್ಲಿ ಒಂಬತ್ತು ಪದ್ಯಗಳಿದ್ದು ಇದರ ವಸ್ತು ಸೋಲ್ಲಾಪುರದ ಶ್ರೀ ತ್ರಿಭುವನ ತಿಲಕ ಜಿನಾಲಯದ ಚಂದ್ರನಾಥನ ಸ್ತುತಿಯಾಗಿದೆ. ಇಮ್ಮಡಿ ಗುಣವರ್ಮ ಇಪ್ಪತ್ಮೂರನೆಯ ತೀರ್ಥಂಕರನಾದ ಪಾರ್ಶ್ವನಾಥರ ಪುರಾಣಗಳನ್ನು ಒಳಗೊಂಡಿದೆ. ಈ ಕಾವ್ಯದಲ್ಲಿ ೧೬ ಸಂಧಿಗಳಿವೆ. ಈ ಕಾವ್ಯಕ್ಕೆ ಪ್ರೇರಣೆಯಾದ ಕೃತಿಗಳನ್ನು ಪರೀಶೀಲಿಸುವುದರ ಮೂಲಕ ಕಾವ್ಯ ಸಮೀಕ್ಷೆ ಹಾಗೂ ಅನುಬಂಧದಲ್ಲಿ ಅರ್ಥಕೋಶ, ಪರಿಭಾಷಿಕ ಪದಕೋಶಗಳನ್ನು ಸಂಪಾದಕರು ವ್ಯವಸ್ಥಿತವಾಗಿ ನೀಡಿರುವುದು ವಿಶೇಷವಾಗಿದೆ.

೩.೨.೩.೨. ದೇಸಿ ಸಾಹಿತ್ಯ

ವೈ.ಸಿ ಭಾನುಮತಿಯವರು ಪ್ರಕಟಿಸಿದ ದೇಸಿ ಸಾಹಿತ್ಯದ ಕೆಲಸಗಳನ್ನು ಮೂರು ಪ್ರಕಾರಗಳಾಗಿ ವಿಂಗಡಿಸಿಕೊಂಡು ಚರ್ಚಿಸಲು ಪ್ರಯತ್ನಿಸಿದ್ದೇನೆ.

೩.೨.೩.೨.೧. ಚಾರಿತ್ರಿಕ ಕಾವ್ಯಗಳು

೩.೨.೩.೨.೧.೧. ಕುಮಾರ ಚೆನ್ನಬಸವ ವಿರಚಿತ ಪುರಾತನರ ಚರಿತೆ

ವೈ.ಸಿ. ಭಾನುಮತಿ ಅವರು ಈ ಕೃತಿಯನ್ನು ಸಂಪಾದಿಸಿ ೧೯೭೬ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸಿದ್ದಾರೆ. ಇದು ಇವರ ಪ್ರಥಮ ಸಂಪಾದಿತ ಕೃತಿ. ಪ್ರಸ್ತುತ ಪುರಾತನರ ಚರಿತೆಯನ್ನು ಎರಡು ಹಸ್ತಪ್ರತಿಗಳ ನೆರವಿನಿಂದ ಪರಿಷ್ಕರಿಸಿದ್ದಾರೆ. ಈ ಕೃತಿಯಲ್ಲಿ ೯ ಸಂಧಿಗಳ ಹಾಗೂ ೩೫೦ ಪದ್ಯಗಳು ಇವೆ. ಈ ಕಾವ್ಯ ವಾರ್ಧಕ ಷಟ್ಪದಿಯಲ್ಲಿದೆ. ಪುರಾತನರು ಎಂದರೆ ಕೇವಲ ತಮಿಳು ನಾಡಿನ ಅರವತ್ತು ಮೂರು ಪುರಾತನರಲ್ಲಿ ಕವಿ ತನಗಿಂತ ಹಿಂದೆ ಇದ್ದ ಶಿವಶರಣರನ್ನು ಕುರಿತಾಗಿ ವಿವರಿಸಿದ್ದಾನೆ. ಪುರಾತನರ ಚರಿತೆಯು ಜನಸಾಮಾನ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆದಂಥ ಕೃತಿ. ಇಲ್ಲಿಯ ವಸ್ತು ಹೊಸದೇನೂ ಅಲ್ಲ. ಹರಿಹರ ಪಾಲ್ಕುರಿಕೆ

ಸೋಮನಾಥ ಮೊದಲಾದ ತನಗಿಂತ ಹಿಂದೆ ಇದ್ದ ವೀರಶೈವ ಕವಿಗಳ ಕೃತಿಗಳಿಂದ ಮತ್ತು ಶಿವಪುರಾಣಗಳಿಂದ ಆಯ್ದುಕೊಂಡಂತಹ ವಸ್ತುವಾಗಿದೆ. ಈ ಪುಟ್ಟ ಕಾವ್ಯದಲ್ಲಿ ಪ್ರಪಂಚವನ್ನೇ ಅಡಗಿಸುವ ಹಂಬಲ ಆದ್ದರಿಂದ ಸುಮಾರು ೨೦೦ಕ್ಕೂ ಹೆಚ್ಚು ಶಿವಶರಣ ಸಂಕ್ಷಿಪ್ತ ಚರಿತ್ರೆಯನ್ನು ಕಟ್ಟಿಕೊಡುವ ಪ್ರಯತ್ನವನ್ನು ಸಂಪಾದಕರು ಪ್ರಸ್ತಾವನೆಯಲ್ಲಿ ತಿಳಿಸಿದ್ದಾರೆ.

ಕುಮಾರ ಚೆನ್ನಬಸವ ಪುರಾತರ ಚರಿತ್ರೆಯನ್ನು ರಚಿಸುವ ಕಾಲಕ್ಕಿಂತ ಮೊದಲೆ ಕನ್ನಡ ಸಾಹಿತ್ಯದಲ್ಲಿ ಪುರಾತನರ ಬಗ್ಗೆ ರಚಿತವಾಗಿರುವ ಕೃತಿಗಳನ್ನು ಸಂಪಾದಕರು ಅಧ್ಯಯನ ಮಾಡಿ ಪುರಾತನರ ಚರಿತೆಗೆ ಆಕರವಾಗಿರುವ "ಹರಿಹರನ ನೂತನ ಮತ್ತು ಪುರಾತನರ ರಗಳೆಗಳು ಸುರಂಗನ ತ್ರಿಷಷ್ಠಿ ಪುರಾತನರ ಚರಿತ್ರಂ, ವೀರಭದ್ರನ ಅರವತ್ತು ಮೂರು ಪುರಾತನರ ಚರಿತ್ರೆ, ಅರವತ್ತು ಮೂರು ಪುರಾತನರ ಸಾಂಗತ್ಯ"[೩೦] ಇಷ್ಟು ಕೃತಿಗಳನ್ನು ಕವಿ ಕುಮಾರ ಚೆನ್ನಬಸವ ಅಧ್ಯಯನ ಮಾಡಿ ತನ್ನದೇ ಆದ ಶೈಲಿಯಲ್ಲಿ ಶಿವ ವಿಷ್ಣು ಮುಂತಾದ ಪಾತ್ರಗಳನ್ನು ಸೃಷ್ಟಿ ಮಾಡಿಕೊಂಡು ಈ ಕೃತಿಯನ್ನು ಬರೆದಿರಬಹುದು. ಹಿಗೆಯೇ ಇಷ್ಟು ಕೃತಿಗಳನ್ನು ಪುರಾತನರ ಚರಿತೆಯೊಂದಿಗೆ ತೌಲನಿಕ ಅಧ್ಯಯನ ಮಾಡಿದ್ದಾರೆ. ಕವಿಗೆ ಈ ಕೃತಿಗಳು ಪುರಾತನರ ಚರಿತೆಯನ್ನು ರಚಿಸುವುದಕ್ಕೆ ಮೂಲ ಆಕರಗಳಾಗಿರಬಹುದು. ಕವಿಯ ಮೇಲಾದ ಪ್ರಭಾವ ಮತ್ತು ಪರಿಣಾಮಗಳನ್ನು ಅಧ್ಯಯನ ಪೂರ್ವಕವಾಗಿ ಕಟ್ಟಿಕೊಟ್ಟಿದ್ದಾರೆ.

ಇಲ್ಲಿನ ಸಂಪಾದನೆಯ ವಿಶೇಷತೆ ಎಂದರೆ ಪ್ರಾಚೀನ ಕಥಾ ವಸ್ತುವನ್ನು ಪ್ರಸ್ತುತ ಸಂದರ್ಭಕ್ಕೆ ಇಟ್ಟು ನೋಡುವಂತಹ ಪ್ರಯತ್ನವನ್ನು ಸಂಪಾದಕರು ಮಾಡಿದ್ದಾರೆ. ಉದಾಹರಣೆಗೆ "ಆಧುನಿಕ ಮಾನದಂಡಗಳಿಂದ ಈ ಕಾವ್ಯವನ್ನು ನೋಡಿದರೆ ಇದು ಸೀಮಿತ ಉದ್ದೇಶವನ್ನು ಇಟ್ಟುಕೊಂಡಿರುವ ಸಾಮಾನ್ಯ ಕಾವ್ಯವೆನಿಸುತ್ತದೆ. ಕವಿಯು ಭಕ್ತಿಯ ಪ್ರಚಾರಕ್ಕಾಗಿ ಈ ಕಾವ್ಯವನ್ನು ಬರೆದಿದ್ದಾನೆ. ಭಕ್ತನ ಮನಸ್ಸಿನ ತುಮುಲವನ್ನಾಗಲಿ ದ್ವಂದ್ವ ಭಾವವನ್ನಾಗಲ್ಲಿ ಇಲ್ಲಿ ಚಿತ್ರಿಸಿಲ್ಲ. ಈತನು ಆಯ್ದುಕೊಂಡ ವಸ್ತುವಿನಲ್ಲಾದರೂ ಸ್ವಂತಿಕೆ ಇಲ್ಲ. ಆದರೆ ಈತನ ಸ್ವಂತಿಕೆ ಇರುವುದು ನಿರೂಪಣೆಯಲ್ಲಿ. ಹಾಗೆಯೇ ಈ ಕಾವ್ಯ ಐತಿಹಾಸಿಕ ವ್ಯಕ್ತಿಗಳ ಚರಿತೆಯನ್ನು ನಿರೂಪಿಸಿರುವುದರಿಂದ ಜೀವನ ಚರಿತ್ರೆ ಆಗಿದೆ"[೩೧] ಎಂದು ವಸ್ತು ನಿಷ್ಠ ವಿವರ ನೀಡುತ್ತಾರೆ. ಪುರಾತನರ ಚರಿತೆ ಭಕ್ತಿರಸ ಪ್ರಧಾನವಾದ ಕಾವ್ಯ ಅವನ ಉದ್ದೇಶ ಜನರಲ್ಲಿ ಭಕ್ತಿಮಾರ್ಗ ಬೆಳೆಸುವುದು ಎಂದು ಗುರುತಿಸಿದ್ದಾರೆ.

ಪ್ರಸ್ತಾವನೆಯಲ್ಲಿ ಕವಿ, ಕಾಲ, ಕೃತಿ, ಗ್ರಂಥಸಾರ ಮತ್ತು ಗ್ರಂಥಸಂಪಾದನೆ ಕುರಿತ ಚರ್ಚೆ ಮಾಡಿದ್ದಾರೆ. ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ, ಬಾಳೆಹಳ್ಳಿಯ ಶಾಸನಗಳು, ಶಿವಲಿಂಗನೆಂಬ ಕವಿಯ ಶಿವನ ಸ್ತುತಿ, ಕೃತಿಯ ಆರಂಭ ಇವುಗಳ ಆಧಾರದಿಂದ ಹಾಗೂ ಕವಿಚರಿತೆಕಾರರು ಎಚ್. ದೇವೀರಪ್ಪನವರು ನಿರ್ಧರಿಸಿದಂತೆ ಕವಿಯ ಕಾಲ ಕ್ರಿ.ಶ. ೧೫೫೦ ಎಂಬುದು ನಿರ್ವಿವಾದವಾದರೂ ಆತನು ಕ್ರಿ.ಶ.೧೫೬೯ವರೆಗೂ ಬದುಕಿದ್ದನೆಂಬುದನ್ನು ಖಚಿತವಾಗಿ ಸಂಪಾದಕರು ಉಲ್ಲೇಖಿಸುತ್ತಾರೆ. ಹಾಗೆಯೇ ಕಾವ್ಯಕ್ಕೆ 'ಗಣಾಡಂಬರ ಚರಿತೆ' ಎಂಬ ಪರ್ಯಾಯ ನಾಮವಿದ್ದು ಇಲ್ಲಿ ಗಣಗಳ

ಮರೆತ ಇರುವ ಕಾರಣ ಜನರ ಬಾಯಲ್ಲಿ 'ಗಣಾಡಂಬರ' ಚರಿತೆ ಎಂದಾಗಿರಬೇಕು. ಅನುಬಂಧದಲ್ಲಿ ವ್ಯಕ್ತಿಸೂಚಿ, ಅರ್ಥಕೋಶ, ಪದ್ಯಗಳ ಅಕಾರಾದಿ ಕೊಡುವುದರ ಮೂಲಕ ಸಾಹಿತ್ಯ ಲೋಕದಲ್ಲಿ ಅಪ್ರಸ್ತುತ ಎನಿಸಿದ ಕೃತಿಯನ್ನು ಶಾಸ್ತ್ರೀಯವಾಗಿ ಪರಿಷ್ಕರಿಸಿ ಪ್ರಕಟಿಸಿದ ಕೀರ್ತಿ ವೈ.ಸಿ.ಭಾನುಮತಿ ಅವರಿಗೆ ಸಲ್ಲುತ್ತದೆ.

೩.೨.೩.೨.೧.೨. ಚೆನ್ನಬಸವ ವಿರಚಿತ ನಿಜಲಿಂಗ ಚಿಕ್ಕಯ್ಯನ ಸಾಂಗತ್ಯ

ಸುಮಾರು ೧೫೫೦ರಲ್ಲಿದ್ದ ಚೆನ್ನಬಸವ ಕವಿಯಿಂದ ರಚಿತವಾದ ನಿಜಲಿಂಗ ಚಿಕ್ಕಯ್ಯನ ಸಾಂಗತ್ಯವನ್ನು ವೈ.ಸಿ.ಭಾನುಮತಿ ಅವರು ಸಂಪಾದಿಸಿ ೧೯೭೭ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸಿದ್ದಾರೆ. ಬಸವಣ್ಣನವರ ಪ್ರಭಾವದಿಂದ ಚೋರವೃತ್ತಿಯನ್ನು ಬಿಟ್ಟು ಪರಿಶುದ್ಧನಾದ ನಿಜಲಿಂಗ ಚಿಕ್ಕಯ್ಯನನ್ನು ಕುರಿತು ಸ್ವತಂತ್ರ ಕೃತಿಯನ್ನು ಬರೆದವರಲ್ಲಿ ಚೆನ್ನಬಸವನೇ ಮೊದಲನೆಯವನೆನ್ನಾಲಾಗಿದೆ. ೪ ಸಂಧಿಗಳ ಈ ಸಾಂಗತ್ಯ ಕೃತಿ ೭೪೫ ಪದ್ಯಗಳನ್ನೊಳಗೊಂಡಿದ್ದು ೫೩ ಪುಟಗಳ ಚಿಕ್ಕ ಕಾವ್ಯವಾಗಿದೆ.

ಈ ಕೃತಿಯ ಪರಿಷ್ಕರಣೆಗಾಗಿ ಸಂಪಾದಕರು ಮೂರು ಹಸ್ತಪ್ರತಿಗಳನ್ನು ಬಳಸಿಕೊಂಡಿದ್ದಾರೆ. 'ಕ' ಪ್ರತಿಯ ಅಕ್ಷರಗಳು ಸ್ಪಷ್ಟವಾಗಿದ್ದು ಅಲ್ಲಲ್ಲಿ ಗ್ರಂಥ ಲುಪ್ತ ಹಾಗೂ ಕೆಲವು ಕಡೆಗೆ ತಿದ್ದಲಾಗಿದ್ದು ಈ ಪ್ರತಿಯಿಂದ ಮುದ್ರಣ ಪ್ರತಿಯನ್ನು ಸಿದ್ಧಪಡಿಸಲಾಗಿದೆ. 'ಗ' ಪ್ರತಿಯ ೫೫ನೆಯ ಪತ್ರದ ಅರ್ಧಭಾಗ ಮುರಿದಿದ್ದು ಉಳಿದ ಪತ್ರಗಳ ಅಂಚು ಮುರಿದ ವಿವರಗಳನ್ನು ಸಂಪಾದಕರು ಕೊಡುತ್ತಾರೆ. 'ಚ' ಪ್ರತಿಯಲ್ಲಿ ಅಕ್ಷರಗಳು ಅಸ್ಪಷ್ಟವಾಗಿದ್ದು ಕೃತಿ ಅಸಮಗ್ರವಾಗಿದೆ. ಇದರಲ್ಲಿ 'ಕ' ಪ್ರತಿಗಿಂತ ಭಿನ್ನಪಾಠಗಳಿವೆ. ಅದುದರಿಂದ ಹೆಚ್ಚು ಕಡಿಮೆ ಒಂದೇ ಪ್ರತಿಯಿಂದ ಸಂಪಾದಿಸುವಾಗ ಪ್ರತಿಯೊಂದು ಘಟ್ಟದಲ್ಲಿ ಸಮಸ್ಯೆಗಳು ತಲೆದೋರಿದ ಬಗ್ಗೆ ಸಂಪಾದಕರು ಬರೆಯುತ್ತಾರೆ.

ನಿಜಲಿಂಗ ಚಿಕ್ಕಯ್ಯನ ಬಗ್ಗೆ ಉಲ್ಲೇಖವಿರುವ ಕೃತಿಗಳನ್ನು ಸಹ ಪರಿಶೀಲಿಸಿ ಈ ಕೃತಿಯನ್ನು ಪರಿಷ್ಕರಿಸಿರುವುದನ್ನು ಕಾಣಬಹುದು. ವೀರಶೈವ ಕಾವ್ಯಗಳಲ್ಲಿ ಚಿಕ್ಕಯ್ಯ, ಬಸರಾಜ ದೇವರ ರಗಳೆ, ಶಿವತತ್ವ ಚಿಂತಾಮಣಿ, ವೀರಶೈವಾಮೃತ ಮಹಾಪುರಾಣ, ಸಿಂಗಿರಾಜ ಪುರಾಣ, ಮೋಳಿಗೆಯ್ಯನ ಪುರಾಣ, ಪುರಾತನರ ಚರಿತೆ, ಬಸವೇಶ್ವರ ಪುರಾಣದ ಕಥಾಸಾರ, ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ, ಷಟ್ಸ್ಥಲತಿಲಕ, ಶರಣಲೀಲಾಮೃತ, ಇಷ್ಟು ಕೃತಿಗಳೊಂದಿಗೆ ನಿಜಲಿಂಗ ಚಿಕ್ಕಯ್ಯನ ಸಾಂಗತ್ಯವನ್ನು ಸಂಪಾದಕರು ತೌಲನಿಕ ಅಧ್ಯಯನ ಮಾಡಿದ್ದಾರೆ. ಹಾಗೆಯೇ ನಿಜಲಿಂಗ ಚಿಕ್ಕಯ್ಯನು ಒಬ್ಬ ಶಿವಶರಣ ಹಾಗೂ ವಚನಕಾರನೆಂದು ಆತನ ಅಂಕಿತ 'ಉಳಿಯುಮೇಶ್ವರ ಚಿಕ್ಕ' ಎಂದು ಸಾಧಿಸಿ ತೋರಿಸಿದ್ದಾರೆ. ಅನುಬಂಧದಲ್ಲಿ 'ಚ' ಪ್ರತಿಯಲ್ಲಿರುವ ಹೆಚ್ಚಿನ ಪದ್ಯಗಳನ್ನು ಸಹ ಪರಿಷ್ಕರಿಸಿದ್ದಾರೆ. ವೀರಶೈವ ಕಾವ್ಯಗಳಲ್ಲಿ ನಿಜಲಿಂಗ ಚಿಕ್ಕಯ್ಯನ ಪ್ರಸ್ತಾಪ ಇರುವ ವಚನಗಳನ್ನು ಉಲ್ಲೇಖಿಸಲಾಗಿದೆ. ಅರ್ಥಕೋಶ, ತಪ್ಪು-ಒಪ್ಪು ಪಾಠಾಂತರಗಳನ್ನು ಗುರುತಿಸಿ ಶಾಸ್ತ್ರೀಯವಾಗಿ ಪರಿಷ್ಕರಿಸಿ ಈ ಕೃತಿಯನ್ನು ಪ್ರಕಟಿಸಿದ್ದಾರೆ.

೩.೨.೩.೨.೧.೩. ಮುಖಬೋಳು ಸಿದ್ಧರಾಮ ವಿರಚಿತ ಷಟ್ಸ್ಥಲತಿಲಕ

ಪ್ರಸ್ತುತ ಈ ಕೃತಿಯನ್ನು ವೈ.ಸಿ.ಭಾನುಮತಿ ಅವರು ಸಂಪಾದಿಸಿ ೧೯೭೯ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸಿದ್ದಾರೆ. ಮುಖಬೋಳು ಸಿದ್ಧರಾಮ ವಿರಚಿತ ಷಟ್ಸ್ಥಲತಿಲಕ ಪರಿಷ್ಕರಣೆಯನ್ನು ಐದು ಹಸ್ತಪ್ರತಿಗಳ ಸಹಾಯದಿಂದ ಸಂಪಾದಕರು ಮಾಡಿದ್ದಾರೆ. 'ಪ' ಈ ಪ್ರತಿ ಶ್ರೀ.ಎನ್.ಬಸವಾರಾಧ್ಯರ ಸ್ವಂತ ಪ್ರತಿ, 'ಬ' ಇದು ಕನ್ನಡ ಅಧ್ಯಯನ ಸಂಸ್ಥೆಯ ಓಲೆ ಪ್ರತಿ, ಈ ಎರಡು ಪ್ರತಿಗಳು ಶುದ್ಧವಾಗಿದ್ದು ಸಮಗ್ರವಾಗಿವೆ. 'ಮ' ಅಶುದ್ಧ ಪ್ರತಿಯಾಗಿದೆ. 'ಜ' ಪ್ರತಿಯ ಪಾಠಾಂತರಗಳನ್ನು ಕೆಲವು ಕಡೆಗೆ ಮಾತ್ರ ಬಳಸಿಕೊಳ್ಳಲಾಗಿದ್ದು ಶುದ್ಧಪಾಠವನ್ನು ಗುರುತಿಸಿ ಅಶುದ್ಧ ಪಾಠವನ್ನು ಅಡಿ ಟಿಪ್ಪಣಿಯಲ್ಲಿ ಕೊಡಲಾಗಿದೆ. ಪಾಠಾಂತರಗಳು ಈ ಪ್ರತಿಯಲ್ಲಿ ಕಡಿಮೆ ಸಂಖ್ಯೆಯಲ್ಲಿರುವುದು ಗಮನಾರ್ಹ.

ಷಟ್ಸ್ಥಲತಿಲಕದಲ್ಲಿ ೨೦ ಸಂಧಿಗಳು ೮೮೧ಪದ್ಯಗಳಿದ್ದು ೨೧೯ ಪುಟಗಳಲ್ಲಿ ಈ ಕೃತಿ ರಚಿಸಲಾಗಿದೆ. ಈ ಕಾವ್ಯ ವಾರ್ಧಕ ಷಟ್ಪದಿಯಲ್ಲಿದೆ. ಶರ, ಕುಸುಮ, ಭಾಮಿನಿ, ಭೋಗ, ಪರಿವರ್ಧಿನಿ, ಷಟ್ಪದಿಗಳಲ್ಲೂ ಕವಿ ಯಾವ ಯಾವ ಷಟ್ಪದಿಗಳನ್ನು ಎಲ್ಲೆಲ್ಲಿ ಬಳಸಿಕೊಂಡಿದ್ದಾನೆ ಎಂಬುವುದನ್ನು ಗುರುತಿಸಿದ್ದಾರೆ. ಹಾಗೆಯೇ ಮಧ್ಯೆ, ಮಧ್ಯೆ, ಕಂದ ವೃತ್ತಗಳೂ ಮತ್ತು ಒಂದು ವಚನವೂ ಬಂದಿರುವುದನ್ನು ಸಂಪಾದಕರು ವಿಶೇಷವಾಗಿ ಗುರುತಿಸಿದ್ದಾರೆ. ಇವುಗಳ ಜೊತೆ ಸಂಸ್ಕೃತ ಶ್ಲೋಕಗಳು ಇವೆ. ಐವತ್ತು ಪುಟಗಳ ಪ್ರಸ್ತಾವನೆಯಲ್ಲಿ ಕವಿಯ ಹಿನ್ನೆಲೆ, ಕವಿ ಕಾಲ ವಿಚಾರ, ಕೃತಿಗಳು, ಗ್ರಂಥಸಾರ ಪೂರ್ವ ಕವಿಗಳ ಪ್ರಭಾವ, ವಿಮರ್ಶೆ, ವೀರಶೈವ ಧರ್ಮದ ಹುಟ್ಟು ವಿವಿಧ ಧರ್ಮಗಳ ಮತಾಚಾರ್ಯರು ಷಟ್ಸ್ಥಲ ಸಿದ್ಧಾಂತದ ವಿವರಗಳ ಹಿನ್ನೆಲೆಯನ್ನು ವಿಶೇಷವಾಗಿ ಗುರುತಿಸಿದ್ದಾರೆ.

ಮುಖಬೋಳು ಸಿದ್ಧರಾಮನ ಕಾಲವನ್ನು ಕುರಿತು ಕವಿ ಚರಿತೆಕಾರರು ಸುಮಾರು ೧೬೫೦ ಎಂದೂ ಶ್ರೀ ಎಚ್.ದೇವೀರಪ್ಪನರು ಕ್ರಿ.ಶ. ೧೫೫೬ ಎಂದು ಹೇಳಿದ್ದಾರೆ. ಎಸ್.ಶಿವಣ್ಣನವರು ಸಹ ಈತನ ಕಾಲ ೧೫೫೬ ಎಂದು ಗುರುತಿಸಿದ್ದಾರೆ. ಶ್ರೀ ಎಚ್.ದೇವೀರಪ್ಪ ಮತ್ತು ಎಸ್.ಶಿವಣ್ಣನವರು ಗುರುತಿಸಿದ ಕಾಲವನ್ನೆ ಸಂಪಾದಕರು ಸ್ವೀಕರಿಸಿದ್ದಾರೆ. ಮುಖಬೋಳು ಸಿದ್ಧರಾಮನ ಆರಾಧ್ಯದೈವ ಬಸವಲಿಂಗ. ಪ್ರತಿಯೊಂದು ಸ್ಥಲದಲ್ಲಿಯೂ ಬಸವಲಿಂಗನನ್ನು ಸುತ್ತಿಸುತ್ತಾನೆ, ೧-೭ ಮತ್ತು ೨-೧೩೭ನೆಯ ಪದ್ಯಗಳಲ್ಲಿ 'ಶಿಖಾಪುರ' ಕನ್ನಡೀಕರಣವಾಗಿ ಈಗ 'ಕೊಟ್ಟೂರು' ಆಗಿರುವುದನ್ನು ಭಾನುಮತಿಯವರು ವಿಶೇಷವಾಗಿ ಗುರುತಿಸಿದ್ದಾರೆ. ಈತನ ಎರಡು ಕೃತಿಗಳು ಮಾತ್ರ ಲಭ್ಯವಾಗಿವೆ. 'ಷಟ್ಸ್ಥಲತಿಲಕ' ಮತ್ತು 'ಕೊಟ್ಟೂರಯ್ಯನ ಕಂದ' ಇದು ೧೫ ಕಂದಗಳಿರುವ ಒಂದು ಕಿರುಕೃತಿ. ಪ್ರತಿಯೊಂದು ಪದ್ಯವು ಬಸವಲಿಂಗ ಪ್ರಭುವೆ ಎಂದು ಮುಕ್ತಾಯವಾಗುತ್ತವೆ.

'ಷಟ್ಸ್ಥಲತಿಲಕ' ವೀರಶೈವ ಷಟ್ಸ್ಥಲ ಸಿದ್ಧಾಂತವನ್ನು ಪ್ರತಿಪಾದಿಸುತ್ತದೆ. ಈ ಕೃತಿಯನ್ನು ರಚಿಸಲು ಕವಿಗೆ ಪ್ರಭಾವ ಬೀರಿದ ಕೃತಿಗಳೆಂದರೆ 'ಹರಿಶ್ಚಂದ್ರ ಕಾವ್ಯ' 'ಶಿವತತ್ವ ಚಿಂತಾಮಣಿ'

ಮೂರೇಳು ದೀಕ್ಷಾವಿಧಾನ ಹಾಗೂ ಶಿಂಗಿರಾಜ ಪುರಾಣ, ವೈರಾಗ್ಯ ಷಟ್ಪದಿಗಳು ಪ್ರಭಾವ ಆಗಿರುವುದನ್ನು ಗುರುತಿಸಿದ್ದಾರೆ. ವೀರಶೈವ ಷಟ್ಸ್ಥಲ ಸಿದ್ಧಾಂತವು ಹಲವು ಸಮಸ್ಯೆಗಳ ಆವರಣದಲ್ಲಿ ಧಾರ್ಮಿಕ ಶ್ರದ್ಧೆಯ ದೃಷ್ಟಿಯಿಂದ ಮಹತ್ವಪೂರ್ಣ ಗ್ರಂಥವಾಗಿದೆ. ವೀರಶೈವೇತರರಿಗೂ ಹಿಡಿಸುವಂಥ ಸಾರ್ವಕಾಲಿಕ ಮೌಲ್ಯಗಳನ್ನೊಳಗೊಂಡ ಅಂಶಗಳು ಇರುವುದನ್ನು ಸಂಪಾದಕರು ಗುರುತಿಸಿದ್ದಾರೆ. ಅನುಬಂಧದಲ್ಲಿ ಕೊಟ್ಟೂರಯ್ಯನ ಕಂದ, ಪದ್ಯಗಳ ಅಕಾರಾದಿ, ಸಂಸ್ಕೃತ ಶ್ಲೋಕಗಳ ಅಕಾರಾದಿ, ಅರ್ಥಕೋಶ ಪಾರಿಭಾಷಿಕ ಶಬ್ದಕೋಶಗಳನ್ನು ನೀಡಿದ್ದಾರೆ. ಉತ್ತಮವಾದ ಪರಿಷ್ಕರಣಕ್ಕೆ ಈ ಕೃತಿ ಒಂದು ಒಳ್ಳೆ ಉದಾಹರಣೆಯಾಗಿದೆ.

೩.೨.೩.೧.೪. ಚಿಕ್ಕಪದ್ಮಣ್ಣಶೆಟ್ಟಿ ವಿರಚಿತ ಅನಂತನಾಥ ಚರಿತೆ

ಚಿಕ್ಕ ಪದ್ಮಣ್ಣಶೆಟ್ಟಿ ಅನಂತನಾಥ ಚರಿತೆಯನ್ನು ೧೫೮೧ರಲ್ಲಿ ರಚಿಸಿದ್ದಾನೆ. ಪ್ರಸ್ತುತ ಈ ಕೃತಿಯನ್ನು ವೈ.ಸಿ.ಭಾನುಮತಿ ಅವರು ಪರಿಷ್ಕರಿಸಿ ೧೯೮೧ರಲ್ಲಿ ಕನ್ನಡ ಅಧ್ಯಯನ ಸಂಸ್ಥೆ ಮೈಸೂರಿನಿಂದ ಪ್ರಕಟಿಸಿದ್ದಾರೆ. ಎರಡು ಹಸ್ತಪ್ರತಿಗಳ ಸಹಾಯದಿಂದ ಈ ಕೃತಿಯನ್ನು ಪರಿಷ್ಕರಿಸಲಾಗಿದೆ. ಅಸಮಗ್ರ 'ನ' ಓಲೆ ಪ್ರತಿ ಹಾಗೂ ಅಲ್ಲಲ್ಲಿ ಲುಪ್ತವಾಗಿರುವ 'ಬ' ಓಲೆಪ್ರತಿಗಳಿಂದ ಈ ಕಾವ್ಯದ ಪರಿಷ್ಕರಣೆ ಮಾಡಿದ್ದಾರೆ. 'ಬ' ಪ್ರತಿಯ ಕೊನೆಯಲ್ಲಿರುವ ಅನಂತನಾಥ ಅಷ್ಟಕವನ್ನು ಅನುಬಂಧದಲ್ಲಿ ಕೊಟ್ಟಿದ್ದಾರೆ. ಅನಂತನಾಥ ಚರಿತೆಯನ್ನು ಎರಡು ಅಸಮಗ್ರ ಹಸ್ತಪ್ರತಿಗಳಿಂದ ಸಂಪಾದಿಸಬೇಕಾಗಿ ಬಂದುದರಿಂದ ಸಂಪಾದಕರು ಹಲವು ಪಾಠಾಂತರ ಸಮಸ್ಯೆಗಳನ್ನು ಎದುರಿಸಿದ್ದಾರೆ. ಅಂತಹ ಸಂದರ್ಭದಲ್ಲಿ ಜನ್ನನ ಅನಂತನಾಥ ಪುರಾಣದ ಸಹಾಯ ಪಡೆದಿದ್ದಾರೆ. ಹಾಗಾಗಿ ಇಲ್ಲಿ ಜನ್ನನ ಅನಂತನಾಥ ಪುರಾಣ ಕೂಡ ಒಂದು ಹಸ್ತಪ್ರತಿಯ ಸ್ಥಾನ ಪಡೆದಿದೆ. ಚಿಕ್ಕಪದ್ಮಣಶೆಟ್ಟಿಯ ಅನಂತನಾಥ ಚರಿತೆಯಿಂದ ಜನ್ನನ ಅನಂತನಾಥ ಪುರಾಣವನ್ನು ಮತ್ತಷ್ಟು ಪರಿಷ್ಕರಿಸಲು ಸಾಧ್ಯವಿದೆ ಎನ್ನುವ ಸಾಧ್ಯತೆಯನ್ನು ಸಂಪಾದಕರು ತಿಳಿಸುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಡಿ.ಪದ್ಮನಾಭಶರ್ಮ ಭುವನಹಳ್ಳಿಯವರು ಸಂಪಾದಿಸಿದ ಜೈನ ಸಂಸ್ಕೃತಿಯ ಭಾದ್ರಪದ ಮಾಸದ ವ್ರತ ಪೂಜಾ ವಿಧಿ ಎಂಬ ಕೃತಿಯನ್ನು ಅನುಬಂಧದಲ್ಲಿ ಕೊಡಲಾಗಿದೆ.

ನಲ್ವತ್ತು ಪುಟಗಳ ಅಭ್ಯಾಸ ಪೂರ್ಣ ಪ್ರಸ್ತಾವನೆಯನ್ನು ಈ ಕೃತಿಗೆ ಸಂಪಾದಕರು ನೀಡಿದ್ದಾರೆ. ಕವಿಕಾಲ ವಿಚಾರ, ಕಥಾಸಾರ, ಅನಂತನಾಥ ಕಥೆಯ ವ್ಯಾಪ್ತಿ, ಅನಂತ, ನೋಂಪಿ, ವಿಮರ್ಶೆ, ಗ್ರಂಥಸಂಪಾದನೆ ಕುರಿತ ವಿವರಗಳಿವೆ. ಈತನು ಇದ್ದ ಸ್ಥಳ ಸಂಕಿಘಟ್ಟವೆಂದೂ ಇದು ತುಮಕೂರು ಜಿಲ್ಲೆ ಮಾಗಡಿ ತಾಲ್ಲೂಕಿಗೆ ಸೇರಿದ ಒಂದು ಗ್ರಾಮ ಎಂದು ಸಂಪಾದಕರು ನಿರ್ಧರಿಸಿದ್ದಾರೆ. ಹಾಗೆಯೇ ಅನಂತನಾಥ ಚರಿತೆ ೧೪ನೆಯ ತೀರ್ಥಂಕರನಾದ ಅನಂತನಾಥನ ಕಥೆಯನ್ನು ಹೇಳುವ ಉದ್ದೇಶದಿಂದ ರಚಿತವಾದ ಕಾವ್ಯ, ಅನಂತ ತೀರ್ಥಂಕರನ ಕಥೆ ೧೫ನೆಯ ಸಂಧಿಗೆ ಮುಗಿದೆ ಹೋಗುತ್ತದೆ. ೧೬ನೆಯ ಸಂಧಿಯಿಂದ ಬಲದೇವ ವಾಸುದೇವರ ಕಥೆ ಪ್ರಾರಂಭವಾಗುತ್ತದೆ. ಇಲ್ಲಿಯೂ ಸಹ ಚಂಡಶಾಸನ ಪ್ರಸಂಗ ಸ್ವತಂತ್ರ ಅಸ್ತಿತ್ವವನ್ನು ಪಡೆದಿದೆ. ಬೇರೆ ತೀರ್ಥಂಕರ

ಚರಿತ್ರೆಗಳಿಗೆ ಹೋಲಿಸಿದರೆ ಅನಂತನಾಥನ ಕಥೆ ತುಂಬಾ ಸರಳ ಮತ್ತು ಸಂಕ್ಷಿಪ್ತವಾಗಿದೆ. ಭವಾವಳಿಗಳು ಇಲ್ಲದಿರುವುದು ಈ ಕಾವ್ಯದ ಮತ್ತೊಂದು ವೈಶಿಷ್ಟ್ಯ ಎಂದಿದ್ದಾರೆ. "ಇಂಥ ಪುಟ್ಟ ಕಥಾವಸ್ತುವನ್ನು ಹೊಂದಿದ್ದರೂ ಅನಂತನಾಥ ಪುರಾಣಕಾರರು ತಮ್ಮ ಕಾವ್ಯ ಮಹಾಕಾವ್ಯವಾಗಬೇಕೆಂಬ ಅಭಿಲಾಷೆಯಿಂದ ಅಷ್ಟಾದಶವರ್ಣನೆಗಳು ಜೈನ ಪ್ರಕ್ರಿಯೆಗಳು ಅಷ್ಟಾಂಗಗಳು ಇವೇ ಮೊದಲಾದುವನ್ನು ಉದ್ದೇಶ ಪೂರ್ವಕವಾಗಿ ತಂದು ಪುರಾಣ ಕಾವ್ಯಗಳನ್ನಾಗಿ ಮಾಡಿದ್ದಾರೆ"[೨೮] ಎಂದು ಸಂಪಾದಕರು ಗುರುತಿಸುತ್ತಾರೆ.

ಚಿಕ್ಕಪದ್ಮಣ್ಣ ಸೆಟ್ಟಿ ಜನ್ನನ ಅನಂತನಾಥ ಪುರಾಣವನ್ನು ಮುಂದಿಟ್ಟುಕೊಂಡು ಸಾಂಗತ್ಯದಲ್ಲಿ ಬರೆದಿದ್ದಾನೆ. ಕಥಾವಸ್ತು, ವಿನ್ಯಾಸದಲ್ಲಾಗಲಿ, ಭಾವದಲ್ಲಾಗಲಿ ಯಾವ ಬದಲಾವಣೆಯನ್ನು ಮಾಡಿಕೊಂಡಿಲ್ಲ. ಆರಂಭದಿಂದ ಅಂತ್ಯದವರೆಗೆ ಜನ್ನನ ಕ್ರಮದಲ್ಲಿಯೆ ಕಾವ್ಯ ಸಾಗುತ್ತವೆ. ಜನ್ನನ ಅನಂತನಾಥ ಪುರಾಣವನ್ನು ೧೪ ಆಶ್ವಾಸಗಳಲ್ಲಿ ರಚಿಸಿದ್ದಾನೆ. ಚಿಕ್ಕಪದ್ಮಣ್ಣನ ಅನಂತನಾಥ ಚರಿತೆಯ ೨೬ ಸಂಧಿಗಳಾಗಿ ವಿಂಗಡಿಸಿಕೊಂಡು ಕಾವ್ಯ ರಚನೆ ಮಾಡಲಾಗಿದೆ ಎಂದು ಸಂಪಾದಕರು ಗುರುತಿಸಿದ್ದಾರೆ. ಉತ್ತಮ ಪರಿಷ್ಕರಣ ಇದಾಗಿದ್ದು ಈ ಕೃತಿಯ ಕೊನೆಯಲ್ಲಿ ಅರ್ಥಕೋಶ, ಪಾರಿಭಾಷಿಕ ಪದಕೋಶಗಳನ್ನೂ ಸಂಪಾದಕರು ನೀಡಿದ್ದಾರೆ.

೩.೨.೩.೨.೧.೫. ಶ್ರುತಕೀರ್ತಿ ವಿರಚಿತ ವಿಜಯಕುಮಾರಿ ಚರಿತೆ

ಸುಮಾರು ೧೬೦೦ರಲ್ಲಿ ಶ್ರುತಕೀರ್ತಿ ಬರೆದ ಈ ಕೃತಿಯನ್ನು ವೈ.ಸಿ.ಭಾನುಮತಿ ಅವರು ಪರಿಷ್ಕರಿಸಿ ೧೯೮೧ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸಿದ್ದಾರೆ. ಕ.ಗ.ಚ.ಬ.ಮ.ರ. ಎಂಬ ಸಂಕೇತವುಳ್ಳ ಆರು ಹಸ್ತಪ್ರತಿಗಳ ಸಹಾಯವನ್ನು ಪಡೆದುಕೊಂಡಿದ್ದಾರೆ. ಈ ಕೃತಿ ಸಾಂಗತ್ಯದಲ್ಲಿದೆ. ಇದರಲ್ಲಿ ಒಟ್ಟು ೧೩೦೫ ಪದ್ಯಗಳು ಇವೆ. ಔಚಿತ್ಯ ಪೂರ್ಣವಾದ ೬೭ ಪುಟ ಪ್ರಸ್ತಾವನೆಯಲ್ಲಿ ಕಥಾಸಾರ ಹಾಗೂ ವಿಜಯಕುಮಾರಿ ಚರಿತೆಯಲ್ಲಿ ನಿರೂಪಿತವಾಗಿರುವ ಬಸವಣ್ಣನ ಬಗೆಗಿನ ಸಂಗತಿಗಳನ್ನು, ಶಾಸನಗಳು, ವೀರಶೈವ ಮತ್ತು ವೀರಶೈವೇತರ ಕವಿಗಳು ಬಸವಣ್ಣನ ಸಮಕಾಲೀನ ವಚನಕಾರರ ಅಭಿಪ್ರಾಯಗಳನ್ನು ಕೆಲವು ಪ್ರಾತಿನಿಧಿಕ ಕೃತಿಗಳ ಆಧಾರದಿಂದ ಸಂಪಾದಕರು ಚರ್ಚಿಸಿದ್ದಾರೆ. ಹಾಗೆಯೆ, ಕಾವ್ಯ ಸಮೀಕ್ಷೆ ಟಿಪ್ಪಣಿ ಹೀಗೆ ವಿಭಾಗ ಮಾಡಿಕೊಂಡು ಈ ಕೃತಿಗೆ ಪ್ರೇರಣೆಯಾದ ಸಂಗತಿಗಳನ್ನು ಪರಿಷ್ಕರಣ ಸಂದರ್ಭದಲ್ಲಿ ಗಮನಿಸಿದ್ದಾರೆ.

ಸಾಮಾನ್ಯ ಹೆಣ್ಣೊಬ್ಬಳ ಕಥೆಯನ್ನು ವಸ್ತುವಾಗಿಟ್ಟುಕೊಂಡು ರಚಿಸಿದ ಮೊದಲ ಜೈನ ಕೃತಿ ಎಂದು ಸಂಪಾದಕರು ಕೃತಿಯ ಚಾರಿತ್ರಿಕ ಮಹತ್ವವನ್ನು ಗುರುತಿಸಿದ್ದಾರೆ. ಜೈನ ಧರ್ಮೀಯಳಾದ ವಿಜಯಕುಮಾರಿ ವೀರಶೈವನಾದ ತನ್ನ ಸೋದರ ಮಾವನ ಮಗನನ್ನು ಮದುವೆಯಾಗಲು ನಿರಾಕರಿಸಿದ್ದು, ಹಾಗೂ ಬಿಜ್ಜಳ ಬಸವಣ್ಣನ ಸೋದರಿಯನ್ನು ಮದುವೆಯಾದದ್ದು ಮತ್ತು ಮಂತ್ರಿ ಪದವಿಯನ್ನು ನೀಡಿ ಎಲ್ಲಾ ಜವಾಬ್ದಾರಿಯನ್ನು ಬಸವಣ್ಣನಿಗೆ ವಹಿಸಿದ್ದು, ಇದರ ದುರುಪಯೋಗ ಮಾಡಿಕೊಂಡು ಬಸವಣ್ಣ ಜನರ ಆಕ್ರೋಶಕ್ಕೆ ಒಳಾಗಾಗುವ ಸಂಗತಿಗಳನ್ನು ವಿವರಿಸಿದ್ದಾರೆ. ಈ ಕಾವ್ಯ ಅರ್ಥ

ಭಾಗದಷ್ಟು ಅಂದರೆ ಸುಮಾರು ೭೨೫ ಪದ್ಯಗಳಲ್ಲಿ ಬಸವಣ್ಣನ ಕಥೆ ಹರವು ಪಡೆದುಕೊಂಡಿದೆ. ಉಳಿದ ಭಾಗದಲ್ಲಿ ವಿಜಯಕುಮಾರಿಯ ಕಥೆ ಬಂದಿದೆ.

ಈ ಕೃತಿಯಲ್ಲಿ ಬಸವಣ್ಣನ ಕಥೆ ಹೊಸ ರೀತಿಯಲ್ಲಿದ್ದು ಕುತೂಹಲಕರವಾದ ವಿಚಾರಗಳು ಬಸವಣ್ಣನ ಚರಿತ್ರೆಯ ಬಗ್ಗೆ ಆಸಕ್ತಿ ಮೂಡಿಸುತ್ತವೆ. ಅಂದರೆ ಈ ಕಥೆಗಳ ಮಧ್ಯೆ ಹಿತಮಿತವಾದ ವರ್ಣನೆಗಳು ಸಮಕಾಲೀನ ಜನ ಜೀವನ ಧಾರ್ಮಿಕ ಹಾಗೂ ರಾಜಕೀಯ ಸಂಗತಿಗಳು ಕಾವ್ಯದಲ್ಲಿ ಮೂಡಿ ಬಂದಿರುವುದನ್ನು ಸಂಪಾದಕರು ಗಮನಿಸಿದ್ದಾರೆ. ಹಾಗೆಯೇ ಬಸವಣ್ಣ ಬೇತಾಳ ವಿದ್ಯೆ ಕಲಿತು ಬಿಜ್ಜಳನನ್ನು ಕೊಲೆ ಮಾಡಿಸುವುದು, ವೀರಶೈವ ಮತವನ್ನು ಸ್ವೀಕರಿಸುವುದು ಹಾಗೂ ಬೇತಾಳ ವಿದ್ಯೆ ಕಲಿತಿದ್ದರಿಂದ ಕಪಟ ತಂತ್ರದಿಂದ ಬಸವಣ್ಣ ಬಿಜ್ಜಳನ್ನು ಕೋಲಿಸಿದ ಕಥಾವಿವರ ಬಸವಣ್ಣನ ವ್ಯಕ್ತಿತ್ವದ ಮತ್ತೊಂದು ಮಜಲನ್ನು ಅನಾವರಣ ಮಾಡುತ್ತದೆ. ಸಂಪಾದಕರು ಗುರುತಿಸುವ ಹಲವು ವೈಶಿಷ್ಟ್ಯಗಳಲ್ಲಿ ವಿಜಯಕುಮಾರಿ ಚರಿತೆ ಒಂದು, ಉದಾಹರಣೆಗೆ "ಮಾವಿನ ಹೂವು ಮಂಜಿಗೆ ಕೆಡುವಂದದಿ ಬಾಲಕಿಯರ ನೋಟ ವಿಷಕೆ ತೀವಿದ ವ್ರತ ಕೆಡುವುದು ಯತಿ ಜನಕಮ್ಮ! ಕೋವಿದೆ ನೀ ಬರ ಬೇಡೆ"[೫೩] ಎಂದು ಜೈನ ಯತಿಗಳು ಹೇಳುತ್ತಾರೆ. ಜೈನರು ಸ್ತ್ರೀಯರ ಬಗ್ಗೆ ಸ್ತ್ರೀ ಶಿಕ್ಷಣದ ಬಗ್ಗೆ ಆ ಕಾಲದಲ್ಲಿ ಹೊಂದಿದ್ದ ಧೋರಣೆಯನ್ನು ಹೇಳುತ್ತದೆ. ಆದರೆ ವಿಜಯ ಕುಮಾರಿ ಮನೆಯಲ್ಲಿಯೇ ಶಿಕ್ಷಣ ಕಲಿತು ಸಾಧಕಿಯಾಗಿ ಕೊನೆಗೆ ಸಲ್ಲೇಖ ವ್ರತವನ್ನು ಕೈಗೊಳ್ಳುತ್ತಾಳೆ. ಈ ಕಾವ್ಯವನ್ನು ಸಂಪಾದಕರು ಸರಳ ಹಾಗೂ ಸುಲಭವಾಗಿ ಗ್ರಾಹ್ಯವಾಗುವ ಹಾಗೆ ಪರಿಷ್ಕರಿಸಿದ್ದಾರೆ. ಅರ್ಥಕೋಶ ಪರಿಭಾಷಿಕ ಪದಕೋಶವನ್ನು ಗುರುತಿಸಿದ್ದಾರೆ. ಹಾಗೆಯೇ ಪಾಠಾಂತರವನ್ನು ಗುರುತಿಸಿ ಸೂಕ್ತವಾದ ಪಾಠವನ್ನು ಕೊಟ್ಟಿದ್ದಾರೆ. ವಿಜಯಕುಮಾರಿ ಚರಿತೆಯಲ್ಲಿ ಬಸವಣ್ಣನ ಚರಿತ್ರೆ ಮಿಶ್ರಣವಾಗಿರುವುದರಿಂದ ಸಂಪಾದಕರು ಸಂಪಾದನೆಯ ಸಂದರ್ಭದಲ್ಲಿ ಹಲವು ಸಮಸ್ಯೆಗಳನ್ನು ಎದುರಿಸಿದ್ದು ಹಾಗೂ ಪರಿಶ್ರಮ ಪಟ್ಟು ಕೃತಿಯನ್ನು ಶಾಸ್ತ್ರೀಯವಾಗಿ ಸಂಪಾದಿಸಿದ್ದಾರೆ. ಬಸವಣ್ಣನ ಚರಿತ್ರೆಯು ಇಲ್ಲಿ ಜೈನದೃಷ್ಟಿಯಲ್ಲಿ ಪ್ರತಿಬಿಂಬಿತವಾಗಿದೆ. ಇದನ್ನು ತುಂಬ ಎಚ್ಚರಿಕೆಯಿಂದ ಸಂಪಾದಿಸಲಾಗಿದೆ.

೩.೨.೩.೨.೧.೬. ಆದಿದೇವ ವಿರಚಿತ ಸುಕುಮಾರ ಚರಿತೆ

ಪ್ರಸ್ತುತ ಕೃತಿಯನ್ನು ವೈ.ಸಿ.ಭಾನುಮತಿ ಅವರು ಸಂಪಾದಿಸಿ ೧೯೮೪ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸಿದ್ದಾರೆ. ಈ ಕೃತಿಯ ಕರ್ತೃ 'ಆದಿದೇವ' ಈತನ ಕಾಲ ೧೫೪೬ ಹದಿನೈದನೆಯ ಶತಮಾನದ ಕೊನೆಯ ಭಾಗದಲ್ಲಿ ಬದುಕಿದ್ದ. ಸುಕುಮಾರ ಚರಿತೆಯನ್ನು ಮೂರು ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಲಾಗಿದೆ. ಕೃತಿಯ ಕೊನೆಯಲ್ಲಿ ಒಂದು ದೀರ್ಘವಾದ ಮಂದಾನಿಲ ರಗಳೆ ಬಂದಿರುವುದನ್ನು ಸಂಪಾದಕರು ಗುರುತಿಸಿದ್ದಾರೆ.

ಸುಕುಮಾರನ ಕಥೆ ಭಾರತೀಯ ಭಾಷೆಗಳಲ್ಲಿ ಪ್ರಸಿದ್ಧವಾಗಿದೆ. ಸಂಸ್ಕೃತ, ಪ್ರಾಕೃತ, ಅಪಭ್ರಂಶ ಮತ್ತು ಕನ್ನಡ ಭಾಷೆಗಳಲ್ಲಿ ಈ ಕಥೆ ದೊರೆತಿರುವುದನ್ನು ಸಂಪಾದಕರು ತೌಲನಿಕವಾಗಿ ಗಮನಿಸಿದ್ದಾರೆ.

"ಕನ್ನಡದಲ್ಲಿ ಸುಕುಮಾರನ ಕಥೆಯನ್ನು ಕುರಿತಂತೆ ಶಾಂತಿನಾಥನ ಸುಕುಮಾರ ಚರಿತೆ ಮೊಟ್ಟಮೊದಲ ಸ್ವತಂತ್ರ ಕಾವ್ಯ. ಇದರಲ್ಲಿ ೧೨ ಆಶ್ವಾಸಗಳಿವೆ. ಶಿವಕೋಟ್ಯಾಚಾರ್ಯರ ವಡ್ಡಾರಾಧನೆಯಲ್ಲಿ ಸುಕುಮಾರನ ಕಥೆ ಮೊದಲ ಕಥೆಯಾಗಿ ಎಡೆ ಪಡೆದಿರುವುದು ವಿಶೇಷವಾಗಿದೆ. ಆದಿದೇವನ ಕಾವ್ಯದ ಪ್ರಮುಖ ಗುರಿ ಜೈನಧರ್ಮ ಪ್ರಚಾರ. ಅದರಲ್ಲೂ ಶ್ರಾವಕ ಧರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ಧರ್ಮ ಪ್ರಚಾರಕ್ಕೆ ಸುಕುಮಾರನ ಚರಿತೆಯಲ್ಲಿ ಬರುವ ಕಥೆಯ ಒಳಗಣ ಕಥೆಗಳ ಉತ್ತಮ ತಂತ್ರ, ಪಂಚಾಣು ವ್ರತಗಳಿಗೆ ದೃಷ್ಟಾಂತ ರೂಪವಾಗಿ ಬಂದಿರುವ ಈ ಕಥೆಗಳು ಜಾನಪದ ನೆಲೆಗಟ್ಟಿನ ಮೇಲೆ, ರೂಪುಗೊಂಡು ಸುಕುಮಾರ ಚರಿತೆಯನ್ನು ರೋಚಕ ಕಾವ್ಯವನ್ನಾಗಿ ಮಾಡಿವೆ"[೫೪] ಎರಡು ಕೃತಿಗಳನ್ನು ತೌಲನಿಕ ವಿಮರ್ಶೆಗೆ ಒಳಪಡಿಸಿ ಅನೇಕ ಮಾಹಿತಿಗಳನ್ನು ಚರ್ಚಿಸಿದ್ದಾರೆ. ಆದಿದೇವ ತನ್ನ ಕೃತಿಗೆ ನಿರ್ದಿಷ್ಟ ಆಕರವನ್ನು ಸೂಚಿಸಿಲ್ಲ. ಹಾಗೆಯೇ ವಡ್ಡಾರಾಧನೆಯಲ್ಲಿ ಬರುವ ಸುಕುಮಾರನ ಕಥೆಯಿಂದ ಪ್ರೇರಣೆ ಪಡೆದಿರುವುದನ್ನು ಗುರುತಿಸಿದ್ದಾರೆ. ಪಾಠಾಂತರ, ಅರ್ಥಕೋಶ, ಪಾರಿಭಾಷಿಕ ಅರ್ಥಕಲ್ಪಿಸಿ ಪ್ರಸ್ತಾವನೆಯಲ್ಲಿ ಸುಕುಮಾರ ಚರಿತೆ ಕಾವ್ಯದ ಕಥಾಸಾರ ಹಲವಾರು ಮಾಹಿತಿಗಳನ್ನು ಸೂಚಿಸುವುದರ ಮೂಲಕ ಶಾಸ್ತ್ರೀಯವಾಗಿ ಸಂಪಾದಿಸಿ ಪ್ರಕಟಿಸಿದ್ದಾರೆ.

೩.೨.೩.೨.೧.೭. ಸಹ್ಯಾದ್ರಿಖಂಡ

ಪ್ರಸ್ತುತ ಈ ಕೃತಿಯನ್ನು ವೈ.ಸಿ.ಭಾನುಮತಿ ಅವರು ೧೯೮೮ರಲ್ಲಿ ಸಂಪಾದಿಸಿ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸಿದ್ದಾರೆ. ಸಹ್ಯಾದ್ರಿಖಂಡವನ್ನು ಎರಡು ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಿದ್ದಾರೆ. ಕರ್ತೃ ತನ್ನ ಹೆಸರನ್ನಾಗಲಿ ಕೃತಿ ರಚನಾ ಕಾಲವನ್ನು ಎಲ್ಲಿಯೂ ಹೇಳಿಕೊಂಡಿಲ್ಲ. ಆದುದ್ದರಿಂದ ಈ ಕಾವ್ಯದ ಕರ್ತೃ ಅಜ್ಞಾತವಾಗಿಯೆ ಉಳಿಯುತ್ತಾನೆ. ಕವಿಯಂತೆ ಈ ಕೃತಿಯ ಕಾಲವೂ ಅಸ್ಪಷ್ಟವಾಗಿದೆ. ಈ ಕೃತಿಯ ಕಾಲ ನಮೂದಿತ ಹಸ್ತಪ್ರತಿಗಳ ಆಧಾರದಿಂದ ಉಲ್ಲೇಖಿಸಲಾಗಿದೆ. ಕ್ರಿ.ಶ. ೧೭೫೦ ಇರಬಹುದೆಂದು ಸಂಪಾದಕರು ಗುರುತಿಸಿದ್ದಾರೆ. ಸಹ್ಯಾದ್ರಿಖಂಡ ಭಾಮಿನಿ ಷಟ್ಪದಿಯಲ್ಲಿ ರಚಿಸಲ್ಪಟ್ಟ ಕೃತಿಯಾಗಿದೆ. ಇದರಲ್ಲಿ ೪೯ ಸಂಧಿಗಳು, ೩೨೭ ಪದ್ಯಗಳು ಇವೆ. ಸ್ಕಂದ ಪುರಾಣವನ್ನು ಆಧರಿಸಿ ಸಂಸ್ಕೃತದಲ್ಲಿ ರಚಿತವಾದ ಸಹ್ಯಾದ್ರಿಖಂಡವನ್ನು ಮೂಲವಾಗಿಟ್ಟುಕೊಂಡು ಈ ಕೃತಿಯನ್ನು ಬರೆದಿರುವುದಾಗಿ ಕವಿ ಹೇಳಿಕೊಂಡಿದ್ದಾನೆ.

ಸಹ್ಯಾದ್ರಿಖಂಡದಲ್ಲಿ ಸುಮಾರು ೧೦೦ ತೀರ್ಥಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಕೊಡಲಾಗಿದೆ. ಹಾಗೆಯೇ ೮೦ ಕ್ಷೇತ್ರಗಳ ಚರಿತ್ರೆ ಇರುವುದನ್ನು ಗುರುತಿಸಿದ್ದಾರೆ. ಈ ಕೃತಿಯ ಮೂಲ ಆಶಯ "ಸಹ್ಯಾದ್ರಿ ಪ್ರಾಂತ್ಯದ ತೀರ್ಥಕ್ಷೇತ್ರಗಳ ಮಹಿಮೆಯನ್ನು ತಿಳಿಸುವುದಾದರೂ ಇದಕ್ಕೆ ಪೂರಕವಾಗಿ ಹತ್ತು ಹಲವು ವಿಚಾರಗಳು ಅಂತರ್ಗತವಾಗಿವೆ. ಸ್ಕಾಂದ ಪುರಾಣದ ಅಂಗವಾದ ಸಹ್ಯಾದ್ರಿಖಂಡದಲ್ಲಿ ಸಹಜವಾಗಿಯೆ ಪುರಾಣಗಳಲ್ಲಿರುವ ಎಲ್ಲಾ ಅಂಶಗಳು ದೊರೆಯುತ್ತವೆ. ಪುರಾಣಗಳು ಹಿಂದೂ ಸಂಸ್ಕೃತಿಯ ಹಾಗೂ ಮುಖ್ಯವಾಗಿ ವೈದಿಕ ಸಂಸ್ಕೃತಿಯ ಪ್ರತಿಬಿಂಬ. ಸಹ್ಯಾದ್ರಿಖಂಡದಲ್ಲಿ ಅಭಿವ್ಯಕ್ತವಾಗಿರುವ ಜೀವನ ದರ್ಶನ ಕೂಡ ಭಾರತೀಯ ಜೀವನ ದರ್ಶನದಿಂದ ಅಭಿನ್ನವಾದುದು"[೫೫]

ಅಂದರೆ ವೇದಕ್ಕೆ ಸಮನಾದ ತತ್ವವಿಲ್ಲ ಭಕ್ತಿಗೆ ಸಮನಾದ ಮತ್ತೊಂದು ವಿಧಿ ಇಲ್ಲ. ಯಜ್ಞಕ್ಕೆ ಸಮನಾದ ಧರ್ಮವಿಲ್ಲ. ಬ್ರಾಹ್ಮಣನಿಗೆ ಸಮನಾದ ಮುನಿಯಿಲ್ಲ. ಸಹ್ಯಾದ್ರಿಖಂಡದ ರಚನೆಯ ಹಿನ್ನೆಲೆಯಲ್ಲಿ ಕೂಡ ಇದೇ ಮನೋಧರ್ಮವನ್ನು ಕವಿ ಹೊಂದಿರುವುದನ್ನು ಸಂಪಾದಕರು ಗುರುತಿಸುತ್ತಾರೆ.

ಕನ್ನಡ ಗ್ರಂಥ ಸಂಪಾದನೆಯ ರೂಢಿಗತ ವಿಧಿವಿಧಾನಗಳನ್ನು ಅನುಸರಿಸುವುದರ ಮೂಲಕ ಈ ಕೃತಿಯನ್ನು ಸಂಪಾದಕರು ಪರಿಷ್ಕರಿಸಿದ್ದಾರೆ. ಸಂಪಾದಕರ ಗಂಭೀರ ಅಧ್ಯಯನವನ್ನು ಇಲ್ಲಿ ಕಾಣಬಹುದು. ಶಾಸನಗಳಲ್ಲಿ ಸಹ್ಯಾದ್ರಿಖಂಡದಲ್ಲಿ ಬಂದಿರುವ ಐತಿಹಾಸಿಕ ಸ್ಥಳಗಳನ್ನು ತೌಲನಿಕ ಅಧ್ಯಯನ ಮಾಡುವುದರ ಮೂಲಕ ಖಚಿತವಾದ ಮಾಹಿತಿಯನ್ನು ದೊರಕಿಸಿಕೊಟ್ಟಿದ್ದಾರೆ. ಈ ಕೃತಿಯ ಉದ್ದೇಶ ಸಹ್ಯಾದ್ರಿ ವಲಯದ ತೀರ್ಥ ಕ್ಷೇತ್ರಗಳ ಮಹಿಮೆಯನ್ನು ತಿಳಿಸುವುದಾದರೂ ಇಡೀ ಕಾವ್ಯದಲ್ಲಿ 'ಹರಿ' 'ಹರರು' ಅಭಿನ್ನರೆಂಬ ಕಲ್ಪನೆ ಜೀವನಾಡಿಯಾಗಿದೆ. ಈ ಕಾವ್ಯದಲ್ಲಿ 'ಹರ' ಮತ್ತು 'ಹರಿ' ಸಮಾನರು ಎನ್ನುವ ಭಾವನೆ ಮುಂದುವರೆದು ತ್ರಿಮೂರ್ತಿಗಳು ಒಂದೇ ಎಂಬ ಹಂತ ತಲುಪಿದೆ. ಹಾಗೆಯೇ ಸಹ್ಯಾದ್ರಿಖಂಡದಲ್ಲಿ ಸಮಕಾಲೀನ ಜೀವನ ಮೌಲ್ಯಗಳ ಹೊಳಹುಗಳನ್ನು ಸಂಪಾದಕರು ಗುರುತಿಸಿದ್ದಾರೆ. ರಾಮಾಯಣ ಮಹಾಭಾರತಗಳ ಕೆಲವು ಪ್ರಸಂಗಗಳು ಹಾಗೂ ಶಾಸ್ತ್ರಸಂಬಂಧಿಯಾದ ವಿಚಾರಗಳು ಪುರಾಣಗಳ ಸಾರವತ್ತಾದ ಭಾಗಗಳು ಸಹ್ಯಾದ್ರಿಖಂಡದಲ್ಲಿ ಸಂಕ್ಷಿಪ್ತವಾಗಿ ಮೂಡಿ ಬಂದಿವೆ. ಸುಮಾರು ೧೬೦ ಪುಟದಷ್ಟು ಸುದೀರ್ಘವಾದ ಹಾಗೂ ಮಹತ್ತರವಾದ ಪ್ರಸ್ತಾವನೆಯನ್ನು ಸಂಪಾದಕರು ಬರೆದಿದ್ದಾರೆ. ಇಲ್ಲಿನ ಭಾಷೆ ಸರಳವಾಗಿರುವುದರಿಂದ ಇಡೀ ಕಾವ್ಯವನ್ನು ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. ಅನುಬಂಧದಲ್ಲಿ ಹೆಚ್ಚಿನ ಪದ್ಯಗಳನ್ನು ಸಂಪಾದಕರು ನೀಡಿದ್ದಾರೆ. ಅಲ್ಲದೆ ಕ್ಷೇತ್ರ ಸೂಚಿ, ತೀರ್ಥಸೂಚಿ, ವ್ಯಕ್ತಿನಾಮ ಸೂಚಿ, ಅರ್ಥಕೋಶ, ಪದ್ಯಗಳ ಅಕಾರಾದಿ ಹಾಗೂ ಆಕರ ಗ್ರಂಥಸೂಚಿಯನ್ನು ನೀಡಿದ್ದಾರೆ. ಕ್ಷೇತ್ರಗಳನ್ನು ಮತ್ತು ಸ್ಥಳ ಮಾಹತ್ಮೆಗಳ ಕುರಿತು ಅಧ್ಯಯನ ಮಾಡುವವರಿಗೆ ಉಪಯುಕ್ತ ಮಾಹಿತಿ ನೀಡುವಲ್ಲಿ ಸಹ್ಯಾದ್ರಿಖಂಡ ಉತ್ತಮ ಕೈದೀವಿಗೆಯಾಗಿದೆ. ಈ ಕೃತಿಗೆ ೧೯೮೮ರಲ್ಲಿ ರಾಜ್ಯ ಸಾಹಿತ್ಯ ಅಕಾಡೆಮಿಯ ಶ್ರೇಷ್ಠ ವಾರ್ಷಿಕ ಗ್ರಂಥ ಬಹುಮಾನ ಬಂದಿರುವುದು ವಿಶೇಷವಾಗಿದೆ. ಅಷ್ಟರಮಟ್ಟಿಗಿನ ಮಹತ್ವ ಈ ಕೃತಿಗಿದೆ.

೩.೨.೩.೨.೧.೮. ಹರದನಹಳ್ಳಿ ನಂಜಣಾರ್ಯ ವಿರಚಿತ ಏಕೋರಾಮೇಶ್ವರ ಪುರಾಣ

ಪ್ರಸ್ತುತ ಕೃತಿಯನ್ನು ಸಂಪಾದಿಸಿ ವೈ.ಸಿ.ಭಾನುಮತಿ ಅವರು ಕನ್ನಡ ಅಧ್ಯಯನ ಸಂಸ್ಥೆಯಿಂದ ೧೯೮೫ರಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯ ಕರ್ತೃ 'ಹರದನಹಳ್ಳಿ ನಂಜಣಾರ್ಯ' ಆದರೆ ಕವಿ ತಾನು ಬದುಕಿದ ಕಾಲವನ್ನು ಎಲ್ಲಿಯೂ ಹೇಳಿಕೊಂಡಿಲ್ಲ ಏಕೋರಾಮೇಶ್ವರ ಪುರಾಣವನ್ನು 'ವಾರ್ಧಕ ಷಟ್ಪದಿಯಲ್ಲಿ' ರಚಿಸಲಾಗಿದೆ. ಇದರಲ್ಲಿ ೧೬ ಸಂಧಿಗಳು ಹಾಗೂ ೧೪೬೧ ಪದ್ಯಗಳು ಇವೆ. ಈ ಕಾವ್ಯವನ್ನು ಏಕೈಕ ಹಸ್ತಪ್ರತಿಯಿಂದ ಪರಿಷ್ಕರಿಸಲಾಗಿದೆ. ಛಂದೋಭಂಗ ಪ್ರಾಸಭಂಗ

ಮೊದಲಾದವುಗಳನ್ನು ಸರಿಪಡಿಸುವಾಗ ಎದುರಾದ ಹಲವಾರು ಸಮಸ್ಯೆಗಳನ್ನು ಊಹಾತ್ಮಕ ಪಾಠದ ಮೂಲಕ ಪರಿಷ್ಕರಿಸಲಾಗಿದೆ. ಹಾಗೆಯೇ ಅಂಥ ಪಾಠಗಳನ್ನು ಚೌಕಕಂಸದಲ್ಲಿ ತೋರಿಸಲಾಗಿದೆ.

ಏಕೋರಾಮೇಶ್ವರ ಪುರಾಣದಲ್ಲಿ ಬರುವ ಏಕೋರಾಮನನ್ನು ಕುರಿತಂತೆ ಸಂಸ್ಕೃತ, ತೆಲಗು, ಕನ್ನಡ ಭಾಷೆಗಳಲ್ಲಿ ಬಂದಿರುವ ಸಾಕಷ್ಟು ಕೃತಿಗಳನ್ನು ಉಲ್ಲೇಖಿಸಲಾಗಿದೆ. "ಕನ್ನಡದಲ್ಲಿ ಈತನ ಚರಿತ್ರೆಯನ್ನು ಹೇಳುವ ಕೃತಿಗಳು ಕೇವಲ ಬೆರಳೆಣಿಕೆಯಷ್ಟು ಮಾತ್ರ. ಪಾಲ್ಕುರಿಕೆ ಸೋಮೇಶ್ವರ ಪುರಾಣ, ಗುರುರಾಜ ಚಾರಿತ್ರ, ಚತುರಾಚಾರ್ಯ ಪುರಾಣ, ಕೊಲ್ಲಿಪಾಕಿ ಮಹಾತ್ಮ್ಯೆ ಮತ್ತು ಚತುರಾಚಾರ್ಯ ಪ್ರಬಂಧಗಳಲ್ಲಿ ಏಕೋರಾಮನ ಕಥೆ ಅನುಷಂಗಿಕವಾಗಿ ಬಂದಿವೆ."[೫೬] ಏಕೋರಾಮನ ಚರಿತ್ರೆಗೆ ಸಂಬಂಧಿಸಿದಂತೆ ಹರದನಹಳ್ಳಿ ನಂಜಣಾರ್ಯ ವಿರಚಿತ ಏಕೋರಾಮೇಶ್ವರ ಪುರಾಣವು ಮಹತ್ವದ್ದಾಗಿದ್ದು ಮುಂದಿನ ಕೃತಿಗಳಿಗೆ ಮಾದರಿಯಾಗಿದೆ. ಈ ಕಾವ್ಯದ ಭಾಷೆ, ಶೈಲಿ, ಸರಳವಾಗಿದೆ. ಶುದ್ಧ ಶೈವ ಮತ್ತು ವೀರಶೈವಗಳಿಗಿರುವ ವ್ಯತ್ಯಾಸವನ್ನು ಮುನ್ನುಡಿಯನ್ನು ಗುರುತಿಸಲಾಗಿದೆ. ೫೬ ಪುಟ ಪ್ರಸ್ತಾವನೆಯಲ್ಲಿ ಕವಿ, ಕಾಲ ವಿಚಾರ, ಕಥಾಸಾರ ಕಾವ್ಯಸಮೀಕ್ಷೆಯನ್ನು ನೀಡಲಾಗಿದೆ. ಹಲವು ಕೃತಿಗಳೊಂದಿಗೆ ತೌಲನಿಕ ಅಧ್ಯಯನ ಮಾಡಿ ಶಾಸ್ತ್ರೀಯವಾಗಿ ಈ ಕೃತಿಯನ್ನು ಸಂಪಾದಿಸಿದ್ದಾರೆ. ಇದೊಂದು 'ಸತ್ಕಾವ್ಯ' ಎಂದು ಸಂಪಾದಕರು ಗುರುತಿಸಿದ್ದಾರೆ. ಅನುಬಂಧದಲ್ಲಿ ಅರ್ಥಕೋಶ ನೀಡಿದ್ದಾರೆ.

೩.೨.೩.೨.೧೯. ಬತ್ತೀಸ ಪುತ್ತಳಿ ಕಥೆ

ಪ್ರಸ್ತುತ ಈ ಕೃತಿಯನ್ನು ೧೯೮೯ರಲ್ಲಿ ವೈ.ಸಿ. ಭಾನುಮತಿ ಅವರು ಕನ್ನಡ ಅಧ್ಯಯನ ಸಂಸ್ಥೆಯಿಂದ ಸಂಪಾದಿಸಿ ಪ್ರಕಟಿಸಿದ್ದಾರೆ. ಬತ್ತೀಸ ಪುತ್ತಳಿ ಕೃತಿಯನ್ನು ಹಲವು ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಿದ್ದಾರೆ. 'ಬ' ಇದು ಸಹ ಓಲೆ ಪ್ರತಿಯಾಗಿದೆ. ಈ ಕೃತಿಗೆ ಸಂಬಂಧಿಸಿದಂತೆ ಹಲವಾರು ಹಸ್ತಪ್ರತಿಗಳು ದೊರೆತಿರುವುದರಿಂದ ಒಂದು ಜನಪ್ರಿಯವಾದ ಕಾವ್ಯ ಎಂದು ಸಂಪಾದಕರು ಗುರುತಿಸುತ್ತಾರೆ.

ಒಂದು ವಸ್ತುವಿಗೆ ಸಂಬಂಧಿಸಿದ ಕೃತಿಗಳೆಲ್ಲ ಒಂದೇ ಸಂಪುಟದಲ್ಲಿ ಪ್ರಕಟವಾಗುತ್ತಿರುವುದು ಇಲ್ಲಿನ ವೈಶಿಷ್ಟ್ಯ. ಪ್ರಸ್ತುತ ಬತ್ತೀಸ ಪುತ್ತಳಿ ಕಥೆಯಂಥ ಕೃತಿಗಳು ಕನ್ನಡ ಗ್ರಂಥಸಂಪಾದನೆಯಲ್ಲಿ ಇದೇ ಮೊದಲು ಪ್ರಕಟವಾಗುತ್ತಿರುವುದರ ವೈಶಿಷ್ಟ್ಯವನ್ನು ಸಂಪಾದಕರು ಹೇಳುತ್ತಾರೆ. ಈ ಸಂಪುಟವನ್ನು ಸಿದ್ಧಪಡಿಸಲು ಸ್ಫೂರ್ತಿ ನೀಡಿದ ಗ್ರಂಥ ಫ್ರಾಂಕ್ಲಿನ್ ಎಡ್ಗರ್ಟನ್ ಅವರ Vikramas adventures ಕೃತಿ ಎಂದು ಸಂಪಾದಕರು ಹೇಳಿಕೊಂಡಿದ್ದಾರೆ. ಇದು ೧೯೨೬ರಲ್ಲಿ ಲಂಡನ್ನಿನ ಹಾರ್ವರ್ಡ್ ಓರಿಯಂಟಲ್ ಮಾಲಿಕೆಯಲ್ಲಿ ಎರಡು ಸಂಪುಟದಲ್ಲಿ ಫ್ರಾಂಕ್ಲಿನ್ ಎಡ್ಗರ್ಟನ್ ಅನುಸರಿಸಿದ ಸಂಪಾದನ ವಿಧಿವಿಧಾನಗಳನ್ನು ಅನುಸರಿಸಿಲ್ಲ. "ಕನ್ನಡದಲ್ಲಿ ಬತ್ತೀಸಪುತ್ತಳಿ ಕಥೆಗಳು ವಿವಿಧ ಕರ್ತೃಗಳಿಂದ ವಿವಿಧ ಛಂದಸ್ಸಿನಲ್ಲಿ ರಚಿತವಾಗಿವೆ. ಆದ್ದರಿಂದ ಎಡ್ಗರ್ಟನ್ ಅವರ ಕ್ರಮವನ್ನು ಇಟ್ಟುಕೊಂಡರೆ

ಪಾಠಾಂತರವಾಗಿದ್ದ ಕೃತಿಯನ್ನು ಇಡಿಯಾಗಿ ಓದಲು ದುಸ್ತರವಾಗುತ್ತಿತ್ತು. ಆದ್ದರಿಂದ ಒಂದು ಕೃತಿ ಪೂರ್ತಿಯಾದ ಬಳಿಕ ಮತ್ತೊಂದು ಕೃತಿಯನ್ನು ಇಲ್ಲಿ ಕೊಡಲಾಗಿದೆ."೫೭

ಬತ್ತೀಸಪುತ್ತಳಿ ಕಥೆ ಮೂವತ್ತೆರಡು ಕಥೆಗಳನ್ನು ಒಳಗೊಂಡಿದೆ. ೧೧೬ ಪುಟಗಳಷ್ಟು ಸುದೀರ್ಘ ಪ್ರಸ್ತಾವನೆಯನ್ನು ಸಂಪಾದಕರು ಬರೆದಿದ್ದಾರೆ. ಕವಿ, ಕಾಲ ವಿಚಾರದ ಬಗ್ಗೆ ಸ್ಪಷ್ಟವಾದ ಮಾಹಿತಿ ದೊರೆತಿಲ್ಲ. ಈ ಸಂಪುಟದ ಬತ್ತೀಸ ಪುತ್ತಳಿ ಕೃತಿಕಾರರಲ್ಲಿ ಮೂವರು ಮಾತ್ರ ತಮ್ಮ ಹೆಸರನ್ನು ಹೇಳಿಕೊಂಡಿದ್ದಾರೆ. ಉಳಿದಿಬ್ಬರು ಅಜ್ಞಾತ ಕರ್ತೃಗಳಾಗಿ ಉಳಿದಿದ್ದಾರೆ. ನಾಲ್ಕು ಮಂದಿಯೂ ತಮ್ಮ ಕವಿ ಕಾಲ ವಿಚಾರವನ್ನಾಗಲಿ ತಾವು ಹುಟ್ಟಿ ಬೆಳೆದ ಸ್ಥಳವನ್ನಾಗಲಿ ಹೇಳಿಕೊಂಡಿಲ್ಲ. ಹೀಗಾಗಿ ಬತ್ತೀಸ ಪುತ್ತಳಿಕಾರರ ಕಾಲದೇಶ ವಿಚಾರಗಳು ಅನುಪಲಬ್ದವಾಗಿಯೆ ಉಳಿದಿವೆ. ಬತ್ತೀಸ ಪುತ್ತಳಿ ಕೃತಿಗಳಲ್ಲಿ ರಾಮೇಂದ್ರನ ಸೌಂದರ್ಯ ಕಥಾರತ್ನ ಪ್ರಾಚೀನವಾದುದು. ಭಾರತದ ಉದ್ದಗಲಕ್ಕೂ ವಿವಿಧ ಭಾಷೆಗಳಲ್ಲಿ ಈ ಕಥೆಗಳು ವ್ಯಾಪಿಸಿರುವುದನ್ನು ಭಾನುಮತಿಯವರು ಗುರುತಿಸಿದ್ದಾರೆ. ಸಂಸ್ಕೃತ, ಗುಜರಾತಿ, ಹಿಂದಿ, ಮರಾಠಿಯಲ್ಲಿ ರಚಿಸಿರುವ ಕಥೆಗೂ ಮತ್ತು ಕನ್ನಡದಲ್ಲಿ ರಚಿತವಾದ ಬತ್ತೀಸಪುತ್ಥಳಿ ಕಥೆಗೂ ಇರುವ ವ್ಯತ್ಯಾಸವನ್ನು ಗುರುತಿಸಿ ಚರಿತ್ರೆಗೆ ಸಂಬಂಧಿಸಿದಂತೆ ವಿಕ್ರಮಾದಿತ್ಯ, ಭೋಜರಾಜ, ವರರುಚಿ ಇವರ ಬಗ್ಗೆ ಇತಿಹಾಸದಲ್ಲಿ ಬರುವ ಸಂಗತಿಗಳೊಂದಿಗೆ ತೌಲನಿಕ ಅಧ್ಯಯನವನ್ನು ಸಂಪಾದಕರು ಮಾಡಿದ್ದಾರೆ.

ಬತ್ತೀಸ ಎಂದರೆ ಮೂವತ್ತೆರಡು. ಈ ಕಥೆಗಳು ನೀತಿ ನಿಯಮ ಸಹನೆ ಮತ್ತು ಕೆಟ್ಟತನವನ್ನು ವಿರೋಧಿಸಿ ಒಳ್ಳೆಯತನವನ್ನು ರೂಢಿಸಿಕೊಂಡು ಹೇಗೆ ಸಾಮಾಜಿಕ ಸಂಬಂಧಗಳೊಂದಿಗೆ ವ್ಯವಹರಿಸಬೇಕು ಎಂಬುದನ್ನು ತಿಳಿಸಿಕೊಡುತ್ತವೆ. ಇಲ್ಲಿನ ಹೆಚ್ಚು ಕಥೆಗಳು ಜಾನಪದೀಯ ದಾಟಿಯಲ್ಲಿ ರಚನೆಯಾಗಿವೆ. ಈ ಕೃತಿ ಪರಿಷ್ಕರಣೆ ಮಾಡುವಾಗ ಹಲವಾರು ಕೃತಿಗಳನ್ನು ಸಂಪಾದಕರು ಅಧ್ಯಯನ ಮಾಡಿ ಚಾರಿತ್ರಿಕ ಸಂಗತಿಗಳು ಹಾಗೂ ಸಾಹಿತ್ಯಿಕ ಅಂಶಗಳು, ಪ್ರಾಚೀನ ಪುರಾಣದ ಕಥೆಗಳು ಇತ್ಯಾದಿ ಮಾಹಿತಿಯನ್ನು ಉದಾಹರಣೆ ಕೊಡುವುದರ ಮೂಲಕ ಸಂಪಾದಕರು ವಿವರಿಸಿದ್ದಾರೆ. ಹಲವಾರು ಭಾಷೆಗಳಲ್ಲಿ ರಚನೆಯಾಗಿರುವ ಕೃತಿಗಳೊಂದಿಗೆ ತೌಲನಿಕ ವಿಮರ್ಶೆಗೆ ಒಳಪಡಿಸಲಾಗಿದೆ. ಅಷ್ಟು ಬೃಹತ್ತಾದ ಕಥಾಸಾಹಿತ್ಯವನ್ನು ಒಂದೇ ಸಂಪುಟದಲ್ಲಿ ಕನ್ನಡದಲ್ಲಿ ಪ್ರಕಟ ಮಾಡಿರುವುದು ವಿಶೇಷವಾಗಿದೆ. ಈ ಸಂಪುಟದಲ್ಲಿ ಕನ್ನಡದಲ್ಲಿರುವ ಎಲ್ಲ ಎತ್ತೀಸ ಪುತ್ತಳಿ ಕಥೆಗೆ ಸಂಬಂಧಿಸಿದ ಕೃತಿಗಳು ಪ್ರಕಟವಾದಂತಾಗಿದೆ. ಜಾನಪದ ಕಥೆಗಳ ಬಗ್ಗೆ ಅಧ್ಯಯನ ಮಾಡುವವರಿಗೂ ಕೂಡ ಇದೊಂದು ಉಪಯುಕ್ತ ಕೃತಿಯಾಗಿದೆ. ಪ್ರಸ್ತುತ ಬತ್ತೀಸಪುತ್ಥಳಿ ಕೃತಿಗೆ ಬಿ.ಎಂ.ಶ್ರೀ. ಪತಿಷ್ಠಾನ ಸಂಶೋಧನ ಪ್ರಶಸ್ತಿ ಮತ್ತು ೧೯೮೯ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿರುವುದು ವಿಶೇಷವಾಗಿದೆ. ಅಪ್ಪರ ಮಟ್ಟಿಗಿನ ಮಹತ್ವದ ಕಥೆಗಳ ಕೃತಿ ಇದಾಗಿದೆ.

೩.೨.೩.೨.೧.೧೦. ನೂರೊಂದಯ್ಯ ವಿರಚಿತ ಸೌಂದರ ಕಾವ್ಯ

ಈ ಕೃತಿಯನ್ನು ಸಂಪಾದಿಸಿ ವೈ.ಸಿ ಭಾನುಮತಿ ಅವರು ಕನ್ನಡ ಅಧ್ಯಯನ ಸಂಸ್ಥೆಯಿಂದ ೧೯೯೬ರಲ್ಲಿ ಪ್ರಕಟಿಸಿದ್ದಾರೆ. ಚಾರಿತ್ರಿಕ ಕಾವ್ಯವಾದ ಸೌಂದರ ಕಾವ್ಯವನ್ನು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದ ಏಕೈಕ ಹಸ್ತಪ್ರತಿಯ ನೆರವಿನಿಂದ ಸಂಪಾದಿಸಿದ್ದಾರೆ. ಈ ಕೃತಿಯ ಕರ್ತೃ 'ನೂರೊಂದಯ್ಯ' ತನ್ನ ಕೃತಿಯಲ್ಲಿ ಕಾಲವನ್ನು ನಮೂದಿಸಿಲ್ಲ. ಕರ್ನಾಟಕ ಕವಿ ಚರಿತೆಕಾರರು ಈತನ ಕಾಲವನ್ನು ಸುಮಾರು ೧೭೪೦ ಎಂದು ನಿರ್ಣಯಿಸಿದ್ದಾರೆ. ಈ ಕಾಲವನ್ನೇ ಸಂಪಾದಕರು ಸ್ವೀಕರಿಸಿದ್ದಾರೆ. ಮೈಸೂರು ರಾಜರಲ್ಲಿ ದಳವಾಯಿಗಳಾಗಿದ್ದ ದೇವರಾಜ ಮತ್ತು ನಂಜರಾಜ ಸೋದರರು ನೂರೊಂದಯ್ಯ ಕವಿಗೆ ಆಶ್ರಯ ನೀಡಿದ್ದರು. ಈ ಕಾವ್ಯದಲ್ಲಿ ೧೩ ಸಂಧಿ, ೧೩೫೫ ಪದ್ಯಗಳಿವೆ. ಕೃಷ್ಣರಾಜನ ಆಸ್ಥಾನ ವರ್ಣನೆಯಿಂದ ಈ ಕಾವ್ಯ ಆರಂಭವಾಗುತ್ತದೆ. ಕವಿ ವೈಯಕ್ತಿಕವಾಗಿ ವೀರಶೈವ ಧರ್ಮಕ್ಕೆ ಸೇರಿದವನು. ಆತನ ಹೆಸರೇ ವೀರಶೈವರಲ್ಲಿ ಬರುವ ನೂರೊಂದು ವಿರಕ್ತರನ್ನು ಸೂಚಿಸುತ್ತದೆ. ಕಾವ್ಯಾರಂಭದಲ್ಲಿ ನಂಜುಂಡ ಸ್ತುತಿ, ಅಂತ್ಯದಲ್ಲಿ ತೋಟದ ಸಿದ್ಧಲಿಂಗಯತಿಯನ್ನು ಸ್ತುತಿಸಿದ್ದು ಕವಿ ವೀರಶೈವನೆಂಬುದಕ್ಕೆ ಸಾಕ್ಷಿಯಾಗಿದೆ ಎಂದು ಸಂಪಾದಕರು ಗುರುತಿಸಿದ್ದಾರೆ.

ಸೌಂದರ ಕಾವ್ಯದ ನಾಯಕಮಣಿಗಳಾದ ದೇವರಾಜ ಮತ್ತು ನಂಜರಾಜ ಇವರು ಸಹೋದರರು, ಈ ಕಾವ್ಯದಲ್ಲಿ ಪರಾಕ್ರಮಿಗಳಾಗಿ ಶೂರರಾಗಿ ಚಿತ್ರಿತರಾಗಿದ್ದಾರೆ. ಚಿಕ್ಕದೇವರಾಜ ಒಡೆಯರ ಆಳ್ವಿಕೆಯ ಬಳಿಕ ಮೈಸೂರು ಒಡೆಯರ ಆಡಳಿತದಲ್ಲಿ ರಾಜಕೀಯವಾಗಿ ಬಹುಮುಖ್ಯವಾದ ಪಾತ್ರವಹಿಸುತ್ತಾರೆ. ದಳವಾಯಿ ದೇವರಾಜನು ಕಬಿನಿ ನದಿಗೆ ಮಲ್ಲನ ಮೂಲೆ ಎಂಬಲ್ಲಿ ೨೩ ಕಮಾನುಳ್ಳ ಒಂದು ಸೇತುವೆಯನ್ನು ಕಟ್ಟಿಸಿದ ಸಂಗತಿ ತಿಳಿದು ಬರುತ್ತದೆ. ಶ್ರೀರಂಗ ಪಟ್ಟಣದ ರಂಗನಾಥ ದೇವಾಲಯಕ್ಕೆ ಕ್ರಿ.ಶ. ೧೭೪೭ರಲ್ಲಿ ಸೀತಾವಿಲಾಸ ಎಂಬ ಎರಡು ಅಂತಸ್ತಿನ ರಂಗಮಂಟಪವನ್ನು ನಿಲ್ಲಿಸಿದನೆಂದು ಶಾಸನದಲ್ಲಿ ಉಕ್ತವಾಗಿರುವುದನ್ನು ಗುರುತಿಸಿದ್ದಾರೆ. ಹಾಗೆಯೇ ನಂಜನಗೂಡಿನಲ್ಲಿ ಅರವತ್ತು ಮೂರು ಪುರಾತನರ ಪ್ರತಿಮೆಗಳನ್ನು ಪ್ರತಿಷ್ಠಾಪಿಸಿ ಶಿವಪೂಜಾ ಮಂದಾರ ಎಂಬ ಕೀರ್ತಿಗೆ ಪಾತ್ರರಾಗಿದ್ದನ್ನು ಸಂಪಾದಕರು ಎತ್ತಿತೋರಿಸಿದ್ದಾರೆ.

ಕಳಲೆ ಮನೆತನದವರು ಹಿಂದಿನಿಂದಲೂ ಸಾಹಿತ್ಯಾಭಿರುಚಿ ಉಳ್ಳವರು. ಅವರು ಧಾರ್ಮಿಕವಾಗಿ. ಸಾಹಿತ್ಯಿಕವಾಗಿ ನೀಡಿದ ಒತ್ತಾಸೆ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಮುಖ್ಯವಾದದು. ಕಳಲೆ ಕಾಂತನೃಪನ ಮಗಳು ಚೆಲುವಾಂಬೆಗೆ ಮೈಸೂರು ದೊರೆ ದೊಡ್ಡ ಕೃಷ್ಣರಾಜನೊಡನೆ ವಿವಾಹವಾಗಿತ್ತು. ಈಕೆ ತನ್ನ ಪತಿಯ ಇಚ್ಛೆಯಂತೆ ಸುಮಾರು ೧೭೨೫ರಲ್ಲಿ ವರನಂದೀಕಲ್ಯಾಣ ಎಂಬ ಕೃತಿಯನ್ನು ರಚಿಸಿದ್ದಳಲ್ಲದೆ, ವೆಂಕಟಾಚಲ ಮಹಾತ್ಮ್ಯೆ, ಲಾಲೀಪದ ತಲಕಾವೇರಿ ಮಹಾತ್ಮೆ ಎಂಬ ಕೃತಿಗಳ ರಚನೆಯಿಂದ ಹೆಸರು ವಾಸಿಯಾಗಿದ್ದಳು. ಹೀಗೆ ಈ ಕಾವ್ಯವನ್ನು ವಿಮರ್ಶೆ ಮಾಡುವಂತಹ ಸಂದರ್ಭದಲ್ಲಿ ದೇವರಾಜ ಸಾಂಗತ್ಯ, ಕಂಠೀರವ ನರಸರಾಜ ವಿಜಯ, ಚಿಕ್ಕದೇವರಾಜ ವಿಜಯ ಚಿಕ್ಕದೇವರಾಜ ವಂಶಾವಳಿ ಈ ಎಲ್ಲಾ ಕೃತಿಗಳಿಂದ ಕರ್ನಾಟಕದ ಇತಿಹಾಸವನ್ನು ತಿಳಿಯಲು

ಅನುಕೂಲವಾಗಿದೆ. ಯುದ್ಧವೇ ಸೌಂದರ್ಯ ಕಾವ್ಯದ ವಸ್ತು. ಈ ಕಾವ್ಯವನ್ನು ಕವಿ ಸಂಕರಕಾವ್ಯವನ್ನಾಗಿ ಸಂಪಾದಕರ ಗುರುತಿಸಿದ್ದಾರೆ. ನೂರೊಂದಯ್ಯ ಒಬ್ಬ ಸಮರ್ಥ ಕವಿ ಆದರೂ ಆತ ಛಂದಸ್ಸು ಭಾಷ್ಯಲಕ್ಷಣವರಿತವನಲ್ಲ. ಒಂದು ಶಾಸ್ತ್ರವನೋದಲಿಲ್ಲ ಎಂಬ ವಿನಯದ ಮಾತು ಆಡಿದ್ದಾನೆ. ಸೌಂದರ ಕಾವ್ಯದ ಕೆಲವು ವರ್ಣನಾ ಪದ್ಯಗಳು ಪುನರಾವರ್ತನೆ ಗೊಂಡಿರುವುದನ್ನು ಸಂಪಾದಕರು ಗುರುತಿಸಿ ನೂರೊಂದಯ್ಯ ಛಂದೋನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿಲ್ಲ. ಹಾಗೆ ಅನ್ಯಪರಿಭಾಷೆಗಳನ್ನು ಕಾವ್ಯದಲ್ಲಿ ಬಳಸಿರುವುದನ್ನು ಗುರುತಿಸುವ ಮೂಲಕ ಕವಿಯ ಋಣಾತ್ಮಕ ಸಂಗತಿಗಳನ್ನು ಭಾನುಮತಿಯವರು ಚರ್ಚಿಸುತ್ತಾರೆ.

"ಸೌಂದರ ಕಾವ್ಯ ಐತಿಹಾಸಿಕವಾಗಿ ಮಹತ್ವ ಪಡೆದಂತೆ ಸಾಂಸ್ಕೃತಿಕವಾಗಿಯೂ ಮಹತ್ವ ಪಡೆದಿದೆ. ಒಟ್ಟಿನಲ್ಲಿ ಸೌಂದರ ಕಾವ್ಯ ಐತಿಹಾಸಿಕವಾಗಿ ಗಣನೀಯ ಕೃತಿಯಾಗಿದೆ. ಇದೊಂದು ಆಕರ ಗ್ರಂಥವಾಗಿರುವುದರಿಂದ ಇತಿಹಾಸ ಪುನರಚನೆಯ ಸಂದರ್ಭದಲ್ಲಿ ಈ ಕಾವ್ಯವನ್ನು ಪರಾಮರ್ಶಿಸದೆ ಮುನ್ನಡೆಯುವಂತಿಲ್ಲ. ಕನ್ನಡ ಚಾರಿತ್ರಿಕ ಕಾವ್ಯಗಳ ಸಾಲಿನಲ್ಲಿ ಸೌಂದರ ಕಾವ್ಯಕ್ಕೆ ವಿಶಿಷ್ಟ ಸ್ಥಾನ ಇದೆ. ಹಾಗೆಯೇ ಬೇರೆ ಬೇರೆ ಕೃತಿಗಳೊಂದಿಗೆ ತೌಲನಿಕ ವಿಮರ್ಶೆ ಮಾಡಿ ಈ ಕಾವ್ಯದ ಮಹತ್ವವನ್ನು ಗುರುತಿಸುತ್ತಾರೆ."[೫೮] ಅನುಬಂಧದಲ್ಲಿ ವೇಣುಪುರದ ಕ್ಷತ್ರಿಯರ ವಂಶಾವಳಿ. ಸಾರ್ತ್ರಯ ಪಟ್ಟಿ ವಿವರ, ಮಾನೌಮಿ ಚೌಪದ, ಪದ್ಯಗಳ ಅಕಾರಾದಿ, ನಾಮಸೂಚಿ, ಅರ್ಥಕೋಶ ಕೊಡುವುದರ ಮೂಲಕ ಶಾಸ್ತ್ರೀಯವಾಗಿ ಸಂಪಾದಿಸಿದ್ದಾರೆ.

೩.೨.೩.೨.೧.೧೧. ಮಹಾದೇವ ಕವಿಯ ಸಾಂಗತ್ಯ ಕೃತಿಗಳು

ಪ್ರಸ್ತುತ ಕೃತಿಯನ್ನು ಸಂಪಾದಿಸಿ ವೈ.ಸಿ.ಭಾನುಮತಿ ಅವರು ೨೦೦೮ರಲ್ಲಿ ಮೈಸೂರಿನ ತಳಗವಾದಿ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಹೇರೂರು ಹೆಣ್ಣಿನ ಸಾಂಗತ್ಯ ಮತ್ತು ಸಿರಿಯಾಳ ಸೆಟ್ಟಿ ಸಾಂಗತ್ಯ ಎಂಬ ಎರಡು ಕೃತಿಗಳ ಕರ್ತೃ ಮಹಾದೇವ. ಇಲ್ಲಿ ಈ ಎರಡೂ ಕಾವ್ಯ ಮತ್ತು ವಸ್ತುವಿಗೆ ಪೂರಕವಾದ ಇತರ ಕೃತಿಗಳನ್ನು ಪರಿಷ್ಕರಿಸಿ ಕೊಟ್ಟಿದ್ದಾರೆ. ಈತನ ಕಾಲವನ್ನು ಸುಮಾರು ೧೬೫೦ ಎಂದು ಕವಿಚರಿತೆಕಾರರು ಉಲ್ಲೇಖಿಸಿದ್ದಾರೆ. ಇದನ್ನೇ ಸಂಪಾದಕರು ಸ್ವೀಕರಿಸಿದ್ದಾರೆ. ಈ ಸಂಪುಟದ ಕೃತಿಗಳು ಇದೇ ಮೊದಲ ಬಾರಿಗೆ ಬೆಳಕು ಕಾಣುತ್ತಿವೆ. ಈ ಕೃತಿಯನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿರುವ ಏಕೈಕ ಹಸ್ತಪ್ರತಿಯಿಂದ ಸಂಪಾದಿಸಲಾಗಿದೆ. ಹೇರೂರು ಹೆಣ್ಣಿನ ಕಥೆ. ವೀರಶೈವ ಸಾಹಿತ್ಯದಲ್ಲಿ ಪ್ರಸಿದ್ಧವಾದದ್ದು. ಹೇರೂರು ಹೆಣ್ಣು (ತಿಲಕವ್ವ) ಕೊಲ್ಲವ್ವೆ ಬೈಜಕವ್ವೆಯರು ತಾಯಿಯ ಸೋದರ ಸಂಬಂಧಿಗಳಾದ ಜೈನರನ್ನು ಮದುವೆಯಾಗಬೇಕಾಗುತ್ತದೆ. ಜೈನ ಪತಿಯೊಡನೆ ಸಹಬಾಳ್ವೆ ಮಾಡಲಿಚ್ಚಿಸದ ಹೇರೂರು ಹೆಣ್ಣು ಪುರುಷರೂಪ ತಾಳುತ್ತಾಳೆ. ಕೊಲ್ಲವ್ವೆ ಜೈನ ಧರ್ಮೀಯ ಪತಿಯೊಡನೆ ಜೀವಿಸುತ್ತಿದ್ದರೂ ಆತನಿಗೆ ತಿಳಿಯದಂತೆ ಶಿವಾರ್ಚನೆ ಮಾಡುತ್ತಾ ಗುಪ್ತಭಕ್ತೆಯಾಗಿರುತ್ತಾಳೆ. ಇದನ್ನರಿತ ಜೈನರು ಆಕೆಯನ್ನು ಕೊಲ್ಲಲು ಬಂದಾಗ ದೀಪವೇ ಲಿಂಗವಾಗಿ ಕೊಲ್ಲವ್ವೆಯನ್ನು ಐಕ್ಯಮಾಡಿಕೊಂಡಿತೆಂದು ಕಥೆಯಿದೆ. ಹೇರೂರು "ಹೆಣ್ಣಿನ ಕಥಾವಸ್ತು

ಈಗಾಗಲೆ ನೋಡಿರುವಂತೆ 'ಪಾಲ್ಕುರಿಕೆ ಸೋಮೇಶ್ವರ ಪುರಾಣ' 'ಶಿವತತ್ತ್ವ ಚಿಂತಾಮಣಿ' 'ಚೆನ್ನಬಸವ ಪುರಾಣ' 'ಪುರಾತನರ ಚರಿತೆ' 'ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ' 'ಬಸವೇಶ್ವರ ಪುರಾಣದ ಕಥಾಸಾಗರ' 'ಕೋಳೂರು ಕೊಡಗೂಸಿನ ಕಥೆ' ಇತ್ಯಾದಿ ಕೃತಿಗಳಿಂದ ಪ್ರೇರಣೆ ಪಡೆದಿವೆ. 'ಹೇರೂರು ಹೆಣ್ಣಿನ ಸಾಂಗತ್ಯ ವೀರಶೈವ ಕಾವ್ಯ ಪರಂಪರೆಗೆ ಅನುಗುಣವಾಗಿ ಮರ್ತ್ಯದಲ್ಲಿ ಆರಂಭವಾಗಿ ಕೈಲಾಸದಲ್ಲಿ ಮುಗಿಯುವ ಪವಾಡ ಸದೃಶ ಕೃತಿಯಾಗಿದೆ. ವೀರಶೈವ ಹಿರಿಮೆಯನ್ನು ನಿರೂಪಿಸುವ ಕಾವ್ಯವಾಗಿದ್ದರೂ ಇವೆಲ್ಲವನ್ನೂ ಮೀರಿ ಸ್ತ್ರೀವಾದಿ ಅಧ್ಯಯನ ದೃಷ್ಟಿಯಿಂದ ಗಮನಾರ್ಹ ಕೃತಿಯಾಗಿದೆ."[೫೯]

ಸಿರಿಯಾಳನ ಕಥೆ ಕನ್ನಡ, ತಮಿಳು, ತೆಲುಗು ಮತ್ತು ಮರಾಠಿ ಸಾಹಿತ್ಯದಲ್ಲಿ ಪ್ರಚಲಿತದಲ್ಲಿರುವುದನ್ನು ಗುರುತಿಸಿದ್ದಾರೆ. ಉದಾಹರಣೆಗೆ "ಸಿರಿಯಾಳನ ಕಥೆ ಪಾಲ್ಕುರಿಕೆ ಸೋಮನಾಥ ಮೊದಲಾದ ಕವಿಗಳ ಮೂಲಕ ತಮಿಳಿನಿಂದ ತೆಲುಗಿಗೆ ಪಯಣಿಸಿದೆ. ಮಹಾರಾಷ್ಟ್ರದಲ್ಲಿ ಶ್ರಾವಕ ಶುಕ್ಲ ಷಷ್ಠಿಯ ದಿನ ಸಿರಿಯಾಳನನ್ನು ಕುರಿತು ಹಬ್ಬವನ್ನು ಆಚರಿಸುವುದಕ್ಕೆ ಸಿರಿಯಾಳ ಷಷ್ಠಿ" ಎಂದು ಕರೆಯುತ್ತಾರೆ"[೬೦] ಎಂಬ ಉಲ್ಲೇಖಗಳನ್ನು ಕೊಟ್ಟಿದ್ದಾರೆ. ಹೀಗೆ ಹಲವಾರು ಕೃತಿಗಳಲ್ಲಿ ಸಿರಿಯಾಳ ಸೆಟ್ಟಿಯ ಕಥೆ ಬಂದಿರುವುದನ್ನು ಗಮನಿಸಲಾಗಿದೆ. ಹಾಗೆಯೇ ಈತನ ಕಾವ್ಯದ ವರ್ಣನೆಯ ಆರಂಭ ಕಾಂಚೀಪುರದ ವರ್ಣನೆಯೊಂದಿಗೆ ಆಗಿದ್ದು ಹರಿಹರನ ಅನುಸರಣೆಯೇ ಆಗಿದೆ ಎಂದು ಸಂಪಾದಕರು ತಿಳಿಸುತ್ತಾರೆ. ಸಿರಿಯಾಳ ಸತಿ 'ಚಂಗಳೆ' ಇವರ ಮಗ 'ಚೀಲಾಳ' ಒಂದು ದಿನ ಶಿವನು ಇವರ ಮನೆಗೆ ಬಂದು ಮಗನ ಶಿರವನ್ನು ಪ್ರತ್ಯೇಕವಾಗಿಟ್ಟು ಅಡುಗೆ ಮಾಡಿ ಬಡಿಸು ಎಂದು ಕೇಳುತ್ತಾನೆ. ಅಡಿಗೆಯಾದ ಮೇಲೆ ಶಿವ ತಂದೆ ತಾಯಿಗಳಿಗೆ ಮಗನನ್ನು ಕರೆದು ಊಟಕ್ಕೆ ಕೂರಿಸುವಂತೆ ಆಜ್ಞೆ ಮಾಡುವುದು ಅವರು ಮಗನನ್ನು ಕರೆದಾಗ ಬಂದು ಊಟಕ್ಕೆ ಕುಳಿತುಕೊಳ್ಳುವುದು ಇತ್ಯಾದಿ ಅಂಶಗಳು ಪವಾಡ ಸದೃಶವಾಗಿ ಬಂದಿವೆ. ಸಾಮಾನ್ಯ ಜನರಲ್ಲಿ ಭಕ್ತಿಭಾವವನ್ನು ಭಿತ್ತಿ ಬೆಳೆಯಲು ಇಂಥ ಪವಾಡಗಳು ಅಲೌಕಿಕ ಘಟನೆಗಳು ಅನಿವಾರ್ಯವಾಗುತ್ತವೆ. ಹೇರೂರು ಹೆಣ್ಣಿನ ಸಾಂಗತ್ಯ ಧರ್ಮದ ಮೌಲ್ಯವನ್ನು ಹಾಗೂ ಸಿರಿಯಾಳ ಸೆಟ್ಟಿಯ ಸಾಂಗತ್ಯ ಭಕ್ತಿಯ ಮೌಲ್ಯವನ್ನು ಪ್ರತಿನಿಧಿಸುತ್ತವೆ. ಅನುಬಂಧದಲ್ಲಿ ಅರ್ಥಕೋಶ. ಪದ್ಯಗಳ ಆಕಾರಾದಿಯನ್ನು ಸಂಪಾದಕರು ಗುರುತಿಸಿದ್ದಾರೆ.

೩.೨.೩.೨.೧.೧೨. ಕನ್ನಡ ರತ್ನಕರಂಡಕ ಶ್ರಾವಕಾಚಾರಗಳು

ಪ್ರಸ್ತುತ ಕೃತಿಯನ್ನು ಸಂಪಾದಿಸಿ ವೈ.ಸಿ. ಭಾನುಮತಿ ಅವರು ೨೦೦೪ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸಿದ್ದಾರೆ. ಈ ಕೃತಿಯು ಕನ್ನಡದ ನಾಲ್ಕು ಶ್ರಾವಕಾಚಾರ ಗ್ರಂಥವನ್ನು ಒಳಗೊಂಡಿದೆ. 'ಆಯತವರ್ಮನ ರತ್ನಕರಂಡಕ' ಕೃತಿಯಲ್ಲಿ ಕವಿ ಎಲ್ಲಿಯೂ ತನ್ನ ಕಾಲವನ್ನು ಹೇಳಿಕೊಂಡಿಲ್ಲ 'ಸಂಸ್ಕೃತ ರತ್ನಕರಂಡಕ ಶ್ರಾವಕಾಚಾರವು' ೪ ಕೃತಿಗಳು ೧೫೦ ಶ್ಲೋಕಗಳನ್ನು ಒಳಗೊಂಡಿದೆ. 'ಕನ್ನಡ ರತ್ನಕರಂಡಕವು' ಮೂರು ಪರಿಚ್ಛೇದಗಳನ್ನು ಒಳಗೊಂಡಿದೆ. ಕಂದ ಪದ್ಯ ಮತ್ತು ಗದ್ಯಭಾಗದಿಂದ ಕೂಡಿದೆ ರತ್ನಕರಂಡಕ ಟೀಕು ಈ ಗ್ರಂಥವು ಸಮಂತ ಭದ್ರರ ರತ್ನಕರಂಡಕ ಶ್ರಾವಕಾಚಾರಕ್ಕೆ ಬರೆದ

ಟೀಕೆ ಎಂದು ಗುರುತಿಸಿದ್ದಾರೆ. 'ಚಿಕ್ಕ ಶ್ರಾವಕಾಚಾರ' ಅನಾಮಧೇಯ ಕವಿಯ ಈ ಕೃತಿಗೆ ಕವಿ ನಿರ್ಧಿಷ್ಟ ಆಕರ ಸೂಚಿಸಿಲ್ಲ ಇದರಲ್ಲಿ ಕಂದ ವೃತ್ತಗಳಿರುವ ೧೪೭ ಪದ್ಯಗಳಿವೆ. ಶ್ರಾವಕ ಧರ್ಮವನ್ನು ಸಂಕ್ಷಿಪ್ತವಾಗಿ ನಿರೂಪಿಸುವುದಷ್ಟೇ ಕಾವ್ಯದ ಗುರಿ ಆಗಿದೆ ಎಂದಿದ್ದಾರೆ. 'ಶ್ರಾವಕಾಚಾರ ಸಾಂಗತ್ಯ' ಕವಿ ಕಾಲ ವಿಚಾರಗಳನ್ನು ಎಲ್ಲಿಯೂ ಹೇಳಿಕೊಂಡಿಲ್ಲ. ಈ ಕೃತಿಯಲ್ಲಿ ಸತಿ ಧರ್ಮದ ಬಗ್ಗೆ ಹಾಗೂ ಮಹಿಳೆಯರನ್ನು ಉದ್ದೇಶಿಸಿ ಕಾವ್ಯ ರಚಿಸಿರುವುದನ್ನು ಸಂಪಾದಕರು ಸ್ಪಷ್ಟಪಡಿಸಿದ್ದಾರೆ.

ಜೈನ ಧರ್ಮದ ಕೇಂದ್ರ ಬಿಂದುವಾದ ಪಂಚಾಣು ವ್ರತಗಳ ಆಧಾರದ ಮೇಲೆ ನಿಂತಿರುವುದಾಗಿದೆ. ಇಂಥ ಗ್ರಂಥಗಳನ್ನು ಬಸದಿಗಳಲ್ಲಿ ಮನೆಗಳಲ್ಲಿ ರಕ್ಷಿಸುತ್ತಾರೆ. ಪ್ರಸ್ತುತ ಸಂಪುಟದ ಹೊರಗಿರುವ 'ಶ್ರಾವಕಾಚಾರಸಾರ' ಎಂಬ ಕೃತಿಯಲ್ಲಿ ಹತ್ತು ಅಧ್ಯಾಯಗಳು ಇರುವುದಾಗಿ ತಿಳಿಸಿದ್ದಾರೆ. ಈ ಗ್ರಂಥವೇ ಕನ್ನಡದ ಪ್ರಥಮ ಕೃತಿ ಈ ಸಂಪುಟಕ್ಕೆ ಸಂಬಂಧಿಸಿದಂತೆ 'ಶ್ರಾವಕಾಚಾರ ವೃತ್ತಿ' ಎಂಬ ಮತ್ತೊಂದು ಕೃತಿ ಕನ್ನಡದಲ್ಲಿರುವುದನ್ನು ಗಮನಿಸಿ ಆಧುನಿಕ ಸಂದರ್ಭದಲ್ಲಿ ಪ್ರಾಚೀನ ಗ್ರಂಥಗಳನ್ನು ಆಧರಿಸಿ ಶ್ರಾವಕಾಚಾರ ಗ್ರಂಥಗಳು ರಚಿತವಾಗಿರುವುದನ್ನು ಈ ಕೃತಿ ಪರಿಷ್ಕರಣದ ಸಂದರ್ಭದಲ್ಲಿ ತಿಳಿಸಿದ್ದಾರೆ. ಪ್ರಸ್ತಾವನೆಯಲ್ಲಿ ಈ ಸಂಪುಟದ ನಾಲ್ಕು ಕೃತಿಗಳನ್ನು ವಿಮರ್ಶಾತ್ಮಕವಾಗಿ ಚರ್ಚಿಸಿದ್ದಾರೆ. ಪದ್ಯಗಳ ಸಾರಾಂಶವನ್ನು ಅರ್ಥಗರ್ಭಿತವಾಗಿ ವಿವರಿಸಿದ್ದಾರೆ. ಕೃತಿಯ ಕೊನೆಯಲ್ಲಿ ಅಂಕಿಗಳು ಮತ್ತು ಪದ್ಯಗಳನ್ನು ಸೂಚಿಸುವಂತೆ ನೀಡಲಾಗಿದೆ. ಪಾರಿಭಾಷಿಕ ಪದಕೋಶ ವಿಶಿಷ್ಟ ಶಬ್ದಸೂಚಿಸುವಂತೆ, ಪದ್ಯಗಳ ಆಕಾರಾದಿ ಹೀಗೆ ಹಲವಾರು ವಿಧಾನಗಳನ್ನು ಅನುಸರಿಸುವುದರ ಮೂಲಕ ಶಾಸ್ತ್ರೀಯವಾಗಿ ಪರಿಷ್ಕರಿಸಿ ಪ್ರಕಟಿಸಿದ್ದಾರೆ.

೩.೨.೩.೨.೧.೧೩. ಸಿದ್ಧಲಿಂಗೇಶ್ವರ ಲಘು ಕೃತಿಗಳು

ಪ್ರಸ್ತುತ ಕೃತಿಯನ್ನು ವೈ.ಸಿ.ಭಾನುಮತಿ ಅವರು ಸಂಪಾದಿಸಿ ೨೦೦೫ರಲ್ಲಿ ಕರ್ನಾಟಕ ಸರ್ಕಾರ ಧಾರ್ಮಿಕದತ್ತಿ ಇಲಾಖೆಯಿಂದ ಪ್ರಕಟಿಸಿದ್ದಾರೆ. ಸಿದ್ಧಲಿಂಗೇಶ್ವರರ ಲಘುಕೃತಿಗಳು' ಈ ಸಂಪುಟವನ್ನು ವಿವಿಧ ಹಸ್ತಪ್ರತಿಗಳು ಮತ್ತು ಮುದ್ರಿತ ಪ್ರತಿಗಳ ನೆರವಿನಿಂದ ಪರಿಷ್ಕರಿಸಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪುಟದಲ್ಲಿ ಸಿದ್ಧಲಿಂಗೇಶ್ವರನನ್ನು ಕುರಿತ ಹತ್ತೊಂಬತ್ತು ಕಿರುಕೃತಿಗಳನ್ನು ಸಂಕಲಿಸಲಾಗಿದೆ. ಇಲ್ಲಿನ ಒಂದೊಂದು ಕೃತಿಯನ್ನು ಪ್ರತ್ಯೇಕವಾಗಿ ಪರಿಭಾವಿಸಿದಾಗ ಗಾತ್ರದಲ್ಲಿ ಕಿರಿದಾಗಿ ಕಂಡರೂ ಹಿರಿದಾದ ವ್ಯಕ್ತಿಯನ್ನು ಕೇಂದ್ರವಾಗಿಟ್ಟುಕೊಂಡು ರಚಿತವಾಗಿರುವುದರಿಂದ ಇವು ಮೌಲ್ಯಯುತವಾಗಿವೆ ಎಂದು ಸಂಪಾದಕರು ಗುರುತಿಸಿದ್ದಾರೆ.

ಈ ಸಂಪುಟದ ಮೊದಲ ಕೃತಿ 'ತೋಂಟದ ಸಿದ್ಧೇಶ್ವರ ಭಾವರತ್ನಾಭರಣ ಸ್ತೋತ್ರ.' ಇದರ ಕರ್ತೃ ಸಿದ್ಧನಂಜೇಶ. ಈತ ರಾಘವಾಂಕ ಚರಿತೆ, ಗುರುರಾಜ ಚರಿತ್ರ, ಬಸವಶತಕ ಎಂಬ ಇತರ ಕಾವ್ಯಗಳನ್ನು ರಚಿಸಿದ್ದಾನೆ. ಈತನ ಕಾಲ ೧೬೫೦. ಈ ಕೃತಿ ವಾರ್ಧಕ ಷಟ್ಪದಿಯಲ್ಲಿ ಇದೆ. ಇದರಲ್ಲಿ ಒಟ್ಟು ೧೧೧ ಪದ್ಯಗಳಿವೆ. 'ಭಾವರತ್ನಾಭರಣ ಸ್ತೋತ್ರ'ದಲ್ಲಿ ಹೆಬ್ಬೂರಿನಲ್ಲಿ ಕಲ್ಲ ನಂದಿಗೆ ಹೆಣ್ಣು ಮಗಳಿಂದ ಬಾಳೆ ಹಣ್ಣಿನ ಪ್ರಸಾದ ತಿನ್ನಿಸಿದ್ದು, ಸಿದ್ಧಲಿಂಗೇಶ್ವರ ಇಟ್ಟ ಆಣೆಯಿಂದ ಗೂಳಿ

ನಿಶ್ಚಲವಾಗಿ ನಿಂತದ್ದು. ನಾಗ-ಸಮುದ್ರದ ಗುಡಿಯ ಬಾಗಿಲು ತೆರೆದದ್ದು. ಕೆರೆಯು ಕೊಡವನ್ನು ಹಿಂದಕ್ಕೆ ಕೊಟ್ಟದ್ದು ಇವೆ ಮೊದಲಾದ ಪವಾಡಗಳು ಎಡೆಪಡೆದಿವೆ. ಪ್ರತಿ ಪದ್ಯದಲ್ಲೂ ಸಿದ್ಧಲಿಂಗನ ಮಹಿಮೆಯನ್ನು ಕೊಂಡಾಡುತ್ತಲೇ ಅವುಗಳಿಗೆ ಸಂವಾದಿಯಾಗಿ ೧೨ನೆಯ ಶತಮಾನದ ಶರಣರ ಮಹಿಮೆಯನ್ನು ಅಲ್ಲಲ್ಲಿ ಬಿತ್ತರಿಸಲಾಗಿರುವುದನ್ನು ಸಂಪಾದಕರು ಗುರುತಿಸಿದ್ದಾರೆ.

ಸಿದ್ಧಲಿಂಗಯತಿಯ ಬಗೆಗಿರುವ ಐದು ಅಷ್ಟಕಗಳು ಈ ಸಂಪುಟದಲ್ಲಿವೆ. ಅವುಗಳೆಂದರೆ 'ಸಿದ್ಧೇಶ್ವರ ಅಷ್ಟಕ' 'ತೋಂಟದ ಸಿದ್ಧೇಶ್ವರ ಅಷ್ಟಕ' 'ತೋಂಟದ ಸಿದ್ಧೇಶ್ವರನ ವಾರ್ಧಿಕ' 'ಸಿದ್ಧಲಿಂಗಾಷ್ಟಕ' ಮತ್ತು ಎಡೆಯೂರು ಸಿದ್ಧಲಿಂಗ ದಯಾನಿಧಿ ಅಷ್ಟಕ ಇವು ಶಿವನ ಮಹಿಮೆಯನ್ನು ತಿಳಿಸುತ್ತವೆ. 'ಶತಕಗಳು ಉದ್ದೇಶ ಭಕ್ತಿ, ಜ್ಞಾನ, ನೀತಿ, ವೈರಾಗ್ಯಗಳ ಪ್ರತಿಪಾದನೆ ಹಾಗೂ ಮೊದಮೊದಲು ವೃತ್ತಗಳಲ್ಲಿ ರೂಪ ಪಡೆದ ಶತಕಗಳು ಅನಂತರದಲ್ಲಿ ಷಟ್ಪದಿ ಸಾಂಗತ್ಯ ಛಂದಸ್ಸನ್ನೂ ಬಳಸಿಕೊಂಡವು ಸಿದ್ಧಲಿಂಗನಿಗೆ ಸಂಬಂಧಿಸಿದಂತೆ ಮೂರು ಶತಕಗಳು ಉಪಲಬ್ಧವಿವೆ. ಅವುಗಳೆಂದರೆ ವಿರಕ್ತ ತೋಂಟದಾರ್ಯನ 'ನಿರಂಜನ ಶತಕ' 'ಸಿದ್ಧಲಿಂಗೇಶ್ವರ ಶತಕ' 'ಸಿದ್ಧಲಿಂಗ ಕವಿಯ ಶತಕ' ಒಟ್ಟಾರೆ ಪೂರ್ವೋಕ್ತ ಸಿದ್ಧಲಿಂಗೇಶ್ವರ ಶತಕಗಳು ಚರಿತ್ರೆಗೆ ಪ್ರಾಧ್ಯಾನತೆ ನೀಡದೆ. ತಾತ್ವಿಕತೆಗೆ ಒತ್ತು ನೀಡಿರುವುದನ್ನು ಗಮನಿಸಲಾಗಿದೆ. ಸಿದ್ಧಲಿಂಗೇಶ್ವರನ ಮೇಲೆ, ಸಿದ್ಧೇಶ್ವರ ಮಹಿಮಾ ತಾರಾವಳಿ, ತೋಂಟದ ಸಿದ್ಧಲಿಂಗೇಶ್ವರ ತಾರಾವಳಿ, ತೋಂಟದ ಸಿದ್ಧಲಿಂಗ ತಾರಾವಳಿ ಎಂಬ ಮೂರು ತಾರಾವಳಿಗಳಿವೆ. ರಗಳೆಗಳು, ತ್ರಿಪದಿಗಳು, ಸ್ವರ ವಚನಗಳು ಎಲ್ಲಾ ಪ್ರಕಾರಗಳಲ್ಲಿಯೂ ಸಿದ್ಧಲಿಂಗೇಶ್ವರನನ್ನು ಕುರಿತು ಕೃತಿಗಳನ್ನು ರಚಿಸಿರುವುದನ್ನು ಗುರುತಿಸಿ ಈ ಸಂಪುಟವನ್ನು ೨೪ ಪುಟ ಪೀಠಿಕೆ ಹಾಗೂ ಅನುಬಂಧ ೫ರಲ್ಲಿ ಸ್ವರವಚನಗಳ ಆಕಾರಾದಿ ಹಾಗೂ ಸ್ಥಳ ಮತ್ತು ವ್ಯಕ್ತಿ ಆಕರ ಸೂಚಿ ನೀಡಿರುವುದು ಈ ಸಂಪಾದನೆಯ ವೈಶಿಷ್ಟ್ಯವಾಗಿದೆ.

೩.೨.೩.೨.೧.೧೪. ಸಿದ್ಧಮಂಕ ಚರಿತೆ

ಪ್ರಸ್ತುತ ಕೃತಿಯನ್ನು ಎಂ.ಎಂ. ಕಲಬುರ್ಗಿ ಮತ್ತು ವೈ.ಸಿ. ಭಾನುಮತಿ ಅವರು ಸಂಪಾದಿಸಿ ೨೦೦೪ರಲ್ಲಿ ಲಿಂಗಾಯತ ಅಧ್ಯಯನ ಸಂಸ್ಥೆ ಗದಗದಿಂದ ಪ್ರಕಟಿಸಿದ್ದಾರೆ. ಸಿದ್ಧಮಂಕ ಚರಿತೆಯ ಕವಿ 'ಸಿದ್ಧಯ್ಯ'ನಿರಬಹುದು ಎಂದು ಡಿ.ಎಲ್.ಎನ್. ಅವರು ಉಲ್ಲೇಖಿಸಿದ್ದಾರೆ. ಇದರ ಆಧಾರದಿಂದ ಈ ಕಾವ್ಯದ ಕರ್ತೃ 'ಸಿದ್ಧಯ್ಯ' ಎಂದು ಸಂಪಾದಕರು ಸಹ ಪರಿಷ್ಕರಣದ ಸಂದರ್ಭದಲ್ಲಿ ಗುರುತಿಸಿದ್ದಾರೆ. ಈ ಕಾವ್ಯವನ್ನು ಏಕೈಕ ಹಸ್ತಪ್ರತಿಯಿಂದ ಪರಿಷ್ಕರಿಸಲಾಗಿದೆ. ಮೂಲತಃ ಹೆಗ್ಗಡ ದೇವನ ಕೋಟೆ ತಾಲ್ಲೂಕಿನ ಸರಗೂರು ಹೋಬಳಿ ಎತ್ತಿಗದ ಮಠಕ್ಕೆ ಸಂಬಂಧಿಸಿದ ಓಲೆ ಪ್ರತಿ. ಸಿದ್ಧಮಂಕ ಚರಿತೆಯಲ್ಲಿ ನಾಲ್ಕು ಸಂಧಿಗಳು ಇವೆ. ಈ ಕಾವ್ಯವು ಹನ್ನೆರಡನೆಯ ಶತಮಾನ ಕರ್ನಾಟಕದ ಇತಿಹಾಸದಲ್ಲಿ ಸಂಕ್ರಮಣ ಸಂದರ್ಭ ಹಾಗೂ ಶರಣರ ಉದಾರವಾದಿ ಮತಾಂತರ ದೃಷ್ಟಿಯಿಂದ ತುಂಬಾ ಮಹತ್ವ ಪಡೆದಿದೆ. ಈ ಕಾಲಘಟ್ಟದಲ್ಲಿ ಕುರುಬರು ಲಿಂಗಾಯತ ಧರ್ಮಕ್ಕೆ ಸೇರಿದ ಮಾಹಿತಿಯನ್ನು ಒಳಗೊಂಡಿದೆ. ಹಾಗೆಯೇ ಈ ಕಥೆಯ ಕ್ಷೇತ್ರ ಸಿದ್ಧರಾಮನ ಸೊನ್ನಲಿಗೆ.

'ಬಸವಣ್ಣನ ಕಲ್ಯಾಣ' 'ಮರುಳ ಮಂಕನ ಸರೂರ-ಕುರಿ' 'ಬೆಟ್ಟದೂರು ಆತಕೂರು' ಈ ಸ್ಥಳಗಳು ಕಾವ್ಯದಲ್ಲಿ ಪ್ರಸ್ತಾಪವಾಗಿರವುದನ್ನು ಗುರುತಿಸಿದ್ದಾರೆ.

ಸಿದ್ಧಮಂಕ ಚರಿತೆಯಲ್ಲಿ ಕುರುಬ ಸಮಾಜವು ಲಿಂಗಾಯತ ಸಮಾಜದಲ್ಲಿ ಸಮನ್ವಯಗೊಳ್ಳುವ ಪ್ರಕ್ರಿಯೆಯನ್ನು ಕಾಣಬಹುದಾಗಿದೆ. ಹೀಗೆ ಲಿಂಗಾಯತ ಸಮಾಜದಲ್ಲಿ ಬೆರೆಯುತ್ತಲಿದ್ದ ಹಾಗೂ ಬೆರೆತ ಕುರುಬ ಸಮಾಜದ ಒಂದು ಸಣ್ಣ ಚಿತ್ರಣವನ್ನು ಈ ಕೃತಿಯಲ್ಲಿ ಕವಿಯು ತಿಳಿಸುವುದಕ್ಕೆ ಪಯತ್ನ ಮಾಡಿದ್ದಾರೆ. ಅನುಬಂಧದಲ್ಲಿ 'ಟಗರ ಪವಾಡ' ಮತ್ತು ಪದ್ಯಗಳ ಆಕಾರಾದಿ ಸೂಚಿ, ಪಾಠಾಂತರಗಳನ್ನು ಗುರುತಿಸಿ ಶಾಸ್ತ್ರೀಯವಾಗಿ ಸಂಪಾದಿಸಿದ್ದಾರೆ.

೩.೨.೩.೨.೧.೧೫. ಪಂಚಬಾಣ ವಿರಚಿತ ಭುಜಬಲಿ ಚರಿತೆ

ಈ ಕೃತಿಯ ಕರ್ತೃ 'ಪಂಚಬಾಣ'. ಈತನ ಕಾಲ ೧೬೦೦. ಪ್ರಸ್ತುತ ಕೃತಿಯನ್ನು ವೈ.ಸಿ.ಭಾನುಮತಿ ಅವರು ಸಂಪಾದನೆ ಮಾಡಿ ೨೦೧೧ರಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸಿದ್ದಾರೆ. ಈ ಕೃತಿಯನ್ನು ಮೂರು ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಿದ್ದಾರೆ. ಪಂಚಬಾಣನ ತಂದೆ 'ಚೆನ್ನಪ್ಪಯ್ಯ' ಆರಾಧ್ಯದೇವತೆ 'ಅನಂತಮತಿಯಮ್ಮ'. ಈಕೆಯನ್ನು ಆದ್ಯಂತ್ಯಗಳಲ್ಲಿ ಭಕ್ತಿಯಿಂದ ಸ್ತುತಿಸಿದ್ದಾನೆ. ಹಾಗೆಯೇ ಭುಜಬಲಿ ಚರಿತೆಯಲ್ಲಿ ಕೆಲವು ಜೈನ ಹಾಡುಗಳನ್ನು ಬರೆದಿರುವುದನ್ನು ಸಂಪಾದಕರು ಗುರುತಿಸಿ ಅದರಲ್ಲಿ ಒಂಭತ್ತು ಜೈನ ಹಾಡುಗಳನ್ನು ಭುಜಬಲಿ ಚರಿತೆಯಲ್ಲಿ ಸಂಗ್ರಹ ಮಾಡಿದ್ದಾರೆ.

ಭಾರತೀಯ ಜೈನ ಸಾಹಿತ್ಯದಲ್ಲಿ ಭುಜಬಲಿ ಅಥವಾ ಬಾಹುಬಲಿ ಕಥೆ ಪ್ರಸಿದ್ಧವಾಗಿದೆ. ಅದು ಸಮಗ್ರವಾಗಿ ಆನುಷಂಗಿಕವಾಗಿ ಹಲವು ಭಾಷೆಯ ಅನೇಕ ಕೃತಿಗಳಲ್ಲಿ ವ್ಯಾಪಿಸಿದೆ. ಪ್ರಾಕೃತ, ಸಂಸ್ಕೃತ, ಅಪಭ್ರಂಶ, ಹಿಂದಿ, ತಮಿಳು ಮತ್ತು ಕನ್ನಡ ಭಾಷೆಯಲ್ಲಿ ಬಾಹುಬಲಿಯ ಕಥೆ ಕಾಣಿಸಿಕೊಂಡಿರುವುದನ್ನು ಸಂಪಾದಕರು ಗುರುತಿಸಿದ್ದಾರೆ. ಹಾಗೆಯೇ ಐತಿಹಾಸಿಕ ವ್ಯಕ್ತಿ ಹಾಗೂ ಐತಿಹಾಸಿಕ ಶಿಲ್ಪವನ್ನು ಪ್ರಸ್ತಾಪಿಸಿದ್ದರೂ ಇವೆಲ್ಲವನ್ನು ಪೌರಾಣಿಕ ನೆಲೆಯಲ್ಲಿ ಧಾರ್ಮಿಕ ನೆಲೆಯಲ್ಲಿ ಇವೆ. ನೇರವಾಗಿ ಕೆಲವೊಮ್ಮೆ ರೂಪಕದ ಮೂಲಕ ಅಭಿವ್ಯಕ್ತಿಗೊಂಡಿದೆ ಎಂಬುದನ್ನು ಭಾನುಮತಿಯವರು ಗುರುತಿಸಿದ್ದಾರೆ.

ಪ್ರಸ್ತುತ ಕೃತಿಯಲ್ಲಿ ಪಂಚಬಾಣ ೨೨ ಸಂಧಿಗಳಲ್ಲಿ ಭುಜಬಲಿಯ ಕಥೆಯನ್ನು ೨೩ನೆಯ ಸಂಧಿಯಲ್ಲಿ ಶಾಂತವರ್ಣಿ ಮಾಡಿದ ಮಸ್ತಭಿಷೇಕದ ಪ್ರಸಂಗವನ್ನು ವರ್ಣಿಸಲಾಗಿದೆ. ಈತ ತನ್ನ ಕೃತಿಗೆ ಆಕರವನ್ನು ನಿರ್ದಿಷ್ಟಪಡಿಸಿಲ್ಲ. 'ಜಿನಚರಿತೆ' ಜಿನ ಪುರಾಣಗಳನ್ನು ರಚಿಸಿದ ಕವೀಶ್ವರರನ್ನು ಸ್ಮರಿಸಿರುವುದರಿಂದ ಪ್ರಾಚೀನ ಜೈನ ಸಾಹಿತ್ಯದ ಪ್ರವೇಶವಿರುವುದನ್ನು ಸಂಪಾದಕರು ಗುರುತಿಸಿದ್ದಾರೆ. ಹಾಗೆಯೇ ಕವಿ 'ಪಂಚಬಾಣ' ಶ್ರವಣಬೆಳಗೊಳದವನಾಗಿರುವುದರಿಂದ ಮೌಖಿಕ ಇತಿಹಾಸದ ಅನೇಕ ವಿಚಾರಗಳನ್ನು ಕಾವ್ಯದಲ್ಲಿ ಅಂತರ್ಗತವಾಗಿರುವುದನ್ನು ಸಂಪಾದಕರು ಗಮನಿಸಿದ್ದಾರೆ.

ಉದಾಹರಣೆಗೆ 'ಶ್ರವಣಬೆಳಗೊಳ' ಭೌಗೋಳಿಕವಾಗಿ ಹಾಸನ ಜಿಲ್ಲೆಯ ಚೆನ್ನರಾಯಪಟ್ಟಣದ ದಕ್ಷಿಣಕ್ಕೆ ಹದಿನಾರು ಕಿಲೋಮೀಟರ ದೂರದಲ್ಲಿದೆ. ಶ್ರವಣಬೆಳಗೊಳದ ಸ್ಥಳನಾಮ ಕುರಿತು ಪಂಚಬಾಣನು ಹೇಳುವ ಮೌಖಿಕ ಕಥೆ ಪ್ರೇರಣೆ ಆಗಿರುವುದನ್ನು ಕಾಣಬಹುದು. ಆ ಕಥೆ ಎಂದರೆ 'ಗುಳ್ಳೆ' ಕಾಯಿ ಅಜ್ಜಿಯದು. ಬಾಹುಬಲಿ ಮೂರ್ತಿಗೆ ಅಭಿಷೇಕ ಮಾಡಿದಾಗ ಹಾಲು ಕೆಳಗೆ ಬಿಳದೆ ಮಂಡಿಯ ಹತ್ತಿರವೇ ನಿಂತು ಬಿಡುತ್ತವೆ. ಬಿಳಿಯ ಗುಳ್ಳದ ಕಾಯಿಯಲ್ಲಿ ಹಾಲು ತಂದಿದ್ದ ಅಜ್ಜಿಯು ಮೂರ್ತಿಯ ಮೇಲೆ ಹಾಲು ಸುರಿದಾಗ ಅದು ತೊರೆಯಾಗಿ ಹರಿಯುತ್ತದೆ. ಕೃತಜ್ಞತೆಯ ದ್ಯೋತಕವಾಗಿ ಚಾವುಂಡರಾಯ ಬೆಳಗುಳ ಎಂದು ಹೆಸರಿಡುತ್ತಾನೆ ಎಂಬ ಸ್ಥಳೀಯ ಐತಿಹ್ಯವನ್ನು ಆಧರಿಸಿ ಕವಿ ಇದನ್ನು ನಿರೂಪಿಸುವುದನ್ನು ಸಂಪಾದಕರು ಗುರುತಿಸಿದ್ದಾರೆ. ಅರ್ಥಕೋಶದಲ್ಲಿ ಅಂಕಿಗಳು ಕ್ರಮವಾಗಿ ಸಂಧಿ ಮತ್ತು ಪದ್ಯ ಸಂಖ್ಯೆಯನ್ನು ಸೂಚಿಸುತ್ತವೆ. ಹಾಗೆ ಸ್ಥಳನಾಮ ಸೂಚಿಯಲ್ಲಿಯೂ ಅಂಕಿಗಳು ಕ್ರಮವಾಗಿ ಸಂಧಿ ಮತ್ತು ಪದ್ಯವನ್ನು ಸೂಚಿಸುತ್ತವೆ. ಪರಾಮರ್ಶನ ಗ್ರಂಥಗಳನ್ನು ನೀಡಿದ್ದಾರೆ. ಶಾಸ್ತ್ರೀಯವಾಗಿ ಪರಿಷ್ಕರಿಸಿ ಪ್ರಕಟಿಸಿದ್ದಾರೆ.

೩.೨.೩.೨.೧.೧೬. ಅರಸರ ಚರಿತ್ರೆಗಳು

ವೈ.ಸಿ.ಭಾನುಮತಿ ಅವರು ಈ ಕೃತಿಯನ್ನು ಸಂಪಾದಿಸಿ ೨೦೧೧ರಲ್ಲಿ ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆಯಿಂದ ಪ್ರಕಟಿಸಿದ್ದಾರೆ. ಒಂದೇ ಸಂಪುಟದಲ್ಲಿ ೨೪ ಅರಸರ ಚರಿತ್ರೆಗಳನ್ನು ಸಂಪಾದಿಸಲಾಗಿದೆ. ಹಾಗೆಯೇ ಪರಿಷ್ಕರಣದ ವಿವರ ಈ ರೀತಿ ಇದೆ. 'ಅರಸರ ಚರಿತ್ರೆಗಳು' ಏಕೈಕ ಹಸ್ತಪ್ರತಿ ಸಹಾಯದಿಂದ ಕದಿರೇರಾಯರ ಪೂರ್ವ ವೃತ್ತಾಂತದಿಂದ ಬೆಳಗುತ್ತಿ ಅರಸರ ವೃತ್ತಾಂತದವರೆಗೆ ಪರಿಷ್ಕರಿಸಲಾಗಿದೆ. ತರೀಕೆರೆ ಕೈಫಿಯತ್ತು, ಪಾಂಡವಪುರದ ಪಿ. ಅಬ್ದುಲ್ ಸತ್ತರ್ ಅವರ ವೈಯಕ್ತಿಕ ಸಂಗ್ರಹದಲ್ಲಿದ್ದ ಹಸ್ತಪ್ರತಿಯಿಂದ ಪ್ರತಿ ಮಾಡಲಾಗಿದೆ. ವೇಣುಪುರದ ಕ್ಷತ್ರಿಯರ ವಂಶಾವಳಿಯನ್ನು ಕಾಗದದ ಹಸ್ತಪ್ರತಿಯನ್ನಾಧರಿಸಿ ಪರಿಷ್ಕರಿಸಿದ್ದಾರೆ. ಮಾಸ್ವಾಮಿಧೀರ ಮತ್ತು ತರೀಕೆರೆ ರಂಗಪ್ಪನಾಯಕ ಎಂಬಿವು ಮೌಖಿಕ ಸಂಪ್ರದಾಯದಲ್ಲಿದ್ದ ಹಾಡುಗಳಾಗಿವೆ. ಇವುಗಳನ್ನು ಮತಿಘಟ್ಟ ಕೃಷ್ಣಮೂರ್ತಿ ಅವರ ಸಂಗ್ರಹದಿಂದ ಆಯ್ದುಕೊಂಡಿದ್ದಾರೆ. ಸಾತ್ರೆಪಟ್ಟಿಯ ವಿವರದ ಸಂಪಾದನೆಯನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಓಲೆ ಪ್ರತಿಯನ್ನಾಧರಿಸಿ ಪರಿಷ್ಕರಿಸಿದ್ದಾರೆ. ಮಾನೌಮಿಯ ಚೌಪದದಲ್ಲಿ ಬರುವ ದೊಡ್ಡ ಕೃಷ್ಣರಾಜ ಪ್ರಭು, ದಳವಾಯಿ ದೇವರಾಜಯ್ಯ, ದಳವಾಯಿ ವೀರರಾಜಯ್ಯ ಎಂಬ ಭಾಗಗಳನ್ನು ತಾಡಪತ್ರದ ಹಸ್ತಪ್ರತಿಯನ್ನಾಧರಿಸಿ ಸಂಪಾದಿಸಿದ್ದಾರೆ. ಹೊಯ್ಸಳಾದಿ ರಾಜರ ಚರಿತ್ರೆ ಕಾಗದದ ಪ್ರತಿಯಿಂದ ಮೈಸೂರು ದೊರೆಗಳ ಪೂರ್ವ ವಂಶಾಭ್ಯುದಯವನ್ನು ಹಸ್ತಪ್ರತಿಯಿಂದ ಶೃಂಗಾರ ರತ್ನಾಕರವನ್ನು ಕಾಗದದ ಪ್ರತಿಯಿಂದ ತಾರತಂಬೂರ ನಗರ ವರ್ಣನೆಯನ್ನು ಓಲೆ ಪ್ರತಿಯಿಂದ ಪರಿಷ್ಕರಿಸಲಾಗಿದೆ.

ಅರಸರ ಚರಿತ್ರೆಗಳು ಸ್ಥಳೀಯ ಚರಿತ್ರೆ ದೃಷ್ಟಿಯಿಂದ ಮಹತ್ವದ್ದಾಗಿದೆ. ಏಕೆಂದರೆ ಮೌಖಿಕ ಸಾಹಿತ್ಯದಲ್ಲಿ ಚರಿತ್ರೆಯ ಐತಿಹ್ಯಗಳು ವಂದತಿಗಳು ಪ್ರಸ್ತುತ ಸಂದರ್ಭದಲ್ಲಿ ಕಣ್ಮರೆಯಾಗುತ್ತಿವೆ.

ಐತಿಹಾಸಿಕ ಸ್ಥಳಗಳ ಬಗ್ಗೆ ನಮ್ಮ ನಾಡಿನ ಅರಸರಗಳ ಚರಿತ್ರೆಯನ್ನು ಅಧ್ಯಯನ ಮಾಡಲು ಉಪಯುಕ್ತವಾದ ಮಾಹಿತಿಯನ್ನು ಈ ಕೃತಿಯ ಮೂಲಕ ತಿಳಿಯಬಹುದಾಗಿದೆ. ಈ ಸಂಪುಟವನ್ನು ಸಿದ್ಧಪಡಿಸಲು ಸಂಪಾದಕರು ಹೆಚ್ಚು ಸಮಯ ಹಾಗೂ ಶ್ರಮಪಟ್ಟಿರುವುದು ಈ ಕೃತಿಯ ಮೂಲಕ ಗುರುತಿಸಬಹುದಾಗಿದೆ. ಏಕೆಂದರೆ ಒಂದು ಕೃತಿಗೆ ಕವಿ, ಲಿಪಿಕಾರ ಇರುತ್ತಾನೆ. ಆದರೆ ಚರಿತ್ರೆಗಳನ್ನು ಮೌಖಿಕ ರೂಪಗಳಿಂದ ಹಾಗೂ ಯಾರೋ ಬರೆದ ಹಸ್ತಪ್ರತಿಗಳ ಮೂಲಕ ಪರಿಷ್ಕರಿಸುವಾಗ ಹಲವು ಸಮಸ್ಯೆಗಳು ಕಂಡುಬರುವುದು ಸಹಜ. ಅಂಥ ಹೊತ್ತಲ್ಲಿ ಅವುಗಳನ್ನು ತಿದ್ದಿ ಪೂರಕವಾದ ಮಾಹಿತಿಯನ್ನು ಕಲೆಹಾಕಿ ಸಂಪಾದಕರು ಬಹಳ ಸೂಕ್ಷ್ಮವಾಗಿ ಪರಿಷ್ಕರಿಸಿ ಪ್ರಕಟಿಸಿದ್ದಾರೆ.

೩.೨.೩.೨.೧.೧೭. ಮಡಿವಾಳೇಶ್ವರ ಕಾವ್ಯ

ಪ್ರಸ್ತುತ ಕಾವ್ಯವನ್ನು ವೈ.ಸಿ.ಭಾನುಮತಿ ಅವರು ೨೦೧೧ರಲ್ಲಿ ಸಂಪಾದಿಸಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸಿದ್ದಾರೆ. ಮಡಿವಾಳೇಶ್ವರ ಕಾವ್ಯವನ್ನು ಇದೇ ಮೊದಲ ಬಾರಿಗೆ ಏಕೈಕ ಹಸ್ತಪ್ರತಿಯ ಆಧಾರದಿಂದ ಪರಿಷ್ಕರಿಸಲಾಗಿದೆ. ಪ್ರಸ್ತುತ ಕಾವ್ಯವು ವಾರ್ಧಕ ಷಟ್ಪದಿಯಲ್ಲಿದೆ. ಇದಕ್ಕೆ 'ಮಡಿವಾಳಪ್ಪನ' ಕಾವ್ಯ ಎಂಬ ಪರ್ಯಾಯ ನಾಮವೂ ಇದೆ. ಈ ಕಾವ್ಯದ ಕರ್ತೃ 'ತೆರವಿ ಸಿದ್ಧಲಿಂಗ' ಈತನು ತನ್ನ ಕಾಲವನ್ನು ಎಲ್ಲಿಯೂ ಹೇಳಿಕೊಂಡಿಲ್ಲ. ಆದರೆ ಸಂಪಾದಕರು ಈ ಕಾವ್ಯದ ಹಸ್ತಪ್ರತಿಗಳ ಆಧಾರದ ಮೇಲೆ ಕ್ರಿ.ಶ. ೧೭೫೦ ಎಂದು ಉಲ್ಲೇಖಿಸುತ್ತಾರೆ.

ಮಡಿವಾಳ ಮಾಚಿದೇವರ ಚರಿತ್ರೆ ಬಿಡಿಬಿಡಿಯಾಗಿ ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡಿದೆ. ಭೀಮಕವಿಯ ಬಸವ ಪುರಾಣದಲ್ಲಿ ಮೊದಲು ಸಂಕ್ಷಿಪ್ತವಾಗಿ ಕಾಣಿಸಿಕೊಂಡಿದೆ. ವಿವಿಧ ವೀರಶೈವ ಕಾವ್ಯಗಳಲ್ಲಿ ಈ ಕಥೆ ಬೆಳೆದು ಬಂದಿರುವುದನ್ನು ಹಲವು ವೀರಶೈವ ಕಾವ್ಯಗಳನ್ನು ಅಭ್ಯಾಸ ಮಾಡಿ ಗುರುತಿಸಿದ್ದಾರೆ. ಹಾಗೆಯೇ ಮಡಿವಾಳೇಶ್ವರ ಕಾವ್ಯವು ೧೧ ಸಂಧಿ, ೫೪೯ ಪದ್ಯಗಳನ್ನು ಒಳಗೊಂಡಿದೆ. ಪ್ರಸ್ತುತ ಕಾವ್ಯದಲ್ಲಿ ಕೋಳೂರು ಕೊಡಗೂಸಿನ ಕಥೆ, ಚೋಳಾದೇವಿಯ ಕಥೆ, ಓಹಿಲಯ್ಯನ ಕಥೆ, ಕರಿಕಾಲ ಚೋಳನ ಕಥೆ, ಶಂಕರದಾಸಿಮಯ್ಯನ ಕಥೆ, ಪಿಟ್ಟವ್ವೆಯ ಕಥೆ, ಮುಂತಾದ ಶರಣರ ಕಥೆಗಳು ಕಾವ್ಯದ ಅರ್ಧ ಭಾಗವನ್ನು ಆಕ್ರಮಿಸಿವೆ. ಮುಖ್ಯ ಕಥೆಗಳ ಒಳಗೆ 'ಅನ್ನೋದಕ' ದಾನದ ಕಥೆಗಳು, ಪತಿವ್ರತೆಯ ಕಥೆಗಳು, ವ್ಯಭಿಚಾರಿಗಳ ಕಥೆಗಳು ಇತ್ಯಾದಿ ಉಪಕಥೆಗಳೂ ಎಡೆಪಡೆದಿದ್ದು ಇದೊಂದು ಶಿವಶರಣರ ಕಥಾಕೋಶವಾಗಿಯೂ ಓದಿಸಿಕೊಂಡು ಹೋಗುತ್ತದೆ. ಎಂದು ಸಂಪಾದಕರು ಕಾವ್ಯವಿಮರ್ಶೆ ಮಾಡುವಾಗ ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿದ್ದಾರೆ.

ತೊರವಿ ಸಿದ್ಧಲಿಂಗ ಪ್ರಸ್ತುತ ಕಾವ್ಯವನ್ನು ರಚಿಸುವತಂಹ ಸಂದರ್ಭದಲ್ಲಿ ಕನ್ನಡ ಭಾಷೆಯು ಸ್ಥಿತ್ಯಂತರವನ್ನು ಪಡೆಯುತ್ತಿದ್ದ ಕಾಲ. ಅದರ ಪ್ರಭಾವ ಕವಿಯ ಮೇಲೆ ಸಾಕಷ್ಟು ಪರಿಣಾಮ ಬೀರಿರುವುದನ್ನು ಕಾಣಬಹುದು. ಈತ ಛಂದಸ್ಸಿಗಾಗಿ ಕೆಲವು ವ್ಯತ್ಯಾಸಗಳನ್ನು ಮಾಡಿಕೊಂಡಿದ್ದಾನೆ. ಉದಾಹರಣೆಗೆ:- 'ಎಮ್ಮ+ಮಗಳು=ಎಮ್ಮಗಳು' ಲಂಬ+ಉದರ=ಲಂಬುದರ' 'ನಿಮ್ಮ+ಪಿತ=ನಿಂಪಿತ' 'ಯೆಮ್ಮ+ಬಳಿ=ಯೆಂಬಳಿ'[೬೧] ಹೀಗೆ ಹಲವಾರು ವ್ಯತ್ಯಾಸಗಳನ್ನು ಗುರುತಿಸಿದ್ದಾರೆ. ಹಾಗೆಯೇ ಈ

ಕಾವ್ಯವನ್ನು ಪರಿಷ್ಕರಿಸುವುದರ ಜೊತೆಗೆ ಪಾಠದೋಷಗಳನ್ನು ಗುರುತಿಸಿ ಸರಿಯಾದ ಅರ್ಥವನ್ನು ಕೊಟ್ಟಿದ್ದಾರೆ. ಇದು ಬಹಳ ಮೋಡಿಲಿಪಿಯ ಹಸ್ತಪ್ರತಿಗಳನ್ನು ಆಧರಿಸಿ ಪರಿಷ್ಕರಿಸಿದ ಗ್ರಂಥ. ಈ ಪರಿಷ್ಕರಣದ ವೈಶಿಷ್ಟ್ಯವೆಂದರೆ ಪ್ರತಿಯೊಂದು ಪದ್ಯಕ್ಕೂ ಗದ್ಯಾನುವಾದ ನೀಡಿರುವುದು.

೩.೨.೩.೨.೧.೧೮. ಬಸವೇಶ್ವರ ಮಹತ್ವದ ಸಾಂಗತ್ಯ

ಈ ಕೃತಿಯನ್ನು ಸಂಪಾದಿಸಿ ವೈ.ಸಿ.ಭಾನುಮತಿ ಅವರು ೨೦೧೩ರಲ್ಲಿ ಮೈಸೂರಿನ ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಅವರಿಂದ ಪ್ರಕಟಿಸಿದ್ದಾರೆ. ಈ ಕೃತಿಯನ್ನು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದ ಏಕೈಕ ತಾಡೋಲೆಯ ಪ್ರತಿಯಿಂದ ಪರಿಷ್ಕರಿಸಿದ್ದಾರೆ. ಪ್ರಸ್ತುತ ಕಾವ್ಯದ ಕರ್ತೃ ಹಾಗೂ ಕವಿ ಕಾಲ ವಿಚಾರಗಳನ್ನು ಸ್ಪಷ್ಟಪಡಿಸಿಲ್ಲ. ಈ ಕಾವ್ಯದ ತಾಡೋಲೆಯ ಪ್ರಕಾರ 'ಚೆನ್ನಬಸವರಾಜ ದೇವರು' ಕವಿಯ ಕಾಲವನ್ನೆ ಕ್ರಿ.ಶ. ೧೭೦೦ ಎಂದು ಸಂಪಾದಕರು ಊಹಿಸಿದ್ದಾರೆ. 'ಬಸವೇಶ್ವರ ಮಹತ್ವದ ಸಾಂಗತ್ಯ' ಒಂದು ಪುಟ್ಟ ಕಾವ್ಯ, ಇದರಲ್ಲಿ ಮೂರು ಸಂಧಿ ೫೮೭ ಪದ್ಯಗಳಿವೆ. ಇದು ಮತೀಯ ಸಂಘರ್ಷ ಉಂಟಾದ ಕಾಲಘಟ್ಟದಲ್ಲಿ ಹುಟ್ಟಿದಂಥ ಕಾವ್ಯ ಎಂದು ಸಂಪಾದಕರು ಗುರುತಿಸಿದ್ದಾರೆ.

ಬಸವೇಶ್ವರ ಮಹತ್ವದ ಸಾಂಗತ್ಯದಲ್ಲಿ ಕವಿ ಬಸವಣ್ಣನ ಕಥೆಯನ್ನು ರಚಿಸುವನೆಂದಿರುವಂತೆ ಶಿವಶರಣರು ಕೈಲಾಸ ಸೇರಿದ ಕಥೆಯನ್ನು ಅನೇಕ ಶರಣರ ಕಥೆಯಲ್ಲಿ ಅಲ್ಲಲ್ಲಿ ಬಿತ್ತರಿಸಿದ್ದಾನೆ. ಈ ಕಾವ್ಯದಲ್ಲಿ ಮಡಿವಾಳ ಮಾಚಯ್ಯ, ಆದಯ್ಯ ಮುಂತಾದವರ ಚರಿತ್ರೆ ಸಂಕ್ಷಿಪ್ತವಾಗಿ ಪಡಿಮೂಡಿವೆ. ಹಾಗೆ ಅನುಬಂಧದಲ್ಲಿ 'ಬಸವೇಶ್ವರ ಮಹಿಮಾ ಸ್ತೋತ್ರ' ಬಸವಲಿಂಗ ರಗಳೆ' 'ಬಸವ ಸ್ತೋತ್ರದ ತ್ರಿವಿಧಿ' ಎಂಬ ಮೂರು ಲಘು ಕೃತಿಗಳಿವೆ. ಇವುಗಳನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಡಲಾಗಿದೆ. ಅರ್ಥಕೋಶ, ಪದ್ಯಗಳ ಅಕಾರಾದಿ, ಗುರುತಿಸಿ ಶಾಸ್ತ್ರೀಯವಾಗಿ ಪರಿಷ್ಕರಣ ಮಾಡಿದ್ದಾರೆ.

೩.೨.೩.೩. ಮಾಹಾತ್ಮ್ಯಗಳು

೩.೨.೩.೩.೧. ಬಸವಕವಿ ವಿರಚಿತ ಸಿದ್ಧಲಿಂಗ ಕಾವ್ಯ ಮತ್ತು ಸದಾಶಿವ ಕವಿ ವಿರಚಿತ ಮಹಾಕೂಟ ಮಾಹಾತ್ಮ್ಯೆ

ಈ ಕೃತಿಯನ್ನು ವೈ.ಸಿ.ಭಾನುಮತಿ ಅವರು ಸಂಪಾದಿಸಿ ೨೦೦೬ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಎರಡು ಕಾವ್ಯಗಳಿವೆ. ಒಂದು 'ಸಿದ್ಧಲಿಂಗ ಕಾವ್ಯ' ಈ ಕಾವ್ಯ ಸೂಳೆಕೆರೆಯ ವೃತ್ತಾಂತವನ್ನು ತಿಳಿಸಿದರೆ ಎರಡನೆಯ ಕಾವ್ಯ 'ಮಹಾಕೂಟ ಮಹಾತ್ಮೆ' ಮಹಾಕೂಟ ಕ್ಷೇತ್ರದ ಬಗ್ಗೆ ಮಾಹಿತಿಯನ್ನು ತಿಳಿಸುತ್ತದೆ. 'ಸಿದ್ಧಲಿಂಗ ಕಾವ್ಯದ' ಕರ್ತೃ 'ಬಸವಕವಿ' ಈತನ ಕಾಲ ಕ್ರಿ.ಶ. ೧೮೮೨. ಈ ಕೃತಿ ವಾರ್ಧಕ ಷಟ್ಪದಿಯಲ್ಲಿ ರಚನೆಗೊಂಡಿದೆ. ಈ ಕಾವ್ಯದಲ್ಲಿ ೧೫ ಸಂಧಿ ೪೩೮ ಪದ್ಯಗಳಿವೆ. ಕವಿ ತನ್ನ ಕೃತಿಯನ್ನು 'ಸಿದ್ಧಲಿಂಗೇಂದ್ರ ಕಾವ್ಯ' ಎಂದು ಕರೆದಿದ್ದಾನೆ. ಈ ಕೃತಿಯು ಸೂಳೆಕೆರೆಯ ವೃತ್ತಾಂತದಿಂದಾಗಿ ಐತಿಹಾಸಿಕ ಸ್ಥಾನ ಪಡೆದಿದೆ.

ಜಾನಪದ ಐತಿಹ್ಯಗಳಿಂದ ಈ ಕೃತಿ ಪ್ರೇರಣೆ ಪಡೆದಿರಬಹುದೆಂದು ಸಂಪಾದಕರು ಊಹಿಸಿದ್ದಾರೆ.

ಮಹಾಕೂಟ ಮಾಹಾತ್ಮ್ಯದ ಕರ್ತೃ 'ಸದಾಶಿವ'. ಈತನ ಕಾಲ ಕ್ರಿ.ಶ. ೧೮೦೫, ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಮಹಾಕೂಟವನ್ನು ಆಧಾರವಾಗಿಟ್ಟುಕೊಂಡು 'ಭಾಮಿನಿ ಷಟ್ಪದಿಯಲ್ಲಿ' ಕೃತಿಯನ್ನು ರಚಿಸಲಾಗಿದೆ. ಇದರಲ್ಲಿ ೭ ಸಂಧಿ, ೪೨೮ ಪದ್ಯಗಳಿವೆ. ಇಲ್ಲಿ ಬರುವ ತೀರ್ಥಗಳು ಹಾಗೂ ಲಿಂಗಗಳ ಮಹತ್ವವನ್ನು ತಿಳಿಸುವಾಗ ಅನೇಕ ಪೌರಾಣಿಕ ಕಥೆಗಳನ್ನು ಬಳಸಿಕೊಂಡಿರುವುದನ್ನು ಗಮನಿಸಬಹುದಾಗಿದೆ. ಸಿದ್ಧಲಿಂಗ ಕಾವ್ಯವನ್ನು ಏಕೈಕ ಹಸ್ತಪ್ರತಿಯಿಂದ ಪರಿಷ್ಕರಿಸಿದ್ದಾರೆ "ಮಹಾಕೂಟ ಮಾಹಾತ್ಮ್ಯ ಎಂಬ ಶೀರ್ಷಿಕೆಯು ಕೃತಿಯಲ್ಲಿ ಕವಿ ಇಟ್ಟ ಹೆಸರಲ್ಲಿ ಕಾವ್ಯದಲ್ಲಿ ಮಹಾಕೂಟದ ಮಹತ್ವ (೭-೮೫) ಭಾಗದಲ್ಲಿ ಮಹಾಕೂಟದ ಚರಿತ್ರೆ ಎಂಬ ಉಪಶೀರ್ಷಿಕೆಗಳು ಕಂಡುಬಂದಿದ್ದರಿಂದ ಇತರ ಕೃತಿಗಳ ಆಧಾರದ ಮೇಲೆ ಪ್ರಸ್ತುತ ಕೃತಿಗೆ ಮಹಾಕೂಟದ ಮಾಹಾತ್ಮ್ಯ ಎಂಬ ಶೀರ್ಷಿಕೆಯನ್ನು ಸಂಪಾದಕರು ಇಟ್ಟಿದ್ದಾರೆ."[೨] ಈ ಎರಡು ಕಾವ್ಯದಲ್ಲಿ ಕವಿಗಳು ತಮ್ಮ ತಮ್ಮ ಆಯ್ಕೆಯ ತೀರ್ಥ ಕ್ಷೇತ್ರದ ಬಗ್ಗೆ ಜನರಲ್ಲಿ ಸದ್ಭಾವನೆ ಮೂಡುವಂತೆ ಕೃತಿ ರಚಿಸುವಲ್ಲಿ ಸಫಲರಾಗಿದ್ದಾರೆ ಎಂದು ಸಂಪಾದಕರು ಗುರುತಿಸಿದ್ದಾರೆ. ಈ ಕೃತಿಗಳು ಕನ್ನಡ ದಾಖಲು ಸಾಹಿತ್ಯ ಪ್ರಕಾರದಲ್ಲಿಯೂ ಸೇರಬಲ್ಲವಾಗಿರುವುದನ್ನು ಗುರುತಿಸಲಾಗಿದೆ. ಕೃತಿಯ ಕೊನೆಯಲ್ಲಿ ಪದ್ಯಗಳ ಅಕಾರಾದಿ ಕೊಡಲಾಗಿದೆ. ಚಾರಿತ್ರಿಕವಾಗಿ ಅಧ್ಯಯನ ಮಾಡಲು ಉಪಯುಕ್ತವಾದ ಮಾಹಿತಿಯನ್ನು ಪ್ರಸ್ತಾವನೆಯಲ್ಲಿ ಸಂಪಾದಕರು ವಿವರಿಸಿದ್ದಾರೆ.

೩.೨.೩.೪. ಹಾಡುಗಳು/ ಸ್ವರವಚನ

೩.೨.೩.೪.೧. ವಚನ ಸಂಕಲನ ಸಂಪುಟ ೫

ಪ್ರಸ್ತುತ ಕೃತಿಯನ್ನು ಸಂಪಾದಿಸಿ ವೈ.ಸಿ. ಭಾನುಮತಿ ಅವರು ೧೯೯೨ರಲ್ಲಿ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಗದಗದಿಂದ ಪ್ರಕಟಿಸಿದ್ದಾರೆ. ಈ ಕೃತಿಯನ್ನು ಐದು ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಿದ್ದಾರೆ. ಸಂಕೀರ್ಣ ಸ್ವರೂಪದ ಸಂಪುಟವಾದ ಇದರಲ್ಲಿ ಅಜ್ಞಾತವಾಗಿ ಉಳಿದ ಸಂಕಲನಕಾರರ ವಚನಗಳು ಇವೆ. ಅವುಗಳೆಂದರೆ 'ಸಿದ್ಧಲಿಂಗ ಸೂತ್ರ' 'ಶಿಖಾಚಕ್ರ' 'ದೀಕ್ಷಾ ವಿಧಾನ' ನಾಲ್ಕು ಕಿರುಕೃತಿಗಳಿವೆ. ಇದರಲ್ಲಿ ಒಟ್ಟು ೧೫೬ ವಚನಗಳಿವೆ. ಈ ಕೃತಿಯನ್ನು ಅಕ್ಷರ ಸ್ಫುಟವಾಗಿರುವ ಕಾಗದ ಪ್ರತಿಯಿಂದ ಪರಿಷ್ಕರಿಸಿದ್ದಾರೆ. 'ಸಿದ್ಧಲಿಂಗ ಸೂತ್ರವನ್ನು' ಎರಡು ಹಸ್ತಪ್ರತಿಗಳ ನೆರವಿನಿಂದ ಪರಿಷ್ಕರಿಸಿದ್ದಾರೆ. 'ಲಿಂಗಾಂಗ ಸಮರಸದ ಲಿಂಗಸ್ತೋತ್ರದ ವಚನ' 'ಶಿಖಾಚಕ್ರ' 'ದೀಕ್ಷಾವಿಧಾನಗಳು' ಒಂದೊಂದು ಹಸ್ತಪ್ರತಿಯನ್ನು ಆಧರಿಸಿವೆ. ಕೆಲವು ವಚನಕಾರರ ಅಚ್ಚಾದ ವಚನ ಕೃತಿಗಳನ್ನು ಗುರುತಿಸಿದ್ದು ಪಾಠಭೇದಗಳು ಕಂಡು ಬಂದರೂ ಹಸ್ತಪ್ರತಿಯ ಪಾಠಗಳನ್ನೇ ಇಟ್ಟುಕೊಂಡು ಭಾಷಿಕ ದೋಷಗಳನ್ನು ಸರಿಪಡಿಸುವುದರ ಮೂಲಕ ಪರಿಷ್ಕರಿಸಲಾಗಿದೆ.

ಈ ಸಂಪುಟದಲ್ಲಿ ನಾಲ್ಕು ಕೃತಿಗಳ ಚರ್ಚೆ ಹನ್ನೊಂದು ಪುಟದಷ್ಟು ಪ್ರಸ್ತಾವನೆಯಲ್ಲಿದೆ. ಅಜ್ಞಾತ ಸಂಕಲನಕಾರರ 'ವಚನಗಳು' ೧೨ರಿಂದ ೧೫ನೆಯ ಶತಮಾನದವಾಗಿದ್ದು ಇದು ಹದಿನಾರನೆಯ

ಶತಮಾನದಿಂದ ಈಚೆಗೆ ರೂಪುಗೊಂಡ ಸಂಕಲನ ಎಂದು ಸಂಪಾದಕರು ಗುರುತಿಸಿದ್ದಾರೆ. ಇದರಲ್ಲಿ 'ಒಂದು ನೂರು' ವಚನಗಳು ಒಂದು ಸ್ತುತಿ ಹಾಗೂ ಕೆಲವು ಶ್ಲೋಕಗಳಿವೆ. ಕೆಲವು ಹೊಸ ವಚನಗಳು ಕೃತಿಯ ಮೌಲ್ಯವನ್ನು ಹೆಚ್ಚಿಸಿವೆ. ಸಿದ್ಧಲಿಂಗ ಸೂತ್ರದ ವಸ್ತು ಶಾಂಭವಯೋಗಕ್ಕೆ ಸಂಬಂಧಿಸಿದೆ. 'ಶಿಖಾಚಕ್ರದ' ವಸ್ತು ಕೂಡ ವೀರಶೈವಯೋಗಕ್ಕೆ ಸೇರಿದುದಾಗಿದೆ. ಪ್ರಸ್ತುತ ಶಿಖಾಚಕ್ರದಲ್ಲಿ ೧೨ ವಚನಗಳಿವೆ. ಇವುಗಳ ಅಂಕಿತ ಕೂಡಲ ಚೆನ್ನಸಂಗಮದೇವ ಈ ಅಂಕಿತದ ಬಗೆಗೆ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ ಎನ್ನುವುದನ್ನು ಸಂಪಾದಕರು ಗುರುತಿಸಿದ್ದಾರೆ.

ಕಡೆಯದಾಗಿ 'ದೀಕ್ಷಾವಿಧಾನದ' ಕರ್ತೃ ಕೂಡಲ ಚೆನ್ನಸಂಗಯ್ಯ ಅಂಕಿತವಿರುವುದರಿಂದ ಇವನು ಚೆನ್ನಬಸವಣ್ಣ ಎಂದು ತಿಳಿದು ಬರುತ್ತದೆ ಎಂದು ಸಂಪಾದಕರು ಗುರುತಿಸಿದ್ದಾರೆ. ಹಾಗೆಯೇ ವೀರಶೈವರಲ್ಲಿ ದೀಕ್ಷೆಗೆ ಇರುವ ಮಹತ್ವವನ್ನು ದೀಕ್ಷಾ ವಿಧಾನ ತಿಳಿಸುತ್ತದೆ. ಒಟ್ಟಾರೆ ಈ ಸಂಪುಟದ ಕೃತಿಗಳು ಸಾಧಕನಿಗೆ ಅವಶ್ಯಕವಾದ ಗುಣಕರ್ಮಗಳನ್ನು ಪ್ರತಿಪಾದಿಸಿವೆ. ಶರಣನು ಆಧ್ಯಾತ್ಮ ಸೋಪಾನವೇರಿ ಮೋಕ್ಷ ಸಾಧಿಸಲು ಈ ಬಗೆಯ ಕೃತಿಗಳು ಅಗತ್ಯವಾಗುತ್ತವೆ ಎಂದಿದ್ದಾರೆ. ವಚನಗಳ ಅಕಾರಾದಿ ಅಂಕಿತಸೂಚಿ ಗುರುತಿಸಿ ಶಾಸ್ತ್ರೀಯವಾಗಿ ಸಂಪಾದಿಸಿದ್ದಾರೆ.

೩.೨.೩.೪.೨. ಸ್ವರವಚನ ಸಂಪುಟ ೪

ವೈ.ಸಿ. ಭಾನುಮತಿ ಅವರು ಈ ಸಂಪುಟವನ್ನು ಸಂಪಾದಿಸಿ ೧೯೯೫ರಲ್ಲಿ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಸ್ವರವಚನ ಸಾಹಿತ್ಯ ಮಾಲೆಯಿಂದ ಪ್ರಕಟಿಸಿದ್ದಾರೆ. ಹಸ್ತಪ್ರತಿಗಳ ವಿವರ ಹೀಗಿದೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿ ಹತ್ತು ತಾಳೆಗರಿ ಪ್ರತಿಗಳು, ನಾಲ್ಕು ಕಾಗದ ಪ್ರತಿಗಳು ದೊರಕಿದರೂ ಸಮ್ಮಿಶ್ರ ಸ್ವರವಚನ ಸಂಪುಟವಾಗಿದ್ದರಿಂದ ಏಕೈಕ ಹಸ್ತಪ್ರತಿಗಳ ನೆರವಿನಿಂದ ಪರಿಷ್ಕರಿಸಿದ್ದಾರೆ. ಈ ಸಂಪುಟದಲ್ಲಿ ಸುಮಾರು ೭೦ ಮಂದಿ ಸ್ವರವಚನಕಾರರ ೨೪೮ ಹಾಡುಗಳು ಇವೆ. ಕೆಲವು ಸ್ವರವಚನಗಳ ಕರ್ತೃಗಳು ಅಜ್ಞಾತವಾಗಿ ಉಳಿದಿದ್ದಾರೆ. ಇವರು ವಿವಿಧ ಕಾಲ, ದೇಶಗಳ ಹಿನ್ನೆಲೆಯಿಂದ ಬಂದಂಥವರು, ಅಲ್ಲಮಪ್ರಭುವಿನ 'ಗುಹೇಶ್ವರ' ಅಂಕಿತ ಹಾಡಿನಿಂದ ಹಿಡಿದು 'ಗುರುಸಿದ್ಧ' ಅಂಕಿತ ಹಾಡಿನ ವರೆಗೆ ಅಂದರೆ ಹನ್ನೆರಡನೆ ಶತಮಾನದಿಂದ ೧೯ನೇ ಶತಮಾನದ ವರೆಗಿನ ವಿವಿಧ ಕಾಲಘಟ್ಟದ ಕವಿಗಳ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ.

ಸ್ವರವಚನದಲ್ಲಿ ಹೆಣ್ಣನ್ನು ಚಂದ್ರೋದಯ, ಕೋಗಿಲೆಯ ಇನಿದನಿ ಎಂದು ಸಂಭೋದಿಸಲಾಗಿದೆ. ಇವೇ ಮುಂತಾದ ಸಂಗತಿಗಳು ಭಕ್ತನ ಮನವನ್ನು ಕಲುಷಿತಗೊಳಿಸುವಂತವು. ಅಂಥವನ್ನು ಮೀರಿನಿಂತ ಕೈವಲ್ಯವೇ ಪರಮ ಧ್ಯೇಯವಾಗಿರುವ ಜೀವದ ಚಡಪಡಿಕೆಯ ಇಲ್ಲಿನ ಹಾಡುಗಳಲ್ಲಿ ವ್ಯಕ್ತವಾಗಿದೆ. ಒಟ್ಟಿನಲ್ಲಿ ಈ ಸಂಪುಟದಲ್ಲಿನ ಸ್ವರವಚನಗಳು ವೈವಿಧ್ಯಮಯವಾಗಿವೆ. ತ್ರಿಪದಿ, ಚೌಪದಿ, ಷಟ್ಪದಿ, ಅಕ್ಕರಿಕೆ, ಏಳೆ ಮೊದಲಾದ ದೇಸೀ ಛಂದಸ್ಸು ಇಲ್ಲಿ ಬಳಕೆಯಾಗಿದೆ. ಗಣ ಪಲ್ಲಟ, ಛಂದೋಭಂಗ ಅಂಶಗಳ ನ್ಯೂನತೆ ಅಲ್ಲಲ್ಲಿ ಕಂಡು ಬಂದಿರುವುದನ್ನು ಸಂಪಾದಕರು ಸೂಕ್ಷ್ಮವಾಗಿ ಗುರುತಿಸಿದ್ದಾರೆ. "ಹಾಗೇ ಸ್ವರ ವಚನಗಳ ಶೈಲಿ ಸರಳವಾಗಿದೆ. ಸುಲಭ ಗ್ರಾಹ್ಯವಾಗಿದೆ. ಉಪಮಾಲಂಕಾರ

ರೂಪಕಾಲಂಕಾರಗಳು ತೀರ ವಿರಳವಾಗಿ ಗೋಚರಿಸುತ್ತವೆ. ಈ ಸಂಪುಟದ 'ಕೆಲವು ಸ್ವರ ವಚನಕಾರರು' ಸಮರ್ಥವಾದ ಕಾವ್ಯಗಳನ್ನು ರಚಿಸಿದವರಾಗಿದ್ದು. ಈ ಕ್ಷೇತ್ರದಲ್ಲಿ ಸಾಪಲ್ಯ ಪಡೆದಿದ್ದರೂ ಅವರ ಸ್ವರವಚನಗಳು ಕಾವ್ಯದ ಎದುರಿನಲ್ಲಿ ನೀರಸವಾಗಿ ಕಂಡು ಬರುತ್ತವೆ"[೬೩] ಎಂದು ಗುರುತಿಸಿದ್ದಾರೆ.

ಸುಮಾರು ಇಪ್ಪತ್ತು ಪುಟಗಳಷ್ಟು ಪ್ರಸ್ತಾವನೆಯಲ್ಲಿ ಸ್ವರವಚನಗಳನ್ನು ಕುರಿತು ಚರ್ಚೆಯನ್ನು ಮಾಡಿದ್ದಾರೆ. ಶಿವನ ಪಂಚವಿಂಶತಿ ಲೀಲೆಗಳನ್ನು ತಿಳಿಸುವ ಸಮಾಜಕ್ಕೆ ನೀತಿ ರೂಪಿಸುವ ಸ್ವರವಚನಗಳಿವೆ. ಶೈಲಿ ಅಲಂಕಾರಗಳ ವಿಶ್ಲೇಷಣೆಯೊಂದಿಗೆ ಮತ್ತು ವಸ್ತು ವಿನ್ಯಾಸದಿಂದ ಅನುಭಾವ ಸಾಹಿತ್ಯವನ್ನು ಸಮೃದ್ಧಗೊಳಿಸಿವೆ ಎಂದಿದ್ದಾರೆ. ಪಲ್ಲವಿಗಳ ಅಕಾರಾದಿ, ಅಂಕಿತ ಸೂಚಿ, ಸ್ಥಳನಾಮಸೂಚಿ, ವ್ಯಕ್ತಿನಾಮ ಸೂಚಿ, ರಾಗ ಸೂಚಿಗಳು ಉಪಯುಕ್ತವಾಗಿವೆ. ಕಾಲಗರ್ಭದಲ್ಲಿ ಅಡಗಿ ಹೋಗಿದ್ದ ಹಲವಾರು ಸ್ವರವಚನಗಳು, ಸ್ವರವಚನಕಾರರು ಈಗ ಬೆಳಕು ಕಾಣುತ್ತಿರುವುದು ಈ ಪರಿಷ್ಕರಣದ ಹೆಗ್ಗಳಿಕೆ ಎನ್ನುತ್ತಾರೆ ಸಂಪಾದಕರು.

೩.೨.೩.೪.೩. ಸ್ವರವಚನ ಸಂಪುಟ ೧೦

ಕೃತಿಯನ್ನು ವೈ.ಸಿ. ಭಾನುಮತಿ ಅವರು ಸಂಪಾದಿಸಿ ೧೯೯೮ರಲ್ಲಿ ಮೈಸೂರಿನ ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥ ಮಾಲೆಯಿಂದ ಪ್ರಕಟಿಸಿದ್ದಾರೆ. ಇದೊಂದು ಸಮ್ಮಿಶ್ರ ಸಂಪುಟ ಏಕೈಕ ಆಕರವುಳ್ಳ ಮಿಶ್ರವಚನಗಳನ್ನು ಇಲ್ಲಿ ಪರಿಷ್ಕರಿಸಲಾಗಿದೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದ ೨೨ ಹಸ್ತಪ್ರತಿಗಳನ್ನು ಬಳಸಿಕೊಳ್ಳಲಾಗಿದೆ. ಒಂಬತ್ತು ಕಾಗದ ಪ್ರತಿಗಳನ್ನು ಸಹ ಬಳಸಿಕೊಳ್ಳಲಾಗಿದೆ. ಲಿಪಿಕಾರರ ಅಕ್ಷರ ಸ್ಖಾಲಿತ್ಯ ಛಂದೋಭಂಗ ತ್ರುಟಿತಗಳು ಹೆಚ್ಚಾಗಿದ್ದು ಪರಿಷ್ಕರಣದಲ್ಲಿ ಹೆಚ್ಚು ಸಮಸ್ಯೆಗಳು ತಲೆದೋರಿದವು ಎಂದು ಸಂಪಾದರು ತಿಳಿಸುತ್ತಾರೆ.

ಸ್ವರವಚನ ಸಂಪುಟ ೬೧ ಪುಟಗಳನ್ನೊಳಗೊಂಡಿದ್ದು ಇದರಲ್ಲಿ ಸುಮಾರು ೪೦ ಸ್ವರವಚನಕಾರರ ೧೧೦ ಹಾಡುಗಳಿವೆ. ಅನುಬಂಧದಲ್ಲಿ ಅನ್ಯಭಾಷೆಯ ಮೂರು ಸ್ವರವಚನಗಳಿವೆ. ಹದಿನಾಲ್ಕು ಪುಟ ಪೀಠಿಕೆಯಲ್ಲಿ ಈ ಹಾಡುಗಳನ್ನು ಸ್ವರ, ಪದಗಳು, ಉದಯರಾಗ, ಸೋಬಾನ, ಉಯ್ಯಾಲೆ ಪದ, ಆರತಿ ಪದ ಎಂದು ಸ್ಥೂಲವಾಗಿ ವಿಂಗಡಿಸಿದ್ದಾರೆ. ಇಲ್ಲಿನ ವಸ್ತು ಪ್ರಧಾನವಾಗಿ ವೀರಶೈವಯೋಗ, ಶಿವ ಪಾರಮ್ಯ, ಶಿವಸ್ತುತಿ, ತೀರ ಕ್ವಚಿತ್ತಾಗಿ ನೀತಿ ಹಾಗೂ ಸಮಕಾಲೀನ ಸಂಗತಿಗಳನ್ನು ತಿಳಿಸಿದ್ದಾರೆ. ಈ ಸಂಪುಟದ ಹಾಡುಗಳೆಲ್ಲವೂ ಇದೇ ಮೊದಲ ಬಾರಿಗೆ ಪ್ರಕಟ ಆಗುತ್ತಿರುವುದರಿಂದ ಇಲ್ಲಿನ ಬಹಳಷ್ಟು ಹಾಡುಗಳ ಕರ್ತೃ ಕಾಲ ವಿಚಾರಗಳು ಅಸ್ಪಷ್ಟವಾಗಿವೆ. 'ಗುರುವೃಷಭ' 'ಗುರುಸಿದ್ಧ ವೃಷಭ' ಅಂಕಿತದ ಚರ್ಚೆ ಕುರಿತಂತೆ ಹಾಗೂ ಶಾಂತಯ್ಯ ರಚಿಸಿದ ಹನ್ನೊಂದು ಹಾಡುಗಳು ಮೊದಲ ಬಾರಿಗೆ ಈ ಸಂಪುಟದಲ್ಲಿ ಸೇರ್ಪಡೆಯಾಗಿವೆ. 'ಸಿದ್ಧವೀರಣ್ಣೊಡೆಯ' 'ಗುಹೇಶ್ವರ' ಅಂಕಿತದ ಮೂರು ಹಾಡುಗಳ ಕುರಿತು ಚರ್ಚೆಯಿದೆ. ಪ್ರಾದೇಶಿಕ ವೈಶಿಷ್ಟ್ಯದ ಸ್ವರವಚನಗಳನ್ನು ಒಂದೇ ಮಾನದಂಡದಿಂದ ಅಳೆಯಲಾಗುವುದಿಲ್ಲ ಎಂದು ಸಂಪಾದಕರು ಹೇಳುತ್ತಾರೆ. ಜಾನಪದ ಲಯ ಛಂದಸ್ಸು ಸಮರ್ಥವಾಗಿ ನಿರ್ವಹಿಸಲಾಗಿದ್ದು ೧೨ ಹಾಡುಗಳಿಗೆ ಅಂಕಿತವಿಲ್ಲದಿದ್ದರೂ

ಪಲ್ಲವಿ, ನುಡಿ, ಇದ್ದು ವೀರಶೈವ ಪರವಾಗಿರುವುದರಿಂದ ಸ್ವರವಚನಗಳ ಸಾಲಿನಲ್ಲಿ ಸ್ಥಾನ ಕಲ್ಪಿಸಿರುವುದನ್ನು ತಿಳಿಸುತ್ತಾರೆ. ಅನುಬಂಧದಲ್ಲಿ ನೀಡಿರುವ ಆಕರಸೂಚಿ, ಅಂಕಿತಸೂಚಿ, ಪಲ್ಲವಿಗಳ ಅಕಾರಾದಿ ಅಭ್ಯಾಸಗಳಿಗೆ ಹೆಚ್ಚು ಉಪಯುಕ್ತವಾಗಿವೆ.

೩.೨.೩.೪.೪. ಕವಿಲಿಂಗನ ಪದಗಳು

ಕೃತಿಯನ್ನು ಸಂಪಾದಿಸಿ ವೈ.ಸಿ. ಭಾನುಮತಿ ಅವರು ೧೯೯೮ ರಲ್ಲಿ ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟಾದಾರ್ಯ ಸಂಸ್ಥಾನ ಮಠದಿಂದ ಪ್ರಕಟಿಸಿದ್ದಾರೆ. ಏಕೈಕ ಹಸ್ತಪ್ರತಿಯ ನೆರವಿನಿಂದ ಪರಿಷ್ಕರಿಸಿದ್ದಾರೆ. ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿರುವ ಈ ಹಸ್ತಪ್ರತಿಯ ಬರಹದಿಂದ ೧೯೪೯ರಲ್ಲಿ ಕೆ. ಶ್ರೀನಿವಾಸಾಚಾರ್ಯ ಅವರು ಗ್ರಂಥ ಸಂರಕ್ಷಣೆಯ ದೃಷ್ಟಿಯಿಂದ ಇವನ್ನು ಪ್ರತಿ ಮಾಡಿದ್ದರೆಂದು ತಿಳಿದುಬರುತ್ತದೆ. ಇದರ ಮೂಲಪ್ರತಿ ಓಲೆಪ್ರತಿಯಾಗಿದ್ದು ಅಲ್ಲಲ್ಲಿ ಹುಳು ಹಿಡಿದು ಗ್ರಂಥ ಲುಪ್ತವಾಗಿದೆ. ಆದುದರಿಂದ ಅದರ ನಕಲು ಪ್ರತಿಯಲ್ಲಿಯೂ ಅಲ್ಲಲ್ಲಿ ಗ್ರಂಥಪಾತವಾಗಿದೆ. ಇಲ್ಲಿನ ಪಾಠಗಳು ಅಶುದ್ಧವಾಗಿವೆ. ಅನುಬಂಧದಲ್ಲಿಯ ಏಳು ಹಾಡುಗಳ ಪೈಕಿ ಮೊದಲನೆಯ ಹಾಡನ್ನು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಯಿಂದ ೨ರಿಂದ ೭ರವರೆಗಿನ ಹಾಡುಗಳನ್ನು ಎಸ್. ಉಮಾಪತಿ ಅವರು ಸಂಪಾದಿಸಿ ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯಮಠ ಇವರಿಂದ ಪ್ರಕಟಿಸಲ್ಪಟ್ಟ ಸ್ವರವಚನವಾಹಿನಿ ಎಂಬ ಸಂಪುಟದಿಂದ ಆಯ್ದುಕೊಳ್ಳಲಾಗಿದೆ. ಮೊದಲ ಬಾರಿಗೆ ಕವಿಲಿಂಗನ ಲಭ್ಯವಿರುವ ಹಾಡುಗಳೆಲ್ಲ ಒಂದೇ ಸಂಪುಟದಲ್ಲಿ ಪ್ರಕಟಿಸಿದ ಕೀರ್ತಿ ವೈ.ಸಿ.ಭಾನುಮತಿ ಅವರಿಗೆ ಸಲ್ಲುತ್ತದೆ.

ಪ್ರಸ್ತಾವನೆಯು ಹದಿನೈದು ಪುಟಗಳಲ್ಲಿದ್ದು ಕವಿ ಕಾಲದ ಬಗ್ಗೆ ಚರ್ಚಿಸುತ್ತಾ ಸಾಳ್ವ ನರಸಿಂಗನು ಕ್ರಿ.ಶ.೧೪೮೭-೯೭ರ ಅವಧಿಯಲ್ಲಿ ಅಧಿಕಾರದಲ್ಲಿದ್ದ ಕವಿಲಿಂಗನು ಈತನ ಆಸ್ಥಾನ ಕವಿಯಾಗಿದ್ದಿರ ಬಹುದು. ಈತ ವೀರಶೈವ ಕವಿ, ಈತನ ಆರಾಧ್ಯ ದೈವ ಮತ್ತು ಅಂಕಿತ 'ಕಪಿನಿ ನಂಜುಂಡಲಿಂಗ' ಈ ಅಂಕಿತದ ಆಧಾರದಿಂದ ಈತನ ಸ್ಥಳ ಮೈಸೂರು ಜಿಲ್ಲೆಯ ನಂಜನಗೂಡು ಎಂದು ಸಂಪಾದಕರು ಉಲ್ಲೇಖಿಸಿದ್ದಾರೆ. ಹಾಗೆಯೇ ಈತನ ಮೂರು ಕೃತಿಗಳು ಉಪಲಬ್ಧವಿವೆ. ಅವುಗಳೆಂದರೆ 'ನಂಜುಂಡೇಶ್ವರನ ಜಾತ್ರೆಯ ತಾರಾವಳಿ' 'ಲಿಂಗಾಂಗ ಸಮರಸದ ಪಾರಿಜಾತ' ಮತ್ತು ಹಾಡುಗಳು ಮೊದಲ ಎರಡು ಹಾಡುಗಳು ಅತ್ಯಂತ ಕಿರಿಯವಾಗಿವೆ. ಈ ಹಾಡುಗಳಿಗೆ ಕವಿಲಿಂಗನ ಪದಗಳು, ಹಾಡುಗಳು, ಜಾವಳಿಗಳು ಎಂಬ ಪರ್ಯಾಯ ನಾಮಗಳಿವೆ. ಪ್ರಸ್ತುತ ಸಂಪುಟದಲ್ಲಿ ಈತನ ೧೧೮ ಹಾಡುಗಳಿವೆ. ಹೊಸ ಹಸ್ತಪ್ರತಿಗಳು ದೊರಕಿದಂತೆಲ್ಲ ಇವುಗಳ ಸಂಖ್ಯೆ ಹೆಚ್ಚಾಗಬಹುದು ಎಂದಿದ್ದಾರೆ. ಕವಿಲಿಂಗನ ಹಾಡು ಅಥವಾ ಪದಗಳ ಸ್ವರೂಪ ಕೆಲವೆಡೆ ವಿಶಿಷ್ಟವಾದುದು. ಪಲ್ಲವಿ ಮತ್ತು ನುಡಿಗಳಿಂದ ಕೂಡಿದ ಹಾಡು, ಅನಂತರ ವೃತ್ತ ಅಥವಾ ಕಂದ ಪದ್ಯಗಳು ಬಂದಿವೆ. ಕೆಲವು ವೃತ್ತಗಳು ೫ ಪಾದಗಳಿವೆ. ಪ್ರತಿಯೊಂದು ಹಾಡಿಗೂ ರಾಗವನ್ನು ಸೂಚಿಸಲಾಗಿದೆ. ಕವಿಲಿಂಗ ತನ್ನ

ಹಾಡುಗಳಿಗೆ ಆಕರ ನೀಡಿಲ್ಲ. ಆದರೆ ವಚನ ಮತ್ತು ಕೀರ್ತನೆಗಳಿಂದ ತನ್ನ ಕೃತಿಗೆ ಪ್ರೇರಣೆ ಪಡೆದಿರಬಹುದು ಎಂದು ಸಂಪಾದಕರು ಊಹಿಸುತ್ತಾರೆ. ಇಲ್ಲಿನ ಹಾಡುಗಳು ವಸ್ತು ಶೃಂಗಾರ ರಸ ಪ್ರತಿಪಾದನೆ. ಸಂಭೋಗ ಮತ್ತು ವಿಪ್ರಲಂಭ ಈ ಎರಡೂ ಬಗೆಯ ಶೃಂಗಾರ ಇಲ್ಲಿ ನಿರೂಪಿತವಾಗಿವೆ. ಚಂದಮಾಮ ಹಾಡಿನ ರೂಪ ವಚನ ಹಾಗೂ ಸವಾಲು ಜವಾಬು ಮಾದರಿ ಹಾಡುಗಳು ಹೆಣ್ಣು-ಗಂಡಿನ ಚಿತ್ರ ವೃತ್ತಿಯ ಬಗೆಬಗೆಯ ಚಿತ್ರಗಳು, ನರಸಿಂಗನ ಪರಾಕ್ರಮ, ವಿರಹದ ಹತ್ತು ಅವಸ್ಥೆಗಳು ನೀತಿ ಸಂಹಿತೆಯ ಮಾತುಗಳು ಹೀಗೆ ಹಾಡುಗಳು ಶಿಲ್ಪದಲ್ಲಿ ವೈವಿಧ್ಯತೆಯನ್ನು ಕುರಿತು ವಿವರಿಸುತ್ತಾರೆ. ಇಲ್ಲಿನ ಹಾಡುಗಳಲ್ಲಿ ಒಂದು ಬಗೆಯ ಏಕಸೂತ್ರತೆ ಕಂಡುಬರುತ್ತವೆ. ಒಟ್ಟಿನಲ್ಲಿ ಕವಿಲಿಂಗ ರಸಿಕ ವಿದ್ವಜ್ಜನರ ಮೆಚ್ಚಿಗೆಗೆ ಪಾತ್ರನಾದ ಒಬ್ಬ ಸತ್ಕವಿ. ಮಧುರಭಾವವನ್ನು ಎಷ್ಟು ವೈವಿಧ್ಯಮಯವಾಗಿ ಆಕರ್ಷಕವಾಗಿ ನಿರೂಪಿಸಬಹುದೆಂಬುದಕ್ಕೆ ಈತನ ಹಾಡುಗಳು ಮಾದರಿ ಆಗಿವೆ. ಅನುಬಂಧದಲ್ಲಿ ಹೆಚ್ಚಿನ ಪದ್ಯಗಳು ಹಾಗೂ ಪದ್ಯ ಆಕಾರಾದಿ ಉಪಯುಕ್ತವಾಗಿವೆ. ಸಂಗೀತಶಾಸ್ತ್ರ ಮತ್ತು ಚರಿತ್ರೆಗೆ ಸಂಬಂಧಿಸಿದಂತೆ ಅಧ್ಯಯನ ಮಾಡುವವರಿಗೆ ಉತ್ತಮವಾದ ಮಾಹಿತಿಯನ್ನು ಈ ಕೃತಿ ಒದಗಿಸುತ್ತದೆ.

೩.೨.೩.೪.೫. ಅಕಾರಾದಿ ನಿಘಂಟು ಮತ್ತು ವೈದ್ಯ ನಿಘಂಟು

ಭಾನುಮತಿ ಅವರ ಪ್ರಸ್ತುತ ಕೃತಿಯು ೨೦೧೧ರಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರಿನಿಂದ ಪ್ರಕಟವಾಗಿದೆ. 'ಅಕಾರಾದಿ ನಿಘಂಟು' ಮತ್ತು 'ವೈದ್ಯ ನಿಘಂಟು' ಏಕೈಕ ಹಸ್ತಪ್ರತಿಯನ್ನಾಧರಿಸಿ ಪರಿಷ್ಕರಿಸಿದ್ದಾರೆ. ಇಂಥದೊಂದು ನಿಘಂಟನ್ನು ಸಂಪಾದಿಸುವುದು ಸವಾಲಿನ ಕಾರ್ಯವೇ ಆಗಿದೆ. ಆರ್. ನರಸಿಂಹಾಚಾರ್ ಅವರು ಕರ್ನಾಟಕ ಕವಿ ಚರಿತೆಯ ಪ್ರಥಮ ಸಂಪುಟದಲ್ಲಿ ಅಮೃತನಂದಿ ಎಂಬ ಕವಿಯನ್ನು ನಮೂದಿಸಿ ಇವನು ಅಕಾರಾದಿ ವೈದ್ಯ ನಿಘಂಟನ್ನು ಬರೆದಿದ್ದಾನೆ. ಈತನು ಜೈನ ಕವಿ, ಕಾಲ ಸುಮಾರು ೧೩೦೦ ಇದ್ದಿರಬಹುದೆಂದು ತೋರುತ್ತದೆ. ಕವಿ ಚರಿತೆಕಾರರು ಉಲ್ಲೇಖಿಸಿದ ಕಾಲವನ್ನೇ ಸಂಪಾದನೆಯ ಸಂದರ್ಭದಲ್ಲಿ ಸ್ವೀಕರಿಸಿದ್ದಾರೆ.

ಪ್ರಸ್ತುತ ಅಕಾರಾದಿ ನಿಘಂಟು ಮತ್ತು ವೈದ್ಯ ನಿಘಂಟು ಎಂಬ ಎರಡು ನಿಘಂಟುಗಳನ್ನು ಒಂದೇ ಸಂಪುಟದಲ್ಲಿ ಪರಿಷ್ಕರಿಸಲಾಗಿದೆ. ವಸ್ತುವಿನ ದೃಷ್ಟಿಯಿಂದ ಇವುಗಳಿಗೆ ಸಾಮ್ಯತೆ ಇದೆ. ಪರಿಷ್ಕರಣದ ಸಂದರ್ಭದಲ್ಲಿ 'ಮಾರಿಸ್ ವಿಂಟರ್‌ನಿಟ್ಸ್ ಅವರು ತಮ್ಮ ಹಿಸ್ಟರಿ ಆಫ್ ಇಂಡಿಯನ್ ಲಿಟ್ರೇಚರ್‌ನಲ್ಲಿ ನಿಘಂಟು ಮತ್ತು ಕೋಶದ ನಡುವಿನ ವ್ಯತ್ಯಾಸಗಳನ್ನು ನಿರೂಪಿಸಿದ್ದು ಅದನ್ನು ವಿ. ಶಿವಾನಂದ ಅವರು ಕರ್ನಾಟಕ ಶಬ್ದಮಂಜರಿಯ ಪೀಠಿಕೆಯಲ್ಲಿ ಸಂಗ್ರಹಿಸಿದ್ದಾರೆ. ಆ ಪ್ರಕಾರ ನಿಘಂಟುಗಳ ಪ್ರಮುಖ ಗುರಿ ಕ್ರಿಯಾಪದ ಸಂಗ್ರಹಕ್ಕೆ ಪ್ರಾಧಾನ್ಯತೆ ಕೋಶದ ಗುರಿ ವಿರಳ ಹಾಗೂ ಶಬ್ದಗಳ ಸಂಗ್ರಹ ಈ ಮಾನದಂಡವನ್ನಿಟ್ಟುಕೊಂಡು ಅಕಾರಾದಿ ನಿಘಂಟನ್ನು ಪರಿಶೀಲಿಸಿ ವೈದಿಕ ಶಾಖೆಗೆ ಸೇರುತ್ತಿಲ್ಲವೆಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಹಾಗೆಯೇ ಇಲ್ಲಿ ನಾಮಪದಗಳಿಗೆ ಪ್ರಾಧಾನ್ಯತೆಯಿದೆ, ಕ್ರಿಯಾಪದಗಳು ವಿರಳವಾಗಿವೆ. ಕಾವ್ಯಾಭ್ಯಾಸಕ್ಕಿಂತ ಭಾಷೆಗೆ ಹೆಚ್ಚು ಉಪಯುಕ್ತವಾಗಿದೆ. ಉದಾರಹಣೆಗೆ ಅತ್ಯುಗ್ರಂ ಬಜೆ, ಇಂಗು,

ಅತ್ತಿಮ್ಮ ಉಣಸೆ, ಅನ್ಯಪುಷ್ಪ ಕೋಗಿಲೆ, ವಿರಳವಾಗಿ ಹೆಣ್ಣುಗಿಳಿ ಇತ್ಯಾದಿ ಅಕಾರಾದಿ ನಿಘಂಟನ್ನು ಕೇವಲ ಶಬ್ದಾರ್ಥದ ದೃಷ್ಟಿಯಿಂದ ಮಾತ್ರವಲ್ಲದೆ ಆ ಕಾಲದ ಕೃಷಿ, ವೈದ್ಯ ನಾಮ ವಿಜ್ಞಾನ, ಸ್ಥಳನಾಮದ ಹಿನ್ನೆಲೆಯಲ್ಲಿಯೂ ಅಧ್ಯಯನ ಮಾಡಬಹುದಾಗಿದೆ.

ವೈದ್ಯ ನಿಘಂಟು ಈ ಸಂಪುಟದ ದ್ವಿತೀಯ ಭಾಗದಲ್ಲಿರುವ ನಿಘಂಟು. ಹೆಸರೇ ತಿಳಿಸುವಂತೆ ವೈದ್ಯ ನಿಘಂಟು, ಅಕಾರಾದಿ ನಿಘಂಟಿನ ಹಸ್ತಪ್ರತಿಯಂತೆ ಇಲ್ಲಿಯೂ ಲಿಪಿಕಾರನ ಸ್ತುತಿ ಕವಿಕಾವ್ಯ ವೃತ್ತಾಂತಗಳಾಗಲಿ, ಪ್ರಸ್ತಾಪವಾಗಿಲ್ಲ. ಈ ಎರಡು ನಿಘಂಟುಗಳು ಒಂದೇ ವಸ್ತುವನ್ನು ಆಧರಿಸಿರುವುದರಿಂದ ಕೆಲವು ಶಬ್ದಗಳು ಎರಡು ಕಡೆಯಲ್ಲಿ ಕಂಡುಬರುವುದು ಸಹಜವೇ ಆಗಿದೆ. ವೈದ್ಯ ನಿಘಂಟಿನಲ್ಲಿ ಅಕಾರಾದಿ ನಿಘಂಟಿಗಿಂತ ಹೆಚ್ಚು ಸಾಮಾನ್ಯ ಶಬ್ದಗಳೂ ಸೇರಿವೆ. ಈ ಎರಡು ನಿಘಂಟುಗಳಿಂದ ಬಹುನೆಲೆಯ ಅಧ್ಯಯನಗಳಿಗೆ ಸಹಾಯಕವಾಗುವಂತೆ ಕಂಡುಬರುತ್ತದೆ.

ಹೀಗೆ ಕನ್ನಡ ಗ್ರಂಥಸಂಪಾದನೆಯಲ್ಲಿ ಓರ್ವ ಮಹಿಳೆಯಾಗಿ ವೈ.ಸಿ.ಭಾನುಮತಿ ಅವರು ಅಪಾರವಾದ ಕೊಡುಗೆಯನ್ನೆ ನೀಡಿದ್ದಾರೆ. ಇವರು ವಿದ್ಯಾರ್ಥಿ ದೆಸೆಯಿಂದಲೇ ಗ್ರಂಥಸಂಪಾದನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಸುಮಾರು ೨೮ಕ್ಕೂ ಹೆಚ್ಚು ಕೃತಿಗಳನ್ನು ಓಲೆಗರಿ, ಕೋರಿಕಾಗದ ಕಡತ ಹಾಗೂ ಹಸ್ತಪ್ರತಿಗಳಲ್ಲಿರುವ ಪ್ರಾಚೀನ ಕಾವ್ಯಗಳನ್ನು ವಿದ್ವತ್ಪೂರ್ಣವಾಗಿ ಗ್ರಂಥಸಂಪಾದನೆಯ ಶಾಸ್ತ್ರೀಯವಾದ ವಿಧಾನಗಳನ್ನು ಅರಿತುಕೊಂಡು ಪರಿಷ್ಕರಣ ಕಾರ್ಯದಲ್ಲಿ ತೊಡಗಿಕೊಂಡವರು. ವಿವಿಧ ಕಾಲಘಟ್ಟದಲ್ಲಿ ಬಂದ ಕವಿಗಳ ಕೃತಿಯನ್ನು ಪರಿಷ್ಕರಿಸಿ ಪ್ರಟಿಸಿದ್ದಾರೆ. ಇವರು ಮಾರ್ಗ ಮತ್ತು ದೇಶೀ ಶೈಲಿಯಲ್ಲಿ ರಚನೆಯಾದ ಕೃತಿಗಳನ್ನು ಸಂಪಾದಿಸಿರುವುದು ವಿಶೇಷವಾಗಿದೆ. ಏಕೆಂದರೆ ಶಾಸ್ತ್ರೀಯವಾದ ಮಾರ್ಗ ಸಾಹಿತ್ಯ ಸಂಪಾದನೆ ಕಷ್ಟಕರವಾದದ್ದು. ಆದರೆ ಚಂಪೂ ಶೈಲಿಯಲ್ಲಿ ರಚನೆಯಾದ ಕೃತಿಗಳನ್ನು ಶಾಸ್ತ್ರೀಯವಾಗಿ ಮತ್ತು ಕವಿಯು ಆ ಕೃತಿಯನ್ನು ಬರೆಯಲು ಪ್ರೇರಣೆ ಪಡೆದ ಹಲವಾರು ಮಾಹಿತಿಯೊಂದಿಗೆ ಪರಿಷ್ಕರಿಸಿದ್ದಾರೆ.

ಹಾಗೆಯೇ ದೇಶೀ ಸಾಹಿತ್ಯ ಪ್ರಕಾರದಲ್ಲೂ ಅವರ ವಿದ್ವತ್ತು ಮಹತ್ವಪೂರ್ಣವಾದದ್ದು. ಚಾರಿತ್ರಿಕ ಕಾವ್ಯಗಳನ್ನು ಸಂಪಾದಿಸುವಾಗ ಅವರು ಬಳಸಿಕೊಂಡ ಮಾದರಿ ವಿಶಿಷ್ಟವಾದದ್ದು. ಅಂದರೆ ಒಂದು ಕೃತಿಯನ್ನು ಪರಿಷ್ಕರಿಸುವಾಗ ಆ ಕೃತಿಯ ಬಗ್ಗೆ ಉಲ್ಲೇಖವಿರುವ ಶಾಸನಗಳು ಐತಿಹಾಸಿಕ ಸಂಗತಿಗಳು, ಪುರಾಣಗಳು, ಐತಿಹ್ಯ, ವಂದತಿಗಳನ್ನು ಆವಲೋಕಿಸುವುದರ ಮೂಲಕ ಆ ಕೃತಿಯನ್ನು ಪರಿಷ್ಕರಣೆ ಮಾಡಿರುವುದು ಕಂಡು ಬಂದಿದೆ. ಹಾಗೆಯೇ ಸ್ವರ ವಚನಗಳು ಮತ್ತು ಹಾಡುಗಳ ಸಂಪಾದನೆ ಕ್ಲಿಷ್ಟಕರವಾದದ್ದು. ಏಕೆಂದರೆ ಹಲವಾರು ಸ್ವರವಚನಕಾರರು ಹಾಡಿದ ಸ್ವರವಚನಗಳನ್ನು ಲಿಪಿಕಾರ ಬರೆಯುವಾಗ ಪ್ರಾದೇಶಿಕವಾಗಿ ಭಿನ್ನತೆ ಇರುವುದು ಕಂಡು ಬರುತ್ತದೆ. ಆದ್ದರಿಂದ ಒಂದು ಸ್ವರವಚನವನ್ನು ಪರಿಷ್ಕರಿಸುವಾಗ ಅನೇಕ ಹಸ್ತಪ್ರತಿಗಳ ಮೊರೆ ಹೋಗಿರುವುದು ಕಂಡು ಬಂದಿದೆ. ಜೊತೆಗೆ ಮಹಾತ್ಮೆಗಳು ಸಹ ಮುಖ್ಯವಾದ ಮಾಹಿತಿಯನ್ನು ಒದಗಿಸಿಕೊಡುತ್ತವೆ. ವೈ.ಸಿ.ಭಾನುಮತಿ ಅವರು ಮಹಾತ್ಮೆಗಳ ಪರಿಷ್ಕರಣವನ್ನು ಉತ್ತಮವಾಗಿ ಮಾಡಿದ್ದಾರೆ. ಹೀಗೆ

'ಶ್ರೀಮತ್ಪಂಚಪರ ಮೇಷಿಭೋನಮ."[೬೪] ಹೀಗೆ ಆರಾಧ್ಯದೈವಗಳನ್ನು ಸ್ಮರಿಸಿರುವುದರಿಂದ ಯಾವ ಧರ್ಮದ ಹಸ್ತಪ್ರತಿ ಎಂದು ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಹಾಗೆಯೇ ವೃತ್ತಿ ಲಿಪಿಕಾರರಿಗೂ ಮತ್ತು ಹವ್ಯಾಸಿ ಲಿಪಿಕಾರರಿಗೆ ಇರುವ ವ್ಯತ್ಯಾಸವನ್ನು ಗುರುತಿಸುತ್ತಾರೆ. ಜೈನ ಮಹಿಳಾ ಲಿಪಿಕಾರ್ತಿಯರನ್ನು ಕುರಿತು ವಿಶ್ಲೇಷಿಸಿದ್ದಾರೆ. ವಿಶೇಷವಾಗಿ ಸ್ಥಳನಾಮ ಅಧ್ಯಯನಕ್ಕೆ ಪೂರಕ ಸಾಮಗ್ರಿಯಾಗಿ ನಾಸಿಕಪುರ–ಮೂಗೂರು, ಕನಕಗಿರಿ–ಮಲೆಯೂರು, ಉದ್ಯೋಗಪುರ–ಕೆಲಸೂರು, ಯಂತ್ರಪುರ–ತಗಡೂರು, ಈ ಊರುಗಳು ಕನ್ನಡದಿಂದ ಸಂಸ್ಕೃತೀಕರಣಗೊಂಡಿರುವುದನ್ನು ಚರ್ಚಿಸಿದ್ದಾರೆ.

'ಕನ್ನಡದಲ್ಲಿ ಪ್ರಾಚೀನ ಆಯುರ್ವೇದ ಗ್ರಂಥಗಳು' ಲೇಖನದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿ ದೊರೆಯುವ ಆಯುರ್ವೇದ ಗ್ರಂಥಗಳ ಸಮೀಕ್ಷೆಯನ್ನು ಮಾಡಿದ್ದಾರೆ. ಇಲ್ಲಿ ಸುಮಾರು ೩೨ ಶೀರ್ಷಿಕೆಗಳ ೧೨೨ ಹಸ್ತಪ್ರತಿಗಳಿವೆ. ಇಲ್ಲಿ ದೊರೆಯುವಷ್ಟು ಕನ್ನಡದಲ್ಲಿರುವ ಆಯುರ್ವೇದ ಹಸ್ತಪ್ರತಿಗಳು ಬೇರೆ ಯಾವ ಹಸ್ತಪ್ರತಿ ಭಂಡಾರಗಳಲ್ಲೂ ಕಂಡು ಬರುವುದಿಲ್ಲ ಎಂದಿದ್ದಾರೆ. ಹಾಗೆಯೇ ಪ್ರಾಚೀನ ಆಯುರ್ವೇದ ಕೀರ್ತಿವರ್ಮನ ಗೋವೈದ್ಯ, ಚಾವುಂಡರಾಯನ ಲೋಕೋಪಕಾರ ಇವುಗಳಲ್ಲಿರುವ ರೋಗಗಳು ಮತ್ತು ಔಷಧಿಗಳ ಬಗ್ಗೆ ವಿವರಿಸಿದ್ದಾರೆ. 'ಮಿಶನರಿಗಳ ಹಾಗೂ ಗ್ರಂಥಸಂಪಾದನೆ' ಮೆಕೆಂಜಿ, ಮೋಗ್ಲಿಂಗ್, ಸ್ಯಾಂಡರ್ಸನ್, ಜಿ. ಸ್ಟೀವನ್‌ಸನ್, ಎಫ್. ಕಿಟ್ಟೆಲ್ ಮತ್ತು ಬಿ.ಎಲ್. ರೈಸ್ ಇವರು ಶಾಸ್ತ್ರೀಯವಾಗಿ ಕನ್ನಡ ಗ್ರಂಥಸಂಪಾದನೆಗೆ ನೀಡಿದ ಕೊಡುಗೆಯನ್ನು ಹಾಗೂ ವಿಧಿವಿಧಾನಗಳನ್ನು ಕುರಿತು ಚರ್ಚಿಸಿದ್ದಾರೆ.

'ಕಿಟ್ಟೆಲ್ ಅವರ ಗ್ರಂಥಸಂಪಾದನಾ ಕೊಡುಗೆ' ಕನ್ನಡಕ್ಕಾಗಿ ದುಡಿದ ವಿದೇಶಿ ವಿದ್ವಾಂಸರಲ್ಲಿ ಅಪಾರವಾದುದ್ದು. ಇವರು ಕ್ರೈಸ್ತಮಿಷನರಿಯಾಗಿ ಭಾರತಕ್ಕೆ ಬಂದು ಶಾಸ್ತ್ರೀಯವಾಗಿ ಗ್ರಂಥಸಂಪಾದನ ಕ್ಷೇತ್ರದಲ್ಲಿ ತೊಡಗಿಕೊಂಡರು. ಇವರು ಕನ್ನಡ ಗ್ರಂಥಸಂಪಾದನೆಯ ವಿಧಿವಿಧಾನಗಳನ್ನು ಅಳವಡಿಸಿಕೊಂಡು 'ಶಬ್ದಮಣಿದರ್ಪಣವನ್ನು' ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಒಂಭತ್ತು ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸುತ್ತಾರೆ. ಹಾಗೆಯೇ ನಾಗವರ್ಮನ ಛಂದೋಂಬುಧಿಯನ್ನು ೧೮೭೫ರಲ್ಲಿ ೧೪ ಹಸ್ತಪ್ರತಿಗಳನ್ನು ಬಳಸಿಕೊಂಡು ಪರಿಷ್ಕರಿಸಿರುತ್ತಾರೆ. ಹೀಗೆ ಎರಡು ಕೃತಿಯನ್ನು ಪರಿಷ್ಕರಿಸುವಾಗ ಅನುಸರಿಸಿದ ವೈಧಾನಿಕತೆಯನ್ನು ಕುರಿತು ವಿಶ್ಲೇಷಣೆಯನ್ನು ಈ ಲೇಖನದಲ್ಲಿ ಮಾಡಿದ್ದಾರೆ. 'ಕುಮಾರವ್ಯಾಸ ಭಾರತದ ಪ್ರಕ್ಷೇಪಗಳು ಕ್ಲಿಷ್ಟಪಾಠಗಳು' ಲೇಖನದಲ್ಲಿ ಗ್ರಂಥಸಂಪಾದನ ಶಾಸ್ತ್ರವು ಸೈದ್ಧಾಂತಿಕವಾಗಿ ರೂಪಗೊಳ್ಳುವ ಮುನ್ನವೇ ಪ್ರಕಟವಾದ ಕುಮಾರವ್ಯಾಸ ಭಾರತದ ಆವೃತ್ತಿಗಳಲ್ಲಿ ಪ್ರಕ್ಷೇಪಗಳು ಮೂಲ ಪಾಠದೊಂದಿಗೆ ಸೇರಿಕೊಂಡು ಹಸ್ತಪ್ರತಿಯಲ್ಲಿರುವಂತೆ ಪ್ರಕಟವಾಗುತ್ತಿದ್ದವು. ಆದ್ದರಿಂದ ಕೆಲವು ಜನಪ್ರಿಯ ಆವೃತ್ತಿಗಳಲ್ಲಿ ಹೆಚ್ಚು ಕಂಡು ಬಂದಿರುವುದನ್ನು ಸಂಪಾದಕರು ಗಮನಿಸಿದ್ದಾರೆ. ಉದಾಹರಣೆಗೆ "ಆದಿಪರ್ವ ೧೯–೧೯ರಲ್ಲಿ ಬರುವ 'ಕಟುಕಾಳಿ ಸೂರ್ಯನ ಮೇಲೆ ನಡೆಯಲಿ' ಎಂಬ ಪ್ರಯೋಗದಲ್ಲಿ ಕಟುಕಾಳಿ ಎನ್ನುವಲ್ಲಿ ಕ್ಲಿಷ್ಟತೆ ಇದೆ. ಈ ಪಾಠಕ್ಕೆ ಕಟಕವನು(ಕ) ಕಾಯ(ದ) ಕಾಯಿ(ಬ) ಎಂಬ ಪಾಠಾಂತರಗಳನ್ನು ಗುರುತಿಸಿದ್ದಾರೆ.

ಹಾಗೆಯೇ ಕಟಕ ಎಂದರೆ ಸೈನ್ಯ ಈ ನಿಟ್ಟಿನಿಂದ ಕಟಕಾಳಿ ಎಂದು ಇಲ್ಲಿಯ ಪಾಠವನ್ನು ತಿದ್ದಬಹುದು ಎಂದಿದ್ದಾರೆ."[೬] ಹೀಗೆ ಅನೇಕ ಪಾಠಾಂತರವನ್ನು ಗುರುತಿಸಿ ಕರ್ನಾಟಕದಾದ್ಯಂತ ಕುಮಾರವ್ಯಾಸ ಭಾರತದ ಹಸ್ತಪ್ರತಿಯ ಸಂಗ್ರಹ ಕಾರ್ಯ ನಡೆಯಬೇಕಾಗಿದೆ ಎಂದಿದ್ದಾರೆ. 'ಎಂ.ಆರ್.ಶ್ರೀ ಅವರ ಗ್ರಂಥಸಂಪಾದನೆ' ಈ ಲೇಖನದಲ್ಲಿ ಎಂ.ಆರ್.ಶ್ರೀ ಅವರ ಚಾಮರಸನ ಪ್ರಭುಲಿಂಗಲೀಲೆ ಮತ್ತು ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ' ಈ ಕೃತಿಗಳ ಪರಿಷ್ಕರಣದ ಮಹತ್ವ ಮತ್ತು ವೈಧಾನಿಕತೆಯನ್ನು ಕುರಿತು ಚರ್ಚಿಸಿದ್ದಾರೆ.

'ಎಂ.ಜಿ. ನಂಜುಂಡಾರಾಧ್ಯರ ಗ್ರಂಥಸಂಪಾದನೆ' ಲೇಖನದಲ್ಲಿ ಕನ್ನಡ ಸಂಸ್ಕೃತ ಭಾಷೆಗಳಲ್ಲಿ ಆಳವಾದ ಜ್ಞಾನ, ತೆಲುಗು ಮೊದಲಾದ ಭಾಷೆಯಲ್ಲಿನ ಖಚಿತವಾದ ತಿಳಿವಳಿಕೆಯನ್ನು ಪಡೆದುಕೊಂಡಿದ್ದ ಎಂ.ಜಿ. ನಂಜುಂಡಾರಾಧ್ಯರು ಸಂಪಾದಿಸಿರುವ 'ಪುಲ್ಲಕವಿ ವಿರಚಿತ ಶ್ರೀಶೈಲ ಪಂಡಿತಾರಾಧ್ಯ ಚರಿತ್ರಮು' 'ಶಾಂತ ಲಿಂಗದೇಶಿಕ ವಿರಚಿತ ಶಿವಲಿಂಗ ಚಾರಿತ್ರ' 'ಷರೀಷಕವಿಯ ಶಿವದೇವ ವಿಜಯಂ' ಕೃತಿಗಳ ಪರಿಷ್ಕರಣದ ವೈಧಾನಿಕತೆಯನ್ನು ಕುರಿತು ಚರ್ಚಿಸಿದ್ದಾರೆ. ಅಭಿನವ ಕಾಳಿದಾಸ ಬಸಪ್ಪಶಾಸ್ತ್ರಿಗಳ ಸಮಗ್ರ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ ವಿಧಿವಿಧಾನಗಳನ್ನು ವಿಶ್ಲೇಷಿಸಿದ್ದಾರೆ. 'ಮಹಿಳೆಯ ಗ್ರಂಥಸಂಪಾದನೆ.' ಲೇಖನದಲ್ಲಿ ಕನ್ನಡ ಗ್ರಂಥಸಂಪಾದನೆಯ ಕ್ಷೇತ್ರದಲ್ಲಿ ಪ್ರಥಮವಾಗಿ ತೊಡಗಿಸಿಕೊಂಡ ಡಿ. ಚಂಪಾಬಾಯಿ ಅವರ ವಿಚಾರವನ್ನು ಚರ್ಚಿಸಿದ್ದಾರೆ. ೧೯೪೦ರಷ್ಟು ಹಿಂದೆಯ 'ಹದಿಬದೆಯ ಧರ್ಮದ ಪರಿಷ್ಕೃತ ಆವೃತಿಯನ್ನು ಪ್ರಕಟಿಸಿದ್ದಾರೆ. ಇವರ ನಂತರ ಎಂ.ಎಸ್. ಲೀಲಾವತಿ. 'ಕಮಲಾ ಹಂಪನಾ, ಟಿ.ಎಸ್. ನಾಗರತ್ನ, ವೈ.ಸಿ. ಭಾನುಮತಿ, ಟಿ.ಕೆ. ಇಂದುಬಾಯಿ ಇವರು ಪರಿಷ್ಕರಿಸಿದ ಕೃತಿಗಳ ವೈಧಾನಿಕತೆಯನ್ನು ಕುರಿತು ಚರ್ಚಿಸಿದ್ದಾರೆ. ಹಳಗನ್ನಡ ಜಾನಪದಕ್ಕೆ ಸಂಬಂಧಿಸಿದಂತೆ ೧೯೮೩ರಲ್ಲಿ ಹವ್ಯಕ ಇಂಗ್ಲೀಷ್ ನಿಘಂಟು, ಡಿ.ಎಲ್.ಎನ್. ಅವರ ಆಯ್ದ ಲೇಖನಗಳು, ಸ್ತೋತ್ರರತ್ನ ಮಾಲೆ, ಪರ್ವ ಬಂದು ಸಮೀಕ್ಷೆ ಈ ಕ್ಷೇತ್ರಗಳಲ್ಲಿ ತೊಡಗಿಕೊಂಡು ಮಹಿಳೆಯರ ಇತಿಹಾಸ ಮತ್ತು ಅವರ ಕೃತಿಗಳನ್ನು ವಿಶ್ಲೇಷಣೆ ಮಾಡಿದ್ದಾರೆ.

'ಒಂದು ದಶಕದ ಗ್ರಂಥಸಂಪಾದನೆ' ಲೇಖನದಲ್ಲಿ ೧೯೮೧ ರಿಂದ ೯೦ರ ವರೆಗಿನ ಹತ್ತು ವರ್ಷದ ಗ್ರಂಥಸಂಪಾದನೆಯ ಇತಿಹಾಸವನ್ನು ಕುರಿತು ಚರ್ಚಿಸಲಾಗಿದೆ. ಇಲ್ಲಿ ಮುಖ್ಯವಾಗಿ ಜೈನ, ವೀರಶೈವ, ವೈದಿಕ, ಅರಮನೆ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಹರಿದಾಸ ಸಾಹಿತ್ಯ ಎಂದು ವಿಭಾಗ ಮಾಡಿಕೊಂಡು ಅವರ ಸಾಹಿತ್ಯ ಪ್ರಕಾರಗಳ ವಿಧಿವಿಧಾನಗಳನ್ನು ಕುರಿತು ವಿವರಿಸಿದ್ದಾರೆ.

ಗ್ರಂಥಸಂಪಾದನೆ ಕೆಲವು ಅಧ್ಯಯನ ಕೃತಿಯಲ್ಲಿ ಪ್ರಕಟವಾದ ಲೇಖನಗಳು ಮಹತ್ವಪೂರ್ಣವಾಗಿವೆ. ಗ್ರಂಥಸಂಪಾದನ ಕ್ಷೇತ್ರದಲ್ಲಿ ತಾವು ಗಳಿಸಿದ ಜ್ಞಾನ ಹಿನ್ನೆಲೆಯಲ್ಲಿ ರೂಪಗೊಂಡಿವೆ. ಗ್ರಂಥಗಳಲ್ಲಿ ಶಾಸ್ತ್ರ ಪರಿಭಾಷೆ ಮತ್ತು ಶಾಸ್ತ್ರ ಪ್ರತಿಪಾದನೆಗೆ ಇರಬೇಕಾದಂತಹ ಖಚಿತತೆಯನ್ನು ಬರವಣಿಗೆಯಲ್ಲಿ ಕಾಣಬಹುದು. ಈ ಕೃತಿಗೆ ಬಿ.ಎಂ.ಶ್ರೀ. ಪ್ರತಿಷ್ಠಾಪಾನದ ೧೯೯೭ರ ಸಾವಿತ್ರಮ್ಮ ಸಂಶೋಧನಾ ಪ್ರಶಸ್ತಿ ಲಭಿಸಿದೆ.

ಹಾಗೆಯೇ ಕಟಕ ಎಂದರೆ ಸೈನ್ಯ ಈ ನಿಟ್ಟಿನಿಂದ ಕಟಕಾಳಿ ಎಂದು ಇಲ್ಲಿಯ ಪಾಠವನ್ನು ತಿದ್ದಬಹುದು ಎಂದಿದ್ದಾರೆ."[೬೫] ಹೀಗೆ ಅನೇಕ ಪಾಠಾಂತರವನ್ನು ಗುರುತಿಸಿ ಕರ್ನಾಟಕದಾದ್ಯಂತ ಕುಮಾರವ್ಯಾಸ ಭಾರತದ ಹಸ್ತಪ್ರತಿಯ ಸಂಗ್ರಹ ಕಾರ್ಯ ನಡೆಯಬೇಕಾಗಿದೆ ಎಂದಿದ್ದಾರೆ. 'ಎಂ.ಆರ್.ಶ್ರೀ ಅವರ ಗ್ರಂಥಸಂಪಾದನೆ' ಈ ಲೇಖನದಲ್ಲಿ ಎಂ.ಆರ್.ಶ್ರೀ ಅವರ ಚಾಮರಸನ ಪ್ರಭುಲಿಂಗಲೀಲೆ ಮತ್ತು ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ' ಈ ಕೃತಿಗಳ ಪರಿಷ್ಕರಣದ ಮಹತ್ವ ಮತ್ತು ವೈಧಾನಿಕತೆಯನ್ನು ಕುರಿತು ಚರ್ಚಿಸಿದ್ದಾರೆ.

'ಎಂ.ಜಿ. ನಂಜುಂಡಾರಾಧ್ಯರ ಗ್ರಂಥಸಂಪಾದನೆ' ಲೇಖನದಲ್ಲಿ ಕನ್ನಡ ಸಂಸ್ಕೃತ ಭಾಷೆಗಳಲ್ಲಿ ಆಳವಾದ ಜ್ಞಾನ, ತೆಲುಗು ಮೊದಲಾದ ಭಾಷೆಯಲ್ಲಿನ ಖಚಿತವಾದ ತಿಳಿವಳಿಕೆಯನ್ನು ಪಡೆದುಕೊಂಡಿದ್ದ ಎಂ.ಜಿ. ನಂಜುಂಡಾರಾಧ್ಯರು ಸಂಪಾದಿಸಿರುವ 'ಪುಲ್ಲಕವಿ ವಿರಚಿತ ಶ್ರೀಶೈಲ ಪಂಡಿತಾರಾಧ್ಯ ಚರಿತ್ರಮು' 'ಶಾಂತ ಲಿಂಗದೇಶಿಕ ವಿರಚಿತ ಶಿವಲಿಂಗ ಚಾರಿತ್ರ' 'ಷರೀಷಕವಿಯ ಶಿವದೇವ ವಿಜಯಂ' ಕೃತಿಗಳ ಪರಿಷ್ಕರಣದ ವೈಧಾನಿಕತೆಯನ್ನು ಕುರಿತು ಚರ್ಚಿಸಿದ್ದಾರೆ. ಅಭಿನವ ಕಾಳಿದಾಸ ಬಸಪ್ಪಶಾಸ್ತ್ರಿಗಳ ಸಮಗ್ರ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ ವಿಧಿವಿಧಾನಗಳನ್ನು ವಿಶ್ಲೇಷಿಸಿದ್ದಾರೆ. 'ಮಹಿಳೆಯ ಗ್ರಂಥಸಂಪಾದನೆ.' ಲೇಖನದಲ್ಲಿ ಕನ್ನಡ ಗ್ರಂಥಸಂಪಾದನೆಯ ಕ್ಷೇತ್ರದಲ್ಲಿ ಪ್ರಥಮವಾಗಿ ತೊಡಗಿಸಿಕೊಂಡ ಡಿ. ಚಂಪಾಬಾಯಿ ಅವರ ವಿಚಾರವನ್ನು ಚರ್ಚಿಸಿದ್ದಾರೆ. ೧೯೪೦ರಷ್ಟು ಹಿಂದೆಯ 'ಹದಿಬದೆಯ ಧರ್ಮದ ಪರಿಷ್ಕೃತ ಆವೃತಿಯನ್ನು ಪ್ರಕಟಿಸಿದ್ದಾರೆ. ಇವರ ನಂತರ ಎಂ.ಎನ್. ಲೀಲಾವತಿ. 'ಕಮಲಾ ಹಂಪನಾ, ಟಿ.ಎನ್. ನಾಗರತ್ನ, ವೈ.ಸಿ. ಭಾನುಮತಿ, ಟಿ.ಕೆ. ಇಂದುಬಾಯಿ ಇವರು ಪರಿಷ್ಕರಿಸಿದ ಕೃತಿಗಳ ವೈಧಾನಿಕತೆಯನ್ನು ಕುರಿತು ಚರ್ಚಿಸಿದ್ದಾರೆ. ಹಳಗನ್ನಡ ಜಾನಪದಕ್ಕೆ ಸಂಬಂಧಿಸಿದಂತೆ ೧೯೮೩ರಲ್ಲಿ ಹವ್ಯಕ ಇಂಗ್ಲೀಷ್ ನಿಘಂಟು, ಡಿ.ಎಲ್.ಎನ್. ಅವರ ಆಯ್ದ ಲೇಖನಗಳು, ಸ್ತೋತ್ರರತ್ನ ಮಾಲೆ, ಪರ್ವ ಬಂದು ಸಮೀಕ್ಷೆ ಈ ಕ್ಷೇತ್ರಗಳಲ್ಲಿ ತೊಡಗಿಕೊಂಡು ಮಹಿಳೆಯರ ಇತಿಹಾಸ ಮತ್ತು ಅವರ ಕೃತಿಗಳನ್ನು ವಿಶ್ಲೇಷಣೆ ಮಾಡಿದ್ದಾರೆ.

'ಒಂದು ದಶಕದ ಗ್ರಂಥಸಂಪಾದನೆ' ಲೇಖನದಲ್ಲಿ ೧೯೮೧ ರಿಂದ ೯೦ರ ವರೆಗಿನ ಹತ್ತು ವರ್ಷದ ಗ್ರಂಥಸಂಪಾದನೆಯ ಇತಿಹಾಸವನ್ನು ಕುರಿತು ಚರ್ಚಿಸಲಾಗಿದೆ. ಇಲ್ಲಿ ಮುಖ್ಯವಾಗಿ ಜೈನ, ವೀರಶೈವ, ವೈದಿಕ, ಅರಮನೆ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಹರಿದಾಸ ಸಾಹಿತ್ಯ ಎಂದು ವಿಭಾಗ ಮಾಡಿಕೊಂಡು ಅವರ ಸಾಹಿತ್ಯ ಪ್ರಕಾರಗಳ ವಿಧಿವಿಧಾನಗಳನ್ನು ಕುರಿತು ವಿವರಿಸಿದ್ದಾರೆ.

ಗ್ರಂಥಸಂಪಾದನೆ ಕೆಲವು ಅಧ್ಯಯನ ಕೃತಿಯಲ್ಲಿ ಪ್ರಕಟವಾದ ಲೇಖನಗಳು ಮಹತ್ವಪೂರ್ಣವಾಗಿವೆ. ಗ್ರಂಥಸಂಪಾದನ ಕ್ಷೇತ್ರದಲ್ಲಿ ತಾವು ಗಳಿಸಿದ ಜ್ಞಾನ ಹಿನ್ನೆಲೆಯಲ್ಲಿ ರೂಪಗೊಂಡಿವೆ. ಗ್ರಂಥಗಳಲ್ಲಿ ಶಾಸ್ತ್ರ ಪರಿಭಾಷೆ ಮತ್ತು ಶಾಸ್ತ್ರ ಪ್ರತಿಪಾದನೆಗೆ ಇರಬೇಕಾದಂತಹ ಖಚಿತತೆಯನ್ನು ಬರವಣಿಗೆಯಲ್ಲಿ ಕಾಣಬಹುದು. ಈ ಕೃತಿಗೆ ಬಿ.ಎಂ.ಶ್ರೀ. ಪ್ರತಿಷ್ಠಾಪಾನದ ೧೯೯೭ರ ಸಾವಿತ್ರಮ್ಮ ಸಂಶೋಧನಾ ಪ್ರಶಸ್ತಿ ಲಭಿಸಿದೆ.

೩.೨.೩.೫.೨. ಗ್ರಂಥಸಂಪಾದನೆ ವಿವಕ್ಷೆ

ವೈ.ಸಿ.ಭಾನುಮತಿ ಅವರು ಸಂಗ್ರಹಿಸಿ ೨೦೦೩ರಲ್ಲಿ ರಾಜ್ ಪ್ರಕಾಶನ ಮೈಸೂರಿನಿಂದ ಕೃತಿಯನ್ನು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಹನ್ನೊಂದು ಲೇಖನಗಳು ಇವೆ. ಈ ಲೇಖನಗಳು ವಿವಿಧ ವಿಚಾರಸಂಕಿರಣಗಳಲ್ಲಿ ಮಂಡಿಸಿದ ಪ್ರಬಂಧಗಳು ಆಗಿವೆ. ಇವು ಹಸ್ತಪ್ರತಿ ಭಂಡಾರದಿಂದ ಹಿಡಿದು ಹಲವು ವಿದ್ವಾಂಸರು ಕನ್ನಡ ಗ್ರಂಥಸಂಪಾದನ ಕ್ಷೇತ್ರಕ್ಕೆ ನೀಡಿದ ಕೊಡುಗೆ ಹಾಗೂ ಅವರು ಅನುಸರಿಸಿದ ವಿಧಿವಿಧಾನಗಳನ್ನು ಕುರಿತು ಚರ್ಚಿಸಿದ್ದಾರೆ.

'ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರ' ಈ ಹಸ್ತಪ್ರತಿ ಭಂಡಾರಕ್ಕೆ ಶತಮಾನದ ಇತಿಹಾಸ ಇರುವುದನ್ನು ಗಮನಿಸಲಾಗಿದೆ. ಹಾಗೆಯೇ ಈ ಹಸ್ತಪ್ರತಿ ಭಂಡಾರದಲ್ಲಿ ಸುಮಾರು ಐದು ಸಾವಿರ ಹಸ್ತಪ್ರತಿಗಳಿವೆ. ಇದರಲ್ಲಿ ೨೬೨೬ ಓಲೆಪ್ರತಿಗಳು, ೬೨೧ ದೊಡ್ಡ ಆಕಾರದ ಕಾಗದದ ಪ್ರತಿಗಳು, ೮೨೦ ಸಣ್ಣ ಆಕಾರದ ಕಾಗದದ ಪ್ರತಿಗಳು. ೧೧೮೬ ಮೈಕ್ರೋ ಫಿಲಂ ಪ್ರತಿಗಳು ಇರುವುದನ್ನು ಗುರುತಿಸಿದ್ದಾರೆ. ಕವಿಯ ಸ್ವಹಸ್ತಾಕ್ಷರ ಪ್ರತಿಗಳು ಈ ಹಸ್ತಪ್ರತಿ ಭಂಡಾರದಲ್ಲಿರುವುದರಿಂದ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದೆ ಎಂದಿದ್ದಾರೆ. ಹೀಗೆ ಮೊಟ್ಟ ಮೊದಲು ಈ ಭಂಡಾರದ ಬಗ್ಗೆ ಲೇಖನವನ್ನು ಬರೆದು ಪ್ರಕಟಿಸಿದ ಕೀರ್ತಿ ವೈ.ಸಿ.ಭಾನುಮತಿ ಅವರಿಗೆ ಸಲ್ಲುತ್ತದೆ. 'ಗ್ರಂಥಸಂಪಾದನ ಶಾಸ್ತ್ರ' ಲೇಖನದಲ್ಲಿ ಗ್ರಂಥಸಂಪಾದನ ಶಾಸ್ತ್ರ ಶಾಸ್ತ್ರೀಯವಾಗಿ ಬೆಳೆದು ಬಂದಿರುವುದು ಕಿಟ್ಟೆಲ್ ಅವರು ಪರಿಷ್ಕರಿಸಿದ ಶಬ್ದಮಣಿ ದರ್ಪಣದಿಂದ ಗುರುತಿಸುತ್ತಾರೆ. ಆದರೆ ಅದು ತಾತ್ವಿಕವಾಗಿ ಪರಿಪಕ್ವಗೊಂಡು ಗ್ರಂಥರೂಪದಲ್ಲಿ ಆಕೃತಿ ಪಡೆಯಲು ಒಂದು ಶತಮಾನವೇ ಕಾಯಬೇಕಾಯಿತು. ಡಿ.ಎಲ್. ನರಸಿಂಹಾಚಾರ್ಯರು 'ಕನ್ನಡ ಗ್ರಂಥಸಂಪಾದನೆ' ಕೃತಿ ಶಾಸ್ತ್ರೀಯವಾಗಿ ರೂಪುಗೊಂಡಿತು. ಈ ಕೃತಿಯು ತಾತ್ವಿಕ ಬೆಳವಣಿಗೆಗೆ ತಳಪಾಯ ಹಾಕಿತು. ಈ ಲೇಖನದಲ್ಲಿ ಗ್ರಂಥಸಂಪಾದನೆಯ ಇತಿಹಾಸವನ್ನು ಕುರಿತು ಚರ್ಚಿಸಿರುವುದು ಕಂಡುಬರುತ್ತದೆ.

'ವೈದಿಕ ಹಸ್ತಪ್ರತಿಗಳು ಮತ್ತು ಲಿಪಿಕಾರರು' ಲೇಖನದಲ್ಲಿ ವೈದಿಕ ಹಸ್ತಪ್ರತಿಯಲ್ಲಿ ಆರಂಭದ ಸ್ತುತಿಯಲ್ಲಿ ನಿರ್ದಿಷ್ಟತೆ ಏಕರೂಪತೆ ಅಷ್ಟಾಗಿ ಕಂಡು ಬರುವುದಿಲ್ಲ ಎಂದಿದ್ದಾರೆ. ಇಲ್ಲಿ 'ಶುಭಮಸ್ತು' 'ನಿರ್ವಿಘ್ನಮಸ್ತು' ಎಂದು ಸ್ಮರಿಸಿರುವುದನ್ನು ಗಮನಿಸಬಹುದು. ಹಾಗೆಯೇ ಶ್ರೀ ವೈಷ್ಣವ ಧರ್ಮದ ಪ್ರಭಾವ ಬೀರಿರುವುದನ್ನು ಗುರುತಿಸಿದ್ದಾರೆ. ವೈದಿಕ ಹಸ್ತಪ್ರತಿಯಲ್ಲಿ ಬ್ರಾಹ್ಮಣೇತರರೂ ಕೂಡ ಪ್ರಾಚೀನ ಸಾಹಿತ್ಯವನ್ನು ಅಭ್ಯಾಸ ಮಾಡುತ್ತಿದ್ದರು ಎಂಬುದಕ್ಕೆ ಆಧಾರಗಳು ಇರುವುದನ್ನು ವಿವರಿಸಲಾಗಿದೆ. ಲಿಪಿಕಾರರಿಗೆ ವಯಸ್ಸಿನ ಮಿತಿ ಹಾಗೂ ಯಾವ ನಿರ್ಬಂಧನೆಗಳು ಇರಲಿಲ್ಲ ಎಂಬುವುದನ್ನು ವೈದಿಕ ಹಸ್ತಪ್ರತಿಗಳ ಮೂಲಕ ತಿಳಿಸಿದ್ದಾರೆ. ಈ ನಾಡಿನ ಚರಿತ್ರೆಯನ್ನು ಕಟ್ಟುವಲ್ಲಿ ಮತ್ತು ಸ್ಥಳನಾಮಗಳು ಸಂಸ್ಕೃತೀಕರಣ ಗೊಂಡಿರುವುದನ್ನು ವಿಶೇಷವಾಗಿ ಗುರುತಿಸಿದ್ದಾರೆ. 'ಜೈನ ಹಸ್ತಪ್ರತಿಗಳಲ್ಲಿ ಚಿತ್ರಕಲೆ' ಈ ಸಂಪ್ರಬಂಧದಲ್ಲಿ ಜೈನ ಹಸ್ತಪ್ರತಿಗಳಲ್ಲಿ ಕಂಡುಬರುವ ಚಿತ್ರಕಲೆಯನ್ನು ಹಾಗೂ ಬಣ್ಣವನ್ನು ತಯಾರಿಸುವ ವಿಧಾನಗಳನ್ನು ಮತ್ತು ಜೈನ ಹಸ್ತಪ್ರತಿಯಲ್ಲಿ ಮುಖ್ಯವಾಗಿ ಯಕ್ಷ ಮತ್ತು ಯಕ್ಷಿಣಿಯರ ಚಿತ್ರಗಳನ್ನು ಬಿಡಿಸುವುದನ್ನು ಗುರುತಿಸಿ ಅವುಗಳ ಮಹತ್ವವನ್ನು ವಿಶ್ಲೇಷಿಸಿದ್ದಾರೆ. 'ಹಸ್ತಪ್ರತಿ ಸಂಗ್ರಹ

ಸಂಪಾದನೆ ವ್ಯಾಖ್ಯಾನದ ಮಾದರಿಗಳು' ಲೇಖನದಲ್ಲಿ ಹಸ್ತಪ್ರತಿ ಸಂಗ್ರಹ ಮತ್ತು ಸಂಪಾದನೆಯನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿದ್ದು ಹತ್ತೊಂಬತ್ತನೆಯ ಶತಮಾನ ಅಂತ್ಯದಿಂದ ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ವರೆಗೆ, ಸರ್ಕಾರಿ ಸಂಸ್ಥೆಗಳು ಹಾಗೂ ಇಪ್ಪತ್ತೈದಕ್ಕೂ ಹೆಚ್ಚು ಖಾಸಗಿ ಹಾಗೂ ಅರೇಖಾಸಗಿ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಸಂಗ್ರಹ ಮಾಡಿ ವ್ಯಾಖ್ಯಾನಿಸಿರುವುದನ್ನು ಸಂಕ್ಷಿಪ್ತವಾಗಿ ಚರ್ಚೆ ಮಾಡಿದ್ದಾರೆ.

'ಸ್ವಾತಂತ್ರ್ಯೋತ್ತರ ಕನ್ನಡ ಗ್ರಂಥಸಂಪಾದನೆ' ಸ್ವಾತಂತ್ರ್ಯೋತ್ತರ ಗ್ರಂಥಸಂಪಾದನೆಯನ್ನು ಐದು ಭಾಗವಾಗಿ ವಿಂಗಡಣೆ ಮಾಡಿಕೊಂಡು ಅದರ ಇತಿಹಾಸವನ್ನು ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ. 'ಮಾರ್ಗಸಾಹಿತ್ಯ ಸಂಪಾದನೆ' ಈ ಲೇಖನದಲ್ಲಿ ಚಂಪೂಶೈಲಿಯಲ್ಲಿ ರಚನೆಯಾದ ಕೃತಿಗಳನ್ನು ಪರಿಷ್ಕರಿಸುವಾಗ ಸಂಪಾದಕನಿಗೆ ಇರಬೇಕಾದ ಜ್ಞಾನ, ಕೃತಿಗಳ ಆಯ್ಕೆ, ಸಂಗ್ರಹ, ಸಂಪಾದನೆಯ ತಾತ್ವಿಕತೆಯನ್ನು ಕುರಿತು ಇರಬೇಕಾದ ಸಂಪಾದಕನ ಮನೋಧೋರಣೆಯನ್ನು ವಿಶ್ಲೇಷಿಸಿದ್ದಾರೆ. 'ಗ್ರಂಥಸಂಪಾದನೆಗೆ ಎನ್.ಬಸವಾರಾಧ್ಯರ ಕೊಡುಗೆ' ಲೇಖನದಲ್ಲಿ ಎನ್.ಬಸವಾರಾಧ್ಯರ ಜೀವನ ಚರಿತ್ರೆ ಮತ್ತು ಅವರು ಪ್ರಕಟಿಸಿದ ಕೃತಿಗಳ ಚರ್ಚೆಯಿದೆ. ಇದರಲ್ಲಿ ೨೦ ಕೃತಿಗಳು ಮಾತ್ರ ಗ್ರಂಥಸಂಪಾದನೆಗೆ ಸಂಬಂಧಿಸಿವೆ. ಈ ಕೃತಿಗಳ ವಿಧಿವಿಧಾನಗಳನ್ನು ಮತ್ತು ಪಾಠಾಂತರಗಳನ್ನು ಗುರುತಿಸಿ ಚರ್ಚಿಸಿದ್ದಾರೆ. 'ಬಿ.ವಿ. ಶಿರೂರ ಅವರ ಗ್ರಂಥಸಂಪಾದನೆ' ಇವರು ಪ್ರಾಚೀನ ಸಾಹಿತ್ಯ ಶೋಧನೆಗೆ ಮೂಲಭೂತ ಸಾಮಗ್ರಿ ಒದಗಿಸುವಲ್ಲಿ ಹಾಗೂ ಗ್ರಂಥಸಂಪಾದನೆಯನ್ನು ಗಂಭೀರವಾಗಿ ಪರಿಗಣಿಸಿ ಕಾರ್ಯೋನ್ಮುಖರಾದರು. ಇವರು ಗ್ರಂಥಸಂಪಾದನೆಯ ಕ್ಷೇತ್ರವನ್ನು ೧೯೭೭ರಲ್ಲಿ ಪ್ರವೇಶಿಸಿ ಹನ್ನೆರಡು ಕೃತಿಗಳನ್ನು ಸಂಪಾದಿಸಿದ್ದಾರೆ. ಇಲ್ಲಿ ಸಂಪಾದಕರು 'ವೀರಶೈವ ಸಾಹಿತ್ಯ ಸಂಪಾದನೆ' 'ವಚನ ಗ್ರಂಥಗಳ ಸಂಪಾದನೆ' 'ಕಾವ್ಯ ಗ್ರಂಥಗಳ ಸಂಪಾದನೆ' 'ಜೈನ ಸಾಹಿತ್ಯ ಸಂಪಾದನೆ' ಹೀಗೆ ವಿಭಾಗ ಮಾಡಿಕೊಂಡು ಕೃತಿಗಳ ಮಹತ್ವ ಮತ್ತು ಕೆಲವೊಂದು ಕೃತಿಗಳಲ್ಲಿ ಪಾಠಾಂತರಗಳನ್ನು ಗುರುತಿಸಿದ್ದಾರೆ. 'ಗ್ರಂಥಸಂಪಾದನೆ ಮತ್ತು ರಾಗೌ' ಲೇಖನದಲ್ಲಿ ರಾಗೌ ಅವರ ಕನ್ನಡ ಗ್ರಂಥಸಂಪಾದನೆಯ ಸಾಧನೆಯನ್ನು ಮೂರು ರೀತಿಯಲ್ಲಿ ವಿಭಾಗ ಮಾಡಿದ್ದಾರೆ. ಅವುಗಳೆಂದರೆ ವೈಯಕ್ತಿಕ ಪ್ರಯತ್ನ, ಜಂಟಿಪ್ರಯತ್ನ, ಸಾಂಘಿಕ ಪ್ರಯತ್ನಗಳು ಹೀಗೆ ವಿಂಗಡಿಸಿಕೊಂಡು ಪಾಠಾಂತಗಳನ್ನು ಮತ್ತು ಪರಿಷ್ಕರಣದ ವಿಧಿವಿಧಾನಗಳನ್ನು ಚರ್ಚಿಸಿದ್ದಾರೆ.

ಗ್ರಂಥಸಂಪಾದನೆ ವಿವಕ್ಷೆ ಎಂಬ ಕೃತಿಯಲ್ಲಿ ಹನ್ನೊಂದು ಲೇಖನಗಳು ಇವೆ. ಈ ಬರಹಗಳು ಕನ್ನಡ ಗ್ರಂಥಸಂಪಾದನೆಯ ಬೆಳವಣಿಗೆಯಿಂದ ಹಿಡಿದು ಸ್ವಾತಂತ್ರೋತ್ತರ ಗ್ರಂಥಸಂಪಾದನೆಯ ವಿಧಿವಿಧಾನಗಳನ್ನು ಹಾಗೂ ವಿವಿಧ ವಿದ್ವಾಂಸರು ನೀಡಿದ ಕೊಡುಗೆಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

೩.೨.೩.೫.೩. ಗ್ರಂಥಸಂಪಾದನೆ ಎಳೆಗಳು

ವೈ.ಸಿ.ಭಾನುಮತಿ ಅವರು ಕೃತಿಯನ್ನು ಸಂಗ್ರಹಿಸಿ ೨೦೦೯ರಲ್ಲಿ ವಿಸ್ಮಯ ಪ್ರಕಾಶನ ಮೈಸೂರಿನಿಂದ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಅನೇಕ ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ಪ್ರಬಂಧಗಳಿವೆ. ಇಲ್ಲಿ

೧೫ ಲೇಖನಗಳನ್ನು ಸಂಗ್ರಹಿಸಿದ್ದು. ಈ ಪ್ರಬಂಧಗಳು ಪ್ರಾಚೀನ ಲೌಕಿಕ ಹಸ್ತಪ್ರತಿಗಳಿಂದ ಹಿಡಿದು ಲಿಪಿಕಾರರನ್ನು ಕುರಿತಂತೆ ಹಾಗೂ ಗ್ರಂಥಸಂಪಾದನೆ ಇತ್ತೀಚಿನ ಒಲವುಗಳು. ಅಪ್ರಕಟಿತ ಕಾವ್ಯಗಳು, ವಿವಿಧ ವಿದ್ವಾಂಸರು ಕನ್ನಡ ಗ್ರಂಥಸಂಪಾದನೆಗೆ ನೀಡಿದ ಕೊಡುಗೆ ಕುರಿತಂತೆ ಇಲ್ಲಿನ ಬರಹಗಳು ಇವೆ.

'ಲೌಕಿಕ ಶಾಸ್ತ್ರಗ್ರಂಥಗಳ ಹಸ್ತಪ್ರತಿಗಳು' ಲೌಕಿಕ ಶಾಸ್ತ್ರಗ್ರಂಥಗಳ ಹಸ್ತಪ್ರತಿಗಳಲ್ಲಿನ ಸಾಂಪ್ರದಾಯಿಕ ವೈದ್ಯ ಗ್ರಂಥಗಳು, ಸೂಪಶಾಸ್ತ್ರ ಅಶ್ವಲಕ್ಷಣ ಸ್ವರೂಪವನ್ನು ವಿವರಿಸುವಂತಹ ಹಸ್ತಪ್ರತಿಗಳ ಮಹತ್ವವನ್ನು ಕುರಿತು ವಿಶ್ಲೇಷಿಸಿದ್ದಾರೆ. 'ಪ್ರಾಕೃತ ಹಸ್ತಪ್ರತಿಗಳು ಮತ್ತು ಕನ್ನಡ ಲಿಪಿಕಾರರು' ಈ ಲೇಖನದಲ್ಲಿ ಕರ್ನಾಟಕದ ಕೆಲವು ಹಸ್ತಪ್ರತಿ ಭಂಡಾರಗಳಲ್ಲಿ ಇರುವ ಪ್ರಾಕೃತ ಹಸ್ತಪ್ರತಿಗಳನ್ನು ಗಮನಿಸಿದ್ದಾರೆ. ಅವುಗಳೆಂದರೆ 'ಆಗಮ ದರ್ಶನ' ಹಸ್ತಪ್ರತಿ ಭಂಡಾರ, ಮೂಡಬಿದರೆಯಲ್ಲಿರುವ ಧರ್ಮಶಾಲೆ ಮತ್ತು ಜೈನ ಭವನದ ಭಂಡಾರಗಳು, ಕಾರ್ಕಳದ ಜೈನ ಮಠದಲ್ಲಿರುವ ಹಸ್ತಪ್ರತಿ ಭಂಡಾರ ಹಾಗೆಯೇ ಹೊರ ರಾಜ್ಯಗಳಾದ ಬಿಹಾರದ ಆರಾದಲ್ಲಿರುವ ಜೈನ ಸಿದ್ಧಾಂತ ಭವನದಲ್ಲಿಯೂ ಕನ್ನಡ ಲಿಪಿಯಲ್ಲಿರುವ ಹಸ್ತಪ್ರತಿಗಳನ್ನು ಗುರುತಿಸಿ ಪ್ರಾಕೃತಹಸ್ತಪ್ರತಿಗಳ ಮಹತ್ವವನ್ನು ವಿಶ್ಲೇಷಿಸಿದ್ದಾರೆ. 'ಸಂಸ್ಕೃತ ಹಸ್ತಪ್ರತಿಗಳು ಮತ್ತು ಕನ್ನಡಲಿಪಿಕಾರರು' ಈ ಲೇಖನದ ಉದ್ದೇಶ ಸಂಸ್ಕೃತ ಹಸ್ತಪ್ರತಿಗಳಲ್ಲಿ ಕನ್ನಡ ಲಿಪಿಕಾರರನ್ನು ಗುರುತಿಸುವುದು ಹಾಗೂ ಬಹಳ ವೈವಿಧ್ಯಮಯವಾದ ಈ ಹಸ್ತಪ್ರತಿಗಳನ್ನು ಬರೆದ ಲಿಪಿಕಾರರು ಕನ್ನಡಿಗರು, ಕರ್ನಾಟಕದವರು, ಇವು ರಚನೆಯಾದ ಸ್ಥಳ ಕೂಡ ಕರ್ನಾಟಕವಾಗಿದೆ. ಸಂಸ್ಕೃತ ಭಾಷೆಯ ಹಸ್ತಪ್ರತಿಗಳಾದರೂ ಇಲ್ಲಿನ ಲಿಪಿಕಾರರು ತಮ್ಮ ಇತಿವೃತ್ತಗಳನ್ನು ಬಹುಪಾಲು ಕನ್ನಡದಲ್ಲಿ ನಿರೂಪಿಸಿರುವುದನ್ನು ಗುರುತಿಸಿ ಸಂಸ್ಕೃತ ಹಸ್ತಪ್ರತಿಗಳಲ್ಲಿ ಕನ್ನಡ ಲಿಪಿಕಾರರು ತೋರಿದ ಮಹತ್ವವನ್ನು ಕುರಿತು ಚರ್ಚಿಸಲಾಗಿದೆ.

'ತುಮಕೂರು ಜಿಲ್ಲೆಯ ಹಸ್ತಪ್ರತಿ ಸಂಪತ್ತು' ಲೇಖನದ ತುಮಕೂರು ಪರಿಸರದಲ್ಲಿದ್ದ ಕವಿಗಳು ಮತ್ತು ಲಿಪಿಕಾರರು ಪ್ರತಿ ಮಾಡಿದ ಹಸ್ತಪ್ರತಿಗಳು ಮತ್ತು ಆ ಪರಿಸರದಲ್ಲಿ ಸಂಸ್ಕೃತಿ, ಸಂಪ್ರದಾಯದ ಮೇಲೆ ಬೇರೆ ಧರ್ಮಗಳ ಪ್ರಭಾವ ಬೀರಿರುವುದನ್ನು ಗುರುತಿಸುತ್ತ ಇಲ್ಲಿ ಹೆಚ್ಚು ಸಾಹಿತ್ಯ ಕೃತಿಗಳು ದೊರೆತಿರುವುದನ್ನು ಗಮನಿಸಿದ್ದಾರೆ. ಹಾಗೆಯೇ ಇಲ್ಲಿ ಸಾಂಸ್ಥಿಕ ಒಡೆತನದ ಹಸ್ತಪ್ರತಿಗಿಂತ ವೈಯಕ್ತಿಕ ಒಡೆತನದ ಹಸ್ತಪ್ರತಿಗಳು ಅಧಿಕವಾಗಿರುವುದನ್ನು ಗುರುತಿಸಲಾಗಿದೆ.

'ಹಸ್ತಪ್ರತಿ ಪುಷ್ಪಿಕೆಗಳಲ್ಲಿ ವೀರಶೈವ ಮಠಗಳು' ಪ್ರಸ್ತುತ ಲೇಖನವನ್ನು ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರ ಮತ್ತು ಧಾರವಾಡದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿಗಳನ್ನು ಆಕರಗಳನ್ನಾಗಿ ಬಳಸಿಕೊಂಡು ಈ ಲೇಖನವನ್ನು ರಚಿಸಿದ್ದಾರೆ. ಹಸ್ತಪ್ರತಿಗಳ ಪುಷ್ಪಿಕೆಗಳಲ್ಲಿರುವ ವೀರಶೈವ ಮಠಗಳನ್ನು ಹಾಗೂ ಮಠಪತಿಗಳನ್ನು ಲಿಪಿಕಾರರು ನೀಡುವ ಸುಳಿವುಗಳನ್ನಾಧರಿಸಿ ಗುರುತಿಸುವುದು ಈ ಲೇಖನದ ಉದ್ದೇಶವಾಗಿದೆ.

'ಭಾರತೀಯ ಗ್ರಂಥಸಂಪಾದನೆ; ಇತ್ತೀಚಿನ ಒಲವುಗಳು' ಲೇಖನದಲ್ಲಿ ಭಾರತೀಯ ಗ್ರಂಥಸಂಪಾದನೆಯಲ್ಲಿ ಆಗುತ್ತಿರುವ ಇತ್ತೀಚಿನ ಪ್ರವೃತ್ತಿಗಳನ್ನು ಎರಡು ನೆಲೆಯಲ್ಲಿ ಗುರುತಿಸುತ್ತಾರೆ. ಅವುಗಳೆಂದರೆ 'ಕನ್ನಡೇತರ ಭಾಷೆಯಲ್ಲಿ ಕಂಡುಬರುವ ಗ್ರಂಥಸಂಪಾದನೆಯ ಪ್ರವೃತ್ತಿಗಳು' ಹಾಗೂ ಕನ್ನಡ ಗ್ರಂಥಸಂಪಾದನೆಯಲ್ಲಿ ಕಂಡುಬರುವ ಈಚಿನ ಪ್ರವೃತಿಗಳನ್ನು ಕುರಿತು ಈ ಲೇಖನದಲ್ಲಿ ಗಂಭೀರವಾಗಿ ಚರ್ಚೆಗೆ ಒಳಪಡಿಸಿದ್ದಾರೆ.

'ಚೆನ್ನವೀರ ರಚಿತ ಶಿವಯೋಗ ಪ್ರದೀಪಿಕೆ ಮತ್ತು ವಿಶೇಷಾನುಭವಷಟ್ಥಲ ಟೀಕುಗಳು' ಇಲ್ಲಿ ಕವಿ, ಕಾಲ, ವಿಚಾರ ಮತ್ತು ಕವಿಯು ಕೃತಿಯನ್ನು ಬರೆಯಲು ಆದ ಪ್ರೇರಣೆ ಪ್ರಭಾವವನ್ನು ಕುರಿತು ಚರ್ಚಿಸಿದ್ದಾರೆ. "ಶ್ವೇತನ ಸಾಂಗತ್ಯ ಎಂಬ ಅಪ್ರಕಟಿತಕಾವ್ಯ." ಈ ಲೇಖನದಲ್ಲಿ ಶ್ವೇತನ ಸಾಂಗತ್ಯ ಕೃತಿಯ ಆಶಯವನ್ನು ಕುರಿತು ಚರ್ಚೆ ಮಾಡಿದ್ದಾರೆ. ಈ ಕಾವ್ಯಕ್ಕೆ 'ಸಿದ್ದಸಾಂಗತ್ಯ' 'ಗಣಸಾಂಗತ್ಯ' 'ಕಾಲಭಂಜನ ಚಾರಿತ್ರ' ಎಂದು ವಿವಿಧ ಹೆಸರು ಇರುವುದನ್ನು ಗುರುತಿಸಿದ್ದಾರೆ. "ನಂಜನಾಥಾಚಾರ್ಯನ ಒಂದು ಅಪ್ರಕಟಿತ ಕಾವ್ಯ" ಈ ಕಾವ್ಯವನ್ನು ಎರಡು ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಿದ್ದಾರೆ. ಈ ಗ್ರಂಥದ ಕರ್ತೃ–'ನಂಜನಾಥಚಾರ್ಯ' ಕವಿಯ ಆಶಯ ವೈಷ್ಣವ ಧರ್ಮವನ್ನು ಖಂಡಿಸಿ ವೀರಶೈವ ಧರ್ಮವನ್ನು ಹಾಗೂ ಅದರ ಹಿರಿಮೆಯನ್ನು ಗುರುತಿಸಲಾಗಿದೆ.

"ಗಂಗಾಧರ ಮಡಿವಾಳೇಶ್ವರ ತುರಮರಿ ಮತ್ತು ಗ್ರಂಥಸಂಪಾದನೆ" ಈ ಲೇಖನದಲ್ಲಿ ಗಂಗಾಧರ ಮಡಿವಾಳೇಶ್ವರ ತುರಮರಿ ಅವರ ಜೀವನ ಚರಿತ್ರೆ ಹಾಗೂ ಅವರು ಸಂಪಾದಿಸಿದ 'ಹಳಗನ್ನಡ ಕವಿತಾ ಸಂಗ್ರಹ ೧೮೬೭' 'ಸಟೀಕನ ಶಬ್ದಮಂಜರಿ ಕೋಶ ೧೮೬೯' 'ರಾಜಶೇಖರ ವಿಳಾಸದ ಮೊದಲನೆಯ ಆಶ್ವಾಸದ ಟೀಕೆ ೧೮೭೩' ಭಾಷಾದರ್ಪಣ ೧೮೭೪' ಈ ಕೃತಿಗಳ ಪರಿಷ್ಕರಣದ ವೈಧಾನಿಕತೆಯನ್ನು ಕುರಿತು ಚರ್ಚಿಸಿದ್ದಾರೆ. "ಬಿ. ಮಲ್ಲಪ್ಪ ನವರು ಮತ್ತು ಗ್ರಂಥಸಂಪಾದನೆ" ಪ್ರಾಚೀನ ಕೃತಿಗಳನ್ನು ಪರಿಷ್ಕರಣೆ ಮತ್ತು ಅನುವಾದ ಸಾಹಿತ್ಯದಲ್ಲಿ ಇವರ ಹೆಸರು ಮಹತ್ವ ಪೂರ್ಣವಾಗಿದೆ. ಹಾಗೆಯೇ ರಾಜಶೇಖರ ವಿಳಾಸಂ ಸಂಪಾದನೆ, ಅರ್ಥಾಲಂಕಾರ ಈ ಕೃತಿಗಳ ಪರಿಷ್ಕರಣೆಯ ವಿಧಿ ವಿಧಾನಗಳನ್ನು ಕುರಿತು ಚರ್ಚಸಿದ್ದಾರೆ. ಬಿ.ಮಲ್ಲಪ್ಪನವರು ಸಂಪಾದಿತ ಕೃತಿಗಳಲ್ಲಿ ಹೆಚ್ಚು ಜನಪ್ರಿಯವಾದದ್ದು 'ಕರ್ನಾಟಕ ಕಾದಂಬರಿ' ಮೂಲಕ ಹೆಸರುವಾಸಿಯಾಗಿದ್ದ ವಿವರವನ್ನು ಈ ಲೇಖನದಲ್ಲಿ ಅವರು ಅನುಸರಿಸಿದ ವಿಧಿವಿಧಾನಗಳನ್ನು ಚರ್ಚಿಸಿದ್ದಾರೆ. "ಆರ್.ನರಸಿಂಹಾಚಾರ್ಯರ ಜೀವನ ಮತ್ತು ಸಂಪಾದಿತ ಕೃತಿಗಳು" ಇದರಲ್ಲಿ ನರಸಿಂಹಾಚಾರ್ಯರು ಜೀವಿತಾವಧಿಯಲ್ಲಿ ಸುಮಾರು ೫೦೦ ಹೊಸ ಶಾಸನಗಳನ್ನು ಸಂಗ್ರಹಿಸಿ ಹೊರತಂದು ಸುದೀರ್ಘವಾದ ಮುನ್ನುಡಿ, ಅಕಾರಾದಿ, ಶಬ್ದಸೂಚಿ, ಪರಿಷ್ಕರಣ ವಿಧಿವಿಧಾನಗಳನ್ನು ಮಾಡಿದ್ದಲ್ಲದೆ ಕ್ರಿ.ಶ.೧೯೨೩ರಲ್ಲಿ ಕರ್ನಾಟಕ ಶಬ್ದಾನುಶಾಸನವನ್ನು ಐದು ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಿದ ಹಿನ್ನೆಲೆಯನ್ನು ತಿಳಿಸುತ್ತಾರೆ. ಕರ್ನಾಟಕ ಭಾಷಾಭೂಷಣವನ್ನು ಎರಡು ಪ್ರತಿಗಳಿಂದ ೧೯೦೩ರಲ್ಲಿ ಪರಿಷ್ಕರಿಸಿ ಪ್ರಕಟಿಸಿದ ಸಂಗತಿ ಹಾಗೂ ಈ ಕೃತಿಗಳ ವೈಧಾನಿಕತೆ ಕುರಿತು ಈ ಲೇಖನದಲ್ಲಿ ಚರ್ಚಿಸಿದ್ದಾರೆ.

"ಶಾಂತಿರಾಜಶಾಸ್ತ್ರಿಗಳ ಸುಕುಮಾರಚರಿತ್ರಾದಿ ಸಂಗ್ರಹ" ಎರ್ತೂರು ಶಾಂತಿರಾಜಶಾಸ್ತ್ರಿಗಳ 'ಸುಕುಮಾರಚರಿತ್ರಾದಿ ಸಂಗ್ರಹ' ಎಂಬ ಕಿರುಕೃತಿಯಲ್ಲಿ ಸುಕುಮಾರಚರಿತ್ರೆ, ಅಂಜನಾದೇವಿ ಚರಿತ್ರೆ, ಸಮಾಧಿ ಭಕ್ತಿ ಮತ್ತು ಕರ್ಮದಹನ ಮಂತ್ರಗಳು ಎಂಬ ವಿವಿಧ ವಿಷಯಗಳಿರುವ ಕೃತಿಗಳ ಸಂಗ್ರಹಗಳಿವೆ. ಈ ಲೇಖನದ ಈ ಸಂಗ್ರಹಗಳ ಮಹತ್ವವನ್ನು ಕುರಿತು ಚರ್ಚಿಸಲಾಗಿದೆ. ದೇಶೀ ವಿದ್ವಾಂಸರಲ್ಲಿ ಶಾಸ್ತ್ರೀಯವಾದ ಗ್ರಂಥಸಂಪಾದನೆಗೆ ಅಡಿಪಾಯ ಹಾಕಿದವರಲ್ಲಿ ಡಿ.ಎಲ್. ನರಸಿಂಹಾಚಾರ್ಯರು ಒಬ್ಬರು. ಪ್ರಸ್ತುತ "ಕನ್ನಡ ಗ್ರಂಥಸಂಪಾದನೆ ಮತ್ತು ಡಿ.ಎಲ್.ಎನ್." ಲೇಖನದಲ್ಲಿ ಮಿಶನರಿಗಳ ಗ್ರಂಥ ಸಂಪಾದನೆ, ದೇಶೀ ವಿದ್ವಾಂಸರ ಗ್ರಂಥಸಂಪಾದನೆ, ಡಿ.ಎಲ್. ನರಸಿಂಹಾಚಾರ್ಯರ ಗ್ರಂಥಸಂಪಾದದನೆ, ಡಿ.ಎಲ್. ನರಸಿಂಹಾಚಾರ್ಯರ ತರುವಾಯದ ಗ್ರಂಥಸಂಪಾದನೆ ಎಂದು ನಾಲ್ಕು ವಿಭಾಗ ಮಾಡಿಕೊಂಡು ಚರ್ಚಿಸಿರುವುದನ್ನು ನೋಡಬಹುದು.

"ವೀರಣ್ಣ ರಾಜೂರ ಅವರ ನೂರು ಶೋಧ" ಲೇಖನದಲ್ಲಿ ವೀರಣ್ಣ ರಾಜೂರ ಅವರು ಸಂಶೋಧನೆಯ ಬೆನ್ನೇರಿ ಹೆಕ್ಕಿ ತೆಗೆದ ನೂರು ಲಘು ಕೃತಿಗಳ ಸಂಕಲನವೇ ಪ್ರಸ್ತುತ ನೂರು ಶೋಧ ಎಂಬ ಹೊತ್ತಿಗೆ, ಇದರಲ್ಲಿ ನೂರು ಬರಹಗಳನ್ನು ಒಳಗೊಂಡಿದೆ ಇಲ್ಲಿನ ಬರಹಗಳಿಗೆ ಪ್ರಮುಖವಾಗಿ ವೀರಶೈವ ಗ್ರಂಥಸ್ಥ ಸಾಹಿತ್ಯ ಆಧಾರವಾಗಿದ್ದರೂ ವಿರಳವಾಗಿ ಮೌಖಿಕ ರೂಪಗಳನ್ನು ಬಳಸಿಕೊಂಡಿರುವುದನ್ನು ಗಮನಿಸಿದ್ದಾರೆ. ಹಾಗೆಯೆ ಇಲ್ಲಿ ಪ್ರಕಟಿಸಿರುವ ಕೃತಿಗಳೆಲ್ಲ ಕವಿಚರಿತೆಯಲ್ಲಿ ಉಲ್ಲೇಖವಾಗಿಲ್ಲ ಎಂದಿದ್ದಾರೆ. ಇದೊಂದು ಲಘು ಕೃತಿಗಳ ಸಂಪಾದಿತ ಕೃತಿಯೂ ಆಗಿವೆ ಎಂದು ಗುರುತಿಸಿ ಆ ಕೃತಿಗಳನ್ನು ವಿಶ್ಲೇಷಣೆ ಮಾಡಿದ್ದಾರೆ.

ಒಟ್ಟಾರೆಯಾಗಿ ೧೫ ಲೇಖನಗಳನ್ನು 'ಗ್ರಂಥಸಂಪಾದನೆ ಎಳೆಗಳು' ಕೃತಿ ಒಳಗೊಂಡಿದ್ದು ಈ ಲೇಖನಗಳು ಪ್ರಾಚೀನ ವೈದ್ಯಪದ್ಧತಿಗಳಿಂದ ಹಿಡಿದು ಲಿಪಿಕಾರರ ಬಗ್ಗೆ ಮಾಹಿತಿಯನ್ನು ಒದಗಿಸುತ್ತವೆ. ಹಾಗೆಯೇ ಅಪ್ರಕಟಿತವಾದ ಕೃತಿಗಳನ್ನು ಲೇಖನ ರೂಪದಲ್ಲಿ ಪ್ರಟಿಸಿರುವುದು ವಿಶೇಷವಾಗಿ ಗಮನಿಸಲಾಗಿದೆ. ಹಾಗೂ ದೇಶೀ ವಿದ್ವಾಂಸರು ಗ್ರಂಥಸಂಪಾದನೆಗೆ ನೀಡಿದ ಮಹತ್ವವನ್ನು ಕುರಿತ ವೈಧಾನಿಕತೆಯ ಹರವನ್ನು ಚರ್ಚಿಸಿರುವುದನ್ನು ಗಮನಿಸಲಾಗಿದೆ.

೩.೨.೩.೫.೪. ಗ್ರಂಥಸಂಪಾದನ ಸಂಕಥನ

ಕೃತಿಯನ್ನು ವೈ.ಸಿ. ಭಾನುಮತಿ ಅವರು ಸಂಗ್ರಹಿಸಿ ೨೦೧೩ರಲ್ಲಿ ಸಿವಿಜಿ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ೪೨ ಲೇಖನಗಳು ಇವೆ. ೩೧ ಲೇಖನಗಳು 'ಗಂಥಸಂಪಾದನೆ ಕೆಲವು ಅಧ್ಯಯನ' 'ಗ್ರಂಥಸಂಪಾದನೆ ವಿವಕ್ಷೆ', 'ಗ್ರಂಥಸಂಪಾದನೆ ಎಳೆಗಳು' ಈ ಮೂರು ಕೃತಿಯಲ್ಲಿ ಪ್ರಕಟವಾಗಿವೆ. ಆದ್ದರಿಂದ ಆ ಕೃತಿಗಳಲ್ಲಿ ಪ್ರಕಟವಾಗಿರದ ಲೇಖನಗಳನ್ನು ಮಾತ್ರ ಇಲ್ಲಿ ಪರಿಚಯಿಸಲಾಗಿದೆ. "ಜಲವಾಸ್ತು ಹಸ್ತಪ್ರತಿಗಳು" ಇಲ್ಲಿ ಮುಖ್ಯವಾಗಿ ಪ್ರಾಚೀನ ಹಸ್ತಪ್ರತಿಗಳಲ್ಲಿ ಜಲವಾಸ್ತುವಿನ ಉಲ್ಲೇಖ ಇರುವುದನ್ನು ಹಾಗೂ ಜಲವಾಸ್ತುವಿನ ಮಹತ್ವ ಆಧುನಿಕ ಸಂದರ್ಭದಲ್ಲಿ ಎಷ್ಟು ಇದೆ ಎಂಬುದನ್ನು ಕುರಿತು ಚರ್ಚಿಸಿದ್ದಾರೆ. "ಶಕುನದ ಹಸ್ತಪ್ರತಿಗಳು" ಈ ಲೇಖನದಲ್ಲಿ ಪ್ರಾಚೀನ ಹಸ್ತಪ್ರತಿಯಲ್ಲಿ ಇರುವ ಶಕುನವನ್ನು ಗಮನಿಸಿದ್ದಾರೆ. ಹೀಗೆ ಶಕುನಗಳನ್ನು 'ಮನುಷ್ಯ

ಸಂಬಂಧಿ ಶಕುನ ಹಾಗೂ ಪ್ರಾಣಿಸಂಬಂಧಿ ಶಕುನ ಎಂದು ವಿಭಾಗ ಮಾಡಿಕೊಂಡು ಶಕುನದ ಬಗ್ಗೆ ಚರ್ಚಿಸಿದ್ದಾರೆ. "ಖಡ್ಗಶಾಸ್ತ್ರ ಮತ್ತು ಬಾಣಗಾರಿಕೆ ಹಸ್ತಪ್ರತಿಗಳು" 'ಬಾಣಗಾರಿಕೆ' ಈ ಕೃತಿಯನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿರುವ 'ಬಾಣಗಾರಿಕೆ' ಮತ್ತು ಬಾಣ ತಯಾರಿಕೆ' ಎಂಬ ಕೃತಿಗಳಲ್ಲಿ ಪರಿಷ್ಕರಿಸಿ ಬಾಣಗಾರಿಕೆ ವಿಧಿವಿಧಾನಗಳನ್ನು ಚರ್ಚಿಸಿದ್ದಾರೆ.

'ಮೈಸೂರು ಜಿಲ್ಲೆಯ ಹಸ್ತಪ್ರತಿ ಸಂಪತ್ತು' ಲೇಖನದಲ್ಲಿ ಮೈಸೂರು ಜಿಲ್ಲೆಯ ಹಸ್ತಪ್ರತಿ ಸಂಪತ್ತನ್ನು ಎರಡು ವಿಭಾಗ ಮಾಡಿಕೊಂಡು ಚರ್ಚಿಸಿದ್ದಾರೆ. ಅವುಗಳೆಂದರೆ 'ಸಾಂಸ್ಥಿಕ ಒಡೆತನದ ಹಸ್ತಪ್ರತಿಗಳು ಹಾಗೂ ವೈಯಕ್ತಿಕ ಒಡೆತನದಲ್ಲಿರುವ ಹಸ್ತಪ್ರತಿ ಸಂಪತ್ತು ಕುರಿತು ಸುದೀರ್ಘವಾಗಿ ವಿಶ್ಲೇಷಣೆ ಮಾಡಿದ್ದಾರೆ. "ಲೇಖನ ಸಾಮಗ್ರಿಗಳು ಮತ್ತು ತಯಾರಿಕೆ" ಪ್ರಾಚೀನ ಹಸ್ತಪ್ರತಿಗಳಲ್ಲಿ ಲೇಖನ ಸಾಮಗ್ರಿಗಳು ಮತ್ತು ತಯಾರಿಕೆಯ ಬಗ್ಗೆ ಉಲ್ಲೇಖವಿರುವ ವಸುದೇವ ಹಿಂಡಿ ಮತ್ತು ಪ್ರಾಕೃತ ಗ್ರಂಥದಲ್ಲಿ ಮರ, ದಂತ, ಕಬ್ಬಿಣ, ತಾಮ್ರ, ಬೆಳ್ಳಿ, ಕಂಚು, ಹಿತ್ತಾಳೆ, ಲೋಹೇತರ ವಸ್ತುಗಳಾದ ಶಿಲೆ, ಮಣ್ಣು, ಚರ್ಮ, ದಂತ, ತಾಳೆಗರಿ, ಭೂರ್ಜಪತ್ರ, ಕಾಗದ ಮುಂತಾದ ವಸ್ತುಗಳ ಮೇಲೆ ಬರೆದಿರುವ ಉಲ್ಲೇಖಗಳ ಆಧಾರದಿಂದ ಲೇಖನ ಸಾಮಗ್ರಿಗಳನ್ನು ಕುರಿತು ಚರ್ಚಿಸಲಾಗಿದೆ. "ಹಸ್ತಪ್ರತಿ ಸಂರಕ್ಷಣೆ" ಪ್ರಾಚೀನ ಕಾಲದಿಂದಲೂ ಹಸ್ತಪ್ರತಿಗಳ ಸಂರಕ್ಷಣೆ ಬಗೆಗೆಯಿದ್ದ ವಿಧಾನಗಳನ್ನು ಕುರಿತು ಚರ್ಚಿಸಿದ್ದಾರೆ. ಹೀಗೆ ಸಂರಕ್ಷಿತವಾಗಿ ಇದ್ದ ಪ್ರಾಚೀನ ಕೃತಿಗಳ ಅಥವಾ ಪ್ರತಿಗಳ ಮಹತ್ವವನ್ನು ಉಲ್ಲೇಖಿಸಿದ್ದಾರೆ. ಹಾಗೆಯೇ ಪ್ರಾಕೃತಿಕ ವಿಕೋಪ, ಧಾರ್ಮಿಕ ಸಂಘರ್ಷ ಹಾಗೂ ಜನರ ಔದಸೀನದಿಂದ ಹಸ್ತಪ್ರತಿಗಳು ನಾಶವಾದ ಬಗೆಗಳನ್ನು ವಿವರಿಸಿದ್ದಾರೆ. ಹಾಗೆಯೇ ಆಧುನಿಕತೆ ಸಂದರ್ಭದಲ್ಲಿ ಹಸ್ತಪ್ರತಿಗಳನ್ನು ಸಂರಕ್ಷಿಸುವ ವಿಧಾನಗಳನ್ನು ಕುರಿತು ಚರ್ಚಿಸಿದ್ದಾರೆ.

"ಗ್ರಂಥ ಸಂಪಾದನೆಗೆ ಎನ್.ಬಸವಾರಾಧ್ಯರ ಕೊಡುಗೆ" ಲೇಖನದಲ್ಲಿ ಎನ್.ಬಸವಾರಾಧ್ಯರ ಜೀವನ ಚರಿತ್ರೆ ಹಾಗೂ ಅವರು ಕನ್ನಡ ಗ್ರಂಥಸಂಪಾದನೆಗೆ ನೀಡಿದ ಕೊಡುಗೆ ಕುರಿತು ವಿವರಿಸಿದ್ದಾರೆ. "ಎಲ್.ಬಸವರಾಜು ಅವರ ಬಸವಣ್ಣನವರ ಷಟ್ಸ್ಥಲ ವಚನಗಳು" ಲೇಖನದಲ್ಲಿ ಬಸವಣ್ಣನವರ ಷಟ್ಸ್ಥಲ ವಚನಗಳನ್ನು ಎಲ್.ಬಸವರಾಜು ಅವರು ಪರಿಷ್ಕರಿಸಿದ ವಿಧಿವಿಧಾನಗಳನ್ನು ಎರಡು ರೀತಿಯಲ್ಲಿ ಚರ್ಚಿಸಿದ್ದಾರೆ ಅವುಗಳೆಂದರೆ, ವಚನಗಳ ಪರಿಷ್ಕರಣ ಹಾಗೂ ವಚನಗಳ ಸಹಚಿಂತನೆ ಹಿನ್ನೆಲೆಯಲ್ಲಿ ಅವರ ಪರಿಷ್ಕರಣದ ವೈಶಿಷ್ಟ್ಯವನ್ನು ಗುರುತಿಸಿದ್ದಾರೆ. "ಎಲ್. ಬಸವರಾಜು ಅವರ ಗ್ರಂಥಸಂಪಾದನೆಯ ಮಾರ್ಗ" ಲೇಖನದಲ್ಲಿ ಎಲ್.ಬಸವರಾಜು ಅವರು ಕನ್ನಡ ಗ್ರಂಥಸಂಪಾದನೆಗೆ ನೀಡಿದ ಕೊಡುಗೆಯನ್ನು ವೀರಶೈವ ಸಾಹಿತ್ಯ ಸಂಪಾದನೆ, ಜೈನಸಾಹಿತ್ಯ ಸಂಪಾದನೆ, ಶಾಸ್ತ್ರ ಮತ್ತಿತರ ಸಾಹಿತ್ಯ ಸಂಪಾದನೆ ಎಂದು ವಿಂಗಡಿಸಿಕೊಂಡು ವಿವರಿಸಿ ಈ ಕೃತಿಗಳ ಪರಿಷ್ಕರಣಕ್ಕೆ ಬಸವರಾಜು ಅವರು ಬಳಸಿದ ವಿಧಿವಿಧಾನವನ್ನು ಗುರುತಿಸಿದ್ದಾರೆ.

"ಪ.ನಾಗರಾಜಯ್ಯನವರ ಕಾವ್ಯ ಸಂಪಾದನೆ. ವ್ಯಾಖ್ಯಾನ, ಕೋಶ" ಲೇಖನದಲ್ಲಿ ಪ. ನಾಗರಾಜಯ್ಯನವರು ಆದಿಪುರಾಣ ದೀಪಿಕೆ, ಜೈನ ಪರಿಭಾಷಾ ರತ್ನಕೋಶ, ಈ ಕೃತಿಗಳ ಪ್ರತಿಯೊಂದು

ಪದ್ಯಕ್ಕೂ ವ್ಯಾಖ್ಯಾನವನ್ನು ಬರೆದಿರುವುದನ್ನು ಗುರುತಿಸಿದ್ದಾರೆ. "ಎಂ.ಎಂ.ಕಲಬುರ್ಗಿ ಅವರ ಗ್ರಂಥ ಸಂಪಾದನ ವ್ಯಾಸಂಗ" ಲೇಖನದಲ್ಲಿ ಪ್ರಮುಖವಾಗಿ ಕನ್ನಡ ಹಸ್ತಪ್ರತಿಶಾಸ್ತ್ರ ಮತ್ತು ಗ್ರಂಥಸಂಪಾದನ ಕ್ಷೇತ್ರಕ್ಕೆ ಕೊಟ್ಟ ಅಭೂತಪೂರ್ವ ಕೊಡುಗೆಗಳ ಕುರಿತು ಬರೆದಿದ್ದಾರೆ. ಹಸ್ತಪ್ರತಿ ಸಂಗ್ರಹ, ಶಾಸ್ತ್ರ ಕೃತಿಗಳ ರಚನೆ, ಪ್ರಾಚೀನ ಕಾವ್ಯಗಳ ಸಂಪಾದನೆ, ಸಾಂಸ್ಥಿಕ ಸಂಪಾದನೆ, ಬಿಡಿ ಬರಹಗಳು ಈ ರೀತಿ ವಿಂಗಡಿಸಿಕೊಂಡು ಅವರು ಕನ್ನಡ ಗ್ರಂಥಸಂಪಾದನೆಗೆ ನೀಡಿದ ಕೊಡುಗೆಯನ್ನು ವಿಶ್ಲೇಷಿಸಿದ್ದಾರೆ. "ಗ್ರಂಥಸಂಪಾದನೆ ಮತ್ತು ಮಹಿಳೆ" ಲೇಖನದಲ್ಲಿ ಮಹಿಳೆಯರ ಗ್ರಂಥಸಂಪಾದನೆಯನ್ನು ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಎಂದು ವಿಭಾಗಿಸಿ ವಿವರಿಸಿದ್ದಾರೆ. ಹಾಗೂ ಮಹಿಳೆಯರು ಸಂಪಾದಿಸಿದ ಕೃತಿಗಳ ವೈಧಾನಿಕತೆಯನ್ನು ಕುರಿತು ಚರ್ಚಿಸಿದ್ದಾರೆ. ಗ್ರಂಥಸಂಪಾದನ ಸಂಕಥನ ಕೃತಿಯಲ್ಲಿನ ೪೨ ಲೇಖನಗಳು ಗ್ರಂಥಸಂಪಾದನೆಯ ವೈಧಾನಿಕತೆಯನ್ನು ಕುರಿತು ಬರೆದಂಥ ಲೇಖನಗಳು. ಹಾಗೆಯೇ ಹಸ್ತಪ್ರತಿಗಳ ಅಧ್ಯಯನದ ವಿವಿಧ ಸಾಧ್ಯತೆಗಳನ್ನು ಕುರಿತು ಚರ್ಚಿಸಲಾಗಿದೆ.

ಒಟ್ಟಾರೆಯಾಗಿ ನಾಲ್ಕು ಲೇಖನ ಸಂಕಲನದಲ್ಲಿ ಪ್ರಕಟವಾದ ಲೇಖನಗಳು ಈ ಕ್ಷೇತ್ರಕ್ಕೆ ನೀಡಿದ ಒಳ್ಳೆಯ ಕೊಡುಗೆಗಳಾಗಿವೆ. ವೈ.ಸಿ.ಭಾನುಮತಿ ಅವರು ಹಳೆಗನ್ನಡ ಕೃತಿಗಳ ಪರಿಷ್ಕರಣ ಕಾರ್ಯದಲ್ಲಿ ಕ್ರಿಯಾಶೀಲರಾಗಿ ತೊಡಗಿಕೊಂಡು ಅನೇಕ ಕೃತಿಗಳನ್ನು ಪರಿಷ್ಕರಿಸಿ ಪ್ರಕಟಿಸಿದ ಅವರು ಗ್ರಂಥಸಂಪಾದನೆಯ ತಾತ್ವಿಕತೆಯನ್ನು ಕುರಿತು ಮತ್ತು ಕನ್ನಡ ಗ್ರಂಥಸಂಪಾದನೆ ಇತಿಹಾಸವನ್ನು ತಿಳಿಸುವಂತಹ ಮಹತ್ವಪೂರ್ಣವಾದ ಸೈದ್ಧಾಂತಿಕ ಲೇಖನಗಳನ್ನು ಬರೆದಿದ್ದಾರೆ. ಪಾಶ್ಚಾತ್ಯ ವಿದ್ವಾಂಸರು ಮತ್ತು ದೇಶೀ ವಿದ್ವಾಂಸರು ಕನ್ನಡ ಗ್ರಂಥಸಂಪಾದನೆಗೆ ನೀಡಿದ ಕೊಡುಗೆ ಅವರು ಪ್ರಾಚೀನ ಕಾವ್ಯಗಳನ್ನು ಪರಿಷ್ಕರಿಸುವಾಗ ಬಳಸಿಕೊಂಡ ವಿಧಿವಿಧಾನಗಳನ್ನು ಕುರಿತು ಹಲವು ವಿಧಗಳಲ್ಲಿ ಚರ್ಚಿಸಿರುವುದನ್ನು ಗಮನಿಸಲಾಗಿದೆ ಮತ್ತು ಕನ್ನಡ ಗ್ರಂಥಸಂಪಾದನೆ ಇತಿಹಾಸದಲ್ಲಿ ಮಹಿಳೆಯೊಬ್ಬರು ಕನ್ನಡ ಗ್ರಂಥಸಂಪಾದನೆಗೆ ಸಂಬಂಧಿಸಿದಂತೆ ಸುದೀರ್ಘ ಚಿಂತನೆಗೆ ಒಳಗಾಗಿರುವುದನ್ನು ಭಾನುಮತಿ ಅವರೊಬ್ಬರೆ.

೩.೨.೩.೬. ಜಾನಪದ ಸಾಹಿತ್ಯ ಸಂಪಾದನೆ

ವೈ.ಸಿ.ಭಾನುಮತಿ ಅವರು ಕನ್ನಡ ಗ್ರಂಥಸಂಪಾದನಾ ಕ್ಷೇತ್ರದಲ್ಲಿ ಮಹತ್ವಪೂರ್ಣ ಸಾಧನೆ ಮಾಡಿದಂತೆ ಜಾನಪದ ಕ್ಷೇತ್ರದಲ್ಲೂ ಕೆಲಸ ಮಾಡಿದ್ದಾರೆ. ಜಾನಪದ ಕಥಾಸಂಕಲನ, ಜಾನಪದ ದೇವರ ಹಾಡುಗಳು, ಮಲೆನಾಡು ಶೈವ ಒಕ್ಕಲಿಗರು ಜಾನಪದೀಯ ಅಧ್ಯಯನ. ಪುಟ್ಟ ಮಲ್ಲಿಗೆ ಹಿಡಿತುಂಬ ಮುಂತಾದ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಇಲ್ಲಿನ ಅವರ ವೈಧಾನಿಕತೆ ಭಿನ್ನವಾಗಿರುವಂಥದ್ದು.

೩.೨.೩.೬.೧. ಇಬ್ಬೀಡಿನ ಜನಪದ ಕತೆಗಳು

ಕಥಾಸಂಕಲನವನ್ನು ವೈ.ಸಿ.ಭಾನುಮತಿ ಅವರು ಸಂಗ್ರಹಿಸಿ ೧೯೮೯ರಲ್ಲಿ ಕೇಶವ ಪ್ರಕಾಶದಿಂದ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ೨೧ ಜಾನಪದ ಕತೆಗಳಿವೆ. ಈ ಕಥೆಗಳನ್ನು ಸಂಗನನಾಯಕ ಮತ್ತು

ಗಂಗಾಧರಪ್ಪ ಎನ್ನುವ ವಕ್ತೃಗಳಿಂದ ಸಂಗ್ರಹಿಸಿದ್ದಾರೆ. ಸಂಗನ ನಾಯಕ ಎಸ್.ಎಲ್.ಸಿ. ಪಾಸ್ ಮಾಡಿದ್ದ ಕಾರಣದಿಂದ ಕಥೆಯನ್ನು ಹೇಳುವಾಗ ಇಂಗ್ಲಿಷ್ ಪದಗಳ ಬಳಕೆ ಮಾಡಿರುವುದನ್ನು ಸಂಪಾದಕರು ಗುರುತಿಸಿದ್ದಾರೆ. ಗಂಗಾಧರಪ್ಪನವರೂ ಏಳನೇ ತರಗತಿಯವರೆಗೆ ವ್ಯಾಸಂಗ ಮಾಡಿದವರು. ಸಂಗನ ನಾಯಕನು ಕಥೆ ಹೇಳುವಾಗ ಮೈಸೂರು ಅರಸರ ಮನೆತನದೊಂದಿಗೆ ತನ್ನ ಒಡನಾಟದ ಮೂಲಕ ಕಥೆ ಹೇಳುವಂತದ್ದನ್ನು ಗುರುತಿಸಿದ್ದಾರೆ. ನಿರೂಪಣ ಶೈಲಿ ಹಾಗೂ ಕಥೆಯನ್ನು ಪ್ರಾರಂಭ ಮಾಡುವಾಗ ಅತ್ಯುತ್ತಮವಾದ ಪದ ಸಂಪತ್ತು ಅವನಲ್ಲಿ ಇರುವುದನ್ನು ಸಂಪಾದಕರು ಗುರುತಿಸಿದ್ದಾರೆ. ಪ್ರಸ್ತುತ ಕಥಾಸಂಕಲನದಲ್ಲಿ ೨೧ ಕತೆಗಳಿದ್ದು ಅವುಗಳನ್ನು ಪ್ರಾಣಿಕಥೆಗಳು, ನೀತಿಕಥೆಗಳು, ಪುರಾಣ ಕಥೆಗಳಾಗಿ ವಿಭಾಗ ಮಾಡಿಕೊಂಡು ಇಲ್ಲಿ ಚರ್ಚಿಸಲಾಗಿದೆ.

ಪ್ರಾಣಿ ಕಥೆಗಳು

ಇದರಲ್ಲಿ ಮೂರು ಕಥೆಗಳು ಮಾತ್ರ ಪ್ರಾಣಿಗಳಿಗೆ ಸಂಬಂಧಿಸಿವೆ. ಮೊದಲನೆಯ ಕಥೆ 'ನೂರೊಂದು ಹುಲಿಕಥೆ'ಯಲ್ಲಿ ಕುಂಟಾ ದಾಸಪ್ಪ ತನ್ನ ಚಾಣಾಕ್ಷತನದಿಂದ ಹುಲಿಗಳು ಸಂಪಾದಿಸಿದ್ದ ಒಡವೆ, ವಸ್ತು, ಹಣವನ್ನು ಮೋಸದಿಂದ ಪಡೆದುಕೊಂಡು ಮನೆಗೆ ಮರಳಿ ಬಂದಾಗ, ಮನೆಯಲ್ಲಿದ್ದ ಅಣ್ಣನು ಇದನ್ನು ನೋಡಿ ದುರಾಸೆಯಿಂದ ಹುಲಿಗೆ ಮೋಸ ಮಾಡಲು ಹೋಗಿ ಸೊಂಟ ಮುರಿದುಕೊಂಡು ಮನೆಗೆ ಬರುವ ಸನ್ನಿವೇಶವು ಮನುಷ್ಯನು ಹಣದ ಆಸೆಗಾಗಿ ದುಷ್ಟನಾಗುವುದನ್ನು ತಿಳಿಸುತ್ತದೆ. 'ಮೊಸಳೆ ಮೋಸ ನರಿಯುಕ್ತಿ' ಈ ಕಥೆಯಲ್ಲಿ ಪ್ರಾಣಿಗಳಲ್ಲಿಯೂ ಮೋಸ ವಂಚನೆ ಇರುವುದನ್ನು ಗಮನಿಸಿದ್ದಾರೆ. ಜಾನಪದ ಕಥೆಯಲ್ಲಿ ನರಿಗೆ ವಿಶೇಷವಾದ ಸ್ಥಾನವಿದೆ. ಆದ್ದರಿಂದ ನರಿ ನ್ಯಾಯವಾದಿ, ಪತಿ, ವಂಚಕನಂತೆ ಸಂದರ್ಭಕ್ಕೆ ಅನುಗುಣವಾಗಿ ವಿವಿಧ ಪಾತ್ರಗಳಲ್ಲಿ ಕಂಡುಬರುವುದನ್ನು ಸಂಪಾದಕರು ಗುರುತಿಸಿದ್ದಾರೆ. 'ಗುಳ್ಳೆನರಿ ಕಥೆ'ಯಲ್ಲಿ ನರಿಯು ನಳಿ ಮರಿಯನ್ನು ತಿನ್ನುತ್ತಿದ್ದು, ಒಂದು ದಿನ ನಳ್ಳಿಯಿಂದ ತಪ್ಪಿಸಿಕೊಂಡು ಮೇಕೆ ಮರಿಯನ್ನು ತಿನ್ನುತ್ತಿದ್ದು ನೀರು ಕುಡಿಯಲು ಹೋಗಿ ಬೇಟೆಗಾರನ ಕೈಯಿಗೆ ಸಿಕ್ಕಿದಾಗ ಉಪಾಯದಿಂದ ತಪ್ಪಿಸಿಕೊಂಡು ಬಾಳೆ ತೋಟದಲ್ಲಿ ಯಜಮಾನನ್ನು ಬೆದರಿಸಿ ಬಾಳೆ ಹಣ್ಣನ್ನು ತಿನ್ನುತ್ತದೆ. ಇಂತಹ ಅನೇಕ ಕಥೆಗಳು ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಪ್ರಚಲಿತ ಇರುವುದನ್ನು ಸಂಪಾದಕರು ಗುರುತಿಸಿದ್ದಾರೆ.

ಪ್ರಸ್ತುತ ಸಂಕಲನದಲ್ಲಿ ಹತ್ತು ನೀತಿಕಥೆಗಳು ಇವೆ. ಮೊದಲ ಕಥೆ 'ಕಿರಿಮಗ' ಈ ಕಥೆ ಅದೃಷ್ಟದ ಬಗೆಗೆ ಜಾನಪದರಿಗಿರುವ ನಂಬಿಕೆಯನ್ನು ತಿಳಿಸುತ್ತದೆ. 'ಮುದುಕಿ ಮಗ' ಈ ಕಥೆ ಯೂರೋಪಿನಲ್ಲಿ ಮ್ಯಾಜಿಕ್ರಿಂಗ್ ಎಂಬ ಹೆಸರಿನಲ್ಲಿ ದೊರೆಯುತ್ತದೆ ಎಂದು ಸಂಪಾದಕರು ಹೇಳಿದ್ದಾರೆ. ಹಾಗೆಯೇ ಕಥೆಗಾರ ಪ್ರತಿ ಭಾನುವಾರ ಹೋಗುವ ಹನಿಕೆ ಸಂತೆಯ ಪ್ರಸ್ತಾಪ ಮತ್ತು ಅಲ್ಲಿ ನಡೆಯುವ ಸಂತೆಯ ದಿನಗಳ ಚಿತ್ರಣವನ್ನು ಕಟ್ಟಿಕೊಡುತ್ತಾರೆ. 'ಅಣ್ಣ ತಮ್ಮ' ಕತೆಯಲ್ಲಿ ಹಾವು ಕಚ್ಚಿ ಹೆಂಡತಿ ಮಕ್ಕಳು ತೀರಿಕೊಂಡಾಗ ತಮ್ಮ ಹುಚ್ಚನಾದ ಸನ್ನಿವೇಶದಲ್ಲಿ ಹಾವು ಅವನಿಗೆ ಸಹಾಯ ಮಾಡುತ್ತದೆ. ಈ ಕಥೆಯ ಮೇಲೆ ಶಿಷ್ಟ ಸಾಹಿತ್ಯ ಪ್ರಭಾವ ಆಗಿರುವುದನ್ನು ಸಂಪಾದಕರು

ಗುರುತಿಸಿದ್ದಾರೆ. 'ತಿಮ್ಮಣ್ಣ ತಿಮ್ಮಕ್ಕ' ತಿಮ್ಮಣ್ಣ ದಡ್ಡನಾದರೂ ಪ್ರಾಮಾಣಿಕ ವ್ಯಕ್ತಿ. ಆದರೂ ಆಕಸ್ಮಿಕವಾಗಿ ಸಿಕ್ಕ ಪೆಟ್ಟಿಗೆಯನ್ನು ಊರಿನ ಶಾಲೆಯ ಮೇಷ್ಟ್ರಿಗೆ ಕೊಡಲು ಮುಂದಾದಾಗ ತಿಮ್ಮಕ್ಕ ಜಾಣತನದಿಂದ ತನ್ನದಾಗಿಸಿ ಕೊಳ್ಳುತ್ತಾಳೆ. ಹಾಸ್ಯ ಲೇಪನದಿಂದಾಗಿ ಈ ಕಥೆ ಗಮನ ಸೆಳೆಯುತ್ತದೆ ಎಂದಿದ್ದಾರೆ. 'ಬೇಡರ ಹುಡುಗ' ಕಥೆಯಲ್ಲಿ ನಿರೂಪಕನು ತನ್ನದೇ ಆದ ಭಾಷಾ ಶೈಲಿಯಲ್ಲಿ ನಿರೂಪಿಸುತ್ತಾ ಬಂದಿರುವುದನ್ನು ಸಂಪಾದಕರು ಗಮನಿಸಿದ್ದಾರೆ. 'ಗಂಡ-ಹೆಂಡತಿ' ಕಥೆಯಲ್ಲಿ ಗಂಡ ಜಂಗಮನಾಗಿ ಭಿಕ್ಷೆ ಬೇಡಿ ಹಣ ಸಂಪಾದನೆ ಮಾಡುತ್ತಿರುವಾಗ ಹೆಂಡತಿ ತೃಪ್ತಳಾಗದೆ ದುರಾಸೆಯಿಂದ ಹೆಚ್ಚು ಹಣ ಸಂಪಾದಿಸಲು ಹೋಗಿ ಮರಣ ಹೊಂದುತ್ತಾಳೆ. 'ಮಲ್ಲಣ' ಕಥೆಯಲ್ಲಿ ಮಲ್ಲಣನು ಇಡ್ಲಿಯ ಆಸೆಗಾಗಿ ಮಲ್ಲಕ್ಕನ ಮನೆಗೆ ಬಂದ ಸಾಬಿಯನ್ನು ಕೊಂದು ಹಣ ಸಂಪಾದನೆ ಮಾಡುತ್ತಾನೆ. 'ಹಾವಾಗಿ ಹರಿವ ತಮ್ಮ' ಈ ಕಥೆ ಅಕ್ಕ ತಮ್ಮ ತುಂಬಾ ವಾತ್ಸಲ್ಯದಿಂದ ಬಳಕೆಯಾಗಿರುವುದನ್ನು ಇಲ್ಲಿ ಗಮನಿಸಲಾಗಿದೆ.

ಪುರಾಣಗಳನ್ನು ಆಧರಿಸಿದ ಕಥೆಗಳು ಪ್ರಸ್ತುತ ಸಂಪುಟದಲ್ಲಿ ಇವೆ. 'ಬ್ರಹ್ಮಲಿಖಿತ' 'ಈಶ್ವರ ವಿಷ್ಣು' ಈ ಕಥೆಗಳು ಧಾರ್ಮಿಕ ಕಥೆಗಳ ಸಾಲಿಗೆ ಸೇರುವಂತಹದ್ದು ಎಂದು ಸಂಪಾದಕರು ಗುರುತಿಸಿದ್ದಾರೆ. 'ರೂಪವತಿ' ಕಥೆಯು ಸಂಕಿರಣ ಸ್ವರೂಪದ್ದಾಗಿದೆ. ರಾಜಕುಮಾರನಿಗೆ ಮದುವೆ ಮಾಡಲು ಹೋಗುವಾಗ ಮಾರ್ಗ ಮಧ್ಯದಲ್ಲಿ ರಾಜಕುಮಾರ ವೇಶ್ಯ ಮಗಳನ್ನು ಮದುವೆಯಾಗುತ್ತಾನೆ. ಆದ್ದರಿಂದ ಮಂತ್ರಿ ರೂಪವತಿಯನ್ನು ಖಡ್ಗಕ್ಕೆ ವಿವಾಹ ಮಾಡಿಕೊಂಡು ಬರುತ್ತಾನೆ. 'ನಾಗಕನ್ನಿಕ ಕಥೆಯಲ್ಲಿ ಪಾದರಕ್ಷೆ ಕಳೆದು ಹೋಗುವ ಭಾಗ ಸಿಂಡ್ರೆಲಾ ಕಥೆಯನ್ನು ನೆನಪಿಗೆ ತರುತ್ತದೆ ಎಂದಿದ್ದಾರೆ. 'ಮಂತ್ರಿ ಕುಮಾರ ಕಥೆ' ಏಳು ಜನ ರಾಜಕುಮಾರರು ರಾಜ ರಾಣಿಯರನ್ನು ಕುರಿತದ್ದಾಗಿದೆ. ಸಾಸಕಾಯಿ ಸಾರು' ಈ ಕಥೆ ಅತ್ತೆ ಸೊಸೆಯ ನಡುವಿನ ಮತ್ಸರವನ್ನು ವಿವರಿಸಲಾಗಿದೆ. ಇಂತಹ ಕಥೆಗಳನ್ನು ಸಂಗ್ರಹಿಸುವಾಗ ಸಂಪಾದಕರು ಹೆಚ್ಚು ಶ್ರಮಪಟ್ಟಿರುವುದನ್ನು ಕಾಣಬಹುದಾಗಿದೆ. ಮಾರ್ಗ ಹಾಗೂ ದೇಸೀ ಸಂಪಾದನೆಯಲ್ಲಿ ವಿದ್ವತ್ಪೂರ್ಣ ಕೆಲಸ ಮಾಡಿದ ಇವರು ಮೌಖಿಕ ಸಾಹಿತ್ಯದ ಸಂಪಾದನೆಯನ್ನೂ ವ್ಯವಸ್ಥಿತವಾಗಿ ಮಾಡಿದ್ದಾರೆ. ಇದು ಭಾನುಮತಿಯವರ ವಿದ್ವತ್ತಿನ ವೈಶಿಷ್ಟ್ಯವೂ ಆಗಿದೆ. ಶಿಷ್ಟದಲ್ಲಿ ಒಂದು ಕೃತಿಗೆ ಒಬ್ಬ ಕವಿ ಇರುತ್ತಾನೆ. ಪ್ರಕ್ಷೇಪಗಳು ಕಂಡುಬಂದರೆ ತಿದ್ದಿ ಸರಿಪಡಿಸಬಹುದು. ಆದರೆ ಮೌಖಿಕ ಸಂಪಾದನೆಯಲ್ಲಿ ನಿರೂಪಕ ಬದುಕಿರುವಾಗಲೆ ಅವನ ನಿರೂಪಣಾ ಶೈಲಿಯನ್ನು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ. ಇದು ತುಂಬಾ ಕಷ್ಟದ ಕೆಲಸ ಎಂಬುದು ಭಾನುಮತಿ ಅವರ ಅನುಭವದ ಮಾತು. ಇಲ್ಲಿನ ಕಥೆಗಳನ್ನು ಜಾನಪದ ಕಥೆಗಳ ಸಂಪಾದನ ಪದ್ಧತಿಗೆ ನಿಷ್ಠಳಾಗಿ ಸಂಪಾದಿಸಿರುವುದಾಗಿ ಹೇಳಿದ್ದಾರೆ. ಕತೆಗಾರನ ಭಾಷೆಯಲ್ಲಾಗಲಿ ನಿರೂಪಣೆಯಲ್ಲಾಗಲಿ ಯಾವ ಬಗೆಯ ವ್ಯತ್ಯಾಸವನ್ನು ಮಾಡಿಕೊಂಡಿಲ್ಲ ಎಂಬ ಮಾತನ್ನೂ ಹೇಳಿದ್ದಾರೆ. ಸಂಗ್ರಹಕಾರ್ಯದಲ್ಲಿ ಧ್ವನಿ ಮುದ್ರಣವನ್ನು ಬಳಸಿಕೊಳ್ಳುವುದರಿಂದ ಕಥೆಯ ಯಥಾವತ್ತು ರೂಪವನ್ನು ಉಳಿಸಿಕೊಳ್ಳಲಾಗಿದೆ. ಕತೆಗಾರನು ಇಂಗ್ಲಿಷ್ ಪದಗಳನ್ನು ಬಳಸಿದಂತಹ ಪದಗಳನ್ನು

ಹಾಗೆಯೇ ಸಂಗ್ರಹಿಸಿದ್ದಾರೆ. ಅಂದರೆ ವಕ್ತೃವನ್ನಾಧರಿಸಿ ಕೃತಿ ಸಂಪಾದನೆ ಮಾಡುವ ಪಠ್ಯದ ಪ್ರಾದೇಶಿಕ ವೈಶಿಷ್ಟ್ಯವನ್ನು ಹಾಗೆ ಉಳಿಸಿಕೊಳ್ಳುವ ವಿಧಾನವನ್ನು ಇಂಥಲ್ಲಿ ಕಾಣುತ್ತೇವೆ.

ಈ ಸಂಕಲನದ ಕಥೆಗಳನ್ನು ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಇಬ್ಬೀಡು ಗ್ರಾಮದಲ್ಲಿ ಸಂಗ್ರಹಿಸಲಾಗಿದೆ. ಈ ಕಥೆಗಳಲ್ಲಿ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಅಂಶಗಳಿರುವುದನ್ನು ಸಂಪಾದಕರು ಗುರುತಿಸಿದ್ದಾರೆ. ಉದಾಹರಣೆಗೆ 'ರೂಪವತಿ' ಕಥೆಯಲ್ಲಿ ಸೀರೆ ಅರಿಶಿನ ಕುಂಕುಮ ಬಾಚಣಿಗೆ ಕೊಬ್ರಿ ಬಟ್ಟಲುಗಳನ್ನು ತೆಗೆದುಕೊಂಡು ಮಗಳನ್ನು ನೋಡಲು ಹೋಗುವ ಹಲವು ಸಾಂಸ್ಕೃತಿಕ ಅಂಶಗಳನ್ನು ಗುರುತಿಸಿದ್ದಾರೆ. ಪ್ರಸ್ತುತ ಸಂಕಲನದಲ್ಲಿ ಅರ್ಥಕೋಶ, ವಿಶಿಷ್ಟಪದ ಸೂಚಿ, ಆಶಯ ಸೂಚಿ ಹಾಗೂ ವಕ್ತೃಗಳ ಸಂದರ್ಶನಗಳ ವಿವರವನ್ನು ನೀಡಿದ್ದಾರೆ. ಜಾನಪದ ಕಥೆಗಳು ನಶಿಸಿ ಹೋಗುವ ಸಂದರ್ಭದಲ್ಲಿ ಈ ಕಥೆಗಳ ಬಗ್ಗೆ ಅಧ್ಯಯನ ಮಾಡಲು ಉಪಯುಕ್ತವಾಗಿವೆ. ಇಬ್ಬೀಡಿನ ಜಾನಪದ ಕಥೆಗೆ ೧೯೮೮ರಲ್ಲಿ ರಾಜ್ಯ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಬಂದಿದೆ. ದಿ. ಗುಂಡ್ಮಿ ಸ್ಮಾರಕ ಜಾನಪದ ಪ್ರಶಸ್ತಿ ಲಭಿಸಿರುವುದು ವಿಶೇಷ.

೩.೨.೩.೬.೨. ಮಲೆನಾಡು ಶೈವ ಒಕ್ಕಲಿಗರ: ಜಾನಪದೀಯ ಅಧ್ಯಯನ

ಕೃತಿಯನ್ನು ವೈ.ಸಿ. ಭಾನುಮತಿ ಅವರು ರಚಿಸಿ ೧೯೯೪ರಲ್ಲಿ ಕೇಶವ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಈ ಕೃತಿಯು ಮಲೆನಾಡು ಶೈವ ಒಕ್ಕಲಿಗರ ಸಂಪ್ರದಾಯ, ನಂಬಿಕೆ, ಆಚರಣೆ ಹಾಗೂ ಅವರ ಸಾಂಸ್ಕೃತಿಕ ಅಂಶಗಳನ್ನು ಒಳಗೊಂಡಿದೆ. ಮಲೆನಾಡು ಶೈವ ಒಕ್ಕಲಿಗರು ಆದಿವಾಸಿ ಜನಾಂಗವೇನೂ ಅಲ್ಲ. ಇದು ಅಂತರಂಗದಲ್ಲಿ ಬುಡಕಟ್ಟು ಲಕ್ಷಣವನ್ನು ಉಳಿಸಿಕೊಂಡು ಬಹಿರಂಗದಲ್ಲಿ ನಾಗರೀಕತೆಯನ್ನು ಬಿಂಬಿಸುತ್ತಿರುವ ಜನಾಂಗ ಎಂದು ಹೇಳುತ್ತಾರೆ. ಶೈವ ಒಕ್ಕಲಿಗರ ಅಧ್ಯಯನವು ಸಾಂಸ್ಕೃತಿಕ ಮತ್ತು ಜಾನಪದೀಯ ನೆಲೆಯಿಂದ ರೂಪಗೊಂಡಿರುವಂಥದ್ದು. ಮೌಖಿಕ ರೂಪಗಳನ್ನು ಆಧರಿಸಿ ಸಾಂಸ್ಕೃತಿಕ ಶಿಸ್ತಿನ ಹಿನ್ನೆಲೆಯಲ್ಲಿ ಈ ಜನಾಂಗದ ವಿವಿಧ ಆಚರಣೆಗಳನ್ನು ವಿಶ್ಲೇಷಿಸಿದ್ದಾರೆ.

'ಶಾಸನಗಳಲ್ಲಿ ಒಕ್ಕಲಿಗರು' ಎಂಬ ಭಾಗ–೨ ರಲ್ಲಿ ಮಲೆನಾಡು ಶೈವ ಒಕ್ಕಲಿಗರು ನೆಲೆಸಿರುವ ತಾಣಗಳಲ್ಲಿ ದೊರೆಯುವ ಶಾಸನಗಳನ್ನು ಅವಲೋಕಿಸಿದ್ದಾರೆ. 'ಗೌಡ ಪದದ ನಿಷ್ಪತ್ತಿ' ಮಲೆನಾಡು ಶೈವ ಒಕ್ಕಲಿಗರ ಜನಾಂಗದ ಹಿನ್ನೆಲೆ, ಚರಿತ್ರೆಯಲ್ಲಿ ನಿರ್ವಹಿಸಿದ ವೃತ್ತಿ ಕುಲಕಸುಬುಗಳ ಬಗ್ಗೆ ಶಾಸನ ಹಾಗೂ ವೀರಗಲ್ಲುಗಳಲ್ಲಿರುವ ಮಾಹಿತಿಯೊಂದಿಗೆ ಚರ್ಚಿಸುತ್ತಾರೆ. 'ಜನನ ಸಂಸ್ಕಾರ' ಭಾಗದಲ್ಲಿ ಮಲೆನಾಡು ಶೈವ ಒಕ್ಕಲಿಗರ ಸಂಪ್ರದಾಯದಲ್ಲಿ ಸ್ತ್ರೀಯರು ಗರ್ಭಿಣಿ ಆದಾಗ ಸೇವಿಸಬೇಕಾದ ಆಹಾರ ಪದ್ಧತಿಯ ಬಗ್ಗೆ ಮಗುವಿನ ಆರೋಗ್ಯ, ತಾಯಿಯ ಆರೋಗ್ಯದಂತಹ ಅನೇಕ ವಿಚಾರಗಳನ್ನು ಚರ್ಚಿಸಿದ್ದಾರೆ.

ಒಸಗೆ, ಮದುವೆ, ಹಬ್ಬಗಳು, ಸುಗ್ಗಿಹಬ್ಬ, ಬೇಟೆ, ಬೇಸಾಯ, ಅಡುಗೆ ಸಂಪ್ರದಾಯ, ವೈದ್ಯ ಪದ್ಧತಿ, ಮಲೆನಾಡಿನ ಮನೆಗಳ ಮಾದರಿ, ಭಾಷೆ ಸಾಹಿತ್ಯ ಇತ್ಯಾದಿ ಅಂಶಗಳನ್ನು ಕುರಿತು ಸುದೀರ್ಘವಾದ ಅಧ್ಯಯನ ಮಾಡಿದ್ದಾರೆ. ಪ್ರಸ್ತುತ ಕೃತಿ ೨೧೮ ಪುಟಗಳಲಿದ್ದು ಇದರಲ್ಲಿ ಪ್ರಸ್ತಾವನೆ ಉಪಯುಕ್ತವಾಗಿದೆ. ಅನುಬಂಧದಲ್ಲಿ ಮಾಹಿತಿ ಸಂಗ್ರಹಿಸಿದ ವಕ್ತೃವಿವರ, ವಿಶಿಷ್ಟ ಶಬ್ದಕೋಶಗಳ

ವಿವರಣೆಯನ್ನು ಕೊಡಲಾಗಿದೆ. ಕ್ಷೇತ್ರಕಾರ್ಯದ ಮೂಲಕ ಮಾಹಿತಿಯನ್ನು ಸಂಗ್ರಹಿಸಿ ಅದನ್ನು ಶಿಷ್ಟ ಸಾಹಿತ್ಯ ಕೃತಿಯೊಂದಿಗೆ ತೌಲನಿಕ ವಿಮರ್ಶೆ ಮಾಡಿದ್ದಾರೆ. ಈ ಕೃತಿಗೆ ಮೈಸೂರು ವಿಶ್ವವಿದ್ಯಾಲಯದ ೧೯೯೪ರ ತೀನಂಶ್ರೀ ಸಂಶೋಧನ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಮಲ್ಲಿಕಾ ಪ್ರಶಸ್ತಿ ದೊರೆತಿರುವುದು ಶ್ಲಾಘನೀಯ.

೩.೨.೩.೬.೩. ಜಾನಪದ ಭಿತ್ತಿ

ಕೃತಿಯನ್ನು ಭಾನುಮತಿ ಅವರು ಸಂಗ್ರಹಿಸಿ ೧೯೯೯ರಲ್ಲಿ ಸಂವಹನ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಪ್ರಸ್ತುತ ಕೃತಿಯಲ್ಲಿ ೧೨ ಲೇಖನಗಳಿವೆ. ಇವುಗಳಲ್ಲಿ ಕೆಲವು ಜಾನಪದ ವಿಚಾರ ಸಂಕಿರಣಗಳಲ್ಲಿ ಮಂಡಿತವಾಗಿದ್ದರೆ ಉಳಿದ ಲೇಖನಗಳನ್ನು ಕ್ಷೇತ್ರಕಾರ್ಯ ಮಾಹಿತಿಗಳ ಮೂಲಕ ಸಿದ್ಧಪಡಿಸಿದ್ದಾರೆ. ಇಲ್ಲಿರುವಂತಹ ಲೇಖನಗಳು ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿವೆ.

ಪ್ರಾಣಿ ಕಥೆಗಳು' ಈ ಲೇಖನದಲ್ಲಿ ಬಲಿಷ್ಠ ಕನಿಷ್ಠ ಇತ್ಯಾದಿಯಾಗಿ ಪ್ರಾಣಿಗಳಲ್ಲಿಯೂ ಇರುವ ವಿಭಿನ್ನತೆಯನ್ನು ಕುರಿತು ಚರ್ಚಿಸಿರುವುದು ಮತ್ತು 'ಜನಪದ ಕಥೆಗಳು ಐತಿಹ್ಯಗಳು ಮತ್ತು ಮಹಿಳೆ' ಜಾನಪದ ಕಥೆಗಳನ್ನು ಸ್ತ್ರೀವಾದಿ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿ ಸ್ತ್ರೀಯರನ್ನು ಪುರುಷ ಕೇಂದ್ರಿತ ಸಮಾಜದಲ್ಲಿ ನಡೆಸಿಕೊಂಡ ರೀತಿ, ಸಂಪ್ರದಾಯದ ಸಂಕೋಲೆಯೊಳಗೂ ಆಕೆ ತಲೆಯೆತ್ತಿ ನಿಲ್ಲಲು ನಡೆಸಿದ ಪ್ರಯತ್ನಗಳನ್ನು ವಿವರಿಸಿದ್ದಾರೆ. ಜಾನಪದ ಕಥೆಗಳು, ತ್ರಿಪದಿಗಳು, ಗಾದೆ, ಒಗಟು, ಸ್ತ್ರೀಯರನ್ನು ನಿಂದಿಸುವಂತಹ ಸಂಗತಿಗಳು ಮಹಿಳೆಯರ ಬದುಕಿನ ಸ್ಥಿತಿಗತಿ ಹಾಗೂ ಅನೇಕ ಅನಿರ್ಬಂಧಿತ ಕಟ್ಟಳೆಗಳನ್ನು ಮೀರಿಯೂ ಹೆಣ್ಣು ತನ್ನ ಬದುಕನ್ನು ನಡೆಸಿಕೊಂಡು ಬಂದಿರುವುದನ್ನು ಚರ್ಚಿಸಿರುವುದನ್ನು ನೋಡಬಹುದು. 'ಬೇಲೂರು ಬಿಷ್ಟಮ್ಮನ ಕೆರೆ' ವಿಷ್ಣು ಸಮುದ್ರ ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದು, ಕಾಲಕ್ರಮೇಣ ಬಿಷ್ಟಮ್ಮನ ಕೆರೆ ಎಂದಾದ ಬಗೆಯನ್ನು ಕುರಿತು ಚರ್ಚಿಸುತ್ತಾ 'ವಿಷ್ಣು' ಶಬ್ದವೆ 'ಬಿಷ್ಟ' ಎಂದು ವ್ಯತ್ಯಯವಾಗಿದೆ. ಹಾಗೆಯೇ 'ಕೃಷ್ಣ' ಎಂಬ ಶಬ್ದ 'ಕಿಟ್ಟಿ' ಆದಂತೆ ಬಿಷ್ಟ ಕೂಡ ಬಿಟ್ಟಿ ಎಂಬ ರೂಪತಳೆಯುತ್ತದೆ ಎಂಬುದನ್ನು ಶಾಸನ ಸಾಹಿತ್ಯ ಹಾಗೂ ಜಾನಪದರಲ್ಲಿರುವ ಮಾಹಿತಿಗಳ ಆಧಾರದೊಂದಿಗೆ ಚರ್ಚಿಸಿದ್ದಾರೆ. 'ಬೇಲೂರು ಅಂತರಗಟ್ಟಮ್ಮನ ಜಾತ್ರೆ' ಹೊಯ್ಸಳರ ಶಿಲ್ಪಕಲೆಯ ಬೀಡಾಗಿರುವ ಬೇಲೂರು ಹಲವು ಗ್ರಾಮದೇವತೆಗಳಿಗೆ ಆಶ್ರಯ ತಾಣವಾಗಿದೆ. ಆದ್ದರಿಂದ ಇಲ್ಲಿ ಸುತ್ತಮುತ್ತ ವಾಸವಾಗಿರುವ ಎಲ್ಲಾ ದೇವತೆಗಳು ಮತ್ತು ಈ ಜಾತ್ರೆಯಲ್ಲಿ ಸೇರುವ ಸಮುದಾಯಗಳು ಇತ್ಯಾದಿ ಮಾಹಿತಿಯೊಂದಿಗೆ ಚರ್ಚಿಸಿದ್ದಾರೆ.

'ಹಲ್ಮಿಡಿಯ ಹಿರಡೆಲಿಂಗನ ಹಬ್ಬ' ಲೇಖನದಲ್ಲಿ ಹಿರಡೆಲಿಂಗ ಎಂಬುದರ ಮೂಲ ರೂಪ, ಹೇರಿಳೆಲಿಂಗ' ವಾಗಿದ್ದೂ ಹಿರಡೆಲಿಂಗ ಆಗಿರುವುದನ್ನು ಸ್ಥಾನಿಕ ಆಕರಗಳ ಮೂಲಕ ವಿವರಿಸಿದ್ದಾರೆ. ಹಬ್ಬದಲ್ಲಿ ನಡೆಯುವ ಪೂಜೆಯಲ್ಲಿ ಎಲ್ಲಾ ಸಮುದಾಯದವರು ಬಂದು ಭಾಗವಹಿಸುವುದನ್ನು ಕುರಿತು ಚರ್ಚೆ ಮಾಡಿದ್ದಾರೆ. 'ಕರ್ನಾಟಕದ ಹಬ್ಬಗಳು' ಗ್ರಾಮೀಣ ಸಂಸ್ಕೃತಿಯಲ್ಲಿ ಹಬ್ಬಗಳು ಬದುಕಿನ ಜೀವನಾಡಿಯಾಗಿವೆ. ಏಕೆಂದರೆ ವ್ಯವಸಾಯದ ಉಪಕರಣಗಳಿಂದಿಡಿದು ರಾಷ್ಟ್ರೀಯ

ಹಬ್ಬದವರೆಗೂ ಕರ್ನಾಟಕದಲ್ಲಿ ನಡೆಯುವ ಹಬ್ಬಗಳ ಬಗ್ಗೆ ಚರ್ಚಿಸಿದ್ದಾರೆ. 'ಕರಿರಾಯ ಚರಿತ್ರೆ ಮತ್ತು ಕರಿಭಂಟನ ಕಾಳಗಳು' ಈ ಲೇಖನದಲ್ಲಿ ಮೌಖಿಕ ಮತ್ತು ಶಿಷ್ಟ ನೆಲೆಯಲ್ಲಿ ಕರಿರಾಯ ಕರಿಭಂಟನ ಕಾಳಗಗಳನ್ನು ತೌಲನಿಕವಾಗಿ ಚರ್ಚಿಸಿದ್ದಾರೆ. 'ಪ್ರಾಚೀನ ಸಂಕಲನ ಗ್ರಂಥಗಳಲ್ಲಿ ಜಾನಪದ ನೆಲೆಗಳು' ಲೇಖನದಲ್ಲಿ ಕನ್ನಡದಲ್ಲಿ ದೊರೆತಿರುವ ಸಂಕಲನ ಗ್ರಂಥಗಳಾದ ವಿದ್ಯಾನಂದರ–ಕಾವ್ಯಸಾರ, ಮಲ್ಲಿಕಾರ್ಜುನ ಕವಿಯ ಸೂಕ್ತಿ ಸುಧಾರ್ಣವ, ಮಲ್ಲಕವಿಯ–ಸಂಯೋಜಿತ ಕಾವ್ಯಸಾರ ಇತ್ಯಾದಿ ಗ್ರಂಥಗಳಲ್ಲಿ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಅಂಶಗಳು ಉಲ್ಲೇಖವಾಗಿರುವುದನ್ನು ಗುರುತಿಸಿದ್ದಾರೆ. ಹಾಗೆಯೇ ಜಾನಪದೀಯ ಅಂಶಗಳು ಪ್ರಾಚೀನ ದಾಖಲೆಗಳಾಗಿ ಲಭ್ಯವಾಗಿರುವುದನ್ನು ಗಮನಿಸಿದ್ದಾರೆ.

'ಬೇಲೂರು ಸುತ್ತಿನ ಕೆಲವು ಸ್ಥಳನಾಮ ಐತಿಹ್ಯ' ಲೇಖನದಲ್ಲಿ ಬೇಲೂರು ಸುತ್ತಮುತ್ತಲಿರುವ ಊರುಗಳು ಹಾಗೂ ಕೆರೆಕಟ್ಟೆಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. 'ಯೊರೋಬಾ ಸಂಸ್ಕೃತಿ ಮತ್ತು ಹಾರ್ನಿಮನ್ ಸಂಗ್ರಹಾಲಯ' ಇಲ್ಲಿ ಪಶ್ಚಿಮ ದೇಶಗಳ ಸಾಂಸ್ಕೃತಿಕವಾಗಿ ಮಹತ್ವ ಪಡೆದ ಸಂಗ್ರಹಾಲಯಗಳನ್ನು ಕುರಿತು ಚರ್ಚಿಸಿದ್ದಾರೆ. ಹಾಗೆಯೇ 'ಮುಡುಕುತೊರೆ ಮಲ್ಲಿಕಾರ್ಜುನ' ಲೇಖನದಲ್ಲಿ ಮುಡುಕುತೊರೆ ಮಲ್ಲಿಕಾರ್ಜುನನನ್ನು ಕೇಂದ್ರವಾಗಿಟ್ಟುಕೊಂಡು ಶಿಷ್ಟ ಜಾನಪದ ಹೀಗೆ ಹಲವು ಆಯಾಮಗಳಲ್ಲಿ ಬಂದ ಸಾಂಸ್ಕೃತಿಕ ಸಂಗತಿಗಳೊಂದಿಗೆ ಅವಲೋಕಿಸಲಾಗಿದೆ. 'ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರದಲ್ಲಿ ಜಾನಪದ' ಇದೊಂದು ವಿಶಿಷ್ಟ ಬಗೆಯ ಗದ್ಯ ಗ್ರಂಥ. ತನ್ನ ವಸ್ತು, ಭಾಷೆ, ಶೈಲಿಗಳಿಂದ ಸಮಕಾಲೀನ ಓದುಗರಲ್ಲಿ ಜನಪ್ರಿಯತೆಯನ್ನು ಗಳಿಸಿದ ಗ್ರಂಥ. ಇದರ ಕರ್ತೃ 'ಶಾಂತಲಿಂಗ ದೇಶಿಕ'. ಕಾಲ ಕ್ರಿ.ಶ.೧೬೭೨ ಎಂದು ಗುರುತಿಸಿದ್ದಾರೆ. ಹಾಗೆಯೇ ಕವಿಯ ಉದ್ದೇಶ ವೀರಶೈವ ಧರ್ಮವನ್ನು ಜನಸಾಮಾನ್ಯರಿಗೆ ತಲುಪಿಸಬೇಕೆಂಬುದು ಆಗಿತ್ತು ಎಂದು ಇಲ್ಲಿರುವ ಜಾನಪದ ಅಂಶಗಳಿಂದ ತಿಳಿದುಬರುತ್ತದೆ.

ಒಟ್ಟಾರೆಯಾಗಿ ಇಲ್ಲಿನ ೧೨ ಲೇಖನಗಳು ಕ್ಷೇತ್ರಕಾರ್ಯ ಆಧರಿತವಾಗಿ ರೂಪಗೊಂಡವು. ಆದರೂ ಶಿಷ್ಟ ಸಾಹಿತ್ಯ ಕೃತಿಗಳೊಂದಿಗೆ ತೌಲನಿಕ ಅಧ್ಯಯನ ಮಾಡುವುದರ ಮೂಲಕ ಚರ್ಚಿಸಿರುವುದು ವಿಶೇಷವಾಗಿದೆ.

೩.೨.೩.೬.೪. ಪುಟ್ಟಮಲ್ಲಿಗೆ ಹಿಡಿತುಂಬ

ಈ ಕೃತಿಯನ್ನು ವೈ.ಸಿ.ಭಾನುಮತಿ ಅವರು ಸಂಗ್ರಹಿಸಿ ೨೦೦೧ರಲ್ಲಿ ತಾರಾ ಪ್ರಿಂಟಿಂಗ್ ಪ್ರೆಸ್‌ನಿಂದ ಪ್ರಕಟಿಸಿದ್ದಾರೆ. ಈ ಸಂಕಲನದಲ್ಲಿ ಕುಂಬಾರಳ್ಳಿ ಬಿ.ಕೆ. ದಾಸಯ್ಯ ಹಾಡಿದ ನಾಲ್ಕು 'ಕೋಲಾಟ ಪದಗಳಿವೆ. ಈ ಪದಗಳು ತುಂಬಾ ವಿಶಿಷ್ಟವಾಗಿರುವುದು ಹಿಂದೂ ಮುಸ್ಲಿಂ ಸಾಮರಸ್ಯದ ದ್ಯೋತಕವಾಗಿವೆ. 'ದೇವರ ಪದಗಳು' ಇದರಲ್ಲಿ ಬೇಲೂರು ಸುತ್ತಲಿನ ಗ್ರಾಮದೇವತೆಗಳನ್ನೂ ಒಳಗೊಂಡಂತೆ ಏಳುದೇವರ ಹಾಡುಗಳಿವೆ. ಹಾಗೆಯೇ ಈ ಹಾಡುಗಳಲ್ಲಿ 'ಬೇಲೂರು ಚನ್ನಯ್ಯ ಎಂಬ ಹಾಡಿನಲ್ಲಿ 'ಸೂಳೇರ್ ಕಟ್ಟಿಸ್ಥ ಉಪ್ಪರಿಗೆ ಸೂಳೇರ್ ಕಟ್ಟಿಸ್ಥ ಗಜಗೊಂಡ' ಎಂಬ ಐತಿಹ್ಯ

ಇರುವುದನ್ನು ಗುರುತಿಸಿರುವುದು ವಿಶೇಷವಾಗಿದೆ. 'ಬಂಡಿ ಮತ್ತು ಬೀಸುವ ಪದಗಳು' ಈ ಪದಗಳನ್ನು ದಾಸಪ್ಪ ಮತ್ತು ಸಂಗಮ್ಮ ಹಾಡಿದ್ದಾರೆ. ಈ ಹಾಡುಗಳಲ್ಲಿ ಪುರುಷ ಪ್ರಾಧಾನ್ಯತೆಯ ಎಳೆಗಳಿರುವುದನ್ನು ಗುರುತಿಸಿದ್ದಾರೆ. ಸೋಬಾನೆ ಪದಗಳು ಮೂವರು ಗಾಯಕರು ಹಾಡಿದ ೩೮ ಸೋಬಾನೆ ಪದಗಳಿವೆ. ಇವು ಪೂರ್ವದ ಸಂಕಲನಗಳಿಗಿಂತ ನಿರೂಪಣೆಯಲ್ಲಿ ಭಿನ್ನವಾಗಿವೆ ಎಂದಿದ್ದಾರೆ. ಸಂಕೀರ್ಣ ಪದಗಳು ಇದರಲ್ಲಿ ಆರು ಗೀತೆಗಳನ್ನು ಸಂಗ್ರಹಿಸಲಾಗಿದೆ. 'ಲಾವಣಿ ಮತ್ತು ಕಥನಗೀತೆಗಳು' ಇದರಲ್ಲಿ ಆರು ಕಥನ ಗೀತೆಗಳಿವೆ. ಈ ಎಲ್ಲಾ ಹಾಡುಗಳಲ್ಲಿಯೂ ಬೆಲೂರಿನ ಪರಿಸರದಲ್ಲಿ ವಾಸಿಸುವಂಥ ಜನರ ನೋವು ನಲಿವು ಆಚರಣೆ ಭಕ್ತಿ ಸೋದರ ಸೋದರಿಯರ ವಾತ್ಸಲ್ಯ ಅಭಿವ್ಯಕ್ತವಾಗಿರುವುದನ್ನು ಗಮನಿಸಿದ್ದಾರೆ. ಈ ಭಾಗದ ಸಾಂಸ್ಕೃತಿಕ ಅಧ್ಯಯನಕ್ಕೆ ಪೂರಕವಾದ ಮಾಹಿತಿ ನೀಡುತ್ತವೆ.

೩.೨.೩.೬.೫. ಜನಪದ ದೇವರ ಹಾಡುಗಳು

ಕೃತಿಯನ್ನು ವೈ.ಸಿ.ಭಾನುಮತಿ ಅವರು ೨೦೦೪ರಲ್ಲಿ ಚೇತನ ಬುಕ್‌ಹೌಸ್‌ನಿಂದ ಪ್ರಕಟಿಸಿದ್ದಾರೆ. ಈ ಹಾಡುಗಳು ಬೇಲೂರು ಪರಿಸರದಲ್ಲಿ ಜಾನಪದರು ನಂಬಿರುವಂತಹ ದೈವಗಳನ್ನು ಕುರಿತು ತಮ್ಮ ಕುಲದೇವತೆಗಳನ್ನು ಕುರಿತು ಹಾಡಿದ್ದಾಗಿವೆ. ಈ ಹಾಡುಗಳನ್ನು ಪೌರಾಣಿಕ, ದೇವತೆಗಳ ಹಾಡುಗಳು, ಜನಪದರ ದೇವತೆಗಳು, ಗ್ರಾಮದೇವತೆಗಳು, ಆಚರಣೆಗೆ ಸಂಬಂಧಿಸಿದ ದೇವರ ಹಾಡುಗಳು, ಸಾಧುಸಂತರ ಹಾಡುಗಳು ಎಂದು ವಿಂಗಡಿಸಿದ್ದಲ್ಲದೆ ದೇವರುಗಳ ಹಿನ್ನೆಲೆ ಮತ್ತು ಅವುಗಳ ವೈಶಿಷ್ಟ್ಯವನು ಕುರಿತು ಸಂಪಾದಕರು ಚರ್ಚಿಸಿದ್ದಾರೆ.

೩.೨.೩.೬.೬. ಮಕ್ಕಳ ಹಾಡುಗಳು

ಕೃತಿಯನ್ನು ವೈ.ಸಿ. ಭಾನುಮತಿ ಅವರು ೨೦೦೯ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ವೈಯಕ್ತಿಕ ಹಾಡುಗಳ ಜೊತೆಗೆ ಕನ್ನಡದಲ್ಲಿ ೧೯೭೭ರಲ್ಲಿ ಪ್ರಕಟವಾದ ವಿವಿಧ ಸಂಗ್ರಹಕಾರರ ಶಿಶುಪ್ರಾಸಗಳು ಮತ್ತು ರಾಗೌ ಅವರ ಕನ್ನಡ ಶಿಶುಪ್ರಾಸಗಳು, ಮಕ್ಕಳ ಹಾಡು ಇತ್ಯಾದಿ ಕೃತಿಗಳನ್ನು ಮೂಲ ಆಕರಗಳನ್ನಾಗಿ ಬಳಸಿಕೊಂಡು ಸಂಪಾದಿಸಿದ್ದಾರೆ. ಎಂಟು ವರ್ಷಕ್ಕೂ ಮೇಲ್ಪಟ್ಟ ಮಕ್ಕಳಲ್ಲಿ ಸ್ವತಂತ್ರವಾಗಿ ಹಾಡು ರಚಿಸುವ ಶಕ್ತಿ ಇರುತ್ತದೆ. ಅವರ ಭಾಷೆ ಭಾವನೆಗಳೂ ಬೆಳೆಯುತ್ತ ಹೋದಂತೆ ಅವರ ಅಭಿರುಚಿಯು ವಿಭಿನ್ನವಾಗಿರುವುದನ್ನು ಕಾಣಬಹುದು. ಇಂತಹ ಮಕ್ಕಳ ಹಾಡುಗಳನ್ನು ಸೂಕ್ಷ್ಮವಾದ ಅಧ್ಯಯನ ಮಾಡುವುದರ ಮೂಲಕ ಈ ಹಾಡುಗಳನ್ನು ನಾಲ್ಕು ಹಂತಗಳಲ್ಲಿ ಗುರುತಿಸಿ, ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ಆಟಗಳೊಂದಿಗೆ ತೌಲನಿಕ ಅಧ್ಯಯನವನ್ನು ಮಾಡಿರುವುದು ವಿಶಿಷ್ಟವಾಗಿದೆ. ಹಾಗೆಯೇ ಈ ಹಾಡುಗಳು ಭಾಷಿಕ ಅಧ್ಯಯನ ಮಾಡಲು ತುಂಬಾ ಉಪಯುಕ್ತವಾಗಿವೆ ಎಂದು ಸಂಪಾದಕರು ಹೇಳಿದ್ದಾರೆ. ಪ್ರಸ್ತುತ ಸಂಪುಟದಲ್ಲಿ 'ಪರಿಸರದ ಹಾಡುಗಳು' 'ದೇವರ ಹಾಡುಗಳು' 'ಪ್ರಕೃತಿ ಸಂಬಂಧಿ ಹಾಡುಗಳು'

'ಸಂವಾದದ ಹಾಡುಗಳು' 'ಆಚರಣೆ ಸಂಬಂಧಿ ಹಾಡುಗಳು' 'ಬಿಡಿಹಾಡುಗಳು' ಹೀಗೆ ವಿಭಾಗಿಸಿಕೊಂಡು ಸಂಗ್ರಹಿಸಲಾಗಿದೆ. ಅನುಬಂಧದಲ್ಲಿ ಗ್ರಂಥಸೂಚಿ. ಆಟದ ಹಾಡುಗಳಿಗೆ ಟಿಪ್ಪಣಿಗಳನ್ನು ನೀಡಿದ್ದಾರೆ.

೩.೨.೩.೬.೭. ಜಾನಪದ ಆಂತರ್ಯ

ಲೇಖನ ಸಂಕಲನವನ್ನು ವೈ.ಸಿ. ಭಾನುಮತಿ ಅವರು ೨೦೦೩ರಲ್ಲಿ ತಗಳವಾದಿ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಜಾನಪದ ಅಧ್ಯಯನಕ್ಕೆ ಸಂಬಂಧಪಟ್ಟ ಒಂಭತ್ತು ಲೇಖನಗಳಿವೆ. ಇವು ವಿವಿಧ ಸಂದರ್ಭದಲ್ಲಿ ರೂಪಗೊಂಡಂತಹ ಲೇಖನಗಳು ಆಗಿವೆ. ಇವೆಲ್ಲವೂ ಜಾನಪದಕ್ಕೆ ಸಂಬಂಧಿಸಿದ ಹೊಸ ವಿಚಾರಗಳನ್ನು ಹೊಸ ಆಲೋಚನೆಗಳನ್ನು ಒಳಗೊಂಡಿವೆ. 'ಮಹಿಳೆ–ಫಲವಂತಿಕೆ' ಈ ಲೇಖನದಲ್ಲಿ ಫಲವಂತಿಕೆ ಎಂಬುದು ಜೈವಿಕ ವರ್ಗದ ಜೀವಿಗಳಲ್ಲಿ ಇರುವುದನ್ನು ಗುರುತಿಸಿದ್ದಾರೆ. ಗಂಡಿನ ಉತ್ಪಾದನ ಸಾಮರ್ಥ್ಯಕ್ಕಿಂತ ಫಲವಂತಿಕೆಯ ಕಾರಣದಿಂದಾಗಿಯೇ ಹೆಣ್ಣಿಗೆ ಉತ್ತಮವಾದ ಸ್ಥಾನ ಸಿಕ್ಕಿರುವುದನ್ನು ಪ್ರತಿಪಾದಿಸಿದ್ದಾರೆ. ಇಲ್ಲಿ ಹೆಣ್ಣು ಫಲವತಿಯಾಗಲು, ಬೇಡದ ಬಸಿರನ್ನು ಕಳೆಯಲು ಜನಪದರು ಅನೇಕ ಬಗೆಯ ಚಿಕಿತ್ಸೆಗಳನ್ನು ಹಾಗೂ ಸಂಸ್ಕೃತಿ ಸಂಪ್ರದಾಯದ ಆಚರಣೆ ಮಾಡುತ್ತಿದ್ದನ್ನು ಕುರಿತು ಚರ್ಚಿಸಲಾಗಿದೆ.

'ದೆವ್ವ ಜಾನಪದ' ಲೇಖನದಲ್ಲಿ ದೆವ್ವಕ್ಕೆ ಗಾಳಿ, ರಣ ಎಂಬ ಪರ್ಯಾಯ ರೂಪಗಳಿರುವುದನ್ನು ಗುರುತಿಸಿದ್ದಾರೆ. ಹಾಗೆಯೇ ಹಾಸನ ಭಾಗದಲ್ಲಿ ಈರ ಶಬ್ದದ ಬಳಕೆ ವಿರಳವಾಗಿರುವುದನ್ನು ವಿಶೇಷವಾಗಿ ಗುರುತಿಸಿದ್ದಾರೆ. ಮುಖ್ಯವಾಗಿ ಸಂಪಾದಕರು ದೆವ್ವದ ಬಗೆಗಿನ ಮನಃಶಾಸ್ತ್ರೀಯ ಚಿಂತನೆಗಳಿಗೆ ಕೈ ಹಾಕದೆ ಜಾನಪದೀಯ ಹಿನ್ನೆಲೆಯಲ್ಲಿ ದೆವ್ವದ ಸುತ್ತ ಬೆಳೆದು ನಿಂತ ವಿಚಾರಗಳನ್ನು ಕುರಿತು ಚರ್ಚಿಸಿದ್ದಾರೆ. ಸಾತ್ವಿಕ ದೆವ್ವಗಳು ಮತ್ತು ದುಷ್ಟ ದೆವ್ವಗಳು ಎಂದು ವಿಂಗಡಿಸಿಕೊಂಡು ದೆವ್ವವನ್ನು ಬಿಡಿಸುವ ವಿಧಾನಗಳನ್ನು ವಿಶ್ಲೇಷಿಸಿದ್ದಾರೆ. 'ಮಲೆನಾಡಿನ ಆಭರಣಗಳು' ಲೇಖನದಲ್ಲಿ ಮಲೆನಾಡನ್ನು ಕೇಂದ್ರವಾಗಿಟ್ಟುಕೊಂಡು ಚರ್ಚಿಸುವಾಗ ಕನ್ನಡ ಸಾಹಿತ್ಯದ ಪ್ರಾಚೀನ ಕೃತಿಗಳಲ್ಲಿ ಉಲ್ಲೇಖವಾಗಿರುವ ಮಹಾಭಾರತದಲ್ಲಿ ಮಾದ್ರಿ ತನ್ನನ್ನು ಹೂವುಗಳಿಂದ ಸಿಂಗರಿಸಿಕೊಂಡು ಪಾಂಡುವಿನ ಬಳಿ ಹೋದದ್ದು, ಹಾಗೆಯೇ ಸೂಕ್ತಿಸುಧಾರ್ಣವ ಗ್ರಂಥದಲ್ಲಿ ಉಲ್ಲೇಖವಾಗಿರುವ ಆಭರಣಗಳೊಂದಿಗೆ ವಿವರಿಸಿದ್ದಾರೆ. ಮಲೆನಾಡಿನ ಜನಪದ ಆಟಗಳು ಮಾನವನ ಸಂಸ್ಕೃತಿ ಜೊತೆಯಲ್ಲಿಯೇ ಬೆಳೆದು ಬಂದಿವೆ. ಈ ಲೇಖನದಲ್ಲಿ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳನ್ನು ಕೇಂದ್ರವಾಗಿಟ್ಟುಕೊಂಡು ಅಲ್ಲಿನ ಆಟಗಳನ್ನು ಪರಿಚಯ ಮಾಡಿಕೊಟ್ಟಿದ್ದಾರೆ.

'ಮೈಸೂರು ಭಾಗದ ಬುಡಕಟ್ಟುಗಳ ಭೌಗೋಳಿಕ ನೆಲೆಗಳು' ಲೇಖನದಲ್ಲಿ ಮೈಸೂರು ಭಾಗದ ಬುಡಕಟ್ಟುಗಳನ್ನು ಭೌಗೋಳಿಕ ನೆಲೆ, ಭೌಗೋಳಿಕತೆಯ ಪ್ರಭಾವ, ಸ್ಥಿತ್ಯಂತರ, ಹೀಗೆ ಮೂರು ಭಾಗಗಳಾಗಿ ವಿಂಗಡಿಸಿಕೊಂಡಿದ್ದಾರೆ. ಭೌಗೋಳಿಕ ಪರಿಸರ ಮತ್ತು ಆಧುನಿಕತೆಯ ಪ್ರಭಾವದಿಂದ ತನ್ನ ಸಂಸ್ಕೃತಿ ಕುಲಕಸಬುಗಳು ಹೇಗೆ ಬದಲಾವಣೆಗೊಂಡವು ಮತ್ತು ಜಾಗತೀಕರಣದಿಂದ ಪರಿವರ್ತನೆ ಆದವು ಎನ್ನುವುದನ್ನು ಕುರಿತು ವಿಶ್ಲೇಷಿಸಿದ್ದಾರೆ. 'ಜನಪದ ಕಾವ್ಯಗಳಲ್ಲಿ ಪೌರಾಣಿಕ

ನಾಯಕಿಯರು' ಈ ಲೇಖನದಲ್ಲಿ ಸೀತೆ, ದ್ರೌಪದಿ, ಶೂರ್ಪನಖಿ, ಮಂಡೋದರಿ, ಸುಭದ್ರೆ, ಸಾವಿತ್ರಿ, ಗಂಗೆ, ಗೌರಿ, ರೇಣುಕಾ ಇತ್ಯಾದಿ ನಾಯಕಿಯರ ಆದರ್ಶ ಹಾಗೂ ಪ್ರಬುದ್ಧತೆಯನ್ನು ಕುರಿತು ಚರ್ಚಿಸಿದ್ದಾರೆ. 'ಕಾಲರಾ ರೋಗ ಮತ್ತು ಜಾನಪದರು' ಈ ರೋಗವನ್ನು ಜಾನಪದರು ದೇವರ ಕಾಟವೆಂದು ನಂಬಿ ದೇವರಿಗೆ ಹಲವಾರು ಹರಕೆಯನ್ನು ಕಟ್ಟಿಕೊಳ್ಳುವ ಇತ್ಯಾದಿ ಮಾಹಿತಿಯೊಂದಿಗೆ ವಿವರಿಸಿದ್ದಾರೆ. 'ಬುಡಕಟ್ಟು ಜನಪದ ಮತ್ತು ಪ್ರಾಚೀನ ಸಾಹಿತ್ಯದಲ್ಲಿ ಅಡುಗೆ' ಈ ಲೇಖನದಲ್ಲಿ ಬುಡಕಟ್ಟು ಹಾಗೂ ಬೆಟ್ಟ ಗುಡ್ಡಗಳಲ್ಲಿ, ಕಾಡಿನ ಅಂಚಿನಲ್ಲಿ ವಾಸಿಸುವಂತಹ ಸಮುದಾಯದವರು ಮಾಡುವಂತಹ ಅಡುಗೆ ಆಹಾರ ಪದ್ಧತಿಯ ಮೇಲೆ ಆಧುನಿಕತೆಯ ಪ್ರಭಾವವಾಗಿರುವುದನ್ನು ವಿಶ್ಲೇಷಿಸಿದ್ದಾರೆ. 'ಕೊಮಾರ ಸಂಪ್ರದಾಯ' ಲೇಖನದಲ್ಲಿ ಕೊಮಾರ, ಕುಮಾರ, ಕೊಮಾರೇಶ್ವರ, ಕೊಮಾರಲಿಂಗ, ಕುಮಾರಲಿಂಗೇಶ್ವರ, ಕುಮಾರಸ್ವಾಮಿ ಮುಂತಾದ ಹೆಸರುಗಳಿಂದ ಕುಮಾರಸ್ವಾಮಿಯ ಜಾತ್ರೆ, ಉತ್ಸವ ಮತ್ತು ಅವನನ್ನು ನಾಯಕನನ್ನಾಗಿ ಮಾಡಿಕೊಂಡಿರುವ ಸಂಪ್ರದಾಯದ ಬಗ್ಗೆ ವಿಶ್ಲೇಷಣೆ ಮಾಡಿದ್ದಾರೆ.

ಇಲ್ಲಿನ ಒಂಭತ್ತು ಲೇಖನಗಳು ವಿವಿಧ ಸಂಪ್ರದಾಯ ಆಚರಣೆ, ನಂಬಿಕೆ, ಸಂಸ್ಕೃತಿ ಅಧ್ಯಯನದ ದೃಷ್ಟಿಯಿಂದ ಮಹತ್ವವಾದವು. ಇವುಗಳನ್ನು ಸಂಪಾದಕರು ಹೆಚ್ಚು ಶ್ರಮ ಹಾಗೂ ಅಧ್ಯಯನಶೀಲತೆಯಿಂದ ಸಂಪಾದಿಸಿರುವುದನ್ನು ಕಾಣಬಹುದಾಗಿದೆ. ಜಾನಪದರಲ್ಲಿರುವ ಜ್ಞಾನವನ್ನು ಅಥವಾ ಅನುಭವ ಆಧಾರಿತವಾದ ಅಂಶಗಳನ್ನು, ಸಾಹಿತ್ಯಿಕ ಕೃತಿಗಳೊಂದಿಗೆ ತೌಲನಿಕ ಅಧ್ಯಯನ ಮಾಡಿದ್ದಾರೆ.

೩.೨.೩.೬.೮. ಜಾನಪದ ಚಹರೆ

ಕೃತಿಯನ್ನು ವೈ.ಸಿ. ಭಾನುಮತಿ ಅವರು ೨೦೦೮ರಲ್ಲಿ ರೂಪ ಪ್ರಕಾಶನ ಮೈಸೂರಿನಿಂದ ಪ್ರಕಟಿಸಿದ್ದಾರೆ. ಇದರಲ್ಲಿ ಸುಮಾರು ೧೯ ಲೇಖನಗಳಿವೆ. ಇವು ಜಾನಪದ ಅಧ್ಯಯನಗಳ ಕುತೂಹಲದ ಭಾಗವಾಗಿ ರೂಪುಗೊಂಡವು. 'ಜಗತ್ತಿನ ಜಾನಪದ ಸಂಗ್ರಹಾಲಯಗಳು' ಈ ಲೇಖನದಲ್ಲಿ ಜಗತ್ತಿನ ಕೆಲವು ಪ್ರಾಚೀನ ಸಂಗ್ರಹಾಲಯಗಳನ್ನು ಕುರಿತು ಚರ್ಚಿಸಲಾಗಿದೆ. 'ಯಾರ್ಕ್‌ಷೈರ್ ಸಂಗ್ರಹಾಲಯಗಳ ಸಂಕಥನ' ಲೇಖನದಲ್ಲಿ ಇಂಗ್ಲೆಂಡಿನಲ್ಲಿನ ಜಾನಪದ ಸಂಗ್ರಹಾಲಯಗಳ ಬಗೆಗೆ ಮಾಹಿತಿಯನ್ನು ನೀಡಿದ್ದಾರೆ. ಹಾಗೆಯೇ ಇಂಗ್ಲೆಂಡಿನ ಯಾರ್ಕ್‌ಷೈರ್ ಮತ್ತು ಹಂಬರ್‌ಸೈಡ್ ಪ್ರದೇಶದಲ್ಲಿರುವ ಸಂಗ್ರಹಾಲಯಗಳಿಗೆ ಜನರು ಅಸಂಖ್ಯಾತವಾಗಿ ಪ್ರತಿವರ್ಷ ಭೇಟಿ ನೀಡುವುದರ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದಾರೆ.

'ಆಸ್ಟ್ರೇಲಿಯದ ಬುಡಕಟ್ಟುಗಳು' ಲೇಖನದಲ್ಲಿ ಬುಡಕಟ್ಟು ಸಮುದಾಯದವರ ಸಂಸ್ಕೃತಿ ಮತ್ತು ಮೂಲ ನೆಲೆಗಳನ್ನು ಅಲ್ಲಿನ ಬುಡಕಟ್ಟುಗಳ ಜೀವನ ರೀತಿ, ಇವರ ಐತಿಹ್ಯ, ಪುರಾಣ ಆದಿಮಾನವನ ಬದುಕಿನ ಹೋರಾಟವನ್ನು ಕುರಿತು ಚರ್ಚಿಸಿದ್ದಾರೆ. 'ಪಾಲಿನೇಷ್ಯ ಮತ್ತು ಜಾನಪದ' ಈ ಲೇಖನದಲ್ಲಿ ಪಾಲಿನೇಷ್ಯದ ಜನರ ಸಾಂಸ್ಕೃತಿಕ ಚಹರೆಗಳನ್ನು ಕುರಿತು ವಿವರಿಸಿದ್ದಾರೆ. ಇವರು ಕೃಷಿ, ಮೀನುಗಾರಿಕೆ, ತೆಪ್ಪಗಳ ನಿರ್ವಹಣೆ ಜಲಯಾನ ಧರ್ಮ ಪಾಲನೆ ಹಾಗೂ ಇವರು

ಕೊಪ್ಪಲು ರೂಪದ ಸಣ್ಣ ದೊಡ್ಡ ಹಳ್ಳಿಗಳಲ್ಲಿ ವಾಸವಾಗಿದ್ದ ಬಗ್ಗೆ ಬರೆಯುತ್ತಾರೆ. ಹಾಗೇ ಪ್ರಕೃತಿಯ ಎಲ್ಲಾ ವಸ್ತುಗಳಲ್ಲೂ ಶಕ್ತಿ ಇದೆಯೆಂಬ ಸರ್ವಚೇತನ ಪಂಥದಲ್ಲಿ ಅವರು ಇಟ್ಟ ನಂಬಿಕೆ ಮತ್ತು ಅವರ ಜನಪದ ನೃತ್ಯಗಳು ವೈವಿಧ್ಯತೆ. ಅವರ ಬದುಕಿನೊಂದಿಗಿನ ಜಾನಪದ ಸಂಬಂಧವನ್ನು ಕುರಿತು ಚರ್ಚಿಸಿರುವುದು ಕಂಡುಬರುತ್ತದೆ.

'ಆಸ್ಟ್ರಿಯಾದ ಜಾನಪದ ಅಂಶಗಳು' ಲೇಖನದಲ್ಲಿ ಗ್ರಾಮೀಣ ನೃತ್ಯಕಲೆ, ಕ್ರೀಡೆ ಮತ್ತು ಆಚರಣೆಗಳನ್ನು ಕುರಿತು ವಿಶ್ಲೇಷಿಸಿದ್ದಾರೆ. 'ಮ್ಯೆಯನ್ಮಾರ್ ಜಾನಪದ ನೆಲೆಗಳು' ಜಾನಪದ ಲಾವಣಿಗಳು, ತೊಟ್ಟಿಲ ಹಾಡುಗಳು ಪ್ರಚಲಿತದಲ್ಲಿರುವುದನ್ನು ಗುರುತಿಸಿದ್ದಾರೆ. ಹಾಗೆಯೇ ಸಾಂಪ್ರದಾಯಿಕ ಸಂಗೀತವೂ ತುಂಬಾ ಮಧುರವಾಗಿದ್ದು 'ಸೈಂಗ್' ಎಂಬ ಸಂಗೀತದಲ್ಲಿ ೨೧ ಮದ್ದಳೆಯಾಕಾರಗಳನ್ನು ಗುರುತಿಸಿ ಮ್ಯೆಯನ್ಮಾರ್ ದೇಶದ ಪ್ರದರ್ಶನಾತ್ಮಕ ಕಲೆಯ ಬಗ್ಗೆ ವಿಶ್ಲೇಷಣೆ ಮಾಡಿದ್ದಾರೆ. 'ಪಂಜಾಬಿನ ಜಾನಪದ ವೈಶಿಷ್ಟ್ಯಗಳು' ಲೇಖನದಲ್ಲಿ ಜನನದಿಂದ ಮರಣದವರೆಗೆ ಹಲವು ಬಗೆಯ ಸಂಪ್ರದಾಯ ಆಚರಣೆಗಳಾದ ಮದುವೆ, ನಂಬಿಕೆ, ಶಕುನ, ಮರಣ, ಕುಟುಂಬ ವ್ಯವಸ್ಥೆ, ದೇವರು, ಜಾತ್ರೆಗಳು, ಉಡುಗೆ ತೊಡುಗೆ ಹಬ್ಬ ಹರಿದಿನಗಳು ಹೀಗೆ ಹಲವು ಜಾನಪದೀಯ ಅಂಶಗಳನ್ನು ಕುರಿತು ಚರ್ಚಿಸಿದ್ದಾರೆ. 'ಅರುಣಾಚಲ ಪ್ರದೇಶ ಮತ್ತು ಜಾನಪದ' ಅರುಣಾಚಲ ಪ್ರದೇಶ ಸುಮಾರು ೮೨ ಬುಡಕಟ್ಟುಗಳು ಇಲ್ಲಿ ವಾಸವಾಗಿದ್ದು, ಪ್ರತಿಯೊಂದು ಬುಡಕಟ್ಟು ಜನಾಂಗವು ತನ್ನದೇ ಆದ ಜಾನಪದ ಆಚರಣೆ ಸಾಂಸ್ಕೃತಿಕ ಅಂಶಗಳನ್ನು ಒಳಗೊಂಡಿರುವುದನ್ನು ಗಮನಿಸಿದ್ದಾರೆ.

'ನಾಗಲ್ಯಾಂಡಿನ ಕೊನ್ಯಾಕ್ ಬುಡಕಟ್ಟು' ನಾಗಲ್ಯಾಂಡಿನ ಬಹುದೊಡ್ಡ ಬುಡಕಟ್ಟು ಸಮುದಾಯವಾಗಿದೆ. ಕೊನ್ಯಾಕ್‌ರು ಶ್ರೀಮಂತವಾದ ಮೌಖಿಕ ಸಾಹಿತ್ಯವನ್ನು ಹೊಂದಿದ್ದಾರೆ. ಅವರ ಹೆಚ್ಚಿನ ಅಭಿವ್ಯಕ್ತಿಗಳು ಕಥೆಗಳು ಪದ್ಯರೂಪದಲ್ಲಿವೆ. ಇವರ ಜನಪದ ಕಥೆಗಳಲ್ಲಿ ಮನುಷ್ಯ. ಪ್ರಾಣಿ ಸಂಬಂಧವಿರುವ ಕಥೆಗಳು ಜನಪ್ರಿಯವಾಗಿವೆ. ಗಾದೆ, ಒಗಟು, ಒಡುಪುಗಳು ಇವರಲ್ಲಿ ವಿಪುಲವಾಗಿ ದೊರೆಯುತ್ತವೆ ಎಂದಿದ್ದಾರೆ. 'ಮಲೆನಾಡಿನ ಗೌಡ ಲಿಂಗಾಯತರು' ಲೇಖನದಲ್ಲಿ ಗೌಡ ಲಿಂಗಾಯತರ ಪದ ನಿಷ್ಪತ್ತಿ, ಅವರ ಉಗಮ, ಚರಿತ್ರೆ, ಮೂಲ ಜಾತಿಗಳೊಡನೆ ಸಂಬಂಧ, ರಾಜಕೀಯ ಚರಿತ್ರೆ, ಮತಗಳು, ಅನುವಂಶಿಕ ವೃತ್ತಿ, ದೇವರು, ಧರ್ಮ, ಆಚರಣೆಗಳು ಅದರಲ್ಲಿ ಜಾತಿ ಉಪಜಾತಿಗಳ ವಿಶಿಷ್ಟ ಆಚರಣೆಗಳು ಮತ್ತು ಅವರ ಸಾಮಾಜಿಕ ಮತ್ತು ಕೌಟುಂಬಿಕ ವ್ಯವಸ್ಥೆಯ ಸ್ವರೂಪವನ್ನು ಸ್ಥೂಲವಾಗಿ ವಿಶ್ಲೇಷಿಸಿದ್ದಾರೆ. 'ಲಿಂಗಾಯತರ ದೇವರುಗಳು ಮತ್ತು ಪೂಜಾಚರಣೆಗಳು' ಈ ಲೇಖನದಲ್ಲಿ ಲಿಂಗಾಯತರು ಆರಾಧಿಸುವ ದೇವರುಗಳನ್ನು ಅಧ್ಯಯನದ ಅನುಕೂಲಕ್ಕಾಗಿ ಸ್ಥೂಲವಾಗಿ ಗುರುಗಳು ಮತ್ತು ಶರಣರು, ಕುಲದೇವತೆಗಳು ಹಾಗೂ ಗ್ರಾಮದೇವತೆಗಳು, ಪೌರಾಣಿಕ ಇತರೆ ದೇವತೆಗಳೆಂದು ವಿಂಗಡಿಸಿಕೊಂಡು ಚರ್ಚಿಸಿದ್ದಾರೆ. 'ಕೃಷಿ ಬಿತ್ತನೆ ಪಾರಂಪರಿಕತೆ' ವೇದಗಳ ಕಾಲದಿಂದಲೂ ಕೃಷಿಯಲ್ಲಿ ಹಲವು ವಿವಿಧ ಬೆಳೆಗಳನ್ನು ಬೆಳೆಯುತ್ತಿರುವ ಉಲ್ಲೇಖವಿರುವುದರೊಂದಿಗೆ ವಿವರಿಸಿದ್ದಾರೆ. 'ಸ್ಥಿತ್ಯಂತರದಲ್ಲಿ ದೊಂಬಿದಾಸರು' ಜಾಗತೀಕರಣದಲ್ಲಿ ಇವರ ಕಲೆ ನಾಶವಾಗುತ್ತಿರುವುದು

ಕುರಿತು ಚರ್ಚಿಸಿದ್ದಾರೆ. 'ಹಾಸನ ನಗರ ಸ್ಥಳನಾಮ ಸಾಂಸ್ಕೃತಿಕ ಹಿನ್ನೆಲೆ' ಈ ಲೇಖನದಲ್ಲಿ ಹಾಸನ ನಗರಕ್ಕೆ ಇಸ್ಲಾಂ ಸಂಸ್ಕೃತಿಯ ಅಂಶಗಳೂ ಹತ್ತಿಕೊಂಡಿವೆ. 'ಹಸನಬೀ' ಶಬ್ದದಿಂದ ಹಾಸನ ಆಯಿತೆಂಬ ಕಥೆಯಿರುವುದನ್ನು ಗುರುತಿಸಿ ಹಲವಾರು ಪುರಾಣ ಐತಿಹ್ಯಗಳೊಂದಿಗೆ ಸಾಂಸ್ಕೃತಿಕ ಹಿನ್ನೆಲೆಯನ್ನು ವಿಶ್ಲೇಷಿಸಿದ್ದಾರೆ. 'ಕರಗಲ್ಲು' ಲೇಖನದಲ್ಲಿ ಕರಗಲ್ಲು ಗ್ರಾಮೀಣ ಭಾಗದಲ್ಲಿ ಮರೆಕಲ್ಲು, ನರಿಗಲ್ಲು, ಕರಿಗಲ್ಲು, ಅಗಸಿಕಲ್ಲು, ಅಂಕದಕಲ್ಲು, ಗರೇಗಲ್ಲು ಎಂದು ಕರೆಯುತ್ತಾರೆ. ಈ ಕಲ್ಲುಗಳು ಎಲ್ಲಾ ಊರುಗಳಲ್ಲಿ ಕಂಡುಬರುವುದಿಲ್ಲ. ಇದನ್ನು ಉತ್ತರಕರ್ನಾಟಕದಲ್ಲಿ ಕಾರ ಹುಣ್ಣಿಮೆಯ ದಿನ ಪೂಜೆಗೆ ಒಳಗೊಳ್ಳುತ್ತದೆ. ಇದರ ವೈಶಿಷ್ಟ್ಯವನ್ನು ಕುರಿತು ಚರ್ಚಿಸಿದ್ದಾರೆ. 'ಜಕ್ಕಣಿ' ಈ ಲೇಖನದಲ್ಲಿ ಮಲೆನಾಡು ಭಾಗದಲ್ಲಿ ಕುಟುಂಬದ ಮೃತರನ್ನು 'ಜಕ್ಕಣಿ' ಎಂದು ಕರೆಯುತ್ತಾರೆ. ಜೈನರಲ್ಲಿಯೂ ಜಕ್ಕಣಿ ಪರಿಕಲ್ಪನೆ ಇರುವುದನ್ನು ಕುರಿತು ವಿಶ್ಲೇಷಿಸಿದ್ದಾರೆ. ಮನೆಬಳಕೆ ವಸ್ತುಗಳು ಈ ಲೇಖನದಲ್ಲಿ ಮಣ್ಣಿನ ವಸ್ತುಗಳು ಮತ್ತು ಮರದ ವಸ್ತುಗಳು ಎರಡು ವಿಧಾನಗಳಾಗಿ ಮಾಡಿಕೊಂಡು ಚರ್ಚಿಸಿದ್ದಾರೆ.

'ಗಾದೆ ಮತ್ತು ಒಗಟುಗಳಲ್ಲಿ ಸ್ತ್ರೀ ಸಂವೇದನೆ' ಎಂಬ ಲೇಖನದಲ್ಲಿ ಪ್ರಾಚೀನ ಕಾಲದಿಂದಲೂ ಸ್ತ್ರೀಯರ ಬಗ್ಗೆ ಗಾದೆ ಮತ್ತು ಒಗಟುಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡುವುದರ ಮೂಲಕ ಸ್ತ್ರೀ ಸಂವೇದನೆಯನ್ನು ಗುರುತಿಸಿದ್ದಾರೆ.

ಹೀಗೆ ವಸ್ತು ಸಂಗ್ರಹಾಲಯವನ್ನು ಕುರಿತಂತೆ ಜಾನಪದರಲ್ಲಿ ಕೃತಿಗಳು ತುಂಬಾ ವಿರಳ. ಅಂತಹದರಲ್ಲಿ ಕರಗಲ್ಲಿನಿಂದ ಹಿಡಿದು ಯುರೋಪಿನ ಯಾರ್ಕ್‌ಷೈರ್ ಭಾಗದಲ್ಲಿರುವ ವಸ್ತು ಸಂಗ್ರಹಾಲಯಕ್ಕೆ ಸಂಬಂಧಿಸಿದಂತೆ ಆಸ್ಟ್ರೇಲಿಯ, ಆಸ್ಟ್ರೀಯ, ಪಾಲಿನೇಷ್ಯ, ಮೈಯನ್ಮಾರ್, ಈ ದೇಶಗಳ ಜಾನಪದತ್ತ ಕಣ್ಣಾಯಿಸುವ ಬರಹಗಳು ಇವೆ. ಭಾರತದ ಪಂಜಾಬ್, ಅರುಣಾಚಲ, ಪ್ರದೇಶ ಮತ್ತು ನಾಗಲ್ಯಾಂಡ್‌ಗಳ ಜಾನಪದ ಮತ್ತು ಬುಡಕಟ್ಟು ವಿಚಾರಗಳನ್ನು ಕುರಿತಾಗಿ ಪ್ರಸ್ತುತ ಗ್ರಂಥದಲ್ಲಿವೆ. ಕೆಲವು ಸಮುದಾಯಗಳ ಬಗೆಗೆ ಅವರ ಜಾನಪದದ ವಿಷಯ ವಸ್ತುವನ್ನು ಕುರಿತು ಬರಹದಲ್ಲಿ ನೋಡಬಹುದು. ಮತ್ತು ಲಿಂಗಾಯತ ದೇವರುಗಳು, ಕೃಷಿ ಬಿತ್ತನೆ, ಪಾರಂಪರಿಕತೆ, ಗಾದೆ ಮತ್ತು ಒಗಟುಗಳಲ್ಲಿ ಸ್ತ್ರೀ ಸಂವೇದನೆ ಎಂಬ ಪ್ರಬಂಧಗಳು ಈ ಗ್ರಂಥದಲ್ಲಿವೆ. ಹೀಗೆ ಒಂದು ಅರ್ಥಪೂರ್ಣವಾದಂತಹ ಕೆಲಸವನ್ನು ವೈ.ಸಿ.ಭಾನುಮತಿಯವರು ಜಾನಪದ ಚಹರೆ ಕೃತಿಯಲ್ಲಿ ಮಾಡಿದ್ದಾರೆ.

೩.೨.೩.೬.೯. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಜಾನಪದೀಯ ನೆಲೆಗಳು

ಈ ಕೃತಿಯನ್ನು ವೈ.ಸಿ. ಭಾನುಮತಿ ಅವರು ಸಂಗ್ರಹಿಸಿ ೨೦೦೧ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟಿಸಿದ್ದಾರೆ. 'ಜಾನಪದ' ಹಾಗೂ 'ಶಿಷ್ಟ ಸಾಹಿತ್ಯ' ಈ ಎರಡು ಪ್ರಕಾರದಲ್ಲಿ ವಿಭಾಗಿಸಿಕೊಂಡು ಕೃತಿಗಳ ಅವಲೋಕನ ಮಾಡಿದ್ದಾರೆ. ಪಂಚತಂತ್ರ, ಪುಣ್ಯಾಶ್ರವ, ಬತ್ತೀಸಪುತ್ತಳಿ ಕಥೆ, ಹಾಗೆಯೇ ಸಂಚಿಹೊನ್ನಮ್ಮನ ಹದಿಬದೆಯ ಧರ್ಮದಲ್ಲಿ ಜಾನಪದ ತ್ರಿಪದಿ ಇರುವುದನ್ನು ಅನೇಕ ಅಂಶಗಳೊಂದಿಗೆ ಗುರುತಿಸಿದ್ದಾರೆ. ಗಾದೆಮಾತುಗಳನ್ನು ಪ್ರಾಚೀನ ಕವಿಗಳು ತಮ್ಮ ಕೃತಿಗಳಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬಳಸಿಕೊಂಡಿರುವುದನ್ನು ಗುರುತಿಸಿದ್ದಾರೆ. ಉದಾಹರಣೆಗೆ

ಪಂಪ-ವಿಕ್ರಮಾರ್ಜುನ ವಿಜಯದಲ್ಲಿ 'ಸೆಟ್ಟಿಯ ಬಳ್ಳಂ ಕಿರಿದು ಬಂಡಿಗಂಡನಿಲ್ಲ ಪಾಲನೇ ಕಂಡಂ' ಎಂದು ಸಂದರ್ಭೋಚಿತವಾಗಿ ಬಳಕೆಗೊಂಡಿರುವುದನ್ನು ಗುರುತಿಸಿದ್ದಾರೆ. ಹಾಗೆಯೇ ಒಗಟು, ಕ್ರೀಡೆಗಳು, ಪ್ರದರ್ಶನಾತ್ಮಕ ಕಲೆ, ದೇವತೆಗಳು, ಶಕುನ ಮತ್ತು ನಂಬಿಕೆಗಳು, ವೈದ್ಯ, ಬೇಟೆ, ಆಭರಣ, ಖನಿಜ ಜಾನಪದ, ಪ್ರಾಣಿ ಜಾನಪದ, ಗಣಿತ, ವಿವಾಹ ಮತ್ತು ಜನನ, ಮಾಟಮಂತ್ರ, ಕೊರವಂಜಿ ಮೊದಲಾದವುಗಳ ಭಾಷೆಯನ್ನು ಒಳಗೊಂಡು ಅನೇಕ ಅಂಶಗಳನ್ನ ಬಳಸಿಕೊಂಡು ಪ್ರಾಚೀನ ಕವಿಗಳು ಮತ್ತು ಕೃತಿಗಳನ್ನು ರಚಿಸಿರುವುದು ಕಂಡುಬರುತ್ತದೆ.

೩.೨.೫.೬.೧೦ ಜನಪದ ಅಡುಗೆ

ಈ ಕೃತಿಯನ್ನು ವೈ.ಸಿ. ಭಾನುಮತಿ ಅವರು ಸಂಗ್ರಹಿಸಿ ೨೦೦೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಮುಖ್ಯವಾಗಿ ಪ್ರಾದೇಶಿಕತೆಗೆ ಅನುಗುಣವಾಗಿ ಆಹಾರ ಪದ್ಧತಿಗಳನ್ನು ಚರ್ಚಿಸಿದ್ದಾರೆ. ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದಲ್ಲಿರುವ ಅಡುಗೆಗಳನ್ನು ಸಂಕ್ಷಿಪ್ತವಾಗಿ ಅವಲೋಕನ ಮಾಡಿದ್ದಾರೆ. ಹಾಗೆಯೇ ಪ್ರಾಚೀನ ಕಾಲದಿಂದಲೂ ಕನ್ನಡ ಸಾಹಿತ್ಯದಲ್ಲಿ ಉಲ್ಲೇಖಗೊಂಡಿರುವ ಅಡುಗೆಯನ್ನು ತೌಲನಿಕ ಅಧ್ಯಯನ ಮಾಡಿದ್ದಾರೆ. ಪ್ರಾಚೀನ ಅಡುಗೆಗಳು ಮತ್ತು ಅವುಗಳನ್ನು ಸಂರಕ್ಷಿಸುವ ಮಾದರಿಗಳು ಕಣ್ಮರೆಯಾಗಿರುವುದರಿಂದ ಪ್ರಸ್ತುತ ದಿನಮಾನದಲ್ಲಿ ಆ ಬಗೆಯ ಪ್ರಾಚೀನ ಅಡುಗೆ ಪದ್ಧತಿಗಳನ್ನು ಸಂರಕ್ಷಿಸುವ ವಿಧಾನಗಳ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಲಾಗಿದೆ.

೩.೨.೩.೬.೧೧. ಹೊಳಲು ಅಣ್ಣಯ್ಯಗೌಡರ ಚಂದ್ರಹಾಸನ ಕಥೆ(ನಾಟಕ)

ಈ ಕೃತಿಯನ್ನು ವೈ.ಸಿ. ಭಾನುಮತಿ ಅವರು ಸಂಪಾದಿಸಿ ೨೦೧೦ರಲ್ಲಿ ಪ್ರಸಾದ್ ಏಜೆನ್ಸಿಸ್ ಮೈಸೂರಿನಿಂದ ಪ್ರಕಟಿಸಿದ್ದಾರೆ. ಈ ಪ್ರತಿಯ ಅಂಚುಗಳಲ್ಲಿ ಪೂರ್ಣವಾಗಿ ಕೆಲವೆಡೆ ಪದಗಳು ಲುಪ್ತವಾಗಿದ್ದವು. ಅಂಥವನ್ನು ಸೂಕ್ತ ರೀತಿಯಲ್ಲಿ ಗುರುತಿಸಿ ಕಂಸದಲ್ಲಿ ಕೊಡಲಾಗಿದೆ. ಹಾಗೆಯೇ ಅಕ್ಷರ ಸ್ಖಾಲಿತ್ಯ ಹೇರಳವಾಗಿತ್ತು. ಅದನ್ನೂ ಸರಿಪಡಿಸಿ ಪರಿಷ್ಕರಿಸಿದ್ದಾರೆ.

ವೈ.ಸಿ. ಭಾನುಮತಿ ಅವರು ಕನ್ನಡ ಗ್ರಂಥಸಂಪಾದನೆಗೆ ಅಷ್ಟೇ ಸೀಮಿತವಾಗದೆ ಜಾನಪದ ಕ್ಷೇತ್ರದಲ್ಲಿ ಸುಮಾರು ೧೧ ಕೃತಿಗಳನ್ನು ಪ್ರಕಟಿಸಿದ್ದು, ಜಾನಪದರಲ್ಲಿ ಅಡಗಿರುವ ಜ್ಞಾನವನ್ನು ಹೊರತೆಗೆಯುವಂತಹ ಕೆಲಸ ಮಾಡಿದ್ದಾರೆ. ಆಧುನಿಕತೆಯ ಪ್ರಭಾವದಿಂದ ಅನೇಕ ಪುರಾಣ ಕಥೆಗಳು ಕಣ್ಮರೆಯಾಗುತ್ತಿವೆ. ಅಂತಹ ಕಥೆಗಳನ್ನು ಓದುಗರ ಅಭಿರುಚಿಗೆ ತಕ್ಕಂತೆ ಅಲ್ಲಿನ ಪರಿಸರದಲ್ಲಿ ಅಂದರೆ ಬೇಲೂರಿನಲ್ಲಿ ನಡೆದ ಅನೇಕ ಸಂಗತಿಗಳನ್ನು ಕಥೆಯ ಮೂಲಕ ಹೇಳುವಂತಹ ಮಾಹಿತಿಯನ್ನು ಕಲೆ ಹಾಕಿದ್ದಾರೆ. ಹಾಗೆಯೇ ಜಾನಪದರಲ್ಲಿ ಹೆಣ್ಣು ಮತ್ತು ಭೂಮಿ, ಫಲವಂತಿಕೆಯ ಬಗ್ಗೆ ಇರುವ ಅನೇಕ ಮಾಹಿತಿಯನ್ನು ಕುರಿತು ಚರ್ಚಿಸಿದ್ದಾರೆ. ಜಾನಪದ ಸಾಹಿತ್ಯದ ಹಿನ್ನೆಲೆಯಲ್ಲಿ ರಚಿಸಿರುವಂತಹ ಕೃತಿಗಳು ಜಾನಪದ ಸಾಹಿತ್ಯಕ್ಕೆ ಅಷ್ಟೇ ಸೀಮಿತವಾಗದೆ, ಇತಿಹಾಸದಲ್ಲಿ ಕಣ್ಮರೆಯಾಗಿರುವಂತಹ ಅನೇಕ ವಿಚಾರಗಳು ಜಾನಪದರಲ್ಲಿ ಕಥೆಯ ಮೂಲಕ ಅಥವಾ ಐತಿಹ್ಯದ ಮೂಲಕ ತಿಳಿಸಿದ್ದಾರೆ.

ಇಲ್ಲಿ ಸಮುದಾಯದ ಅಧ್ಯಯನದಿಂದ ಹಿಡಿದು ಪ್ರಾಚೀನ ಕವಿಗಳು ಜಾನಪದ ಅಂಶಗಳನ್ನು ಬಳಸಿಕೊಂಡು ಶಿಷ್ಟ ಸಾಹಿತ್ಯದಲ್ಲಿ ಕೃತಿ ರಚಿಸಿರುವುದರ ವರೆಗೆ ಚರ್ಚೆ ಮಾಡಿದ್ದಾರೆ.

೩.೨.೩.೬.೧೧. ಬಿಡಿ ಲೇಖನಗಳು

ವೈ.ಸಿ. ಭಾನುಮತಿ ಅವರು ಕನ್ನಡ ಸಾಹಿತ್ಯದಲ್ಲಿ ಅಜ್ಞಾತವಾಗಿ ಉಳಿದಿರುವ ಕವಯತ್ರಿಯರ ಜೀವನ ಹಾಗೂ ಅವರು ಸಾಹಿತ್ಯ ಕ್ಷೇತ್ರದಲ್ಲಿ ರಚಿಸಿದ ಕೃತಿಗಳು ಅಥವಾ ಲೇಖನಗಳ ಪರಿಚಯವನ್ನು ಕುರಿತಂತೆ ಹಲವಾರು ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. ಅಂತಹ ಲೇಖನಗಳನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

೩.೨.೩.೬.೧೧.೧. ಕ್ರಿಶ. ೧೫೦೦–೧೮೮೯ರ ವರೆಗಿನ ಕನ್ನಡ ಮಹಿಳಾ ಸಾಹಿತ್ಯ

ಲೇಖನ ಎಚ್.ಎಸ್.ಶ್ರೀಮತಿ ಅವರು ಸಂಗ್ರಹಿಸಿರುವ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆಯಲ್ಲಿ ಪ್ರಕಟವಾಗಿದೆ. ಕ್ರಿ.ಶ. ೧೫೦೦–೧೮೮೯ರ ವರೆಗಿನ ಕನ್ನಡ ಮಹಿಳಾ ಸಾಹಿತ್ಯವನ್ನು ಅಧ್ಯಯನದ ದೃಷ್ಟಿಯಿಂದ ಮೂರು ಕಾಲಘಟ್ಟಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಒಂದೊಂದು ಕಾಲಘಟ್ಟದಲ್ಲಿ ಬರವಣಿಗೆಯಲ್ಲಿ ತೊಡಗಿಕೊಂಡ ಮಹಿಳೆಯರನ್ನು ಹಾಗೂ ಅವರ ಸಾಹಿತ್ಯಿಕ ಕೃತಿಗಳನ್ನು ಈ ಲೇಖನದಲ್ಲಿ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ, ಹಾಗೆಯೇ “ಇತಿಹಾಸ ಮರುಕಳಿಸುವಂತೆ ಹೆಣ್ಣನ್ನು ಹಿಂದಿನಂತೆ ಸಾಂಪ್ರದಾಯಿಕ ಚೌಕಟ್ಟಿನಲ್ಲಿಯೇ ನಿರ್ಬಂಧಿಸಲಾಯಿತು. ಹನ್ನೆರಡನೆಯ ಶತಮಾನದ ಬಳಿಕ ಹೆಣ್ಣು ಮಕ್ಕಳ ಸೃಜನಶೀಲತೆ ನಿಷ್ಕ್ರಿಯವಾಗಿದ್ದಕ್ಕೆ ಹದಿನೇಳನೆಯ ಶತಮಾನದ ವರೆಗೆ ಬಹುತೇಕ ದುರ್ಬಲಗೊಂಡಿದ್ದಕ್ಕೆ ಕಾರಣಗಳನ್ನು ಪುರುಷ ಸಾಹಿತ್ಯ ಚರಿತ್ರೆಕಾರರು ಗಂಭೀರವಾಗಿ ಚಿತ್ರಿಸಿದಂತೆ ಕಂಡು ಬರುವುದಿಲ್ಲ”[೬೬] ಪುರಾಣ ಮತ್ತು ಮಹಾಕಾವ್ಯಗಳ ಸೃಷ್ಟಿಯ ಸಂದರ್ಭದಲ್ಲಿ ಸ್ತ್ರೀಯರನ್ನು ಹಲವಾರು ಕಾರಣಗಳಿಂದ ನಿರ್ಬಂದಿಸಲಾಯಿತು, ಈ ಕಾಲಘಟ್ಟದಲ್ಲಿ ಪುರುಷ ಚರಿತ್ರೆಕಾರರು ಕಂಡು ಬರುತ್ತಾರೆ ಹೊರತು ಮಹಿಳೆಯರು ಕಾಣಿಸಿಕೊಳ್ಳುವುದು ತುಂಬ ವಿರಳ. ಹನ್ನೆರಡನೆಯ ಶತಮಾನದಲ್ಲಿ ನಡೆದ ಶರಣ ಚಳುವಳಿಗಳ ಪ್ರೇರಣೆ ಪ್ರಭಾವದಿಂದ ಮಹಿಳೆಯರು ಸಾಹಿತ್ಯ ಕ್ಷೇತ್ರದಲ್ಲಿ ಹೆಜ್ಜೆ ಗುರುತು ಮೂಡಿಸಿರುವುದು ವಿಶೇಷವಾಗಿದೆ.

ಹದಿನೇಳನೆಯ ಶತಮಾನದಲ್ಲಿ ಬೆರಳೆಣಿಕೆಯಷ್ಟು ಮಹಿಳೆಯರು ಸಾಹಿತ್ಯ ಕೃಷಿಯಲ್ಲಿ ತೊಡಗಿ ಕೊಂಡಿರುವುದು ವಿಶೇಷವಾಗಿದೆ. ಈ ಕಾಲದಲ್ಲಿ ಮಹತ್ತರವಾದ ಕೃತಿಯನ್ನು ರಚಿಸಿದ ಮತ್ತು ಅತಿ ಹೆಚ್ಚು ಚರ್ಚೆಗೆ ಒಳಗಾದವರು ‘ಸಂಚಿಹೊನ್ನಮ್ಮ’ ಮಹಿಳೆಯರ ಬದುಕನ್ನು ಪುರುಷ ನೆಲೆಯಿಂದಲೇ ನೋಡಿರುವುದರಿಂದ ಇಲ್ಲಿನ ಬಹಳಷ್ಟು ವಿಚಾರಗಳು ಪುರುಷ ಪರವಾಗಿರುವುದನ್ನು ಗಮನಿಸಿದ್ದಾರೆ. ಇಂತಹ ಆನೇಕ ವಿಚಾರಗಳನ್ನು ವಿಮರ್ಶೆಗೆ ಒಳಪಡಿಸಲಾಗಿದೆ. ಇದೇ ಕಾಲಘಟ್ಟದಲ್ಲಿ ‘ಶೃಂಗಾರಮ್ಮ’ ಪದ್ಮಿನೀ ಕಲ್ಯಾಣ ಕೃತಿ ರಚಿಸಿದ್ದಾಳೆ. ಈ ಕೃತಿಯ ವಸ್ತು ನೂತನವೇನಲ್ಲ. ಕನ್ನಡ ಮತ್ತು ಸಂಸ್ಕೃತ ಸಾಹಿತ್ಯದಲ್ಲಿ ಪರಿಚಿತವಾದದ್ದು. ವೈಷ್ಣವ ಪುರಾಣಗಳಲ್ಲಿದ್ದ ಈ ಪ್ರಸಂಗವನ್ನು ಕನ್ನಡಕ್ಕೆ ಅಳವಡಿಸಿದ್ದಾರೆ.

ಆದರೆ ಮಹಿಳೆ ಈ ವಸ್ತುವನ್ನು ಮೊದಲು ಸ್ವೀಕರಿಸಿದ್ದಾಳೆ ಎಂದು ಗುರುತಿಸಿದ್ದಾರೆ. ಹಾಗೇಯೇ ದೊಡ್ಡಕೃಷ್ಣರಾಜ ಒಡೆಯರ ಪತ್ನಿ 'ಚೆಲುವಾಂಬೆ' ವರನಂದೀ ಕಲ್ಯಾಣ, ವೆಂಕಟಾಚಲ ಮಹಾತ್ಮ್ಯ, ಮಂಗಳಾರತಿ ಪದ ಮುಂತಾದ ಕೃತಿಗಳನ್ನು ರಚಿಸಿದ್ದಾಳೆ, ತನ್ನ ಕೃತಿಗಳಿಗೆ ಪುರಾಣಗಳಿಂದ ವಸ್ತುವನ್ನು ಆಯ್ಕೆ ಮಾಡಿಕೊಂಡಿರುವುದನ್ನು ಗಮನಿಸಿದ್ದಾರೆ. ಅದೇ ರೀತಿ ಹರಿದಾಸ ಸಾಹಿತ್ಯ ಪ್ರಕಾರದಲ್ಲಿ ಬಂದ 'ಗಲಗಲಿ ಅವ್ವ' ತನ್ನ ಅನುಭವಕ್ಕೆ ಧಕ್ಕಿದ ಸಂಗತಿಯನ್ನು ಪೌರಾಣಿ ವಸ್ತುವಿನೊಂದಿಗೆ ಸಮೀಕರಿಸಿ ಕೃತಿಗಳನ್ನು, ರಚಿಸಿರುವುದನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

ಹದಿನೆಂಟನೆಯ ಶತಮಾನದ ಮಹಿಳಾ ಸಾಹಿತ್ಯವನ್ನು ಆವಲೋಕಿಸಿದಾಗ ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಬಂದ 'ಹೆಳವನಕಟ್ಟೆ ಗಿರಿಯಮ್ಮನ' ಸುಮಾರು ೪೦ಕ್ಕೂ ಹೆಚ್ಚು ಕೀರ್ತನೆಗಳು ದೊರಕಿವೆ. 'ರಾಮಾಯಣ ಮಹಾಭಾರತ' ಕೃತಿಗಳನ್ನು ಅಭ್ಯಾಸ ಮಾಡಿ ಹಾಗೂ ಹರಿದಾಸರ ಪ್ರೇರಣೆಯಿಂದ ಕೃತಿ ರಚಿಸಿರ ಬಹುದು ಎಂದು ಊಹಿಸಬಹುದಾಗಿದೆ.

ಹತ್ತೊಂಬತ್ತನೆಯ ಶತಮಾನದ ಮಹಿಳಾ ಸಾಹಿತ್ಯವನ್ನು ಆವಲೋಕಿಸಿದಾಗ ಸಾಕಷ್ಟು ಮಹಿಳೆಯರು ಸಾಹಿತ್ಯ ಕ್ಷೇತ್ರದಲ್ಲಿ ಕೃತಿ ರಚನೆ ಮಾಡಿರುವುದನ್ನು ಗಮನಿಸಲಾಗಿದೆ. 'ಹರಪನಹಳ್ಳಿ ಭೀಮವ್ವ' ಹರಿದಾಸ ಪರಂಪರೆಯಲ್ಲಿ ಬಂದ ಕವಯಿತ್ರಿ ಈಕೆ ಚಿಕ್ಕ ಹಾಡುಗಳು ಮತ್ತು ದೊಡ್ಡ ಹಾಡುಗಳು ಎಂದು ಸುಮಾರು ೧೪೦ ಚಿಕ್ಕ ಹಾಡುಗಳು ಹಾಗೂ ಉಗಾಭೋಗ ಎರಡು ಸುಳಾದಿಗಳನ್ನು ರಚಿಸಿದ್ದಾಳೆ. ಭೀಮವ್ವ ವೈದಿಕ ಕುಟುಂಬದ ಹಿನ್ನೆಲೆಯಿಂದ ಬಂದಿದ್ದರಿಂದ ರಾಮಾಯಣ, ಮಹಾಭಾರತ, ಭಾಗವತ ಹರಿದಾಸರ ಕೀರ್ತನೆಗಳನ್ನು ಅಭ್ಯಾಸ ಮಾಡಿ 'ಭಿಮೇಶಕೃಷ್ಣ' ಎಂಬ ಅಂಕಿತಂದಿಂದ ಕೃತಿಯನ್ನು ರಚಿಸಿದ್ದಾಳೆ. ಈ ಕಾಲಘಟ್ಟದಲ್ಲಿ ಸುಮಾರು ೨೨ಕ್ಕೂ ಹೆಚ್ಚು ಕವಯಿತ್ರಿಯರನ್ನು ಹಾಗೂ ಅವರ ಸಾಹಿತ್ಯ ಕೃತಿಗಳು ವಿಮರ್ಶಾತ್ಮಕವಾಗಿ ಚರ್ಚೆಗೆ ಒಳಪಡಿಸಿ ಆಜ್ಞಾತವಾಗಿಯೆ ಉಳಿದತಂಹ ಮಹಿಳೆಯರನ್ನು ಹಾಗೂ ಸಮಗ್ರವಾಗಿ ಸಾಹಿತ್ಯ ಕ್ಷೇತ್ರದಲ್ಲಿ ಮಹಿಳೆ ಹೆಜ್ಜೆ ಗುರುತು ಮೂಡಿಸಿದಂತಹ ಸನ್ನಿವೇಶಗಳನ್ನು ಈ ಲೇಖನದಲ್ಲಿ ಸಂಕ್ಷಿಪ್ತವಾಗಿ ಪರಿಚಯಿಸಿದ ಕೀರ್ತಿ ಭಾನುಮತಿ ಅವರಿಗೆ ಸಲ್ಲಬೇಕಾಗಿದೆ.

೩.೨.೩.೬.೧೧.೨. ಗ್ರಂಥಸಂಪಾದನೆ ಮತ್ತು ಸಂಶೋಧನೆ

ಪ್ರಸ್ತುತ ಲೇಖನ ಆರ್ಯಾಂಬ ಪಟ್ಟಾಭಿ ಅವರು ಸಂಗ್ರಹಿಸಿರುವ ಮಹಿಳಾ ಸಾಹಿತ್ಯ ಸಮೀಕ್ಷೆ. ೨೦೦೪ರಲ್ಲಿ ಪ್ರಕಟವಾಗಿದೆ. ಪ್ರಸ್ತುತ ಲೇಖನದ ಉದ್ದೇಶ ಗ್ರಂಥಸಂಪಾದನೆ ಮತ್ತು ಸಂಶೋಧನೆಗೆ ಸಂಬಂಧಿಸಿದಂತೆ ಇದೆ. ಈ ಕ್ಷೇತ್ರಗಳಲ್ಲಿ ಮಹಿಳೆಯರು ಪಾಲ್ಗೊಂಡು ಸಂಶೋಧನೆಯನ್ನು ಮೊದಲು ಮಾಡಿದ ಅವರಿಂದ ಹಿಡಿದು ೨೦೦೧ ರವರೆಗೆ ಸಮೀಕ್ಷೆ ಮಾಡಿ ವರದಿ ಹಾಗೂ ಗ್ರಂಥಸಂಪಾದನೆಯಲ್ಲಿ ಆಧುನಿಕ ಪೂರ್ವದಲ್ಲಿ ಲಿಪಿಕಾರ್ಯದಲ್ಲಿ ತೊಡಗಿಕೊಂಡ ಲಿಪಿಕಾರ್ತಿಯರ ವಿವರಣೆಯನ್ನು ಒಳಗೊಂಡಿದೆ. ಆಧುನಿಕ ಸಂದರ್ಭದಲ್ಲಿ ಹಳೆಗನ್ನಡ ಗ್ರಂಥಸಂಪಾದನೆಯಲ್ಲಿ ತೊಡಗಿಸಿಕೊಂಡ ಮಹಿಳೆಯರ ಗ್ರಂಥಸಂಪಾದನೆ ವಿಧಾನಗಳನ್ನು ಕುರಿತು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

೩.೨.೩.೬.೧೨. ಇತರೆ ಸಂಪಾದನೆಗಳು

೩.೨.೩.೬.೧೨.೧. ಕನ್ನಡದಲ್ಲಿ ವರ್ಧಮಾನ ಸಾಹಿತ್ಯ

ಈ ಕೃತಿಯನ್ನು ವೈ.ಸಿ. ಭಾನುಮತಿ ಅವರು ರಚಿಸಿ ಮೈಸೂರ್ ಚೇತನ ಬುಕ್ ಹೌಸ್‌ದಿಂದ ೨೦೦೦ದಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಯು ಕನ್ನಡ ವರ್ಧಮಾನ ಚರಿತೆಗಳ ಒಂದು ಸಮಗ್ರ ಅಧ್ಯಯನವಾಗಿದ್ದು ಪ್ರಾಚೀನ ಕನ್ನಡ ಸಾಹಿತ್ಯಧ್ಯಯನದಲ್ಲೊಂದು ಮೈಲುಗಲ್ಲಾಗಿದೆ. ಈ ವರ್ಧಮಾನ ಚರಿತೆಗಳು ತೌಲನಿಕ ಅಧ್ಯಯನ ೧೯೯೭ರಲ್ಲಿ ಸಲ್ಲಿಸಿದ ಸಂಶೋಧನಾ ಮಹಾಪ್ರಬಂಧವಾಗಿದೆ. ಈ ಕೃತಿಯಲ್ಲಿ ಒಟ್ಟು ಎಂಟು ಅಧ್ಯಯನಗಳನ್ನಾಗಿ ವಿಂಗಡಿಸಿಕೊಂಡು ಅಧ್ಯಯನವನ್ನು ಕೈಗೊಂಡಿದ್ದಾರೆ.

ವರ್ಧಮಾನ ಮಹಾವೀರನು ಜೈನಧರ್ಮ ಮತ್ತು ಸಮಾಜಕ್ಕೆ ಹೊಸ ವಿಸ್ತಾರವನ್ನು ಹೊಸ ವೈಚಾರಿಕ ಆಲೋಚನೆಯನ್ನು ತಂದುಕೊಟ್ಟವನು. ತನ್ನ ಅನುಪಮ ಸಾಧನೆ ಮತ್ತು ಚಿಂತನೆಗಳ ಮೂಲಕ ಚಿರಂತನ ಸ್ಫೂರ್ತಿಯ ಕೇಂದ್ರವಾಗಿದ್ದರಿಂದ ಇಂದಿಗೂ ಪ್ರಸ್ತುತವಾದ್ದರಿಂದ ಆಧುನಿಕ ಲೇಖಕರು ಕೂಡ ಈತನ ಜೀವನವನ್ನು ಆಧರಿಸಿದ ಹೊತ್ತಗೆಗಳನ್ನು ಹೊರತಂದಿದ್ದಾರೆ. ಕನ್ನಡ ಕಾವ್ಯಗಳನ್ನೆಲ್ಲ ಒಂದೆಡೆ ಇಟ್ಟುಕೊಂಡು ಇವುಗಳ ಆಕರ, ಪರಸ್ಪರ, ಪ್ರಭಾವ ಕವಿಗಳ ಸೋಪಜ್ಞತೆ ಕಾವ್ಯವನ್ನು ಕಲಾತ್ಮಕಗೊಳಿಸುವಲ್ಲಿನ ತೊಡಕುಗಳು ಈ ನಿಟ್ಟಿನಲ್ಲಿ ಪ್ರಸ್ತುತ ಮಹಾಪ್ರಬಂಧದ ಅಧ್ಯಯನವಾಗಿದೆ. ಕನ್ನಡ ವರ್ಧಮಾನ ಚರಿತೆಗಳ ತೌಲನಿಕ ವಿಮರ್ಶೆ, ವಿವೇಚನೆಗಳು ಮಹಾಪ್ರಬಂಧದ ಪ್ರಮುಖ ಉದ್ದೇಶ ಇದಕ್ಕೆ ಪೂರಕವಾಗಿ ಇತಿಹಾಸದಲ್ಲಿ ಪ್ರಕೃತಿ, ಸಂಸ್ಕೃತಿ ಅಪಭ್ರಂಶ ಹಾಗೂ ಬೌದ್ಧ ಸಾಹಿತ್ಯದಲ್ಲಿನ ವರ್ಧಮಾನ ಚರಿತ್ರೆಗಳ ಒಂದು ವಿಹಂಗಮ ನೋಟವನ್ನು ನೀಡಲು ಪ್ರಯತ್ನಿಸಿದ್ದಾರೆ. ಹಾಗೆಯೇ ತೌಲನಿಕ ಅಧ್ಯಯನದಲ್ಲಿ ಗುಣಭದ್ರರ ಉತ್ತರ ಪುರಾಣ. ಅಸಗನ ವರ್ಧಮಾನ ಚರಿತ್ರೆಯನ್ನು ಪ್ರಮುಖ ಆಕರ ಗ್ರಂಥಗಳಾಗಿ ಬಳಸಿಕೊಂಡಿದ್ದಾರೆ. ಇಲ್ಲಿ ಕನ್ನಡ ಕಾವ್ಯಗಳಿಗೆ ಮಾತ್ರ ಮಿತಿಗೊಳಿಸಿಕೊಂಡಿದ್ದಾರೆ. ಹೀಗೆ ಎಲ್ಲಾ ಅಂಶಗಳನ್ನು ಕೇಂದ್ರವಾಗಿಟ್ಟುಕೊಂಡು ಕನ್ನಡದಲ್ಲಿ ವರ್ಧಮಾನ ಮಹಾವೀರನ ಬಗೆಗೆ ಸಾಹಿತ್ಯ ಕೃಷಿ ಮತ್ತು ಆತನ ಚಿಂತನೆಗಳು ಹೇಗೆ ಮಹತ್ವ ಪಡೆದುಕೊಂಡಿವೆ ಎಂಬುದನ್ನು ತಿಳಿಯಬಹುದಾಗಿದೆ.

೩.೨.೩.೬.೧೨.೨. ಆಲಿನುಂಗಿದ ನೋಟ

ಆಲಿನುಂಗಿದ ನೋಟ ಕೃತಿಯನ್ನು ವೈ.ಸಿ. ಭಾನುಮತಿ ಅವರು ಲೇಖನ ಸಂಗ್ರಹ ೨೦೦೨ರಲ್ಲಿ ಸಂವಹನ ಪ್ರಕಾಶನ ಮೈಸೂರಿನಿಂದ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಸುಮಾರು ೧೫ ಲೇಖನಗಳಿವೆ. ಈ ಲೇಖನಗಳು ವಿವಿಧ ವಿಚಾರ ಸಂಕಿರಣದಲ್ಲಿ ಮಂಡಿತವಾಗಿವೆ. ಇಲ್ಲಿನ ಮೊದಲ ಪ್ರಬಂಧ 'ಆಯ್ದಕ್ಕಿ ಲಕ್ಕಮ್ಮ ಮತ್ತು ಪುಣ್ಯಸ್ತ್ರೀ ಲಿಂಗಮ್ಮ' ಈ ಲೇಖನದಲ್ಲಿ ಉಪೇಕ್ಷಿತವಾಗಿದ್ದ ಇಬ್ಬರು ವಚನಕಾರ್ತಿಯರು ಸಂಸಾರದಲ್ಲಿಯೇ ಇದ್ದು ಮಹತ್ತರವಾದ ಸಾಧನೆ ಮಾಡಿರುವುದನ್ನು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಈ ಕೃತಿಗೆ ಫ.ಗು. ಹಳಕಟ್ಟಿ ಪ್ರಶಸ್ತಿ ಬಂದಿದೆ.

"ಏಕಾಂತ ರಾಮಯ್ಯ" ಈತನನ್ನು ಮೂರು ನೆಲೆಯಿಂದ ಅಧ್ಯಯನ ಮಾಡಿದ್ದಾರೆ. ಈತನ ವಚನ ನೆಲೆಯಿಂದ, ಶಾಸನ ಮತ್ತು ಸಾಹಿತ್ಯಕ ಹಿನ್ನೆಲೆಯಿಂದ ಕುರಿತು ಚರ್ಚಿಸಿದ್ದಾರೆ. "ವಚನ ಸಾಹಿತ್ಯ ಮತ್ತು ಅಂದಿನ ಸಮಾಜ" ಲೇಖನದಲ್ಲಿ ವಚನಗಳಲ್ಲಿ ಕಂಡು ಬರುವ ಅಂದಿನ ಸಮಾಜವನ್ನು ಕುರಿತು ವಿಶ್ಲೇಷಿಸಿದ್ದಾರೆ. "ತೋಂಟದ ಸಿದ್ದಲಿಂಗ ಯುಗದ ಸ್ವರವಚನ ಸಾಹಿತ್ಯ" ಈ ಪ್ರಬಂಧದಲ್ಲಿ ಈವರೆಗಿನ ಅಧ್ಯಯನದಿಂದ ಹೊರಬರುವ ಫಲಿತಗಳನ್ನು ಸಂಗ್ರಹಿಸಿದ್ದಾರೆ. ತೋಂಟದ ಸಿದ್ದಲಿಂಗಯುಗದಲ್ಲಿ ಸುಮಾರು ೭೦೦ಕ್ಕೂ ಹೆಚ್ಚು ಸ್ವರವಚನಗಳು ಕಂಡು ಬರುವುದನ್ನು ಗುರುತಿಸಿದ್ದಾರೆ. "ಕಟ್ಟಿಗೆಹಳ್ಳಿ ಸಿದ್ದಲಿಂಗಸ್ವಾಮಿಗಳು" ಇವರ ಜೀವನ ಚರಿತ್ರೆ ಹಾಗೂ ಅವರ ಸಾಧನೆಯನ್ನು ಕುರಿತು ವಿವರಿಸಿದ್ದಾರೆ. "ಬಸವ ಕೃತಿ ತ್ರಯ" ಈ ಲೇಖನದಲ್ಲಿ ಬಸವೇಶ್ವರ ಕಾವ್ಯ, ಬಸವ ಶಿಖಾಮಣಿ ಮತ್ತು ಚೋರಬಸವ ಚಾರಿತ್ರೆಗಳಲ್ಲಿ ಕಂಡುಬರುವ ಬಸವಣ್ಣನನ್ನು ಕುರಿತ ಸಂಗತಿಗಳನ್ನು ತೌಲನಿಕ ಅಧ್ಯಯನ ಮಾಡಿದ್ದಾರೆ.

"ಕನ್ನಡದಲ್ಲಿ ವೀರಭದ್ರ ಸಾಹಿತ್ಯ" ಲೇಖನದಲ್ಲಿ ಕನ್ನಡದಲ್ಲಿ ದೊರೆತಿರುವ ಪ್ರಾಚೀನ ಕೃತಿಗಳಲ್ಲಿ ಉಲ್ಲೇಖವಾಗಿರುವ ವೀರಭದ್ರ ಕಲ್ಪನೆ ಎಷ್ಟು ಪ್ರಾಚೀನ ಎಂಬುದನ್ನು ವಿವರಿಸಿದ್ದಾರೆ. "ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಪ್ರಾಚೀನ ವೀರಶೈವ ಕವಿಗಳು" ಆರಂಭಕಾಲದಿಂದ ಬಸವಪ್ಪ ಶಾಸ್ತ್ರಿಗಳವರೆಗೆ ಕಂಡು ಬರುವ ವೀರಶೈವ ಸಾಹಿತ್ಯವನ್ನು ಅವಲೋಕಿಸಿದ್ದಾರೆ. ಹಾಗೆಯೇ ಮುಂದುವರೆದು "ವೀರಶೈವ ಕವಿಗಳು ಕಂಡ ಶಿವಯೋಗಿ ಸಿದ್ಧರಾಮ" ಈ ಪ್ರಬಂಧದಲ್ಲಿ ಹರಿಹರನಿಂದ ಚನ್ನಪ್ಪ ಕವಿಯವರೆಗಿನ ವೀರಶೈವ ಕವಿಗಳು ಸಿದ್ಧರಾಮನ ವ್ಯಕ್ತಿತ್ವವನ್ನು ತಮ್ಮ ಕಾವ್ಯಗಳಲ್ಲಿ ಸಮಗ್ರವಾಗಿ ಹಾಗೂ ಪ್ರಾಸಂಗಿಕವಾಗಿ ಉಲ್ಲೇಖ ಇರುವುದನ್ನು ಕುರಿತು ಚರ್ಚಿಸಿದ್ದಾರೆ.

"ಕೆರೆಯ ಪದ್ಮರಸ ಮತ್ತು ಬೇಲೂರಿನ ಕೆರೆ" ಲೇಖನದಲ್ಲಿ ಕೆರೆಯ ಪದ್ಮರಸ ಬೇಲೂರು ಭಾಗದಲ್ಲಿ ವೈಷ್ಣವ ಧರ್ಮದ ಪ್ರಾಬಲ್ಯವನ್ನು ತಗ್ಗಿಸಿ ವೀರಶೈವ ಧರ್ಮದ ಉತ್ಥಾನಕ್ಕೆ ಶ್ರಮಿಸಿದವರಲ್ಲಿ ಪ್ರಮುಖ ಪದ್ಮರಸ ವೀರಶೈವ ಧರ್ಮಕ್ಕೆ ನೀಡಿದ ಅಮೂಲ್ಯ ಕೊಡುಗೆಯನ್ನು ಕುರಿತು ಚರ್ಚಿಸಿದ್ದಾರೆ. "ಬಸವರಾಜ ವಿಜಯಂ: ತೌಲನಿಕ ದೃಷ್ಟಿ" ಈ ಲೇಖನದಲ್ಲಿ ಬಸವ ಸಮಕಾಲೀನ ವಚನಕಾರರಿಂದ ೧೯೩೦ರಲ್ಲಿದ್ದ ಕಲ್ಲಿನಾಥಶಾಸ್ತ್ರಿಯವರ ಶರಣ ಬಸವೇಶ್ವರ ಪುರಾಣವನ್ನು ಒಳಗೊಂಡಂತೆ ಆಧುನಿಕ ಸಾಹಿತ್ಯದ ಲಂಕೇಶ, ಶಿವಪ್ರಕಾಶ್ ಅವರ ಹಲವು ಶತಮಾನಗಳ ಲೇಖಕರು ಬಸವಣ್ಣ ಹಾಗೂ ಬಸವಯುಗದಿಂದ ಸ್ಫೂರ್ತಿ ಪಡೆದಿರುವುದನ್ನು ತೌಲನಿಕ ಅಧ್ಯಯನದಲ್ಲಿ ಕುರಿತು ವಿಶ್ಲೇಷಿಸಿದ್ದಾರೆ. "ದೇವಲಾಪುರದ ನಂಜುಂಡಕವಿಯ ಸಾಹಿತ್ಯ ಪ್ರಕಾರಗಳು" ಈ ಲೇಖನದಲ್ಲಿ ನಂಜುಂಡ ಕವಿಯ ಕೃತಿಗಳನ್ನು ಪೌರಾಣಿಕ, ರಾಜಭಕ್ತಿ, ದೈವಸ್ತುತಿ, ಎಂದು ಮೂರು ಪ್ರಕಾರಗಳಾಗಿ ವಿಂಗಡಿಸಿಕೊಂಡು ಸಾಂಗತ್ಯ, ಕಾವ್ಯ, ಷಟ್ಪದಿಕಾವ್ಯ, ಗದ್ಯ, ಸ್ತೋತ್ರ, ಅಷ್ಟಕ, ಶತಕ, ಹಾಡು ಇತ್ಯಾದಿ ಪ್ರಕಾರಗಳಲ್ಲಿ ಕೃತಿ ರಚಿಸಿರುವುದನ್ನು ಗುರುತಿಸಿದ್ದಾರೆ. "ಯಾಗಂಟಿ ಚನ್ನವೀರ ಮತ್ತು ನಿಟ್ಟೂರು ನಂಜಯ್ಯ" ಈ ಲೇಖನದಲ್ಲಿ ವ್ಯಾಕರಣವನ್ನು ಅಳವಾಗಿ ಅಧ್ಯಯನ ಮಾಡಿದವರು ಹಾಗೂ ಟೀಕಾಕಾರರು ಇವರು

ವೀರಶೈವ ಧರ್ಮಾನುಯಾಯಿಗಳು. ಇವರ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. "ಮುಡಿಗೊಂಡ ಅಪ್ಪಾಜಿಕವಿ" ಈತನು 'ಗಿರಿಜಾರಮಣ ವಿಲಾಸ' ಎಂಬ ಚಂಪೂ ಕೃತಿಯನ್ನು ಬರೆದಿದ್ದಾರೆ. ಈ ಕವಿಯ ಮತ್ತು ಕೃತಿಯನ್ನು ಸಂಕ್ಷಿಪ್ತವಾಗಿ ಚರ್ಚೆ ಮಾಡಿದ್ದಾರೆ. "ಜನಪದ ಸಾಹಿತ್ಯದಲ್ಲಿ ಶರಣೆಯರು" ಲೇಖನದಲ್ಲಿ ಕೋಳೂರು ಕೊಡಗೂಸು, ಅಕ್ಕಮಹಾದೇವಿ, ನೀಲಾಂಬಿಕೆ, ಹೀಗೆ ಅನೇಕ ಶಿವಶರಣೆಯರ ಉಲ್ಲೇಖ ಜನಪದ ಸಾಹಿತ್ಯದಲ್ಲಿ ಇರುವುದನ್ನು ಗುರುತಿಸಲಾಗಿದೆ.

೩.೨.೩.೬.೧೨.೩. ಸಮಾಗತ

ಸಮಾಗತ ಕೃತಿಯನ್ನು ವೈ.ಸಿ. ಭಾನುಮತಿ ಅವರು ಸಂಗ್ರಹಿಸಿ ೨೦೧೨ರಲ್ಲಿ ಸಿವಿಜಿ ಇಂಡಿಯಾ ಪ್ರಕಾಶನ ಬೆಂಗಳೂರಿನಿಂದ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ೧೭ ಲೇಖನಗಳಿವೆ. ಈ ಲೇಖನಗಳು ಹೆಚ್ಚು ಸಂಶೋಧನಾತ್ಮಕವಾಗಿದ್ದು ವಿಭಿನ್ನ ಕಾಲಘಟ್ಟದಲ್ಲಿ ರೂಪುಗೊಂಡಿವೆ. ಆದ್ದರಿಂದ ಈ ಪ್ರಬಂಧಗಳು ಮಹತ್ವಪೂರ್ಣವಾಗಿವೆ. ಶಾಸನ, ಸಂಸ್ಕೃತಿ, ಹಳಗನ್ನಡ, ಕವಿ ಕೃತಿಗಳ ವಿಶ್ಲೇಷಣೆ ಮಾಡಿದ್ದಾರೆ. ಹಾಗೆಯೇ ಸೃಜನಶೀಲ ಸಾಹಿತ್ಯ ಕ್ಷೇತ್ರದಲ್ಲಿನ ಆರಂಭದ ಲೇಖಕಿಯರ ಕೃತಿಗಳ ಅವಲೋಕನ ಮಾಡಲಾಗಿದೆ.

೩.೨.೩.೬.೧೩. ಆಧುನಿಕ ಸಾಹಿತ್ಯ ಸಂಪಾದನೆ

೩.೨.೩.೬.೧೩.೧. ಮಹಿಳಾ ಸಾಹಿತ್ಯ ಚರಿತ್ರೆ ಸಂಪುಟ–೧೦

ಈ ಕೃತಿಯನ್ನು ವೈ.ಸಿ. ಭಾನುಮತಿ ಅವರು ಸಂಗ್ರಹಿಸಿ ೨೦೧೩ರಲ್ಲಿ ಕರ್ನಾಟಕ ಮಹಿಳಾ ವಿಶ್ವವಿದ್ಯಾಲಯದಿಂದ ಪ್ರಕಟಿಸಿದ್ದಾರೆ. ಕೃತಿಯಲ್ಲಿ ವೈ.ಸಿ. ಭಾನುಮತಿ ಅವರು ಗ್ರಂಥಸಂಪಾದನೆ ಮತ್ತು ಮಹಿಳೆ ಎಂಬ ಲೇಖನವನ್ನು ಪ್ರಕಟಿಸಿದ್ದಾರೆ. ಮಹಿಳೆಯರ ಗ್ರಂಥಸಂಪಾದನೆಯ ಇತಿಹಾಸವನ್ನು ಕುರಿತು ಇಲ್ಲಿ ಚರ್ಚಿಸಿದ್ದಾರೆ.

೩.೨.೩.೬.೧೩.೨. ಗ್ರಂಥಸಂಪಾದನಾ ವ್ಯಾಸಂಗ

ಕೃತಿಯನ್ನು ವೈ.ಸಿ.ಭಾನುಮತಿ ಅವರು ಸಂಗ್ರಹಿಸಿ ೨೦೧೨ರಲ್ಲಿ ಸಂವಹನ ಪ್ರಕಾಶನ ಮೈಸೂರಿನಿಂದ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಎಂ.ಎಂ.ಕಲಬುರ್ಗಿಯವರ ಪ್ರಬಂಧಗಳ ಸಂಕಲನಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಪ್ರಸ್ತುತ ಗ್ರಂಥಸಂಪಾದನ ವ್ಯಾಸಂಗದಲ್ಲಿ ೨೯ ಸಂಪ್ರಬಂಧಗಳಿವೆ. ಇವುಗಳನ್ನು ವಸ್ತುವಿಗೆ ಅನುಗುಣವಾಗಿ ಶಾಸ್ತ್ರಸಾಧನೆ, ವಚನಸಾಹಿತ್ಯ, ಹಸ್ತಪ್ರತಿ–ಹಸ್ತಪ್ರತಿ ಭಂಡಾರ, ಪಾಠ ಪರಿಷ್ಕರಣೆ ಎಂದು ನಾಲ್ಕು ವಿಭಾಗಗಳಲ್ಲಿ ವಿಂಗಡಿಸಿಕೊಂಡಿದ್ದಾರೆ. ಇಲ್ಲಿ ಕಲಬುರ್ಗಿ ಅವರ ಶಾಸ್ತ್ರ–ಸಾಧನೆಯಲ್ಲಿ ಹಸ್ತಪ್ರತಿಶಾಸ್ತ್ರಕ್ಕೆ ಸಂಬಂಧಸಿದಂತೆ ಚರ್ಚಿಸಿದ್ದಾರೆ. ಹಾಗೆಯೇ ವಚನ ಸಾಹಿತ್ಯ ಪರಿಷ್ಕರಣ ಸಂಪಾದನೆ ವಿಧಿವಿಧಾನಗಳನ್ನು ಕುರಿತು ವಿಶ್ಲೇಷಿಸಿದ್ದಾರೆ. ಹಸ್ತಪ್ರತಿ–ಹಸ್ತಪ್ರತಿ ಭಂಡಾರ. ಪಾಠ, ಶೋಧ–ಪರಿಷ್ಕರಣೆ ಹೀಗೆ ಪ್ರಕಾರಗಳಾಗಿ ವಿಂಗಡಿಸಿಕೊಂಡು ಕಲಬುರ್ಗಿ ಅವರ ಹಸ್ತಪ್ರತಿಶಾಸ್ತ್ರ ಮತ್ತು ಅವರ ಗ್ರಂಥಸಂಪಾದನೆ ಶಾಸ್ತ್ರದ ವೈಧಾನಿಕತೆಯನ್ನು ಕುರಿತು ವಿಶ್ಲೇಷಣೆ ಮಾಡಿದ್ದಾರೆ.

೩.೨.೩.೬.೧೩.೩. ಸಹಭಾಗಿತ್ವದಲ್ಲಿ ಮಾಡಿದ ಕೆಲಸಗಳು

ವೈ.ಸಿ. ಭಾನುಮತಿ ಅವರು ಸಂಪಾದನೆ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಿದ ರೀತಿಯಲ್ಲಿಯೇ ವಿವಿಧ ವಿದ್ವಾಂಸರೊಂದಿಗೆ ಕ್ರಿಯಾಶೀಲರಾಗಿ ಅಧ್ಯಯನ ಅಥವಾ ಬರವಣಿಗೆಯಲ್ಲಿ ತೊಡಗಿ ಕೊಂಡಿರುವುದನ್ನು ಸಹಭಾಗಿತ್ವದಲ್ಲಿ ಪ್ರಕಟವಾದ ಕೃತಿಗಳ ಮೂಲಕ ಅವರ ವಿದ್ವತ್, ಪ್ರತಿಭೆಯನ್ನು ಗಮನಿಸಬಹುದು. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿಗಳು(೫.೬.೭.೮.೯) ಸಂಪುಟಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಹಾಗೆಯೇ 'ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ' ಈ ಕೃತಿಯು ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟವಾಗಿದೆ. ಇದರಲ್ಲಿ ಉಪೇಕ್ಷಿತವಾದ ವಚನಕಾರ್ತಿಯರು ಹಾಗೂ ೧೫೦೦–೧೮೯೯ರ ಕಾಲಘಟ್ಟದಲ್ಲಿ ಬಂದ ಮಹಿಳಾ ಲೇಖಕಿಯರ ಕಿರುಪರಿಚಯ ಮತ್ತು ಅವರ ಕೃತಿಗಳನ್ನು ವಿಶ್ಲೇಷಣೆ ಮಾಡಿದ್ದಾರೆ. ಜಾನಪದ ವಿಶ್ವಕೋಶ ಸಂಪದಾಕ ಮಂಡಳಿ ಸದಸ್ಯೆಯಾಗಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕೆಲಸ ಮಾಡಿದ್ದಾರೆ. ಹಾಗೆಯೇ 'ಕರ್ನಾಟಕ ಭಾಗವತ' ಎರಡು ಸಂಪುಟಗಳಿಗೂ ಸಂಪಾದಕ ಮಂಡಳಿ ಸದಸ್ಯೆ ಮತ್ತು ಮೈಸೂರು ದರ್ಶನ ೩ ಮತ್ತು ೪ ಸಂಪುಟಗಳ ಸಂಪಾದಕಿಯಾಗಿ ಹಾಗೆಯೇ ಕರ್ನಾಟಕ ಜಾನಪದ ವಿಶ್ವಕೋಶ ಸಹಸಂಪಾದಕಿಯಾಗಿ ಜಾನಪದ ವಿಶ್ವವಿದ್ಯಾನಿಲಯದಿಂದ ಪ್ರಕಟಣೆಯಾಗಿವೆ. ಇಲ್ಲಿ ಸಂಪಾದಕರಲ್ಲಿ ಒಬ್ಬರಾಗಿ ಅಧ್ಯಯನದಲ್ಲಿ ಅಥವಾ ಪ್ರಕಟಣೆಯ ಯೋಜನೆಯಲ್ಲಿ ತೊಡಗಿಕೊಂಡಿರುವುದನ್ನು ಗಮನಿಸಬಹುದು.

ಭಾನುಮತಿ ಅವರು ಕನ್ನಡ ಗ್ರಂಥಸಂಪಾದನೆಗೆ ನೀಡಿದ ಕೊಡುಗೆ ಅಪಾರವಾದದ್ದು. ಅವರು ಹಳೆಗನ್ನಡ ಕೃತಿಗಳ ಪರಿಷ್ಕರಣೆಯಲ್ಲಿ ಅನುಸರಿಸಿದ ಮಾರ್ಗ ವಿಶಿಷ್ಟವಾದದ್ದು ಮತ್ತು ಶ್ರಮದಾಯಕವಾದದ್ದು ಏಕೆಂದರೆ ಓರ್ವ ಮಹಿಳೆಯಾಗಿ ಸುಮಾರು ೨೯ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದಲ್ಲದೆ ಇವರು ಕನ್ನಡ ಗ್ರಂಥಸಂಪಾದನೆಯ ವೈಧಾನಿಕತೆ ಕುರಿತ ಮಹತ್ವಪೂರ್ಣವಾದ ನಾಲ್ಕು ಕೃತಿಗಳನ್ನು ಪ್ರಕಟಿಸಿರುವುದು ಗಮನಾರ್ಹವಾಗಿದೆ. ಹಾಗೆಯೇ ಜಾನಪದ ಕ್ಷೇತ್ರದಲ್ಲಿ ಕೈಕೊಂಡ ಸಾಧನೆ ಪ್ರಮುಖವಾದದ್ದು. ಶಾಸ್ತ್ರ ಸಾಹಿತ್ಯ ಸಂಪಾದನೆಯಲ್ಲಿ ಕೆಲಸ ಮಾಡಿದ ಇವರು ಮೌಖಿಕ ಸಾಹಿತ್ಯದಲ್ಲಿ ಸುಮಾರು ಹನ್ನೊಂದು ಕೃತಿಗಳನ್ನು, ಮೌಖಿಕ ಸಾಹಿತ್ಯವನ್ನು ಶಿಷ್ಟದೊಂದಿಗೆ ತೌಲನಿಕ ಅಧ್ಯಯನ ಮಾಡುವುದರ ಮೂಲಕ ಕೃತಿಗಳನ್ನು ರಚಿಸಿದ್ದಾರೆ. ಹಾಗೆಯೇ ಶಿಶುಸಾಹಿತ್ಯ, ಆಧುನಿಕ ಸಾಹಿತ್ಯ ಮತ್ತು ಸಹಭಾಗಿತ್ವದಲ್ಲೂ ಕೆಲಸ ಮಾಡಿರುವುದು ತುಂಬಾ ಪ್ರಮುಖವಾಗಿದೆ. ಗ್ರಂಥಸಂಪಾದನೆಯಲ್ಲಿ ಕೆಲಸ ಮಾಡಿದ ಬಹುಶ್ರುತ ವಿದ್ವಾಂಸರಾಗಿದ್ದಾರೆ.

೩.೨.೪. ಟಿ.ಎನ್.ನಾಗರತ್ನ

ಟಿ.ಎನ್. ನಾಗರತ್ನ ಅವರು ಕನ್ನಡ ಗ್ರಂಥಸಂಪಾದನ ಕ್ಷೇತ್ರದಲ್ಲಿ ಅದರಲ್ಲೂ ವಿಶೇಷವಾಗಿ ಹರಿದಾಸ ಸಾಹಿತ್ಯ ಪ್ರಕಾರದಲ್ಲಿ ಶಾಸ್ತ್ರೀಯವಾಗಿ ಸಂಪಾದನೆ ಮಾಡಿದ ಕೆಲವೇ ವಿದ್ವಾಂಸರಲ್ಲಿ ಮುಂಚೂಣಿಯಲ್ಲಿರುವವರು. ಅವರು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ನಿರಂತರವಾಗಿ ಮೂವತ್ತೈದು ವರ್ಷಗಳ ಕಾಲ ಸೇವೆ ಸಲ್ಲಿಸಿ, ಹರಿದಾಸ ಸಾಹಿತ್ಯ

ವಿಭಾಗದ ಮುಖ್ಯಸ್ಥೆಯಾಗಿ ನಿವೃತ್ತರಾಗಿದ್ದಾರೆ. ಶಿವಮೊಗ್ಗದಲ್ಲಿ ವಿದ್ಯಾಭ್ಯಾಸ ಮಾಡಿ ಪದವಿ ಪರೀಕ್ಷೆಯಲ್ಲಿ ಮೊದಲಿಗರಾಗಿ ಚಿನ್ನದ ಪದಕ(ಐಚ್ಛಿಕ ಕನ್ನಡ) ಪಡೆದ ಇವರು, ಉನ್ನತ ವ್ಯಾಸಂಗಕ್ಕಾಗಿ ಮೈಸೂರಿಗೆ ಬಂದು ಎಂ.ಎ. ಪರೀಕ್ಷೆಯಲ್ಲಿ ೧೯೬೭ರಲ್ಲಿ ಪ್ರಥಮ ದರ್ಜೆಯಲ್ಲಿ ಪ್ರಥಮರಾಗಿ ಚಿನ್ನದ ಪದಕ ಪಡೆದ ಅದ್ವಿತೀಯರು, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಸಾಹಿತ್ಯದಲ್ಲಿ ಪಿಎಚ್.ಡಿ. ಪದವಿ ಪಡೆದ ಪ್ರಪ್ರಥಮ ಮಹಿಳೆ. ತಮ್ಮ ವಿದ್ವತ್ ಪ್ರತಿಭೆಯನ್ನು ಹರಿದಾಸ ಸಾಹಿತ್ಯ ಸಂಶೋಧನೆ, ವಿಶ್ಲೇಷಣೆ ಸಂಪಾದನೆ ಮತ್ತು ಪ್ರಕಟಣೆಗೆ ಮೀಸಲಿರಿಸಿರುವ ಅವರು ಸ್ನಾತಕೋತ್ತರ ಪದವಿ ತರಗತಿಗಳಿಗೆ ಗೌರವ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ಸರ್ಕಾರದ 'ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆಯಲ್ಲಿ ಕಾರ್ಯವಾಹಕ ಸಂಪಾದಕೀಯವಾಗಿ ಕಾರ್ಯನಿರ್ವಹಿಸಿದ್ದಾರೆ.

ಹರಿದಾಸ ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಕೊಳ್ಳಲು ಹೆಚ್ಚು ಆಸಕ್ತಿ, ತಾಳ್ಮೆ, ಪಾಂಡಿತ್ಯ, ಅಂತರ್‌ಶಿಸ್ತೀಯ ಪರಿಜ್ಞಾನ, ವುತ್ಪತ್ತಿ ಇರಬೇಕಾಗುತ್ತದೆ. ಏಕೆಂದರೆ ಶಿಷ್ಟ ಸಾಹಿತ್ಯ ಕೃತಿ ಸಂಪಾದನೆಗೂ ಮತ್ತು ದೇಸೀ ಸಾಹಿತ್ಯದ ಗುಣವುಳ್ಳ ದಾಸ ಸಾಹಿತ್ಯ ಕೃತಿ ಸಂಪಾದನೆಗೂ ತುಂಬಾ ಅಂತರಗಳಿವೆ. ಏಕೆಂದರೆ ದಾಸಸಾಹಿತ್ಯ ಹೆಚ್ಚು ಮೌಖಿಕವಾದದ್ದು. ಕೀರ್ತನೆ ಹಾಗೂ ಹಾಡುಗಳನ್ನು ಸಂಗ್ರಹಿಸುವಾಗ ಅನೇಕ ಕಾರಣಗಳಿಂದ ಅಂಕಿತನಾಮಗಳ ವ್ಯತ್ಯಾಸ ಕಂಡುಬರುತ್ತದೆ. ಅಂತಹ ಕೀರ್ತನೆ ಅಥವಾ ಹಾಡುಗಳನ್ನು ಏಕೈಕ ಆಕರಗಳ ಮೂಲಕ ಪರಿಷ್ಕರಿಸಿದಾಗ ಉತ್ತಮ ಪರಿಷ್ಕರಣ ಆಗುವುದಿಲ್ಲ. ಅದಕ್ಕೆ ಸಂಬಂಧಿಸಿದಂತೆ ಅನೇಕ ಹಸ್ತಪ್ರತಿಗಳು ಹಾಗೂ ಅವುಗಳಿಗೆ ಪೂರಕ ಮಾಹಿತಿಯೊಂದಿಗೆ ಪರಿಷ್ಕರಿಸಿದಾಗ ಮಾತ್ರ ಹೆಚ್ಚು ಅರ್ಥಪೂರ್ಣವೆನಿಸುತ್ತದೆ. ಇಂತಹ ವಿದ್ವತ್ ಪ್ರತಿಭೆಯಿಂದ ತಮ್ಮನ್ನು ಹರಿದಾಸ ಸಾಹಿತ್ಯದಲ್ಲಿ ತೊಡಗಿಸಿಕೊಂಡಿರುವ ಅವರು ಬರೆದ ಅನೇಕ ಪುಸ್ತಕಗಳೂ, ನೂರಾರು ಲೇಖನಗಳೂ ಪ್ರಕಟವಾಗಿವೆ. ದಾಸಸಾಹಿತ್ಯ ಹಾಗೂ ಮತ್ತಿತರ ವಿಷಯಗಳನ್ನು ಕುರಿತಂತೆ ನಾಡಿನ ನಾನಾ ಕಡೆಗಳಲ್ಲಿ ಉಪನ್ಯಾಸಗಳನ್ನು ನೀಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ 'ಹರಿದಾಸರ ಭಕ್ತಿ ಸ್ವರೂಪ' 'ಶ್ರೀಗೋಪಾಲದಾಸರ ಕೃತಿಗಳು' 'ಶ್ರೀ ವಾದಿರಾಜರ ಕೃತಿಗಳು'. 'ಶ್ರೀ ಜಗನ್ನಾಥ ದಾಸರ ಕೃತಿಗಳು', 'ಶ್ರೀ ವ್ಯಾಸರಾಯರ ಕೃತಿಗಳು', 'ಹರಪನಹಳ್ಳಿ ಭೀಮವ್ವನ ಹಾಡುಗಳು' ಶ್ರೀರಾಮದಾಸರ ಕೃತಿಗಳು' 'ಶ್ರೀ ಕನಕದಾಸರ ಕೀರ್ತನೆಗಳು' ಇವು ಇವರ ಕೃತಿಗಳಲ್ಲಿ ಮುಖ್ಯವಾದವು.

ಹಾಗೆಯೇ ಇತರರೊಡಗೂಡಿ ನಿತ್ಯಾತ್ಮ ಶುಕಯೋಗಿಯ ಕನ್ನಡ ಭಾಗವತವನ್ನು ಶಾಸ್ತ್ರೀಯವಾಗಿ ಸಂಪಾದಿಸಿಕೊಟ್ಟಿದ್ದಾರೆ. ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಪರಿಶ್ರಮ ಅವರು ರಚಿಸಿರುವ ಕೀರ್ತನೆಗಳ ಸಂಗ್ರಹ 'ಸಿರಿಗಂಗಾಜನಕ ಕೀರ್ತನ ಕುಸುಮಾಂಜಲಿ' ಮೈಸೂರಿನ ಸಾಂಸ್ಕೃತಿಕ ಸಂಸ್ಥೆ 'ಗಾನಭಾರತೀಯ' ಉಪಾಧ್ಯಕ್ಷರಾಗಿ ಮತ್ತು 'ತಿಲ್ಲಾನ' ಮಾಸಪತ್ರಿಕೆಯ ಸಂಪಾದಕರಾಗಿ ಕಲಾಸಕ್ತರಿಗೆಲ್ಲ ಪರಿಚಿತರು. ಪ್ರಸಿದ್ಧ ಮೈಸೂರು ದಸರಾ ಮಹೋತ್ಸವದ ೨೦೦೯ರಲ್ಲಿ ಕವಿಗೋಷ್ಠಿ ಸಮಿತಿಯ ಉಪಾಧ್ಯಕ್ಷರಾಗಿ ನೇಮಕಗೊಂಡಿದ್ದರು. ವಿಚಾರಸಂಕಿರಣಗಳು, ದಾಸಸಾಹಿತ್ಯ ಗೋಷ್ಠಿಗಳು, ಆಕಾಶವಾಣಿ

ಮತ್ತು ದೂರದರ್ಶನ ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ಕನ್ನಡ ವಿಶ್ವವಿದ್ಯಾಲಯದ ರಾಷ್ಟ್ರೀಯ ಸಮ್ಮೇಳನದ 'ಗೌರವ ಸನ್ಮಾನ' ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಸನ್ನಿಧಿಯಿಂದ 'ಹರಿದಾಸ ಸಾಹಿತ್ಯ ವಿದ್ವನ್ಮಣಿ' ಬಿರುದು– ಇವರಿಗೆ ಸಂದ ಪ್ರಶಸ್ತಿಗಳಲ್ಲಿ ಪ್ರಮುಖವು. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು (ಶ್ರೀ ಸುತ್ತೂರು ಮಠ) ಆದಿ ಜಗದ್ಗುರುಗಳ ಜಯಂತಿ ಮಹೋತ್ಸವ ಸಂದರ್ಭದಲ್ಲಿ ವಿಶೇಷ ಅಭಿನಂದನಾ ಪತ್ರವನ್ನಿಟ್ಟು ಗೌರವಿಸಿದ್ದಾರೆ. ದಾಸಸಾಹಿತ್ಯ ಕ್ಷೇತ್ರದಲ್ಲಿ ಅವರು ಸಲ್ಲಿಸಿರುವ ಅನನ್ಯ ಸೇವೆಯನ್ನು ಪರಿಗಣಿಸಿದ ಕರ್ನಾಟಕ ಸರ್ಕಾರ ಪ್ರತಿಷ್ಠಿತ 'ಕನಕಶ್ರೀ' ಪ್ರಶಸ್ತಿ ೨೦೦೯ ನೀಡಿ ವಿಶೇಷ ಸಮಾರಂಭದಲ್ಲಿ ಸನ್ಮಾನಿಸಿದೆ. ಹಾಗೆಯೇ ವಿಜಯ ವಿಠಲ ಪ್ರಶಸ್ತಿ (೨೦೦೬, ಮಂತ್ರಾಲಯ ಮಠ), ಹೊಯ್ಸಳ ಪ್ರಶಸ್ತಿ (೨೦೧೧ ಹೊಯ್ಸಳ ಕನ್ನಡ ಸಂಘ, ಮೈಸೂರು), ಮಧ್ವ–ಪುರಂದರ ಪ್ರಶಸ್ತಿ (೨೦೧೬, ಶ್ರೀ ಗುರುರಾಜ ಸೇವಾ ಸಮಿತಿ, ಬೆಂಗಳೂರು) ಗಳಿಗೂ ಅವರು ಭಾಜನರಾಗಿದ್ದಾರೆ. ಹಾಗೂ ಬೆಂಗಳೂರಿನ ಸಾಹಿತ್ಯ ಸೇವಾ ಪ್ರತಿಷ್ಠಾನ(ರಿ) ಜೀವಮಾನ ಸಾಧನೆಗಾಗಿ ನಾಡಿನ ಹಿರಿಯ ಸಾಧಕರಿಗೆ ನೀಡುವ ಸರಸ್ವತಿ ಸಂಗಮ ಪ್ರಶಸ್ತಿ ಪುರಸ್ಕೃತರು. ಅವರು ಸಂಪಾದಿಸಿರುವ ಕೃತಿಗಳ ವಿಧಿ ವಿಧಾನಗಳನ್ನು ಈ ಕೆಳಕಂಡಂತೆ ಚರ್ಚಿಸಲಾಗಿದೆ.

೩.೨.೪.೧. ಶ್ರೀ ಗೋಪಾಲದಾಸರ ಕೃತಿಗಳು

ಈ ಕೃತಿಯನ್ನು ಟಿ.ಎನ್. ನಾಗರತ್ನ ಅವರು ಸಂಪಾದಿಸಿ ೧೯೭೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟಿಸಿದ್ದಾರೆ. ಇದರಲ್ಲಿಯೇ ಪಂಡಿತ ಆವೃತ್ತಿ ಮತ್ತು ಜನಪ್ರಿಯ ಆವೃತ್ತಿಗಳನ್ನು ಪ್ರಕಟ ಮಾಡಿದ್ದಾರೆ. ಈ ಕೃತಿಯಲ್ಲಿ ಒಟ್ಟು ೧೭೮ ಕೃತಿಗಳಿವೆ. ೮೭ ನುಡಿಗಳುಳ್ಳ ಗೋಪಾಲ ವಿಠಲರ ಚರಿತ್ರೆ ಪದ, ಗೋಪಾಲದಾಸರ ಅನೇಕ ಪದ–ಸುಳಾದಿಗಳೂ ಅವರ ಜೀವಿತದ ಬಗ್ಗೆ ಒಂದಿಷ್ಟು ವಿವರಗಳನ್ನು ನೀಡುತ್ತವೆ.

ಗೋಪಾಲದಾಸರ ಕೃತಿಗಳ ವೈಶಿಷ್ಟ್ಯವನ್ನು ಸಂಪಾದಕರು ಈ ರೀತಿ ಗುರುತಿಸುತ್ತಾರೆ. ಇತರ ಹರಿದಾಸರುಗಳಂತೆ ಕೀರ್ತನೆ, ಸುಳಾದಿ, ಉಗಾಭೋಗ ಈ ಪ್ರಕಾರಗಳ ಮೂಲಕ ಭಕ್ತಿ ಭಾವವನ್ನು ಹರಿಯ ಬಿಟ್ಟಿದ್ದಾರೆ. ಆ ಮೂಲಕ ಮಧ್ವಮತವನ್ನು ಪ್ರಸಾರ ಮಾಡಲಾಗಿದೆ. ಇತರ ಹರಿದಾಸರ ಕೃತಿಗಳಂತೆ ಗೋಪಾಲದಾಸರ ಕೃತಿಗಳನ್ನು ಪರಿಶೀಲಿಸಿ ಆತ್ಮಶೋಧನೆ, ಭಗವಂತನ ಆರಾಧನೆ, ದ್ವೈತ ಮತತತ್ವ ಪ್ರತಿಪಾದನೆ ಹಾಗೂ ಉಪದೇಶ ವಾಣಿಗಳು ಕಂಡು ಬರುತ್ತವೆ ಎಂದು ಹೇಳುತ್ತಾರೆ.

ಭಗವಂತನ ಆರಾಧನೆಯು ಇವರ ಕೀರ್ತನೆಗಳಲ್ಲಿ ಬಹಳ ಪ್ರಮುಖವಾದದ್ದು. ಶ್ರೀಹರಿಯನ್ನು ಆಕ್ಷೇಪಿಸುವ ಮೂಲಕ ಅವನ ದಶಾವತಾರಗಳನ್ನು ಚಿತ್ರಿಸಿರುವುದು ಹಾಗೂ ಅವುಗಳಲ್ಲಿ ಮೂಡಿರುವ ಅಕ್ಷೇಪ ಇಷ್ಟೆಲ್ಲಾ ಕಟುನುಡಿಗಳನ್ನಾಡಿದರೂ ಅವುಗಳ ಹಿಂದೆ ಭಗವಂತನನ್ನು ಕುರಿತು ಭಕ್ತಿ ಅವಿತರವಾಗಿರುವುದೇ ಈ ಭಾವದ ವೈಶಿಷ್ಟ್ಯವಾಗಿದೆ. ಇವರ ಕೀರ್ತನೆಗಳು ಹೆಚ್ಚಾಗಿ ದ್ವೈತಮತ ಸಿದ್ಧಾಂತವನ್ನು ಪ್ರತಿಪಾದಿಸುತ್ತವೆ. ಉಗಾಭೋಗಗಳ ಸಂಖ್ಯೆ ತುಂಬಾ ಕಡಿಮೆ, ಇವರ ಕೃತಿಗಳಲ್ಲೆವೂ ಸಂಗೀತದ ತಳಹದಿಯ ಮೇಲೆ ರಚಿತವಾಗಿರುವ ಪ್ರಕಾರಗಳಾಗಿರುವುದರಿಂದ ಅವುಗಳಲ್ಲಿ ಖಚಿತವಾದ

ಅಕ್ಷರ ವೃತ್ತದ ಲಯವನ್ನಾಗಲೀ ಮಂತ್ರ ವೃತ್ತದ ಲಯವನ್ನಾಗಲೀ ಗುರುತಿಸಿ ಹೇಳುವುದು ಉಚಿತವಾಗಲಾರದು. ಅಂಶ ಲಯವನ್ನು ಕೆಲಮಟ್ಟಿಗೆ ಗುರುತಿಸಬಹುದು ಎಂದು ಹೇಳಿದ್ದಾರೆ. ಹಾಗೆಯೇ ಪಂಡಿತ ಆವೃತ್ತಿಯಲ್ಲಿ ಎಲ್ಲಾ ಆಕರಗಳಲ್ಲಿ ದೊರೆಯುವ ಪಾಠಾಂತರಗಳನ್ನು ಉಲ್ಲೇಖಿಸಿದ್ದಾರೆ. ಜನಪ್ರಿಯ ಆವೃತ್ತಿಯಲ್ಲಿ ಯೋಗ್ಯ ಪಾಠವನ್ನಷ್ಟೇ ಮುದ್ರಿಸಲಾಗುತ್ತದೆ. ಆದ್ದರಿಂದ ಜನಸಾಮಾನ್ಯರಿಗೆ ಇಂಥ ಆವೃತ್ತಿಗಳು ಸುಲಭವಾಗಿ ಓದಿಕೊಂಡು ಹೋಗಲು ತುಂಬಾ ಅನುಕೂಲವಾಗುತ್ತವೆ. ಅನುಬಂಧದಲ್ಲಿ ಸಂಧಿಗ್ಧವಿರುವ ಅಂಕಿಗಳನ್ನು ಗುರುತಿಸಿದ್ದಾರೆ. ಏಕೈಕ ಆಕರಗಳು, ಲಘು ಟಿಪ್ಪಣಿ ಮತ್ತು ಕಠಿಣ ಶಬ್ಧಗಳ ಅರ್ಥ ಕೊಡಲಾಗಿದೆಯಲ್ಲದೆ, ಗೋಪಾಲದಾಸರ ಕೆಲವು ಕೃತಿಗಳಿಗೆ ಸ್ವರ ಪ್ರಸಾರ ಹಾಕಿ ಉದಾಹರಣೆಯೊಂದಿಗೆ ತೋರಿಸಿದ್ದಾರೆ. ಇಂಥ ಮಾಹಿತಿಗಳು ಸಂಶೋಧಕರಿಗೆ ಹಾಗೂ ಆಸಕ್ತರಿಗೆ ತುಂಬಾ ಅನುಕೂಲವಾಗುತ್ತವೆ.

೩.೨.೪.೨. ಹರಪನಹಳ್ಳಿ ಭೀಮವ್ವನ ಹಾಡುಗಳು

ಈ ಕೃತಿಯನ್ನು ಟಿ.ಎನ್. ನಾಗರತ್ನ ಅವರು ಸಂಪಾದಿಸಿ ೧೯೮೪ರಲ್ಲಿ ಮೈಸೂರು ವಿಶ್ವವಿದ್ಯನಿಲಯದಿಂದ ಪ್ರಕಟಿಸಿದ್ದಾರೆ. ಈ ಕೃತಿಯನ್ನು ಹರಪನಹಳ್ಳಿ ಭೀಮವ್ವನ ಮರಿಮಕ್ಕಳಾದ ಕೆ. ವಿಜಯ ರಾಯರಿಂದ ದೊಡ್ಡ ಸೈಜಿನ ಹಾಡುಗಳ ಸಂಗ್ರಹ ದೊರೆತಿದ್ದು ಅದನ್ನು ಮೂಲ ಪ್ರತಿಯಾಗಿ ಇಟ್ಟುಕೊಂಡು ಏಕೈಕ ಪ್ರತಿಯಿಂದ ಪರಿಷ್ಕರಿಸಿದ್ದಾರೆ. ಹರಪ್ಪನಹಳ್ಳಿ ಭೀಮವ್ವ ಚಿಕ್ಕ ವಯಸ್ಸಿನಿಂದಲೂ ಹರಿದಾಸರ ಪದಗಳನ್ನು ಕೇಳುತ್ತಾ ಬೆಳದವಳು ಎಂಬುವುದನ್ನು ಸಂಪಾದಕರು ಗುರುತಿಸಿದ್ದಾರೆ. ಅವಳ ತಾತ ಶ್ರೀ ಜೋಯಿಸ ವೆಂಕಪ್ಪಾಚಾರ್ಯರು ಹರಿದಾಸರಾಗಿದ್ದು ಸದಾ ಹರಿನಾಮಸ್ಮರಣೆಯಲ್ಲಿ ನಿರತರಾಗಿರುತ್ತಿದ್ದುದರಿಂದ ಚಿಕ್ಕಂದಿನಿಂದಲೇ ಆಕೆಗೆ ಹರಿಮಯವಾದ ವಾತಾವರಣ ಲಭ್ಯವಾಗಿತ್ತು.

ಹರಿದಾಸ ಪರಂಪರೆಯ ಹಿನ್ನೆಲೆಯ ಭೀಮವ್ವನ ಹಾಡುಗಳನ್ನು ನೋಡಿದಾಗ ಹರಿದಾಸ ಸಾಹಿತ್ಯ ಸಂಪ್ರದಾಯದಂತೆ ಕೀರ್ತನೆ, ಸುಳಾದಿ, ಉಗಭೋಗ ಈ ಮೂರು ಪ್ರಕಾರಗಳಲ್ಲಿಯೂ ರಚನೆ ಆಗಿರುವುದನ್ನು ಗಮನಿಸಿದ್ದಾರೆ. ಭೀಮವ್ವನ ಹಾಡುಗಳಲ್ಲಿ ವರ್ಣನಾ ಕುಶಲತೆಯನ್ನು ಪ್ರಸ್ತಾವನೆಯಲ್ಲಿ ಈ ರೀತಿ ಗುರುತಿಸಿದ್ದಾರೆ. "ವರ್ಣನಾ ಕೌಶಲ ಭೀಮವ್ವನ ಸಹಜ ಪ್ರವೃತ್ತಿ ಆಕೆಯ ಹಾಡುಗಳಲ್ಲಿ ಕಣ್ಣಿಗೆ ಕಟ್ಟಿದಂತೆ ಬರುವ ಭಕ್ಷ್ಯ ಭೋಜ್ಯಗಳ ವರ್ಣನೆ ಹಾಗೂ ಹೆಂಗಳೆಯರ ಅಲಂಕಾರ ಆಭರಣಾದಿಗಳ ವರ್ಣನೆ, ಸೀರೆಗಳ ವರ್ಣನೆ, ಆಕೆಯ ವರ್ಣನಾಕುಶಲತೆಗೆ ಕಲಶಪ್ರಾಯವಾಗಿವೆ. ಹಾಗೆಯೇ ಭೀಮವ್ವನ ಹಾಡುಗಳಲ್ಲಿ 'ಸಂಭಾಷಣ ಚತುರತೆ'ಯ ತಂತ್ರ ಅನನ್ಯವಾದುದು. ಆಕೆಗೆ ತುಂಬಾ ಪ್ರಿಯವಾದುದು. ಈಶ್ವರ ಪಾರ್ವತಿಯರ ಸಂವಾದ ಧುರ್ಯೋಧನ ದ್ರೌಪದಿಯರ ಮಾತಿನ ಚಕಮಕಿ, ಸತ್ಯಭಾಮೆ ಪಾರ್ವತಿಯರ ಸಂವಾದ, ರುಕ್ಮಿಣಿ ಸತ್ಯಭಾಮೆ ಸಂವಾದ, ಕೃಷ್ಣ ಸುಭದ್ರೆಯರ ಸಂವಾದ, ದ್ರೌಪದಿ ಪಾಂಡವರ ಸಂವಾದ ಸತ್ಯಭಾಮೆ ಕೃಷ್ಣರ ಸಂವಾದ"[೬೭] ಇತ್ಯಾದಿ ಅನೇಕ ಅಂಶಗಳನ್ನು ಕುರಿತು ಚರ್ಚಿಸಿದ್ದಾರೆ.

ಭೀಮವ್ವನ ಅನೇಕ ಹಾಡುಗಳಲ್ಲಿ ಮಧ್ವಮತ ತತ್ವಗಳ ನಿರೂಪಣೆಯಿದೆ. ಸ್ತುತಿ ಮಣಿಮಾಲಿಕೆಯಂತೂ ಮಧ್ವಮತ ಭಟ್ಟಯಿಳಿಸಿದಂತಿದೆ. ಕ್ರಮವಾಗಿ ಗಣಪತಿ, ವಾಣಿ, ಬ್ರಹ್ಮ, ಪಾರ್ವತಿಯರನ್ನು ಪ್ರಾರ್ಥಿಸಿದ ಅವ್ವ ಋಷಿಮುನಿಗಳಿಗೆ ಪ್ರಾರ್ಥನೆ ಸಲ್ಲಿಸಿದ್ದಾಳೆ. ಇತರ ಹರಿದಾಸರಂತೆಯೇ ಭೀಮವ್ವನೂ ಪಂಚವಿದ ಭಾವಗಳಿಂದ ಹರಿಯನ್ನು ಭಜಿಸಿರುವಳು. ದಾಸಸಾಹಿತ್ಯದಲ್ಲೇ ಹಾಸು ಹೊಕ್ಕಾಗಿರುವ ದಾಸ್ಯಭಾವ ಅವ್ವನ ಹಾಡುಗಳಲ್ಲೂ ಮೈವೆತ್ತಿರುವುದನ್ನು ಸಂಪಾದಕರು ಗುರುತಿಸಿದ್ದಾರೆ. ಮನಸ್ಸಿಗೆ ಬಂದ ನೈತಿಕ ಬಲ ದೃಢತೆಗಳನ್ನು ಪಡೆಯಲು ಸಹಾಯಕವಾಗುವ ವ್ರತ–ಕತೆಗಳಿಗೆ ಅವಳ ಹಾಡುಗಳಲ್ಲಿ ಸಿಂಹಪಾಲು ಇದೆ. ಶುಕ್ರವಾರದ ಹಾಡು, ಶನಿವಾರದ ಹಾಡು, ಮಂಗಳಗೌರಿ ಹಾಡು, ಬುಧ ಬೃಹಸ್ಪತಿ ಹಾಡು, ಲಕ್ಷ್ಮೀದೇವಿ ಹಾಡು, ಕೃಷ್ಣದಾನ ವ್ರತದ ಹಾಡು ಮೊದಲಾದುವನ್ನು ಉದಾಹರಿಸಿದ್ದಾರೆ. ಭೀಮವ್ವನ ಹಾಡುಗಳಲ್ಲೂ ದಶಾವತಾರದ ಪ್ರಸ್ತಾಪ ವೈವಿಧ್ಯಮಯವಾಗಿ ಮೂಡಿಬಂದಿರುವುದನ್ನು ನೋಡಬಹುದು.

ಹತ್ತೊಂಭತ್ತನೇ ಶತಮಾನದಲ್ಲಿ ಸಾಹಿತ್ಯ ಚರಿತ್ರೆಯಲ್ಲಿ ಭೀಮವ್ವನ ಸಾಧನೆ ಮಹತ್ವ ಪೂರ್ಣವಾದ್ದದು. ಏಕೆಂದರೆ ಮಹಿಳೆಯರು ಮನೆಯಿಂದ ಹೊರಗೆ ಬರುವುದು ಅಪಾವಾದ ಎಂಬಂಥ ಸಾಮಾಜಿಕ ಸಂದರ್ಭದಲ್ಲಿ ಭೀಮವ್ವ ಅನೇಕ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ ಅದರಲ್ಲಿ ಮಿಂದ ಪುಣ್ಯ ತೀರ್ಥಗಳನ್ನೂ ತನ್ನ ಹಾಡುಗಳಲ್ಲಿ ಪ್ರಸ್ತಾಪಿಸಿದ್ದಾಳೆ. ಅದೇ ರೀತಿ ೧೪೭ ಸಣ್ಣ ಹಾಡುಗಳನ್ನು ಹಾಗೂ ದೊಡ್ಡ ಹಾಡುಗಳನ್ನು ರಚಿಸಿದ್ದಾಳೆ. ದೊಡ್ಡ ಹಾಡುಗಳೆಂದರೆ 'ನಳ ಚರಿತ್ರೆ' ಇದನ್ನು ಮಹಾಭಾರತದ ಅರಣ್ಯ ಪರ್ವದಲ್ಲಿ ಬರುವ ನಳೋಪಾಖ್ಯಾನದ ಕತೆಯನ್ನು ಭೀಮವ್ವ ೧೦೫ ಧ್ವನಿಗಳನ್ನುಳ್ಳ ನಳಚರಿತ್ರೆಯೆಂಬ ಸುಧೀರ್ಘ ಹಾಡಾಗಿ ಪರಿವರ್ತಿಸಿದ್ದಾಳೆ. ಚೌಂಡರಸನು ಚಂಪೂವಿನಲ್ಲಿ ಕನಕದಾಸರು ಷಟ್ಪದಿಯಲ್ಲಿ ಹೇಳಿರುವ ನಳನ ಕತೆ ಭೀಮವ್ವನಲ್ಲಿ ಧ್ವನಿ ವಚನಗಳಿಂದ ಕೂಡಿರುವುದನ್ನು ಸಂಪಾದಕರು ವಿಶೇಷವಾಗಿ ಗುರುತಿಸಿದ್ದಾರೆ.

'ಮುಯ್ಯದ ಹಾಡು'– ಇದು ಉತ್ತರ ಕರ್ನಾಟಕದಲ್ಲಿ ಹೆಚ್ಚು ರೂಢಿಯಿದೆ. ಕೃಷ್ಣನ ಮಡದಿಯರು ಕುಂತಿಯ ಸೊಸೆಯರಿಗೆ ಮುಯ್ಯ ತೆಗೆದುಕೊಂಡು ಹೋಗಿ ಮುಯ್ಯಕೊಟ್ಟು ಬರುವುದೇ ಈ ಹಾಡಿನ ವಸ್ತು ೮೭ ಧ್ವನಿಗಳುಳ್ಳ ಈ ಹಾಡು ವರ್ಣನಾ ಪ್ರಧಾನವಾದುದು. ಕೇವಲ ಮುಯ್ಯ ಕೊಟ್ಟು ಹೋಗುವ ಒಂದು ಪ್ರಸಂಗವನ್ನು ಹಿಂಜಿ ಹಿಂಜಿ ವರ್ಣಿಸಿದ್ದಾಳೆ. ಭೀಮವ್ವ ಹಾಡಿನುದ್ದಕ್ಕೂ ಉತ್ಸಾಹ, ಸಡಗರ ಸಂಭ್ರಮಗಳ ಚೆಲುವು ಜಾಣ್ಮೆಗಳೊಡನೆ ಮಿಳಿತವಾಗಿವೆ. ಚಲನಚಿತ್ರದ ಪರಿಣಾಮವನ್ನುಂಟು ಮಾಡುವ ಶಕ್ತಿ ಈ ಹಾಡಿಗಿದೆ. ಭಾರತ ಭಾಗವತಗಳ ಅನೇಕ ಪ್ರಸಂಗಗಳ ಪ್ರಸ್ತಾಪಕ್ಕೆ ಈ ಹಾಡಿನಲ್ಲಿ ಬರುವ ಪರಸ್ಪರ ವಾದಗಳನ್ನು ಬಳಸಿಕೊಂಡಿರುವ ಅವ್ವನ ತಂತ್ರವನ್ನು ಸಂಪಾದಕರು ಸೂಕ್ಷ್ಮವಾಗಿ ಗುರುತಿಸಿದ್ದಾರೆ.

'ಪತಿದಾನ ಕೊಟ್ಟ ಹಾಡು' ಇದು ಹರಿವಂಶ ಪುರಾಣದಲ್ಲಿ ಸಂಕ್ಷಿಪ್ತವಾಗಿ ಬರುವ ಕೃಷ್ಣ ದಾನವ್ರತದ ಕತೆಯನ್ನು ಭೀಮವ್ವ ೭೨ ನುಡಿಗಳ ಧ್ವನಿ ವಚನಗಳಿಂದ ಕೂಡಿದ ಸುದೀರ್ಘ ಹಾಡನ್ನಾಗಿ ಹಾಡಿದ್ದಾಳೆ. 'ಶಕುಂತಲೆ– ದುಷ್ಯಂತ ಮಹಾರಾಜನ ಹಾಡು' ಇದು ಮಹಾಭಾರತದ

ಶಕುಂತಲೋಪಾಖ್ಯಾನದ ಕತೆಯನ್ನು ಆಧರಿಸಿ ರಚಿಸಲಾಗಿದೆ. 'ರತಿಕಲ್ಯಾಣ-ರತಿ-ಮನ್ಮಥರ ವಿವಾಹವೇ' ಈ ಹಾಡಿನ ವಸ್ತು. ಇವರ ವಿವಾಹದ ವೈಭವವನ್ನು ಭೀಮವ್ವ ೬೧ ಧ್ವನಿಗಳಲ್ಲಿ ವಿಸ್ತಾರವಾಗಿ ಹಾಡಿರುವುದನ್ನು ವಿವರಿಸಿದ್ದಾರೆ. ಈ ಹಾಡು ಸುಭದ್ರಾ ಕಲ್ಯಾಣದ್ದಾಗಿದ್ದು ಈ ಹಾಡಿನ ಮೂಲಕತೆ ಭಾಗವತ (ದಶಮಸ್ಕಂದ)ವನ್ನು ಆಧರಿಸಿ ರಚಿತವಾಗಿದೆ ಎಂದು ಗುರುತಿಸಿದ್ದಾರೆ.

ಹರಪನಹಳ್ಳಿ ಭೀಮವ್ವನ ಹಾಡುಗಳಲ್ಲಿ ಭಾಷಾ ಶೈಲಿಯನ್ನು ಕುರಿತು 'ಭೀಮವ್ವನ ಹಾಡುಗಳನ್ನು ಓದುತ್ತಾ ಹೋದರೆ ಆಕೆ ಹೆಚ್ಚು ಶ್ರಮ ಪಡದೆ ಸುಲಿತವಾಗಿ ನಿರರ್ಗಳವಾಗಿ ಹಾಡುತ್ತಾ ಹೋಗುತ್ತಾಳೆ. ಎಂದು ಗುರುತಿಸುತ್ತಾರೆ. ಅವ್ವನ ಹಾಡುಗಳಲ್ಲಿ ಉಪಮಾಲಂಕಾರ ರೂಪಕಾಲಂಕಾರಗಳೂ ಅಲ್ಲಲ್ಲಿ ಸುಳಿದಿವೆ. ಹಾಡುಗಳಲ್ಲಿ ಅವ್ವನ ಲೋಕಾನುಭವ ಗಾದೆಯ ಮಾತುಗಳಾಗಿ ಮೂಡಿಬಂದಿವೆ.' ಕೆಟ್ಟ ನೆಂಟರ ಮನೆ ಸೇರಿಕೊಂಬುದಕ್ಕಿಂತ ಅಟ್ಟಡವಿಯಲ್ಲಿ ವಾಸಲೇಸು? ಇತ್ಯಾದಿ ಅವ್ವನ ಹಾಡುಗಳಲ್ಲಿ ಉದ್ದಕ್ಕೂ ಮತ್ತೆ ಮತ್ತೆ ಬರುವ ಕೆಲವು ವಿಶೇಷ ಭಾಷಾ ಪ್ರಯೋಗಗಳನ್ನು ಗುರುತಿಸಿದ್ದಾರೆ. ಉದಾಹರಣೆಗೆ 'ಬ್ರಾಂಬರು-ಬ್ರಾಹ್ಮಣರು' 'ಆಂಕಾರ-ಅಹಾಂಕಾರ' ಇತ್ಯಾದಿ ಶಬ್ಧಗಳಿಗೆ ಸರಿಯಾದ ಅರ್ಥ ಕೊಟ್ಟಿದ್ದಾರೆ. ಆಕೆಯ ಶಬ್ದ ಸಂಪತ್ತು ಅಪಾರವಾದದ್ದು. 'ಭೂಮಿಗೆ-ಅವನಿ, ಪೊಡವಿ, ಪೃಥ್ವಿ ಕ್ಷೋಣಿ' ಎಂದು ಬಳಸಿರುವುದು ರೂಢಿ ಇದೆ. ಹಾಗೆಯೇ ಮನ್ಮಥನಿಗೆ ಪರ್ಯಾಯವಾಗಿ ಅನಂಗ, ಅಂಗಜ, ಇಕ್ಷುಚಾಪ, ಮನಸಿಜ ಇತ್ಯಾದಿ ಅನ್ಯಭಾಷಾ ಶಬ್ಧಗಳ ಬಳಕೆಯನ್ನು ಗುರುತಿಸಿದ್ದಾರೆ. ಶಿಫಾರಸ್ತು(ಶಿಫಾರಸ್) ದೌಲತ್ತು-ಜುಲ್ಮಾನೆ, ಇತ್ಯಾದಿ "ಕರ್ನಾಟಕದ ಭಾಷೆಯಲ್ಲಿ ಇಷ್ಟು ಗ್ರಂಥಗಳನ್ನು ಬರೆದ ಹೆಣ್ಣು ಮಕ್ಕಳು ಇನ್ನಾರು ದೊರೆಯಲಾರರು" ಎಂದು ಕಲಮದಾನಿ ಗುರುರಾಯರ ಮೆಚ್ಚಿಗೆಯನ್ನು ಸೂಚಿಸಿದ್ದಾರೆ."[೮]

ಈ ಕೃತಿಯನ್ನು ಪರಿಷ್ಕರಿಸುವಾಗ ಹಲವಾರು ಮಹತ್ವಪೂರ್ಣವಾದ ಮಾಹಿತಿಯೊಂದಿಗೆ ಚರ್ಚಿಸಿ ಸಂಪಾದಿಸಿರುವುದು ವಿಶೇಷವಾಗಿದೆ. ಅನುಬಂಧದಲ್ಲಿ ಸಂಪಾದಕರು ಬಳಸಿಕೊಂಡ ಆಕರಗಳ ಮಾಹಿತಿಯನ್ನು ನೀಡಲಾಗಿದೆ. ಪೂರ್ವಕಥೆಗಳು, ಟಿಪ್ಪಣಿಗಳು ಕಠಿಣ ಶಬ್ಧಗಳ ಅರ್ಥ, ಶಬ್ಧಸೂಚಿ, ಅಂಕಿತನಾಮಗಳ ಸೂಚಿ ಹಾಗೂ ಸಹಾಯಕ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸುಮಾರು ೨೭ ಕೃತಿಗಳನ್ನು ಮೂರು ಲೇಖನಗಳೊಂದಿಗೆ ತೌಲನಿಕ ವಿಮರ್ಶೆ ಮಾಡಿದ್ದಾರೆ. ಈ ಕೃತಿಯನ್ನು ಸಾಮಾನ್ಯರು ಓದಿ ಅರ್ಥೈಯಿಸುವಂತೆ ಪರಿಷ್ಕರಿಸಿ ಪ್ರಕಟಣೆ ಮಾಡಿದ್ದಾರೆ.

೩.೨.೪.೩. ಶ್ರೀ ಜಗನ್ನಾಥದಾಸರ ಕೃತಿಗಳು

ಈ ಕೃತಿಯನ್ನು ಸಂಪಾದಿಸಿ ೧೯೮೭ರಲ್ಲಿ ಟಿ.ಎನ್. ನಾಗರತ್ನ ಅವರು ಮೈಸೂರು ವಿಶ್ವವಿದ್ಯಾನಿಲಯದಿಂದ ಪಂಡಿತ ಆವೃತ್ತಿ ಮತ್ತು ಜನಪ್ರಿಯ ಆವೃತ್ತಿಗಳ ರೂಪದಲ್ಲಿ ಹೊರತಂದಿದ್ದಾರೆ. ಜಗನ್ನಾಥದಾಸರು 'ಸಾವಿರಾರು ಕೀರ್ತನೆಗಳನ್ನೂ ಸಾವಿರದಿನ್ನೂರು ತತ್ವ-ಸುವ್ವಾಲಿಗಳನ್ನು' ರಚಿಸಿದರೆಂದು ಪ್ರತೀತಿ ಇದ್ದರೂ ದೊರೆತಿರುವುದು ಅತ್ಯಲ್ಪ ಎನ್ನಲಾಗಿದೆ. ಹಾಗೆಯೇ ಭಕ್ತನ ಈ ಧನ್ಯತಾ ಭಾವಕ್ಕೆ ಮುನ್ನ ಅವನು ಭಗವಂತನನ್ನು ಕಾಣಲು ಹಲುಬಿ ಹಂಬಲಿಸಿದ ವಿವರ ಅವನೊಡನೆ ವಿವಿಧ

ಮಾನವೀಯ ಸಂಬಂಧಗಳನ್ನು ಕಲ್ಪಿಸಿಕೊಂಡು ಸುಖಿಸಿದ ವಿಚಾರ ಮಾನವೀಯ ಸಂಬಂಧಗಳನ್ನೂ ಮೀರಿನಿಂತ ಕೇವಲ ಭಕ್ತಿಭಾವದ ಸಾಧನೆ ಈ ಎಲ್ಲಾ ಹಂತಗಳಲ್ಲಿಯೂ ಕಂಡುಬರುವುದು ಅವರ ಕೀರ್ತನೆಯಲ್ಲಿ ವಿಶಿಷ್ಟವಾಗಿದೆ ಎಂದಿದ್ದಾರೆ.

ಜಗನ್ನಾಥದಾಸರ ಕೃತಿಗಳ ಪ್ರಧಾನ ಗುಣವೇ ತತ್ವಗಳ ಪ್ರತಿಪಾದನೆ ಮಧ್ವಾಚಾರ್ಯರ ಸರ್ವ ಮೂಲವನ್ನು ಕ್ರಮವಾಗಿ ಅಧ್ಯಯನ ಮಾಡಿ ಅವುಗಳ ಮಥಿತಾರ್ಥವನ್ನು ಮನನ ಮಾಡಿಕೊಂಡಿದ್ದ ಅದರ ಮಧ್ವಮತನಿಷ್ಟೆ ಅಮೋಘವಾದುದು. ಅದಕ್ಕೆ ತಕ್ಕಂತೆ ಹರಿಸರ್ವವ್ಯಾಪ್ತಿ, ಸರ್ವಶಕ್ತ, ದುಷ್ಟ ಶಿಕ್ಷಕ, ಶಿಷ್ಟರಕ್ಷಕ, ತಾರತಮ್ಯ ತತ್ವ ಹತ್ತಾರು ಕೀರ್ತನೆಗಳಲ್ಲಿ ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ. ಇಂತಹ ಗಹನವಾದ ತತ್ವಗಳನ್ನು ಸರಳವಾಗಿ ನಿರೂಪಿಸಿರುವುದು ಜಗನ್ನಾಥದಾಸರ ವೈಶಿಷ್ಟ್ಯವಾಗಿದೆ. ಇವರ ಕೃತಿಗಳಲ್ಲಿ ಕಾವ್ಯ ಶೈಲಿಯನ್ನು ಒಟ್ಟಾರೆಯಾಗಿ ಪರಿಶೀಲಿಸಿದಾಗ ತತ್ವಗರ್ಭಿತವಾದ ಕೃತಿಗಳೇ ಹೆಚ್ಚಾಗಿರುವುದರಿಂದ ಅದಕ್ಕೆ ತಕ್ಕ ಗಂಭೀರ ಶೈಲಿ ರೂಪುಗೊಂಡಿದೆ.

ಉದಾಹರಣೆಗೆ:– ಕುಸ್ಥನಮೋ ಆಪಸ್ಥನಮೋತೆ
ಜಸ್ಥ ನಮೋ ವಾಯುಸ್ಥ ನಮೋ
ಖಸ್ಥ ನಮೋ ಆಶಸ್ಥ ನಮೋಮ
ಧ್ಯಸ್ಥ ನಮೋ ನಮೋ ಸ್ವಸ್ಥ ನಮೋ
ಮತ್ಸ್ಥ ನಮೋ ಕಮಲಸ್ಥ ನಮೋ'

ಇಲ್ಲಿ ದಾಸರ ಪ್ರಾಸಗಳ ಗತ್ತು, ಪದ ಸಂಪತ್ತು ಓದುಗರನ್ನು ಅರ್ಥದ ತಿರುಗಣಿಯಲ್ಲಿ ಮುಳುಗಿಸುತ್ತವೆ. ಅದೇ ರೀತಿ ಇವರ ಕೃತಿಗಳಲ್ಲಿ ಲೋಕನೀತಿ ಪರವಾದ ಕೃತಿಗಳು ಹೆಚ್ಚಾಗಿಲ್ಲವಾದರೂ ಅವರ ಅನುಭವದ ನುಡಿಗಳು ಅಲ್ಲಲ್ಲಿ ಮಿಂಚಿವೆ. ಉದಾಹರಣೆಗೆ:– 'ಇರಬೇಕು ನಿಂದಕರು ಸಜ್ಜನರಿಗೆ' ಹಂದಿ ಇದ್ದರೆ ಕೇರಿ ಹೇಗೆ ಶುದ್ಧವಾಗುವುದೋ ಹೀಗೆ ಸಜ್ಜನರ ಪಾಪವೆಂಬ ಮಲವನ್ನು ತಿಂದು ಅವರನ್ನು ಶುದ್ಧಿಗೊಳಿಸುವ ನಿಂದಕರ ಅವಶ್ಯಕತೆಯನ್ನು ಎತ್ತಿ ಹಿಡಿದಿದ್ದಾರೆ. ಜಗನ್ನಾಥ ದಾಸರು ಚಿತ್ರ ಕಲೆಯಲ್ಲೂ ಕುಶಲರಾಗಿದ್ದರೆಂದು ತಿಳಿದುಬರುತ್ತದೆ. ಇವರನ್ನು 'ರಂಗೋಲಿ ದಾಸರೆಂದೂ' ಕರೆಯುವುದು ವಾಡಿಕೆ ಇದೆ. ಸಂಸ್ಕೃತ ಭಾಷೆಯಲ್ಲಿ ಘನವಿದ್ವಾಂಸರಾಗಿದ್ದರಲ್ಲದೆ, ಕನ್ನಡದಲ್ಲಿ ಮಧ್ವತತ್ವಗಳನ್ನು ಸಾರಿದ ಮಹಿಮರು. ಸಂಸ್ಕೃತದಲ್ಲಿ ಓದಿದ್ದ ಘಟನೆಗಳು ಕ್ಲಿಷ್ಟವಾದ ಶಾಸ್ತ್ರ ವಿಷಯಗಳ ಸರಳ ಸುಂದರವಾಗಿ ಕನ್ನಡದಲ್ಲಿ ಭಟ್ಟಿ ಇಳಿದವು. ಅನುಬಂಧದಲ್ಲಿ ಅಂಕಿತ ಸಂದಿಗ್ದಕ್ಕೆ ಸಂಬಂಧಿಸಿದಂತೆ ಕೀರ್ತನೆಗಳನ್ನು ಸಂಗ್ರಹಿಸಲಾಗಿದೆ. ಹಾಗೆಯೇ ಅನುಬಂಧ ೨ರಲ್ಲಿ ರಾಗಗಳ ವಿಧಗಳು ಮತ್ತು ತಾಳ ಸಂಯೋಜನೆಗೆ ಸಂಬಂಧಿಸಿದ ಕೀರ್ತನೆಗಳಿವೆ. ಹಾಗೆ ಪೂರ್ವಕಥೆಗಳು ಮತ್ತು ಲಘು ಟಿಪ್ಪಣಿಗಳಿಗೆ ಸಂಬಂಧಿಸಿದಂತೆ ಸಂಕ್ಷಿಪ್ತವಾಗಿ ಮಾಹಿತಿಯನ್ನು ನೀಡಲಾಗಿದೆ. ಕಠಿಣ ಶಬ್ಧಗಳ ಅರ್ಥ, ಸ್ವರ ಪ್ರಸ್ತಾರ ಅನುಪಲ್ಲವಿಗೆ ಅನುಗುಣವಾಗಿ ಹಾಕಿ ಶಾಸ್ತ್ರೀಯವಾಗಿ ಸಂಪಾದಿಸಿದ್ದಾರೆ.

೩.೨.೪.೪. ಶ್ರೀ ರಾಮದಾಸರ ಕೃತಿಗಳು

ಈ ಕೃತಿಯನ್ನು ಟಿ.ಎನ್. ನಾಗರತ್ನ ಅವರು ಸಂಪಾದಿಸಿ ೧೯೮೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟಣೆ ಮಾಡಿದ್ದಾರೆ. ಶ್ರೀರಾಮದಾಸರ ಕೃತಿಗಳನ್ನು ಏಕೈಕ ಹಸ್ತಪ್ರತಿಯಿಂದ ಪರಿಷ್ಕರಿಸಿದ್ದಾರೆ. ಇದುವರೆಗೆ ಒಟ್ಟು ೭೮೩ ಕೃತಿಗಳು ದೊರಕಿವೆ. ಅವುಗಳಲ್ಲಿ ೮ ಕೃತಿಗಳು ಮಿಶ್ರಭಾಷೆಯಲ್ಲಿವೆ. ದಖ್ಖೀ ಉರ್ದು ಇವುಗಳಲ್ಲಿ ಆಡು ಮಾತಿನ ಬಳಕೆ ಹೆಚ್ಚು ೪೬೦ ನುಡಿಗಳಲ್ಲಿರುವ 'ಶ್ರೀರಾಮಭಜನೆ'ಯೇ ಎಲ್ಲಕ್ಕಿಂತ ದೊಡ್ಡದು. ದಾಸರ ಪಂಚ ಶತಷ್ಪಕಗಳನ್ನೂ ಉಗಾಭೋಗಗಳನ್ನೂ ಶ್ರೀ ಹನುಮನ ಗೌಡರು ಸಂಪಾದಿಸಿ ಪ್ರಕಟಿಸಿದ್ದಾರೆ.

ರಾಮದಾಸರ ಕೃತಿಗಳನ್ನು ಸಂಪಾದಕರು ಅಭ್ಯಾಸದ ಅನುಕೂಲಕ್ಕಾಗಿ ನಾಲ್ಕು ವಿಭಾಗಗಳನ್ನಾಗಿ ವಿಂಗಡಿಸಿಕೊಂಡಿದ್ದಾರೆ. ಆತ್ಮ ಶೋಧನೆಯ ಕೃತಿಗಳು, ತತ್ವಪ್ರತಿಪಾದಕ ಕೃತಿಗಳು, ಭಕ್ತಿ ಪರವಾದ ಕೃತಿಗಳು ಸಾಮಾಜಿಕ ಹಾಗೂ ಉಪದೇಶಾತ್ಮಕ ಕೃತಿಗಳು ಎಂದು ವಿಭಾಗಿಸಿದ್ದಾರೆ. ಹರಿದಾಸರ ಸಂಪ್ರದಾಯದಂತೆ ರಾಮದಾಸರೂ ಜನಸಮಾನ್ಯರಿಗೆ ತಮ್ಮ ಹೇಳಿಕೆಗಳನ್ನು ಸುಲಭವಾಗಿ ಮನದಟ್ಟು ಮಾಡಲು ಪುರಾಣ ಕಥೆಗಳನ್ನು ಮಾಧ್ಯಮವನ್ನಾಗಿ ಬಳಸಿಕೊಂಡಿದ್ದಾರೆ. ಇವರ ಕಾವ್ಯಶೈಲಿ ಆಡು ಮಾತಿನದ್ದು. ಅದು ನಿರರ್ಗಳವಾಗಿ ಹರಿದಿದೆ ಹಾಗೂ ಆತ್ಮೀಯವಾಗಿ ಭಾಸವಾಗುತ್ತದೆ 'ಏನಿಹದೆನಿಹ್ಯದೋ' ಕೇಳವ್ವ ತಂಗಿ ಇತ್ಯಾದಿ ಪ್ರಾಸ ಅನುಪ್ರಾಸಗಳು ಹಾಸುಹೊಕ್ಕಾಗಿದೆ. ಪ್ರಸ್ತಾವನೆಯಲ್ಲಿ ರಾಮದಾಸರ ಕೃತಿಗಳ ಒಟ್ಟಾರೆ ಆಶಯ ಹಾಗೂ ಕಾವ್ಯಗಳ ಸಮೀಕ್ಷೆ ಶೈಲಿ ಹೀಗೆ ಹಲವು ವಿಧಾನಗಳ ಮೂಲಕ ರಾಮದಾಸರ ಜೀವನ ಚರಿತ್ರೆ ಹಾಗೂ ಕೃತಿಗಳ ಕ್ರಮಸೂಚಿ, ಅನ್ಯಭಾಷೆಯ ಪ್ರಭಾವ ಪೂರ್ವ ಕಥೆಗಳು ಮತ್ತು ಟಿಪ್ಪಣಿಗಳನ್ನು ಕಠಿಣ ಶಬ್ಧಗಳ ಅರ್ಥ ಸಹಾಯಕ ಸಾಹಿತ್ಯ ಪಾಠಾಂತರಗಳನ್ನು ಗುರುತಿಸಿ ಅವುಗಳಿಗೆ ಸರಿಯಾದ ಅರ್ಥ ವಿವರಣೆಯನ್ನು ನೀಡಿ ಶಾಸ್ತ್ರೀಯವಾಗಿ ಸಂಪಾದಿಸಿದ್ದಾರೆ.

೩.೨.೪.೫. ಶ್ರೀ ವಾದಿರಾಜರ ದೀರ್ಘ ಕೃತಿಗಳು

ಪ್ರಸ್ತುತ ಕೃತಿಯನ್ನು ಸಂಪಾದಿಸಿ ಟಿ.ಎನ್. ನಾಗರತ್ನ ಅವರು ೧೯೮೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ವಾದಿರಾಜರ ನಾಲ್ಕು ದೀರ್ಘ ಕೃತಿಗಳು ಹಾಗೂ ೩೦ ಬಿಡಿ ಕೀರ್ತನೆಗಳು ಸೇರಿದಂತೆ ಒಟ್ಟು ೩೮ ಕೃತಿಗಳು ಪ್ರಕಟವಾಗಿವೆ. 'ವೈಕುಂಠ ವರ್ಣನೆ'ಯನ್ನು ಮೂರು ಪ್ರತಿಗಳಿಂದ ಸಂಪಾದಿಸಲಾಗಿದೆ. ಒಂದು ಕಾಗದ ಪ್ರತಿ ಎರಡು ಮುದ್ರಿತ ಪ್ರತಿಗಳು. 'ಅವತಾರತ್ರಯ ಮಧ್ವಸುವ್ವಾಲಿ' ಒಂದೇ ಪ್ರತಿಯಿಂದ ಪರಿಷ್ಕರಿಸಲಾಗಿದೆ. 'ಭ್ರಮರ ಗೀತೆಯನ್ನು' ಮೂರು ಪ್ರತಿಗಳಿಂದ ಪರಿಷ್ಕರಿಸಿದ್ದಾರೆ. ಒಂದು ಕಾಗದ ಪ್ರತಿ, ಎರಡು ಮುದ್ರಿತ ಪ್ರತಿಗಳು, 'ಲಕ್ಷ್ಮೀಶೋಭನ ಹಾಡು' ಎಂಟು ಪ್ರತಿಗಳಲ್ಲಿ ದೊರೆತಿದೆ. ಈ ಮೂರು ಕಾಗದ ಪ್ರತಿಗಳು ಐದು ಮುದ್ರಿತ ಪ್ರತಿಗಳಿಂದ ಪರಿಷ್ಕರಿಸಿದ್ದಾರೆ.

ವೈಕುಂಠ ವರ್ಣನೆ ನಾಲ್ಕು ಸಂಧಿಗಳನ್ನು ಹೊಂದಿದ್ದು ೩೮೮ ನುಡಿಗಳಲ್ಲಿ ವಿಸ್ತಾರ ಪಡೆದಿದೆ. ಸುಮಾರು ೪೩ ಶ್ಲೋಕ ಶ್ರುತಿಗಳ ಉದ್ಧರಣಗಳಿವೆ. ಎಲ್ಲರೂ ಬಯಸುವ ಮುಕ್ತಿ ಶ್ರೀ ಹರಿಯ ಪ್ರಸಾದದಿಂದ ಲಭ್ಯ ಸರಳವಾದ ಭಾಷೆಯಲ್ಲಿ ಮಧ್ವಮತ ತತ್ವಗಳನ್ನು ಅಚ್ಚುಕಟ್ಟಾಗಿ ಬಿಂಬಿಸುವ ಬಿತ್ತುವ ಕೃತಿ ಶ್ರೀವೈಕುಂಠ ವರ್ಣನೆ, ವೈಕುಂಠವೆಂಬ ಒಂದೇ ಶಬ್ಧದಿಂದ ದಾಸರು ಮೂರು ಅರ್ಥಗಳನ್ನು ಸಾಧಿಸಿದ್ದಾರೆ. ಶ್ರೀಹರಿಯ ಹೆಸರೇ ವೈಕುಂಠ. ಶ್ರೀಹರಿಯು ವಾಸಿಸುವ ಸತ್ಯ ಲೋಕವೂ ವೈಕುಂಠವೇ ಎನ್ನುವುದು ವಾದಿರಾಜರ ಅಭಿಪ್ರಾಯವಾಗಿದೆ. 'ಅವತಾರತ್ರಯ ಮಧ್ವಸುವ್ವಾಲಿ' ಒಟ್ಟು ೨೨೬ ನುಡಿಗಳಲ್ಲಿ ವರ್ಣಿತವಾಗಿರುವ ಈ ದೀರ್ಘ ಕೃತಿಯನ್ನು ಇತರೆ ಕೃತಿಗಳಿಗೆ ಹೋಲಿಸಿದರೆ ತಂತ್ರ, ಭಾಷೆ, ನಿರ್ವಹಣೆ, ನಿರೂಪಣೆ ಎಲ್ಲಾ ದೃಷ್ಟಿಗಳಿಂದ ತುಂಬಾ ಶಿಥಿಲವಾದ ಸಂಬಂಧವಿದೆ ಎಂದಿದ್ದಾರೆ. ಸಂಪಾದಕರು 'ಭ್ರಮರಗೀತೆ' ಶ್ರೀಹರಿಯ ಲೀಲಾಕಥನವಾದ ಭಾಗವತ ಹರಿದಾಸರ ಕೃತಿಗಳಿಗೆ ಒಂದು ಆಕರ ಗ್ರಂಥವಾಗಿರುವುದು ಸರ್ವವಿಧಿತ ಎಂದಿದ್ದಾರೆ. ಈ ಸಂಸ್ಕೃತ ಭ್ರಮರ ಗೀತವನ್ನಾಧರಿಸಿ ಕನ್ನಡದಲ್ಲಿ ದೀರ್ಘವಾದ ಕೀರ್ತನೆಯನ್ನು ರಚಿಸಿದ್ದಾರೆ.

'ಲಕ್ಷ್ಮಿ ಶೋಭನ ಹಾಡು' ಈ ದೀರ್ಘಕೃತಿ ಪ್ರಧಾನವಾಗಿ ಸಾಂಗತ್ಯದ ದಾಟಿಯಲ್ಲಿದೆ, ಇದು ಪ್ರತಿ ತ್ರಿಪದಿಯ ದಾಟಿಯಲ್ಲಿಯೂ ಹಾಡಲು ಬರುವಂತಿದೆ. ವಧೂವರರು ಸಾಕ್ಷಾತ್ ಲಕ್ಷ್ಮೀನಾರಾಯಣರ ಸ್ವರೂಪ ಎಂದು ನಂಬಿಕೆ, ಬಿಡಿ ಕೀರ್ತನೆಗಳು ಹಯವದನ ಅಂಕಿತದಲ್ಲಿರುವ ಏಕೈಕ ಆಕರದ ಮೂವತ್ತು ಬಿಡಿ ಕೀರ್ತನೆಗಳನ್ನು ಅನುಬಂಧ ೧ರಲ್ಲಿ ಗುರುತಿಸಿದ್ದಾರೆ. ಹಾಗೆಯೇ ಪಾಠಾಂತರಗಳನ್ನು ಗುರುತಿಸಿದ್ದಾರೆ. ಪೂರ್ವ ಕಥೆಗಳ ವಿವರಣೆ ಹಾಗೂ ಟಿಪ್ಪಣಿಗಳು, ಕಠಿಣ ಶಬ್ಧಗಳ ಅರ್ಥ, ಸಹಾಯಕ ಸಾಹಿತ್ಯದ ಬಳಕೆ ಮಾಡಿಕೊಂಡಿರುವುದರ ಮಾಹಿತಿ ಕೊಟ್ಟು ಪರಿಷ್ಕರಿಸಿದ್ದಾರೆ.

೩.೨.೪.೬. ಶ್ರೀ ವ್ಯಾಸರಾಯರ ಕೃತಿಗಳು

ಈ ಕೃತಿಯನ್ನು ಟಿ.ಎನ್. ನಾಗರತ್ನ ಅವರು ಸಂಪಾದಿಸಿ ೨೦೦೧ರಲ್ಲಿ ಪಂಡಿತ ಆವೃತ್ತಿ ಹಾಗೂ ಜನಪ್ರಿಯ ಆವೃತ್ತಿಗಳ ರೂಪದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟಿಸಿದ್ದಾರೆ. ವ್ಯಾಸರಾಯರು ಕಾವ್ಯ, ನಾಟಕ, ಅಲಂಕಾರ, ವ್ಯಾಕರಣಾದಿ ಶಾಸ್ತ್ರಗಳಲ್ಲಿ ಪರಿಣಿತರಾಗಿದ್ದರು. ಅವರು ಕನ್ನಡದಲ್ಲಿ ಅನೇಕ ಕೀರ್ತನೆ, ಸುಳಾದಿ, ಉಗಾಭೋಗಗಳನ್ನು ರಚಿಸಿರುವುದಲ್ಲದೆ ಸಂಸ್ಕೃತದಲ್ಲಿ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ಅವರ ಕೀರ್ತನೆಗಳಲ್ಲಿ ಹೆಚ್ಚು ಆತ್ಮ ಶೋಧನೆಯ ಕೀರ್ತನೆಗಳು ಕಂಡು ಬರುತ್ತವೆ ಎಂದು ಸಂಪಾದಕರು ಗುರುತಿಸಿದ್ದಾರೆ. ಉದಾಹರಣೆಗೆ "ಹುಡುಗರು ಮಾಡುವ ತಪ್ಪಿಗೆ ತಾಯಿ ಕೃಪೆ ಮಾಡದೆ ಬಿಡುವಳೆ" "ಕೋಳುವೋಗದ ಮುನ್ನ ಕೋಟೆ ರಕ್ಷಿಸಬೇಕು" ಇತ್ಯಾದಿ ಭಗವಂತನ ಆರಾಧನೆಯಿಂದಲೇ ಹಲವಾರು ಕೀರ್ತನೆಗಳು ಮೂಡಿ ಬಂದಿರುವುದನ್ನು ಗಮನಿಸಿದ್ದಾರೆ. ಹಲವು ದಾಸರಂತೆ ಇವರು ಶ್ರೀಹರಿಯ ತತ್ವವನ್ನು ನಂಬಿ ಕೀರ್ತನೆಗಳನ್ನು ರಚಿಸಿದ್ದಾರೆ. 'ಪರಮಪದವನೀವ' ಸಿರಿಕೃಷ್ಣನಿರಲಾಗಿ ನರರ ಸೇವಿಸ ಬೇಡವೋ ಎಂದೆಂದಿಗೂ ಆಯ್ಯುಷ್ಯವಿದ್ದರೆ ಅನ್ನಕ್ಕೆ ಕೊರತೆ ಇಲ್ಲ ಇತ್ಯಾದಿ.

ಈ ಸಂಪುಟದಲ್ಲಿ ಅಂಕಿತ ಪಲ್ಲಟ ಆಗಿರುವುದನ್ನು ಗುರುತಿಸುತ್ತಾರೆ. ಹಾಗೆಯೇ ಪೂರ್ವಕತೆಗಳು ಮತ್ತು ಲಘು ಟಿಪ್ಪಣಿಗಳು, ಕಠಿಣ ಶಬ್ದಗಳ ಅರ್ಥ, ಸ್ವರಪ್ರಸಾರ, ಆಕರ ಸಾಮಾಗ್ರಿ ಹಾಗೂ ಓಲೆಯ ಪ್ರತಿಗಳ ವಿವರ, ಶಬ್ದಸೂಚಿಗಳು ಮತ್ತು ಪ್ರಸ್ತುತ ಸಂಪುಟದಲ್ಲಿ ಏಕೈಕ ಆಕರವೂ ಸೇರಿದಂತೆ ವ್ಯಾಸರಾಯರ ಒಟ್ಟು ೧೮೯ ಕೃತಿಗಳು ಪ್ರಕಟವಾಗಿವೆ. ಅವುಗಳಲ್ಲಿ ೪೫ ಹೊಸ ಕೀರ್ತನೆಗಳನ್ನು ಹೊಸದಾಗಿ ಸೇರಿಸಿ ಪ್ರಕಟಿಸಿದ್ದಾರೆ.

೩.೨.೪.೭. ಉರಗಾದ್ರಿವಾಸ ವಿಠಲದಾಸರು ಮತ್ತು ಇತರರ ಕೀರ್ತನೆಗಳು

ಈ ಕೃತಿಯನ್ನು ಹೆಚ್.ಎಸ್. ಶ್ರೀನಿವಾಸ ಮೂರ್ತಿ, ಎ.ಎನ್. ಅನಂತಸ್ವಾಮಿರಾವ್, ಟಿ.ಎನ್.ನಾಗರತ್ನ ಅವರು ಸಂಯುಕ್ತವಾಗಿ ಸಂಪಾದಿಸಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಿಂದ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಮುಖ್ಯವಾಗಿ ಟಿ.ಎನ್. ನಾಗರತ್ನ ಅವರು ಸಂಪಾದಿಸಿರುವ ಶ್ರೀ ಅಚಲಾನಂದ ದಾಸರ ಕೀರ್ತನೆಗಳ ವಿಧಿವಿಧಾನಗಳನ್ನು ಚರ್ಚಿಸಲಾಗಿದೆ.

ಕನ್ನಡ ಹರಿದಾಸ ಪಂಥಕ್ಕೆ ಅಚಲಾನಂದ ದಾಸರೆಂಬುವವರು ಮೊದಲಿಗರೆಂದು ಬೇಲೂರು ಕೇಶವದಾಸರು ಒಂದು ವಾದವನ್ನು ಮುಂದಿಟ್ಟರು ಅದಕ್ಕೆ ಸಂಪಾದಕರು "ಮುದ್ರಿಕೆಯ ಕೆಲವು ದೇವರ ನಾಮಗಳೂ, ಉಗಾಭೋಗಗಳೂ ೧೬ನೇ ಶತಮಾನದ ಕನ್ನಡ ಭಾಷೆಯಂತಿವೆ. ಭಾಷಾಶಾಸ್ತ್ರಜ್ಞರು ಇವರನ್ನು ಹದಿನೈದನೇ ಶತಮಾನಕ್ಕಾದರೂ ಸೇರಿಸಬೇಕೆನ್ನುತ್ತಾರೆ. ಒಂಬತ್ತನೇ ಶತಮಾನದವರನ್ನು ಹದಿನೈದನೆಯ ಶತಮಾನಕ್ಕೆ ಕೈಹಿಡಿದು ತರಬೇಕೆಂದರೆ ಇವರ ಇತರ ಚರಿತ್ರಾಧಾರಗಳು ಕಷ್ಟಕರವಾಗಿದೆ."[೨೦] ಕಾಲ ನಿರ್ಣಯಕ್ಕಾಗಿ ಹಲವು ವಿದ್ವಾಂಸರು ಹೇಳಿಕೆಯನ್ನು ಗಮನಿಸಿದ್ದಾರೆ.

"ಭಾಷೆಯ ಸ್ವರೂಪದಿಂದ, ಶಬ್ದ ಪ್ರಯೋಗಗಳ ಸಾಮ್ಯದಿಂದಲೂ ಅವರು ಪುರಂದರ ದಾಸರಿಗಿಂತ ಇತ್ತೀಚಿನವರೆಂದು ತಿಳಿಯಬೇಕಾಗುತ್ತದೆ ಎಂಬುವುದು ಪಂಚಮುಖಿ ಅವರ ಅಭಿಪ್ರಾಯವಾದರೆ, ಕೆ.ಎಂ. ಕೃಷ್ಣರಾಯರು ಸಾಕಷ್ಟು ಸಾಕ್ಷಿಸಾಹಿತ್ಯ ಸಿಕ್ಕಿಲ್ಲ ಎನ್ನುತ್ತಾರೆ. ಹುಲಿಗೂರು ಕೃಷ್ಣಾಚಾರ್ಯ, ಹೆಚ್.ಕೆ. ವೇದವ್ಯಾಸಾಚಾರ್ಯ, ರಂ.ಶ್ರೀ ಮುಗಳಿ ಹೆಚ್.ಜಿ. ಬೆಂಗೇರಿ, ಕಪಟರಾಳ ಕೃಷ್ಣ ಮೊದಲಾದ ವಿದ್ವಾಂಸರು ನರಹರಿ ತೀರ್ಥರೆ ಹರಿದಾಸ ಪರಂಪರೆಯಲ್ಲಿ ಮೊದಲಿಗರು ಅಚಲಾನಂದರಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ."[೨೧] ಶಾಸನಗಳು, ಓಲೆಗರಿಗಳು ಅನೇಕ ಆಕರಗಳನ್ನು ಬಳಸಿಕೊಳ್ಳುವುದರ ಮೂಲಕ ಅಚಲಾನಂದದಾಸರು ಮೊದಲಿಗರಲ್ಲ. ಬಹುಶಃ ಇಬ್ಬರು ಅಚಲಾನಂದದಾಸರು ಇರಬಹುದು ಎಂದು ಸಂಪಾದಕರು ಅಭಿಪ್ರಾಯಪಡುತ್ತಾರೆ.

೩.೨.೪.೮. ಶ್ರೀ ಕನಕದಾಸರ ಕೀರ್ತನೆಗಳು

ಈ ಕೃತಿಯನ್ನು ಟಿ.ಎನ್.ನಾಗರತ್ನ ಅವರು ಸಂಪಾದಿಸಿ ೨೦೦೪ರಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟಿಸಿದ್ದಾರೆ. ಪ್ರಸ್ತುತ ಸಂಪುಟವನ್ನು

ಒಟ್ಟು ೧೬೧ ಹಸ್ತಪ್ರತಿಗಳನ್ನು ಬಳಸಿಕೊಂಡು ಪರಿಷ್ಕರಿಸಿದ್ದಾರೆ. ಹಸ್ತಪ್ರತಿಗಳ ವಿವರ ಹೀಗಿದೆ. ೧೨ ಓಲೆಗರಿ, ೧೨೬ ಕಾಗದದ ಹಸ್ತಪ್ರತಿ, ೨೩ ಮುದ್ರಿತ ಪ್ರತಿಗಳು ಹಾಗೂ ಎರಡು ಸಾವಿರಕ್ಕೂ ಹೆಚ್ಚು ಆಕರಗಳನ್ನು ಪರಿಶೀಲಿಸಿ ಸಂಪಾದಿಸಲಾಗಿದೆ. ಈ ಸಂಪುಟದಲ್ಲಿ ಒಟ್ಟು ೩೩೨ ಕೀರ್ತನೆಗಳಿವೆ. ಇದರಲ್ಲಿ ಒಟ್ಟು ೮೨ ಕೀರ್ತನೆಗಳು ಇಲ್ಲಿ ಮೊದಲ ಬಾರಿಗೆ ಅಚ್ಚಾಗಿವೆ. ಪ್ರಸ್ತುತ ಕೃತಿಯಲ್ಲಿ ಈವರೆಗೆ ಪ್ರಕಟವಾಗಿರುವ ಕನಕದಾಸರ ಕೀರ್ತನೆಗಳ ಸಂಗ್ರಹಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಕೀರ್ತನೆಗಳನ್ನು ಸಂಗ್ರಹಿಸಿ ಪರಿಷ್ಕರಿಸಿದ ಹೆಗ್ಗಳಿಕೆ ಟಿ.ಎನ್.ನಾಗರತ್ನ ಅವರಿಗೆ ಸಲ್ಲುತ್ತದೆ.

ಕನಕದಾಸರು ಕುರುಬರು ಎಂಬ ಕೆಲವು ವಿದ್ವಾಂಸರ ಅಭಿಪ್ರಾಯಗಳನ್ನು ಪ್ರಸ್ತಾವನೆಯಲ್ಲಿ ಚರ್ಚೆ ಮಾಡಿ ಸಂಪಾದಕರು ಕೊನೆಯಲ್ಲಿ ಈ ರೀತಿ ಹೇಳುತ್ತಾರೆ. ಯಾವ ಮತವನ್ನೂ ದ್ವೇಷಿಸದೆ, ಯಾವ ಮತಕ್ಕೂ ಅಂಟಿಕೊಳ್ಳದೆ ಜಾತಿ, ಮತಗಳನ್ನು ಮೀರಿ ಬೆಳೆದ ಅನುಭಾವಿಗಳು ಎಂದು ಹೇಳಿದ್ದಾರೆ. ಅವರ ಕೀರ್ತನೆಗಳಲ್ಲಿ ಭಕ್ತಿ ಪ್ರಧಾನವಾದ ಕೀರ್ತನೆಗಳು ಸಮಾಜೋನ್ನತಿಯ ಸಾರ್ವತ್ರಿಕ ನೆಲೆಯ ಕೀರ್ತನೆಗಳು ಹೆಚ್ಚು ಇವೆ. ಹಾಗೆಯೇ ಕನಕದಾಸರ ಕೀರ್ತನೆಗಳಲ್ಲಿ ಆಡುಮಾತಿನ ಸೊಗಡು ಇರುವುದನ್ನು ಗಮನಿಸಿದ್ದಾರೆ. ಉದಾಹರಣೆಗೆ "ಮಾತುಕದ್ದವ-ತಮಾಸುರ, ಭೂತಸ್ಕರ-ಚಿನ್ನಗಣ್ಣ (ಹಿರಣ್ಯಾಕ್ಷ), ಶಸ್ತ್ರ ಪಂಡಿತ-ದ್ರೋಣ, ಮುಗಿಲಹೊಳೆ-(ಗಂಗೆ)ಬರಮ, ಬಂಗಾರದೊಡಲ (ಬ್ರಹ್ಮ) ವಾಕುಸತಿ(ಸರಸ್ವತಿ), ಹದ್ದುಹಗೆ(ಸರ್ಪ), ಇವು ಕನಕದಾಸರು ಟಂಕಿಸಿರುವ ಅನ್ವರ್ಥ ಶಬ್ಧಗಳು. ಹಾಗೆಯೇ ಶುದ್ಧ ದೇಸಿ ಶಬ್ದಗಳ ಬಳಕೆ ಅವರ ಕೀರ್ತನೆಗಳಲ್ಲಿ ಇರುವುದನ್ನು ಸಂಪಾದಕರು ಗುರುತಿಸಿದ್ದಾರೆ. 'ಎನ್ನಕಂದ ಹಳ್ಳಿಯ ಹನುಮ' ಸಾರಿದೂರಿ ಹೇಳತೇನೆ ಕೆಟ್ಟೀ ಕಂಡ್ಯಾ ಬಡ್ಡಿ ಮನವೆ' 'ಛೀ ನಿನ್ನ ಮ್ಯಾರಿಮ್ಯಾಲೆ ಠೋಣ್ಯ-ಇತ್ಯಾದಿ. ಕನಕದಾಸರ ದಿಟ್ಟ ಜೀವನಾನುಭವ ಅವರ ಕೀರ್ತನೆಗಳಲ್ಲಿ ಗಾದೆ ಮಾತುಗಳಂತೆ ಎಡೆ ಪಡೆದಿರುವುದನ್ನು ಗುರುತಿಸಿದ್ದಾರೆ. 'ಅರಸಿನಂತೆ ಬಂಟ' ಬೀದಿಯೊಳೇತರ ನಂಟು' ಕೆಟ್ಟು ನಂತರ ಸೇರುವುದು ಬಲುಕಠಿಣ' ಇತ್ಯಾದಿ"[೨] ಗಾದೆ ಮತುಗಳನ್ನು ವಿಶೇಷವಾಗಿ ಗುರುತಿಸಿದ್ದಾರೆ.

ಹಾಗೆಯೇ ಕನಕದಾಸರು ರಾಮಾಯಣ, ಮಹಾಭಾರತ, ಭಾಗವತಾದಿ ಪುರಾಣ ಗ್ರಂಥಗಳ ಹಿನ್ನೆಲೆಯಲ್ಲಿ ರಾಮಲಕ್ಷಣ, ಹನುಮಂತ, ಕರ್ಣ, ಭೀಮ, ದುರ್ಯೋಧನ, ಕೃಷ್ಣ, ದ್ರುವ, ಅಜಮಿಳಾದಿ ಪುರಾಣ ಪಾತ್ರಗಳ ಮೂಲಕ ಕೀರ್ತನೆಗಳನ್ನು ಹೇಳಿರುವುದನ್ನು ಗಮನಿಸಿದ್ದಾರೆ. ಹಾಗೇ ಅನೇಕ ತೀರ್ಥಕ್ಷೇತ್ರಗಳನ್ನು ಸಂಚರಿಸಿ ಅಲ್ಲಿಯ ಕ್ಷೇತ್ರ ಮೂರ್ತಿಗಳನ್ನು ಸ್ತುತಿಸಿರುವುದನ್ನು ಗುರುತಿಸಿದ್ದಾರೆ. ಉದಾಹರಣೆಗೆ ತಿರುಪತಿ, ಉಡುಪಿ, ಬೇಲೂರು, ಶ್ರೀರಂಗಪಟ್ಟಣ, ಮದ್ದೂರು, ಮಳೂರು, ಮೇಲುಕೋಟೆ, ಕನಕಗಿರಿ, ಕದರ ಮಂಡಲಗಿ ಇತ್ಯಾದಿ. ಅನುಬಂಧದಲ್ಲಿ ಕನಕದಾಸರು ರಚಿಸಿರುವ ಏಳು ದಂಡಕಗಳನ್ನು ಮೊದಲಬಾರಿಗೆ ಸಂಪಾದಿಸಿದ್ದಾರೆ. ಹಾಗೂ ಇತರ ಹರಿದಾಸರ ಅಂಕಿತದಲ್ಲಿರುವ ಕನಕದಾಸರ ಕೀರ್ತನೆಗಳು ಆದಿಕೇಶವಾಂಕಿತವಾಗಿ ಮಾರ್ಪಟ್ಟಿರುವ ಕೀರ್ತನೆಗಳು ಕನಕದಾಸರವೆಂದು ಹೇಳಿದ್ದಾರೆ. ಹಾಗೂ ಪ್ರಚಲಿತ ಇರುವ ಕೀರ್ತನೆಗಳನ್ನು ಅನುಬಂಧದಲ್ಲಿ ಅಕಾರಾದಿಯಾಗಿ

ಸೂಚಿಸಿದ್ದಾರೆ. ಕಠಿಣ ಶಬ್ದಾರ್ಥಗಳು, ಪೂರ್ವ ಕತೆಗಳು ಮತ್ತು ಟಿಪ್ಪಣಿಗಳು, ಸ್ವರ ಪ್ರಸ್ತಾರ, ಆಕರ ಸಾಮಗ್ರಿ, ಶಬ್ದಸೂಚಿಗಳು, ರಾಗಗಳ ಸೂಚಿ, ತಾಳಗಳ ಸೂಚಿ ನೀಡುವುದರ ಮೂಲಕ ಶಾಸ್ತ್ರೀಯವಾಗಿ ಸಂಪಾದಿಸಿ ಪ್ರಕಟಿಸಿದ ಕೀರ್ತಿ ಟಿ.ಎನ್. ನಾಗರತ್ನ ಅವರಿಗೆ ಸಲ್ಲುತ್ತದೆ.

೩.೨.೪.೯. ಟಿ.ಎನ್. ನಾಗರತ್ನ ಅವರ ಇತರೆ ಲೇಖನಗಳು

ಟಿ.ಎನ್. ನಾಗರತ್ನ ಅವರು ಹರಿದಾಸ ಸಾಹಿತ್ಯ ಕ್ಷೇತ್ರದಲ್ಲಿ ಪ್ರಮುಖವಾದ ಕೃತಿಗಳನ್ನು ಪರಿಷ್ಕರಿಸಿ ಪ್ರಕಟಿಸುವುದರಲ್ಲಿ ಮಹತ್ವವಾದ ಸ್ಥಾನ ಪಡೆದಿದ್ದಾರೆ. ಇವರು ಕನ್ನಡ ಗ್ರಂಥಸಂಪಾದನೆ ಕ್ಷೇತ್ರದಲ್ಲಿ ವಿಭಿನ್ನವಾದ ವಿದ್ವತ್, ಪ್ರತಿಭೆ, ಪ್ರವೃತ್ತಿಯುಳ್ಳವರು. ದಾಸಸಾಹಿತ್ಯ ಕೃತಿಗಳನ್ನು ಸಂಪಾದನೆ ಮಾಡುವುದು ತುಂಬಾ ಕಷ್ಟದ ಕೆಲಸ. ಅಂತಹ ಹಲವು ಸಮಸ್ಯೆಗಳನ್ನು ಬಗೆಹರಿಸಿಕೊಂಡು ಕೀರ್ತನಕಾರರ ಕೀರ್ತನೆಗಳಲ್ಲದೇ ಅನೇಕ ಮಹತ್ವವಾದ ಲೇಖನಗಳನ್ನು ಬರೆಯುವುದರಲ್ಲಿ ಗಂಭೀರವಾಗಿ ತೊಡಗಿಕೊಂಡವರು. ಅವರ ಲೇಖನಗಳ ಸಂಕ್ಷಿಪ್ತ ಪರಿಚಯವನ್ನು ಈ ಕೆಳಕಂಡಂತೆ ಚರ್ಚಿಸಲಾಗಿದೆ.

೩.೨.೪.೯.೧. ಕನ್ನಡ ಗ್ರಂಥಸಂಪಾದನೆಯ ಸಮಸ್ಯೆಗಳು

ಪಾದೇಕಲ್ಲು ವಿಷ್ಣು ಭಟ್ಟ ಅವರು 'ಸುಕೃತಿ' ಎಂಬ ಸಂಪಾದನಾ ಕೃತಿಯಲ್ಲಿ ಈ ಲೇಖನ ಪ್ರಕಟವಾಗಿದೆ. ಕನ್ನಡ ಗ್ರಂಥ ಸಂಪಾದನೆಯು ಇಂದಿಗೂ ಎದುರಿಸುತ್ತಿರುವ ಹಲವು ಹತ್ತು ಸಮಸ್ಯೆಗಳನ್ನು ಕುರಿತು ವಿಚಾರ ಮಾಡುವುದು ಅದರಲ್ಲೂ ಕನ್ನಡ ಹರಿದಾಸ ಸಾಹಿತ್ಯ ಸಂಪಾದನೆಯ ಸಮಸ್ಯೆಗಳನ್ನು ತಿಳಿಸುವುದು ಈ ಲೇಖನದ ಮುಖ್ಯ ಉದ್ದೇಶವಾಗಿದೆ. ಸಂಪಾದಕನ ಮುಂದಿರುವ ಮೂಲಭೂತ ಸಮಸ್ಯೆಯೆಂದರೆ ಹಸ್ತಪ್ರತಿಗಳ ಅನ್ವೇಷಣೆ ಹಾಗೂ ಸಂಗ್ರಹಣೆ. ಯಾವುದೇ ಒಂದು ಗ್ರಂಥವನ್ನು ಸಂಪಾದಿಸಿ ಪ್ರಕಟಿಸಬೇಕಾದರೂ ಆಧಾರ ಮೂಲ ಹಸ್ತಪ್ರತಿಗಳು ಬೇಕೆಬೇಕು. ಹಸ್ತಪ್ರತಿಗಳು ದೇವಿಸರಸ್ವತಿಯ ಅವತಾರವೆಂದೇ ಜನರು ಪೂಜಿಸುವುದರಿಂದ ಅವುಗಳೊಂದಿಗಿರುವ ಅವರ ಭಾವನಾತ್ಮಕ ಸಂಬಂಧದಿಂದಾಗಿ ಹಸ್ತಪ್ರತಿಗಳನ್ನು ಪಡೆಯುವುದೇ ಒಂದು ದೊಡ್ಡ ಸಮಸ್ಯೆಯಾಗಿದೆ.

ಅಂಥಹ ಹೊತ್ತಲ್ಲಿ ಸಂಪಾದಕರು ಒಂದು ಕೃತಿಯನ್ನು ಪರಿಷ್ಕರಿಸುವಾಗ ಪ್ರತಿಯೊಂದು ಹಂತದಲ್ಲೂ ತುಂಬಾ ಜಾಗ್ರತೆಯಿಂದ ಇರಬೇಕು. ಅಕ್ಷರ ವ್ಯತ್ಯಾಸಗಳಿಂದ ಅಪಾರ್ಥಗಳು ಸಿದ್ಧಿಸಿ ಬಿಡುತ್ತವೆ ಎಂದಿದ್ದಾರೆ. ಲಿಖಿತ ಪ್ರತಿಗಳೇ ಇಲ್ಲದೆ ನೂರಾರು ವರ್ಷಗಳೂ ಬಾಯಿಂದ ಬಾಯಿಗೆ ಸಾಗಿ ಬಂದು ಕಾಲಕ್ರಮೇಣ ಲಿಖಿತ ಪ್ರತಿಗಳ ರೂಪಕ್ಕಿಳಿದ ಕನ್ನಡ ಹರಿದಾಸ ಸಾಹಿತ್ಯ ಸಂಪಾದನೆಯಂತೂ ಇನ್ನಷ್ಟು ಸಮಸ್ಯೆಗಳ ಹುತ್ತ. ಗ್ರಂಥಸ್ಥ ಪಠ್ಯಗಳು ಹೆಚ್ಚು ಹೆಚ್ಚು ಲಿಪಿಕಾರರ ಕೈದಾಟಿ ಬಂದ ಹಾಗೆ ಹೆಚ್ಚು ಸ್ಖಾಲಿತ್ಯಗಳನ್ನು ಒಳಗೊಳ್ಳುತ್ತವೆ. ಹಾಗೆಯೇ ಹರಿದಾಸರ ಪದಗಳಿಗೆ ವಕ್ತೃಗಳು ಹೆಚ್ಚಾದ ಹಾಗೆಯೇ ಪಾಠ ವ್ಯತ್ಯಾಸಗಳೂ ಹೆಚ್ಚಾಗುತ್ತವೆ. ಒಟ್ಟಾರೆಯಾಗಿ ಈ ಲೇಖನದಲ್ಲಿ ಕನ್ನಡ ಗ್ರಂಥ ಸಂಪಾದನೆಯ ಸಮಸ್ಯೆಗಳು ಹಾಗೂ ಸವಾಲುಗಳನ್ನು ಕುರಿತು ಚರ್ಚಿಸಿದ್ದಾರೆ. ಏಕೆಂದರೆ ಒಬ್ಬ ಮಹಿಳೆಯು ಗ್ರಂಥಸಂಪಾದನೆಯಲ್ಲಿ ತೊಡಗಿಸಿಕೊಂಡಾಗ ಅಲ್ಲಿ ಬರುವ ಸಮಸ್ಯೆ

ಹಾಗೂ ಅವರು ಪ್ರತಿಯೊಂದು ಹಂತದಲ್ಲೂ ಪಟ್ಟ ಕಷ್ಟಗಳ ವಿವರಗಳನ್ನು ಸಹ ಇಲ್ಲಿ ದಾಖಲಿಸಿದ್ದಾರೆ. ಹರಿದಾಸ ಸಾಹಿತ್ಯ ಸಂಪಾದನೆಗೆ ರಾಗ, ತಾಳ, ಲಯಗಳ ಪರಿಜ್ಞಾನ ಹಾಗೂ ಅನ್ಯಭಾಷೆಗಳ ಪರಿಚಯ ಅಗತ್ಯವಾಗುತ್ತದೆ. ಆಗ ಮಾತ್ರ ಉತ್ತಮ ಸಂಪಾದಕನಾಗಲು ಸಾಧ್ಯ ಎಂದಿದ್ದಾರೆ.

೩.೨.೪.೯.೨. ೧೫ ರಿಂದ ೧೯ನೇ ಶತಮಾನದ ಕನ್ನಡ ಮಹಿಳಾ ಸಾಹಿತ್ಯ

ಟಿ.ಎನ್.ನಾಗರತ್ನ ಅವರ ಈ ಲೇಖನ ಆರ್ಯಾಂಬ ಪಟ್ಟಾಬಿ ಅವರು ಸಂಪಾದಿಸಿರುವ 'ಮಹಿಳಾ ಸಾಹಿತ್ಯ ಸಮೀಕ್ಷೆ' ಎಂಬ ಕೃತಿಯಲ್ಲಿ ಪ್ರಕಟವಾಗಿದೆ. ೧೫ನೆಯ ಶತಮಾನಕ್ಕಿಂತ ಮುಂಚೆ ಮಹಿಳೆಯರು ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಹಲವು ಕಾರಣಗಳು ಕಂಡುಬರುತ್ತವೆ. ಪುರಾಣಗಳ ಸೃಷ್ಠಿ ಬಾಲ್ಯವಿವಾಹ ಇತ್ಯಾದಿ ಕಾರಣಗಳಿಂದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಹಿಂದುಳಿದಿದ್ದಾಳೆ. ಹಾಗೆಯೇ ಮಹಿಳೆಯರ ಧ್ವನಿ ಕೇಳಬೇಕಾದರೆ 'ಸಾವಿರ ವರ್ಷಗಳ ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಮಹಿಳೆಯರ ಕಿರುಧ್ವನಿ ಕೇಳಿಸಬೇಕಾದರೆ ಸುಮಾರು ಎಂಟುನೂರು ವರ್ಷಗಳೇ ಬೇಕಾದವು' ಹನ್ನೆರಡನೆಯ ಶತಮಾನದ ವಚನಕಾರ್ತಿಯರನ್ನು ಬಿಟ್ಟರೆ ಅನಂತರದ ಕಾಲಮಾನದಲ್ಲಿ ಮಹಿಳೆಯರು ಸಾಹಿತ್ಯ ನಿರ್ಮಾಣದಲ್ಲಿ ಅಷ್ಟೇನೂ ಆಸಕ್ತಿ ವಹಿಸಿದಂತಿಲ್ಲ ಎಂದು ಹೇಳಿದ್ದಾರೆ.

೧೫ ರಿಂದ ೧೯ನೇ ಶತಮಾನದಲ್ಲಿ ಬಂದ ಹೊನ್ನಮ್ಮ ಶೃಂಗಾರಮ್ಮ ಹಾಗೂ ಚೆಲುವಾಂಬೆ, ಗಲಗಲಿಯ ಅವ್ವ, ಭಾಗಮ್ಮ, ಹೆಳವನಕಟ್ಟೆ ಗಿರಿಯಮ್ಮ ಅನೇಕ ಕವಯತ್ರಿಯರ ಕಿರು ಪರಿಚಯ ಹಾಗೂ ಅವರು ರಚಿಸಿದ ಕೃತಿಗಳ ತೌಲನಿಕ ಅಧ್ಯಯನ ಮಾಡಿದ್ದಾರೆ.

ಟಿ.ಎನ್. ನಾಗರತ್ನ ಅವರು ಹರಿದಾಸ ಸಾಹಿತ್ಯದಲ್ಲಿ ಪ್ರಸಿದ್ಧವಾದ ಹರಿದಾಸರ ಕೀರ್ತನೆಗಳನ್ನು ಸಾಮಾನ್ಯ ಜನರಿಗೆ ಅರ್ಥವಾಗುವಂತೆ ಪರಿಷ್ಕರಿಸಿ ಪಂಡಿತ ಆವೃತ್ತಿ ಮತ್ತು ಜನಪ್ರಿಯ ಆವೃತ್ತಿಗಳನ್ನು ಹೊರತಂದಿದ್ದಾರೆ. ಇವರ ಉದ್ದೇಶ ಎಂದರೆ ಪಂಡಿತ ಆವೃತ್ತಿಯಲ್ಲಿ ಕಠಿಣವಾದ ಪದಗಳನ್ನು ಗುರುತಿಸಿ ಅವುಗಳಿಗೆ ಸರಿಯಾದ ಅರ್ಥ ಗೋಚರವಾಗುವಂತೆ ಸೂಚಿಸಿ ಅನೇಕ ಹರಿದಾಸರ ಕೃತಿಗಳನ್ನು ಪುರಾಣ ಪುಣ್ಯ ಕಥೆಗಳೊಂದಿಗೆ ತೌಲನಿಕ ವಿಮರ್ಶೆ ಮಾಡಿ ಹರಿದಾಸರಿಗೆ ಪ್ರಭಾವ ಪ್ರೇರಣೆ ಬೀರಿದ ಪುಣ್ಯಕ್ಷೇತ್ರಗಳನ್ನು ವಿವರಿಸುವುದಾಗಿದೆ. ಹಾಗೆಯೇ ಜನಪ್ರಿಯ ಆವೃತ್ತಿಯಲ್ಲಿ ಸಾಮಾನ್ಯ ಓದುಗರಿಗೂ ಅರ್ಥ ಆಗುವಂತೆ ಪರಿಷ್ಕರಣ ಮಾಡಿದ್ದಾರೆ. ಸಾಕಷ್ಟು ಆಕರಗಳನ್ನು ಸಂಗ್ರಹಿಸುವುದರ ಮೂಲಕ ಒಂದು ಕೃತಿಯನ್ನು ಪರಿಷ್ಕರಿಸುತ್ತಾರೆ. ಏಕೆಂದರೆ ಹರಿದಾಸರ ಕೀರ್ತನೆಗಳನ್ನು ಕೇಳಿ ಪ್ರತಿ ಮಾಡಿರುವುದು ಸಾಕಷ್ಟು ವಿವರ ಸಿಗುತ್ತದೆ. ಆದ್ದರಿಂದ ಕೇಳಿ ನೋಡಿ ಬರೆಯುವಾಗ ಲಿಪಿಕಾರ ಹಲವಾರು ಬದಲಾವಣೆಯನ್ನು ಮಾಡಿಕೊಂಡಿರುತ್ತಾನೆ. ಅಂತಹ ದೋಷಗಳು ಕಂಡು ಬಂದಾಗ ಅನೇಕ ಪ್ರತಿ ಹಾಗೂ ಪ್ರಾಚೀನ ಕೃತಿಗಳನ್ನು ಗಮನಿಸುವುದರ ಮೂಲಕ ಪರಿಷ್ಕರಿಸುತ್ತಾರೆ. ಆದ್ದರಿಂದ ಹರಿದಾಸ ಸಾಹಿತ್ಯದಲ್ಲಿ ಪ್ರಸಿದ್ಧವಾದ ಕೀರ್ತನೆಕಾರರ ಕೃತಿಗಳನ್ನು ಪರಿಷ್ಕರಿಸಿ ಪ್ರಕಟಿಸಿದ ಕೀರ್ತಿ ಟಿ.ಎನ್. ನಾಗರತ್ನ ಅವರಿಗೆ ಸಲ್ಲುತ್ತದೆ.

೩.೨.೫. ಟಿ.ಕೆ. ಇಂದುಬಾಯಿ

ಟಿ.ಕೆ. ಇಂದುಬಾಯಿ ಅವರು ಹರಿದಾಸ ಸಾಹಿತ್ಯ ಸಂಪಾದನೆಯ ಪರಂಪರೆಯಲ್ಲಿ ಅಳಿಸಲಾರದ ಹೆಸರಾಗಿದೆ. ದಾಸಸಾಹಿತ್ಯ ಪರಂಪರೆಯಲ್ಲಿ ರಚನೆಯಾದ ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳು, ಪ್ರಸನ್ನ ವೆಂಕಟದಾಸರ ಭಾಗವತ, ಪ್ರಸನ್ನ ವೆಂಕಟದಾಸರ ಕೀರ್ತನೆಗಳು ಎಂಬ ಮೂರು ಕೃತಿಗಳನ್ನು ಸಂಪಾದಿಸಿದ್ದಾರೆ.

೩.೨.೫.೧. ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳು

ಈ ಕೃತಿಯನ್ನು ಟಿ.ಕೆ. ಇಂದುಬಾಯಿ ಅವರು ಸಂಪಾದಿಸಿ ೧೯೮೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸಿದ್ದಾರೆ. ದಾಸಸಾಹಿತ್ಯ ಪರಂಪರೆಯಲ್ಲಿ ಬಂದ ಗೋಪಾಲದಾಸರ ಸಮಕಾಲೀನಳಾದ ಗಿರಿಯಮ್ಮ 'ಹೆಳವನಕಟ್ಟೆರಂಗ' ಎಂಬ ಅಂಕಿತದಲ್ಲಿ ೮೨ ಹಾಡುಗಳನ್ನು ರಚಿಸಿದ್ದಾಳೆ. ಈ ಕೃತಿಯನ್ನು ವಿವಿಧ ಓಲೆ ಪ್ರತಿ, ಕಾಗದ ಹಾಗೂ ಮುದ್ರಿತ ಪ್ರತಿಗಳ ಸಹಾಯದಿಂದ ಪರಿಷ್ಕರಿಸಲಾಗಿದೆ. ಗಿರಿಯಮ್ಮ ಭಕ್ತಿಯಿಂದ ರಚಿಸಿದ ಹಾಡುಗಳು ಬಹಳ ಇರಬಹುದಾದರೂ ಈವರೆಗೆ ಪ್ರಕಟವಾಗಿರುವುದು ತುಂಬಾ ಕಡಿಮೆ ಎಂದು ಸಂಪಾದಕರು ಗುರುತಿಸುತ್ತಾರೆ. ಪರಿಷ್ಕರಣದ ಸಂದರ್ಭದಲ್ಲಿ ಗಾತ್ರಕ್ಕೆ ಅನುಗುಣವಾಗಿ ಸಣ್ಣ ಹಾಡುಗಳು ಮತ್ತು ದೊಡ್ಡ ಹಾಡುಗಳೆಂದು ವರ್ಗೀಕರಿಸಿದ್ದಾರೆ. ಐದು ದೊಡ್ಡ ಹಾಡುಗಳಲ್ಲಿ 'ಉದ್ದಾಳಿಕನ ಕಥೆ' ಈ ಕಥೆ ಮೊದಲನೆಯದು. ಸಾಂಗತ್ಯದ ಮಟ್ಟಿನಲ್ಲಿ ಹಾಗೂ ೪೪೮ ನುಡಿಗಳಲ್ಲಿ ರಚಿತವಾಗಿರುವ ಹಾಡು. ಇಲ್ಲಿ ಪುತ್ರನಿಲ್ಲದೆ ಸದ್ಗತಿಯಿಲ್ಲ ಹಾಗೂ ವಿದಿಲಿಖಿತವನ್ನು ಯಾರೂ ಮೀರಬಾರದು ಎಂಬ ದೃಢ ನಂಬಿಕೆಯೇ ಈ ಹಾಡಿನ ಬೆನ್ನೆಲುಬು.

'ಶಂಕರ ಗಂಡನ ಹಾಡು'. ಸಾಂಗತ್ಯದ ದಾಟಿಯಲ್ಲಿ ಇರುವ ಈ ಹಾಡು ೬೨ ನುಡಿಗಳಲ್ಲಿ ಸಿಕ್ಕಿದೆ. ಶಿವ ಮನ್ಮಥರ ನಡುವಿನ ಸಂಭಾಷಣೆಯಂತೆಯೆ ಶಂಕರ ಗಂಡನ ವೇಷದ ವರ್ಣನೆ ಕೂಡ ಚಿತ್ರವತ್ತಾಗಿ ಬಂದಿರುವುದನ್ನು ಸಂಪಾದಕರು ಗಮನಿಸಿದ್ದಾರೆ. ಕಥಾ ನಿರೂಪಣೆಯೂ ಸೊಗಸಾಗಿದ್ದು ಓದುಗರನ್ನು ಆಕರ್ಷಿಸುತ್ತದೆ. ಅಂದರೆ ಕಥೆಯ ಮೂಲ ಸಿಕ್ಕಲ್ಲ ಎಂದಿದ್ದಾರೆ. 'ಸೀತಾ ಕಲ್ಯಾಣ', ಈ ಹಾಡು ಎಂಬತ್ತೇಳು ನುಡಿಗಳಲ್ಲಿ ಗಿರಿಯಮ್ಮ ರಾಮಜಾನಕಿಯ ಮಂಗಳುತ್ಸುವದುರುಟಣೆಯನ್ನು ಬಣ್ಣಿಸಿರುವುದನ್ನು ಕಾಣಬಹುದಾಗಿದೆ. 'ಚಂದ್ರಹಾಸನ ಕಥೆ'ಯು ನಾಲ್ಕು ಸಂಧಿಗಳು ೩೫೫ ನುಡಿಗಳಲ್ಲಿ ಇದೆ. ಈ ಕಥೆ ಸಾಂಗತ್ಯದಲ್ಲಿದೆ. ತುಂಬಾ ಪ್ರಸಿದ್ಧವಾದ ಕಥಾವಸ್ತುವನ್ನೊಳಗೊಂಡಿದೆ, ಎಂದಿದ್ದಾರೆ. 'ಬ್ರಹ್ಮಕೊರವಂಜಿ' ಈ ಹಾಡು ಉಳಿದ ಹಾಡುಗಳಿಗಿಂತ ನಿರೂಪಣಾ ಶೈಲಿಯಲ್ಲಿ ಭಿನ್ನವಾಗಿದೆ ಎಂಬುದನ್ನು ಗುರುತಿಸಿದ್ದಾರೆ.

ಬ್ರಹ್ಮಕೊರವಂಜಿ ಮತ್ತು ಕೃಷ್ಣಕೊರವಂಜಿ ಈ ಹಾಡುಗಳು ಅಪೂರ್ಣ ಹಾಡುಗಳು. ಗಿರಿಯಮ್ಮ ತನ್ನೆಲ್ಲಾ ಹಾಡುಗಳನ್ನು ಭಕ್ತಿಪೂರ್ವಕವಾಗಿ ಸಹಜವಾದ ಭಾಷೆಯಲ್ಲಿ ಸರಳವಾಗಿ ಹಾಡಿದ್ದಾಳೆ. ಹಾಗೆಯೇ ಪ್ರಾಸಾನುಪ್ರಾಸಗಳ ಜೊತೆಗೆ ಅವಳ ಭಾಷೆ ಸಂಸ್ಕೃತಮಯವಾಗಿದೆ ಎಂದಿದ್ದಾರೆ. ಈ

ಹಾಡುಗಳಲ್ಲಿ ಕೆಲವು ವಿಶೇಷ ಭಾಷಾ ಪ್ರಯೋಗಗಳನ್ನು ಗುರುತಿಸಿದ್ದಾರೆ. ಉದಾಹರಣೆಗೆ: 'ಕರ್ನಿಕೆ-ಕನ್ನಿಕೆ' 'ಆರುಂದ್ರುತಿ-ಆರುಂಧತಿ' 'ಬ್ರಾಹ್ಮರು-ಬ್ರಾಹ್ಮಣರು' 'ಭಾಳ-ಬಹಳ' 'ಪೂಜೆ-ಹೂಜೆ' 'ಪದನ-ಪಾದ' 'ಹೆತ್ತೋರ-ಹೆತ್ತವರ' 'ನೀತೀಲಿ-ನೀತಿಯಲ್ಲಿ' 'ನೀರಾಗೆ-ನೀರೊಳಗೆ' ಇತ್ಯಾದಿ[೩೩] ಸರಿಯಾದ ಅರ್ಥಕೊಟ್ಟಿದ್ದಾರೆ. ಕಠಿಣ ಶಬ್ಧಗಳ ಅರ್ಥ, ಶಬ್ಧ ಸೂಚಿಗಳು ಹಾಗೂ ಪರಿಷ್ಕರಣ ಸಂದರ್ಭದಲ್ಲಿ ಬಳಸಿಕೊಂಡ ಸಹಾಯಕ ಸಾಹಿತ್ಯ ಪಠ್ಯಗಳ ವಿವರವನ್ನು ಕೊಟ್ಟು ಶಾಸ್ತ್ರೀಯವಾಗಿ ಸಂಪಾದಿಸಿದ್ದಾರೆ.

೩.೨.೫.೨. ಶ್ರೀ ಪ್ರಸನ್ನವೆಂಕಟದಾಸರ ಭಾಗವತ

ಈ ಕೃತಿಯನ್ನು ಟಿ.ಕೆ. ಇಂದೂಬಾಯಿ ಅವರು ಸಂಪಾದಿಸಿ ೧೯೮೦ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸಿದ್ದಾರೆ. ಈ ಕೃತಿಯನ್ನು ಮುದ್ರಿತ ಪ್ರತಿ ಹಾಗೂ ದಾಸವರ್ಯ ಶ್ರೀಪ್ರಸನ್ನವೆಂಕಟರ ಭಾಗವತವನ್ನು ಆಧರಿಸಿ ಪರಿಷ್ಕರಿಸಲಾಗಿದೆ. ಪ್ರಸನ್ನವೆಂಕಟದಾಸರು ಪ್ರಸಿದ್ಧ ಹರಿದಾಸರಲ್ಲೊಬ್ಬರು.

ಸಂಪಾದಕರು ಈ ಕೃತಿಯನ್ನು ಪರಿಷ್ಕರಿಸುವಾಗ ಕೆಲವು ಲಿಪಿ ದೋಷಗಳನ್ನು ಹ್ರಸ್ವ, ದೀರ್ಘ, ಅಲ್ಪಪ್ರಾಣ, ಇಂತಹ ಕಾಗುಣಿತ ದೋಷಗಳನ್ನು ಸರಿಪಡಿಸಿದ್ದಾರೆ. ಹಾಗೆಯೇ, ಶ್ರೀ ಪ್ರಸನ್ನವೆಂಕಟದಾಸರಿಗೆ ಕೃತಿ ರಚಿಸಲು ಪ್ರೇರಣೆಯಾದ ಪುರಾಣ ಕೃತಿಗಳೊಂದಿಗೆ ಸಮೀಕ್ಷೆ ಮಾಡಿ ಸುದೀರ್ಘವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ. ಹರಿಭಕ್ತರೂ ಉಭಯ ಭಾಷಾ ಪಂಡಿತರೂ ಆಗಿದ್ದ ಪ್ರಸನ್ನವೆಂಕಟರು 'ಪ್ರಸನ್ವೆಂಕಟ' ಎಂಬ ಅಂಕಿತದಲ್ಲಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಇದುವರೆಗೆ ಅವರ ೪೫೦ ಕೃತಿಗಳು ಸಿಕ್ಕಿವೆ. ಅವುಗಳಲ್ಲಿ ೩೬೮ ಕೃತಿಗಳನ್ನು ನಿಸ್ಸಂದಿಗ್ಧವಾಗಿ ಇವೆ ಎಂದು ಭಾವಿಸಿದ್ದಾರೆ.

ಪ್ರಸನ್ನವೆಂಕಟ ದಾಸರ ಭಾಗವತ ಈ ಕೃತಿ ಸಂಸ್ಕೃತದ ಭಾಗವತ ದಶಮಸ್ಕಂಧದ ಪೂರ್ವಾರ್ಧವನ್ನು ಆಧರಿಸಿ ರಚಿತವಾಗಿರುವ ೬೭ ಬಿಡಿ ಕೀರ್ತನೆಗಳ ಗುಚ್ಛವಾಗಿದೆ. ಸಂಸ್ಕೃತದಲ್ಲಿರುವ ಮೂಲ ಭಾವಗವತದ ದಶಮಸ್ಕಂಧ ಪೂರ್ವಾರ್ಧದಲ್ಲಿ ೪೯-ಅಧ್ಯಾಯಗಳಿವೆ. ಇದೇ ಕಥೆಯನ್ನು ಪ್ರಸನ್ನವೆಂಕಟದಾಸರು ತಮ್ಮ ಹರಿಭಕ್ತಿಗೆ ವಾಹಕವನ್ನಾಗಿಸಿ ೬೭ ಬಿಡಿ ಕೀರ್ತನೆಗಳನ್ನು ರಚಿಸಿರುವುದನ್ನು ಸಂಪಾದಕರು ಗುರುತಿಸಿದ್ದಾರೆ. ಪ್ರಸ್ತಾವನೆಯಲ್ಲಿ ೪೫ ಶ್ಲೋಕಗಳ ವಿಮರ್ಶೆ, ಕಥಾಸಾರ ಕುರಿತು ವಿವರಿಸಿದ್ದಾರೆ. ಮೂಲ ಕೃತಿಯನ್ನು ಯಥಾವತ್ತಾಗಿ ಅನುಸರಿಸಿ ಕೀರ್ತನೆಗಳನ್ನು ರಚಿಸಿದ್ದರೂ ಕವಿ ಭಾಷಾ ಪ್ರೌಢಿಮೆಯ ಹೆಚ್ಚುಗಾರಿಕೆಯನ್ನು ಗಮನಿಸಿದ್ದಾರೆ. ಹಾಗೆಯೇ ಪೂರ್ವ ಕಥೆಗಳು ಮತ್ತು ಟಿಪ್ಪಣಿಗಳು, ಕಠಿಣ ಶಬ್ಧಗಳ ಅರ್ಥ, ರಾಗಗಳ ಶಬ್ಧಸೂಚಿ, ತಾಳಗಳ ಶಬ್ಧಸೂಚಿ, ಕೀರ್ತನೆಗಳ ಅಕಾರಾದಿಸೂಚಿ ನೀಡಿದ್ದಾರೆ. ೧೪ ಕೃತಿಗಳನ್ನು ಅಭ್ಯಾಸ ಮಾಡಿ ಈ ಕೃತಿಯನ್ನು ಶಾಸ್ತ್ರೀಯವಾಗಿ ಸಂಪಾದಿಸಿದ್ದಾರೆ.

೩.೨.೬. ನಗುವನಹಳ್ಳಿ ಪಿ. ರತ್ನ

ನಗುವನಹಳ್ಳಿ ಪಿ. ರತ್ನ ಅವರು ತಿಲಕಪುರ ಸೋಮ ವಿರಚಿತ 'ಚತುರಾಚಾರ್ಯ ಪ್ರಬಂಧ' ವೀರಜನಪತಿ ವಿರಚಿತ 'ವಿಕ್ರಮ ವಿಲಾಸ' ಮೋದಿರುದ್ರ ವಿರಚಿತ 'ವಿರಕ್ತರ ಕಾವ್ಯ' ಎಂಬ ಮೂರು

ಕೃತಿಗಳನ್ನು ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಈ ಕೃತಿಗಳ ಪರಿಷ್ಕರಣದ ವಿಧಿ-ವಿಧಾನಗಳನ್ನು ಈ ಕೆಳಕಂಡಂತೆ ಚರ್ಚಿಸಲಾಗಿದೆ.

೩.೨.೬.೧. ತಿಲಕಪುರ ಸೋಮ ವಿರಚಿತ ಚತುರಾಚಾರ್ಯ ಪ್ರಬಂಧ

ಈ ಕೃತಿಯನ್ನು ನಗುವನಹಳ್ಳಿ ಪಿ. ರತ್ನ ಅವರು ಸಂಪಾದಿಸಿ ೧೯೮೯ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟಿಸಿದ್ದಾರೆ. ಈ ಕೃತಿಯನ್ನು ಎರಡು ಹಸ್ತಪ್ರತಿಗಳ ನೆರವಿನಿಂದ ಸಂಪಾದಿಸಿದ್ದಾರೆ. ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದ ಕಾಗದ ಪ್ರತಿಗೆ 'ಕ' ಎಂದು ಸಂಕೇತ ನೀಡಿದ್ದಾರೆ. ಬೆಂಗಳೂರು ಅಧ್ಯಯನ ಕೇಂದ್ರದ ಹಸ್ತಪ್ರತಿಗೆ 'ಗ' ಪ್ರತಿಯೆಂದು ಸಂಕೇತ ನೀಡಿದ್ದಾರೆ. 'ಸೋಮ' ಕವಿ ತನ್ನ ಗುರುವಿನ ಪ್ರೇರಣೆಯಿಂದ ಚತುರಾಚಾರ್ಯ ಪ್ರಬಂಧವನ್ನು ರಚಿಸಿದ್ದಾನೆ. ಈ ಪ್ರಬಂಧದಲ್ಲಿ ೫ ಆಶ್ವಾಸ ೨೯ ಸಂಧಿ, ೧೪೧೩ ಪದ್ಯಗಳಿವೆ.

ಚತುರಾಚಾರ್ಯ ಪ್ರಬಂಧ ಹತ್ತೊಂಬತ್ತನೆಯ ಶತಮಾನದ ಆದಿಭಾಗಕ್ಕೆ ಸೇರಿದ ಒಂದು ಧಾರ್ಮಿಕ ಕಾವ್ಯವಾಗಿದೆ. ಇಂತಹ ಧಾರ್ಮಿಕ ಕಾವ್ಯಗಳ ಗುಣವೆಂದರೆ ಸಾಮಾನ್ಯವಾಗಿ ಆಯಾ ಧರ್ಮವನ್ನು ಎತ್ತಿ ಹಿಡಿಯುವ ಪವಾಡದ ಕಥೆಗಳನ್ನು ಒಳಗೊಂಡಿರುವುದು ಕಂಡುಬರುತ್ತದೆ. ಆದ್ದರಿಂದ ಚತುರಾಚಾರ್ಯ ಪ್ರಬಂಧದಲ್ಲಿಯೂ ಇಂತಹ ಅನೇಕ ಕಥೆಗಳಿವೆ. ಈ ಕಥೆಗಳು ಹಲವಾರು ಭಾಷೆಯಿಂದ ಪ್ರೇರಣೆ ಪಡೆದಿವೆ. 'ತಿಲಕಪುರದ ಸೋಮಕವಿ ಚತುರಾಚಾರ್ಯ' ಪ್ರಬಂಧದ ಆಕರವಾಗಿ ಚಿತ್ತಾರು ಗಂಗಾಧರಯ್ಯನವರು ತೆಲುಗು ಭಾಷೆಯಲ್ಲಿ ದ್ವಿಪದಿ ಕಾವ್ಯವಾಗಿ ರಚಿಸಿರುವ 'ಕುಲನು ಪಾಕಲು ಮಹಾತ್ಮ್ಯಮು' ಎನ್ನುವ ಕೃತಿಯನ್ನು ಹೆಸರಿಸಿದ್ದಾನೆ. ಇದೇ ಗ್ರಂಥವನ್ನು ಆಧರಿಸಿ ಕೋಣಧೂರ್ತಿಪುರದ ಗುರು ಮುದ್ದುಸಂಗಮ ದೇವನು ಐದು ಆಶ್ವಾಸಗಳ ಕೊಲ್ಲಿಪಾಕ ಮಹಾತ್ಮ್ಯೆ ಎನ್ನುವ ಯಕ್ಷಗಾನ ಕಾವ್ಯವನ್ನು ರಚಿಸಿದ್ದಾನೆ. ತೆಲುಗು ಗ್ರಂಥವು ಪರಿಶೀಲನೆಗೆ ದೊರಕಿದ್ದರಿಂದ ಪ್ರಸ್ತುತ ಗುರು ಮುದ್ದು ಸಂಗಮ ದೇವನ ಕೃತಿಯೊಡನೆ ಚತುರಾಚಾರ್ಯ ಪ್ರಬಂಧವನ್ನು ಪರಿಶೀಲಿಸಿದೆ[೪೪] ಎಂದು ಸಂಪಾದಕರು ಹೇಳುತ್ತಾರೆ.

ಚತುರಾಚಾರ್ಯ ಪ್ರಬಂಧ ಮತ್ತು ಕೊಲ್ಲಿಪಾಕಿ ಮಹಾತ್ಮ್ಯೆಗಳಿಗೆ ದಟ್ಟವಾದ ಸಾಮ್ಯವಿರುವುದನ್ನು ಗಮನಿಸಿ ಸೋಮನು ಭಾಮಿನಿ ಷಟ್ಪದಿಯ ಚೌಕಟ್ಟಿಗೆ ತನ್ನ ಕಾವ್ಯವನ್ನು ಅಳವಡಿಸುವಾಗ ಅನೇಕ ವಿವರಗಳನ್ನು ಬಿಟ್ಟಿರುವುದನ್ನು ಸಂಪಾದಕರೂ ಸೂಕ್ಷ್ಮವಾಗಿ ಗುರುತಿಸಿದ್ದಾರೆ. ಈ ಪ್ರಬಂಧದಲ್ಲಿ ಶಿವನು ಪಾರ್ವತಿಗೆ ತಾನು ಕೊಲ್ಲಿಪಾಕದ ಸೋಮೇಶ್ವರ ಲಿಂಗದಲ್ಲಿ ನಾಲ್ವರು ಗುರುವಿನಾಕಾರದಲ್ಲಿ ಜನಿಸಿ ಭವಿಗಳನ್ನು ಭಕ್ತರನ್ನಾಗಿ ಮಾಡುವೆ ಎನ್ನುತ್ತಾನೆ. ಅದರಂತೆ ಆತನ ನಾಲ್ಕು ಕಲೆಗಳು ಕೊಲ್ಲಿಪಾಕದ ಸೋಮೇಶ್ವರ ಲಿಂಗದಲ್ಲಿ ಉದ್ಭವವಾದಂತೆ ತಿಳಿದು ಬರುತ್ತದೆ. ಆದರೆ ಇತರ ಆಕರಗಳಂತೆ ರೇವಣನು ಕೊಲ್ಲಿಪಾಕ ಲಿಂಗದಲ್ಲಿ ಮರುಳಸಿದ್ಧವಟದ ಸಿದ್ದೇಶ್ವರ ಲಿಂಗದಲ್ಲಿ ಏಕೋರಾಮನು ಮುದ್ರಾಪುರದ ರಾಮನಾಥ ಲಿಂಗದಲ್ಲಿ ಪಂಡಿತಾರಾಧ್ಯನು ಶ್ರೀಶೈಲದ ಮಲ್ಲಿಕಾರ್ಜುನ ಲಿಂಗದಲ್ಲಿ ಜನಿಸಿದಂತೆ ತಿಳಿಯುತ್ತದೆ.

ಅನ್ಯಭಾಷೆಗಳ ಪ್ರಭಾವದಿಂದ ಕವಿ ಪ್ರಬಂಧ ಬರೆಯುವುದಕ್ಕೆ ಪ್ರೇರಣೆ ಪಡೆದಿರುವುದರ ಜೊತೆಗೆ ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಬಳಕೆಯಿದ್ದ ಅನ್ಯ ಶಬ್ಧಗಳನ್ನು ಈ ಪ್ರಬಂಧದಲ್ಲಿ ಬಳಸಿರುವುದನ್ನು ಸಂಪಾದಕರು ಗುರುತಿಸಿದ್ದಾರೆ. ಉದಾಹರಣೆಗೆ: ಪಾರಸಿ ಶಬ್ದಗಳು 'ಹಾರಿಸುವ ತೇಜೆಯ ವಜೀರರ' 'ಸಾರತರ ಸಂತೋಷದಲಿ ಬಾಜಾರ ಕೈತಂದು' 'ಭಲರೆ ಶಾಭಾಸೆ'[೨೫] ಈ ಪ್ರಬಂಧದಲ್ಲಿ ಬರುವ ಆಚಾರ್ಯರನ್ನು ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ. ಅದೇ ರೀತಿ ಪ್ರಬಂಧವನ್ನು ರಚಿಸುವುದಕ್ಕೆ ಆಕರವಾದ ಕೃತಿಗಳನ್ನು ಈ ಪ್ರಬಂಧದೊಂದಿಗೆ ಇಟ್ಟು ಸಮೀಕ್ಷೆ ಮಾಡಲಾಗಿದೆ. ಅನುಬಂಧದಲ್ಲಿ ಅರ್ಥಕೋಶವನ್ನು ನೀಡಲಾಗಿದೆ. ಆದರೆ ಪದ್ಯಗಳ ಆಕಾರಾದಿ ಗುರುತಿಸುವುದು ಕಂಡು ಬರುವುದಿಲ್ಲ.

೩.೨.೬.೨. ವೀರಜನಪತಿ ವಿರಚಿತ ವಿಕ್ರಮ ವಿಲಾಸ

ಈ ಕೃತಿಯನ್ನು ೧೯೯೮ರಲ್ಲಿ ನಗುವನಹಳ್ಳಿ ಪಿ. ರತ್ನ ಅವರು ಸಂಪಾದಿಸಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟಿಸಿದ್ದಾರೆ. ಈ ಕೃತಿಯನ್ನು ನಾಲ್ಕು ಹಸ್ತಪ್ರತಿಗಳ ಸಹಾಯದಿಂದ ಪರಿಷ್ಕರಿಸಲಾಗಿದೆ. ಪ್ರತಿಗಳ ವಿವರ ಹೀಗಿದೆ 'ಕ' ಸಂಕೇತವುಳ್ಳ ಓಲೆ ಪ್ರತಿ 'ಗ' ಸಂಕೇತವುಳ್ಳ ಓಲೆಯ ಪ್ರತಿ ಇವು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ವಿಭಾಗದವು. 'ತ' ಮತ್ತು 'ಚ' ಸಂಕೇತದ ಕಾಗದ ಪ್ರತಿಗಳೂ ಕೂಡ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಗಳಾಗಿವೆ.

ವಿಕ್ರಮ ವಿಲಾಸದ ಗ್ರಂಥದ ಕರ್ತೃ ವೀರಜನಪತಿ, ತನ್ನ ಕಾವ್ಯದಲ್ಲಿ ಕವಿಯು ತನ್ನ ಪೂರ್ವ ಕವಿಗಳಾದ ಕಾಳಿದಾಸ, ಮಯೂರ, ಉದ್ಭಟ, ಬಾಣ, ಮಲುಹಣ, ಭೂವಭೂತಿ ಎಂಬ ಸಂಸ್ಕೃತ ಕವಿಗಳನ್ನು ನೆನೆಯುತ್ತಾನೆ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವಿಕ್ರಮಾದಿತ್ಯನಿಗೆ ಸಂಬಂಧಿಸಿದಂತೆ ಅನೇಕ ಕಥೆಗಳು ಕಂಡು ಬರುತ್ತವೆ.

ಉದಾಹರಣೆಗೆ ಬತ್ತೀಸ ಪುತ್ತಳಿ ಕಥೆಗಳು, ಬೃಹತ್ಕಥಾ, ಕಥಾಸರಿತ್ಸಾಗರ, ಬೃಹತ್ಕಥಾ ಮಂಜರಿಯಂತಹ ಕಥಾ ಗುಚ್ಚಗಳು, ಪಂಚತಂತ್ರ ಕಥೆಗಳು, ದಶಕುಮಾರ ಚರಿತೆ ಇತ್ಯಾದಿ ಕೃತಿಗಳನ್ನು ಆಧರಿಸಿ ಈ ಗ್ರಂಥವನ್ನು ರಚಿಸಲಾಗಿದೆ ಎಂದು ಸಂಪಾದಕರು ಅಭಿಪ್ರಾಯ ಪಟ್ಟಿದ್ದಾರೆ. ಭರತ ಖಂಡದ ಉದ್ದಗಲಕ್ಕೂ ಪರಿಚಿತವಾದ ಈ ಕಥೆಯನ್ನು ಆಧರಿಸಿ ರಚಿತವಾದ ಸಾಂಗತ್ಯ ಕೃತಿ ವಿಕ್ರಮ ವಿಲಾಸ ಅಷ್ಟಾದಶವರ್ಣನೆಗಳಿಂದ ಕೂಡಿದೆ. ಈ ಕಾವ್ಯ ಶೃಂಗಾರ ರಸದಿಂದ ಕೂಡಿದೆ. ಹಾಗೆಯೇ ಈ ಕಾವ್ಯದ ಸ್ಥಾಯಿ ಭಕ್ತಿ ಮತ್ತು ವೈರಾಗ್ಯ. ಗಾದೆ ನಾಣ್ಣುಡಿಗಳ ಮೂಲಕ ಮಾರ್ಗ ಮತ್ತು ದೇಸೀ ಸಾಹಿತ್ಯದ ಗುಣಲಕ್ಷಣಗಳನ್ನು ಈ ಕಾವ್ಯ ಒಳಗೊಂಡಿದೆ ಎಂದಿದ್ದಾರೆ.

೩.೨.೬.೩. ಮೋದಿರುದ್ರ ವಿರಚಿತ ವಿರಕ್ತರ ಕಾವ್ಯ

ಈ ಕೃತಿಯನ್ನು ಸಂಪಾದಿಸಿ ನಗುವನಹಳ್ಳಿ ಪಿ. ರತ್ನ ಅವರು ೧೯೯೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟಿಸಿದ್ದಾರೆ. ವಿರಕ್ತರ ಕಾವ್ಯವನ್ನು ಎರಡು ಹಸ್ತಪ್ರತಿಗಳ ಸಹಾಯದಿಂದ ಸಂಪಾದಿಸಲಾಗಿದೆ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕಾಗದದ ಈ ಪ್ರತಿಗೆ 'ಕ' ಸಂಕೇತ

ನೀಡಲಾಗಿದೆ. ಇದೇ ಸಂಸ್ಥೆಯ ಮತ್ತೊಂದು ಹಸ್ತಪ್ರತಿ ಮೈಕ್ರೋಫಿಲಂ ಸೂಚಿ, ಇದಕ್ಕೆ 'ಗ' ಎಂದು ಸಂಕೇತ ನೀಡಿದ್ದಾರೆ. ಈ ಪ್ರತಿಗಳನ್ನು ಕೃತಿಯ ಪರಿಷ್ಕರಣೆಗೆ ಬಳಸಿಕೊಂಡಿದ್ದಾರೆ.

ನೂರೊಂದು ವಿರಕ್ತರ ಕಾವ್ಯದ ಕರ್ತೃ ಮೋದಿರುದ್ರ. ಈ ಕಾವ್ಯ ವಾರ್ಧಕ, ಪರಿವರ್ಧಿನಿ, ಭಾಮಿನಿ ಷಟ್ಪದಿಗಳಲ್ಲಿ ರಚನೆಯಾಗಿದೆ ಎಂದು ಸಂಪಾದಕರು ಗುರುತಿಸಿ ಈ ಕಾವ್ಯದಲ್ಲಿ ಆರು ಸಂಧಿಗಳು ೭೪೨ ಪದ್ಯಗಳು ಇರುವುದನ್ನು ಗಮನಿಸಿದ್ದಾರೆ. ಹಾಗೆಯೇ ೧೦೧ ವಿರಕ್ತರ ಚರಿತ್ರೆಯನ್ನು ಈ ಕಾವ್ಯದಲ್ಲಿ ಕವಿ ಹೇಳಿದ್ದಾನೆ. ೧ ಮತ್ತು ೩ ಸಂಧಿಗಳಲ್ಲಿ ಗಿರಿಜಾ ಕಲ್ಯಾಣದ ಕಥೆಯಿದೆ. ಪರಮ ಶಿವಭಕ್ತನೂ ತೇಜಸ್ವಿಯೂ ಕೀರ್ತಿಶಾಲಿಯೂ ಮಹಾಪರಾಕ್ರಮಿ ಆದ ಗಿರಿರಾಜನ ಪತ್ನಿ ಮೇನಕಾದೇವಿಯು ಸಾಕ್ಷತ್ ಪರಮೇಶ್ವರನಿಗೆ ತಕ್ಕ ಮಗಳನ್ನು ಪಡೆಯಲು ತಪಸ್ಸನ್ನು ಕೈಗೊಂಡು ಮಗುವನ್ನು ಪಡೆದ ಮೇಲೆ ಶಿವನ ಇಚ್ಛೆಯಂತೆ ಆ ಮಗು ತಪಸ್ಸು ಕೈಗೊಂಡು ಶಿವ ಪಾರ್ವತಿಯ ಮಡಿಲು ಸೇರುವ ಕಥೆಯನ್ನು ಒಳಗೊಂಡಿದೆ. ೩ ರಿಂದ ೬ನೇ ಸಂಧಿಯ ವರೆಗೆ ವಿರಕ್ತರ ಕಥೆಯಿದೆ. ಈ ಕಾವ್ಯದಲ್ಲಿ ಅನೇಕ ವಿರಕ್ತರ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಉದಾಹರಣೆಗೆ: ಹೇಟೆಯ ಮರಳ ಟಗರ ಕಾಳಗದ ಪ್ರಭುದೇವ, ಬಾಲಲಿಂಗಣ್ಣ, ಕಾಲಿಗೆ ಸರವಿಕಟ್ಟಿ ಅದರಲ್ಲಿ ಲಿಂಗವಿರಿಸಿ ತಿರುಗಿಸಿದ ಶರಣ, ಮಿಡಿಬಲ್ಲ ಶಾಂತೇಶ, ತುಬಾಕದ ಶಾಂತಯ್ಯ, ಕುದುರೆ ಶಾಂತ, ಮಂಚದ ಶಾಂತ, ಮದ್ದಳೆ ಶಾಂತ ಇತ್ಯಾದಿ ವಿರಕ್ತರ ಪರಿಚಯವನ್ನು ಪ್ರಸ್ತಾಪನೆಯಲ್ಲಿ ಸಂಪಾದಕರು ವಿಶ್ಲೇಷಣೆ ಮಾಡಿದ್ದಾರೆ.

ಮೋದಿರುದ್ರ ವಿರಕ್ತರ ಕಾವ್ಯವನ್ನು ರಚಿಸುವಾಗ ಕನ್ನಡ ಸಾಹಿತ್ಯದಲ್ಲಿ ಬಂದ ಅನೇಕ ವಿರಕ್ತರ ಚರಿತ್ರೆಗಳನ್ನು ಗಮನಿಸಿದ್ದಾರೆ. ಹಾಗೆಯೇ ಪೂರ್ವ ಕವಿಗಳನ್ನು ಸ್ತುತಿಸಿರುವುದನ್ನು ಸಂಪಾದಕರು ಗುರುತಿಸಿದ್ದಾರೆ. ಉತ್ತಮವಾದ ಕಾವ್ಯ ಸಮೀಕ್ಷೆಯ ಭಾಗವನ್ನು ಒಳಗೊಂಡಿದೆ. ಮೊಟ್ಟಮೊದಲಿಗೆ ಗುಬ್ಬಿಯ ಮಲ್ಲಣಾರ್ಯ ವಿರಕ್ತರ ಹೆಸರನ್ನು ತಿಳಿಸಿದ್ದರೂ ಅದ್ರೀಶನ ಪ್ರೌಢರಾಯನ ಕಾವ್ಯದಲ್ಲಿ 'ವಿರತರು' ಎಂಬ ಪ್ರಯೋಗ ದೊರಕುವುದನ್ನು ಚರ್ಚಿಸಲಾಗಿದೆ. ಹೀಗೆ ನಿಜಶರಣ ತ್ರಿವಿದಿ ರಾಘವಾಂಕ ಚರಿತೆ ಸ್ವರವಿಕೋತ್ತರ ಶತಸ್ಥಲ ಸಟೀಕು, ಕರಸ್ಥಲದ ನಾಗಲಿಂಗ ಚರಿತ್ರೆ, ನಿರಂಜನ ವಂಶ ರತ್ನಾಕರ ಇಷ್ಟು ಕೃತಿಗಳಲ್ಲಿ ವಿರಕ್ತರ ಬಗ್ಗೆ ಉಲ್ಲೇಖವಿರುವುದನ್ನು ಪ್ರಸ್ತಾವನೆಯಲ್ಲಿ ಸಂಪಾದಕರು ವಿದ್ವತ್ಪೂರ್ಣವಾಗಿ ಚರ್ಚಿಸಿದ್ದಾರೆ. ಹಾಗೆಯೇ ಈ ಕಾವ್ಯವನ್ನು ಇನ್ನೂ ತೌಲನಿಕ ಅಧ್ಯಯನ ಮಾಡುವ ಸಾಧ್ಯತೆ ಇರುವುದನ್ನು ಸಂಪಾದಕರು ಸೂಚಿಸುತ್ತಾರೆ. ಅರ್ಥಪೂರ್ಣ ಪ್ರಸ್ತಾವನೆ, ಕಾವ್ಯಸಮೀಕ್ಷೆ ಕಥೆಯ ಸಾರಾಂಶದೊಂದಿಗೆ ಪರಿಷ್ಕರಿಸಿ ಪ್ರಕಟಿಸಿರುವುದು ಸಂಪಾದಕರ ಗಂಭೀರ ವಿದ್ವತ್ತಿಗೆ ಸಾಕ್ಷಿಯಾಗಿದೆ.

೩.೨.೬.೧೦. ಹವ್ಯಾಸಿ ಮಹಿಳಾ ಗ್ರಂಥಸಂಪಾದನಕಾರರು

ಕನ್ನಡ ಗ್ರಂಥಸಂಪಾದನೆ ಕ್ಷೇತ್ರದಲ್ಲಿ ಕೆಲವು ಮಹಿಳೆಯರು ವೃತ್ತಿಗಾಗಿಯೇ ಈ ಕ್ಷೇತ್ರದಲ್ಲಿ ಅನನ್ಯವಾದ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಹಾಗೇ ಹವ್ಯಾಸಕ್ಕಾಗಿಯೂ ಅನಿರೀಕ್ಷಿತವಾಗಿ

ಸಂಪಾದನ ಕಾರ್ಯದಲ್ಲಿ ತೊಡಗಿಕೊಂಡವರು ಇದ್ದಾರೆ. ಇನ್ನು ಕೆಲವರು ಆಸಕ್ತಿಗೆ ಅನುಗುಣವಾಗಿ ಹಳಗನ್ನಡ ಕೃತಿಗಳನ್ನು ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಅಂತಹ ಕೃತಿಗಳ ವೈಧಾನಿಕತೆಯನ್ನು ಈ ಕೆಳಕಂಡಂತೆ ಚರ್ಚಿಸಲಾಗಿದೆ.

'ವಿಶ್ವಕವಿ ರತ್ನಾಕರನ ಭರತೇಶ ವೈಭವ' ಈ ಕೃತಿಯನ್ನು ಶ್ರೀ ಜಿ.ಬ್ರಹ್ಮಪ್ಪ, ಶ್ರೀ ಹಂಪನಾಗರಾಜಯ್ಯ, ಶ್ರೀಮತಿ ಸಿ.ಆರ್. ಕಮಲಮ್ಮ ಅವರು ೧೯೬೭ ರಲ್ಲಿ ಸಂಪಾದಿಸಿ ಅತ್ತಿಮಬ್ಬೆ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಮೂರು ಪ್ರತಿಗಳ ಆಧಾರದಿಂದ ಪ್ರಕಟಿಸಿದ್ದಾರೆ. ಆ ಹಸ್ತಪ್ರತಿಗಳ ವಿವರ ಹೀಗಿವೆ. ಒಂದು– ಪ್ರತಿ ಸಾಲಿಗ್ರಾಮದ ಉಪದ್ರಿ ಶ್ರೀ ಎಸ್.ಬಿ. ಪಾರ್ಶ್ವನಾಥಯ್ಯ ಅವರಿಗೆ ಸೇರಿದೆ. ಎರಡು– ಸಂಪೂರ್ಣ ಜೀರ್ಣಾವ್ಯಸ್ಥೆಯಲ್ಲಿದೆ. ಇದು ತೋವಿನ ಕೆರೆಗೆ ಸೇರಿದ ಹಸ್ತಪ್ರತಿ, ಈ ಪ್ರತಿ ಕಳೆದ ಶತಮಾನದ ಕಡೆಯಲ್ಲಿ ಸಿದ್ದ ಪಡಿಸಿದ ಕಾಗದದ ಹಸ್ತಪ್ರತಿ. ಮೂರು– ಶ್ರೀ ಉಗ್ರಾಣ ಮಂಗೇಶರಾಯರ ಮುದ್ರಿತ ಪ್ರತಿಯನ್ನು ಅವಶ್ಯಕವಾದ ಕಡೆ ಬಳಸಿಕೊಳ್ಳಲಾಗಿದೆ. ಇಷ್ಟು ಆಕರಗಳ ಸಹಾಯದಿಂದ ಪರಿಷ್ಕರಿಸಿದ್ದಾರೆ.

ಸುಮಾರು ೧೨೦ ಪುಟಗಳ ಉತ್ತಮವಾದ ಕಾವ್ಯ ವಿಮರ್ಶೆ ಮಾಡಿದ್ದಾರೆ. ಹಾಗೆಯೇ ಇಲ್ಲಿ ಭರತೇಶವೈಭವದಲ್ಲಿ ಬರುವ ಸ್ತ್ರೀ ಪಾತ್ರಗಳ ವಿಶ್ಲೇಷಣೆ ಮಾಡಿದ್ದಾರೆ. ಅನುಬಂಧದಲ್ಲಿ ಗ್ರಂಥ ಋಣ, ಅವಶ್ಯವಿದ್ದ ಕಡೆ ಪಾಠಾಂತರಗಳನ್ನು ಗುರುತಿಸಿ ಶಾಸ್ತ್ರೀಯವಾಗಿ ಪರಿಷ್ಕರಿಸಿ ಪ್ರಕಟಿಸಿದ್ದಾರೆ.

'ಚಾವುಂಡರಾಯ ಪುರಾಣ' ಕೃತಿಯನ್ನು ಕಮಲಾ ಹಂಪನಾ ಮತ್ತು ಕೆ.ಆರ್. ಶೇಷಗಿರಿ ಅವರು ೧೯೮೩ರಲ್ಲಿ ಸಂಪಾದಿಸಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಿಸಿದ್ದಾರೆ. ಕ, ಖ, ಗ, ಘ, ಚ ಎಂಬ ಆಯ್ದು ಹಸ್ತಪ್ರತಿಗಳಿಂದ ಸಿದ್ದಪಡಿಸಿದ್ದಾರೆ. ಕವಿಯ ಕಾಲ ೯೩೫ ರಿಂದ ೯೯೦ರ ವರೆಗೆ ಎಂದು ಉಲ್ಲೇಖ ಮಾಡಿದ್ದಾರೆ. ಹಾಗೂ ಅಣ್ಣರಾಯ (ರಾಜ) 'ಚಾವುಂಡ' ಎಂಬ ಹೆಸರುಗಳಿಂದ ಕವಿ ಜನಪ್ರಿಯನಾಗಿದ್ದು ಅವನ ಪರಾಕ್ರಮ ಗಳಿಸಿ ಕೊಟ್ಟ ಹತ್ತಾರು ಬಿರುದು ಬಾವಲಿಗಳಿವೆ ಎಂಬುದನ್ನು ಸಂಪಾದಕರು ಗುರುತಿಸಿದ್ದಾರೆ. ಉದಾಹರಣೆಗೆ ನಾಗವರ್ಮನ ಛದೊಂಬುದಿಯಲ್ಲಿ 'ರಾಯ' ಎಂಬ ಹೆಸರಿನ ಗಿಡ್ಡ ರೂಪವೇ ರಾಯ ಎಂದಿರುವುದನ್ನು ಗಮನಿಸಿದ್ದಾರೆ. ಇದರ ಖಚಿತತೆಗಾಗಿ "ಬ್ರಹ್ಮಶಿವ ಕವಿಯ ಸಾಹಿತ್ಯ ಕೃತಿಗಳಲ್ಲದೆ ಶ್ರವಣ ಬೆಳಗೊಳದ ಶಾಸನದಲ್ಲಿ ಹಾಗೂ ಇತರೆ ಸಾಹಿತ್ಯ ಕೃತಿಗಳಲ್ಲಿ 'ರಾಯ' ಎಂಬ ಹೆಸರು ಇರುವುದನ್ನು ನೋಡಬಹುದಾಗಿದೆ ಎಂದಿದ್ದಾರೆ."[೬]

ಚಾವುಂಡರಾಯನು ಗಂಗವಾಡಿ ತೋಬತ್ತಾಱು ಸಾಸಿರ ಸೀಮೆಗೆ ಒಡೆಯರಾಗಿದ್ದ ಮೂವರು ದೊರೆಗಳಲ್ಲಿ ಯೋಧ ಮಹಾಸೇನಾನಿಯಾಗಿ ಸಂಧಿ ವಿಗ್ರಹ ಕಾರ್ಯ ನಿರ್ವಹಿಸಿದ್ದಾನೆ. ಇವನ ಜೀವನ ವೃತ್ತಾಂತದ ಬಗ್ಗೆ ಹಲವು ವಿದ್ವಾಂಸರ ಹೇಳಿಕೆಯನ್ನು ಗಮನಿಸಿದ್ದಾರೆ. ಉದಾಹರಣೆಗೆ "ಪಂಚಬಾಣ ಕವಿ ತನ್ನ ಭುಜಬಲಿ ಚರಿತ್ರೆಯೆಂಬ ಕಾವ್ಯದಲ್ಲಿ ಚಾವುಂಡರಾಯನ ತಾಯಿ ಕಳಲಾದೇವಿಯೊಂದೂ ಮಡದಿ ಅಜಿತ ದೇವಿಯೊಂದೂ ಆತನಿಗೆ ನಾಗವರ್ಮನೆಂಬ ತಮ್ಮನಿದ್ದು ಅವನನ್ನು ಯುದ್ದದಲ್ಲಿ ಹಗೆಗಳು ಕೊಂದರೆಂದೂ 'ಜೀನದೇವಣ' ನೆಂಬ ಮಗನಿದ್ದು ಆತಜಿನ

ಗೃಹಮಂ ಬೆಳ್ಗೊಳದೊಳ್+ನನಮಲ್ಲಂ ಪೊಗಳೆ ಮನ್ತ್ರಿ ಚಾಮುಣ್ಣನ ನನದ್ದನ ನೋಲವಿಂ ಮಾಸಿದಂ ಜೀನ ದೇವನ ಜಿತಸೇನ ಮುನಿಪರ ಗುಡ್ಡಂ ಎಂದು ಶ್ರವಣ ಬೆಳ್ಗೊಳ ಶಾಸನದಲ್ಲಿ ಬರುವ"೬ ಮಾಹಿತಿಯೊಂದಿಗೆ ಈ ಕೃತಿಯನ್ನು ತೌಲನಿಕ ಅಧ್ಯಯನಕ್ಕೆ ಒಳಪಡಿಸಿದ್ದಾರೆ.

ತ್ರಿಷಷ್ಠಿ ಲಕ್ಷಣ ಮಹಾಪುರಾಣದ ಓಲೆಗರಿ ಪ್ರತಿಗಳು ಅನೇಕ ಕಡೆ ದೊರೆಯುವುದರಿಂದ ಮತ್ತೇ ಪರಿಷ್ಕರಣ ಮಾಡುವ ಸಾಧ್ಯತೆ ಇದೆ ಎಂದಿದ್ದಾರೆ. ಹಾಗೆಯೇ ಚಾವುಂಡರಾಯನ ಕೃತಿ ಮಲ್ಲಿನಾಥ ಪುರಾಣ ಭಾಗದ ಕಂದ ಪದ್ಯ ಹಳೆಬೀಡಿನ ಆದೀಶ್ವರ ಬಸದಿಯ ದ್ವಾರ ವೃಂದದ ಮೇಲೆ ೧೧೩೮ರಲ್ಲಿಯೇ ಬರೆಯಲಾಗಿದೆ ಎಂಬುದನ್ನು ಗುರುತಿಸಿದ್ದಾರೆ. ಚಾವುಂಡರಾಯ ಪುರಾಣ ಕನ್ನಡದ ಎಷ್ಟೋ ಜೈನ ಪುರಾಣಗಳಿಗಿಂತ ಮೊದಲು ರಚಿತವಾಗಿದೆ ಎಂದಿದ್ದಾರೆ. ಅನುಬಂಧದಲ್ಲಿ ಜೈನ ಪಾರಿಭಾಷಿಕ ಪದಗಳನ್ನು ನೀಡಿದ್ದಾರೆ. ಹೀಗೆ ಸಂಸ್ಕೃತ ಕನ್ನಡ ಆಕರಗಳನ್ನು ಬಳಸಿಕೊಂಡು ಶಾಸ್ತ್ರೀಯವಾಗಿ ಸಂಪಾದಿಸಿ ಪ್ರಕಟಿಸಿದ್ದಾರೆ.

'ಕಿತ್ತೂರು ಸಂಸ್ಥಾನ ಸಾಹಿತ್ಯ' (ಭಾಗ-೨) ಪ್ರಸ್ತುತ ಕೃತಿಯನ್ನು ಎಂ.ಎಂ. ಕಲಬುರ್ಗಿ ಹಾಗೂ ಚನ್ನಕ್ಕ ಪಾವಟೆ, ಅನ್ನಪೂರ್ಣ ಹತ್ತಿಮತ್ತೂರ ಅವರು ಸಂಪಾದಿಸಿ ಲಿಂಗಾಯಿತ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸಿದ್ದಾರೆ. ಈ ಕೃತಿಯನ್ನು 'ಅನ್ನಪೂರ್ಣ' ಅವರು ಶ್ರೀನಾಗಶೆಟ್ಟಿ ಅವರ ಮನೆಯಲ್ಲಿ ಶ್ರೀನಾಗಶೆಟ್ಟಿ ಮಾಸ್ತರ ಹಸ್ತಕ್ಷರ ಪ್ರತಿಯನ್ನೂ ಶ್ರೀ ತಲ್ಲೂರ ರಾಯನ ಗೌಡರ ಹಸ್ತಾಕ್ಷರ ಪ್ರತಿಗಳನ್ನು ಸಂಗ್ರಹಿಸಿದ್ದಾರೆ. ಚನ್ನಕ್ಕ ಪಾವಟೆ ಅವರು ಉತ್ತಮವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ. ಹೀಗೆ ಎರಡು ಪ್ರತಿಗಳಿಂದ ಸುಮಾರು ೧೩೦ ಹಾಡುಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.

ಕಿತ್ತೂರು ಸಂಸ್ಥಾನವನ್ನು ಕುರಿತು ಸಾಹಿತ್ಯ ಎರಡು ತೆರನಾಗಿರುವುದನ್ನು ಗುರುತಿಸಿದ್ದಾರೆ. ಒಂದು ಆಸ್ಥಾನ ಕವಿಸಾಹಿತ್ಯಕ್ಕೆ ಮಾತ್ರ ಸೀಮಿತ ಆಗಿದ್ದರೆ ಮತ್ತೊಂದು ಜಾನಪದ ಸಾಹಿತ್ಯಕ್ಕೆ ಸೀಮಿತವಾಗಿದೆ. ಇದರಲ್ಲಿ ಹೆಚ್ಚು ಜನಮನ್ನಣೆ ಪಡೆದಿರುವುದು ಕವಿ ಸಾಹಿತ್ಯಕ್ಕೆ 'ಕಿತ್ತೂರು ಸಂಸ್ಥಾನದ ಆಶ್ರಯದಲ್ಲಿದ್ದ ಅಣ್ಣಿಗೆರೆ ಅಮೃತೇಶ' 'ಮುನಿಪುರದ ನೀಲಕಂಠಾರ್ಯ' 'ಮಂಚಖಂಡಿ' ಈ ಮೂರು ಜನ ಕವಿಗಳು ಇರುವುದನ್ನು ಸ್ಪಷ್ಟ ಪಡಿಸುತ್ತಾರೆ. ಹಾಗೆಯೇ ೭೯ನೇ ಹಾಡಿನಲ್ಲಿ ಬರುವ 'ಸರಸ ಕವಿಗಳೈವರು' ಎಂಬ ಮಾತು ಈ ಆಶ್ವಾಸದಲ್ಲಿ ಬರುವ ೫ ಜನ ಕವಿಗಳನ್ನು ಕುರಿತದ್ದಾಗಿದೆ. ಇನ್ನೂ ಇಬ್ಬರು ಕವಿಗಳು ಅವರ ಕೃತಿಗಳು ಅಜ್ಞಾತವಾಗಿಯೇ ಉಳಿದಿದ್ದಾರೆ ಅವರನ್ನು ಶೋಧಿಸಬೇಕಾದ ಅಗತ್ಯವನ್ನು ಸಂಶೋಧಕರು ಸೂಚಿಸಿದ್ದಾರೆ.

'ಒದುವ ಗಿರಿಯ ವಿರಚಿತ ಸಾನಂದ ಗಣೇಶ ಸಾಂಗತ್ಯ' ಕೃತಿಯನ್ನು ಡಿ. ವಿಜಯ ಹಾಗೂ ಆರ್.ಎನ್. ವಿಜಯಲಕ್ಷ್ಮಿ ಅವರು ೧೯೭೬ ರಲ್ಲಿ ಸಂಪಾದಿಸಿ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ನಿಂದ ಪ್ರಕಟಿಸಿದ್ದಾರೆ. ಸಾನಂದ ಗಣೇಶ ಸಾಂಗತ್ಯದ ಕರ್ತೃ 'ಒದುವ ಗಿರಿಯ' ಈತನ ಕಾಲ ಸುಮಾರು ೧೫೨೫ ಎಂದು ಕವಿಚರಿತ್ರೆಕಾರರು ಉಲ್ಲೇಖಿಸಿರುವುದನ್ನೇ ಸಂಪಾದಕರು

ನಿರೂಪಿಸಿದ್ದಾರೆ. ಈ ಕಾವ್ಯದಲ್ಲಿ ಆರು ಸಂಧಿಗಳು ೪೪೦ ಪದ್ಯಗಳನ್ನು ಸಾಂಗತ್ಯದಲ್ಲಿ ರಚಿಸಿರುವುದನ್ನು ಉಲ್ಲೇಖಿಸಿದ್ದಾರೆ. ಸಾನಂದ ಗಣೇಶ ಸಾಂಗತ್ಯದ ಕಥೆ ಸುಪ್ರಸಿದ್ಧವಾದದ್ದು, ಇದನ್ನು ನಂದಿ ಸನತ್ಕುಮಾರನಿಗೆ ಹೇಳಿದುದಾಗಿ ಪ್ರತೀತಿ ಇದೆ. ಪೂರ್ಣ ವಿತ್ತ ಋಷಿ ಮಹಿಮೆಯಿಂದ ಉದ್ಧರಿಸಿ ಸದ್ಗತಿಯನ್ನು ಉಂಟುಮಾಡಿರುವುದು ಇದರ ಕಥಾವಸ್ತು. ಈ ಕೃತಿಯನ್ನು ತ,ಬ,ಸ,ಕ,ಜ,ಗ,ನ,ದ,ಪ ಎಂಬಂಥ ಸಂಕೇತ ಪ್ರತಿಗಳಿಂದ ಸಂಪಾದಿಸಿದ್ದಾರೆ. ಹಾಗೆಯೇ ಅನುಬಂಧದಲ್ಲಿ ಕೆಲವು ಪ್ರತಿಗಳಲ್ಲಿ ಕಂಡುಬಂದ ಹೆಚ್ಚಿನ ಪದ್ಯಗಳು, ಸಾನಂದ ಗಣೇಶ್ವರ ರಗಳೆ ಎಂದು ಸಂಪಾದಿಸಿದ್ದಾರೆ.

'ಮದ್ದಗಿರಿ ನಂಜಪ್ಪ ವಿರಚಿತ ವರನಂದಿ ಕಲ್ಯಾಣ' ಕೃತಿಯನ್ನು ಶ್ರೀಮತಿ ಕೆ.ಎಸ್. ರತ್ನಮ್ಮ ಹಾಗೂ ಶ್ರೀಮತಿ ಸ.ನ. ಗಾಯಿತ್ರಿ ಅವರು ೧೯೯೧ರಲ್ಲಿ ಸಂವಹನ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ವರನಂದಿ ಕಲ್ಯಾಣವನ್ನು ಎರಡು ಹಸ್ತಪ್ರತಿಗಳಿಂದ ಪರಿಷ್ಕರಿಸಿದ್ದಾರೆ. ಕವಿ ಈ ಕೃತಿಯನ್ನು ಸಾಂಗತ್ಯದಲ್ಲಿ ರಚಿಸಿದ್ದಾನೆ. ಇದರಲ್ಲಿ ಒಟ್ಟು ೮೩೬ ಪದ್ಯಗಳು ಇವೆ. ಕಾವ್ಯದ ಪ್ರಾರಂಭದಲ್ಲಿ ಕವಿ, ವೀಣಾ, ಪಾಣಿ, ಸರಸ್ವತಿ ಸ್ತುತಿಯಿಂದ ಆರಂಭ ಮಾಡಿದ್ದಾರೆ. ಹಾಗೇ ದೆಹಲಿಯ ಸುಲ್ತಾನನ ಮಗಳು ವರನಂದಿ ಮೇಲು ಕೋಟೆಯ ಚೆಲುವ ನಾರಾಯಣನನ್ನು ಒಲಿದು ವಿವಾಹ ಆಗುವುದೇ ಇಲ್ಲಿಯ ಕಥೆ. ಈ ಕಾವ್ಯವನ್ನು ಪ್ರಣಯ ಹಾಗೂ ಭಕ್ತಿ ಕಾವ್ಯವೆಂದೂ ಕರೆದಿದ್ದಾರೆ. ವರನಂದಿ ಕಾವ್ಯದ ಕಥೆಯ ವಸ್ತು ವಿಚಾರವನ್ನು ಕುರಿತು ಸಂಪಾದಕರು ಕಾವ್ಯ, ಇತಿಹಾಸ, ಸ್ಥಳ ಪುರಾಣ, ಜನಪದ ಕಾವ್ಯಗಳ ಪ್ರೇರಣೆಯಿಂದ ರಚಿಸಿರಬಹುದೆಂದು ಊಹಿಸಿದ್ದಾರೆ.

ಈ ಕಾವ್ಯದ ಅನುಬಂಧದಲ್ಲಿ ಮೈಸೂರು ಅರಸರಲ್ಲಿ ಒಬ್ಬರಾದ ದೊಡ್ಡ ಕೃಷ್ಣರಾಜ ಒಡೆಯರ ಪಟ್ಟಣದ ರಾಣಿ ಚೆಲುವಾಂಬೆಯ ವರನಂದಿ ಕಲ್ಯಾಣ ಎಂಬ ಸಾಂಗತ್ಯ ಕೃತಿಯನ್ನು ರಚಿಸಿದ್ದು ಇದರಲ್ಲಿ ೭ ಸಂಧಿಗಳು ೮೮೧ ಪದ್ಯಗಳಿವೆ. ಆದ್ದರಿಂದ ಮದ್ದಗಿರಿ ನಂಜಪ್ಪನ ವರನಂದಿ ಕಲ್ಯಾಣವೂ ಹಾಗೂ ಚೆಲುವಾಂಬೆಯ ವರನಂದಿ ಕಲ್ಯಾಣ ಎರಡೂ ಕೃತಿಗಳು ಸಮಕಾಲೀನ ಅಥವಾ ತದನಂತರದಲ್ಲಿ ರಚನೆ ಆಗಿರಬಹುದು ಎಂದು ಸಂಪಾದಕರು ಅಭಿಪ್ರಾಯಪಟ್ಟಿದ್ದಾರೆ. ಏಕೆಂದರೆ ಕಥಾವಸ್ತುವಿನ ದೃಷ್ಟಿಯಿಂದ ನೋಡುವುದಾದರೆ ಎರಡು ಕೃತಿಗಳಲ್ಲಿಯೂ ದೆಹಲಿಯ ಬಾದಷಹನ ಮಗಳು ವರನಂದಿಗೂ ಮೇಲುಕೋಟೆಯ ಚೆಲುವನಾರಾಯಣ ಸ್ವಾಮಿಗೂ ನಡೆದ ವಿವಾಹ ಪ್ರಸಂಗವೇ ಮುಖ್ಯ ಸೂತ್ರವಾಗಿದೆ. ಈ ಕಾವ್ಯದಲ್ಲಿ ದೇಸಿಯ ನುಡಿಸುತ್ತದೆ ಎಂಬುದನ್ನು ಸಂಪಾದಕರು ಗುರುತಿಸಿದ್ದಾರೆ.

'ಮುಮ್ಮಡಿ ಕೃಷ್ಣರಾಜ ವಿರಚಿತ ಎಡತೊರೆ ಅರ್ಕ ಪುಷ್ಕರಿಣೀ ಮಹಾತ್ಮ್ಯೆ' ಕೃತಿಯನ್ನು ಟಿ.ಆರ್. ಶಾಂತ ಅವರು ೧೯೭೯ ರಲ್ಲಿ ಸಂಪಾದಿಸಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಿಸಿದ್ದಾರೆ. ಎರಡು ಹಸ್ತಪ್ರತಿಗಳನ್ನು ಬಳಸಿಕೊಂಡು ಸಂಪಾದಿಸಿದ್ದಾರೆ. ಓಲೆಗರಿಯ ಪ್ರತಿಗೆ ಕ ಎಂಬ ಸಂಕೇತ ನೀಡಿದ್ದಾರೆ. ಕಾಗದದ ಪ್ರತಿಗೆ ಕ್ರಮವಾಗಿ ಖ,ಗ ಎಂದು ಸಂಕೇತ ನೀಡಿದ್ದಾರೆ. ಈ ಕೃತಿಯ ಕರ್ತೃ

'ಮುಮ್ಮಡಿ ಕೃಷ್ಣರಾಜ ಒಡೆಯರು' ಪುರಾಣಗಳನ್ನು ಆಧರಿಸಿ ಬರೆದಿದ್ದಾರೆ. ಮುಮ್ಮಡಿ ಅವರ ಮಹಾತ್ಮ್ಯೆಯ ಪದ್ಮ ಪುರಾಣಕ್ಕೆ ಸಂಬಂಧಿಸಿದೆ ಎಂದು ಸಂಪಾದಕರು ಗುರುತಿಸಿದ್ದಾರೆ. ಅರ್ಕೇಶ್ವರನ ಸ್ಥಳ ಮಹಾತ್ಮ್ಯೆಯ ಕುರಿತು ಶ್ರೀ ಮುಮ್ಮಡಿ ಅವರು ಯಡತೊರೆ ಅರ್ಕ ಪುಷ್ಕರಿಣಿ ಮಹಾತ್ಮ್ಯೆಯನ್ನು ರಚಿಸಿರುವುದನ್ನು ಸಂಪಾದಕರು ಗುರುತಿಸಿದ್ದಾರೆ. ಹೊಸಗನ್ನಡ ಗದ್ಯಕ್ಕೆ ನಾಂದಿ ಹಾಡಿದ ಮೈಸೂರು ಅರಸರಲ್ಲಿ ಮುಮ್ಮಡಿ ಅವರು ಗದ್ಯ ಸಾಹಿತ್ಯ ಸಾಮ್ರಾಟರೆಂಬ ಬಿರುದಿಗೆ ಪಾತ್ರರಾಗಿದ್ದಾರೆ. ಜನರಿಗಾಗಿ ಜನರಿಗೋಸ್ಕರ ಈ ಕೃತಿಗಳನ್ನು ರಚಿಸಿದ್ದಾರೆ. ಜನರಲ್ಲಿ ಹಿಂದೂ ಸಂಸ್ಕೃತಿಯನ್ನು ಜಾಗೃತಗೊಳಿಸಲು ಪುಣ್ಯಕ್ಷೇತ್ರಗಳ ಮಹಾತ್ಮ್ಯೆಗಳ ಪುರಾಣ ಇತಿಹಾಸಗಳ ವೈದಿಕ ಸಾಹಿತ್ಯಗಳನ್ನು ವಸ್ತು ಮಾಧ್ಯಮವಾಗಿ ಬಳಸಿಕೊಂಡು ಸಾಮಾನ್ಯರಿಗೆ ಗ್ರಾಹ್ಯವಾಗುವಂತೆ ಕೃತಿ ರಚಿಸಿದ್ದಾರೆ.

ಕರ್ಮಣಿ ಪ್ರಯೋಗಗಳ ಬಳಕೆ ಇವರ ಗದ್ಯದ ಮತ್ತೊಂದು ಲಕ್ಷಣವಾಗಿರುವುದನ್ನು ಸಂಪಾದಕರು ಗುರುತಿಸಿದ್ದಾರೆ. "ನನ್ನಿಂದ ಇದೇನು ಪಾಪವು ಮಾಡಲ್ಪಟ್ಟಿತು ಶಂಕರನಿಗೆ ಹೇಳಲ್ಪಟ್ಟಿದ್ದನ್ನು ಹೇಳುವೆನು" ಇತ್ಯಾದಿ.[೨೮] ಅನುಬಂಧದಲ್ಲಿ ಒಪ್ಪೋಲೆಯನ್ನು ಗುರುತಿಸುವುದರ ಮೂಲಕ ಶಾಸ್ತ್ರೀಯವಾಗಿ ಸಂಪಾದಿಸಿ ಪ್ರಕಟಿಸಿದ್ದಾರೆ.

ಹೀಗೆ ಹವ್ಯಾಸಕ್ಕಾಗಿ ಹಾಗೂ ಆಸಕ್ತಿಯಿಂದ ಕನ್ನಡ ಗ್ರಂಥಸಂಪಾದನ ಕ್ಷೇತ್ರದಲ್ಲಿ ತೊಡಗಿಕೊಂಡ ಮಹಿಳಾ ವಿದ್ವಾಂಸರು ಸಂಯುಕ್ತವಾಗಿ ಮತ್ತು ವೈಯಕ್ತಿಕವಾಗಿ ಸಂಪಾದನೆ ಮಾಡಿರುವುದನ್ನು ಕಾಣಬಹುದು. ಹಳೆಗನ್ನಡ ಸಾಹಿತ್ಯ ಲಿಪಿ ಭಾಷಾಜ್ಞಾನವನ್ನು ಹೊಂದಿದ್ದರಿಂದ ಮೌಲಿಕವಾದ ಕೃತಿಗಳನ್ನು ಆಯ್ಕೆಮಾಡಿಕೊಂಡು ಶಾಸ್ತ್ರೀಯವಾಗಿ ಸಂಪಾದಿಸಿ ಪ್ರಕಟಿಸಿದ ಕೀರ್ತಿ ಈ ಮಹಿಳಾ ವಿದ್ವಾಂಸರಿಗೆ ಸಲ್ಲುತ್ತದೆ. ಸೃಜನಶೀಲ ಬರವಣಿಗೆಯ ಜೊತೆ ಜೊತೆಯಲ್ಲಿಯೇ ಈ ಕಾರ್ಯವನ್ನು ಕೈಗೊಂಡಿರುವುದು ಇಲ್ಲಿನ ವಿಶೇಷವಾಗಿದೆ.

ಆಧುನಿಕ ಪೂರ್ವದಲ್ಲಿ ಹಸ್ತಪ್ರತಿ ಮತ್ತು ಗ್ರಂಥಸಂಪಾದನ ಚಟುವಟಿಕೆಯಲ್ಲಿ ತೊಡಗಿಕೊಂಡ ಪ್ರತಿಯೊಬ್ಬ ಮಹಿಳೆಯೂ ಬಹುಶ್ರುತ ವಿದ್ವತ್ತನ್ನು ಹೊಂದಿದ್ದನ್ನು ಇಲ್ಲಿ ಗುರುತಿಸಬಹುದು. ಪುರುಷ ನಿರ್ಮಿತ ಜಾಡಿನಲ್ಲೆ ನಡೆದರೂ ಕೆಲವೊಂದು ನಿರ್ದಿಷ್ಟ ಸಂದರ್ಭದಲ್ಲಿ ತಮ್ಮ ವೈಯಕ್ತಿಕ ಪ್ರತಿಭೆ ಹಾಗೂ ವಿದ್ವತ್ ಸ್ವಾತಂತ್ರ್ಯವನ್ನು ಪ್ರಕಟಿಸಿರುವುದು ಎದ್ದು ಕಾಣುತ್ತದೆ. ಪುರುಷ ನಿರ್ಮಿತ ಪಠ್ಯಗಳನ್ನು ಮರು ಪರಿಷ್ಕರಣೆಗೆ ಒಳಪಡಿಸುವ ಕ್ರಮದಲ್ಲಿಯೇ ಅವರ ಇಂಥ ಸ್ವಾತಂತ್ರ್ಯವನ್ನು ಕಾಣಬಹುದಾಗಿದೆ. ಮಹಿಳೆಯರ ಬದುಕನ್ನು ಪುರುಷನಿಷ್ಠ ನೆಲೆಯಿಂದ ನೋಡುವುದರಿಂದಾಗಿ ಗ್ರಂಥಸಂಪಾದನೆಯಲ್ಲಿನ ಬಹಳಷ್ಟು ವಿಚಾರಗಳು ಪುರುಷರ ಪರವಾಗಿಯೇ ಕಾಣುತ್ತವೆ. ಆದರೆ ಲಿಪಿಕಾರ್ತಿಯರು, ಪೋಷಕರು, ಸಂಪಾದನಕಾರ್ತಿಯರು ತಮ್ಮ ಎದುರಿನ ಪಠ್ಯದೊಂದಿಗೆ ಸಾಂಪ್ರದಾಯಿಕ ಸಂಬಂಧವನ್ನು ಹೊಂದಿದ್ದರೂ ಅದನ್ನು ಪರಿಷ್ಕರಿಸುವಾಗ ವ್ಯಾಖ್ಯಾನಿಸುವಾಗ ಪುರುಷನಿಷ್ಠ ವ್ಯಕ್ತಿಸ್ವಾಮ್ಯ ಮಾದರಿಗಳಿಗಿಂತ ಭಿನ್ನವಾಗಿ ಸಾಮಾಜಿಕ ಹಾಗೂ ಸಾಂಸ್ಕೃತಿಕವಾದ ಪ್ರಜಾಪ್ರಭುತ್ವದ ಮಾದರಿಗಳನ್ನು ಅನುಸರಿಸುತ್ತಾರೆ.

ಇಲ್ಲಿ ಚರ್ಚಿಸಿದ ಮಹಿಳಾ ಸಂಪಾದನಕಾರರ ವಿಶಿಷ್ಟತೆ ಎಂದರೆ ಬಹುಮುಖ ವಿದ್ವತ್ತು. ಸಾಹಿತ್ಯ, ಜಾನಪದ, ತತ್ವಜ್ಞಾನ, ಅದನ್ನು ಮೀರಿದ ಲೋಕಾನುಭವ ಹೊಂದಿರುವುದು. ಈ ಅನುಭವ ಪಠ್ಯವೊಂದನ್ನು ಸ್ಥಿರ ಅಥವಾ ಪ್ರಮಾಣೀಕೃತ ಧೋರಣೆಯಲ್ಲಿ ನೋಡದೆ ಒಂದು ಸಮುದಾಯದ ಒಳತುಡಿತದೊಂದಿಗೆ ನೋಡುತ್ತಾರೆ. ವಿಜಯಕುಮಾರಿ ಚರಿತೆ, ಹೇರೂರು ಹೆಣ್ಣಿನ ಸಾಂಗತ್ಯದಲ್ಲಿ ಭಾನುಮತಿಯವರು ಸೋದರ ಸಂಬಂಧ ಹಾಗೂ ಅಂತರ್‌ಜಾತಿ ವಿವಾಹವನ್ನು ಹೆಣ್ಣೆ ಧಿಕ್ಕರಿಸುವ ದಿಟ್ಟ ಮಾದರಿಯೊಂದನ್ನು ಎತ್ತಿ ತೋರಿಸುತ್ತಾರೆ. ಇಂಥ ಹಲವು ಪ್ರಸಂಗಗಳನ್ನು ಇತರರಲ್ಲಿಯೂ ಕಾಣಬಹುದು.

ಅಡಿಟಿಪ್ಪಣಿ

೧. ಡಾ.ಡಿ.ಎಲ್.ನರಸಿಂಹಾಚಾರ್, ಕನ್ನಡ ಗ್ರಂಥಸಂಪಾದನೆ, ಪು.೩, ೨೦೧೫
೨. ಅದೇ, ಪು.೧, ೨೦೧೫
೩. ಅದೇ, ಪು.೩, ೨೦೧೫
೪. ಡಾ. ಚೆನ್ನಕ್ಕ ಪಾವಟೆ, ಸಂಸ್ಕೃತಿ ಸಂಶೋಧನೆ, ಪು.೭೬, ೧೯೯೫
೫. ಡಾ.ವೈ.ಸಿ. ಭಾನುಮತಿ, ಗ್ರಂಥಸಂಪಾದನೆ ವಿವಕ್ಷೆ, ಪು.೯, ೨೦೦೩
೬. ಅದೇ, ಪು.೯, ೨೦೦೩
೭. ಡಾ.ವೈ.ಸಿ. ಭಾನುಮತಿ ಗ್ರಂಥಸಂಪಾದನ ಸಂಕಥನ, ಪು.೩, ೨೦೧೨
೮. ಅದೇ, ಪು.೪೭೯, ೨೦೧೩
೯. ಡಾ.ಎಫ್.ಟಿ. ಹಳ್ಳಿಕೇರಿ ಕಂಠ ಪತ್ರ–೩, ಪು.೬೧, ೨೦೧೪
೧೦. ಡಾ.ವೈ.ಸಿ. ಭಾನುಮತಿ ಗ್ರಂಥಸಂಪಾದನ ಸಂಕಥನ ಪು.೭, ೨೦೧೩
೧೧. ಅದೇ, ಪು.೪೭೯, ೨೦೧೩
೧೨. ಅದೇ, ಪು.೪೯೯, ೨೦೧೩
೧೩. ಅದೇ, ಪು.೪೮೦, ೨೦೧೩
೧೪. ಅದೇ, ಪು.೪೮೦, ೨೦೧೩
೧೫. ಅದೇ, ಪು.೪೮೦, ೨೦೧೩
೧೬. ಡಾ.ಎಫ್.ಟಿ. ಹಳ್ಳಿಕೇರಿ, ಕಂಠಪತ್ರ ೩, ಪು.೬೧, ೨೦೧೪
೧೭. ಅದೇ, ಪು.೬೨, ೨೦೧೪
೧೮. ಅದೇ, ಪು.೬೫, ೨೦೧೪
೧೯. ಅದೇ, ಪು.೬೫, ೨೦೧೪
೨೦. ಅದೇ, ಪು.೬೪, ೨೦೧೪

೨೧. ಅದೇ, ಪು.೬೩, ೨೦೧೪

೨೨. ಅದೇ, ಪು.೬೨, ೨೦೧೪

೨೩. ಅದೇ, ಪು.೬೬, ೨೦೧೪

೨೪. ಎಫ್.ಟಿ. ಹಳಿಕೇರಿ, ಹಸ್ತಪ್ರತಿ ಅಧ್ಯಯನ ಸಂಪುಟ.೩ ಸಂಚಿಕೆ.೨, ಮಹಿಳಾ ಹಸ್ತಪ್ರತಿ ಲಿಪಿಕಾರರು, ಜೆ. ರೋಜಾ, ಪು.೨೨, ೨೦೦೬

೨೫. ಅದೇ, ಪು.೨೨, ೨೦೦೬

೨೬. ಡಾ.ಸಿ. ನಾಗಭೂಷಣ, ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ, ಪು.೧೦೭, ೧೯೯೯

೨೭. ಉಧೃತ ಸರ್ವಭಾಷಾಮಯೀ ಗ್ರಂಥ ಸಿರಿಭೂವಲಯದ ಅಂಕ ಚಕ್ರಗಳ ಕಂಪ್ಯೂಟರ್ ಅಧ್ಯಯನ, ಹೆಚ್.ಎಂ. ಸದಾನಂದ ಕನ್ನಡ ವಿವಿಗೆ ಡಿ.ಲಿಟ್. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ ೨೦೦೬

೨೮. ಡಾ.ವೈ.ಸಿ. ಭಾನುಮತಿ, ಗ್ರಂಥಸಂಪಾದನ ಸಂಕಥನ, ಪು.೫೦, ೨೦೧೩

೨೯. ಅದೇ, ಪು.೨೮, ೨೦೧೩

೩೦. ಅದೇ, ಪು.೨೮, ೨೦೧೩

೩೧. ಅದೇ, ಪು.೬೮, ೨೦೧೩

೩೨. ಅದೇ, ಪು.೬೮, ೨೦೧೩

೩೩. ಅದೇ, ಪು.೪೭೯, ೨೦೧೩

೩೪. ಅದೇ, ಪು.೪೭೯, ೨೦೧೩

೩೫. ಡಾ.ಸಿ. ನಾಗಭೂಷಣ, ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ, ಪು.೧೦೮, ೧೯೯೯

೩೬. ಅದೇ, ಪು.೧೦೮, ೧೯೯೯

೩೭. ಅದೇ, ಪು.೧೦೮, ೧೯೯೯

೩೮. ಅದೇ, ಪು.೧೦೯, ೧೯೯೯

೩೯. ಅದೇ, ಪು.೧೧೦, ೧೯೯೯

೪೦. ಅದೇ, ಪು.೧೧೧, ೧೯೯೯

೪೧. ಡಾ.ಎಫ್.ಟಿ. ಹಳ್ಳಿಕೇರಿ, ಹಸ್ತಪ್ರತಿ ಅಧ್ಯಯನ ಸಂಪುಟ ೩ ಸಂಚಿಕೆ ೨, ಪಿ. ರೋಜಾ, ಮಹಿಳಾ ಹಸ್ತಪ್ರತಿ ಲಿಪಿಕಾರರು, ಪು.೨೨, ೨೦೦೬

೪೨. ಅದೇ, ಪು.೩೩, ೩೦೦೬

೪೩. ಅದೇ, ಪು.೨೨, ೨೦೦೬

೪೪. ಅದೇ, ಪು.೨೩, ೨೦೦೬

೪೫. ಅದೇ, ಪು.೨೩, ೨೦೦೬

೪೬. ಅದೇ, ಪು.೨೩, ೨೦೦೬

೪೭. ಡಾ.ವೈ.ಸಿ. ಭಾನುಮತಿ, ದಶಾವತಾರ ಚರಿತೆ, ಪು.೧೮, ೧೯೭೮

೪೮. ಡಾ.ವೈ.ಸಿ. ಭಾನುಮತಿ, ಸರಜಾ ಹನುಮೇಂದ್ರ ಯಶೋವಿಲಾಸಂ, ಪು.xxxi

೪೯. ಡಾ.ವೈ.ಸಿ. ಭಾನುಮತಿ, ಭೈರವೇಶ್ವರ ಪುರಾಣ, ಪು.೧೬, ೨೦೦೭

೫೦. ಡಾ.ವೈ.ಸಿ. ಭಾನುಮತಿ, ಪುರಾತನರ ಚರಿತೆ, ಪು.೨೮, ೧೯೭೬

೫೧. ಅದೇ, ಪು.೩೩, ೧೯೭೬

೫೨. ಡಾ.ವೈ.ಸಿ. ಭಾನುಮತಿ, ಅನಂತನಾಥ ಚರಿತೆ, ಪು.೪೪, ೧೯೮೧

೫೩. ಡಾ.ವೈ.ಸಿ. ಭಾನುಮತಿ, ವಿಜಯಕುಮಾರಿ ಚರಿತೆ, ಪು.೫೦, ೧೯೮೧

೫೪. ಡಾ.ವೈ.ಸಿ. ಭಾನುಮತಿ, ಸುಕುಮಾರ ಚರಿತೆ, ಪು.೩೨, ೧೯೮೪

೫೫. ಡಾ.ವೈ.ಸಿ. ಭಾನುಮತಿ, ಸಹ್ಯಾದ್ರಿಖಂಡ, ಪು.೧೫೯, ೧೯೮೪

೫೬. ಡಾ.ವೈ.ಸಿ. ಭಾನುಮತಿ, ಏಕೋರಾಮೇಶ್ವರ ಪುರಾಣ, ಪು.೪೭, ೧೯೮೫

೫೭. ಡಾ.ವೈ.ಸಿ. ಭಾನುಮತಿ. ಬತ್ತೀಸಪುತ್ಥಳಿ ಕಥೆ, ವ೧೧೫, ೧೯೮೯

೫೮. ಡಾ.ವೈ.ಸಿ. ಭಾನುಮತಿ ಸೌಂದರ್ಯ ಕಾವ್ಯ, ಪು.೨೬, ೧೯೯೬

೫೯. ಡಾ.ವೈ.ಸಿ. ಭಾನುಮತಿ, ಮಹಾದೇವಕವಿಯ ಸಾಂಗತ್ಯ ಕೃತಿಗಳು, ಪು.೫, ೨೦೦೪

೬೦. ಅದೇ, ಪು.೬, ೨೦೦೪

೬೧. ಪ್ರೊ.ಕೆ.ಎನ್. ಗಂಗಾನಾಯಕ್, ಡಾ.ವೈ.ಸಿ. ಭಾನುಮತಿ, ಮಡಿವಾಳೇಶ್ವರ ಕಾವ್ಯ, ಪು.೨೧, ೨೦೧೧

೬೨. ಡಾ.ವೈ.ಸಿ. ಭಾನುಮತಿ, ಸಿದ್ಧಲಿಂಗ ಕಾವ್ಯ ಮತ್ತು ಮಹಾಕೂಟ ಮಾಹಾತ್ಮ್ಯೆ, ಪು.೨೯, ೨೦೦೬

೬೩. ಡಾ.ವೈ.ಸಿ ಭಾನುಮತಿ, ಸ್ವರವಚನ ಸಂಪುಟ.೪, ಪು.೧೭, ೧೯೯೫

೬೪. ಡಾ. ವೈ.ಸಿ. ಭಾನುಮತಿ, ಗ್ರಂಥಸಂಪಾದನೆ ಕೆಲವು ಅಧ್ಯಯನ, ಪು.೨, ೧೯೯೭

೬೫. ಅದೇ, ಪು.೮೫, ೧೯೯೪

೬೬. ಡಾ.ಎಚ್.ಎಸ್. ಶ್ರೀಮತಿ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪು.೧೭೧, ೨೦೦೬

೬೭. ಡಾ.ಟಿ.ಎನ್. ನಾಗರತ್ನ, ಹರಪನಹಳ್ಳಿ ಭೀಮವ್ವನ ಹಾಡುಗಳು ಪು.೧೦, ೧೯೮೪

೬೮. ಅದೇ, ಪು.೨೪, ೧೯೮೪

೬೯. ಡಾ.ಟಿ.ಎನ್. ನಾಗರತ್ನ ಜಗನ್ನಾಥದಾಸರ ಕೃತಿಗಳು, ಪು.೩೦, ೧೯೮೭

೭೦. ಸಮಗ್ರದಾಸ ಸಾಹಿತ್ಯ ೧೬, ಉರಗಾದ್ರಿವಾಸವಿಠಲದಾಸರು ಮತ್ತು ಇತರರ ಕೀರ್ತನೆಗಳು, ಟಿ.ಎನ್. ನಾಗರತ್ನ, ಪು.೩೫೫, ೨೦೦೩

೭೧. ಅದೇ, ಪು.೩೩೬, ೨೦೦೩

೭೨. ಡಾ. ಟಿ.ಎನ್. ನಾಗರತ್ನ, ಶ್ರೀ ಕನಕದಾಸರ ಕೀರ್ತನೆಗಳು, ಪು.೭೨, ೨೦೧೪

೭೩. ಟಿ.ಕೆ. ಇಂದೂಬಾಯಿ, ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳು, ಪು.೧೬, ೧೯೮೭

೭೪. ಡಾ. ನಗುವನಹಳ್ಳಿ ಪಿ.ರತ್ನ, ಚತುರಾಚಾರ್ಯ ಪ್ರಬಂಧ, ಪು.೩೦, ೧೯೮೯

೭೫. ಅದೇ, ಪು.೫೩, ೧೯೮೯

೭೬. ಕಮಲಾ ಹಂಪನಾ, ಕೆ.ಆರ್. ಶೇಷಗಿರಿ, ಚಾವುಂಡರಾಯ ಪುರಾಣಂಮ ಪು.೧೯, ೧೯೮೩

೭೭. ಅದೇ, ಪು.೩೪, ೧೯೮೩

೭೮. ಟಿ.ಆರ್. ಶಾಂತ, ಎಡತೊರೆ ಅರ್ಕ ಪುಷ್ಕರಣೀ ಮಹಾತ್ಮ್ಯೆ, ಪು.೧೦, ೧೯೭೯

ಅಧ್ಯಾಯ ನಾಲ್ಕು

ಸಮಕಾಲೀನ ಸಂದರ್ಭ ಮತ್ತು ಮಹಿಳಾ ಸಂಪಾದನಾಕಾರರು

ಅಧ್ಯಾಯ ನಾಲ್ಕು

ಸಮಕಾಲೀನ ಸಂದರ್ಭ ಮತ್ತು ಮಹಿಳಾ ಸಂಪಾದನಾಕಾರರು

ಕನ್ನಡ ಗ್ರಂಥಸಂಪಾದನೆಯನ್ನು ಸ್ಥಾಪಿತ ಅಥವಾ ರೂಢಿಗತ ಅಧ್ಯಯನವನ್ನಾಗಿ ನೋಡುತ್ತ ಬರಲಾಗಿದೆ. ಮೂಲದ ಹೆಸರಿನಲ್ಲಿ ಅದನ್ನು ಕಾಲ ಹಾಗೂ ಪಾಂಡಿತ್ಯದ ಹಂಗುಗಳಿಗೆ ಸೀಮಿತಗೊಳಿಸಲಾಗಿದೆ. ಆದರೆ ಸಮಕಾಲೀನ ಸಂದರ್ಭದಲ್ಲಿ ನಡೆಯುತ್ತಿರುವ ಜನಪ್ರಿಯ ಸಂಪಾದನೆಗಳು, ಸಂಗ್ರಹ, ಸಂಕಲನಗಳು 'ಗ್ರಂಥಸಂಪಾದನಶಾಸ್ತ್ರದ' ಪರೀಧಿಯಿಂದ ಹೊರಬಂದು ಅದು ಸಾಮಾನ್ಯ ಕ್ಷೇತ್ರವಾಗಿ ಪರಿಗಣಿತವಾಗುವಂತೆ ಮಾಡಿವೆ. ಕಾಲದ ಅಗತ್ಯಗಳು ಗ್ರಂಥಸಂಪಾದನೆಯ ಶಾಸ್ತ್ರೀಯತೆಯ ಒಡಲೊಳಗೆ ಮಾಡಿದ ಈ ಕಂಪನಗಳು ಹಲವಾರು ಹೊಸ ಸಾಧ್ಯತೆಗಳನ್ನು ತೆರದಿಟ್ಟವೆ. ಹೀಗಾಗಿ ಸಮಕಾಲೀನ ಸಂದರ್ಭದಲ್ಲಿನ ಗ್ರಂಥಸಂಪಾದನೆ ವೈಧಾನಿಕತೆ ಜಾತಿ, ಲಿಂಗ, ಪಾಂಡಿತ್ಯದ ಸೀಮಿತ ಜಗತ್ತನ್ನು ವಿಸರ್ಜಿಸಿ ವಿಭಿನ್ನ ರೀತಿಯಾಗಿ ವಿಭಿನ್ನ ಸಂವೇದನೆಯೊಂದಿಗೆ ಬೆಳೆಯುತ್ತಿದೆ.

ನಿರ್ದಿಷ್ಟವಾಗಿದ್ದ ಗ್ರಂಥಸಂಪಾದನೆ ಶಿಸ್ತು ಏಕರೂಪವಾಗಿ ಉಳಿದಿಲ್ಲ. ಸಮಾಜದ ಪ್ರವೃತ್ತಿಗಳು ಬದಲಾದಂತೆ ಅಧ್ಯಯನದ ಪ್ರವೃತ್ತಿಯಲ್ಲೂ ಬದಲಾವಣೆ ಆಗುತ್ತವೆ. ಡಿ.ಎಲ್.ನರಸಿಂಹಾಚಾರ್ಯರು ರೂಪಿಸಿದ ವೈಧಾನಿಕತೆಗಳೇ ಹಲವಾರು ವರ್ಷ ಸಂಪಾದನ ಕ್ಷೇತ್ರವನ್ನು ಆಳಿದವು. ಮಾರ್ಗಸಾಹಿತ್ಯವನ್ನು ಕೇಂದ್ರವಾಗಿ ರೂಪಿಸಿಕೊಂಡ ವಿಧಾನಗಳು ದೇಶಿಕಾವ್ಯ ಛಂದಸ್ಸಿಗೆ ಹೊಂದಲಾರವು. ಶುದ್ಧವು ಸಮಗ್ರವೂ ಆದ ಕೆಲವೇ ಹಸ್ತಪ್ರತಿಗಳನ್ನಿಟ್ಟುಕೊಂಡು ಸಂಪಾದಿಸುವ ವಿನೂತನ ವಿಧಾನ ಚಾಲ್ತಿ ಪಡೆದಿದೆ. ಡಿ.ಎಲ್.ಎನ್. ಅಂಥವರೆ ಪಾಠಾಂತರ ಎಂದರೆ ಬರಿ ಎರರ್ಸ್ ಅಲ್ಲ ಕಂಡ್ರಯ್ಯ ಅದು ಕಾವ್ಯಕ್ಕೆ ಸಹೃದಯ ಮಾಡಿದ ರಿಯಕ್ಷನ್ ಹಾಗಾಗಿ ಕವಿ ಪಾಠದೊಂದಿಗೆ ಲಿಪಿಕಾರನ ಪಠ್ಯವನ್ನು ಪರಿಗಣಿಸಬೇಕು ಎಂದು ಹೇಳುವಲ್ಲಿ ಗ್ರಂಥಸಂಪಾದನೆಯ ಹೊಸ ಆಲೋಚನೆಗಳು ಕಾಣುತ್ತವೆ. ವಿಜ್ಞಾನ ತಂತ್ರಜ್ಞಾನ ಕೂಡ ಇಂದು ಈ ಕ್ಷೇತ್ರದಲ್ಲಿ ಪ್ರವೇಶ ಪಡೆದು ಕ್ಷೇತ್ರವನ್ನು ಜಾತಿ, ಲಿಂಗ, ವರ್ಣಗಳ ಹಂಗಿನಿಂದ ಹೊರತಂದಿದೆ. ಪಾಠಾಂತರಗಳಿಲ್ಲದೆ ಪ್ರಕಟಗೊಂಡ ವಚನ ಹಾಗೂ ದಾಸಸಾಹಿತ್ಯದ ಜನಪ್ರಿಯ ಆವೃತ್ತಿಗಳು ಹೊಸ ಮಾದರಿಯ ಸಂಪಾದನೆಗೆ ಕಾರಣವಾಗಿವೆ. ಈ ವಿಧಾನಗಳು ಇಂದು ಗ್ರಂಥಸಂಪಾದನ ಕ್ಷೇತ್ರವನ್ನು ಹೆಚ್ಚು ಮುಕ್ತಗೊಳಿಸಿವೆ.

ಕನ್ನಡ ಗ್ರಂಥಸಂಪಾದನ ಕ್ಷೇತ್ರಕ್ಕೆ ಮಹಿಳೆಯರ ಕೊಡುಗೆ ಅಪರೂಪದ್ದಾದರೂ ಅಧ್ಯಯನದ ದೃಷ್ಟಿಯಿಂದ ಅದಕ್ಕೆ ಅತ್ಯಮೂಲ್ಯತೆಯಿದೆ. ಪ್ರಾಚೀನ ಕೃತಿಗಳನ್ನು ಸಂಪಾದನೆ, ಪರಿಷ್ಕರಣೆ, ಮರು ಪರಿಷ್ಕರಣೆಯನ್ನು ಮಾಡುವುದರ ಮೂಲಕ ಮಹಿಳೆಯರು ತಮ್ಮ ಸಾರ್ಥಕ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಈ ಕ್ಷೇತ್ರದಲ್ಲಿ ವರ್ಷಗಳು ಕಳೆದಂತೆ ಹಿರಿಯ ವಿದ್ವಾಂಸರ ಜೊತೆ ಜೊತೆಯಲ್ಲಿ ಯುವ ಪೀಳಿಗೆಯ ವಿದ್ವಾಂಸರು ಸೇರಿಕೊಂಡು ಪ್ರಾಚೀನ ಕೃತಿಗಳನ್ನು ಸಂಪಾದಿಸಿ ಪ್ರಕಟಣೆಗೆ ತರುತ್ತಿರುವುದು ವಿಶೇಷವಾದ ಸಂಗತಿ ಆಗಿದೆ. ಹಾಗೆಯೇ ಇತರ ಕೃತಿಗಳ ಸಂಖ್ಯೆಗೆ ಹೋಲಿಸಿದರೆ ಬರುತ್ತಿರುವ ಸಂಪಾದಿತ ಕೃತಿಗಳ ಸಂಖ್ಯೆ ತೀರ ಕಡಿಮೆ. ಆದರೂ ಇತ್ತೀಚಿನ ಸಂದರ್ಭದಲ್ಲಿ ಸಂಪಾದನೆ, ಸಂಪಾದಕ ಎಂಬ ಉಪಾದೇಯ ವ್ಯಾಪಕ ಅರ್ಥದಲ್ಲಿ ಬಳಕೆ ಆಗುತ್ತಿದೆ. ಸಮಕಾಲೀನ ಸಂದರ್ಭದಲ್ಲಿ ವಿಮರ್ಶಾ ಲೇಖನಗಳ ಸಂಗ್ರಹ, ಕವನ ಸಂಕಲನಗಳ ಸಂಗ್ರಹ, ಕಥಾಸಾಹಿತ್ಯ ಸಂಗ್ರಹ, ಅಭಿನಂದನ ಗ್ರಂಥಗಳು ಹಾಗೂ ಸಮಗ್ರ ಸಾಹಿತ್ಯ ಸಂಪುಟಗಳು, ಎಲ್ಲಾ ಬಗೆಯ ಸಾಹಿತ್ಯ ರಚನೆಗಳನ್ನು ಏಕಕಾಲಕ್ಕೆ ಆಯ್ದು ಸಂಗ್ರಹಿಸಿ ಪ್ರಕಟಿಸುವವರನ್ನು ಸಂಪಾದಕ, ಸಂಪಾದನೆ ಎಂಬ ಅರ್ಥದಲ್ಲಿ ಕರೆಯಲಾಗುತ್ತಿದೆ.

ಹೀಗೆ ಪ್ರಾಚೀನ ಕಾಲಕ್ಕಿಂತ ಆಧುನಿಕ ಕಾಲದಲ್ಲಿ ಅನೇಕ ಮಹಿಳೆಯರು ಮತ್ತು ಪುರುಷರು ವಿವಿಧ ರೀತಿಯ ಸಾಹಿತ್ಯದ ಪ್ರಕಾರಗಳ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ ಉಲ್ಲೇಖಗಳು ಸಿಗುತ್ತವೆ. ಆದರೆ ಗ್ರಂಥ ಸಂಪಾದನ ಶಾಸ್ತ್ರದ ಪ್ರಕಾರ ಕವಿಯ ಪಾಠಕ್ಕೆ ಹತ್ತಿರವಾದ ಪಾಠವನ್ನು ಅನೇಕ ಹಸ್ತಪ್ರತಿ, ಕೋರಿಕಾಗದ, ಕಡತ ಓಲೆಗಳ ಸಹಾಯದಿಂದ ಪರಿಷ್ಕರಿಸಿ ವಿಮರ್ಶಿಸುವ ಮೂಲಕ ಕವಿ ಪಾಠಕ್ಕೆ ಹತ್ತಿರವಾದ ಪಾಠವನ್ನು ತಂದು ಕೊಡುವವರೇ 'ಸಂಪಾದಕ' ಹಾಗೂ ಪ್ರಾಚೀನ ಕವಿಗಳ ಕೃತಿಗಳನ್ನು ಸಂಗ್ರಹಿಸಿ ಸಂಪಾದಿಸಬಲ್ಲವರೇ ಗ್ರಂಥ ಸಂಪಾದಕರು ಎಂಬುದು ಶಾಸ್ತ್ರದ ವಿಶ್ಲೇಷಣೆ. ಇತ್ತೀಚಿನ ಸಂದರ್ಭದಲ್ಲಿ ಈ ಅರ್ಥ ಭಿನ್ನಾರ್ಥದಲ್ಲಿ ವ್ಯಾಪಕವಾಗಿ ಬಳಕೆ ಆಗುತ್ತಿದೆ, ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ, ಸಂಪಾದಕರನ್ನು ಸಂಪಾದಕರೆಂದು ಗುರುತಿಸಲಾಗುತ್ತಿದೆ. ಆದ್ದರಿಂದ ಸಮಕಾಲೀನ ಸಂದರ್ಭದಲ್ಲಿ ಶಾಸ್ತ್ರೀಯ ಸಂಪಾದನೆ ಮತ್ತು ಜನಪ್ರಿಯ ಸಂಪಾದನೆಗಳೊಳಗೆ ಇರುವ ವ್ಯತ್ಯಾಸಗಳನ್ನು ಗುರುತಿಸಿಕೊಳ್ಳಬೇಕಾದ ತುರ್ತು ಇದೆ.

ಗ್ರಂಥಸಂಪಾದನೆ ಎನ್ನುವುದು ಕವಿ ಮತ್ತು ಕೃತಿಯ ಮೂಲ ಪಾಠದ ಶೋಧವಾಗಿದೆ. ಸಾಹಿತ್ಯ ವಲಯದಲ್ಲಿ ಗ್ರಂಥಸಂಪಾದಕನಿಗಿಂತ ಸಾಹಿತ್ಯ ವಿಮರ್ಶಕನಿಗೆ ಹೆಚ್ಚಿನ ಮಹತ್ವ ಕೊಟ್ಟಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಪಾಠ ವಿಮರ್ಶಕನ ಕೆಲಸ ಮಹತ್ವದ್ದು. ಒಂದು ಕೃತಿಯ ಮೂಲ ಆಶಯ ಮತ್ತು ಅದರ ಒಳಗಿನ ಸಾರವನ್ನು ಅರಿಯಬೇಕಾದರೆ ಕವಿಯ ಹಾಗೂ ಅವರೇ ಹೇಳಿರಬಹುದಾದ ಪಾಠಗಳು ಪ್ರಮುಖ ಆಗುತ್ತೇವೆ. ಈ ಹಿನ್ನೆಲೆಯಲ್ಲಿ ನೋಡಿದರೆ ನ್ಯಾಯಯುತವಾಗಿ ಸಾಹಿತ್ಯ ವಿಮರ್ಶಕನಿಗಿಂತ ಪಾಠ ವಿಮರ್ಶಕನಿಗೆ ಹೆಚ್ಚಿನ ಮಹತ್ವ ನೀಡಬೇಕಾಗುತ್ತದೆ. ಏಕೆಂದರೆ ಪಾಠ ವಿಮರ್ಶೆಯ ಕ್ಷೇತ್ರ ಬಹಳ ಪ್ರಾಚೀನವಾದುದು. ಅದು ಕಾಲದಿಂದ ಕಾಲಕ್ಕೆ ಜನರ ಅಭಿರುಚಿ

ಬದಲಾದಂತೆ ಪಾಠ ವಿಮರ್ಶೆಗೆ ಕೊಡುತ್ತಿದ್ದ ಮಹತ್ವವೂ ಕಡಿಮೆಯಾಗಿ ಆಧುನಿಕ ಸಾಹಿತ್ಯ ವಿಮರ್ಶೆ ಹೆಚ್ಚಿನ ಮಹತ್ವವನ್ನು ಪಡೆಯಿತು. ಇದಕ್ಕೆ ಪಾಶ್ಚಾತ್ಯ ಸಾಹಿತ್ಯದಲ್ಲಾದ ಬದಲಾವಣೆಯ ಪ್ರಭಾವವೂ ಕಾರಣವಾಗಿದೆ. ಪಾಠ ವಿಮರ್ಶೆಯ ಕ್ಷೇತ್ರದಲ್ಲಿ ಮಹಿಳೆಯರು ತೊಡಗಿಸಿಕೊಳ್ಳುವ ಸಂಖ್ಯೆ ಕ್ಷೀಣಿಸಿ ಸಾಹಿತ್ಯ ವಿಮರ್ಶೆಗೆ ಹೆಚ್ಚಿನ ಮಹತ್ವ ದೊರೆತಿದೆ.

ಒಂದು ಕಾಲದಲ್ಲಿ ಪಾಠ ವಿಮರ್ಶೆ ಅಥವಾ ಮೂಲದ ಸಂಪಾದನೆ ಎಂದರೆ ಕೇವಲ ಹಳೆಯ ಗ್ರಂಥಗಳನ್ನು ಮುದ್ರಿಸುವ ಸರಳ ಕಾರ್ಯವೆಂಬ ಅಭಿಪ್ರಾಯವಿತ್ತು. ಯಾವುದೇ ವಿಶೇಷವಾದ ಪರಿಶ್ರಮ ಪಾಂಡಿತ್ಯ ಇಲ್ಲದಿದ್ದರೂ ಮುದ್ರಣ ಸೌಕರ್ಯ ಇದ್ದವರು ಮಾಡಬಹುದಾದ ಕಾರ್ಯ ಎಂಬ ಹಂತಕ್ಕೆ ಇದರ ಮಹತ್ವವನ್ನು ಕಡೆಗಣಿಸಿದ್ದರು. ಆದರೆ ಈ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸಿದ ವ್ಯಕ್ತಿಗಳ ಸಾಧನೆಯನ್ನು ಕಂಡು ಈ ಮೇಲಿನ ತಪ್ಪು ಭಾವನೆ ಕ್ರಮೇಣ ಕಡಿಮೆ ಆಗುತ್ತಾ ಯೋಗ್ಯ ಗೌರವವನ್ನು ನೀಡುವುದು ಕಂಡುಬರುತ್ತದೆ. ಇಂದು ಗ್ರಂಥಸಂಪಾದನೆಯ ಉಪಯೋಗಗಳನ್ನು ಜನತೆಯ ಗಮನಕ್ಕೆ ತರಬೇಕಾಗಿದೆ. ಅಂದರೆ ಗ್ರಂಥದ ಪರಿಷ್ಕರಣೆ ಎಂಬುದು ಕೇವಲ ಹತ್ತು ಪ್ರತಿಗಳನ್ನಿಟ್ಟುಕೊಂಡು ಬೇರೊಂದು ಪ್ರತಿಯನ್ನು ನಿರ್ಮಿಸುವ ಕೆಲಸವಷ್ಟೇ ಅಲ್ಲ. ಕವಿಯ ಮೂಲ ಪಾಠವನ್ನು ಅರಸುವ ಅಥವಾ ಮೂಲ ಪ್ರತಿಯನ್ನು ರೂಪಿಸುವ ಪಠ್ಯದ ಸಾಂಸ್ಕೃತಿಕ ಅಗತ್ಯವನ್ನು ಗುರುತಿಸುವುದು ಮಹತ್ವದ ಕೆಲಸವೆಂಬ ಭಾವನೆಯನ್ನು ಮೂಡಿಸಬೇಕಾಗಿದೆ.

ಸಾಹಿತ್ಯ ರಸಸ್ವಾದ ಅಥವಾ ಸಾಹಿತ್ಯ ವಿಮರ್ಶೆಯನ್ನು ಮಾಡುವಾಗ ಸರಿಯಾದ ರಚನೆಯ ಕಡೆಗೆ ಗಮನ ನೀಡಬೇಕು. ಇಲ್ಲದಿದ್ದರೆ ಕವಿತ್ವದ ಘನೀಭೂತವೆನಿಸುವ ಪಾಠಗಳ ಸ್ಥಾನದಲ್ಲಿ ಅಪಪಾಠ ದೋಷ ಪಾಠಗಳು ಬಂದರೆ ಕವಿಗೆ ಅವನ ಮೂಲೋದ್ದೇಶಕ್ಕೆ ಅಪಚಾರ ಎಸಗಿದಂತೆ ಆಗುತ್ತದೆ. ಆದ್ದರಿಂದ ಗ್ರಂಥ ಪರಿಷ್ಕರಣ ಮಾಡುವ ವ್ಯಕ್ತಿಯನ್ನು 'ಸಂಪಾದಕ' ಎಂದು ಕರೆಯಲಾಗಿದೆ. ಆದರೆ ಕೆಲವು ಗ್ರಂಥಗಳಲ್ಲಿ ಸಂಪಾದಕರ ಜೊತೆಗೆ ಮುಖಪುಟದಲ್ಲಿ 'ಪ್ರಧಾನ ಸಂಪಾದಕ' 'ಗ್ರಂಥಮಾಲಾ ಸಂಪಾದಕ' ಮೊದಲಾದ ಹೆಸರುಗಳನ್ನು ಹಾಕುವುದುಂಟು. ತಮ್ಮ ಹೆಸರಿನ ಮಹತ್ವಕ್ಕಾಗಿ ಹಾಗೂ ಯೋಜನೆಗಳನ್ನು ರೂಪಿಸಿದ್ದಕ್ಕಾಗಿ ವಿದ್ವಾಂಸರ ಹೆಸರನ್ನು ನಮೂದಿಸುತ್ತಿರುವುದು ಕಂಡುಬರುತ್ತದೆ.

ಹಾಗೆಯೇ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾದ ಕೆಲವು ಕೃತಿಗಳಲ್ಲಿ ಕಾವ್ಯದ ಮುಖಪುಟದಲ್ಲಿ ನಿರ್ದಿಷ್ಟ ಸಂಪಾದಕರ ಹೆಸರೂ ನಮೂದಿತವಾಗಿರುವುದಿಲ್ಲ. ಆದರೆ ಇದೇ ಗ್ರಂಥವನ್ನು ಅಥವಾ ಕೃತಿಯನ್ನು ವಿಶ್ವವಿದ್ಯಾಲಯಗಳಲ್ಲಿ ಖಾಸಗಿ ಸಂಸ್ಥೆಗಳಿಂದ ಪ್ರಕಟಿಸಿದಾಗ ಪ್ರಧಾನ ಸಂಪಾದಕರ ಹೆಸರನ್ನು ಅಳವಡಿಸಲಾಗಿದೆ. ಈ ಗ್ರಂಥ ಮಾಲೆಯ ಪ್ರಧಾನ ಸಂಪಾದಕರಾಗಿ ಇವರ ಹೆಸರನ್ನು ಹಾಕಿರಬಹುದು. ಆದರೆ ಗ್ರಂಥಸೂಚಿ ತಯಾರಿಸುವಲ್ಲಿ ಇವರ ಹೆಸರು ಸಂಪಾದಕನ ಸ್ಥಾನದಲ್ಲಿ ನಿಲ್ಲುತ್ತದೆ. ಇಂತಹ ಕ್ರಮದಿಂದ ಗ್ರಂಥಸಂಪಾದಕರಿಗೆ ಕುದುಂಟಾಗುವುದಿಲ್ಲವೆ ಎಂದು ಯೋಚಿಸಬೇಕಾಗಿದೆ. ಏಕೆಂದರೆ ಗ್ರಂಥಕ್ಕೆ ಅಥವಾ ಕೃತಿ ಪರಿಷ್ಕರಣೆ ಹಾಗೂ ಸಂಗ್ರಹಿಸುವಾಗ

ಸಂಪಾದಕ ಜೇನುಹುಳುವಿನಂತೆ ದುಡಿದಿರುತ್ತಾನೆ. ಆದ್ದರಿಂದ ಅವರ ಹೆಸರು ಮೂಲೆ ಗುಂಪಾಗಿ ಹೋಗಿ ಏನು ಕೆಲಸ ಮಾಡದವರ ಹೆಸರೇ ಪ್ರಧಾನವಾಗಿ ಕಂಗೊಳಿಸಿರುತ್ತಿರುವ ಉದಾಹರಣೆಗಳು ಸಾಕಷ್ಟಿವೆ. ಅಷ್ಟರಮಟ್ಟಿಗೆ ಸಂಪಾದನೆ ಎನ್ನುವುದು ಸಾಮಾನ್ನೀಕರಣಗೊಂಡಿದೆ.

ಹೀಗೆ ಬೆಳೆದು ಬಂದಿರುವ ಸಂಪಾದನಾ ಕಾರ್ಯದ ಚರಿತ್ರೆ ಸಂಸ್ಥೆಗಳ ಮಟ್ಟದಲ್ಲಿ ವೈಯಕ್ತಿಕ ಮಟ್ಟದಲ್ಲಿ ಮುಂದುವರೆಯಿತು. ಎಲ್ಲಾ ಪ್ರಾಂತ್ಯಗಳಲ್ಲೂ ಬೆರಳಣಿಕೆಯಷ್ಟು ಮಹಿಳೆಯರು ತಮ್ಮ ಸಂಸ್ಥೆಗಳ ಸಂಪಾದನ ವಿಭಾಗದಲ್ಲಿ ಒಂದು ಶಾಸ್ತ್ರ ಆಧಾರಿತ ಪ್ರತಿಗಳನ್ನು ಆಧರಿಸಿ ಸಂಪಾದನೆಯನ್ನು ಗಂಭೀರವಾಗಿ ಮಾಡುತ್ತ ಬಂದಿರುವುದನ್ನು ಸ್ಮರಿಸಬಹುದಾಗಿದೆ. ಏಕೆಂದರೆ ಪುರುಷರೇ ಈ ಕ್ಷೇತ್ರಕ್ಕೆ ಬರಲು ಹಿಂಜರಿಯುತ್ತಿದ್ದ ಸಂದರ್ಭದಲ್ಲಿ ಮಹಿಳೆಯರು ಪ್ರವೇಶಿಸಿ ಈ ಕ್ಷೇತ್ರದಲ್ಲಿ ಸಾಧನೆ ಮಾಡಿರುವುದು ವಿಶೇಷವಾದ ಸಂಗತಿ. ಇದೇ ಸಂದರ್ಭದಲ್ಲಿ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆತ್ತಿದ್ದರಿಂದ ಅನೇಕ ಸಂಘ ಸಂಸ್ಥೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಗದುಗಿನ ಶ್ರೀ ತೋಂಟದಾರ್ಯ ಮಠದ ವೀರಶೈವ ಅಧ್ಯಯನ ಸಂಸ್ಥೆ, ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ವಿಶ್ವವಿದ್ಯಾಲಯಗಳು, ಖಾಸಗಿ ಸಂಸ್ಥೆ ಹಾಗೂ ಇತರೆ ಮಠಗಳು, ಸಂಘ ಸಂಸ್ಥೆಗಳಲ್ಲಿ ರೂಪಗೊಂಡ ಕ್ರಿಯಾಯೋಜನೆಗಳು ಜಾರಿಗೆ ಬಂದಿದ್ದರಿಂದ ಶೈಕ್ಷಣಿಕ ವಲಯದಲ್ಲಿ ಕಾರ್ಯನಿರ್ವಹಿಸುವಂತಹ ಮಹಿಳೆಯರು ಸಾಂದರ್ಭಿಕವಾಗಿ ಪ್ರಾಚೀನ ಕೃತಿಗಳ ಸಂಪಾದನೆ, ಸಂಗ್ರಹಣೆ ಕಾರ್ಯದಲ್ಲಿ ತೊಡಗಿಕೊಳ್ಳಲು ಮುಂದಾದರು. ಈ ಕಾಲಘಟ್ಟದಲ್ಲಿ ಸಂಪಾದನೆ ಎನ್ನುವುದು ಸಮಗ್ರ ಸಾಹಿತ್ಯ ಸಂಪುಟಗಳು, ಸಾಹಿತ್ಯ ಚರಿತ್ರೆ, ವಿಮರ್ಶಾ ಲೇಖನಗಳ ಸಂಗ್ರಹ, ಕವನ ಸಂಕಲನ, ಕಥಾಸಾಹಿತ್ಯ ಸಂಗ್ರಹ, ಅಭಿನಂದನ ಗ್ರಂಥ. ದೇಶಿ ಕಾವ್ಯಗಳು ಇತ್ಯಾದಿಗಳ ಮೂಲಕ ಪ್ರಚಾರವಾಯಿತು. ಅದರಲ್ಲೂ ಏಕೈಕ ಹಸ್ತಪ್ರತಿಯಿಂದ ಸಂಪಾದಿಸುವುದು ಹೆಚ್ಚಾಯಿತು. ಸಂಪಾದಕರು ಸಂಗ್ರಹಿಸಿದ ಕೃತಿಗಳ ತಾತ್ವಿಕತೆಯನ್ನು ಈ ಕೆಳಕಂಡಂತೆ ಚರ್ಚಿಸಲಾಗುವುದು. ಆ ಮೂಲಕ ಆಧುನಿಕ ಕಾಲದಲ್ಲಿ ನಡೆದ ಗ್ರಂಥಸಂಪಾದನೆಯ ಹೊಸ ಪ್ರಯತ್ನಗಳನ್ನು ಗ್ರಹಿಸುವುದು ಇಲ್ಲಿನ ಮುಖ್ಯ ನೆಲೆಯಾಗಿದೆ.

೪.೧. ಸಂಗ್ರಹಗಳು

'ಸುಕುಮಾರ ಚರಿತ್ರೆಯ ಸಂಗ್ರಹ' ಪ್ರಸ್ತುತ ಕೃತಿಯನ್ನು ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಸಂಗ್ರಹಿಸಲಾಗಿದೆ. ಪಠ್ಯಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ ಸಿ.ಆರ್. ಕಮಲಮ್ಮ ಅವರು ಸಂಗ್ರಹಿಸಿ ೧೯೬೫ರಲ್ಲಿ ಹರ್ಷವರ್ಧನ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಈ ಕೃತಿಯ ಕರ್ತೃ 'ಶಾಂತಿನಾಥ' ಈತನ ಕಾಲ ೧೦೬೨ ಎಂದು ಉಲ್ಲೇಖಿಸಿದ್ದಾರೆ. ಈ ಕೃತಿಯಲ್ಲಿ ಹತ್ತು ಸಂಧಿಗಳನ್ನು ಮಾತ್ರ ಉಲ್ಲೇಖಿಸಿದ್ದಾರೆ. ಆದರೆ ಶಾಂತಿನಾಥನು ಸುಮಾರು ಒಂದು ಸಾವಿರ ಪದ್ಯಗಳನ್ನು ಚಂಪೂ ಕಾವ್ಯದಲ್ಲಿ ಬರೆಯುವುದರ ಮೂಲಕ ಜಿನ ಧರ್ಮವನ್ನು ಬಿತ್ತರಿಸಿದ್ದಾನೆ. 'ಸುಕುಮಾರಸ್ವಾಮಿ'ಯ ಮೂಲ ಕಥೆಯನ್ನು ಸಂಸ್ಕೃತ, ಪ್ರಾಕೃತ ಅಥವಾ ಕನ್ನಡವನ್ನು ಓದಿ ಚಂಪೂವಿನಲ್ಲಿ ಬರೆದಿರಬೇಕು ಎಂದು ಸಂಗ್ರಹಕಾರರು ಊಹೆ ಮಾಡಿದ್ದಾರೆ. ಈ ಕೃತಿಯನ್ನು ಸಂಗ್ರಹಿಸಲು ಮೂಲ ಆಕರವನ್ನಾಗಿ

ಶ್ರೀ ಡಿ.ಎಲ್.ನರಸಿಂಹಾಚಾರ್ ಮತ್ತು ಶ್ರೀ ತ.ಸು.ಶಾಮರಾವ್ ಅವರು ಸಂಪಾದಿಸಿದ ಸುಕುಮಾರ ಚರಿತೆಯನ್ನು ಆಧಾರವಾಗಿಟ್ಟುಕೊಂಡಿದ್ದಾರೆ. ಹಾಗೆಯೇ ಈ ಸಂಗ್ರಹದಲ್ಲಿ ಕವಿ ಇಡೀ ವಡ್ಡಾರಾಧನೆ ಕೃತಿಯನ್ನೇ ಅಭ್ಯಾಸ ಮಾಡಿ ಶಾಂತಿನಾಥ ಕೃತಿಯನ್ನು ರಚಿಸಿರಬಹುದು ಎಂದು ಸೂಕ್ಷ್ಮವಾಗಿ ಗಮನಿಸಿದ್ದಾರೆ. ಹಾಗೆ ಶಾಂತಿನಾಥನು ಕವಿಯ ಶೈಲಿ ಪದಬಂಧ ಪದ ಪವಣಿಕೆಯ ಪ್ರೌಢಿಮೆ ಕನ್ನಡದ ಹಿರಿಯ ಕವಿಗಳ ಶೈಲಿಗೆ ಯಾವುದರಲ್ಲೂ ಕಡಿಮೆ ಇಲ್ಲ. ಪಂಪನ ಹಿತಮಿತ ವಚನ ರನ್ನ ಕವಿಯ ವಾಗ್ದೋರಣೆಯ ಶಕ್ತಿ, ಜನ್ನನ ಕಥಾ ನಿರೂಪಣಾ ಕೌಶಲ, ಕುಮಾರವ್ಯಾಸ, ಹರಿಹರನ ಭಕ್ತಿ ಎಲ್ಲವು ಶಾಂತಿನಾಥನಲ್ಲಿವೆ. ಮತ್ತು ಶೈಲಿ ಕಲೆಗಾರಿಕೆ, ಪ್ರತಿಭೆ, ಪಾಂಡಿತ್ಯ ಎಲ್ಲಾ ದೃಷ್ಟಿಗಳಿಂದಲೂ ಹನ್ನೊಂದನೆಯ ಶತಮಾನದ ಕನ್ನಡ ಸಾಹಿತ್ಯ ಸಂಪತ್ತನ್ನು ಬಹುಮಟ್ಟಿಗೆ ಹೆಚ್ಚಿಸಿದ ಸಮರ್ಥ ಕವಿ ಎಂದಿದ್ದಾರೆ. ಹಾಗೆಯೇ ಅನುಬಂಧದಲ್ಲಿ ಪಾರಿಭಾಷಿಕ ಪದಗಳು ಹಾಗೂ ಅರ್ಥಕೋಶ ಸೂಚಿಸುವುದರ ಮೂಲಕ ಸಂಗ್ರಹಿಸಿದ್ದಾರೆ. ಸಂಗ್ರಹ ಕೃತಿ ಆದರೂ ಶಾಸ್ತ್ರೀಯ ಸಂಪಾದನೆಯ ಕೆಲವೊಂದು ವಿಧಿವಿಧಾನಗಳನ್ನು ಅನುಸರಿಸುವುದರಿಂದ ಉತ್ತಮವಾದ ಸಂಗ್ರಹ ಕೃತಿಯಾಗಿದೆ.

'ಶ್ರೀ ಗೋಪಾಲದಾಸರ ಕೀರ್ತನೆಗಳು' ಈ ಕೃತಿಯನ್ನು ಅಕ್ಕಮಹಾದೇವಿ ಅವರು ಸಂಪಾದಿಸಿ ೨೦೦೩ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರಕಟ ಮಾಡಿದ್ದಾರೆ. ಪ್ರಸ್ತಾವನೆಯಲ್ಲಿ ಗೋಪಾಲದಾಸರ ಜೀವನ ಚರಿತ್ರೆ ಹಾಗೂ ಗೋಪಾಲದಾಸರ ಕೀರ್ತನೆ, ಉಗಾಭೋಗ ಮತ್ತು ಸುಳಾದಿ ಎಂಬ ಮೂರು ಪ್ರಕಾರದಲ್ಲಿ ವಿಂಗಡಿಸಿ ಚರ್ಚಿಸಿದ್ದಾರೆ. ಪ್ರಾರ್ಥನೆ ಸಮಾಜದಲ್ಲಿ ಭಗವದ್ಭಕ್ತಿಯನ್ನು ಬೆಳೆಸಲು ಮಧ್ವಮತ ತತ್ತ್ವಪ್ರಚಾರ ಮಾಡಲು ಶಾಪಾನುಗ್ರಹ ಶಕ್ತನಾದ ಗಣಪತಿಯನ್ನು ಕರುಣಾಪೂರಿತ ಗೌರೀವರ ಕುಮಾರನೆಂದೂ ಸುಂದರವದನಾರವಿಂದ ನಯನ ಎಂದು ಗೋಪಾಲದಾಸರು ವರ್ಣಿಸಿರುವುದನ್ನು ಸಂಪಾದಕರು ಚರ್ಚಿಸಿದ್ದಾರೆ. ಹಾಗೆಯೇ ಗುರು ಹಿರಿಯರ ಸ್ತುತಿ ಆತ್ಮನಿವೇದನೆ ತತ್ತ್ವಪ್ರತಿಪಾದನೆ ಇರುವ ಕೀರ್ತನೆಗಳನ್ನು ಪ್ರಸ್ತಾವನೆಯಲ್ಲಿ ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ. ಅನುಬಂಧದಲ್ಲಿ ಕಠಿಣ ಶಬ್ದಗಳ ಅರ್ಥ. ಪೂರ್ವಕತೆಗಳು ಮತ್ತು ಟಿಪ್ಪಣಿಗಳು ಅಸಮಗ್ರ ಕೀರ್ತನೆಗಳು ಸಂಕೇತಾಕ್ಷರಗಳ ವಿವರ, ಕೀರ್ತನೆಗಳ ಅಕಾರಾದಿ, ಸಹಾಯಕ ಗ್ರಂಥಗಳನ್ನು ಉಲ್ಲೇಖಿಸಿ ಜನಸಾಮಾನ್ಯರಿಗೂ ಓದಿ ಗ್ರಹಿಸುವಂತೆ ಉತ್ತಮವಾಗಿ ಸಂಗ್ರಹಿಸಿ ಪ್ರಕಟಿಸಿದ್ದಾರೆ.

ಟಿ.ಎನ್.ನಾಗರತ್ನ ಮತ್ತು ಅಕ್ಕಮಹಾದೇವಿ ಅವರು ೨೦೦೩ರಲ್ಲಿ ಹರಪನಹಳ್ಳಿ ಭೀಮವ್ವನ ಕೀರ್ತನೆಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರಕಟಿಸಿದ್ದಾರೆ. ಪ್ರಸ್ತುತ ಸಂಪುಟದಲ್ಲಿ ಭೀಮವ್ವನ ಜೀವನ ಚರಿತೆ, ಕೃತಿಗಳು ಹಾಗೂ ದೀರ್ಘ ಕೀರ್ತನೆಗಳಾದ ನಳಚರಿತ್ರೆ, ಮುಯ್ಯದ ಹಾಡು, ಪತಿದಾನ ಕೊಟ್ಟ ಹಾಡು, ಶಕುಂತಲ–ದುಷ್ಯಂತ ಮಹಾರಾಜನ ಹಾಡು. ರತಿಕಲ್ಯಾಣ, ಧ್ವನಿ ಮತ್ತು ವಚನ(ಗದ್ಯ)ಗಳಿಂದ ಕೂಡಿದ ಕಥಾ ನಿರೂಪಣೆಯನ್ನು ಕುರಿತು ಚರ್ಚಿಸಿದ್ದಾರೆ. ಕಠಿಣ ಶಬ್ದಗಳ ಅರ್ಥ, ಪೂರ್ವಕಥೆಗಳು, ಟಿಪ್ಪಣಿಗಳು, ಅಂಕಿತನಾಮಸೂಚಿ, ಕೀರ್ತನೆಗಳ ಅಕಾರಾದಿ, ದೀರ್ಘ ಕೀರ್ತನೆಗಳ ಪಟ್ಟಿ ಸಹಾಯಕ ಸಾಹಿತ್ಯವನ್ನು ಗುರುತಿಸುವುದರ ಮೂಲಕ ಸಂಗ್ರಹಿಸಿ ಪ್ರಕಟಿಸಿದ್ದಾರೆ.

ಶ್ರೀಮತಿ ಮಂದಾಕಿನಿ ಅವರು ೨೦೦೩ರಲ್ಲಿ 'ಪ್ರಾಣೇಶದಾಸರ ಹಾಡುಗಳನ್ನು' ಕನ್ನಡ ಸಂಸ್ಕೃತಿ ಇಲಾಖೆಯಿಂದ ಪ್ರಕಟಿಸಿದ್ದಾರೆ. ಶ್ರೀ ಪ್ರಾಣೇಶದಾಸರು, ವಿಜಯದಾಸರ ಯುಗದ ಕೊನೆಯಲ್ಲಿ ಆಗಿ ಹೋದವರು. ಇವರು ೧೭೩೬ರಿಂದ ೧೮೨೨ರ ವರೆಗೆ ಬಾಳಿದವರು. ಪ್ರಾಣೇಶದಾಸರ ಕೀರ್ತನೆಗಳು ಪದ್ಯ, ಸುಳಾದಿ, ಉಗಾಭೋಗಗಳಲ್ಲದೆ ಗಾಲವ ಚರಿತ್ರೆ, ಕಾಲಿಯಾವರ್ಧನ ಕಥೆ, ಬುಡಿ ಬ್ರಹ್ಮನ ಕಥೆ, ಗೋಪಿಕಾ ವಿಲಾಸ ಭ್ರಮರ ಗೀತೆ, ಮುಯ್ಯದ ಪದ್ಯ. ಶ್ರೀ ಹರಿವಾಯುಸ್ತುತಿ, ಸೀತಾ ಸ್ವಯಂವರ, ಕಾಳೀ ಸ್ವಯಂವರ, ಹನುಮ ದ್ವಿಲಾಸ, ವಶಿಷ್ಠ ವಿಶ್ವಾಮಿತ್ರ ವ್ಯಾಖ್ಯಾನ, ಊರ್ಧ್ವಪುಂಡ್ರ ಮಹಾತ್ಮ್ಯೆ, ತಿಥಿತ್ರಯ ನಿರ್ಣಯ ಹೀಗೆ ೧೭ ಕೃತಿಗಳನ್ನು ರಚಿಸಿರುವುದನ್ನು ಗುರುತಿಸಿದ್ದಾರೆ.

ಪ್ರಾಣೇಶದಾಸರಿಂದ 'ಶ್ರೀಗುರು ಪ್ರಾಣೇಶ ವಿಠಲ' ಎಂಬ ಅಂಕಿತವನ್ನು ಪಡೆದು ದೀಕ್ಷೆ ಹೊಂದಿದ್ದರು. ಇವರ ೧೮ ಪದಗಳನ್ನು ಸಂಗ್ರಹಿಸಿದ್ದಾರೆ. ಇವರ ಪಂಢರಿರಾಯ, ಲಕ್ಷ್ಮೀದೇವಿ, ವಾಯುದೇವರು, ಸರಸ್ವತಿ, ರುದ್ರದೇವರು ಮೊದಲಾದ ದೇವರನ್ನು ಹಿನ್ನೆಲೆಯಲ್ಲಿಟ್ಟುಕೊಂಡು ಕೀರ್ತನೆಗಳನ್ನು ರಚಿಸಿದ್ದಾರೆ. ಹಾಗೂ ಕನ್ನಡ ಮತ್ತು ಸಂಸ್ಕೃತ ಮಿಶ್ರವಾದ ಭಾಷಾ ಶೈಲಿಯಿಂದ ರಚಿಸಿರುವುದನ್ನು ಸಂಗ್ರಹದಲ್ಲಿ ಗುರುತಿಸಿದ್ದಾರೆ.

ಶ್ರೀ ಶ್ರೀ ಪ್ರಾಣೇಶ ವಿಠಲರು ಪ್ರಾಣೇಶ ದಾಸರ ಮೊಮ್ಮಕ್ಕಳು ಹಾಗೂ ಪರಮಶಿಷ್ಯರು. ಇವರ ಕಾಲ ಕ್ರಿ.ಶ.೧೮೦೫ ರಿಂದ ೧೮೯೨ ಎಂದು ಉಲ್ಲೇಖಿಸಿದ್ದಾರೆ. ಇವರು ಶ್ರೀ ಶನಾಪ್ರಿಯ ಗುರು ಪ್ರಾಣೇಶ ದಾಸಾರ್ಯರು ಎಂಬ ಚರಮ ಗೀತೆಯನ್ನು ರಚಿಸಿದ್ದಾರೆ. ಹಾಗೂ ೧೬ ದೇವರ ಸ್ತೋತ್ರಗಳನ್ನು ರಚಿಸಿರುವುದು ಕಂಡುಬಂದಿದೆ ಎಂದಿದ್ದಾರೆ. ಅನುಬಂಧದಲ್ಲಿ ಕಠಿಣ ಪದಗಳ ಅರ್ಥವನ್ನು ಪದ ಸಂಖ್ಯೆಯ ಕ್ರಮದಲ್ಲಿ ನಾಮ ಸೂಚಿ ಶ್ರೀ ಪ್ರಾಣೇಶ ದಾಸರ ಪದ ಸಂಖ್ಯೆಯ ಕ್ರಮದಲ್ಲಿ ವಿಶೇಷವಾದ ಸೂಚಿ, ಕೀರ್ತನೆಗಳ ಅಕಾರಾದಿ, ಆಕರ ಗ್ರಂಥಗಳನ್ನು ಗುರುತಿಸುವುದರ ಮೂಲಕ ಸಂಗ್ರಹಿಸಿ ಪ್ರಕಟಿಸಿದ್ದಾರೆ.

ಹರಿದಾಸ ಸಾಹಿತ್ಯದಲ್ಲಿ ವಿಶೇಷವಾಗಿ ಕಾರ್ಯ ನಿರ್ವಹಿಸಿದ ಟಿ.ಎನ್.ನಾಗರತ್ನ ಅವರು ೨೦೦೩ರಲ್ಲಿ 'ಶ್ರೀ ವಾದಿರಾಜರ ಕೀರ್ತನೆಗಳು' (ಸಮಗ್ರದಾಸ ಸಾಹಿತ್ಯ ಸಂಪುಟ೨) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಿಂದ ಪ್ರಕಟಿಸಿದ್ದಾರೆ. ಪ್ರಸ್ತುತ ಈ ಕೃತಿಯಲ್ಲಿ ವಾದಿರಾಜರ ಜೀವನ ಚರಿತ್ರೆಯನ್ನು ಕೇವಲ ಐತಿಹ್ಯಗಳ ರೂಪದಲ್ಲಿ ಒಂದಷ್ಟು ವಿಚಾರ ಹಾಗೂ ಕೆಲವು ಪುಸ್ತಕಗಳು ವಾದಿರಾಜರ ಜೀವನ ಚರಿತ್ರೆಯನ್ನು ಇಂತಿಷ್ಟು ಆಧಾರಗಳಿಂದ ಗುರುತಿಸಿದ್ದಾರೆ. ಉದಾಹರಣೆಗೆ "ಧರ್ಮಸ್ಥಳದ ದೇವರಾಜ ಹೆಗ್ಗಡೆ ಅವರು ವಾದಿರಾಜರನ್ನು ಭಿಕ್ಷೆ ಸ್ವೀಕರಿಸಲು ಆಹ್ವಾನಿಸಿ ಅವರಿಂದಲೇ ಮಂಜುನಾಥ ದೇವರ ಪ್ರತಿಷ್ಠಾಪನೆ ಮಾಡಿಸಿ ಅವರಿಗೆ ವಿಶೇಷ ಮರ್ಯಾದೆ ಮಾಡಿ ಸತ್ಕರಿಸಿರುವರು. ಈ ಸಂದರ್ಭದಲ್ಲಿ 'ಕುಡುಮ' ಎಂದು ಕರೆಯಲಾಗುತ್ತಿದ್ದ ಆ ಕ್ಷೇತ್ರವನ್ನು 'ಧರ್ಮಸ್ಥಳ' ಎಂದು ಕರೆದವರೇ ವಾದಿರಾಜರು" ಎಂದು ಗುರುತಿಸಿದ್ದಾರೆ. ಹೀಗೆ ವಾದಿರಾಜರು

ಭಾರತ ಪೂರ್ವಭಾಗದ ಪುರಿ ಜಗನ್ನಾಥರಿಂದ ಪಶ್ಚಿಮದ ದ್ವಾರಕೆಯವರೆಗೂ ದಕ್ಷಿಣದ ಕನ್ಯಾಕುಮಾರಿಯಿಂದ ಉತ್ತರದ ಬದರಿಯವರೆಗೂ ಸಂಚರಿಸಿ ತಮ್ಮ ತೀರ್ಥ ಕ್ಷೇತ್ರದಲ್ಲಿ ಅನುಭವಿಸಿದ ಅಥವಾ ಅಲ್ಲಿ ಪಡೆದುಕೊಂಡ ಜ್ಞಾನವನ್ನು ತಮ್ಮ ಕೀರ್ತನೆಗಳಲ್ಲಿ ಎರಕಹೊಯ್ದಿದ್ದಾರೆ. ಸುಮಾರು ೧೧೦ ಕ್ಷೇತ್ರಗಳ ವಿವರಣೆ ಕೊಟ್ಟಿದ್ದಾರೆ.

ಸಂಸ್ಕೃತ-ಕನ್ನಡ ಎರಡು ಭಾಷೆಗಳಲ್ಲೂ ಪಾಂಡಿತ್ಯಗಳಿಸಿದ್ದ ಇವರು ಸುಮಾರು ೭೦ ಗ್ರಂಥಗಳನ್ನು ರಚಿಸಿದ್ದಾರೆ. ಹಾಗೆಯೇ ಕನ್ನಡದಲ್ಲಿ ಅಷ್ಟೇ ಸಮರ್ಥವಾಗಿ ಪಾಂಡಿತ್ಯ ಪೂರ್ಣವಾಗಿ ತಮ್ಮ ಇಷ್ಟ ದೈವ ಹಯವದನ ಅಂಕಿತದಲ್ಲಿ ನೂರಾರು ಕೀರ್ತನೆಗಳನ್ನು ರಚಿಸಿದ್ದಾರೆ. ಸಂಗ್ರಹಕಾರರು ಇವುಗಳನ್ನು ಬಿಡಿ ಕಿರ್ತನೆ ಹಾಗೂ ನಿಡಿದಾದ ಕೀರ್ತನೆಗಳಾಗಿ ವಿಂಗಡಿಸಿ ಸಂಪಾದಿಸಿದ್ದಾರೆ. ಬಿಡಿ ಕೀರ್ತನೆಗಳಲ್ಲಿ ಮುಖ್ಯವಾಗಿ ಕೀರ್ತನೆ, ಉಗಾಭೋಗ ಸುಳಾದಿ ಈ ಮೂರು ಪ್ರಕಾರಗಳನ್ನು ಗುರುತಿಸಿದ್ದಾರೆ. ಇವರ ಕೀರ್ತನೆಯಲ್ಲಿ ಅನುಪಲ್ಲವಿ ಮತ್ತು ನುಡಿಗಳು ಬೆಸಸಂಖ್ಯೆಯಲ್ಲಿದ್ದು ದ್ವಿತೀಯ ಪ್ರಾಸ ಬರುತ್ತದೆ ಎಂದಿದ್ದಾರೆ. ಉಗಾಭೋಗಕ್ಕಿಂತ ಬಿಗಿಯಾದ ಹಾಗೂ ಸುಳಾದಿಗಿಂತ ಸರಳವಾದ ಕೀರ್ತನೆ ರಾಗ-ತಾಳಗಳ ಕಟ್ಟುಪಾಡುಗಳಿಗೆ ಒಳಗಾಗಿರುವ ಪ್ರಕಾರವನ್ನು ಗುರುತಿಸಿದ್ದಾರೆ. ಹಾಗೆಯೇ ಉಗಾಭೋಗ, ಸುಳಾದಿ ದೇವತಾಸ್ತುತಿ ಇರುವ ಕೀರ್ತನೆಗಳನ್ನು ಒಂದು ಕಡೆ ಸಂಗ್ರಹಿಸಿದ್ದಾರೆ. ಅದೇ ರೀತಿಯಾಗಿ ದೀರ್ಘ ಕೀರ್ತನೆಗಳಾದ ವೈಕುಂಠ ವರ್ಣನೆ, ಸ್ವಪ್ನಪದ, ಗುಂಡಕ್ರಿಯೆ, ಅವತಾರತ್ರಯ ಮಧ್ವ ಸುವ್ವಾಲಿ, ಭ್ರಮರ ಗೀತೆ ಇವುಗಳನ್ನು ಅನೇಕ ಕೃತಿಗಳೊಂದಿಗೆ ತೌಲನಿಕ ಅಧ್ಯಯನ ಮಾಡಿದ್ದಾರೆ. ಅನುಬಂಧದಲ್ಲಿ ಕಠಿಣ ಶಬ್ದಗಳ ಅರ್ಥ, ಪೂರ್ವಕಥೆಗಳು ಮತ್ತು ಲಘು ಟಿಪ್ಪಣಿಗಳು, ಅಂಕಿತನಾಮ ಸೂಚಿ, ಕೀರ್ತನೆಗಳ ಅಕಾರಾಸೂಚಿ ಸಹಾಯಕ ಸಾಹಿತ್ಯ ಗುರುತಿಸುವುದರ ಮೂಲಕ ಸಂಗ್ರಹ ಮಾಡಿ ಪ್ರಕಟಿಸಿದ್ದಾರೆ.

'ಶಿವಶರಣೆಯರ ನಾಲ್ಕು ರಗಳೆಗಳು' ಈ ಕೃತಿಯನ್ನು ಸಂಗ್ರಹಿಸಿ ಶ್ರೀಮತಿ ಪಾರ್ವತಮ್ಮ ಚಂದ್ರಣ್ಣ ಅವರು ೧೯೮೨ರಲ್ಲಿ ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಮಠದಿಂದ ಪ್ರಕಟಿಸಿದ್ದಾರೆ. ಮಹಾಕವಿ ಹರಿಹರನ ನಾಲ್ಕು ರಗಳೆಗಳನ್ನು ಸಂಗ್ರಹಿಸಿದ್ದಾರೆ. ಅವುಗಳೆಂದರೆ 'ಕೊಳೂರ ಕೊಡಗೂಸು' 'ಹೇರೂರ ಹೆಂಗೂಸು' 'ನಿಂಬಿಯಕ್ಕ ಮತ್ತು ಮಹಾದೇವಿಯಕ್ಕನ ರಗಳೆ' ಇಷ್ಟು ರಗಳೆಗಳನ್ನು ಫ.ಗು.ಹಳಕಟ್ಟಿ ಹಾಗೂ ಎಂ.ಎಸ್.ಸುಂಕಾಪುರ ಅವರು ಸಂಪಾದಿಸಿದ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ಸಿದ್ಧಪಡಿಸಿದ್ದಾರೆ. ಇಲ್ಲಿ ಮುಖ್ಯವಾಗಿ ಮೂಲದಲ್ಲಿರುವ ಹಳಗನ್ನಡದ ಱ, ೞ ಅಕ್ಷರಗಳ ಬದಲಾಗಿ ರ, ಳ ಅಕ್ಷರಗಳಾಗಿ ಬದಲಾವಣೆ ಮಾಡಿದ್ದಾರೆ. ಹಾಗೆಯೇ ನಾಲ್ಕು ರಗಳೆಗಳನ್ನು ಪ್ರಸ್ತಾವನೆಯಲ್ಲಿ ವಿವರಿಸಿದ್ದಾರೆ. ಇಲ್ಲಿರುವ ನಾಲ್ಕು ರಗಳೆಗಳು ಜಾನಪದರ ಪ್ರೇರಣೆಯಿಂದ ಕವಿ ರಚಿಸಿರಬಹುದು ಎಂದು ಉಲ್ಲೇಖಿಸಿದ್ದಾರೆ. ಅನುಬಂಧದಲ್ಲಿ ಕಠಿಣ ಶಬ್ದಗಳ ಅರ್ಥವನ್ನು ಗುರುತಿಸಿ ಪ್ರಕಟಿಸಿದ್ದಾರೆ.

'ಸಕಲೇಶ ಮಾದರಸನ ವಚನಗಳು' ಪ್ರಸ್ತುತ ಕೃತಿಯನ್ನು ಸಂಗ್ರಹಿಸಿ ಶ್ರೀಮತಿ ನಿರ್ಮಲಾ ಪಟ್ಟಣಶೆಟ್ಟಿ ಅವರು ೧೯೮೬ರಲ್ಲಿ ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳಿ ಮೂರು ಸಾವಿರ ಮಠದಿಂದ ಪ್ರಕಟಿಸಿದ್ದಾರೆ. ಸಕಲೇಶ ಮಾದರಸನ ಚರಿತ್ರೆಯು ಸಂಪೂರ್ಣವಾಗಿ ಎಲ್ಲಿಯೂ ದೊರೆಯುವುದಿಲ್ಲ ಎಂದಿದ್ದಾರೆ. ಅವನ ಚರಿತ್ರೆಯನ್ನು ನಿರೂಪಿಸುವಾಗ ಮೊದಲಿಗೆ ತೆಲುಗು ಬಸವ ಪುರಾಣದಲ್ಲಿ ಹಾಗೂ ಕನ್ನಡದಲ್ಲಿ ಭೀಮ ಕವಿಯಿಂದ ಬರೆಯಲ್ಪಟ್ಟ ಬಸವ ಪುರಾಣ ೧೯ ಮತ್ತು ೨೦ನೇ ಅಧ್ಯಾಯಗಳಲ್ಲಿ ಮದರಸನ ವಚನಗಳು ಉಲ್ಲೇಖ ಇರುವುದನ್ನು ಗುರುತಿಸಿದ್ದಾರೆ. ಹಾಗೆಯೇ ಪದ್ಮರಾಜ ಪುರಾಣದ ೨ನೆಯ ಸಂಧಿಯಲ್ಲಿಯೂ ಸಿದ್ಧರಾಮ ಪ್ರಭುದೇವರು ತಮ್ಮ ವಚನಗಳಲ್ಲಿ ಈತನನ್ನು ನೆನೆದಿರುವುದನ್ನು ಗಮನಿಸಿ ಅಲ್ಲಿ ಈತನನ್ನು 'ಸಕಳೇಶ' ಎಂದು ಕರೆದಿರುವುದನ್ನು ಗುರುತಿಸಿದ್ದಾರೆ. ಈತನ ವಚನಗಳು ೧೩೧ ಎಂದು ಕವಿ ಚರಿತ್ರೆಕಾರರು ಉಲ್ಲೇಖಿಸಿದ್ದಾರೆ. ಆದರೆ ಸಕಲೇಶ ಮಾದರಸನ ವಚನಗಳು ಎಲ್ಲವು ಒಂದೇ ಕಡೆ ಸಿಕ್ಕಿಲ್ಲ. ಶ್ರೀ ಫ.ಗು.ಹಳಕಟ್ಟಿ ಅವರ ಸಂಗ್ರಹದಲ್ಲಿ ಕೇವಲ ೮೮ ವಚನಗಳು ಮಾತ್ರ ಒಂದೇ ಕಡೆ ದೊರೆತಿರುವುದಾಗಿ ಹೇಳಿದ್ದಾರೆ. ಈತನ ವಚನಗಳಲ್ಲಿ ಸರಳ ರೀತಿಯ ತತ್ವ ನಿರೂಪಣೆ ಇದೆ. ಜನಜೀವನದ ಸಾಮಾನ್ಯ ದೃಷ್ಟಾಂತಗಳನ್ನು ಕೊಟ್ಟು ಗಾದೆ ಮಾತುಗಳನ್ನು ತತ್ವಗಳಲ್ಲಿ ಹಾಗೂ ವಚನಗಳಲ್ಲಿ ಬಳಸಿಕೊಂಡು ಪ್ರತಿಪಾದಿಸುವ ರೀತಿ ಮತ್ತು ಕೆಲವೊಮ್ಮೆ ವಚನಗಳಲ್ಲಿ ಭಾಷೆ ಅಚ್ಚಗನ್ನಡವಾಗಿದ್ದರೆ ಕೆಲವೊಮ್ಮೆ ಸಂಸ್ಕೃತ ಭೂಯಿಷ್ಠವಾಗಿದೆ ಎಂದು ಗುರುತಿಸಿ ದೃಷ್ಟಾಂತ ರೂಪಕಗಳನ್ನು ಬಳಸಿ ವಚನಗಳನ್ನು ರಚಿಸಿರುವುದರಿಂದ ಇವು ಸಾಮಾನ್ಯರಿಗೂ ಕೂಡ ಅರ್ಥ ಆಗುವಂತೆ ಸಂಗ್ರಹಿಸಿ ಪ್ರಕಟಿಸಿದ್ದಾರೆ.

'ಮಡಿವಾಳ ಮಾಚಿದೇವರ ವಚನಗಳು' ಕೃತಿಯನ್ನು ಚನ್ನಕ್ಕ ಎಲಿಗಾರ ಅವರು ೧೯೮೭ರಲ್ಲಿ ಸಂಗ್ರಹಿಸಿ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದಿಂದ ಪ್ರಕಟಿಸಿದ್ದಾರೆ. ಮಡಿವಾಳಯ್ಯನ ವಚನ 'ಮೂಱುಕೋಟಿ ಮುನ್ನೂಱು' ಎಂಬುವುದು ಸಿದ್ಧರಾಮನ ವಚನದಿಂದ ಸಂಗ್ರಹಕಾರರು ಗುರುತಿಸಿದ್ದಾರೆ. 'ಸಕಲ ಪುರಾತನರ ವಚನಗಳು' 'ಶಿವಗಣ ಪ್ರಸಾದಿ ಮಹದೇವಯ್ಯ' 'ಹಲಗೆದೇವ, ಗುಮ್ಮಳಾಪುರದ ಸಿದ್ಧಲಿಂಗಯತಿ' 'ಗೂಳೂರು ಸಿದ್ಧವೀರಣಾರ್ಯ ಶೂನ್ಯ ಸಂಪಾದನೆಗಳು' 'ಪರಮಮೂಲ ಜ್ಞಾನ ಷಟ್ಸ್ಥಲದ ವಚನಗಳು' 'ಶೀಲ ಸಂಪಾದನೆ' 'ಷಟ್ಪ್ರಕಾರ ಸಂಗ್ರಹ' 'ವಿಶೇಷಾನುಭವ' 'ಷಟ್ಸ್ಥಲದ ವಚನಗಳು' ಹಾಗೂ ಕರ್ನಾಟಕದ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ತಾಡೋಲೆಯ ಪ್ರತಿ ಹಾಗೂ ಕೋರಿ ಕಾಗದದ ಪ್ರತಿಯನ್ನು ಬಳಸಿಕೊಂಡು ಪ್ರಸ್ತುತ ಸಂಪುಟದಲ್ಲಿ ೪೮೭ ವಚನಗಳನ್ನು ಸಂಗ್ರಹಿಸಿದ್ದಾರೆ.

ಮಡಿವಾಳನ ಜೀವನ ಚರಿತ್ರೆ ಪ್ರತಿಯೊಂದು ಕೃತಿಯಲ್ಲೂ ವಿಭಿನ್ನವಾದ ಮಾಹಿತಿ ಇರುವುದನ್ನು ಗಮನಿಸಿದ್ದಾರೆ. ಉದಾಹರಣೆಗೆ 'ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರದಲ್ಲಿ ವಸುಧೆಗಧಿಕವಾಗಿಪ್ಪ ಹಿಪ್ಪಲಿಗೆಪುರದಲ್ಲಿ ವೀರಶೈವಾಚಾರ ಕ್ರಿಯೆಯ ದಂಪತಿಗಳು' ಹಾಗೂ ಅನೇಕ ಕೃತಿಗಳಲ್ಲಿ ಚೆನ್ನಮಲ್ಲಿಕಾರ್ಜುನನ ವರ ಮಂತ್ರವಿತ್ ಪಿಂಡ ವೈಕಾರಿತ್ವದಲ್ಲಿ ಜನಿಸಿದ ಮಾಯಾ ಶಿಶು ಎಂಬ ಉಲ್ಲೇಖ ಇರುವುದನ್ನು ಗುರುತಿಸಿದ್ದಾರೆ. ಇವನ ಸಮಕಾಲೀನ ವಚನಕಾರರು ಗುರುತಿಸಿರುವ

ವಚನಗಳು ಮತ್ತು ಶಾಸನಗಳಲ್ಲಿರುವ ಮಾಹಿತಿಯನ್ನು ಗುರುತಿಸುವುದರ ಜೊತೆಗೆ ವಚನಗಳ ಅಕಾರಾದಿಗಳನ್ನು ಕೊಟ್ಟು ಸಂಗ್ರಹಿಸಿ ಪ್ರಕಟಿಸಿದ್ದಾರೆ.

'ಶ್ರೀ ಪ್ರಸನ್ನವೆಂಕಟದಾಸರ ಕೀರ್ತನೆಗಳು'(ಸಮಗ್ರದಾಸ ಸಾಹಿತ್ಯ ಸಂಪುಟ ೮) ಈ ಕೃತಿಯನ್ನು ಟಿ.ಕೆ. ಇಂದುಬಾಯಿ ಅವರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಿಂದ ಪ್ರಕಟಿಸಿದ್ದಾರೆ. "ಶ್ರೀ ಪ್ರಸನ್ನ ವೆಂಕಟದಾಸರ ಜೀವನ ವಿಚಾರವನ್ನು ಕೆಲವು ದಾನ ಪತ್ರ ವರ್ಷಾಶನಗಳ ಆಧಾರ ಹಾಗೂ ಎ.ಬಿ.ಪಾಟೀಲದಾಸರ ಜನನ ಕಾಲ ಕ್ರಿ.ಶ.ಸು.೧೬೮೦" ಎಂದು ನಿರ್ಣಹಿಸಿರುವ ಕಾಲವನ್ನೆ ಸಂಗ್ರಹಕಾರರು ಉಲ್ಲೇಖಿಸಿದ್ದಾರೆ. ಹಾಗೆಯೇ ಹುಲಿಗಳಿಗೆ ಅಂಗಾರ ಹಚ್ಚುತ್ತಿದ್ದರಿಂದ ಇವರಿಗೆ ಜನ ಅಂಗಾರದ ಆಚಾರ್ಯರು ಎಂದು ಹೆಸರಿಸಿರುವುದನ್ನು ವಿಶೇಷವಾಗಿ ಗುರುತಿಸಿದ್ದಾರೆ. ಪ್ರಸನ್ನವೆಂಕಟರ ಸಾಹಿತ್ಯ ಸೃಷ್ಟಿ ವಿಫುಲವಾಗಿದ್ದು ಇದುವರೆಗೆ ಅವರ ಅಂಕಿತದಲ್ಲಿ ೪೨೯ ಕೃತಿಗಳು ದೊರಕಿವೆ ಎಂದಿದ್ದಾರೆ. ಪ್ರಸ್ತುತ ಸಂಪುಟದಲ್ಲಿ ೪೪೮ ಕೃತಿಗಳನ್ನು ಮಾತ್ರ ಸಂಗ್ರಹಿಸಿದ್ದಾರೆ. ಹಾಗೂ ದಾಸರ ದೀರ್ಘ ಕೃತಿಗಳಾದ ಸತ್ಯಭಾಮಾ ವಿಲಾಸ, ನಾರಾಯಣ ಪಂಜರ ಸಮಸ್ತ ಮಣಿಗಣ ಪಟ್ಟರಣ ಪದ್ಯಮಾಲಾ, ಬೇದ ಮುಕ್ತವಲಿ ಈ ಕೃತಿಗಳನ್ನು ಸಂಕ್ಷಿಪ್ತವಾಗಿ ಪ್ರಸ್ತಾವನೆಯಲ್ಲಿ ಚರ್ಚಿಸಿದ್ದಾರೆ. ಹರಿಸರ್ವೋತ್ತಮತ್ವ, ಹರಿನಾಮ ಮಹಿಮೆ, ಹರಿದಾಸರ ಹಿರಿಮೆ, ದ್ವೈತ ಮತ ತತ್ವ ಪ್ರತಿಪಾದನೆ, ಆತ್ಮಶೋಧನೆ, ಲೋಕನೀತಿ ಇವೇ ಮೊದಲಾದವು ಇವರ ಕೀರ್ತನೆಗಳಲ್ಲಿ ಅಭಿವ್ಯಕ್ತಿ ಪಡೆದಿವೆ ಎಂದು ನಿರ್ಣಹಿಸಿದ್ದಾರೆ.

'ನಿಡಗುರುಕಿ ಜೀವೂಬಾಯಿಯವರ ಕೃತಿಗಳು' (ಸಮಗ್ರದಾಸ ಸಾಹಿತ್ಯ ಸಂಪುಟ ೧೮, ಭಾಗ ೨) ಪ್ರಸ್ತುತ ಕೃತಿಯನ್ನು ಎಸ್.ಆರ್.ಲೀಲಾವತಿ ಅವರು ಸಂಗ್ರಹಿಸಿ ೨೦೦೩ರಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಿಂದ ಪ್ರಕಟಿಸಿದ್ದಾರೆ. ಉತ್ತಮವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ. ಇದರಲ್ಲಿ 'ನಿಡಗುರುಕಿ' ಎಂಬುದು ಕೋಲಾರ ಜಿಲ್ಲೆಯ ಚಿಂತಾಮಣಿ(ತಾ) ಒಂದು ಹಳ್ಳಿ. ಜೀವೂಬಾಯಿ ಅವರ ಕೃತಿಗಳ ಸಮೀಕ್ಷೆಯ ವರದಿ ಪ್ರಕಾರ ೧೭೦ ಕೀರ್ತನೆಗಳು ಹತ್ತು ದೀರ್ಘ ಕೀರ್ತನೆಗಳನ್ನು ರಚಿಸಿರುವುದನ್ನು ಉಲ್ಲೇಖಿಸಿದ್ದಾರೆ. ಸುಳಾದಿ ಹಾಗೂ ಹಾಡುಗಳಲ್ಲಿ ಪಲ್ಲವಿ ಅನುಪಲ್ಲವಿ, ನುಡಿಗಳನ್ನು ನಿರ್ದೇಶಿಸಿಲ್ಲದಿರುವುದನ್ನು ಗಮನಿಸಿದ್ದಾರೆ. ಹಾಗೆ ಹಾಡುಗಳನ್ನು ಉದ್ದಕ್ಕೆ ಬರೆದಿರುವುದನ್ನು ಚರ್ಚಿಸಿದ್ದಾರೆ. ಈ ಹಾಡಿನ ಪುರಂದರದಾಸರ ಪವಾಡವನ್ನು ವರ್ಣರಂಜಿತವಾಗಿ ವರ್ಣಿಸಿದ್ದಾರೆ ಎಂದಿದ್ದಾರೆ. ಶ್ರೀರಾಮನ ಜನನ ಮತ್ತು ಸೀತಾಕಲ್ಯಾಣ ಗಾಲವ ಚರಿತ್ರೆ ಶ್ರೀ ಪಾಂಡುರಂಗ ಚರಿತ್ರೆ, ಶ್ರೀ ವರಮಹಾಲಕ್ಷ್ಮೀಯ ಕತೆ ಶ್ರೀ ಹರಿಲೀಲಾ ಶ್ರೀ ಹರಿಮಾನಸ ಪೂಜಾ ರಾಧಾ ಮಾದವ ವಿಲಾಸ ಇವು ಎಲ್ಲಾ ದೀರ್ಘವಾದ ಹಾಡುಗಳು ಎಂದು ಗುರುತಿಸಿದ್ದಾರೆ. ಈ ಕೃತಿಗಳು ಭಾಗವತ ಪುರಾಣ, ರಾಮಾಯಣ, ಮಹಾಭಾರತ ಕಥೆಗಳ ಪ್ರೇರಣೆಯಿಂದ ಸರಳವಾದ ಕೀರ್ತನೆಗಳನ್ನು ರಚಿಸುವುದಕ್ಕೆ ಸಾಧ್ಯವಾಗಿದೆ ಎಂದಿದ್ದಾರೆ. ಕಠಿಣ ಶಬ್ದಗಳ ಅರ್ಥ, ಟಿಪ್ಪಣಿಗಳು, ಅಂಕಿತ ನಾಮ ವಿಶೇಷ ಪದಸೂಚಿ, ಕೀರ್ತನೆಗಳು ಅಕಾರಾದಿಗಳ ಸೂಚಿ, ಕೀರ್ತನೆಗಳು ಹಾಗೂ ಕೀರ್ತನೆಗಳು

ರಚಿತವಾದ ದಿನಾಂಕ, ಸಹಾಯಕ ಸಾಹಿತ್ಯದೊಂದಿಗೆ ಸವಿಸ್ತಾರವಾದ ಪ್ರಸ್ತಾವನೆಯನ್ನು ಬರೆದು ಜನಸಾಮಾನ್ಯರಿಗೆ ಅರ್ಥವಾಗುವಂತೆ ಸಂಗ್ರಹಿಸಿ ಪ್ರಕಟಿಸಿದ್ದಾರೆ.

'ವಚನಕಾರ್ತಿಯರು' ಪ್ರಸ್ತುತ ಕೃತಿಯನ್ನು ಶೈಲಜಾ ಉಡಚಣ ಅವರು ೧೯೯೬ರಲ್ಲಿ ಸಂಗ್ರಹಿಸಿ (ಮುತ್ತಿನ ಹಾರ ಮಾಲಿಕೆ) ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಪ್ರಕಟಿಸಿದ್ದಾರೆ. ಈ ಯೋಜನೆಯ ಉದ್ದೇಶ ಎಂದರೆ ಅಲಕ್ಷಿತವಾದ ವಚನಕಾರ್ತಿಯರನ್ನು ಗುರುತಿಸಿ ಜನಸಾಮಾನ್ಯರಿಗೂ ಅವರ ಸಾಹಿತ್ಯ ತಲುಪುವಂತೆ ಮಾಡುವುದಾಗಿದೆ. ಆದ್ದರಿಂದ ಈ ಯೋಜನೆಯಲ್ಲಿ ಇಂತಹ ವಚನಕಾರ್ತಿಯರ ವಚನಗಳನ್ನು ಮಹತ್ತರವಾಗಿ ಸಂಗ್ರಹಿಸಿದ್ದಾರೆ. ಪ್ರಸ್ತುತ ಈ ಕೃತಿಯಲ್ಲಿ ೨೮ ವಚನಾಕಾರ್ತಿಯರ ವಚನಗಳನ್ನು ಮಾತ್ರ ಸಂಗ್ರಹಿಸಿದ್ದಾರೆ. ಹನ್ನೆರಡನೆ ಶತಮಾನದಲ್ಲಿ ಮಹಿಳೆಯರು ವಿಚಾರ ಮಾಡುವಂತಹ ಸ್ವಾತಂತ್ರ್ಯ ಪಡೆದುಕೊಂಡು ತಮ್ಮನ್ನು ಸಮಾಜವನ್ನು ಸಮಗ್ರ ಜನಪದವನ್ನು ಕುರಿತು ಚಿಂತಿಸಿದ್ದು ಮತ್ತು ಅಭಿವ್ಯಕ್ತಿಯನ್ನು ವ್ಯಕ್ತಪಡಿಸಿದ್ದು ಗಮನಾರ್ಹವಾದದ್ದು. ಇಂತಹ ವಚನಕಾರ್ತಿಯರು ದಾನಿಯರು, ಒಕ್ಕಲಗಿತ್ತಿಯರು, ವೇಶ್ಯೆಯರು, ದಲಿತ ಮಹಿಳೆಯರು ಸಾಮಾನ್ಯ ಸ್ತ್ರೀಯರು ಸಮಾಜ ಮಾನವತೆ, ಕಾಯಕ, ಪರಿಶುದ್ಧ ಬದುಕಿನ ಬಗ್ಗೆ ಅವರು ವಚನಗಳ ಅಭಿವ್ಯಕ್ತಿ ಪಡಿಸಿದ್ದಾರೆ. ವಿಶೇಷವಾಗಿ ಈ ಮಾಲಿಕೆಯಲ್ಲಿ ಅಲಕ್ಷಿತವಾಗಿಯೇ ಉಳಿದಿರುವ ವಚನಕಾರ್ತಿಯರ ವಚನಗಳನ್ನು ಮಾತ್ರ ಸಂಗ್ರಹ ಮಾಡಿ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಶಾಸ್ತ್ರೀಯ ಗ್ರಂಥಸಂಪಾದನೆಯ ವಿಧಿವಿಧಾನಗಳನ್ನು ಅನುಸರಿಸುವುದು ಕಂಡುಬರುವುದಿಲ್ಲ.

'ವೈಷ್ಣವ ಕವಯಿತ್ರಿಯರು' ಈ ಕೃತಿಯನ್ನು ಬಿ.ಎಸ್.ಸುಮಿತ್ರಬಾಯಿ ಅವರು ೧೯೯೮ರಲ್ಲಿ (ಮುತ್ತಿನಹಾರ ಮಾಲಿಕೆ) ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಪ್ರಕಟಿಸಿದ್ದಾರೆ. ವೈಷ್ಣವ ಕವಯಿತ್ರಿಯರು ಕೆಲವರಲ್ಲಿ ವಿಷ್ಣು ಭಕ್ತಿ, ಶಿವಭಕ್ತಿಗಳೆರಡೂ ಒಟ್ಟಿಗೆ ಸಾಗಿರುವುದನ್ನು ಗಮನಿಸಿದ್ದಾರೆ. ಈ ಮಹಿಳೆಯರು ಬಹುಮಟ್ಟಿಗೆ ತಮ್ಮ ತಮ್ಮ ಕುಟುಂಬಗಳಿಗೆ ಬದ್ಧರಾದ ಗೃಹಿಣಿಯರು ಅಥವಾ ಸಾಂಸಾರಿಕ ಬದುಕಿನ ಅವಕಾಶ ತಪ್ಪಿದ ವಿಧವೆಯರು. ಬದುಕಿನ ಸೀಮಿತ ಗುರಿಯನ್ನು ಮುಟ್ಟಲು ಇದ್ದ ಗುರಿ ಎಂದರೆ 'ದೈವಭಕ್ತಿ' ಹಾಗಾಗಿ ಅವರು ಅನೇಕ ಹಾಡುಗಳನ್ನು ರಚಿಸಿದ್ದಾರೆ. ಅಂತಹ ಏಳು ಜನ ಕವಯಿತ್ರಿಯರ ಕೀರ್ತನೆಗಳನ್ನು ಪ್ರಸ್ತುತ ಸಂಪುಟದಲ್ಲಿ ಸಂಗ್ರಹಿಸಿದ್ದಾರೆ. ಅಜ್ಞಾತವಾಗಿ ಉಳಿದ ಕವಯಿತ್ರಿಯರನ್ನು ಮಾತ್ರ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಕನ್ನಡ ಗ್ರಂಥಸಂಪಾದನೆಯ ಹೊಳಪುಗಳು ಕಂಡುಬರುವುದಿಲ್ಲ.

'ಸರೋಜಿನಿ ಚವಲಾರ' ಅವರು 'ನೀಲಾಂಬಿಕೆ ವಚನಗಳನ್ನು ಸಂಗ್ರಹಿಸಿ' ೧೯೮೬ರಲ್ಲಿ ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳ ಮೂರು ಸಾವಿರ ಮಠದಿಂದ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ನೀಲಾಂಬಿಕೆಯ ೧೦೧ ವಚನಗಳನ್ನು ಸಂಗ್ರಹ ಮಾಡಿದ್ದಾರೆ. ಪ್ರಸ್ತಾವನೆಯಲ್ಲಿ ನೀಲಾಂಬಿಕೆಯ ಜೀವನ ಚರಿತ್ರೆಯನ್ನು ಚರ್ಚಿಸಿದ್ದಾರೆ. ಪುರಾಣ ಕಥೆಗಳಲ್ಲಿ ಬರುವ ಅಕ್ಷಯ ಪಾತ್ರೆಯ ನೆನಪಿನ ಹಿನ್ನೆಲೆಯಲ್ಲಿ ಜಾನಪದರು ಈ ಕಥೆಯನ್ನು ಕಲ್ಪಿಸಿದ್ದಾರೆ. ಶರಣರನ್ನು ಹಾಗೂ

ಭಕ್ತರನ್ನು ಪರೀಕ್ಷಿಸಿ ನೋಡುವ ಜಂಗಮ ವೇಷಧಾರಿ ಶಿವನು ಇಂಥ ಘಟನೆಗೆ ಕಾರಣನಾಗುತ್ತಾನೆಂದು ಜನತೆಯ ನಂಬುಗೆ. ಈ ಕಥೆಗೆ ಕಾರಣ ಸತ್ತ್ವ ಪರಿಕ್ಷೆಯನ್ನು ಗೆದ್ದವನು ಮುಕ್ತಿಗೆ ಭಾಜನವಾಗುವ ಪರಿಕಲ್ಪನೆಯು ಈ ಕಥೆಗೆ ಹಿನ್ನೆಲೆಯಾಗಿದೆ. ಹಾಗೆಯೇ ವಚನಗಳ ಆಧಾರದಿಂದ ಅವಳ ಮೇಲೆ ಪ್ರಭಾವ ಬೀರಿದ ಅನಿಮಿಷ, ಅಲ್ಲಮ, ಅಜಗಣ್ಣ, ಕಕ್ಕಯ್ಯ, ಚಿಕ್ಕಯ್ಯ, ಮಾದಾರ ಚೆನ್ನಯ್ಯ, ಮಾನ್ಯರು, ಯತಿಗಳು–ಜಾತಿಗಳಿಗೆಲ್ಲರಿಗೂ ವಂದಿಸಿದ್ದಾಳೆ. ವಿಶೇಷವಾಗಿ ಅವಳ ವಚನಗಳಲ್ಲಿ ಶಿವನುಭಾವ, ತಾತ್ತ್ವಿಕ ದೃಷ್ಟಿ ಸ್ಫುಟವಾಗಿ ಮೂಡಿವೆ ಅವಳ ವಚನಗಳು ಆಧ್ಯಾತ್ಮಿಕ ಸಾಹಿತ್ಯದಲ್ಲಿ ಉನ್ನತ ಮಟ್ಟವನ್ನು ಪಡೆಯಲು ಅರ್ಹವಾಗಿದೆ ಎಂದಿದ್ದಾರೆ. ಈ ಕೃತಿಯನ್ನು ಜನ ಸಾಮಾನ್ಯರಿಗೂ ಅರ್ಥ ಆಗುವಂತೆ ಸಂಗ್ರಹಿಸಿ ಪ್ರಕಟಿಸಿದ್ದಾರೆ.

'ಸಂಪ್ರದಾಯದ ಗೀತೆಗಳು' ಈ ಕೃತಿಯನ್ನು ಬಿ.ಎಸ್.ಸರೋಜ ಅವರು ಸಂಗ್ರಹಿಸಿ ೧೯೮೪ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ೩೭ ಹಾಡುಗಳನ್ನು ಸಂಗ್ರಹ ಮಾಡಿದ್ದಾರೆ. ವಿಶೇಷವಾಗಿ ಬ್ರಾಹ್ಮಣ ಸಮಾಜದ ಹೆಣ್ಣು ಮಕ್ಕಳಿಂದ ಸಂಗ್ರಹ ಮಾಡಿದ್ದಾರೆ. ಇದರಲ್ಲಿ ಸಂಪ್ರದಾಯದ ಹಾಡುಗಳು, ಖಂಡ ಕಾವ್ಯಗಳು, ಕಥನ ಗೀತೆಗಳು ಹಾಗೂ ಬಿಡಿ ಗೀತೆಗಳನ್ನು ಒಳಗೊಂಡಿವೆ. ಬ್ರಾಹ್ಮಣ ಸಮುದಾಯದಲ್ಲಿ ಹುಟ್ಟಿದ ಮಗುವಿಗೆ ಹನ್ನೊಂದನೆಯ ದಿನಕ್ಕೆ 'ನಾಮಕರಣ' ಮೂರು ವರ್ಷದಲ್ಲಿ 'ಚೌಲ' ಎಂಟನೆಯ ವರ್ಷದಲ್ಲಿ 'ಉಪನಯನ' ವಯಸ್ಕನಾದ ಮೇಲೆ ಮದುವೆ, ಸೀಮಂತ, ಹೂಮೂಡಿಸುವುದು, ಬಳೆ ತೊಡಿಸುವುದು ಇತ್ಯಾದಿ ಶಾಸ್ತ್ರಗಳನ್ನು ಮಾಡುವಂತಹ ಸಂದರ್ಭದಲ್ಲಿ ಹಾಡುವಂತಹ ಹಾಡುಗಳನ್ನು ಇಲ್ಲಿ ಸಂಗ್ರಹಿಸಿದ್ದಾರೆ. ಈ ಹಾಡುಗಳು ತ್ರಿಪದಿ, ಪಲ್ಲವಿ, ಅನುಪಲ್ಲವಿಗಳನ್ನೊಳಗೊಂಡಿವೆ. ಆದರೆ ಮೂರೋ ನಾಲ್ಕೋ ನುಡಿಗಳಿರುವ ಹಾಡುಗಳೇ ಹೆಚ್ಚು ಇವೆ ಎಂದಿದ್ದಾರೆ. ಪ್ರಸ್ತಾವನೆಯಲ್ಲಿ ಈ ಹಾಡುಗಳ ವೈಶಿಷ್ಟ್ಯವನ್ನು ಕುರಿತು ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ. ಹಾಗೆಯೇ ಅನುಬಂಧದಲ್ಲಿ ಹಾಡುಗಳು ಮತ್ತು ಹಾಡಿದವರ ವಿಳಾಸವನ್ನು ನಮೂದಿಸಿದ್ದಾರೆ. ಅಕಾರಾದಿ ಸೂಚಿಯನ್ನು ನೀಡಿ ಉತ್ತಮವಾಗಿ ಪ್ರಕಟಿಸಿದ್ದಾರೆ.

'ವಿಶ್ವಪಥ ಹಾಲುಮತ ಸಂಸ್ಕೃತಿ ಭಂಡಾರ ಮಾಲಿಕೆ'ಯಲ್ಲಿ ಸುಮಾರು ಹತ್ತು ಕೃತಿಗಳನ್ನು ವಿವಿಧ ಲೇಖಕರು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಈ ಸಂಪುಟಗಳಲ್ಲಿ ಮುಖ್ಯವಾಗಿ ಗುರುತಿಸುವುದು 'ಪ್ರಧಾನ ಸಂಪಾದಕ' ಹಾಗೂ 'ಸಂಪಾದಕ ಪದಗಳು' 'ಮಲ್ಲಿಕಾ ಎಸ್. ಘಂಟಿ' ಅವರು ಪ್ರಧಾನ ಸಂಪಾದಕತ್ವದಲ್ಲಿ ಹತ್ತು ಪುಸ್ತಕಗಳನ್ನು ಹೊರತಂದಿದ್ದಾರೆ. ಈ ಕೃತಿಗಳಲ್ಲಿ ಲೇಖಕರ ಜೊತೆಗೆ ಮುಖಪುಟದಲ್ಲಿ ಗ್ರಂಥಮಾಲಾ ಸಂಪಾದಕರ ಹೆಸರನ್ನು ಸೂಚಿಸಲಾಗಿದೆ. ಈ ಕೃತಿಗಳಲ್ಲಿ ಹಾಲುಮತ ಸಮಾಜದ ಚಾರಿತ್ರಿಕ ಸಾಂಸ್ಕೃತಿಕ ನಾಯಕರ ಬಗ್ಗೆ ಪರಿಚಯ ಮಾಡಿಕೊಂಡಿರುವುದರ ಮೂಲಕ ಬೆಳೆಯುತ್ತಿರುವ ಯುವಪೀಳಿಗೆಗೆ ಅಕ್ಷರದ ಅರಿವು ಉಂಟು ಮಾಡಲು ವಿಸ್ಮೃತಿಗೆ ಒಳಗಾದ ಸಮುದಾಯಗಳಿಗೆ ಆತ್ಮಸ್ಥೈರ್ಯ ತುಂಬಲು ಈ ಸಮುದಾಯದ ಧಾರ್ಮಿಕ ಮತ್ತು ಸಾಂಸ್ಕೃತಿಕ ಮೇರು ಮಂದಾರದಂತಿರುವ ಹತ್ತು ಜನರನ್ನು ಆಯ್ಕೆ ಮಾಡಿ ಅವರನ್ನು ಕುರಿತು ನಾಡಿನ ವಿವಿಧ ವಿದ್ವಾಂಸರಿಂದ ಬರೆಯಿಸಿರುವ ಈ ಮಾಲಿಕೆ ಮಕ್ಕಳನ್ನು ಉದ್ದೇಶಿಸಿ ರೂಪಗೊಂಡಿವೆ. ಈ

ಸಂಪುಟಗಳಲ್ಲಿ ಕನ್ನಡ ಗ್ರಂಥಸಂಪಾದನೆಯ ಶಾಸ್ತ್ರೀಯ ವಿಧಿವಿಧಾನಗಳು ಕಂಡುಬರುವುದಿಲ್ಲ. ಇಲ್ಲಿ ಶಾಸ್ತ್ರೀಯ ಪರಿಷ್ಕರಣೆಗಿಂತ ಜನಪ್ರಿಯ ಪರಿಷ್ಕರಣೆಗೆ ಒತ್ತು ನೀಡಲಾಗಿದೆ.

೨. ವಿಮರ್ಶಾ ಲೇಖನಗಳ ಸಂಗ್ರಹ

ಆಧುನಿಕ ಸಂದರ್ಭದಲ್ಲಿ ಅನೇಕ ಮಹಿಳೆಯರು ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದು ಕಂಡುಬರುತ್ತದೆ. ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ಪ್ರಬಂಧಗಳು ಹಾಗೂ ವಿವಿಧ ರೀತಿಯ ಗುಣವುಳ್ಳ ಲೇಖನಗಳನ್ನು ಸಂಗ್ರಹಿಸಿ ಗ್ರಂಥ ರೂಪದಲ್ಲಿ ಪ್ರಕಟಿಸುವ ಪ್ರಯತ್ನ ಮಾಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಂಸ್ಕೃತಿ ನಿರ್ದೇಶನಾಲಯ ಅನೇಕ ಸಂಘ ಸಂಸ್ಥೆಗಳ ಸಹಕಾರದಿಂದ ಹಲವಾರು ಕೃತಿಗಳನ್ನು ಮಹಿಳೆಯರು ಪ್ರಕಟಿಸುವುದಕ್ಕೆ ಸಹಾಯಕವಾಗಿದೆ.

'ಭಾರತೀಯ ಸಂಸ್ಕೃತಿ ಮತ್ತು ಮಹಿಳೆ' (ವಿಚಾರಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳ ಸಂಗ್ರಹ) ಪ್ರಸ್ತುತ ಕೃತಿಯನ್ನು ವಸಂತಲಕ್ಷ್ಮಿ ಅವರು ಸಂಗ್ರಹಿಸಿ ೨೦೦೯ರಲ್ಲಿ ದಿ ಮಿಥಿಕ್ ಸೊಸೈಟಿ ಬೆಂಗಳೂರಿನಿಂದ ಪ್ರಕಟಿಸಿದ್ದಾರೆ. ಎರಡು ದಿನದ ವಿಚರಸಂಕಿರಣದಲ್ಲಿ ಮಂಡಿತವಾದ ೧೪ ಪ್ರಬಂಧಗಳನ್ನು ಸಂಗ್ರಹಿಸಿ ಉತ್ತಮವಾದ ಪ್ರಸ್ತಾವನೆಯನ್ನು ಬರೆದು ಪ್ರಕಟಿಸಿದ್ದಾರೆ. ಈ ವಿಚಾರಸಂಕಿರಣದ ಉದ್ದೇಶ ಎಂದರೆ 'ಭಾರತೀಯ ಸಂಸ್ಕೃತಿ ಮತ್ತು ಮಹಿಳೆ' ಅನಾದಿಕಾಲದಿಂದ ಇಂದಿನವರೆಗೂ ಮುಂದೆಯೂ ನಿರಂತರವಾಗಿ ಸಂಸ್ಕೃತಿ ಪ್ರವಾಹದಲ್ಲಿ ಸಾಧನೆ ಮಾಡಿರುವುದನ್ನು ಗುರುತಿಸಿದ್ದಾರೆ. ಹಾಗೆಯೇ ಸಾಮಾಜಿಕ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕವಾಗಿ ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವುದನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಈ ಸಂಪುಟದಲ್ಲಿ ಪ್ರಕಟವಾಗಿರುವ ಪ್ರತಿಯೊಂದು ಲೇಖನಗಳು ಮಹಿಳೆಯರ ಸಾಧನೆಯ ಇತಿಹಾಸವನ್ನು ತಿಳಿಸುವಂತಹ ಪ್ರಬಂಧಗಳಾಗಿವೆ.

'ಒಳಗನ್ನಡಿ' (ಸಮಕಾಲೀನ ಕರ್ನಾಟಕದ ಮೇಲಿನ ಸಮಾಜ ವಿಜ್ಞಾನ ಬರಹಗಳು) ಈ ಕೃತಿಯನ್ನು ಎ.ಆರ್.ವಾಸವಿ ಅವರು ೨೦೧೧ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಿಸಿದ್ದಾರೆ. ಪ್ರಸ್ತುತ ಕೃತಿಯಲ್ಲಿ ೧೫ ಲೇಖನಗಳನ್ನು ಮಾತ್ರ ಸಂಗ್ರಹಿಸಿದ್ದಾರೆ. ಈ ಕೃತಿಯ ಮುಖ್ಯ ಉದ್ದೇಶ ಭಾರತೀಯ ಸಮಾಜಶಾಸ್ತ್ರ ಭಾರತದ ಸಮಾಜದಂತೆ ಬಹುರೂಪ ಪಡೆಯಬೇಕಿದೆ. ಅದು ಪಶ್ಚಿಮದ ತಾತ್ವಿಕ ಚೌಕಟ್ಟನ್ನು ಖಂಡಿತವಾಗಿ ಮೀರಬೇಕು ಮತ್ತು ಶುದ್ಧ ಸಾಹಿತ್ಯ ವಿಮರ್ಶೆಯೂ ಆಗಬಾರದು ಸಾಮಾಜಿಕ ಮತ್ತು ಸಾಂಸ್ಕೃತಿಕ ದಿಕ್ಕಿನಲ್ಲೊಂದು ಜ್ಞಾನಶಿಸ್ತಾಗಿ ರೂಪುಗೊಳ್ಳಬೇಕು. ಇಂತಹ ಸಮಾಜಶಾಸ್ತ್ರೀಯ ಅಧ್ಯಯನಗಳನ್ನು ಹುಟ್ಟುಹಾಕುತ್ತಿರುವ ಗಂಭೀರ ಪ್ರಯತ್ನವೊಂದು ಇಲ್ಲಿನ ಲೇಖನಗಳು ತಿಳಿಸುತ್ತೇವೆ.

'ವಿಮರ್ಶಾ ಲೇಖನಗಳು' ಪ್ರಸ್ತುತ ಕೃತಿಯನ್ನು ಸಂಗ್ರಹಿಸಿ ೨೦೦೫ರಲ್ಲಿ ವಿಜಯಶ್ರೀ ಸಬರದ ಅವರು ಗುಲಬರ್ಗಾ ವಿಶ್ವವಿದ್ಯಾಲಯದಿಂದ ಪ್ರಕಟಿಸಿದ್ದಾರೆ. ಬೆಳ್ಳಿ ಬೆಳಕು ಮಾಲೆಯಡಿ ಪ್ರಕಟಿಸುತ್ತಿರುವ ೨೫ ಮೌಲಿಕ ಕೃತಿಗಳಲ್ಲಿ ವಿಮರ್ಶಾ ಲೇಖನಗಳು, ಕೃತಿಯೂ ಒಂದಾಗಿದೆ. ಇದರಲ್ಲಿ ಒಟ್ಟು ೨೪ ಲೇಖನಗಳಿವೆ. ಈ ಕೃತಿ ಹೈದರಾಬಾದ ಕರ್ನಾಟಕದ ಪ್ರದೇಶದ ಪ್ರಾತಿನಿಧಿಕ ಸಂಕಲನವಾಗಿದೆ.

ಮೊದಲ ಭಾಗ ಆನ್ವಯಿಕ ವಿಮರ್ಶೆಗೆ ಎರಡು ಮತ್ತು ಮೂರನೆ ಭಾಗ ಪ್ರಾಯೋಗಿಕ ವಿಮರ್ಶೆಗೆ ಸಂಬಂಧಿಸಿದೆ. ನಡುಗನ್ನಡ, ಹೊಸಗನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ.

'ದಶಕದ ಮಹಿಳಾ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳು' ಈ ಮಾಲಿಕೆಯ ಸಂಪಾದಕರು 'ಸಬಿಹಾ ಭೂಮಿಗೌಡ'. ಅವರು ಸಂಪಾದಿಸಿ ೨೦೧೨ರಲ್ಲಿ ಚಿಂತನ ಪುಸ್ತಕ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಈ ಮಾಲಿಕೆಯ ಮುಖ್ಯ ಉದ್ದೇಶ ಇಪ್ಪತ್ತೊಂದನೆಯ ಶತಮಾನದ ಮೊದಲ ದಶಕದ ಮಹಿಳಾ ಸಾಹಿತ್ಯದ ಮೌಲ್ಯಮಾಪನ. ಈ ದಶಕದಲ್ಲಿ ಪ್ರಕಟವಾದ ಮಹಿಳೆಯರ ಕಥೆ, ಕಾವ್ಯ ಸಂಕಲನ ಮತ್ತು ಕಾದಂಬರಿಗಳನ್ನು ವಿಶ್ಲೇಷಿಸುವ ನಾಲ್ಕು ಪ್ರಬಂಧಗಳನ್ನು ಮಾತ್ರ ಚರ್ಚೆಗೆ ಒಳಪಡಿಸಿದ್ದಾರೆ. ಹಾಗೆಯೇ ಮಹಿಳೆಯರ ಬರವಣಿಗೆಯ ಪರಿಕರಗಳಾದ ವಸ್ತು, ಭಾಷೆ ಮತ್ತು ಆಶಯ ಇತ್ಯಾದಿ ಅಂಶಗಳನ್ನು ವಿಮರ್ಶೆಗೆ ಒಳಪಡಿಸಿದ್ದಾರೆ. ಈ ದಶಕದ ಲೇಖಕಿಯರು ತುಂಬ ಎಚ್ಚರದಿಂದಲೇ ಸಿದ್ಧ ಮಾದರಿಯ ಚೌಕಟ್ಟುಗಳಿಂದ ಬಿಡುಗಡೆ ಪಡೆಯಲು ತವಕಿಸುತ್ತಲೇ ಯಶಸ್ಸು ಸಾಧಸಿರುವುದನ್ನು ಅವರ ಸಾಹಿತ್ಯ ಕೃತಿಗಳ ಮೂಲಕ ತಿಳಿಯಬಹುದಾಗಿದೆ.

'ಕನ್ನಡ ಸಾಹಿತ್ಯ ಮತ್ತು ಮಹಿಳೆ' (ವಿಚಾರ ಸಂಕಿರಣ ಲೇಖನಗಳು) ಪ್ರಸ್ತುತ ಈ ಕೃತಿಯನ್ನು ಸಬಿಹಾ ಭೂಮಿಗೌಡ ಮತ್ತು ಮಲ್ಲಿಕಾ ಘಂಟಿ ಅವರು ಸಂಪಾದಿಸಿ ೨೦೦೬ರಲ್ಲಿ ಸಾಹಿತ್ಯ ಅಕಾಡೆಮಿಯಿಂದ ಪ್ರಕಟಿಸಿದ್ದಾರೆ. ವಿಚಾರ ಸಂಕಿರಣದಲ್ಲಿ ವಿವಿಧ ಕ್ಷೇತ್ರಗಳಲ್ಲಿನ ಮಹಿಳೆಯರ ಬಿಕ್ಕಟ್ಟುಗಳನ್ನು ಮತ್ತು ಸಾಧನೆಗಳನ್ನು ಪ್ರಬಂಧಗಳಲ್ಲಿ ಮಂಡಿಸಿದ್ದಾರೆ. ಸಾರ್ವಜನಿಕರ ಪ್ರತಿನಿಧಿಯಾದ ಈ ಸಂಸ್ಥೆಯ ಕಾರ್ಯ ಚಟುವಟಿಕೆಗಳ ಮೌಲಿಕತೆಯನ್ನು ಜನರಿಗೆ ತಿಳಿಸುವ ಹಾಗೂ ಜಾಹೀರುಪಡಿಸುವ ಜವಾಬ್ದಾರಿಯೂ ಇಂಥ ಸಂಸ್ಥೆಗಳು ಕಾರ್ಯನಿರ್ವಹಿಸುತ್ತ ಸಾಮಾಜಿಕ ರಂಗ, ರಾಜಕೀಯ ರಂಗದಲ್ಲಿ, ಆರ್ಥಿಕ ಕ್ಷೇತ್ರದಲ್ಲಿ ಇತ್ತಿಚಿನ ನಮ್ಮ ವಾಸ್ತವಗಳಾದ ಜಾಗತೀಕರಣ, ಕೋಮುವಾದ ಮತ್ತು ಭಯೋತ್ಪಾದನೆಗಳಂತಹ ಸಂಗತಿಗಳು ಮಹಿಳೆಯರ ಬದುಕನ್ನು ಹೇಗೆ ಪ್ರಭಾವಿಸಿವೆ ಮತ್ತು ಅವರ ಮೇಲೆ ಎಂತಹ ಒತ್ತಡಗಳನ್ನು ನಿರ್ಮಿಸಿವೆ ಎನ್ನುವುದನ್ನು ಈ ಕೃತಿಯಲ್ಲಿ ಅವಲೋಕಿಸಿದ್ದಾರೆ.

'ಇಪ್ಪತ್ತನೆ ಶತಮಾನದಲ್ಲಿ ಕರ್ನಾಟಕದ ಮಹಿಳೆಯ ಸಾಧನೆ' ಪ್ರಸ್ತುತ ಕೃತಿಯನ್ನು ಎಚ್.ಎಸ್.ಪಾರ್ವತಿ, ನಿರುಪಮಾ ಅವರು ಸಂಪಾದಿಸಿ ೨೦೦೨ರಲ್ಲಿ ಆರತಿ ಪಬ್ಲಿಕೇಷನ್ ನಿಂದ ಪ್ರಕಟಿಸಿದ್ದಾರೆ. ಈ ಕೃತಿಯ ವಿಭಿನ್ನ ರಂಗಗಳಲ್ಲಿ ಕೃಷಿ ಮಾಡಿ ತಮ್ಮ ಕೊಡುಗೆ ನೀಡಿದ ಮಹಿಳೆಯರ ಸಂಕ್ಷಿಪ್ತ ಪರಿಚಯವನ್ನು ಕನ್ನಡಿಗರಿಗೆ ನೀಡುವ ಉದ್ದೇಶದಿಂದ ಈ ಕೃತಿಯನ್ನು ಹೊರತಂದಿದ್ದಾರೆ.

'ಮಹಿಳಾ ಮೀಸಲಾತಿ'(ಅಭಿಪ್ರಾಯ-ಸಂಕಲನ) ಈ ಕೃತಿಯನ್ನು ಕೆ.ಎಸ್.ರತ್ನಮ್ಮ, ಸ.ನ.ಗಾಯಿತ್ರಿ ಅವರು ಸಂಪಾದಿಸಿ ೨೦೦೫ರಲ್ಲಿ ಈಶ್ವರಿ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಮಹಿಳಾ ಮೀಸಲಾತಿ ಕುರಿತು ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿದ ಸಂದರ್ಭದಲ್ಲಿ ಕವನ, ಪ್ರಬಂಧ,

ವಿಮರ್ಶೆ. ಸಣ್ಣಕಥೆ, ಕಿರುನಾಟಕ ಅನೇಕ ಸಾಹಿತ್ಯ ಪ್ರಕಾರಗಳಲ್ಲಿ ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಪ್ರಬಂಧಗಳನ್ನು ಹಮ್ಮಿಕೊಂಡಾಗ ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಾಧನೆಗೈಯುತ್ತಿರುವ ಹಿರಿಯ ಲೇಖಕಿಯರು ಮಹಿಳೆಯರ ಮೀಸಲಾತಿ ಬಗ್ಗೆ ವಿಶೇಷ ಉಪನ್ಯಾಸದಲ್ಲಿ ಮಂಡಿತವಾದ ಪ್ರಬಂಧಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ.

'ನಮ್ಮ ಕಣ್ಣಲ್ಲಿ ನೀವು'(ವಿಚಾರಸಂಕಿರಣ ಮಾಲೆ) ಈ ಕೃತಿಯನ್ನು ಮಲ್ಲಿಕಾ ಎಸ್. ಘಂಟಿ ಅವರು ಸಂಪಾದಿಸಿ ೨೦೦೮ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಪ್ರಕಟಿಸಿದ್ದಾರೆ. ಇಲ್ಲಿ ಸಂಗ್ರಹವಾಗಿರುವ ಲೇಖನಗಳು 'ಸೃಜನಶೀಲ' ಸಾಹಿತ್ಯವನ್ನು ಕೇಂದ್ರವಾಗಿಸಿಕೊಂಡು ಕುವೆಂಪುನಿಂದ ಅರವಿಂದ ಮಾಲಗತ್ತಿ ಅವರ ತಲೆಮಾರಿನವರೆಗೂ ಗದ್ಯ ಬರಹವನ್ನು ಆಧುನಿಕ ಸ್ತ್ರೀವಾದಿ ಓದಿಗೆ ಒಳಪಡಿಸಿದ್ದಾರೆ. ಈ ಕೃತಿಯಲ್ಲಿ ೧೧ ಲೇಖನಗಳನ್ನು ಸಂಗ್ರಹಿಸಿದ್ದಾರೆ. ಇವುಗಳನ್ನು ವಿಭಿನ್ನ ನೆಲೆಯಲ್ಲಿ ಚರ್ಚಿಸಿದ್ದಾರೆ.

'ಮಹಿಳಾ ಆತ್ಮಕಥೆಗಳು' ಪ್ರಸ್ತುತ ಕೃತಿಯನ್ನು ಸಬಿಹಾ ಭೂಮಿಗೌಡ ಅವರು ಸಂಗ್ರಹಿಸಿ ೨೦೦೭ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಪ್ರಕಟಿಸಿದ್ದಾರೆ. ಇಲ್ಲಿನ ಬರಹಗಳು ಮಹಿಳಾ ಆತ್ಮಕಥೆಗಳ ಬಗ್ಗೆ ಗಂಭೀರವಾದ ಅಧ್ಯಯನಗಳು ನಡೆದದ್ದು ಕಡಿಮೆ, ಅದರಲ್ಲೂ ಕನ್ನಡವನ್ನೂ ಒಳಗೊಂಡಂತೆ ಇತರ ಭಾರತೀಯ ಭಾಷೆಗಳಲ್ಲಿ ಬಂದ ಮಹಿಳಾ ಆತ್ಮಕಥೆಗಳ ಕುರಿತ ಚರ್ಚೆ ನಡೆದಿಲ್ಲ. ಇಂತಹ ಒಂದು ಆರಂಭಿಕವಾದ ಚರ್ಚೆಯಲ್ಲಿ ಕನ್ನಡ, ಇಂಗ್ಲಿಷ್, ಮಲಯಾಳಂ, ತಮಿಳು, ಮರಾಠಿ ಮತ್ತು ಪಂಜಾಬಿ ಭಾಷೆಗಳಲ್ಲಿ ಬಂದ ಮಹಿಳಾ ಆತ್ಮಕಥೆಗಳ ಅವಲೋಕನ ಮತ್ತು ಪ್ರಾತಿನಿಧಿಕವಾದ ಕೆಲವು ಕೃತಿಗಳ ಗಂಭೀರ ಚರ್ಚೆ ಮಾಡಿದ್ದಾರೆ.

'ನೀರದಾರಿ' (ದಲಿತ ಮಹಿಳಾ ಪ್ರಜ್ಞೆ ವಿಭಿನ್ನ ನೆಲೆಗಳಿಂದ) ಪ್ರಸ್ತುತ ಕೃತಿಯನ್ನು ದು.ಸರಸ್ವತಿ ಅವರು ಸಂಗ್ರಹಿಸಿ ೨೦೧೪ರಲ್ಲಿ ಕವಿ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಇಲ್ಲಿ ದಲಿತ ಮಹಿಳಾ ಪ್ರಜ್ಞೆಯ ವಿವಿಧ ನೆಲೆಗಳನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ಜಾತಿ, ಲಿಂಗ, ವರ್ಗ, ತಾರತಮ್ಯದ ನೆಲೆಯಲ್ಲಿ ದಲಿತ ಮಹಿಳೆಯ ಓದು ಚರ್ಚೆ, ಸಂವಾದ, ಚಿಂತನ ಮಂಥನ, ಹುಡುಕಾಟದ ಕೆಲಸವನ್ನು ಈ ಕೃತಿಯಲ್ಲಿ ಚರ್ಚೆ ಮಾಡಿದ್ದಾರೆ. ಭಾಗ–೧ರಲ್ಲಿ ದಲಿತ ಸಾಧಕಿಯರ ನೆಲೆಯಲ್ಲಿ ೬ ಜನ ಮಹಿಳೆಯರ ಸಾಧನೆಯನ್ನು ಕುರಿತ ಲೇಖನಗಳಿವೆ. ಹಾಗೆಯೇ ದಲಿತ ಸಂಘಟಕರ ನೆಲೆಯಲ್ಲಿ ಹತ್ತು ಜನ ಪುರುಷರು ಆರು ಜನ ಮಹಿಳಾ ಸಂಘಟನಾಕಾರರು ಇರುವುದು ಸಮೀಕ್ಷೆ ಮಾಡುವುದರ ಮೂಲಕ ಚರ್ಚೆ ಮಾಡಿದ್ದಾರೆ. ಭಾಗ–೨ರಲ್ಲಿ ದಲಿತ ಮಹಿಳಾ ಪ್ರಜ್ಞೆ ಕುರಿತಂತೆ ಒಂಭತ್ತು ಲೇಖನಗಳನ್ನು ಮಂಡಿಸಿದ್ದಾರೆ. ಭಾಗ–೩ರಲ್ಲಿ ನೆರೆ ಹೊರೆ ಜಾತಿ ಪದ್ಧತಿ, ಸ್ತ್ರೀವಾದ, ರಾಜಕೀಯ ಸ್ತ್ರೀವಾದಿಗಳಾಗಿ ದಲಿತ ಮಹಿಳೆಯರ ಅನೇಕ ವಿಚಾರವನ್ನು ಕುರಿತು ಸಂಗ್ರಹಗೊಂಡಿವೆ. ಭಾಗ–೪ರಲ್ಲಿ ಜಾತಿ ವಿನಾಶ ಚಳುವಳಿ ಮತ್ತು ಮಹಿಳಾ ವಿಮೋಚನೆಗೆ ಸಂಬಂಧಿಸಿವೆ.

'ಸಂಸ್ಕೃತಿ ಮಹಿಳಾ ಮಾಲಿಕೆ' (ಸಂಪುಟ-೧) ಈ ಕೃತಿಯನ್ನು ಸಬಿಹಾ ಭೂಮಿಗೌಡ ಅವರು ಸಂಗ್ರಹಿಸಿ ೨೦೦೮ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಪ್ರಕಟಿಸಿದ್ದಾರೆ. ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯರ ಪಾತ್ರ ಮಹತ್ವಪೂರ್ಣವಾಗಿದೆ. ಇಂತಹ ಒಂದು ಸಾಂಸ್ಕೃತಿಕವಾದ ಮಾಹಿತಿಯನ್ನು ಜನಸಾಮಾನ್ಯರಿಂದ ಮಾಹಿತಿ ಸಂಗ್ರಹಿಸಿರುವುದರ ಮೂಲಕ ಎಲ್ಲಾ ಸಮುದಾಯಗಳಲ್ಲಿರುವ ಮಹಿಳೆಯರ ಆಚಾರ-ವಿಚಾರ ಉಡುಗೆ ತೊಡುಗೆ ಇತ್ಯಾದಿ ಮಾಹಿತಿಯನ್ನು ಈ ಸಂಪುಟದ ಆರು ಲೇಖನಗಳೂ ಸಹ ತಿಳಿಸುತ್ತ ಸಮುದಾಯದ ಹಿನ್ನೆಲೆಯಲ್ಲಿ ರೂಪಗೊಂಡ ಲೇಖನಗಳು ಆಗಿವೆ. ಆಧುನಿಕ ಸಂದರ್ಭದಲ್ಲಿ ಮಹಿಳೆಯರಲ್ಲಿರುವ ಜ್ಞಾನವನ್ನು ತಿಳಿದುಕೊಂಡು ಲೇಖನಗಳನ್ನು ಬರೆಯುವುದರ ಮೂಲಕ ಚರ್ಚೆಗೆ ಒಳಪಡಿಸಿರುವುದು ಮಹತ್ತರವಾಗಿದೆ.

'ಸಂಸ್ಕೃತಿ ಮಹಿಳಾ ಮಾಲಿಕೆ'(ಸಂಪುಟ ೫) ಈ ಕೃತಿಯನ್ನು ಮಲ್ಲಿಕಾ ಘಂಟಿ ಅವರು ಸಂಗ್ರಹಿಸಿ ೨೦೦೮ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಪ್ರಕಟಿಸಿದ್ದಾರೆ. ಪ್ರಸ್ತುತ ಈ ಸಂಪುಟದಲ್ಲಿ ಐದು ಲೇಖನಗಳು ಇವೆ. ಸಮುದಾಯದ ಸಂಸ್ಕೃತಿಯ ಸ್ತ್ರೀ ಕಥನಗಳನ್ನು ಕುರಿತು ಚರ್ಚಿಸಿದ್ದಾರೆ. ಪುರಾಣ ಪುಣ್ಯ ಕಥೆಗಳು ಹೇಗೆ ಸ್ತ್ರೀ ಪುರುಷರನ್ನು ಅರ್ಥೈಸಿವೆ ಹಾಗೂ ಅವುಗಳನ್ನು ನಿಜ ಬದುಕಿಗೂ ಎಳೆದು ತಂದು ಸಹಜವಾಗಿಸಿವೆ ಎನ್ನುವುದನ್ನು ವಿವರಿಸಿದ್ದಾರೆ.

'ಸ್ತ್ರೀವಾದಿ ಸಾಹಿತ್ಯ ವಿಮರ್ಶೆ' ಸಂಪಾದಕರು ತೇಜಸ್ವಿ ನಿರಂಜನ, ಸೀಮಂತಿನಿ ನಿರಂಜನ, ಪ್ರಸ್ತುತ ಈ ಕೃತಿಯನ್ನು ಸಂಗ್ರಹಿಸಿ ೧೯೯೪ರಲ್ಲಿ ಕನ್ನಡ ಸಂಘ ಕ್ರೈಸ್ಟ್ ಕಾಲೇಜ್‌ನಿಂದ ಪ್ರಕಟಿಸಿದ್ದಾರೆ. ಇಲ್ಲಿ ಆರು ಲೇಖನಗಳನ್ನು ಮಾತ್ರ ಸಂಗ್ರಹಿಸಿ ಉತ್ತಮವಾದ ಪೀಠಿಕೆಯನ್ನು ಬರೆದಿದ್ದಾರೆ. ಸ್ತ್ರೀವಾದಿ ಸಾಹಿತ್ಯ ವಿಮರ್ಶೆ ಕೃತಿಯಲ್ಲಿ ಮಹಿಳೆಯರು ರಚನೆ ಮಾಡಿದಂತೆ ಕಥೆ, ಕಾದಂಬರಿ, ಕವಿತೆ ಇತ್ಯಾದಿ ಮಹಿಳಾ ಸಾಹಿತ್ಯ ಗಂಭೀರವಾದ ವಿಮರ್ಶೆಗೆ ಒಳಪಡಿಸಿಲ್ಲ. ಏಕೆ ಏನು ಎಂಬುವುದನ್ನು ಕುರಿತು ಪ್ರಾಸ್ತಾವನೆಯಲ್ಲಿ ಚರ್ಚಿಸಿದ್ದಾರೆ. ಸ್ತ್ರೀವಾದಿ ಎಂದು ಕರೆಯಬಹುದಾದ ದೃಷ್ಟಿಕೋನ ಒಂದರಿಂದ ಸಾಹಿತ್ಯ ಸಂಸ್ಕೃತಿ, ಇತಿಹಾಸ, ರಾಜಕೀಯ ಮತ್ತಿತ್ತರ ವಿಷಯಗಳನ್ನು ವಿಶ್ಲೇಷಿಸಿದ್ದಾರೆ.

'ಸಾಕಾರದತ್ತ ಸಮಾನತೆಯ ಕನಸ್ಸು' (ಮಹಿಳಾ ಪ್ರತಿರೋಧದ ನೆಲೆಗಳು) ಪ್ರಸ್ತುತ ಕೃತಿಯನ್ನು ಪ್ರೀತಿ ಶುಭಚಂದ್ರ, ಎಂ.ಎಸ್.ಸುಮನಾ ಅವರು ಸಂಗ್ರಹಿಸಿ ೨೦೦೫ರಲ್ಲಿ ಲಡಾಯಿ ಪ್ರಕಾಶನದಿಂದ ಪ್ರಕಟಿಸಿದ್ದಾರೆ. ಕರ್ನಾಟಕದ ವಿವಿಧ ಭಾಗಗಳ ಮಹಿಳಾ ಸಂಘಟನೆಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡ ಹೋರಾಟಗಾರರು ಹಾಗೂ ಸಾಮಾಜಿಕ ಕಾರ್ಯಕರ್ತರರು ವಿಚಾರಸಂಕಿರಣದ ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡಿದ್ದು ಅವರು ಮಂಡಿಸಿದ ಲೇಖನಗಳನ್ನೇ ಸಂಗ್ರಹಿಸಲಾಗಿದೆ. ಸ್ತ್ರೀ-ಪುರುಷರ ಅಸಮಾನತೆಯ ಸ್ಥಾಪನೆಗಾಗಿ ಕಟ್ಟಲಾಗಿರುವ ತಾತ್ವಿಕ ಪರಿಭಾಷೆಯ ಸುತ್ತ ಸಾಹಿತ್ಯ, ಧರ್ಮ, ರಾಜಕೀಯ, ಯುದ್ಧ ಮೊದಲಾದ ವಲಯಗಳ ಮೀಮಾಂಸೆಗಳ ಮೂಲಕ ಚರ್ಚಿಸಿದ್ದಾರೆ. ಹಾಗೆ ವಿವಿಧ ಕಾಲ, ದೇಶ, ಸಮಾಜ ಬದ್ಧ ಸನ್ನಿವೇಶಗಳಲ್ಲಿ ರೂಪುಗೊಂಡ ಆಯಾ ಮಹಿಳಾ

ಸಮುದಾಯಗಳ ಅನುಭವಗಳನ್ನಾಧರಿಸಿದ ಸ್ತ್ರೀವಾದಿ ಜ್ಞಾನವನ್ನು ಭಾರತೀಯ ಸಾಮಾಜಿಕ ನೆಲೆಯಲ್ಲಿ ಸಂಗ್ರಹಿಸಿ ಪ್ರಕಟಿಸಿದ್ದಾರೆ.

'ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ' ಈ ಕೃತಿಯನ್ನು ಎಚ್.ಎಸ್.ಶ್ರೀಮತಿ ಅವರು ಸಂಗ್ರಹಿಸಿ ೨೦೦೬ರಲ್ಲಿ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಿಸಿದ್ದಾರೆ. ಪ್ರಸ್ತುತ ಸಂಪುಟದಲ್ಲಿ ಎಂಟು ಲೇಖನಗಳಿವೆ. ಭಾಗ-೧ರಲ್ಲಿ ಪೀಠಿಕೆ, ಚರಿತ್ರೆಯ ಲೇಖನ, ಕನ್ನಡ ಸಾಹಿತ್ಯ ಚರಿತ್ರೆಗಳು, ಮಹಿಳಾ ಸೃಜನಶೀಲತೆ ಮತ್ತು ಕವಿ-ಕೃತಿ ಓದುಗ ನೆಲೆಯ ಸಾಹಿತ್ಯ ಚರ್ಚೆಗಳು, ಮಹಿಳಾ ಸೃಜನಶೀಲತೆ ಮತ್ತು ಸಾಮಾಜಿಕತೆಯ ಬಗ್ಗೆ ತಿಳಿಸುತ್ತ ಭಾಗ-೨ರಲ್ಲಿ ಪ್ರಾಚೀನ ಕನ್ನಡ ಮಹಿಳಾ ಸಾಹಿತ್ಯ, ಪ್ರಾರಂಭಿಕ ಘಟ್ಟ ಭಾಗ-೩ರಲ್ಲಿ ಕ್ರಿ.ಶ.೧೫೫೦-೧೮೪೯ರ ವರೆಗಿನ ಕನ್ನಡ ಮಹಿಳಾ ಸಾಹಿತ್ಯ ಭಾಗ-೪ ತಿರುಮಲಾಂಬ ಅವರಿಂದ ೧೯೫೦ರ ವರೆಗಿನ ಕನ್ನಡ ಮಹಿಳಾ ಸಾಹಿತ್ಯ ಭಾಗ-೫ರಲ್ಲಿ ೧೯೫೦-೧೯೭೫ರ ವರೆಗಿನ ಕನ್ನಡ ಮಹಿಳಾ ಸಾಹಿತ್ಯ, ಭಾಗ-೬ರಲ್ಲಿ ೧೯೭೫ರ ಅನಂತರದ ಕನ್ನಡ ಮಹಿಳಾ ಸಾಹಿತ್ಯ, ಭಾಗ-೭ರಲ್ಲಿ ಸೃಜನೇತರ ಕನ್ನಡ ಮಹಿಳಾ ಸಾಹಿತ್ಯ ಭಾಗ-೮ರಲ್ಲಿ ಮಹಿಳಾ ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನಗಳ ಚರಿತ್ರೆಯನ್ನು ಹೇಳಲಾಗಿದೆ. ಹೀಗೆ ಕಾಲಘಟ್ಟಗಳಾಗಿ ವಿಂಗಡಿಸಿಕೊಂಡು ಮಹಿಳಾ ಸಾಹಿತ್ಯ ಚರಿತ್ರೆಯನ್ನು ವಿವಿಧ ವಿದ್ವಾಂಸರ ಮೂಲಕ ಲೇಖನಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ.

ಆಧುನಿಕ ಸಂದರ್ಭದಲ್ಲಿ ಸಾಕಷ್ಟು ಮಹಿಳೆಯರು ವಿಮರ್ಶಾ ಕ್ಷೇತ್ರದಲ್ಲಿ ಭಾಗವಹಿಸಿರುವುದು ಗಮನಾರ್ಹವಾಗಿದೆ. ಏಕೆಂದರೆ ಸಾಹಿತ್ಯ ವಲಯದಲ್ಲಿ ಮಹಿಳೆಯರ ಪ್ರವೇಶ ತಡವಾಗಿ ಆದರೂ ಅವರ ಸಾಧನೆ ಬಹುದೊಡ್ಡದು. ಗ್ರಂಥಸಂಪಾದಕರಗಿಂತ ಸಾಹಿತ್ಯ ವಿಮರ್ಶಕರು ಆಧುನಿಕ ಸಂದರ್ಭದಲ್ಲಿ ಹೆಚ್ಚು ಹೆಚ್ಚು ಕಂಡುಬರುತ್ತಾರೆ. ಇವರಿಗೆ ಹಲವಾರು ವಿಚಾರಸಂಕಿರಣಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಅನೇಕ ಸಂಘ ಸಂಸ್ಥೆಗಳ ಮೂಲಕ ಏರ್ಪಡಿಸುವುದರಿಂದ ಮಹತ್ವವಾದ ವಿಚಾರಸಂಕಿರಣಗಳಲ್ಲಿ ಭಾಗವಹಿಸಿ ಪ್ರಬಂಧ ಮಂಡನೆ ಮಾಡಿದ್ದಾರೆ. ಇಂತಹ ಲೇಖನಗಳ ಸಂಗ್ರಹವನ್ನು ಮಾಡಿ ಗ್ರಂಥರೂಪದಲ್ಲಿ ತರುವವರನ್ನು ಕೃತಿಯ ಪ್ರಧಾನ ಸಂಪಾದಕ ಹಾಗೂ ಸಂಪಾದಕರು ಎಂದು ತಮ್ಮ ಹೆಸರುಗಳನ್ನು ಬಳಸಿರುವುದನ್ನು ಕಾಣಬಹುದು.

ಆಧುನಿಕ ಸಂಗ್ರಹಗಳು ಸಹ ಮಹಿಳಾ ಜ್ಞಾನ ಪರಂಪರೆಯ ಅನಾವರಣದ ಒಂದು ಮಾದರಿಯಾಗಿರುವುದರಿಂದ ಪ್ರಸ್ತುತ ಗ್ರಂಥಸಂಪಾದನಾ ಕೃತಿಗಳ ಜೊತೆಗೆ ಅಭಿನಂದನೆ ಗ್ರಂಥಗಳ ವಿವಿಧ ಸಂಗ್ರಹಗಳ ಸಂಕ್ಷಿಪ್ತ ಪರಾಮರ್ಶನವು ಅಗತ್ಯವಾಗಿರುತ್ತದೆ. ಈ ಮುಖೇನ ಆಧುನಿಕ ಸಮಾಜದಲ್ಲಿ ಮಹಿಳೆಯ ಜ್ಞಾನ ವಿಶ್ಲೇಷಣೆ ಎಷ್ಟರಮಟ್ಟಿಗೆ ಇಂಬು ದೊರೆತಿದೆ ಎಂಬುದನ್ನು ಸಹ ತಿಳಿಯಲು ಸಹಾಯಕವಾಗುತ್ತದೆ. ಕೇವಲ ವ್ಯಕ್ತಿತ್ವ ಮತ್ತು ಸಾಹಿತ್ಯದ ಸಾಧನೆ ಅಷ್ಟೇ ಅಲ್ಲದೇ ಶಾಸ್ತ್ರ ಸಾಹಿತ್ಯ, ಜನಪ್ರಿಯ ಸಾಹಿತ್ಯ ಕ್ಷೇತ್ರದಲ್ಲಿ ಮಹಿಳೆಯರ ಸ್ಥಾನಮಾನಗಳನ್ನು ಕುರಿತು ತಿಳಿಯುವಲ್ಲಿ ಪ್ರಸ್ತುತ ಅಧ್ಯಯನವು ಸಹಕಾರಿಯಾಗಲಿದೆ.

ಈ ಅಧ್ಯಾಯದಲ್ಲಿ ವಿಶೇಷವಾಗಿ ಸಮಕಾಲೀನ ಸಂದರ್ಭದಲ್ಲಿ ಗ್ರಂಥಸಂಪಾದನ ಶಿಸ್ತು ಪಡೆದುಕೊಂಡ ವಿಭಿನ್ನ ಆಯಾಮವನ್ನು ಗುರುತಿಸಲಾಗಿದೆ. ಪಂಡಿತ ಆವೃತ್ತಿ, ಜನಪ್ರಿಯ ಆವೃತ್ತಿ, ಸಮಗ್ರ ಆವೃತ್ತಿಯ ಪರಿಕಲ್ಪನೆಯವರೆಗಿನ ಈ ಬೆಳವಣಿಗೆ ಗ್ರಂಥಸಂಪಾದನ ಇತಿಹಾಸದಲ್ಲಿ ಪ್ರಮುಖವಾದದ್ದು. ಮುದ್ರಣ ತಂತ್ರಜ್ಞಾನದ ಬೆಳವಣಿಗೆ ಅಧಿಕವಾದಂತೆ ಹಸ್ತಪ್ರತಿಗಳ ಸಂಖ್ಯೆ ಕಡಿಮೆಯಾದಂತೆ ಬದಲಾದ ವಿದ್ವತ್ತಿನ ವ್ಯಾಖ್ಯಾನಗಳ ಹಿನ್ನೆಲೆಯಲ್ಲಿ ನೋಡಿದಾಗ, ಸಂಪಾದನೆ ಹಾಗೂ ಸಂಪಾದಕತ್ವ ಎನ್ನುವುದು 'ಒಟ್ಟುಗೂಡಿಸು' 'ಸಂಗ್ರಹಿಸು' 'ಮಾಹಿತಿ ಶೇಖರಿಸು'ವ ನೆಲೆಯಾಗಿ ಕಾಣುತ್ತದೆ. ಸಂಪಾದಕ ಇಲ್ಲಿ ವಿವಿಧ ಜನರ ಸಂಪರ್ಕದೊಂದಿಗೆ ತನಗೆ ಬೇಕಾದ ಪಠ್ಯ ಅಥವಾ ತಾತ್ವಿಕತೆಯನ್ನು ಕಟ್ಟಿಕೊಳ್ಳುವ ಯಾಂತ್ರಿಕನಾಗಿ ಕಾಣುತ್ತಾನೆ. ಸಂಪಾದಕನಿಗೆ ಸಂಯೋಜಕ ಎಂದರೂ ಆದೀತು. ಮಾಹಿತಿ ತಂತ್ರಜ್ಞಾನದ ಕಾಲದಲ್ಲಿ ಬದುಕುತ್ತಿರುವ ನಾವು ಸಂಪಾದನೆ ಎನ್ನುವ ಪದಗುಚ್ಛವನ್ನು ಕೇವಲ ಶಾಸ್ತ್ರೀಯ ಸಂಪಾದನೆಗೆ ಸೀಮಿತಗೊಳಿಸಿ ಬಳಸುವಂತಿಲ್ಲ. ಅದರಲ್ಲೂ ಆಧುನಿಕ ಮಹಿಳಾ ಬರಹಗಾರರು ಸಂಗ್ರಹಿಸಿ ಸಂಪಾದಕೀಯ ಬರೆದು ಪ್ರಕಟಿಸುವ ಹೆಚ್ಚಿನ ಬರಹಗಳು ಕನ್ನಡ ಮಹಿಳೆಯ ಅಸ್ತಿತ್ವ, ಅನನ್ಯತೆ ಹಾಗೂ ಸಂವೇದನೆಯ ಸ್ವರೂಪಗಳನ್ನು ಕಟ್ಟಿಕೊಳ್ಳಲು ಪ್ರಯತ್ನಿಸುತ್ತವೆ. ಪಠ್ಯ ಅಥವಾ ರೂಪವೊಂದನ್ನು ವಿವಿಧ ದೃಷ್ಟಿಕೋನಗಳಲ್ಲಿ ವ್ಯಾಖ್ಯಾನಿಸುವ ಬಗೆಯನ್ನು ಗ್ರಂಥಸಂಪಾದನ ಕ್ಷೇತ್ರದ ಮೊದಲ ಮಹಿಳೆಯಾದ ಚಂಪಾಬಾಯಿಯವರಲ್ಲಿಯೇ ನಾವು ಕಾಣುತ್ತೇವೆ. ಇಲ್ಲಿ ಶಾಸ್ತ್ರ ಸಾಹಿತ್ಯದ ಮೊದಲ ತಲೆಮಾರಿನವರು ಹಾಗೂ ಆಧುನಿಕತೆಯ ಜನಪ್ರಿಯ ಸಾಹಿತ್ಯದ ಆಸಕ್ತ ಮಹಿಳಾ ಗ್ರಂಥಸಂಪಾದನಾ ವಿದ್ವಾಂಸರುಗಳಲ್ಲಿ ಆಯಾ ಪ್ರಕಾರಗಳಿಗನುಗುಣವಾಗಿ ವಿಶಿಷ್ಟತೆಯನ್ನು ಗುರುತಿಸಬಹುದು. ಬಹುತ್ವದ ನೆಲೆಯಲ್ಲಿ ಇಂದಿನ ಜನಪ್ರಿಯ ಮಾದರಿ ಸಾಹಿತ್ಯ ಪಠ್ಯಗಳ ಅನುಸಂಧಾನಗಳ ಕ್ರಿಯಾಶೀಲತೆಯನ್ನು ದಟ್ಟವಾಗಿ ಕಾಣುತ್ತೇವೆ. ಇದನ್ನ ಶಾಬ್ದಿಕ ಸಂಸ್ಕರಣಕ್ಕಿಂತ ಬದಲಾಗಿ ಸಾಮಾಜಿಕ ಹಾಗೂ ಸಾಮೂಹಿಕ ಸಂಸ್ಕರಣವೆಂದು ಕಂಡುಕೊಳ್ಳಲಾಗಿದೆ. ಆದರೆ ಪ್ರಾಚೀನ ಸಾಹಿತ್ಯ ಪಠ್ಯಗಳ ಸಂಪಾದನ ಕಾರ್ಯಗಳಿಗೆ ಒಂದು ನಿಯಮ ಇದೆ. ಅದನ್ನು ಅನುಸರಿಸದೆ ಪಠ್ಯಗಳನ್ನು ಮುಟ್ಟದ ಹೊರತು ಅರ್ಥೈಸಿಕೊಳ್ಳಲು ಸಾಧ್ಯವಿಲ್ಲ.

ಅಡಿಟಿಪ್ಪಣಿ

೧. ಡಾ.ಸಿ.ಆರ್.ಕಮಲಮ್ಮ, ಸುಕುಮಾರ ಚರಿತ್ರೆ, ಪು.೪, ೧೯೬೫

೨. ಶ್ರೀಮತಿ ಮಂದಾಕಿನಿ, ಶ್ರೀ ಶ್ರೀ ಶ. ಪ್ರಾಣೇಶದಾಸರ ಹಾಡುಗಳು, ಪು.೨೪, ೨೦೦೩

೩. ಡಾ.ಟಿ.ಎನ್.ನಾಗರತ್ನ, ಶ್ರೀ ವಾದಿರಾಜರ ಕೀರ್ತನೆಗಳು, ಪು.೨೬, ೨೦೦೩

೪. ಡಾ. ಚೆನ್ನಕ್ಕ ಎಲಿಗಾರ, ಮಡಿವಾಳ ಮಾಚಿದೇವರ ವಚನಗಳು, ಪು.೨, ೧೯೮೭

೫. ಟಿ.ಕೆ.ಇಂದುಬಾಯಿ, ಶ್ರೀ ಪ್ರಸನ್ನವೆಂಕಟದಾಸರ ಕೀರ್ತನೆಗಳು, ಪು.೨೩, ೨೦೦೩

೬. ಸರೋಜಿನಿ ಚವಲಾರ, ನೀಲಾಂಬಿಕೆ ವಚನಗಳು, ಪು.೧೨, ೧೯೮೬

ಅಧ್ಯಾಯ ಐದು

ಮಹಿಳಾ ಗ್ರಂಥಸಂಪಾದನಕಾರರ ವೈಶಿಷ್ಟ್ಯ

ಅಧ್ಯಾಯ ಐದು

ಮಹಿಳಾ ಗ್ರಂಥಸಂಪಾದನಕಾರರ ವೈಶಿಷ್ಟ್ಯ

ಕನ್ನಡ ಗ್ರಂಥಸಂಪಾದನ ಕ್ಷೇತ್ರದಲ್ಲಿ ಸಂಖ್ಯಾದೃಷ್ಟಿಯಿಂದ ಮಹಿಳೆಯರ ಪ್ರವೇಶ ಕಡಿಮೆ ಎನಿಸಿದರೂ ಅವರು ನೀಡಿದ ಕೊಡುಗೆ ಉಪೇಕ್ಷಿಸುವಂತದಲ್ಲ. ಆದರೆ ಇದುವರೆಗೆ ನಡೆದ ಅಧ್ಯಯನಗಳು ಮಹಿಳಾ ವಿದ್ವತ್ತನ್ನು ಗಂಭೀರವಾಗಿ ಪರಿಗಣಿಸದೆ ಇರುವುದು ಕಂಡು ಬರುತ್ತದೆ. ರೂಢಿಗತ ಗ್ರಂಥಸಂಪಾದನ ವೈಧಾನಿಕತೆಯನ್ನು ಅನುಸರಿಸಿ ತಮ್ಮ ಗ್ರಂಥಸಂಪಾದನ ವೈಧಾನಿಕತೆಯನ್ನು ಮಹಿಳಾ ವಿದ್ವಾಂಸರು ರೂಢಿಸಿಕೊಂಡರೂ ಅವರದೇ ಆದ ವೈಶಿಷ್ಟ್ಯವನ್ನು ಉಳಿಸಿಕೊಂಡಿದ್ದಾರೆ.

ಗ್ರಂಥಸಂಪಾದನ ಕ್ಷೇತ್ರದಲ್ಲಿ ಪ್ರವೇಶ ಪಡೆದ ಮೊದಲ ಮಹಿಳಾ ವಿದ್ವಾಂಸರೆಂದು ಗುರುತಿಸಿಕೊಂಡಿರುವ ಡಿ. ಚಂಪಾಬಾಯಿ ಅವರು ೧೯೪೦ರಲ್ಲಿ 'ಹದಿಬದೆಯ ಧರ್ಮ' ಕೃತಿಯನ್ನು ನಾಲ್ಕು ಹಸ್ತಪ್ರತಿಗಳನ್ನು ಬಳಸಿಕೊಂಡು ಪರಿಷ್ಕರಿಸುತ್ತಾರೆ. ಇಲ್ಲಿನ ಅವರ ವೈಶಿಷ್ಟ್ಯವೆಂದರೆ ಪುರುಷ ವಿದ್ವತ್ ಪ್ರಧಾನವಾದ ಈ ಕ್ಷೇತ್ರದಲ್ಲಿ ಆಗಲೇ ಹೆಸರು ಮಾಡಿದ ಎಂ.ಎ. ರಾಮಾನುಜ ಅಯ್ಯಂಗಾರ್ ಅವರು ೧೯೪೩ರಲ್ಲಿ ಪರಿಷ್ಕರಿಸಿ ಪ್ರಕಟಿಸಿದ 'ಹದಿಬದೆಯ ಧರ್ಮ' ಕೃತಿಯನ್ನು ಸಂಪಾದಿಸಿರುವುದು ಡಿ. ಚಂಪಾಬಾಯಿ ಅವರು ತಮ್ಮ ಪರಿಷ್ಕೃತ ಆವೃತ್ತಿಯಲ್ಲಿ ನೀಡಿದ ಹೊಸ ಸಂಗತಿಗಳು ಎಂದರೆ 'ಹದಿಬದೆಯ ಧರ್ಮಕ್ಕೆ' 'ಸ್ತ್ರೀ ಧರ್ಮ ಸಾಂಗತ್ಯ' ಮತ್ತು 'ಪತಿವ್ರತಾ ಸ್ತ್ರೀ ಧರ್ಮ ಸಾರ' ಎಂಬ ಪರ್ಯಾಯ ಹೆಸರುಗಳನ್ನು ಶೋಧಿಸಿದರು. ಹಸ್ತಪ್ರತಿಗಳ ಶಾಸ್ತ್ರೀಯ ವರ್ಗೀಕರಣ ಪಾಠಾಂತರ ಗುರುತಿಸುವಿಕೆಯಲ್ಲಿ ತೋರುವ ಸೂಕ್ಷ್ಮತೆ ಮತ್ತು ಖಚಿತ ವಿಮರ್ಶಾ ದೃಷ್ಟಿಕೋನ ಅವರ ಸಂಪಾದನೆಯ ವಿಶೇಷಗಳಾಗಿವೆ. ೪೮ ಪುಟಗಳ ಅಭ್ಯಾಸ ಪೂರ್ಣ ಪ್ರಸ್ತಾವನೆಯಲ್ಲಿ ಒಟ್ಟು ಭಾರತೀಯ ಸ್ತ್ರೀ ಸಂಕಥನ ಮಾದರಿಯನ್ನು ಅರ್ಥ ಪೂರ್ಣವಾಗಿ ಕಟ್ಟಿಕೊಡುತ್ತಾರೆ. ಎಲ್ಲಿಯೂ ಅತಿ ಭಾವುಕವಾಗದ, ತೀರ ಆದರ್ಶವು ಆಗದ ಒಂದು ವೈಚಾರಿಕ ಸ್ತ್ರೀ ಸಂವೇದನೆಯ ಸಾಧ್ಯತೆಗಳನ್ನು ಹುಡುಕಿಕೊಡುವ ಮೂಲಕ 'ಸಂಚಿಹೊನ್ನಮ್ಮನ' ಆಶೋತ್ತರಗಳನ್ನು ವಿಸ್ತರಿಸುತ್ತಾರೆ. ಆ ಮೂಲಕ ಸಾಂಪ್ರದಾಯಿಕ ಗುರುತುಗಳಿಗಿಂತ ಭಿನ್ನವಾದ ವ್ಯಕ್ತಿತ್ವ ಒಂದನ್ನು ಶೋಧಿಸುತ್ತಾರೆ. ಪರಿಷ್ಕರಣದ ಜೊತೆಗೆ ಸಂಪ್ರದಾಯಿಕವಾಗಿ ಬಳಕೆಯಲ್ಲಿದ್ದ ಪಠ್ಯಕೇಂದ್ರಿತ ಉನ್ನತ ವಿಮರ್ಶೆಗಿಂತ ಒಂದು ಸಮಾಜಕ್ಕೆ ವಿಮರ್ಶೆಯನ್ನು ಒದಗಿಸಿಕೊಡುತ್ತಾರೆ. ಇದು ಡಿ. ಚಂಪಾಬಾಯಿ ಅವರಲ್ಲಿ ಕಾಣುವ ವೈಶಿಷ್ಟ್ಯವಾಗಿದೆ.

ಕನ್ನಡ ಗ್ರಂಥಸಂಪಾದನೆಯಲ್ಲಿ ಅಪ್ರತಿಮ ಕೆಲಸ ಮಾಡಿದ ಮತ್ತೊಬ್ಬ ವಿಶಿಷ್ಟ ಮಹಿಳಾ ವಿದ್ವಾಂಸರು ವೈ.ಸಿ. ಭಾನುಮತಿ ಅವರಾಗಿದ್ದಾರೆ. ಹಳೆಗನ್ನಡ, ಮಹಿಳಾ ಸಾಹಿತ್ಯ, ಜನಪದ, ವಿಮರ್ಶೆ, ಸಂಶೋಧನೆ ಹೀಗೆ ಸಾಹಿತ್ಯದ ಹಲವು ಮಜಲುಗಳಲ್ಲಿ ಕೆಲಸ ಮಾಡಿದ ಬಹುಶ್ರುತ ವಿದ್ವಾಂಸರು. ಮಾರ್ಗ, ದೇಸಿ, ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ೨೮ಕ್ಕೂ ಹೆಚ್ಚು ಕೃತಿಗಳನ್ನು ಪರಿಷ್ಕರಿಸಿ ಪ್ರಕಟಿಸಿದ ಹೆಗ್ಗಳಿಕೆ ಅವರದು. ಜೊತೆಗೆ ಗ್ರಂಥಸಂಪಾದನೆಯ ವಿವಿಧ ಆಯಾಮ ಕುರಿತಂತೆ ೪ ಗ್ರಂಥಗಳನ್ನು, ಹಳೆಗನ್ನಡ ಅಧ್ಯಯನ ಸಂಶೋಧನೆಗೆ ಸಂಬಂಧಿಸಿದಂತೆ ೨ ಗ್ರಂಥಗಳನ್ನು, ಜಾನಪದಕ್ಕೆ ಸಂಬಂಧಿಸಿದಂತೆ ಹತ್ತು ಹಾಗೂ ಸಹಭಾಗಿತ್ವದಲ್ಲಿ ಹತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ.

ವೈ.ಸಿ.ಭಾನುಮತಿಯವರು ಹಳಗನ್ನಡ ಕೃತಿಗಳನ್ನು ಸಂಪಾದಿಸುವಾಗ ಕನ್ನಡ ಗ್ರಂಥ ಸಂಪಾದನೆಗೊಂದು ಖಚಿತತೆ ನೀಡಿದ ಡಿ.ಎಲ್. ನರಸಿಂಹಾಚಾರ್ಯ ಅನುಸರಿಸಿದ ಗ್ರಂಥಸಂಪಾದನಾ ಮಾದರಿಗಳನ್ನು ಹೆಚ್ಚು ಅವಲಂಬಿಸುತ್ತಾರೆ. ಹಸ್ತಪ್ರತಿ ಸಂಗ್ರಹ, ಆಯ್ಕೆ ವಿಧಾನ, ಪ್ರತಿ ಮಾಡುವಿಕೆ, ಸಂಗ್ರಹ, ಸಂಯೋಜಕ ಮತ್ತು ವಿಚ್ಛೇದಕ ಸ್ಖಾಲಿತ್ಯಗಳ ಮೂಲಕ ವಂಶಾವಳಿ ನಿರ್ಣಯ, ಪಾಠ ಪರಿಷ್ಕರಣ, ಉನ್ನತ ವಿಮರ್ಶೆಯ ಜೊತೆಗೆ ಖಚಿತವಾದ ವೈಧಾನಿಕತೆಯನ್ನು ಅವರು ಸಂಪಾದಿಸಿದ ಕೃತಿಗಳಲ್ಲಿ ಗುರುತಿಸಬಹುದು. ಭಾನುಮತಿಯವರ ವೈಧಾನಿಕತೆ ವಿಶೇಷತೆಯೆಂದರೆ ನಿರ್ದಿಷ್ಟ ಮತ, ಧರ್ಮ ಹಾಗೂ ಛಂದಸ್ಸನ್ನು ಮಾತ್ರ ನೆಚ್ಚದೆ ಕೃತಿಯ ಬಗೆಗಿನ ಸಾಂಸ್ಕೃತಿಕ ಆಯಾಮಗಳನ್ನು ಬಳಸಿಕೊಳ್ಳುತ್ತಾರೆ. ಜೈನ ಕೃತಿಗಳನ್ನು ಸಂಪಾದಿಸುವಾಗ ತತ್ವಸಿದ್ಧಾಂತಗಳ ಅರಿವಿನಲ್ಲಿ ವೀರಶೈವ ಕೃತಿಗಳ ಪರಿಷ್ಕರಣದ ಸಮಯದಲ್ಲಿ ವೀರಶೈವ ತತ್ವಸಿದ್ಧಾಂತಗಳ ಅರಿವಿನಲ್ಲಿ ವೈದಿಕ ಕೃತಿಗಳ ಸಂಪಾದನೆಯಲ್ಲಿ ವೈದಿಕ ಸಿದ್ಧಾಂತಗಳ ಅರಿವಿನಲ್ಲಿ ಪರಿಷ್ಕರಿಸುತ್ತಾರೆ. ಅಂದರೆ ಕೃತಿ ಸಂಪಾದನೆಯಲ್ಲಿ ಕೇವಲ ಪಠ್ಯವನ್ನು ಮಾತ್ರ ನೆಚ್ಚದೆ ಆ ಪಠ್ಯಕ್ಕಿದ್ದ ಮತ್ತು ಪಠ್ಯ ರೂಪಗೊಂಡ ಹಲವು ಆಯಾಮಗಳನ್ನು ಆಯಾ ಮತಧರ್ಮಗಳ ತಾತ್ತ್ವಿಕತೆಯಲ್ಲಿ ಶೋಧಿಸುತ್ತಾರೆ. ಆ ಮೂಲಕ ಪಠ್ಯದ ಸ್ವರೂಪವೊಂದನ್ನು ಖಚಿತಪಡಿಸಿಕೊಳ್ಳುತ್ತಾರೆ. ಇನ್ನೊಂದು ರೀತಿ ಹೇಳಬೇಕೆಂದರೆ ಶಾಬ್ದಿಕ ಸಂಸ್ಕರಣಕ್ಕಿಂತ ರಾಚನಿಕ ಸಂಸ್ಕರಣಕ್ಕೆ ಮೊದಲ ಬಾರಿಗೆ ಆದ್ಯತೆ ನೀಡುತ್ತಾರೆ ಪಾಠಾಂತರಕ್ಕೆ ಕಾರಣಗಳನ್ನು ಕೇವಲ ವ್ಯಕ್ತಿ ಅಥವಾ 'ಪದ'ದ ಹಂಗಿನಲ್ಲಿ ಹುಡುಕದೆ ಸಂಬಂಧಿಸಿದ ಕಥೆ ಅಥವಾ ಧರ್ಮದ ಪರಂಪರೆಯಲ್ಲಿ ಹುಡುಕುತ್ತಾರೆ. ಯಾವುದೇ ಒಂದು ನಿರ್ದಿಷ್ಟ ಧಾರ್ಮಿಕ ಹಾಗೂ ಲಾಕ್ಷಣಿಕ ಗುರುತುಗಳಿಗೆ ಅವರು ಅಂಟಿಕೊಳ್ಳುವುದಿಲ್ಲ. ಏಕೆಂದರೆ ಮಾರ್ಗ ಸಾಹಿತ್ಯ ಸಂಪಾದನೆಯಲ್ಲಿ ಚಂಪೂ ಕೃತಿಗಳನ್ನು ಮತ್ತು ದೇಶೀ ಸಾಹಿತ್ಯ ಸಂಪಾದನೆ ಸಂದರ್ಭದಲ್ಲಿ ಷಟ್ಪದಿ, ತ್ರಿಪದಿ, ಸಾಂಗತ್ಯ, ಸ್ವರವಚನ ಹಾಗೂ ಹಾಡುಗಬ್ಬ ಜಾನಪದ ಹೀಗೆ ಸಾಹಿತ್ಯ ಸಂಸ್ಕೃತಿಯ ಅನೇಕ ಪ್ರಕಾರದ ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಅಲ್ಲಿ ಎಲ್ಲಿಯೂ ಅವರು ವ್ಯಕ್ತಿಸ್ವಾಮ್ಯ ಹಾಗೂ ಏಕಸ್ವಾಮ್ಯವಾದ ವಿಚಾರಗಳಿಗೆ ಎಡೆ ಕೊಡುವುದಿಲ್ಲ. ನಿಷ್ಪಕ್ಷಪಾತತೆ ಹಾಗೂ ನಿಸ್ಸಂಶಯ ಅವರ ಗ್ರಂಥಸಂಪಾದನೆ ವಿದ್ವತ್ತಿನ ವಿಶಿಷ್ಟತೆಯಾಗಿದೆ. ಅದಕ್ಕಾಗಿ ಕೆಲವು ನಿದರ್ಶನಗಳನ್ನು ನೋಡಬಹುದು.

ಮಲ್ಲರಸ ರಚಿಸಿದ ದಶಾವತಾರ ಚರಿತೆಯನ್ನು ಸಂಪಾದಿಸಿದ್ದಾರೆ. ಇದೊಂದು ಚಂಪೂ ಕಾವ್ಯ ಇದರಲ್ಲಿ ೧೧ ಆಶ್ವಾಸಗಳು ೧೧೭೯ ಪದ್ಯಗಳಿವೆ. ಇದರ ಸಂಪಾದನೆಯಲ್ಲಿ ಭಾನುಮತಿಯವರ ಪಾಂಡಿತ್ಯ ಅಗಾಧವಾಗಿ ಮೂಡಿಬಂದಿದೆ. ಹಸ್ತಪ್ರತಿಗಳ ಶಾಸ್ತ್ರೀಯ ವಿಂಗಡಣೆಯ ಜೊತೆಗೆ ವಿಶೇಷವಾಗಿ ಭಾರತೀಯ ಭಾಷೆಗಳಲ್ಲಿ ಬಂದಿರುವ 'ದಶಾವತಾರಗಳ ಬಗ್ಗೆ ಹೆಚ್ಚಿನ ಅಧ್ಯಯನ ಮಾಡುತ್ತಾರೆ. ಅದರ ಕವಿ ಕಾಲ ವಿಚಾರ, ಕಥಾಸಾರದ ಹಿನ್ನೆಲೆ ಜೊತೆಗೆ ವೈಷ್ಣವೇತರ ದಶಾವತಾರಗಳ ಪರಿಚಯವನ್ನು ಪ್ರಸ್ತಾವನೆಯಲ್ಲಿ ನೀಡುತ್ತಾರೆ. ಮಲ್ಲರಸ ಕವಿಯ ಕಾಲವನ್ನು ಮರು ಪರಿಶೀಲನೆಗೆ ಒಳಪಡಿಸಿ ಕೃತಿಯ ಬಾಹ್ಯ ಮತ್ತು ಅಂತರಿಕ ಆಧಾರಗಳಿಂದ ಕವಿಯ ಕಾಲ ೧೬೫೦' ಎಂಬುದಾಗಿ ಆಧಾರ ಸಮೇತ ದಾಖಲಿಸುತ್ತಾರೆ. ಈತ ಮಹಾ ಕವಿಯಲ್ಲದಿದ್ದರೂ ವಿವಿಧ ಛಂದಸ್ಸುಗಳ ಪ್ರಯೋಗ, ಸರಳ ನಿರೂಪಣೆಯಿಂದಾಗಿ ಒಂದು ವಿಶಿಷ್ಟ ಕಾವ್ಯವಾಗಿದೆ ಎಂದಿದ್ದಾರೆ.

ಅನಂತನಾಥ ಚರಿತೆಯ ಸಂಪಾದನೆಯಲ್ಲಿ ಭಾನುಮತಿ ಅವರ ಸಂಪಾದನೆಯ ವೈಧಾನಿಕತೆಯ ಮತ್ತಷ್ಟು ವಿಶಿಷ್ಟತೆಗಳನ್ನು ನೋಡಬಹುದು 'ಅನಂತನಾಥ ಚರಿತೆ' ಕನ್ನಡ ಸಾಹಿತ್ಯಕ್ಕೆ ಜೈನರು ನೀಡಿದ ವಿಶಿಷ್ಟ ಕೊಡುಗೆ ಎಂಬುದನ್ನು ಭಾನುಮತಿಯವರು ತಮ್ಮ ವಿದ್ವತ್ಪೂರ್ಣ ಶೋಧಗುಣದ ಮೂಲಕ ವಿವರಿಸುತ್ತಾರೆ. ದೀರ್ಘವಾದ ಕಾವ್ಯವನ್ನು ವಿದ್ವತ್ಪೂರ್ಣವಾಗಿ ಸಂಪಾದಿಸಿದ್ದಾರೆ. ಕವಿ ಕಾಲ ವಿಚಾರ ಕುರಿತು ಮರುಶೋಧ ಮಾಡುತ್ತಾರೆ.

'ಸರಜಾಹನುಮೇಂದ್ರ ಯಶೋವಿಲಾಸಂ' ಎನ್ನುವ ಚಾರಿತ್ರಿಕ ಕಾವ್ಯವನ್ನು ಸಂಪಾದಿಸುತ್ತಾರೆ. ಕವಿ ಕಾಲ ಮತ್ತು ಕಥಾನಾಯಕನ ಕುರಿತು ಅವರು ನಡೆಸುವ ಚರ್ಚೆಗಳು ವಿಶಿಷ್ಟವಾದಂತಹವು. ಕನ್ನಡ ಕಾವ್ಯಗಳಲ್ಲಿ ಮತ್ತು ಜನಪದ ಗೀತೆಗಳಲ್ಲಿ ಪ್ರಸ್ತಾಪವಾದ ಪಾಳೆಗಾರರ ವಿವರಗಳನ್ನು ತಮ್ಮ ಸಂಪಾದನೆಯ ಪರಿಪೂರ್ಣತೆಗಾಗಿ ಔಚಿತ್ಯಪೂರ್ಣವಾಗಿ ಬಳಸಿಕೊಳ್ಳುತ್ತಾರೆ. ಜೊತೆಗೆ ವಿವಿಧ ಸ್ಥಳೀಯ ವೃತ್ತಾಂತಗಳನ್ನು, ಕೈಫಿಯತ್ತುಗಳ ಮಾಹಿತಿಗಳನ್ನು ಬಳಸಿಕೊಳ್ಳುತ್ತಾರೆ. ಇದು ಅವರ ಚಾರಿತ್ರಿಕ ಕಾವ್ಯಗಳ ವೈಶಿಷ್ಟ್ಯವಾಗಿದೆ. ಭೈರವೇಶ್ವರ ಪುರಾಣ ನಿಜಲಿಂಗ ಚಿಕ್ಕಯ್ಯನ ಸಾಂಗತ್ಯ ಮುಂತಾದ ಷಟ್ಪದಿ ಮತ್ತು ಸಾಂಗತ್ಯ ಕೃತಿಗಳ ಪರಿಷ್ಕರಣದ ಸಂದರ್ಭದಲ್ಲಿ ಅವರು ಬಳಸಿಕೊಳ್ಳುವ ವೈಧಾನಿಕತೆ ಬಹುಶಿಸ್ತೀಯ ಹಾಗೂ ಅಂತರ್ ಶಿಸ್ತೀಯ ಗುಣವುಳ್ಳದ್ದಾಗಿದೆ.

ಚೆನ್ನಬಸವ ಕವಿಯ 'ಪುರಾತನರ ಚರಿತೆ' ಎನ್ನುವ ವಾರ್ಧಕ ಷಟ್ಪದಿಯ ಕಾವ್ಯವನ್ನು ಭಾನುಮತಿಯವರು ಸಂಪಾದಿಸುತ್ತಾರೆ. ಕವಿ ಕಾಲ ಮತ್ತು ಕಥಾವಸ್ತುವನ್ನು ಕುರಿತು ನಡೆಸುವ ಚರ್ಚೆ ವಿಶಿಷ್ಟವಾದಂತಹದ್ದು. ಈ ಕಾವ್ಯಕ್ಕೆ 'ಗಣಾಡಂಬರ ಚರಿತೆ' ಎಂಬ ಪರ್ಯಾಯ ನಾಮವಿದ್ದು ಇಲ್ಲಿ ಗಣಗಳ ಮರೆತ ಇರುವ ಕಾರಣ ಜನರ ಬಾಯಲ್ಲಿ 'ಗಣಡಂಬರ' ಚರಿತೆ ಎಂದಾಗಿರಬೇಕು ಎಂದು ಶೋಧಿಸುತ್ತಾರೆ. ಹಾಗೆಯೇ ಸಿದ್ದರಾಮ ಕವಿಯ 'ಷಟ್ಸ್ಥಲ ತಿಲಕ' ವಾರ್ಧಕ ಷಟ್ಪದಿಯ ೨೦ ಸಂಧಿಗಳು ೮೮೧ ಪದ್ಯಗಳ ದೀರ್ಘ ಕಾವ್ಯವನ್ನು ಪರಿಷ್ಕರಿಸುವ ಸಂದರ್ಭದಲ್ಲಿ ಪದ್ಯಗಳ

ಆಧಾರದಿಂದ ೧-೭ ಮತ್ತು ೧-೧೩೭ ನೆಯ ಪದ್ಯಗಳಲ್ಲಿ 'ಶಿಖಾಪುರ' ಎಂಬುದು ಕನ್ನಡೀಕರಣವಾಗಿ ಈಗ 'ಕೊಟ್ಟೂರು' ಎಂದಾಗಿದೆ ಎಂಬುದನ್ನು ವಿಶೇಷವಾಗಿ ಗುರುತಿಸಿದ್ದಾರೆ.

'ಸಹ್ಯಾದ್ರಿಖಂಡ' ಕೃತಿ ಸಂಪಾದನೆಯಲ್ಲಿ ಅವರ ಪರಿಷ್ಕರಣದ ಮತ್ತೊಂದು ವೈಶಿಷ್ಟ್ಯವನ್ನು ಗುರುತಿಸಬಹುದು. ತೀರ್ಥಕ್ಷೇತ್ರದ ವಿವರಗಳಿಗೆ ಮೀಸಲಾಗಿರುವ ಈ ಕೃತಿಯ ಸಂಪಾದನೆಯಲ್ಲಿ ಅವರ ಶ್ರಮ ಮತ್ತು ಶ್ರದ್ಧೆ ಎದ್ದು ಕಾಣುತ್ತದೆ. ಏಕೆಂದರೆ 'ನೂರು ತೀರ್ಥಗಳು' ೮೦ ಕ್ಷೇತ್ರಗಳ ಬಗ್ಗೆ ವಿಶ್ಲೇಷಣೆ ಮಾಡಿದ್ದಲ್ಲದೆ ಸಹ್ಯಾದ್ರಿ ಖಂಡದ ಕಥಾ ವಸ್ತುವಿನ ಮೂಲ ಸ್ಕಾಂದ ಪುರಾಣದಲ್ಲಿರುವುದನ್ನು ಅಭ್ಯಾಸಪೂರ್ಣವಾಗಿ ಗುರುತಿಸಿಕೊಡುತ್ತಾರೆ. ಇದು ಒಂದು ವಿಶಿಷ್ಟ ಭೌಗೋಳಿಕ ವಿಶ್ವಕೋಶವಾಗಿದೆ ಎನ್ನುವುದನ್ನು ಗುರುತಿಸುತ್ತಾರೆ. ಕವಿ ಮತ್ತು ಕಥಾ ವಸ್ತುವಿನ ಕೆಲವು ಸಂಗತಿಗಳಿಗೆ ವೈಚಾರಿಕ ಆಕ್ಷೇಪಗಳನ್ನು ಎತ್ತುತ್ತಾರೆ. ಅನುಬಂಧದಲ್ಲಿ ಅವರು ನೀಡುವ ಕ್ಷೇತ್ರ ಸೂಚಿ, ತೀರ್ಥ ಸೂಚಿ, ವ್ಯಕ್ತಿನಾಮ ಸೂಚಿ, ಅರ್ಥಕೋಶ, ಪದ್ಯಗಳ ಆಕಾರಾದಿ, ಆಕರಗ್ರಂಥಗಳ ಸೂಚಿ, ಪುರುಷ ವಿದ್ವತ್ತಿನ ಅಹಂಕಾರಗಳಿಗೆ ಸವಾಲು ಎಸೆಯುವಂತಿವೆ.

'ವಿಜಯಕುಮಾರಿ ಚರಿತೆ' ಪರಿಷ್ಕರಣವು ಅವರ ಸಂಪಾದನೆಯ ವೈಧಾನಿಕತೆಯ ಮತ್ತೊಂದು ಮಗ್ಗಲು ಆಗಿದೆ. ಈ ಕೃತಿಯನ್ನು ವೈ.ಸಿ. ಭಾನುಮತಿ ಅವರೇ ಮೊದಲ ಬಾರಿಗೆ ಸಮಗ್ರವಾಗಿ ಸಂಪಾದಿಸಿ ಪ್ರಕಟಿಸಿದ್ದಾರೆ. ಈ ಕೃತಿಯ ಸಾರ್ಥಕ ಸಂಪಾದನೆಯ ಜೊತೆಗೆ ಹಲವು ಸಮಸ್ಯೆಗಳನ್ನು ಕೂಡ ಅವರು ಎದುರಿಸಿದ್ದಾರೆ. ಪ್ರಸ್ತುತ ಕೃತಿಯು ಹೆಣ್ಣೊಬ್ಬಳ ಕಥೆಯನ್ನು ವಸ್ತುವಾಗಿಟ್ಟುಕೊಂಡು ಕನ್ನಡದಲ್ಲಿ ರಚಿತವಾದ ಮೊದಲ ಜೈನ ಕೃತಿ ಎಂಬುದನ್ನು ಭಾನುಮತಿ ಅವರು ಶೋಧಿಸಿದ್ದಾರೆ. ಈ ಕೃತಿಯೊಳಗಡೆ ಪ್ರಸ್ತಾಪವಾಗುವ ಬಸವಣ್ಣನ ಚರಿತ್ರೆ ಭಿನ್ನವಾಗಿದೆ. ಬಸವಣ್ಣ ಬೇತಾಳ ವಿದ್ಯೆಯನ್ನು ಕಲಿತಿದ್ದ. ಆ ಮೂಲಕ ಬಿಜ್ಜಳನನ್ನು ಕೊಲ್ಲಿಸಿದ, ಬಸವಣ್ಣ ವೀರಶೈವ ಮತವನ್ನು ಸ್ವೀಕರಿಸುವ ಮುಂತಾದ ಅಂಶಗಳ ಸತ್ಯಾಸತ್ಯಾತೆಯನ್ನು ಕುರಿತು ನಿಷ್ಕರ್ಷೆ ಮಾಡುತ್ತಾರೆ. ಇಲ್ಲಿ ಅವರ ವಿದ್ವತ್ತಿನ ಅನಾವರಣವನ್ನು ಕಾಣಬಹುದು.

ಆದಿದೇವ ಕವಿಯ ಸುಕುಮಾರ ಚರಿತೆಯು ಸಾಂಗತ್ಯದಲ್ಲಿದೆ. ಈ ಕಾವ್ಯವನ್ನು ಸಂಪಾದಿಸುವಾಗ ಭಾರತೀಯ ಭಾಷೆಗಳಲ್ಲಿ ಸುಕುಮಾರನ ಕಥೆ ಬಂದಿರುವುದನ್ನು ತೌಲನಿಕವಾಗಿ ವಿವರಿಸುತ್ತಾರೆ. ಈ ಕಾವ್ಯದ ಪ್ರಮುಖ ಗುರಿ ಜೈನ ಧರ್ಮದ ಪ್ರಚಾರ. ಅದರಲ್ಲೂ ಶ್ರಾವಕ ಧರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ಧರ್ಮ ಪ್ರಚಾರಕ್ಕೆ ಸುಕುಮಾರ ಚರಿತೆಯಲ್ಲಿ ಬರುವ ಕಥೆಯ ಒಳಗಣ ಕಥೆಗಳು ಉತ್ತಮ, ಪಂಚಾಣು ವ್ರತಗಳಿಗೆ ದೃಷ್ಟಾಂತ ರೂಪವಾಗಿ ಬಂದಿರುವ ಈ ಕಥೆಗಳು ಜಾನಪದ ನೆಲೆಗಟ್ಟಿನ ಮೇಲೆ ರೂಪುಗೊಂಡಿವೆ. ಎಂದು ವಿಶ್ಲೇಸಿದ್ದಾರೆ. 'ಏಕೋರಾಮೇಶ್ವರ ಪುರಾಣ' ಈ ಕೃತಿಯ ಪರಿಷ್ಕರಣದಲ್ಲಿ ಪಂಚಚಾರ್ಯರನ್ನು ಕುರಿತು ಇತರೆ ಕೃತಿಗಳೊಂದಿಗೆ ತೌಲನಿಕ ಅಧ್ಯಯನ ಮಾಡಿದ್ದಾರೆ. ಈ ಕಾವ್ಯ ವೀರಶೈವ ಧರ್ಮ ಮತ್ತು ಸಾಹಿತ್ಯದ ಪುನರುಜ್ಜೀವನ ಕಾಲದಲ್ಲಿ ಹುಟ್ಟಿದ ಕೃತಿ ಇದಾಗಿದೆ ಎಂದಿದ್ದಾರೆ. ಇದೊಂದು 'ಸತ್ಕಾವ್ಯ' ಎಂದು ವಿಶೇಷವಾಗಿ ಸಂಪಾದಕರು ಗುರುತಿಸಿದ್ದಾರೆ.

‘ಬತ್ತೀಸ ಪುತ್ತಳಿ ಕಥೆ’ ಮೊದಲ ಬಾರಿಗೆ ಸಂಪಾದಿಸಿ ಪ್ರಕಟಿಸಿದ್ದಾರೆ. ಇಲ್ಲಿ ಪ್ರಸ್ತಾಪ ಆಗುತ್ತಿರುವ ಬತ್ತೀಸ ಪುತ್ತಳಿ ಕಥೆಗಳನ್ನು ಜಾನಪದೀಯ ಅಂಶಗಳು ಹಾಗೂ ಚಾರಿತ್ರಿಕ ಸಂಗತಿಗಳೊಂದಿಗೆ ತೌಲನಿಕ ಅಧ್ಯಯನ ಮಾಡಿದ್ದಾರೆ. ಇಲ್ಲಿನ ಒಂದು ಕೃತಿಗೆ ‘ಮಹಾದೇವಿಯವರ ಬತ್ತೀಸಪುತ್ತಳಿಕಥೆ’ ಎಂಬ ನಾಮ ಇರುವುದನ್ನು ಗುರುತಿಸಿ ಇದು ವೀರಶೈವ ನೆಲೆಯ ಬತ್ತೀಸ ಪುತ್ತಳಿ ಕಥೆಯ ಕೃತಿಯಾಗಿದೆ ಎಂಬುದನ್ನು ವಿಶೇಷವಾಗಿ ಶೋಧಿಸಿದ್ದಾರೆ. ಈ ಕಥೆಗಳು ಪ್ರಾಚೀನ ಭಾರತದ ಸಾಮಾಜಿಕ ಸಾಂಸ್ಕೃತಿಕ ಅಂಶಗಳನ್ನೊಳಗೊಂಡಿರುವುದು ಇಲ್ಲಿನ ವೈಶಿಷ್ಟ್ಯವಾಗಿದೆ.

ವಚನ ಮತ್ತು ಸ್ವರ ವಚನ ಕುರಿತು ಸಂಪಾದನೆಯಲ್ಲಿ ವಿದ್ವತ್ತಿನ ಇನ್ನೊಂದು ಮಗ್ಗಲನ್ನು ಕಾಣುತ್ತೇವೆ. ಹನ್ನೆರಡರಿಂದ ಹದಿನೈದನೆಯ ಶತಮಾನದ ವ್ಯಾಪ್ತಿಯಲ್ಲಿ ರಚಿತವಾದ ಇವುಗಳ ಸಂಪಾದನೆಯಲ್ಲಿ ದೇಶಿ ಮತ್ತು ಮಾರ್ಗ ಕಾವ್ಯಗಳಿಗೆ ಬಳಕೆ ಆಗುವ ಗ್ರಂಥ ಸಂಪಾದನ ವಿಧಾನಗಳನ್ನು ಬಳಸಿಕೊಳ್ಳುತ್ತಾರೆ. ಅಜ್ಞಾತ ಮತ್ತು ಅನಾಮಧೇಯ ಕರ್ತೃ, ವಚನಗಳು ತ್ರಿಪದಿ, ಚೌಪದಿ, ಷಟ್ಪದಿ, ಅಕ್ಕರೆ, ಏಳೆ ಮೊದಲಾದ ದೇಸಿ ಛಂದೋ ರೂಪಗಳು, ಸೋಬಾನೆ, ಉಯ್ಯಾಲೆ ಆರತಿ ಪದಗಳತಂಹ ಜಾನಪದ ರೂಪಗಳು ಬಳಕೆಗೊಂಡಿವೆ. ಸಂಕೀರ್ಣ ವಚನಗಳನ್ನು ಸಂಪಾದಿಸುವಾಗ ಶುದ್ಧ ಮೂಲ ಎನ್ನುವ ನೆಲೆಗಳಿಗಿಂತ ಭಿನ್ನವಾದ ವೈಧಾನಿಕತೆಯನ್ನು ಅನುಸರಿಸುತ್ತಾರೆ. ಇಲ್ಲಿ ಪಾಂಡಿತ್ಯ ಬಲಕ್ಕಿಂತ ನಾದ ಲಯ ಮುಂತಾದ ಸಂಗತಿಗಳ ಆಂತರಿಕ ಸ್ವರೂಪಗಳ ಮೂಲಕ ಪರಿಷ್ಕರಣೆಯಲ್ಲಿ ತೊಡಗುತ್ತಾರೆ. ಇನ್ನೊಂದು ರೀತಿ ಹೇಳುವುದಾದರೆ ಲೋಕ ಜ್ಞಾನದ ತಿಳಿವಳಿಕೆಯಲ್ಲಿ ಪರಿಷ್ಕರಿಸುತ್ತಾರೆ.

ವೈ.ಸಿ.ಭಾನುಮತಿಯವರು ಕನ್ನಡ ಗ್ರಂಥಸಂಪಾದನಾಕಾರ್ತಿಯರಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡವರಾಗಿದ್ದಾರೆ. ಹಸ್ತಪ್ರತಿ ಹಾಗೂ ಗ್ರಂಥಸಂಪಾದನ ಕ್ಷೇತ್ರದಲ್ಲಿ ಬಹುಮುಖ್ಯವಾಗಿ ಸಂಕಲನ ಸಂಪಾದನೆ, ಪರಿಷ್ಕರಣ ಕಾರ್ಯಗಳು ಪ್ರಮುಖವಾಗಿವೆ. ಭಾನುಮತಿಯವರು ಈ ಮೂರು ಮಾದರಿಯಲ್ಲಿಯೂ ಕೃಷಿ ಮಾಡಿದ್ದಾರೆ. ಹಾಗಾಗಿ ಅವರ ಬರಹಗಳು ತನ್ನದೇ ಆದ ವಿಶಿಷ್ಟತೆಗಳಿಂದ ಕೂಡಿವೆ.

‘ಗ್ರಂಥಸಂಪಾದನೆ ಎಳೆಗಳು’ ಲೇಖನಗಳ ಸಂಕಲನ ರಚನೆಯ ಸಂದರ್ಭದಲ್ಲಿ ಅವರು ೧೫ ಲೇಖನಗಳನ್ನು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿರುವ ಲೇಖನಗಳು ಹಸ್ತಪ್ರತಿ ಮತ್ತು ಗ್ರಂಥಸಂಪಾದನೆಯ ತಾತ್ವಿಕತೆಗೆ ಪೂರಕವಾಗಿವೆ. ಭಾನುಮತಿಯವರ ಮಾತಿನ ಮೂಲಕವೇ ಹೇಳುವುದಾದರೆ ‘ಹಸ್ತಪ್ರತಿ ಅಧ್ಯಯನವು ಲಿಪಿಕಾರ ಕೇಂದ್ರಿತವಾದರೆ ಗ್ರಂಥಸಂಪಾದನೆಯು ಕವಿಕೇಂದ್ರಿತ. ಆದರೆ ಎರಡೂ ಶಾಸ್ತ್ರಗಳು ಒಂದಕ್ಕೊಂದು ಪೂರಕ. ಹಸ್ತಪ್ರತಿಯಿಲ್ಲದೆ ಹಸ್ತಪ್ರತಿಯಲ್ಲಿರುವ ಪಠ್ಯ ಪ್ರಕಟವಾಗದು ‘ಗ್ರಂಥಸಂಪಾದನೆ ಎಳೆಗಳು’ ಈ ಎರಡೂ ಶಿಸ್ತಿನ ಅಧ್ಯಯನವನ್ನೂ ಒಳಗೊಂಡಿದೆ. ‘ಗ್ರಂಥಸಂಪಾದನೆ ಎಳೆಗಳು ಮೊದಲ ನುಡಿಯೆಂದು ವೈ.ಸಿ.ಭಾನುಮತಿ’ ಅವರು ಹೇಳುತ್ತಾರೆ. ಇಲ್ಲಿ ಒಟ್ಟು ಕೃತಿಯ ಆಶಯವನ್ನು ವ್ಯಾಖ್ಯಾನಿಸಿದ್ದಾರೆ.

ಭಾನುಮತಿಯವರ ಚಿಂತನೆಗಳು ಕೇವಲ ಕೃತಿ ಆಶಯ ಕೇಂದ್ರಿತ ಪ್ರಭಾವಗಳನ್ನು ಮಾತ್ರ ಪಡೆದುಕೊಂಡಿಲ್ಲ. ವಿವಿಧ ವಿದ್ವಾಂಸರ ವಿಚಾರ ಹಾಗೂ ಮಾನವ ಸಂಪನ್ಮೂಲವನ್ನೂ ಒಳಗೊಂಡಿರುವುದು ಪ್ರಮುಖವಾಗಿ ಕಂಡುಬರುತ್ತದೆ ಮತ್ತು ಭಾನುಮತಿಯವರ ಮತ್ತೊಂದು ಪ್ರಮುಖ ಕೃತಿ. 'ಗ್ರಂಥಸಂಪಾದನ ಸಂಕಥನ'ವಾಗಿದೆ. ಪ್ರಸ್ತುತ ಕೃತಿಯಲ್ಲಿ ೪೨ ಲೇಖನಗಳಿವೆ. ಪ್ರತಿಯೊಂದು ಲೇಖನವು ಒಂದೊಂದು ರೀತಿಯಲ್ಲಿ ಪ್ರಾಮುಖ್ಯತೆ ಪಡೆದುಕೊಂಡಿವೆ. ಅಕಾಡೆಮಿಕ್ ನೆಲೆಯ ಚಿಂತಕಿಯಾಗಿರುವ ಭಾನುಮತಿಯವರು ತಮ್ಮ ಚಿಂತನೆಗಳಿಗೆ ಅಕಾಡೆಮಿಕ್ ಆದ ಚೌಕಟ್ಟನ್ನು ರೂಪಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಲೇಖನಗಳು ವಿಚಾರಸಂಕಿರಣ ಸಮ್ಮೇಳನ ಹಾಗೂ ನೆನಪಿನ ಪುಸ್ತಕಗಳಿಗೆ ರೂಪಿಸಿದ ಬರಹ ರೂಪವನ್ನೂ ಪಡೆದುಕೊಂಡು ಗ್ರಂಥಸಂಪಾದನೆಯ ಕ್ಷೇತ್ರದ ವ್ಯಾಪ್ತಿ ಕುರಿತು ಚರ್ಚಿಸಿರುವುದು ವೈಶಿಷ್ಟ್ಯ ಪೂರ್ಣವಾಗಿ ಕಂಡುಬರುತ್ತದೆ.

ದಶಕಗಳ ಚಾರಿತ್ರಿಕ ಕಾಲಘಟ್ಟದ ವ್ಯಾಪ್ತಿಯಲ್ಲಿ ರೂಪುಗೊಂಡಿರುವುದು ಮಹತ್ವದ ಸಂಗತಿಯಾಗಿದೆ. ಈ ಹಿನ್ನೆಲೆಯಲ್ಲಿ ಪಿತೃಸಂಸ್ಕೃತಿ ಕೇಂದ್ರಿತವಾದ ಗ್ರಂಥಸಂಪಾದನ ಕ್ಷೇತ್ರವು ಹೇಗೆ ಪುರುಷ ಸ್ವಾಮ್ಯವನ್ನು ಪಡೆದುಕೊಂಡಿದೆ ಎನ್ನುವುದನ್ನು ಅವರು ವಿಶ್ಲೇಷಿಸುವುದು ಇಲ್ಲಿನ ವೈಶಿಷ್ಟ್ಯವಾಗಿದೆ. ಇದನ್ನು ಭಾನುಮತಿ ಅವರ ವ್ಯಾಖ್ಯಾದ ಮೂಲಕ ಗಮನಿಸುವುದಾದರೆ 'ಮೂರು ದಶಕಗಳಲ್ಲಿ ಸಿದ್ಧಪಡಿಸಿದ ಇಲ್ಲಿನ ಬರಹಗಳು ಕಾಲ ಕಾಲಕ್ಕೆ ಹಸ್ತಪ್ರತಿ ಅಧ್ಯಯನದಲ್ಲಿ ಆದ ಬದಲಾವಣೆಗಳನ್ನೂ ಗಮನಿಸುತ್ತ ರೂಪುಗೊಂಡಿವೆ. ಗ್ರಂಥಸಂಪಾದನ ಕ್ಷೇತ್ರ ಪುರುಷ ಸ್ವಾಮ್ಯದ ಕ್ಷೇತ್ರ. ಹಾಗಾಗಿ 'ಮಹಿಳೆಯರ ಗ್ರಂಥಸಂಪಾದನೆ(೧೯೮೩)' 'ಗ್ರಂಥಸಂಪಾದನೆ ಮತ್ತು ಮಹಿಳೆ' ಎಂಬ ಇಲ್ಲಿನ ಲೇಖನಗಳ ವ್ಯಾಪ್ತಿ ವಿಸ್ತಾರತೆ ಹಾಗೂ ಮಹತ್ವವನ್ನು ಸ್ವತಃ ಲೇಖಕಿ ಭಾನುಮತಿಯವರ ಚಿಂತನೆಗಳು ವೈಶಿಷ್ಟ್ಯವನ್ನೂ ಸಹ ಸೂಚಿಸುತ್ತದೆ.

ವೈ.ಸಿ.ಭಾನುಮತಿ ಅವರು ಶಾಸ್ತ್ರ ಸಾಹಿತ್ಯ ಮಾತ್ರವಲ್ಲದೆ ಜಾನಪದ ಸಾಹಿತ್ಯದಲ್ಲಿಯೂ ಸಂಪಾದನೆ ಮತ್ತು ಸಂಶೋಧನಾ ಕಾರ್ಯವನ್ನು ಮಾಡಿದ್ದಾರೆ. ಅದರಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಕೃತಿ 'ಮಲೆನಾಡು ಶೈವ ಒಕ್ಕಲಿಗರು' ಪ್ರಸ್ತುತ ಕೃತಿಯಲ್ಲಿ ಕರ್ನಾಟಕದ ಒಕ್ಕಲಿಗ ಜನಾಂಗದ ಒಂದು ವರ್ಗ ಹೊರಳು ದಾರಿಯಲ್ಲಿರುವುದನ್ನು ಕುರಿತು ಶಾಸ್ತ್ರಿಯವಾದ ಸಂಶೋಧನಾ ಅಧ್ಯಯನವನ್ನು ಕೈಗೊಂಡಿರುವುದು ಪ್ರಮುಖವಾದುದ್ದಾಗಿದೆ.

ಮೌಖಿಕ ಪರಂಪರೆಯಲ್ಲಿನ ಜಾನಪದವನ್ನು ಆಧರಿಸಿ ಸಾಂಸ್ಕೃತಿಕ ಶಿಸ್ತಿನ ಹಿನ್ನೆಲೆಗೆ ಅಳವಡಿಸಿ ಜನಾಂಗದ ಚಹರೆಯನ್ನು ಕುರಿತು ವಿಶ್ಲೇಷಣೆಗೆ ಒಳಪಡಿಸಿರುವುದು ಮುಖ್ಯವಾದ ಸಂಗತಿಯಾಗಿದೆ. ಇಲ್ಲಿನ ಚಿಂತನೆ ಹಾಗೂ ಬರಹಗಳ ವೈಶಿಷ್ಟ್ಯವಾಗಿದ್ದು ಭಾನುಮತಿ ಅವರ ತಮ್ಮ ನಿರ್ದಿಷ್ಟ ಉದ್ದೇಶವನ್ನು ತಲುಪುವಲ್ಲಿ ಯಶಸ್ವಿಯಾಗಿದ್ದಾರೆ ಎಂದರೆ ತಪ್ಪಲಾಗಲಾರದು. ಅಲ್ಲದೇ ಕರ್ನಾಟಕದಲ್ಲಿ ಬಹುತ್ವದ ಜನಾಂಗಿಕ ಹಿನ್ನೆಲೆಯನ್ನು ಹಾಗೂ ಜಾನಾಂಗಿಕ ಚಹರೆಗಳನ್ನು ಗುರುತಿಸುತ್ತಾರೆ. ಹಾಗೆಯೇ ಬಹುಶಿಸ್ತೀಯ ನೆಲೆಯಲ್ಲಿ 'ಕರ್ನಾಟಕದ ಒಕ್ಕಲಿಗ ಜನಾಂಗ' ಕುರಿತು ಸಂಶೋಧನಾತ್ಮಕ ಚಿಂತನೆಗಳನ್ನು

ಮಂಡಿಸುವಾಗ ಮಾನವಶಾಸ್ತ್ರ, ಕುಲಶಾಸ್ತ್ರ ಹಾಗೂ ಮೌಖಿಕ ಸಾಹಿತ್ಯ ಇಲ್ಲಿವೆ. ಜಾನಪದ ಶಾಸ್ತ್ರದ ಜ್ಞಾನಶಾಖೆಗಳ ಮೊರೆ ಹೋಗಿರುವುದು ವಿಷಯದ ಮಹತ್ವ ಹಾಗೂ ವಿಷಯದ ವಿಸ್ತರತೆಗೆ ಕಾರಣವಾಗಿದೆ. ಇದು ಪ್ರಸ್ತುತ ಕೃತಿಯ ಜೀವಾಳ ಮತ್ತು ವೈಶಿಷ್ಟ್ಯವಾಗಿದೆ.

ಕ್ಷೇತ್ರಕಾರ್ಯ ಮತ್ತು ಮೌಖಿಕ ಆಕರಗಳನ್ನು ಪ್ರಮುಖವಾಗಿಸಿಕೊಂಡು ರಚಿತವಾದ ವೈ.ಸಿ.ಭಾನುಮತಿಯವರ ಲೇಖನ ಸಂಕಲನವಾದ ಜಾನಪದ ಭಿತ್ತಿಯಲ್ಲಿ ಕ್ಷೇತ್ರಕಾರ್ಯದ ಶೋಧನಗಳನ್ನು ದಾಖಲೆಗಳನ್ನು ಕೃತಿಕರಿಸಿದ ಕೃತಿ ಇದಾಗಿದೆ. ಹಾಗೆಯೇ ಇಲ್ಲಿನ ಪ್ರತಿಯೊಂದು ಲೇಖನವೂ ಜಾನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಒಂದು ನಿರ್ದಿಷ್ಟ ಸಂದರ್ಭ ಹಾಗೂ ನಿರ್ದಿಷ್ಟವಾದ ಕಾರಣಗಳಿಂದ ರೂಪಿತವಾಗಿದೆ. ಆದ್ದರಿಂದ ಪ್ರತಿಯೊಂದು ಲೇಖನವು ತನ್ನದೇ ಪ್ರತ್ಯೇಕವಾದ ವೈಶಿಷ್ಟ್ಯವನ್ನು ಒಳಗೊಂಡಿದೆ.

ಆರಂಭದಲ್ಲಿ ಜಾನಪದ ಅಧ್ಯಯನಗಳು ಪಾಶ್ಚಾತ್ಯ ಜಾನಪದ ಸಂಶೋಧನೆ ಹಾಗೂ ಅಧ್ಯಯನಗಳಿಂದ ಪ್ರೇರಣೆಯನ್ನು ಪಡೆದುಕೊಂಡಿವೆ. ಆದರೆ ಭಾನುಮತಿಯವರ 'ಜಾನಪದ ಭಿತ್ತಿ' ಕೃತಿಯು ಪಾಶ್ಚಾತ್ಯ ಜಾನಪದ ಅಧ್ಯಯನ ವಿಧಾನವನ್ನೂ ದಾಟಿದ ದೇಸೀ ವಾದವನ್ನೂ ಹಾಗೂ ದೇಸೀತನವನ್ನು ಪ್ರಧಾನವಾಗಿ ಅನುಸರಿಸಿವೆ ಎನ್ನುವುದು ಇಲ್ಲಿನ ಲೇಖನಗಳ ಹೆಗ್ಗಳಿಕೆ ಮತ್ತು ವಿಶಿಷ್ಟತೆಯಾಗಿದೆ.

ಪ್ರಸ್ತುತ ಕೃತಿಯಲ್ಲಿ ವೈ.ಸಿ.ಭಾನುಮತಿಯವರು ಮಹಿಳೆಯರನ್ನು ಕುರಿತು ವೈಚಾರಿಕ ಧೋರಣೆಯನ್ನು ಚರ್ಚಿಸಿದ್ದಾರೆ. ಮೌಖಿಕ ಸಾಹಿತ್ಯದಲ್ಲಿ ಪಿತೃಪ್ರಧಾನ ಆಲೋಚನಾಧಾರೆಯು ಹೇಗೆ ಹೆಣ್ಣನ್ನು ಪ್ರತಿನಿಧಿಸುತ್ತದೆ ಹಾಗೂ ಹೆಣ್ಣಿನ ಮೇಲೆ ಪಿತೃಸಂಸ್ಕೃತಿಯ ಮೌಲ್ಯವನ್ನು ಹೇರುತ್ತದೆ ಎನ್ನುವುದನ್ನು ಚರ್ಚಿಸುವುದು ಇಲ್ಲಿನ ಲೇಖನಗಳ ವೈಶಿಷ್ಟ್ಯವಾಗಿದೆ. ಕೆಲವೊಮ್ಮೆ ಹೆಣ್ಣಿನ ಬಗ್ಗೆ ಹೇರಿರುವ ಮೌಲ್ಯ ಮತ್ತು ಸಂಪ್ರದಾಯಗಳನ್ನು ಹೆಣ್ಣು ಯಶಸ್ವಿಯಾಗಿ ಪಾಲಿಸುವುದು ನಿರ್ವಹಿಸುವುದನ್ನು ಅವಳು ಶಕ್ತಿ ಎಂಬಂತೆ ವಿವರಿಸುವುದು ಅವರ ವಿಚಾರಗಳ ಅಥವಾ ಚಿಂತನೆಗಳ ಮಿತಿಯಾಗಿದೆ.

ಮಧ್ಯಕಾಲೀನ ಕನ್ನಡ ಸಾಹಿತ್ಯ ರೂಪಗಳ ಸಂಪಾದನೆ ಮತ್ತು ಪರಿಷ್ಕರಣದಲ್ಲಿ ವಿಶಿಷ್ಟವಾಗಿ ಗುರುತಿಸುವ ಹೆಸರು ಟಿ.ಎನ್. ನಾಗರತ್ನ ಅವರದ್ದು. ಗೇಯ ಪ್ರಧಾನವಾದ ಹರಿದಾಸ ಸಾಹಿತ್ಯದ ಸಂಗ್ರಹ ಸಂಪಾದನೆ ಪ್ರಕಟಣೆಯಲ್ಲಿ ಟಿ.ಎನ್. ನಾಗರತ್ನ ಅವರು ತೊಡಗಿಕೊಂಡ ರೀತಿ ಮಹತ್ವದು. ಲಿಖಿತ ಪರಂಪರೆಗಿಂತ ಹೆಚ್ಚು ಮೌಖಿಕ ಪರಂಪರೆಯ ಆಶ್ರಯಿಸಿ ಬೆಳೆದು ಬಂದ ಕೀರ್ತನ ಸಾಹಿತ್ಯದಲ್ಲಿ ಯಥೇಚ್ಚವಾಗಿ ಪಾಠಾಂತರಗಳು ಕಂಡುಬರುತ್ತವೆ. ಆಸಕ್ತ ಜನರ ಹಾಡು ಸ್ತುತಿ ಹಾಗೂ ಲಿಪಿ ಪಾತಾಳಿಯ ಮೂಲಕ ಅವು ಉಳಿದು ಬಂದ ಕಾರಣ ದಾಸರ ಅನೇಕ ಪದ್ಯಗಳಲ್ಲಿ ಮಿಶ್ರ ಪಾಠ ಅಥವಾ ಹೊಸ ಸೇರ್ಪಡೆಗಳು ತುಂಬಿರುತ್ತವೆ. ಶಾಸ್ತ್ರೀಯ ಗ್ರಂಥಸಂಪಾದನೆ ಮಾದರಿಗಳ ಆಧಾರದಲ್ಲಿ ಇಂತಹ ಕೃತಿಗಳನ್ನು ಪರಿಷ್ಕರಿಸುವುದು ಬಹಳ ಶ್ರಮದಾಯಕವಾದದ್ದು. ಪ್ರಾಚೀನ

ಮತ್ತು ಮಧ್ಯಕಾಲೀನ ಕನ್ನಡ ಕೃತಿಗಳನ್ನು ಪರಿಷ್ಕರಿಸುವಾಗ ಅನುಭವಿಸಲಾರದ ಸವಾಲನ್ನು ಸಂಪಾದಕರಾದವರು ವಚನ ದಾಸ ಸಾಹಿತ್ಯ ಹಾಗೂ ತತ್ವಪದ ಸಾಹಿತ್ಯ ರೂಪಗಳನ್ನು ಸಂಪಾದಿಸುವಾಗ ಎದುರಿಸಬೇಕಾಗುತ್ತದೆ. ಇಂತಹ ಹಲವು ತೊಡಕುಗಳನ್ನು ಮೀರಿ ಸಾರ್ಥಕ ಸಂಪಾದಕರಾಗಿ ಬೆಳೆದವರು ಟಿ.ಎನ್. ನಾಗರತ್ನ ಅವರು. ದಾಸಸಾಹಿತ್ಯದ ಹಸ್ತಪ್ರತಿಗಳ ಸಂಗ್ರಹದ ನಂತರ ಪ್ರತಿಯೊಂದು ಕೃತಿಯೂ ಎಷ್ಟು ಆಕರಗಳಲ್ಲಿ ದೊರೆಯುತ್ತವೆಯೋ ಅಷ್ಟನ್ನೂ ಒಂದೊಂದು ಪಾಠವೆಂದು ಪರಿಗಣಿಸಿ ಅವುಗಳಿಗೆ ಪ್ರತ್ಯೇಕವಾದ ಸಂಕೇತಗಳನ್ನು ಗುರುತಿಸಿ ಸೂಚನಾ ಪಟ್ಟಿಕೆಯನ್ನು ತಯಾರಿಸಿ ಕೊಳ್ಳಬೇಕಾಗುತ್ತದೆ. ಆದರೆ ಯಾವ ಪಾಠವನ್ನೂ ಕಡೆಗಣಿಸುವಂತಿಲ್ಲ. ಸೂಕ್ತವಾದ ಪಾಠವನ್ನು ಸ್ವೀಕರಿಸಿ ಉಳಿದ ಆಕರಗಳನ್ನು ಅಡಿಟಿಪ್ಪಣಿಯಲ್ಲಿ ಕೊಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಟಿ.ಎನ್.ನಾಗರತ್ನ ಅವರ ಹರಿದಾಸ ಸಾಹಿತ್ಯ ಸಂಪಾದನೆಯ ವೈಧಾನಿಕತೆಯನ್ನು ಗಮನಿಸಿದಾಗ ಅತಿ ಚಿಕ್ಕ ಪಾಠವನ್ನು ಅವರು ನಿರ್ಲಕ್ಷಿಸಿಲ್ಲ. ತಮಗೆ ಒಪ್ಪಿತ ಹಾಗೂ ಉಚಿತವೆಂದು ತೋರುವ ಪಾಠವನ್ನು ಸಂಪಾದಿತ ಪಠ್ಯದಲ್ಲಿ ನೀಡಿ, ಉಳಿದ ಪಾಠಗಳನ್ನು ಅಡಿಟಿಪ್ಪಣಿಯಲ್ಲಿ ನೀಡಿರುವುದು ಅವರ ವೈಧಾನಿಕತೆಯ ವೈಶಿಷ್ಟ್ಯವಾಗಿದೆ.

ಹರಿದಾಸ ಸಾಹಿತ್ಯ ಸಂಪಾದನೆ ತುಂಬ ತ್ರಾಸಿನದು. (ಕಠಿಣದಿಂದ ಕೂಡಿದ್ದು) ಇದಕ್ಕೆ ಕೇವಲ ವಿದ್ವತ್ತು ಇದ್ದರೆ ಸಾಲದು. ನಾದ-ಲಯ, ರಾಗ-ತಾಳಗಳ ಕನಿಷ್ಠ ತಿಳುವಳಿಕೆಯೂ ಇರಬೇಕಾಗುತ್ತದೆ. ಸಂಗ್ರಹದಿಂದ ಹಿಡಿದು ಪಾಠಾಂತರಗಳು, ರಾಗ, ತಾಳಗಳ ನಿರ್ಣಯದಂಥ ಅನೇಕ ಸಮಸ್ಯೆಗಳನ್ನು ನಿವಾರಿಸಿಕೊಂಡು ನೂರಕ್ಕಿಂತ ಹೆಚ್ಚು ಹಸ್ತಪ್ರತಿಗಳನ್ನು ಬಳಸಿಕೊಂಡು ಶಾಸ್ತ್ರೀಯವಾಗಿ ಪಂಡಿತ ಮತ್ತು ಜನಪ್ರಿಯ ಆವೃತಿಗಳನ್ನು ಒಟ್ಟಿಗೆ ಸಂಪಾದಿಸಿ ಪ್ರಕಟಿಸಿದ್ದು ಅವರ ವಿದ್ವತ್ತಿನ ಎತ್ತರವನ್ನು ಹೇಳುತ್ತದೆ. ಪಂಡಿತ ಆವೃತ್ತಿಯಲ್ಲಿ ಎಲ್ಲ ಆಕರಗಳಲ್ಲಿ ದೊರೆಯುವ ಪಾಠಾಂತರಗಳನ್ನು ಉಲ್ಲೇಖಿಸಿದ್ದರೆ, ಜನಪ್ರಿಯ ಆವೃತ್ತಿಯಲ್ಲಿ ಯೋಗ್ಯ ಪಾಠವನ್ನಷ್ಟೇ ನೀಡಿ ಮುದ್ರಿಸಿದ್ದಾರೆ. ಏಕೆಂದರೆ ಜನಸಾಮಾನ್ಯರು ಇಂಥ ಆವೃತ್ತಿಗಳು ಸುಲಭವಾಗಿ ಓದಿ ಅರ್ಥ ಮಾಡಿಕೊಳ್ಳಲಿ ಎಂಬ ಲೋಕ ದೃಷ್ಟಿಕೋನ ಅವರದು.

ಟಿ.ಎನ್.ನಾಗರತ್ನ ಅವರು 'ಹರಪನಹಳ್ಳಿ ಭೀಮವ್ವನ ಹಾಡುಗಳು' ಕೃತಿಯನ್ನು ಏಕೈಕ ಪ್ರತಿಯಿಂದ ಪ್ರಕಟಿಸಿದ್ದಾರೆ. ಪ್ರಸ್ತಾವನೆ ಬಹಳ ವಿಶೇಷವಾಗಿದೆ. ಭೀಮವ್ವನ ಜೀವನ ವಿಚಾರವನ್ನು ಕುರಿತು ವಿಶಿಷ್ಟ ಚರ್ಚೆ ಮಾಡಿದ್ದಾರೆ. ಚಿಕ್ಕ ವಯಸ್ಸಿನಲ್ಲೇ ಒದಗಿದ ವೈದವ್ಯ ಭೀಮವ್ವನ ಭಕ್ತಿ ಸಾಧನೆಗೆ ಒತ್ತಾಸೆಯಾಗುತ್ತದೆ. ಹಾಗೆಯೇ ಅವಳ ಭಕ್ತಿಭಾವದಲ್ಲಿ ಮೂಡಿದ 'ರಕ್ಷಿಸಬೇಕೆನ್ನ ಲಕ್ಷ್ಮೀನರಸಿಂಹ ಭಕ್ತನ' ಎನ್ನುವ ಮೊದಲ ಹಾಡು ಭೀಮವ್ವನ ಬದುಕಿನ ವಸ್ತುಸ್ಥಿತಿಯನ್ನು ಹೇಗೆ ಕಟ್ಟಿಕೊಡುತ್ತದೆನ್ನುವ ವಿಶಿಷ್ಟ ಬಗೆಯ ಒಳನೋಟವುಳ್ಳ ಚರ್ಚೆಯನ್ನು ಮಾಡಿದ್ದಾರೆ. ಪುರಾಣ ಪುಣ್ಯ ಕಥೆಗಳ ಒಂದೊಂದು ಪ್ರಸಂಗವನ್ನೂ ಆಕೆ ಮೊದಲು ಕನಸಿನಲ್ಲಿ ಕಂಡು ಮಾರನೆಯ ದಿನ ಆಯಾ ಪ್ರಸಂಗವನ್ನೆ ಹಾಡಿನ ರೂಪದಲ್ಲಿ ಹಾಡಿದಳೆಂದು ತಿಳಿದು ಬರುತ್ತದೆ. ಅಂದರೆ ಸ್ವಪ್ನದಲ್ಲಿ ಆಕೆ ಏನನ್ನು ಕಾಣುತ್ತಾಳೋ

ಅದು ಹಾಡಿನ ರೂಪದಲ್ಲಿ ಹೊರ ಬರುತ್ತಿತ್ತು ಎಂದು ಭೀಮವ್ವನ ಅಭಿವ್ಯಕ್ತಿಯ ಸ್ವರೂಪವನ್ನು ಕಟ್ಟಿಕೊಡುವುದು ಮತ್ತೊಂದು ವಿಶೇಷ. ಭೀಮವ್ವನ ವಂಶವೃಕ್ಷ ಕೀರ್ತನೆಗಳನ್ನು ಹೋಲುವ ಹಾಡುಗಳ ರಚನೆ, ಒಂದು ಉಗಾಭೋಗ ಎರಡು ಸುಳಾದಿಗಳು ಭೀಮವ್ವ ರಚಿಸಿದ ಬಗ್ಗೆ ಅಧ್ಯಯನ ಪೂರ್ಣ ಮಾಹಿತಿ ನೀಡುತ್ತಾರೆ. ಭೀಮವ್ವನ ಹಾಡುಗಳ ಕಾವ್ಯ ಸೌಂದರ್ಯ ಕುರಿತು ಚರ್ಚಿಸುತ್ತಾರೆ.

ಶ್ರೀ ಗೋಪಾಲದಾಸರ ಕೃತಿಗಳು, ಶ್ರೀ ವ್ಯಾಸರಾಯರ ಕೃತಿಗಳು ಹಾಗೂ ಶ್ರೀವಾದಿರಾಜರ ದೀರ್ಘ ಕೃತಿಗಳನ್ನು ಪಂಡಿತ ಮತ್ತು ಜನಪ್ರಿಯ ಆವೃತ್ತಿಗಳಲ್ಲಿ ಪರಿಷ್ಕರಿಸಿ ಪ್ರಕಟಿಸಿದ ಕೀರ್ತಿ ಟಿ.ಎನ್.ನಾಗರತ್ನ ಅವರದ್ದು. ಪಾಠಾಂತರಗಳನ್ನು ಗುರುತಿಸುವಲ್ಲಿ ತೋರುವ ಔಚಿತ್ಯಪ್ರಜ್ಞೆ ಮುಖ್ಯವಾದುದು. ಹಾಡಿನ ಪರಂಪರೆಯಲ್ಲಿ ಹರಿದು ಬಂದಿರುವ ಕೀರ್ತನೆಗಳಲ್ಲಿ ಹಲವಾರು ಸಂಗತಿಗಳು ಸೇರಿರುತ್ತವೆ. ಅವನ್ನು ಪರಿಹರಿಸಿಕೊಳ್ಳಲು ಅಪಾರ ಓದು ಹಾಗೂ ಲೋಕಜ್ಞಾನದ ಸಹಾಯವನ್ನು ನಾಗರತ್ನ ಅವರು ಪಡೆದುಕೊಳ್ಳುವುದು ವಿಶಿಷ್ಟವಾಗಿದೆ. ಶ್ರೀ ಗೋಪಾಲದಾಸರ ಕೃತಿಯ ಸಂಪಾದನೆಯ ವೈಶಿಷ್ಟ್ಯ ಎಂದರೆ ಕೀರ್ತನಗಳಲ್ಲಿ ಭಗವಂತನ ಆರಾಧನೆಯಲ್ಲಿ ದಾಸ್ಯ, ಸಖ್ಯ, ಮಧುರ, ವಾತ್ಸಲ್ಯ, ಶಾಂತ ಈ ಪಂಚಭಾವಗಳ ನಿರೂಪಣೆ ಹಾಗೂ ಸಾಮಾಜಿಕ ಪ್ರಜ್ಞೆ ಅಷ್ಟಾಗಿ ಇಲ್ಲದಿರುವುದನ್ನು ಆಧಾರ ಸಮೇತ ವಿವರಿಸುತ್ತಾರೆ. ಈ ಸಂಪುಟದಲ್ಲಿ ಒಟ್ಟು ೧೭೮ ಕೃತಿಗಳಿವೆ. ೮೭ ಕೀರ್ತನೆಗಳಲ್ಲಿ ೭೧ ಸುಳಾದಿಗಳು ೨೦ ಉಗಾಭೋಗಗಳನ್ನು ಪರಿಷ್ಕರಿಸಿದ್ದಾರೆ. ಅನುಬಂಧದಲ್ಲಿ ಆಕರ ಲಘುಟಿಪ್ಪಣಿಗಳು ಮತ್ತು ಕಠಿಣ ಶಬ್ದಗಳ ಅರ್ಥ, ಸ್ವರ ಪ್ರಸ್ತಾರ ಆಕರ ಸಾಮಗ್ರಿ ಶಬ್ದಸೂಚಿಗಳನ್ನು ನೀಡಿದ್ದಾರೆ.

ಶ್ರೀ ವ್ಯಾಸರಾಯರ ಕೃತಿಗಳನ್ನು ಪರಿಷ್ಕರಿಸಲು ಅಂಕಿತ ಸಮಸ್ಯೆಗಳು ಕಂಡು ಬಂದಾಗ ಅನೇಕ ಕೀರ್ತನೆಗಳನ್ನು ಆಧರಿಸಿ ಅಂಕಿತ ಸಮಸ್ಯೆಗಳನ್ನು ಬಗೆಹರಿಸಿದ್ದಾರೆ. ಉದಾಹರಣೆಗೆ 'ಕೃಷ್ಣಾ ನೀ ಬೇಗನೆ ಬಾರೋ' ಎನ್ನುವ ಕೀರ್ತನೆ ಶ್ರೀಕೃಷ್ಣ ಹಾಗೂ ಪುರಂದರ ವಿಠಲ ಎರಡು ಅಂಕಿತಗಳಲ್ಲೂ ದೊರೆಯುವುದರಿಂದ ಈ ಕೀರ್ತನೆ ಸುಮಾರು ೫೦-೬೦ ವರ್ಷಗಳಿಂದಲೂ ಕರ್ನಾಟಕದ ಮನೆ ಮನೆಯಲ್ಲೂ ಅತ್ಯಂತ ಜನಪ್ರಿಯವಾಗಿತ್ತು. ಇದನ್ನು ಮಕ್ಕಳು, ನೃತ್ಯಕಲಾವಿದರು ಅಭಿನಯಕ್ಕಾಗಿ ಈ ಹಾಡನ್ನು ರಚನೆ ಮಾಡಿಕೊಂಡಿರಬೇಕು. ಇದು ದಾಸರ ರಚನೆ ಅಲ್ಲ ಎಂದು ಸಂಪಾದಕರು ಅಭಿಪ್ರಾಯಪಟ್ಟಿದ್ದಾರೆ. ಹಾಗೆಯೇ 'ಏನು ಸುಕೃತ ಹಯವದನ ಮೋಹನ ಮುದ್ದು ಉಡುಪಿನ ಕೃಷ್ಣನ್ನ' ಎಂದಿರುವುದರಿಂದ ಅನೇಕ ಮುದ್ರಿತ ಪ್ರತಿಯನ್ನಾಧರಿಸಿ ಈ ಕೀರ್ತನೆ ಶ್ರೀ ವಾದಿರಾಜರೆಂದು ಖಚಿತವಾಗಿ ನಿರ್ಧರಿಸಿದ್ದಾರೆ. ಹಾಗೂ 'ಮುದ್ದು ಕೃಷ್ಣ' ಅಂಕಿತದಲ್ಲಿರುವ ಕೆಲವು ಕೃತಿಗಳು ದೊರೆತಿದ್ದು ಅವು ಕೂಡ ಶ್ರೀ ವ್ಯಾಸರರಾಯರ ಕೃತಿಗಳಲ್ಲ ಎಂಬುದನ್ನು ಆಧಾರ ಸಮೇತ ನಿರೂಪಿಸುತ್ತಾರೆ. ಅಂಕಿತ ಪಲ್ಲಟ, ಪೂರ್ವ ಕಥೆಗಳು ಮತ್ತು ಲಘು ಟಿಪ್ಪಣಿಗಳು, ಕಠಿಣ ಶಬ್ದಗಳ ಅರ್ಥ, ಸ್ವರ ಪ್ರಸ್ತಾರ, ಆಕರಸಾಮಗ್ರಿ, ಶಬ್ದಸೂಚಿಗಳು, ಸಹಾಯಕ ಸಾಹಿತ್ಯ ಇಷ್ಟು ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಸಂಪಾದಿಸಿ ಪ್ರಕಟಿಸಿದ್ದಾರೆ.

ಹೀಗೆ ಟಿ.ಎನ್. ನಾಗರತ್ನ ಅವರು ಸಾಹಿತ್ಯಪ್ರಕಾರದಲ್ಲಿ ಅನೇಕ ರೀತಿಯಿಂದ ಸವಾಲೊಡ್ಡುವ ಹರಿದಾಸರ ಕೀರ್ತನೆಗಳನ್ನು ಸಾಮಾನ್ಯ ಜನರಿಗೆ ಅರ್ಥವಾಗುವಂತೆ ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಜನಪ್ರಿಯ ಮತ್ತು ಪಂಡಿತ ಆವೃತ್ತಿಗಳನ್ನು ಅಷ್ಟೇ ಶ್ರದ್ಧೆ, ಶ್ರಮ ವಹಿಸಿ ಪ್ರಕಟಿಸಿರುವುದು ಅವರ ವೈಧಾನಿಕತೆಯ ವೈಶಿಷ್ಟ್ಯವಾಗಿದೆ. ಪಂಡಿತ ಆವೃತ್ತಿಯಲ್ಲಿ ಶಾಸ್ತ್ರೀಯ ವಿಧಾನಗಳನ್ನು ಅನುಸರಿಸಿದ್ದಾರೆ. ಜನಪ್ರಿಯ ಆವೃತ್ತಿಯಲ್ಲಿ ಸಾಮಾನ್ಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಪಾಠಾಂತರಗಳನ್ನು ನೀಡಿಲ್ಲ. ಹೀಗೆ ಹರಿದಾಸ ಸಾಹಿತ್ಯವನ್ನು ಶ್ರಮಪಟ್ಟು ಶೋಧಿಸಿ ಶ್ರದ್ಧೆಯಿಂದ ಪಾಠಾಂತರಗಳನ್ನು ಗುರುತಿಸಿ ವೈಜ್ಞಾನಿಕ ಹಾಗೂ ಜನಪ್ರಿಯ ಸಾಹಿತ್ಯದ ಹಿನ್ನೆಲೆಯಲ್ಲಿ ಸಂಪಾದಿಸಿ ಪ್ರಕಟಿಸಿದ ಕೀರ್ತಿ ಟಿ.ಎನ್. ನಾಗರತ್ನ ಅವರಿಗೆ ಸಲ್ಲುತ್ತದೆ.

ಇದೇ ಅವಧಿಯಲ್ಲಿ ಕಂಡುಬಂದ ಮತ್ತೋರ್ವ ಕನ್ನಡ ಗ್ರಂಥಸಂಪಾದಕಿ ಟಿ.ಕೆ.ಇಂದೂಬಾಯಿ ಅವರು. 'ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳು' ಕೃತಿಯನ್ನು ವಿವಿಧ ಓಲೆ ಪ್ರತಿ ಹಾಗೂ ಕಾಗದ, ಮುದ್ರಿತ ಪ್ರತಿಗಳಂಥ ಸುಮಾರು ೫೨ ಆಕರಗಳಿಂದ ಪರಿಷ್ಕರಿಸಿದ್ದಾರೆ. ಸಂಪಾದನೆಯ ಸಂದರ್ಭದಲ್ಲಿ ಹಾಡುಗಳನ್ನು ಗಾತ್ರಕ್ಕೆ ಅನುಗುಣವಾಗಿ ಸಣ್ಣ ಹಾಡುಗಳು ಮತ್ತು ದೊಡ್ಡ ಹಾಡುಗಳು ಎಂದು ವಿಂಗಡಿಸಿಕೊಂಡಿದ್ದಾರೆ. ಈ ಹಾಡುಗಳಲ್ಲಿ ಕೆಲವೊಂದು ಭಾಷಾ ಪ್ರಯೋಗಗಳನ್ನು ಮಾಡಿಕೊಂಡು ಅವುಗಳಿಗೆ ಸರಿಯಾದ ಅರ್ಥವನ್ನು ನೀಡಿದ್ದಾರೆ. ಉದಾಹರಣೆಗೆ 'ನಡದೊ–ನಡೆದಳು, ತುಂಬಿಸಿದೊ–ತುಂಬಿಸಿದಳು, ಕಾರ್ದನು–ಕಾರಿದನು ನಾರೀರು–ನಾರಿಯರು, ಸ್ವಾರಿ–ಸವಾರಿ, ರುಂದ್ಯ–ವೃಂದ, ಕಾಡು ಇತ್ಯಾದಿ ಹಾಗೆಯೇ ಕೆಲವೆಡೆ ಕಾಣುವ ದೋಷಪೂರ್ಣ ಪ್ರಯೋಗಗಳನ್ನು ಗುರುತಿಸಿತ್ತಾರೆ. ಉದ್ದಾಳಿಕನ ಕಥೆಯಲ್ಲಿ ನದಿಯನ್ನು ಕೆಲವೆಡೆ ಶರದಿಯೊಂದೂ ಮತ್ತು ಶರದಿನದಿಯೊಂದೂ ಕರೆದಿರುವ ವ್ಯತ್ಯಾಸವನ್ನು ಗಮನಿಸುತ್ತಾರೆ. ಹಾಗೇ ತಾವರೆ, ಕಮಲ, ಕಷ್ಟದುರಿತ, ಕಿತ್ತಳೆ, ನಾರಂಗ, ಅಡವಿ, ಅರಣ್ಯ, ದ್ವಿರುಕ್ತಿ ಪದಗಳನ್ನು ಗುರುತಿಸಿದ್ದಾರೆ. ಅನುಬಂಧದಲ್ಲಿ ಪೂರ್ವಕಥೆಗಳು ಮತ್ತು ಟಿಪ್ಪಣಿಗಳು, ಕಠಿಣ ಶಬ್ದಗಳ ಅರ್ಥ ಶಬ್ದಸೂಚಿ, ಅಡುಗೆ, ತಿಂಡಿ, ಪರಿಕರಗಳು, ಆಕರ ಸಾಮಾಗ್ರಿ, ಸಹಾಯಕ ಸಾಹಿತ್ಯ ನೀಡುವುದರ ಮೂಲಕ ಶಾಸ್ತ್ರೀಯವಾಗಿ ಸಂಪಾದಿಸಿದ್ದಾರೆ.

'ಶ್ರೀ ಪ್ರಸನ್ನ ವೆಂಕಟದಾಸರ ಭಾಗವತ'ಪ್ರಸ್ತುತ ಕೃತಿಯನ್ನು ಏಕೈಕ ಆಕರದಿಂದ ಪರಿಷ್ಕರಿಸಿದ್ದಾರೆ. ಕೃತಿಯಲ್ಲಿ ಪ್ರಸನ್ನವೆಂಕಟದಾಸರ ಭಾಗವತಕ್ಕೂ ಮೂಲಭಾಗವತಕ್ಕೂ ಇರುವ ಸಾಮ್ಯ ವೈಷಮ್ಯಗಳನ್ನು ಪರಿಶೀಲಿಸುವ ಮೂಲಕ ಪ್ರಸನ್ನವೆಂಕಟರ ಭಾಗವತದ ಕೀರ್ತನೆಗಳ ವೈಶಿಷ್ಟ್ಯವನ್ನು ಗುರುತಿಸಿದ್ದಾರೆ.

ಎಂ.ಎನ್.ಲಿಲಾವತಿ ಇವರು ೧೯೭೩ರ ಕಾಲಕ್ಕೆ ಹರಿಹರನ ಐದು ರಗಳೆಗಳನ್ನು ಸಂಪಾದಿಸಿದ್ದಾರೆ. ಈ ಅವಧಿಯ ನಂತರ ಮಹಿಳೆಯರು ವಿಶ್ವವಿದ್ಯಾನಿಲಯಗಳಲ್ಲಿ ಸಂಶೋಧನ, ಬೋಧನಾಂಗ ವಿಭಾಗಗಳಲ್ಲಿ ವೃತ್ತಿನಿರತರಾದ ಮೇಲೆ ಅಧಿಕಗೊಳ್ಳುತ್ತಾ ಸಾಗಿದೆ. 'ಹರಿಹರನ ಐದು ರಗಳೆಗಳನ್ನು' ಎರಡು ಹಸ್ತಪ್ರತಿ ಹಾಗೂ ಫ.ಗು.ಹಳಕಟ್ಟಿ ಅವರ ಅಚ್ಚಿನ ಪ್ರಸ್ತಕದ ಸಹಾಯದಿಂದ ಪರಿಷ್ಕರಿಸಿದ್ದಾರೆ. ಸಮಕಾಲೀನ ಪ್ರಜ್ಞೆ ಹರಿಹರನಲ್ಲಿ ಕಂಡು ಬಂದಿರುವುದನ್ನು ಗುರುತಿಸಿದ್ದಾರೆ. ಅಂದಿನ ಸಮಾಜದ

ಪ್ರಧಾನ ಅಂಶವಾದ ವೀರಶೈವ ಮತ್ತು ಜೈನ ಧರ್ಮದ ಘರ್ಷಣೆ ಈ ಸಂಕಲನದ ರಗಳೆಗಳ ಮುಖ್ಯ ವಸ್ತು ಎಂದಿದ್ದಾರೆ. ಅನುಬಂಧದಲ್ಲಿ ಕಠಿಣಪದಗಳ ಅರ್ಥ ಪಾಠಾಂತರವನ್ನು ಗುರುತಿಸಿ ಪ್ರಕಟಿಸಿದ್ದಾರೆ.

ನಗುವನಹಳ್ಳಿ ಪಿ.ರತ್ನ ಅವರು ಕನ್ನಡ ಗ್ರಂಥ ಸಂಪಾದನ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಮಹಿಳೆಯರಲ್ಲಿ ಪ್ರಮುಖರಾಗಿದ್ದಾರೆ. ಇವರು 'ತಿಲಕಪುರ ಸೋಮ ವಿರಚಿತ ಪ್ರಬಂಧ' ಎರಡು ಹಸ್ತಪ್ರತಿಗಳ ಮೂಲಕ ಪರಿಷ್ಕರಿಸಿದ್ದಾರೆ. ಈ ಪ್ರಬಂಧದಲ್ಲಿ ವಿಶೇಷವಾಗಿ ಹತ್ತೊಂಬತ್ತನೆ ಶತಮಾನಕ್ಕೆ ಸೇರಿದ ಒಂದು ಧಾರ್ಮಿಕ ಕಾವ್ಯ. ಹಾಗೆಯೇ 'ಚತುರಾಚಾರ್ಯ ಪ್ರಬಂಧ'ದಲ್ಲಿ ಕೊಲ್ಲಪಾಕಿ ಮಹಾತ್ಮೆಗಳಿಗೆ ದಟ್ಟವಾದ ಸಾಮ್ಯ ಇರುವುದನ್ನು ಗಮನಿಸಿ ಶಾಸ್ತ್ರೀಯವಾಗಿ ಪರಿಷ್ಕರಿಸಿ ಪ್ರಕಟಿಸಿದ್ದಾರೆ. 'ವೀರಜನಪತಿ ವಿಕ್ರಮ ವಿಲಾಸ' ಈ ಸಂಪಾದನೆಯಲ್ಲಿ ನಾಲ್ಕು ಹಸ್ತಪ್ರತಿಗಳ ಮೂಲಕ ಸಂಪಾದಿಸಿದ್ದಾರೆ. ಸಂಪಾದನೆಯ ವೈಶಿಷ್ಟ ಎಂದರೆ ಬಹುಶ್ರುತತ್ವ

ಕಮಲಾಹಂಪನಾರವರು ಇತರರ ಜೊತೆ ಸೇರಿ ವಿಶ್ವಕವಿ ರತ್ನಾಕರನ ಭರತೇಶವೈಭವ, ಚಾವುಂಡರಾಯ ಪುರಾಣ, ಸುಕುಮಾರ ಚರಿತೆ ಸಂಪಾದಿಸಿದ್ದಾರೆ. ಈ ಕೃತಿಗಳನ್ನು ಸಂಯುಕ್ತವಾಗಿ ಸಂಪಾದನೆ ಮಾಡಿದ್ದಾರೆ. 'ಭರತೇಶ ವೈಭವ' ಸಂಪಾದನೆ ವೈಶಿಷ್ಟ್ಯ ಎಂದರೆ ೧೨೦ ಪುಟಗಳ ಉತ್ತಮವಾದ ಪ್ರಸ್ತಾವನೆಯಲ್ಲಿ ಕಾವ್ಯ, ವಿಮರ್ಶೆ, ಹಾಗೂ ಗ್ರಂಥಋಣ, ಅವಶ್ಯವಿದ್ದ ಕಡೆ ಪಾಠಾಂತರಗಳನ್ನು ಗುರುತಿಸಿ ಶಾಸ್ತ್ರೀಯವಾಗಿ ಪರಿಷ್ಕರಿಸಿ ಪ್ರಕಟ ಮಾಡಿದ್ದಾರೆ. 'ಚಾವುಂಡರಾಯ ಪುರಾಣ' ಸಂಪಾದನೆಗೆ ಕ,ಖ,ಗ,ಘ,ಚ ಎಂಬ ಆಯ್ದು ಹಸ್ತಪ್ರತಿಗಳಿಂದ ಪರಿಷ್ಕರಿಸಿ ಸೂಕ್ತವಾದ ಮುನ್ನುಡಿ ಅನುಬಂಧಗಳೊಂದಿಗೆ ಪ್ರಕಟಮಾಡಿದ್ದಾರೆ. 'ಸುಕುಮಾರ ಚರಿತೆ'ಯ ಸಂಗ್ರಹವನ್ನು ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳ ಅವಶ್ಯಕತೆಗೆ ಅನುಗುಣವಾಗಿ ಸಂಗ್ರಹಿಸಿದ್ದಾರೆ. ಹೀಗೆ ಈ ಮೂರು ಕೃತಿಗಳು ಸಾಂಪ್ರದಾಯಿಕ ಗ್ರಂಥಸಂಪಾದನೆ ಹಿನ್ನೆಲೆಯಲ್ಲಿ ಪ್ರಕಟವಾಗಿವೆ.

ಇದೇ ಅವಧಿಯಲ್ಲಿ ಅಂದರೆ ೧೯೭೬ರಲ್ಲಿ ಸಂಯುಕ್ತವಾಗಿ ಆರ್.ಎನ್.ವಿಜಯಲಕ್ಷ್ಮಿ, ಡಿ.ವಿಜಯ ಅವರು 'ಓದುವಗಿರಿಯನ ಸಾನಂದಗಣೇಶ ಸಾಂಗತ್ಯ' ಕೃತಿಯನ್ನು ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಟಿ.ಆರ್.ಶಾಂತ ಅವರು ೧೯೭೭ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ 'ಎಡತೊರೆ ಅರ್ಕಪುಷ್ಕರಣೀ ಮಹಾತ್ಮೆ' ಎರಡು ಪ್ರತಿಗಳ ಆಧಾರದಿಂದ ಪರಿಷ್ಕರಿಸಿ ಪ್ರಕಟಿಸಿದ್ದಾರೆ. ಇಲ್ಲಿ ಹೆಚ್ಚಿನ ಸ್ವಾತಂತ್ರ್ಯವನ್ನು ಈ ವಿದ್ವಾಂಸರು ವಹಿಸಿಲ್ಲದಿರುವುದನ್ನು ಕಾಣುತ್ತೇವೆ.

ಗ್ರಂಥಸಂಪಾದನೆಯಲ್ಲಿ ತೊಡಗಿದ ಪ್ರಥಮ ಮಹಿಳೆ ಡಿ. ಚಂಪಾಬಾಯಿ ಅವರಿಂದ ಹಿಡಿದು ವೈ.ಸಿ.ಭಾನುಮತಿ, ಟಿ.ಎನ್. ನಾಗರತ್ನ, ಟಿ.ಕೆ. ಇಂದೂಬಾಯಿ, ಎಂ.ಎನ್. ಲೀಲಾವತಿ ನಗುವನಹಳ್ಳಿ ಪಿ.ರತ್ನ, ಕಮಲಾ ಹಂಪನಾ ಮುಂತಾದವರಲ್ಲಿ ಅವರದೇ ಆದ ಸಂಪಾದನ ವೈಶಿಷ್ಟ್ಯ ಇರುವುದು ಸ್ಪಷ್ಟವಾಗಿ ಕಾಣುತ್ತದೆ. ವಸ್ತುಕ ಹಾಗೂ ವರ್ಣಕ ಕಾವ್ಯಗಳ ಸಂಪಾದನೆಗಳು ಕಂಡುಬರುತ್ತದೆ. ಎಲ್ಲರೂ ನಡುಗನ್ನಡ ಕಾವ್ಯಗಳ ಮೇಲೆಯೇ ಹೆಚ್ಚು ಕೆಲಸ ಮಾಡಿರುವುದು ಕಾಣುತ್ತದೆ. ದಾಸಸಾಹಿತ್ಯದಲ್ಲಿ

ಹಾಡುಗಬ್ಬಗಳ ಸಂಪಾದನೆ ಪ್ರಮುಖವಾಗಿ ಕಾಣುತ್ತದೆ. ಸಾಂಪ್ರದಾಯಿಕ ಗ್ರಂಥಸಂಪಾದನ ತತ್ತ್ವಗಳಿಂದ ಪ್ರೇರಣೆ ಪಡೆದಾಗಲೂ ಅವುಗಳಿಂದ ಸ್ವಲ್ಪ ಸ್ವಾತಂತ್ರ್ಯ ಉಳಿಸಿಕೊಳ್ಳುವುದನ್ನು ಕಾಣುತ್ತೇವೆ.

ಸ್ವರವಚನ ಮತ್ತು ದೇಶಿ ಸಾಹಿತ್ಯದ ಮೇಲೆ ಹೆಚ್ಚು ಕೆಲಸ ಮಾಡಿದ ವೈ.ಸಿ.ಭಾನುಮತಿ. ಟಿ.ಎನ್.ನಾಗರತ್ನ. ಟಿ.ಕೆ.ಇಂದೂಬಾಯಿ ಅವರು ಕೃತಿಯ ಅಗತ್ಯಕ್ಕೆ ತಕ್ಕಂತೆ ಬಹು ಆಕರಗಳನ್ನು ಬಳಸಿಕೊಳ್ಳುತ್ತಾರೆ. ಶಬ್ದ ಸಂಸ್ಕರಣಕ್ಕಿಂತ ಸಾಂಸ್ಕೃತಿಕ ಸಂಸ್ಕರಣೆ ಇಲ್ಲಿ ಪ್ರಧಾನವಾಗಿ ಕಾಣುತ್ತದೆ. ಬಾಹ್ಯ ಸಂಭಾವ್ಯದ ಮೂಲಕ ಅದರ ವಿಸ್ತಾರವಾದ ಕಥಾ ಹಂದರದ ಮೂಲಕ ನಡೆಸುವ ಚರ್ಚೆಗಳು ಬಹುಸ್ತರೀಯ ಗುಣವನ್ನು ಹೊಂದಿವೆ. ಕಥೆ, ಗಾದೆ, ಒಗಟುಗಳ ಜೊತೆಗೆ ಜಾನಪದ ಸಾಂಪ್ರದಾಯಿಕ ಹಾಡುಗಳಾದ ಸೋಬಾನೆ, ಉರುಟಣೆ, ಮಂಗಳಾರತಿ ಮುಂತಾದ ಸಂಗತಿಗಳ ಮೂಲಕ ಹೆಣ್ತನದ ನೆಲೆಗಳನ್ನು ಶೋಧಿಸುವ ವಿಶಿಷ್ಟತೆ ಮೇಲಿನ ಎಲ್ಲಾ ವಿದ್ವಾಂಸರಲ್ಲಿ ಕಂಡುಬರುತ್ತವೆ. ಕನ್ನಡ ಗ್ರಂಥಸಂಪಾದನೆಯಲ್ಲಿ ಇದೊಂದು ಹೊಸ ಸಂಚಲನೆ ಎಂದೇ ಹೇಳಬೇಕು. ಪುರುಷ ಪ್ರಧಾನ ಗ್ರಂಥಸಂಪಾದನೆಗಿಂತ ಮಹಿಳೆಯ ಸಂಪಾದನ ಕೆಲಸ ಹೆಚ್ಚು ನಾನ್ ಅಕಾಡಿಮಿಕ್ ಸ್ವರೂಪದ್ದಾಗಿದೆ ಎಂಬುದು ಗಮನಾರ್ಹ.

ಒಟ್ಟಿನಲ್ಲಿ ಔಪಚಾರೀಕರಣಗೊಳ್ಳುವ ಮೂಲಕ ವ್ಯಕ್ತಿಸಾಮ್ಯ ಹಾಗೂ ಏಕಸ್ವಾಮ್ಯವಾಗಿದ್ದ ಕನ್ನಡ ಗ್ರಂಥಸಂಪಾದನೆಯನ್ನು ಬಹುಮುಖಿ ಹಾಗೂ ಸಮಾಜಮುಖಿ ಆಯಾಮದತ್ತ ಹೊರಳಿಸಿದ್ದನ್ನು ಮೇಲಿನ ಎಲ್ಲ ಮಹಿಳಾ ವಿದ್ಯಾಂಸರ ದೃಷ್ಟಿಕೋನದಲ್ಲಿ ಗುರುತಿಸಲಾಗಿದೆ. ಪುರುಷನಿಷ್ಠ ಗ್ರಂಥಸಂಪಾದನೆ ಮಾದರಿಗಳಲ್ಲಿ ಸಂಸ್ಕೃತ ಗ್ರೀಕ್ ಹಾಗೂ ಸಾಂಪ್ರದಾಯಿಕ ಸಂಸ್ಕೃತಿ ನಿಷ್ಠ ಮಾದರಿಗಳು ಕಂಡರೆ, ಮಹಿಳಾ ಗ್ರಂಥಸಂಪಾದಕರಲ್ಲಿ ಅದು ಹೆಚ್ಚು ಕನ್ನಡದ ಸಹಜ ಮತ್ತು ಸಮಾಜಮುಖಿ ನೆಲೆಯತ್ತ ಚಲಿಸುತ್ತದೆ. ನಿರ್ಮಿತ ಪಠ್ಯದೊಳಗೆ ಕಾಣುವ ಪಾಠಾಂತರ ಹಾಗೂ ಪಾಠಮಿಶ್ರಣಗಳ ಜೊತೆಗೆ ಬಹುಮುಖ್ಯವಾಗಿ ಕಥಾವಸ್ತುವಿನೊಳಗಿರುವ ಹೆಣ್ತನದ ನೆಲೆಗಳನ್ನು ಶೋಧಿಸುತ್ತಾರೆ.

ಅಧ್ಯಾಯ ಆರು

ಅಧ್ಯಯನದ ಫಲಿತಗಳು

ಅಧ್ಯಾಯ ಆರು

ಅಧ್ಯಯನದ ಫಲಿತಗಳು

ಕನ್ನಡ ಗ್ರಂಥಸಂಪಾದನೆಯನ್ನು ಒಂದು ಸ್ವಾಯತ್ತ ಬೌದ್ಧಿಕ ಚಟುವಟಿಕೆಯನ್ನಾಗಿ ಪರಿಗಣಿಸದೆ ಸಂಸ್ಕೃತಿಯ ಹಲವು ಹರಿವುಗಳಲ್ಲಿ ಒಂದೆಂದು ಈ ಅಧ್ಯಯನದಲ್ಲಿ ಪ್ರಮುಖವಾಗಿ ಪರಿಭಾವಿಸಲಾಗಿದೆ. ಅಭಿಜಾತ ಮತ್ತು ವಸಾಹತುಶಾಹಿ ಚಿಂತನೆಗಳು ಸಾಹಿತ್ಯ ಸಂಸ್ಕೃತಿಗೆ ತೊಡಸಿರುವ ಸ್ವಾಯತ್ತತೆಯಲ್ಲಿ ಜಾತಿ, ಮತ, ಧರ್ಮ, ಲಿಂಗ, ಶ್ರೇಷ್ಠ, ಕನಿಷ್ಠ, ಶುದ್ಧ, ಕವಿ, ಲಿಪಿಕಾರ ಎನ್ನುವ ಅಸಮಾನ ಸಂಗತಿಗಳು ಹುದುಗಿಕೊಂಡಿವೆ. ಮನುಷ್ಯನ ಕೃತಕ ಸೃಷ್ಟಿಯ ಈ ಶ್ರೇಣೀಕರಣ ರೂಪಗಳು ಕಾಲದಿಂದಲೂ ಸ್ತ್ರೀ ಮತ್ತು ಶೂದ್ರ ವರ್ಗಗಳನ್ನು ಔಪಚಾರಿಕ ಅರಿವಿನಿಂದ ವಂಚಿಸಿದ್ದಲ್ಲದೆ ಅವು ಯಾವತ್ತೂ ತನ್ನ ಹೀನಸ್ಥಿತಿಯ ಬಗ್ಗೆ ಯೋಚಿಸಲಾರದಷ್ಟು ನಿರ್ವೀರ್ಯಗೊಳಿಸಿದ್ದನ್ನು ಚರಿತ್ರೆಯಿಂದ ಕಂಡುಕೊಳ್ಳಲಾಗಿದೆ. ಮನುಷ್ಯನ ಸಾವಯವ ಅಭಿವ್ಯಕ್ತಿಯ ಚಹರೆಗಳನ್ನು ಶುದ್ಧೀಕರಿಸುವ ಮತ್ತು ಅವುಗಳನ್ನು ಪವಿತ್ರಗೊಳಿಸುವ ಹಾಗೂ ಇದೇ ಸರಿ ಎಂದು ತಿದ್ದುವ ರಚನೆಯ ಹಲವು ಆಯಾಮಗಳನ್ನು ತಾರ್ಕಿಕ ಏಕ ಸೂತ್ರೀಕರಣಕ್ಕೆ ಅಳವಡಿಸುವ ನೆಲೆಯೇ ಅಧಿಕಾರ ಹಾಗೂ ಪಾಂಡಿತ್ಯದ ನಿರಂಕುಶ ನೆಲೆಯಿಂದ ಬಂದಿರುವಂತದ್ದು. ಇದು ಯಾವತ್ತು ಅಭಿವ್ಯಕ್ತಿಯ ಬಹು ಆಯಾಮಗಳನ್ನು ಅದರ ಲಿಂಗೀಯ ಸ್ವರೂಪವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಬಹಳ ಮುಖ್ಯವಾಗಿ ಪಾಂಡಿತ್ಯ ಮತ್ತು ಶುದ್ಧತೆಯ ಹೆಸರಿನಲ್ಲಿ ರಚನೆಯೊಂದನ್ನು ಪ್ರಮಾಣೀಕರಿಸುವ ನೆಲೆಗೂ ಹೆಣ್ಣಿನ ಜೈವಿಕ ಸ್ವರೂಪಕ್ಕೂ ಸಹ ಸಂಬಂಧವಿರುವುದನ್ನು ಕಾಣಬಹುದು. ದೈಹಿಕ ಪಾತಿವ್ರತ್ಯ ಮತ್ತು ಶೀಲದ ಹೆಸರಿನಲ್ಲಿ ಹೆಣ್ಣನ್ನು ಬೌದ್ಧಿಕವಾಗಿ ಹಾಗೂ ದೈಹಿಕವಾಗಿ ನಿರ್ಬಂಧಿಸುವ, ನಿರ್ಲಕ್ಷಿಸುವ ಸಂಗತಿಗಳು ಇಂಥ ಶಾಸ್ತ್ರೀಯ ಚಿಂತನೆಗಳಲ್ಲಿ ದಟ್ಟವಾಗಿ ಅಡಗಿವೆ. ಹೀಗಾಗಿ ಕನ್ನಡ ಗ್ರಂಥಸಂಪಾದನೆಯನ್ನು ಒಂದು ಸ್ವಾಯತ್ತ ಬೌದ್ಧಿಕ ಚಟುವಟಿಕೆಗಿಂತ ಭಿನ್ನವಾಗಿ ಬಹುಮುಖಿ ನೆಲೆಯಲ್ಲಿ ನೋಡುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

ವಿಶೇಷವಾಗಿ ಕನ್ನಡ ಸಾಹಿತ್ಯ ಸಂಸ್ಕೃತಿ ಇಂಥ ಕೇಂದ್ರೀಕೃತ ಹಾಗೂ ಪ್ರಮಾಣೀಕೃತ ಎನ್ನಬಹುದಾದ ಪ್ರವೃತ್ತಿಗಳೊಂದಿಗೆ ಗುದುಮುರಿಗೆ ಹಾಕುತ್ತ ತನ್ನ ಸೃಜನಶೀಲ ಸ್ವಾತಂತ್ರ್ಯವನ್ನು ಸಾಮುದಾಯಿಕ ಚಹರೆಯನ್ನು ಉಳಿಸಿಕೊಂಡೇ ಬೆಳೆದಿದ್ದರೂ ಅದನ್ನು ಮತ್ತೇ ಏಕಸೂತ್ರೀಕರಣದ ನೆಲೆಯಲ್ಲಿಯೇ ಸಂಪಾದಿಸುತ್ತ ಬರಲಾಗಿದೆ.

ಈ ದ್ವಿಮುಖ ಹರಿದಾಟವನ್ನು ಅಧ್ಯಯನದಲ್ಲಿ ಎರಡು ಪರಿಕಲ್ಪನೆಗಳ ಮೂಲಕ ವಿವರಿಸಲಾಗಿದೆ. ಒಂದು ೧೩ನೇ ಶತಮಾನದಲ್ಲಿ ಮೊಗಲರಿಂದಾಗಿ ಪರಿಚಯವಾದ ಕಾಗದ ಹಾಗೂ ತಂತ್ರಜ್ಞಾನ, ಎರಡು ೧೮ನೇ ಶತಮಾನದಲ್ಲಿ ಮಿಷನರಿಗಳಿಂದ ಆವಿಷ್ಕಾರಗೊಂಡ ಮುದ್ರಣ ತಂತ್ರಜ್ಞಾನ, ಕಾಗದ ತಂತ್ರಜ್ಞಾನ ಎನ್ನುವುದೇ ಪುರುಷ ನಿರ್ಮಿತವೆಂದು ವ್ಯಾಖ್ಯಾನಗೊಳ್ಳುವ ಅದರ ಸ್ವರೂಪದಲ್ಲಿ ಅನುಕೂಲ ಹಾಗೂ ಅನಾನುಕೂಲ ಎರಡೂ ಇವೆ. ಬರಹ ಮತ್ತು ಮುದ್ರಣ ಎರಡು ಪುರುಷರು ಪ್ರಧಾನವಾದ ತಜ್ಞತೆಯ ಕ್ಷೇತ್ರಗಳೆಂದು ಪರಿಗಣಿತವಾಗಿದ್ದರಿಂದ ಕನ್ನಡ ಸಾಹಿತ್ಯ ರಚನೆಯೊಳಗಿದ್ದ ಸಾಮೂಹಿಕ ಸಖ್ಯಗುಣ ನಾಶವಾಯಿತು. ಮಧ್ಯಕಾಲೀನ ಕನ್ನಡ ಕಾವ್ಯರಚನೆ ಹಾಗೂ ಅದರಲ್ಲಿ ಬಳಕೆಯಾದ ಛಂದೋರೂಪಗಳು ಹೆಚ್ಚು ಗೇಯ ಸ್ವರೂಪದ್ದಾಗಿದ್ದವು ಮತ್ತು ಮೌಖಿಕ ಸಖ್ಯವನ್ನು ಹೊಂದಿದ್ದವು.

ಪಠಣ, ಗಮಕ, ಪುರಾಣ, ಕೀರ್ತನೆ, ಭಜನೆ, ಹಾಡು, ಟೀಕೆ ಹೀಗೆ ವಿವಿಧ ರೂಪಗಳಲ್ಲಿ ಪ್ರಸಾರವಾಗುತ್ತಿದ್ದ ಇವು ಹೆಚ್ಚು ಸ್ತ್ರೀ ಕೇಂದ್ರಿತವಾಗಿದ್ದವು. ಇದಕ್ಕೆ ದಾಸರ ಹಾಡುಗಳು ಉತ್ತಮ ನಿದರ್ಶನ. ಮಳೆ ಬಾರದ ಹೊತ್ತಿನಲ್ಲಿ ವಿರಾಟಪರ್ವವನ್ನು ಕರ್ನಾಟಕದ ವಿವಿಧ ಭಾಗಗಳಲ್ಲಿ ಮಹಿಳೆಯರೆ ಪಠಣ ಮಾಡುತ್ತಿದ್ದ ಸಂಗತಿಗಳು ತಿಳಿದುಬರುತ್ತವೆ. ಶ್ರೀಕೃಷ್ಣಪಾರಿಜಾತ ಮತ್ತು ದಾಸರ ಹಾಡುಗಳು ಮಹಿಳೆಯರ ಬಾಯಿಂದ ಹಾಡಲ್ಪಡುತ್ತಿದ್ದವು.

ತನ್ನ ಕಾವ್ಯವನ್ನು ಹೆಂಡತಿಯ ಎದುರಿಗೆ ಹೇಳುವ, ಹೆಂಡತಿಯೇ ಕಾವ್ಯದ ರೂಪವನ್ನು ನಿರ್ಧರಿಸುವ, ಪಂಚತಂತ್ರದ ಸುನೂತಿವಿಧನೆಂಬ ಬ್ರಾಹ್ಮಣನ ಕತೆಯಲ್ಲಿ ಮಹಿಳೆಯರ ಮೂಲಕ ಬರವಣಿಗೆ ಸಾಮೂಹಿಕ ನೆಲೆ ಪಡೆವ ಪ್ರಸಂಗಗಳು, "ಕಾವ್ಯವಿದು ಭುವನದೊಳು ಸಕಲರಿಂದ ಸುಶ್ರಾವ್ಯಮಪ್ಪಂತೆ", 'ಈ ಕಥೆಯನೊಲವಿನಿಂದ ಕೇಳ್ದರ್ಗೆ, ಪೇಳ್ದರ್ಗೆ, ಶೋಕಭಯ, ದುಃಖಭಯ, ಸಂತಾಪಮಂ ಪಾಪಮಂ ನೂಕಿ ನಿರ್ಮಲತರ ಸುಬುದ್ಧಿಯಂ ಸಿದ್ಧಿಯಂ ಹರಿಕೊಡುತಿರ್ಪ' ಎನ್ನುವ ಮಾತುಗಳು ಲಿಂಗ, ಜಾತಿ, ನಿರಪೇಕ್ಷಿತವಾದ ಬಹುಮುಖಿ ಸಾಂಸ್ಕೃತಿಕ ವಿನ್ಯಾಸದಲ್ಲಿ ಕನ್ನಡ ಕಾವ್ಯ ಬೆಳೆದದ್ದನ್ನು ಮುಖ್ಯವಾಗಿ ಹೇಳುತ್ತವೆ ಮತ್ತು ಅದು ಹೆಚ್ಚು ಮೌಖಿಕ ರೂಪದಲ್ಲಿ ಅನುಸಂಧಾನವಾಗುತ್ತಿದ್ದುದನ್ನು ಹೇಳುತ್ತದೆ. ಹೆಣ್ಣಿನ ಭಾಷಾ ಸ್ವರೂಪಕ್ಕೂ ಇಂಥ ಆ ಸಂಗತಿಗಳಿಗೂ ಹೆಚ್ಚು ಹೊಂದಾಣಿಕೆ ಇರುವುದನ್ನು ಕಾಣುತ್ತೇವೆ. ಭಾಷಾ ಶಾಸ್ತ್ರಜ್ಞರ ಪ್ರಕಾರ ಹೆಣ್ಣಿನ ಭಾಷೆಯ ಗುಣಗಳಲ್ಲಿ ಆಪ್ತ ಸಂಭಾಷಣೆ ಹಾಗೂ 'ಸಮ್ಮತಿ' ಬಯಸುವ ಅಂಶಗಳು ಮುಖ್ಯವಾದಂಥವು.

ಅಭಿಪ್ರಾಯಗಳನ್ನು ಹೇರುವ ಗುಣವನ್ನು ಗಂಡು ಭಾಷೆಯಲ್ಲಿ ಕಂಡರೆ, ಒಪ್ಪಿಸುವ ಹಾಗೂ ಸಹಮತತೆ ಹೆಣ್ಣಿನ ಭಾಷೆಯ ಪ್ರಮುಖ ಲಕ್ಷಣ. ಕಳೆದ ಎರಡು ಸಾವಿರ ವರ್ಷಗಳ ಕನ್ನಡ ಸಾಹಿತ್ಯದಲ್ಲಿ ಹೆಂಗಸರು ಬರೆದಿರುವುದು ಕಡಿಮೆ, ಮತ್ತು ಅದು ನಿರ್ಲಕ್ಷಿತ ಕೂಡ. ಆದರೆ ಹೆಣ್ಣು ಮಕ್ಕಳು ಹಾಡಿರುವುದು ಬೇಕಾದಷ್ಟಿದೆ. ನೂರಾರು ಜನಪದ ಗಾಯಕಿಯರು ಸಿಗುತ್ತಾರೆ. ಕಂತಿ, ಮುಕ್ತಾಯಕ್ಕ, ಅಕ್ಕಮಹಾದೇವಿ, ಸಂಚಿ ಹೊನ್ನಮ್ಮ ಇವರು ಕೃತಿ ರಚಿಸಿರಬಹುದು. ಡಿ. ಚಂಪಾಬಾಯಿ,

ವೈ.ಸಿ. ಭಾನುಮತಿ, ಟಿ.ಎನ್.ನಾಗರತ್ನ ಇವರು ಸಂಪಾದನೆಯಲ್ಲಿ ತೊಡಗಿರಬಹುದು. ಇವೆಲ್ಲವೂ ಹೇಳುವುದೆಂದರೆ ಬರವಣಿಗೆ ಸಂಪಾದನೆ ಎನ್ನುವುದು ನೂರಕ್ಕೆ ತೊಂಬತ್ತರಷ್ಟು ಪುರುಷ ಕ್ಷೇತ್ರವೆಂದು ಹೇಳುತ್ತವೆ ಹೊರತು ಹೆಂಗಸಿನದಲ್ಲ ಎನ್ನುವುದನ್ನೆ ಪ್ರತಿಪಾದಿಸುತ್ತವೆ. ಇಂಥ ಪುರುಷ ನಿರ್ಮಿತ ಅಡಚಣೆಗಳನ್ನು ದಾಟಿ ಮಹಿಳೆಯರು ಈ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿದ್ದನ್ನು ಇಲ್ಲಿ ಪ್ರಮುಖವಾಗಿ ಗುರುತಿಸಲಾಗಿದೆ.

ರಾಗ, ತಾಳ, ದಾಟಿ, ಸಂವಹನಕ್ಕೆ ಅನುಕೂಲವಾಗುವ ವಿವಿಧ ಮಟ್ಟುಗಳಿಂದ ಆವೃತವಾಗಿದ್ದ ದೇಸೀ ಕಾವ್ಯಗಳು ಬಹುಮುಖ್ಯವಾಗಿ ಹಾಡುಗಬ್ಬಗಳಾಗಿದ್ದವು. ಸ್ವಚ್ಛಂದ ರೂಪ ಅವಕ್ಕಿತ್ತು. ಹಾಡುಗಾರರಿಗೆ ಅಥವಾ ಪಠಣ ಮಾಡುವವರಿಗೆ ಅವುಗಳ ಸಂವಹನ ಗುಣವಾದಂತೆ ಮರುಹುಟ್ಟಿನ ಮಾಧ್ಯಮವೂ ಆಗಿತ್ತು. ಈ ಪ್ರಕ್ರಿಯೆಯು ಅವುಗಳ ನಿರ್ದಿಷ್ಟ ರಚನೆಯನ್ನೇ ವ್ಯಕ್ತಿ ಸ್ವಾಮ್ಯತೆಯನ್ನು ನಿರಚನಗೊಳಿಸುತ್ತಿತ್ತು. ಇಂಥ ಕಾವ್ಯ ರೂಪಗಳನ್ನು ಪುರುಷನಿಷ್ಠ ಬರಹ ಮತ್ತು ಮುದ್ರಣ ತಂತ್ರಜ್ಞಾನಗಳು ಪರಿಷ್ಕರಣೆಯ ಹೆಸರಿನಲ್ಲಿ ಪ್ರಮಾಣೀಕರಣಗೊಳಿಸಿ ಅವುಗಳನ್ನು ಶುಷ್ಕವಾಗಿ ಕಟ್ಟಿಕೊಟ್ಟವು. ಮೊಗ್ಲಿಂಗ್ ಅವರಂಥ ಆರಂಭಿಕರಲ್ಲಿ ರಾಗ–ತಾಳಗಳನ್ನು ಹಾಗೆ ಉಳಿಸಿಕೊಂಡ ಪ್ರಯೋಗಗಳಿದ್ದರೂ ಪಾಶ್ಚಾತ್ಯ ಶಿಕ್ಷಣ ಪಡೆದ ದೇಸಿ ವಿದ್ವಾಂಸರು ಪಠ್ಯದ ಇಂಥ ಸಂವಹನ ರೂಪಗಳನ್ನು ಕೈ ಬಿಡುತ್ತಾರೆ. ಡಿ.ಎಲ್.ನರಸಿಂಹಾಚಾರ್ಯರಂಥ ದೈತ್ಯ ಪ್ರತಿಭೆಗೆ ಈ ತಪ್ಪಿನ ಅರಿವಾಗುವುದು ಅವರ ಬದುಕಿನ ಕೊನೆಗಾಲದಲ್ಲಿ. ಪಾಠಾಂತಗಳನ್ನು "ಅವು ಪಾಠಾಂತರಗಳಲ್ಲ ಅವು ಪ್ರತಿಕ್ರಿಯೆಗಳು" ಎಂದು ಭಾವಿಸ ಬೇಕಿತ್ತು ಎಂದು ಉದ್ಗಾರ ಎತ್ತುತ್ತಾರೆ. ಕಿಟೆಲ್ ಅಂಥವರು "ದೇವರೆ ಕನ್ನಡದ ಪಠ್ಯಗಳನ್ನು ಅರ್ಥ ಮಾಡಿಕೊಳ್ಳಲು ನನಗೊಂದು ಧ್ವನಿ ಹಬ್ಬವನ್ನು ಕೊಡು" ಎಂದು ಪ್ರಾರ್ಥಿಸುತ್ತಾರೆ. ಪಾಂಡಿತ್ಯ ಮತ್ತು ತಂತ್ರಜ್ಞಾನವು ವ್ಯಕ್ತಿಸ್ವಾಮ್ಯ ಏಕಮುಖ ಮಾದರಿಗಳು, ಪಂಡಿತ ಮತ್ತು ಅನುಭವ ಜಗತ್ತಿನ ಅಂತರವನ್ನು ಹೆಚ್ಚು ಮಾಡಿದ್ದವು. ಆದರೆ ಮಹಿಳಾ ಗ್ರಂಥಸಂಪಾದನಾಕಾರ್ತಿಯರಲ್ಲಿ ಪಾಂಡಿತ್ಯ ಮತ್ತು ಅನುಭವ ಜಗತ್ತು ಒಟ್ಟೊಟ್ಟಿಗೆ ಸಾಗುವ ಬಹುಮುಖ್ಯ ವೈಧಾನಿಕತೆಯನ್ನು ಕಾಣಬಹುದಾಗಿದೆ.

ಕೃತಿ ಸಂಪಾದನೆ ಸಂದರ್ಭದಲ್ಲಿ ಮಹಿಳಾ ವಿದ್ವಾಂಸರು ಕೃತಿಯ ಕಥಾವಸ್ತು, ಶೈಲಿ, ಭಾಷೆ, ನಿರೂಪಣೆ ಇವನ್ನು ಪುರುಷ ಸಂಪಾದಕರಂತೆ ಕೇವಲ ಶಿಷ್ಟ ಆಕೃತಿಗಳೊಂದಿಗೆ ಹೋಲಿಸದೆ ಪೂರ್ವಕಾಲೀನ ಹಾಗೂ ಸಮಕಾಲೀನ ದೇಸೀ ಹಾಗೂ ಮೌಖಿಕ ರೂಪಗಳೊಂದಿಗೆ ಪುನಾರಚಿಸಿಕೊಳ್ಳುತ್ತಾರೆ. ಆ ಮೂಲಕ ಅಭಿಜಾತ ಹಾಗೂ ವಸಾಹತು ವೈಧಾನಿಕತೆಯ ಏಕಸ್ವಾಮ್ಯ ಮಾದರಿಗಳನ್ನು ಪಲ್ಲಟಗೊಳಿಸುತ್ತಾರೆ. ವೈ.ಸಿ.ಭಾನುಮತಿ ಯವರ ಷಟ್ಪದಿ, ಸಾಂಗತ್ಯ ಹಾಗೂ ಸ್ವರವಚನ ರೂಪಗಳ ಸಂಪಾದನೆ, ಟಿ.ಎನ್.ನಾಗರತ್ನರವರ ದಾಸಸಾಹಿತ್ಯ ಸಂಪಾದನೆಯ ವೈಧಾನಿಕತೆಯಲ್ಲಿ ಇಂಥ ಮಹತ್ವದ ಪಲ್ಲಟ ಹಾಗೂ ಪ್ರಯೋಗಶೀಲತೆಯನ್ನು ನೋಡಬಹುದು.

ದೇಸೀ ಕಾವ್ಯಗಳು ಹಾಡು ಗಬ್ಬಗಳು. ಅವು ಅನೇಕ ಲೋಕಗ್ರಹಿಕೆಗಳ ಪ್ರೇರಣೆಗಳಿಂದ ಸಮ್ಮಿಳಿತವಾದಂಥವು. ಈ ಅನುಭವ ಸಮಾಜದಲ್ಲಿ ಹಲವು ಓದುಗಳಿಗೆ ಪ್ರೇರಣೆಗಳಿಗೆ ಪುನಾರಚನೆಗಳಿಗೆ ಕಾರಣವಾಗಿರುತ್ತದೆ. ಆದರೆ ಶುದ್ಧ ಮೂಲ ಎನ್ನುವ ವೈದಿಕ ಹಾಗೂ ವಸಾಹತುಶಾಹಿ ಮನೋಧರ್ಮಗಳು ಕವಿ, ವಿದ್ವಾಂಸ, ಲಿಪಿಕಾರ, ಕೇಳುಗ, ಓದುಗ, ಪೋಷಕ ಇವರ ಮೂಲಕ ಕನ್ನಡ ಸಾಹಿತ್ಯ ಸಂಸ್ಕೃತಿಯು ಸೃಜಿಸಿಕೊಂಡ ವಿಸ್ತಾರ ಚಿಂತನೆಯನ್ನು ಮಾನ್ಯ ಮಾಡುವುದಿಲ್ಲ. ಇಂಗ್ಲಿಷ್ ವಿದ್ಯಾಭ್ಯಾಸದಿಂದ ಪ್ರೇರಣೆ ಪಡೆದ ಹಿರೀಕ ಬುದ್ಧಿವಂತ ವರ್ಗ ವ್ಯಕ್ತಿ ವಿಶಿಷ್ಟ ಕಾಳಜಿಯನ್ನೇ ಎತ್ತಿ ಹಿಡಿದು ಪಠ್ಯದ ಸಾಮುದಾಯಿಕ ಚಹರೆಗಳನ್ನು ಅಲಕ್ಷಿಸಿತು. ಆದರೆ ಇಂಥ ಔಪಚಾರಿಕ ಕಲಿಕೆ ಹಾಗೂ ಅಧ್ಯಯನಗಳಿಂದ ಉಂಟಾದ ಪಂಡಿತ ಮತ್ತು ಜನಪ್ರಿಯತೆಯ ಮಧ್ಯದ ಅಂತರವನ್ನು ಕಡಿಮೆಗೊಳಿಸುವ ವಿಶಿಷ್ಟ ವೈಧಾನಿಕತೆಯನ್ನು ಈ ಅಧ್ಯಯನದ ಮಹಿಳಾ ವಿದ್ವಾಂಸರಲ್ಲಿ ಕಾಣುತ್ತೇವೆ.

ಸಂಪಾದನೆ, ಪರಿಷ್ಕರಣೆ ಪಾಠಾಂತರಗಳನ್ನು ಗುರುತಿಸುವಿಕೆ, ತೌಲನಿಕತೆ, ಅನುಬಂಧಗಳ ನೀಡುವಿಕೆಯಲ್ಲಿ ರೂಢಿಗತ ಗ್ರಂಥಸಂಪಾದನ ನಿಯಮಗಳನ್ನು ಅನುಸರಿಸಿದಂತೆ ಕಂಡರೂ ಪಾಠ ನಿರ್ಣಯ ಹಾಗೂ ಪಠ್ಯದ ವಿಶ್ಲೇಷಣೆಯಲ್ಲಿ ಮಹಿಳಾ ವಿದ್ವಾಂಸರು ತೋರುವ ಪ್ರಬುದ್ಧತೆ ಮತ್ತು ಸ್ವಾತಂತ್ರ್ಯತೆ ಕುತೂಹಲಕರವಾಗಿದೆ. ಇದನ್ನು ಕಲಿಕೆ ಮತ್ತು ಬಳಕೆ ಎನ್ನುವ ಎರಡು ಅರ್ಥದಲ್ಲಿ ವಿಶ್ಲೇಷಿಸಲಾಗಿದೆ. ಕಲಿಕೆ ಎಂದರೆ ಗ್ರಂಥಸಂಪಾದನೆಯ ವೈಧಾನಿಕತೆಯನ್ನು ಭಾಷೆಯ ಮೂಲಕ ಕಲಿಯುವುದು. ಭಾಷೆ ಎನ್ನುವುದೇ ಲಿಂಗತಾರತಮ್ಯದಿಂದ ಕೂಡಿದೆ. ಪುರುಷನ ಭಾಷೆ ಮತ್ತು ಹೆಂಗಸಿನ ಭಾಷೆ ಎಂದು ನಾನು ಆಯ್ಕೆ ಮಾಡಿಕೊಂಡ ಮಹಿಳಾ ವಿದ್ವಾಂಸರು ಗ್ರಂಥಸಂಪಾದನೆಯ ಸೂತ್ರಗಳನ್ನು ಗಂಡಸಿನ ಭಾಷೆಯಲ್ಲಿ ಕಲಿತರೂ ಅದನ್ನು ಬಳಸುವಾಗ ತೋರುವ ಪ್ರಬುದ್ಧತೆ ಮಹತ್ವದ್ದು. ಭಾಷೆ ಎಂಬ ಸಾಮರ್ಥ್ಯವನ್ನು ಪಡೆದುಕೊಳ್ಳುವುದು ಒಂದಾದರೆ ಪಡೆದುಕೊಂಡ ಭಾಷೆ ಎಂಬ ಸಾಮರ್ಥ್ಯವನ್ನು ಸಕಾಲಿಕ ಹಾಗೂ ಸಕಾರಣವಾಗಿ, ಸಮರ್ಥವಾಗಿ ಬಳಸುವುದು ಮತ್ತೊಂದು ಸಂಗತಿಯಾಗಿದೆ. ಇಂಥ ಬಳಸುವ ಸ್ವಾತಂತ್ರ್ಯವನ್ನು ವೈ.ಸಿ. ಭಾನುಮತಿ, ಟಿ.ಎನ್.ನಾಗರತ್ನ ಡಿ. ಚಂಪಾಬಾಯಿ, ಟಿ.ಕೆ.ಇಂದೂಬಾಯಿ ಅವರ ವೈಧಾನಿಕತೆಯಲ್ಲಿ ಕಾಣುತ್ತೇವೆ.

ಪರಿಷ್ಕರಣದ ನೆಪದಲ್ಲಿ ರಚನೆಯೊಂದನ್ನು ಅದರ ಸಾಂಸ್ಕೃತಿಕ ನೆನಪುಗಳೊಂದಿಗೆ ಹಾಗೂ ಸಮಕಾಲೀನ ಸಂವೇದನೆಗಳೊಂದಿಗೆ ಮರುರಚಿಸುವ ಸೃಜನಶೀಲತೆಯನ್ನು ಕಾಣುತ್ತೇವೆ. ಅಂದರೆ ತಜ್ಞತೆ ಅಥವಾ ತಟಸ್ಥತೆಗೆ ಹೊರತಾದ ಜೀವಂತ ಅನುಸಂಧಾನವನ್ನು ಕಾಣುತ್ತೇವೆ. ಎಂ.ಎನ್.ಲೀಲಾವತಿ, ನಗುವನಹಳ್ಳಿ ಪಿ. ರತ್ನ, ಕಮಲಾ ಹಂಪನಾ, ಆರ್.ಎನ್.ವಿಜಯಲಕ್ಷ್ಮಿ, ಟಿ.ಆರ್.ಶಾಂತ ಮುಂತಾದ ಗ್ರಂಥಸಂಪಾದಕಿಯರ ವೈಧಾನಿಕತೆಯಲ್ಲಿ ಮಾತ್ರ ಪಡೆದುಕೊಂಡ ಜ್ಞಾನವನ್ನು ಯಥಾರೀತಿಯಾಗಿ ಬಳಸಿರುವುದು ಕಂಡುಬರುತ್ತದೆ. ಇವರಲ್ಲಿ ಅಂಥ ಹೊಸ ಪ್ರಯೋಗಶೀಲತೆ ಅಷ್ಟು ಕಾಣುವುದಿಲ್ಲ.

ಜನಪ್ರಿಯ ಸಂಪಾದನೆಗಳಲ್ಲಿ, ಆಧುನಿಕ ಸಾಹಿತ್ಯ ಹಾಗೂ ಸಾಹಿತ್ಯೇತರ ವಿವಿಧ ಪ್ರಕಾರಗಳಲ್ಲಿ ವಿವಿಧ ಕಾರಣಗಳಿಗಾಗಿ ಸಂಪಾದನೆ ಸಂಗ್ರಹ ಹಾಗೂ ಪ್ರಕಟಣ ಕೆಲಸ ಮಾಡುವ ಮಹಿಳಾ ವಿದ್ವಾಂಸರಲ್ಲಿ ಹೆಚ್ಚಿನದಾಗಿ ಒಂದು ಸಂಯೋಜನ ಗುಣ ಕಂಡುಬರುತ್ತದೆ, ಹೊರತು ಅವರ ಸಾಮರ್ಥ್ಯವನ್ನು ಬಳಸುವ ಗುಣ ಕಾಣುವುದಿಲ್ಲ. ಸಂಗ್ರಹಿತ ಲೇಖನ ಅಥವಾ ಬರಹಗಳಲ್ಲಿರುವ ಸಂಗತಿಗಳನ್ನು ಸಾರಾಂಶ ರೂಪದಲ್ಲಿ ತಮ್ಮ ಸಂಪಾದಕೀಯದಲ್ಲಿ ಹೇಳುತ್ತಾರೆ. ಆದರೆ ಕ್ವಚಿತ್ತಾಗಿ ವೈಚಾರಿಕ ಹಾಗೂ ಮಹಿಳಾ ಅಧ್ಯಯನದ ಸಂಗ್ರಹ ಹಾಗೂ ಸಂಪಾದನ ರೂಪಿ ಬರಹಗಳಲ್ಲಿ ಪಡೆದುಕೊಂಡ ಭಾಷೆ ಸಾಮರ್ಥ್ಯವನ್ನು ಸಮರ್ಥವಾಗಿ ಬಳಸಿಕೊಳ್ಳುವ ಅವಕಾಶವನ್ನು ತಾವೇ ಸೃಷ್ಟಿಸಿಕೊಳ್ಳುವುದನ್ನು ಕಾಣುತ್ತೇವೆ.

ಕವಿ, ಲಿಪಿಕಾರ, ಲೇಖನ, ಲೇಖನ ಸಾಮಗ್ರಿಗಳು, ಭಾಷೆ, ವ್ಯಾಕರಣ ತಂತ್ರಜ್ಞಾನ ಇವೆಲ್ಲ ಪುರುಷನ ತಜ್ಞತೆಯ ಕ್ಷೇತ್ರಗಳಾಗಿ ಹುಟ್ಟಿಕೊಂಡ ಹೊತ್ತಿನಲ್ಲಿ ಕನ್ನಡದ ಮಹಿಳಾ ವಿದ್ವಾಂಸರು ಅಗಾದ ಆಸಕ್ತಿ, ಶ್ರದ್ಧೆ, ಪರಿಶ್ರಮ, ಅಧ್ಯಯನ ಶೀಲತೆ ಮೂಲಕ ಕನ್ನಡ ಗ್ರಂಥಸಂಪಾದನೆಗೊಂದು ಹೊಸ ಆಯಾಮ ನೀಡಿದ ನೆಲೆಗಳನ್ನು ಈ ಅಧ್ಯಯನದಲ್ಲಿ ಪ್ರಮುಖವಾಗಿ ಗುರುತಿಸಲಾಗಿದೆ.

ಡಿ. ಚಂಪಾಬಾಯಿ ಅವರ ಬಳಿಕ ತರುವಾಯ ಮಹಿಳಾ ಗ್ರಂಥಸಂಪಾದನೆ ನಿಂತ ನೀರಾಗದೆ ಹರಿವ ನದಿಯಾಗಿ ಸಾಗಲು ಸಾಧ್ಯವಾದದ್ದು ೧೯೭೫ರಿಂದ ಎಂದೇ ಹೇಳಬಹುದು. ೧೯೭೫ ಅಂತಾರಾಷ್ಟ್ರೀಯ ಮಹಿಳಾ ವರ್ಷ ಎಂದು ಘೋಷಿತವಾಯಿತು. ಉನ್ನತ ಶಿಕ್ಷಣ ಪಡೆದ ಮಹಿಳೆಯರ ಸಂಖ್ಯೆ ವೃದ್ಧಿಸಿದ್ದು ಕೂಡ ೧೯೭೦ರ ದಶಕದಲ್ಲಿ. ೧೯೭೦ಕ್ಕಿಂತ ಹಿಂದೆ ವಿದ್ಯಾಭ್ಯಾಸ ಪಡೆದ ಮಹಿಳೆಯರು ಉದ್ಯೋಗವನ್ನು ಸ್ವೀಕರಿಸಿದ್ದರೂ ಬೋಧನಾಂಗದ ಕಡೆಗೆ ಒಲವು ತೋರಿದ್ದರು. ಗ್ರಂಥಸಂಪಾದಕಳಾಗಬೇಕೆಂಬ ಕನಸನ್ನು ಕಂಡು ಅದೇ ವೃತ್ತಿಯನ್ನು ಗಂಭೀರವಾಗಿ ಸ್ವೀಕರಿಸಿದ್ದು ವೈ.ಸಿ. ಭಾನುಮತಿಯವರು ಮಾತ್ರ. ಮಹಿಳಾ ಪ್ರತಿನಿಧಿಕರಣದ ದೃಷ್ಟಿಯಿಂದ ಇವರು ಮಹತ್ವದವರಾಗಿದ್ದಾರೆ.

ಮಹಿಳಾ ಗ್ರಂಥಸಂಪಾದಕೀಯರ ಅವರು ಇತರ ಬರಹ ಮತ್ತು ಸಂಗ್ರಹಗಳಲ್ಲಿಯೂ ಮಹಿಳೆಯ ಅಸ್ತಿತ್ವ ಮತ್ತು ಅನನ್ಯತೆಯ ಸ್ವರೂಪವನ್ನು ಕಟ್ಟಿಕೊಡುವುದನ್ನು ಕಾಣುತ್ತೇವೆ. ಪಠ್ಯ ಅಥವಾ ರೂಪವೊಂದು ವಿವಿಧ ದೃಷ್ಟಿಕೋನಗಳಲ್ಲಿ ವ್ಯಾಖ್ಯಾನಕ್ಕೊಳಗಾಗುವ ಬಗೆಯನ್ನು ಡಿ.ಚಂಪಾಬಾಯಿ, ಭಾನುಮತಿಯವರಂಥ ಎಲ್ಲ ಸಂಪಾದಕೀಯರಲ್ಲಿ ಪ್ರಮುಖವಾಗಿ ಕಾಣುತ್ತದೆ. ಇದನ್ನು ನಾನು ಶಾಬ್ಧಿಕ ಸಂಸ್ಕರಣಕ್ಕಿಂತ ಸಾಂಸ್ಕೃತಿಕ ಸಂಸ್ಕರಣವೆಂದು ಕರೆದಿದ್ದೇನೆ.

ಒಟ್ಟಿನಲ್ಲಿ ವ್ಯಕ್ತಿ ಹಾಗೂ ಏಕಸ್ವಾಮ್ಯ ಪುರುಷ ಪ್ರಧಾನವು ಆಗಿದ್ದ ಗ್ರಂಥಸಂಪಾದನ ಕ್ಷೇತ್ರವನ್ನು ಬಹುಮುಖಿ ಹಾಗೂ ಸಮಾಜಮುಖಿ ಆಯಾಮದತ್ತ ಹೊರಳಿಸಿದ್ದ ಸಂಗತಿಯನ್ನ ಅಧ್ಯಯನ ಕ್ಕೊಳಪಡಿಸಿದ ಎಲ್ಲ ಮಹಿಳಾ ವಿದ್ವಾಂಸರಲ್ಲಿ ಕಾಣುತ್ತೇವೆ. ಪುರುಷನಿಷ್ಠ ಸಂಪಾದನ ಮಾದರಿಗಳಲ್ಲಿ

ಸಂಸ್ಕೃತ ಮತ್ತು ಗ್ರೀಕ್ ಸಂಪ್ರದಾಯದ ಮಾದರಿಗಳನ್ನು ಕಂಡರೆ ಕನ್ನಡ ಮಹಿಳಾ ಗ್ರಂಥ ಸಂಪಾದಕೀಯರಲ್ಲಿ ಅವು ಹೆಚ್ಚು ಕನ್ನಡದ ಸಹಜತೆಯಲ್ಲಿ ಸಮೃದ್ಧವಾಗಿ ತೊಯ್ದು ಬರುವುದನ್ನು ಕಾಣುತ್ತೇವೆ. ಬಹುಮುಖ್ಯವಾಗಿ ಪಠ್ಯ ಮತ್ತು ಅದರ ನಿರಾಕರಿತ ರೂಪಗಳನ್ನು ಹೊರತಳ್ಳುವುದಕ್ಕಿಂತ ಒಳಗೊಳ್ಳುವ ವಿಶಿಷ್ಠ ಸಾಂಸ್ಕೃತಿಕ ಮಾದರಿಗಳನ್ನು ಕನ್ನಡ ಗ್ರಂಥಸಂಪಾದನಕಾರ್ತಿಯರಲ್ಲಿ ಕಾಣುತ್ತೇವೆ.

ಅನುಬಂಧ

೧. ಆಕರ ಸಾಹಿತ್ಯ

೨. ಸಹಾಯಕ ಸಾಹಿತ್ಯ

೩. ಲೇಖನಗಳು

೪. ತಿಳುವಳಿಕೆ ನೀಡಿದವರು

೧. ಆಕರ ಸಾಹಿತ್ಯ

ಚಂಪಾಬಾಯಿ. ಡಿ, ೧೯೪೦, ಹದಿಬದೆಯ ಧರ್ಮ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಭಾನುಮತಿ. ವೈ.ಸಿ., ೧೯೭೮, ಮಲ್ಲರಸ ವಿರಚಿತ ದಶಾವತಾರ ಚರಿತೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಭಾನುಮತಿ ವೈ.ಸಿ., ೧೯೮೧, ಚಿಕ್ಕಪದ್ಮಣ್ಣ ಸೆಟ್ಟಿ ವಿರಚಿತ ಅನಂತನಾಥ ಚರಿತೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಭಾನುಮತಿ ವೈ.ಸಿ., ೧೯೯೬, ಕೃಷ್ಣಶರ್ಮ ವಿರಚಿತ ಸರಜಾಹನುಮೇಂದ್ರ ಯಶೋವಿಲಾಸಂ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಭಾನುಮತಿ ವೈ.ಸಿ., ೨೦೦೭, ಭೈರವೇಶ್ವರ ಪುರಾಣ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು.

ಭಾನುಮತಿ ವೈ.ಸಿ., ೨೦೦೭, ಇಮ್ಮಡಿ ಗುಣವರ್ಮ ಪಾರ್ಶ್ವಪಂಡಿತ ಸಂಪುಟ, ಪುಷ್ಪದಂತ ಪುರಾಣಂ, ಚಂದ್ರನಾಥಷ್ಟಕ ಪಾರ್ಶ್ವನಾಥ ಪುರಾಣಂ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಭಾನುಮತಿ. ವೈ.ಸಿ., ೧೯೭೬, ಕುಮಾರ ಚೆನ್ನಬಸವ ವಿರಚಿತ ಪುರಾತನರ ಚರಿತೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಭಾನುಮತಿ. ವೈ.ಸಿ., ೧೯೭೭, ಚೆನ್ನಬಸವ ವಿರಚಿತ ನಿಜಲಿಂಗಚಿಕ್ಕಯ್ಯನಸಾಂಗತ್ಯ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು.

ಭಾನುಮತಿ. ವೈ.ಸಿ., ೧೯೭೯, ಮುಖಬೋಳುಸಿದ್ದರಾಮ ವಿರಚಿತ ಷಟ್ಸ್ಥಲ ತಿಲಕ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಭಾನುಮತಿ. ವೈ.ಸಿ., ೧೯೮೧, ಶ್ರುತಕೀರ್ತಿ ವಿರಚಿತ ವಿಜಯಕುಮಾರಿ ಚರಿತೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಭಾನುಮತಿ. ವೈ.ಸಿ., ೧೯೮೪, ಆದಿದೇವ ವಿರಚಿತ ಸುಕುಮಾರ ಚರಿತೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಭಾನುಮತಿ ವೈ.ಸಿ., ೧೯೮೪, ಸಹ್ಯಾದ್ರಿ ಖಂಡ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಭಾನುಮತಿ ವೈ.ಸಿ., ೧೯೮೫, ಹರದನಹಳ್ಳಿ ನಂಜಣಾರ್ಯ ವಿರಚಿತ ಏಕೋರಾಮೇಶ್ವರ ಪುರಾಣ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು.

ಭಾನುಮತಿ ವೈ.ಸಿ., ೧೯೮೯, ಬತ್ತೀಸ ಪುತ್ತಳಿ ಕಥೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಭಾನುಮತಿ ವೈ.ಸಿ., ೧೯೯೬, ನೂರೊಂದಯ್ಯ ವಿರಚಿತ ಸೌಂದರ್ಯ ಕಾವ್ಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಭಾನುಮತಿ ವೈ.ಸಿ., ೨೦೦೪ ಮಹಾದೇವ ಕವಿಯ ಸಾಂಗತ್ಯ ಕೃತಿಗಳು, ತಳಗವಾದಿ ಪ್ರಕಾಶನ ಕುವೆಂಪು ನಗರ, ಮೈಸೂರು.

ಭಾನುಮತಿ ವೈ.ಸಿ., ೨೦೦೪, ಕನ್ನಡ ರತ್ನಕರಂಡಕ ಶ್ರಾವಕಾಚಾರಗಳು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ. ಮೈಸೂರು.

ಭಾನುಮತಿ ವೈ.ಸಿ., ೨೦೦೫, ಶ್ರೀ ತೋಂಟದ ಸಿದ್ದಲಿಂಗೇಶ್ವರ ಸಮಗ್ರ ಸಾಹಿತ್ಯ ಸಂಪುಟ ೭, ಸಿದ್ದಲಿಂಗೇಶ್ವರ ಲಘುಕೃತಿಗಳು, ಕರ್ನಾಟಕ ಸರ್ಕಾರ, ಧಾರ್ಮಿಕ ದತ್ತಿ ಇಲಾಖೆ, ಎಡೆಯೂರು.

ಕಲಬುರ್ಗಿ ಎಂ.ಎಂ., ಭಾನುಮತಿ ವೈ.ಸಿ., ೨೦೦೪, ಸಿದ್ದಮಂಕ ಚರಿತೆ, ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ.

ಭಾನುಮತಿ ವೈ.ಸಿ., ೨೦೧೧, ಪಂಚಬಾಣವಿರಚಿತ ಭುಜಬಲಿ ಚರಿತೆ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಭಾನುಮತಿ ವೈ.ಸಿ., ೨೦೧೧, ಅರಸರ ಚರಿತ್ರೆಗಳು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು.

ಭಾನುಮತಿ ವೈ.ಸಿ., ೨೦೧೧, ಮಡಿವಾಳೇಶ್ವರ ಕಾವ್ಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಭಾನುಮತಿ ವೈ.ಸಿ., ೨೦೧೩, ಬಸವೇಶ್ವರನ ಮಹತ್ವದ ಸಾಂಗತ್ಯ, ಶ್ರೀರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮೈಸೂರು.

ಭಾನುಮತಿ ವೈ.ಸಿ., ೨೦೦೬, ಬಸವಕವಿ ವಿರಚಿತ ಸಿದ್ದಲಿಂಗ ಕಾವ್ಯ ಮತ್ತು ಸದಾಶಿವ ಕವಿ ವಿರಚಿತ ಮಹಾಕೂಟ ಮಹಾತ್ಮ್ಯೆ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಭಾನುಮತಿ ವೈ.ಸಿ., ೧೯೯೨, ವಚನ ಸಂಕಲನ ಸಂಪುಟ-೫, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ.

ಭಾನುಮತಿ ವೈ.ಸಿ., ೧೯೯೫, ಸ್ವರವಚನ ಸಂಪುಟ-೪, ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು.

ಭಾನುಮತಿ ವೈ.ಸಿ., ೧೯೯೮, ಸ್ವರವಚನ ಸಂಪುಟ ೧೦, ಜಗದ್ಗುರು ಶಿವರಾತ್ರಿಶ್ವರ ಗ್ರಂಥಮಾಲೆ, ಮೈಸೂರು.

ಭಾನುಮತಿ ವೈ.ಸಿ., ೧೯೯೮, ಕವಿಲಿಂಗನ ಪದಗಳು, ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು.

ಭಾನುಮತಿ ವೈ.ಸಿ., ೧೯೮೯, ಇಬ್ಬೀಡಿನ ಜನಪದ ಕತೆಗಳು, ಕೇಶವ ಪ್ರಕಾಶನ, ಮೈಸೂರು.

ಭಾನುಮತಿ ವೈ.ಸಿ., ೧೯೯೪, ಮಲೆನಾಡು ಶೈವ ಒಕ್ಕಲಿಗರು ಜಾನಪದೀಯ ಅಧ್ಯಯನ, ಕೇಶವ ಪ್ರಕಾಶನ, ಮೈಸೂರು.

ಭಾನುಮತಿ ವೈ.ಸಿ., ೧೯೯೯, ಜಾನಪದ ಭಿತ್ತಿ, ಸಂವಹನ ಪ್ರಕಾಶನ, ಶಿವರಾಂಪೇಟೆ, ಮೈಸೂರು.

ಭಾನುಮತಿ ವೈ.ಸಿ., ೨೦೦೧, ಪುಟ್ಟ ಮಲ್ಲಿಗೆ ಹಿಡಿತುಂಬ ತಾರಾ, ಪ್ರಿಂಟಿಂಗ್ ಪ್ರೆಸ್, ಮೈಸೂರು.

ಭಾನುಮತಿ ವೈ.ಸಿ., ೨೦೦೪, ಜನಪದ ದೇವರ ಹಾಡುಗಳು, ಚೇತನ ಬುಕ್ ಹೌಸ್, ಮೈಸೂರು.

ಭಾನುಮತಿ ವೈ.ಸಿ., ೨೦೦೯, ಮಕ್ಕಳ ಹಾಡುಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಭಾನುಮತಿ ವೈ.ಸಿ., ೨೦೦೩, ಜಾನಪದ ಆಂತರ್ಯ, ತಳಗವಾದಿ ಪ್ರಕಾಶನ, ಮೈಸೂರು.

ಭಾನುಮತಿ ವೈ.ಸಿ., ೨೦೦೮, ಜಾನಪದ ಚಹರೆ, ರೂಪ ಪ್ರಕಾಶನ, ಮೈಸೂರು.

ಭಾನುಮತಿ ವೈ.ಸಿ., ೨೦೦೭, ಜನಪದ ಅಡುಗೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಭಾನುಮತಿ ವೈ.ಸಿ., ೨೦೦೯, ಅಣ್ಣಯ್ಯಗೌಡರ ಚಂದ್ರಹಾಸನ ಕಥೆ(ನಾಟಕ), ಪ್ರಸಾದ್ ಏಜೆನ್ಸೀಸ್, ಮೈಸೂರು.

ಭಾನುಮತಿ ವೈ.ಸಿ, ೨೦೦೧, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಜಾನಪದೀಯ ನೆಲೆಗಳು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ನಾಗರತ್ನ ಟಿ.ಎನ್., ೧೯೭೭, ಶ್ರೀ ಗೋಪಾಲದಾಸರ ಕೃತಿಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ನಾಗರತ್ನ ಟಿ.ಎನ್., ೧೯೮೪, ಹರಪನಹಳ್ಳಿ ಭೀಮವ್ವನ ಹಾಡುಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ನಾಗರತ್ನ ಟಿ.ಎನ್., ೧೯೮೭, ಶ್ರೀ ಜಗನ್ನಾಥ ದಾಸರ ಕೃತಿಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ನಾಗರತ್ನ ಟಿ.ಎನ್., ೧೯೮೭, ಶ್ರೀ ವಾದಿರಾಜರ ದೀರ್ಘ ಕೃತಿಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ನಾಗರತ್ನ ಟಿ.ಎನ್., ೨೦೦೧, ಶ್ರೀ ವ್ಯಾಸರಾಯರ ಕೃತಿಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ನಾಗರತ್ನ ಟಿ.ಎನ್., ೨೦೧೪, ಶ್ರೀ ಕನಕದಾಸರ ಕೀರ್ತನೆಗಳು ಕುವೆಂಪು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ನಾಗರತ್ನ ಟಿ.ಎನ್., ೧೯೮೭, ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಇಂದುಬಾಯಿ ಟಿ.ಕೆ., ೧೯೮೭, ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಇಂದುಬಾಯಿ ಟಿ.ಕೆ., ೧೯೮೭, ಶ್ರೀ ಪ್ರಸನ್ನ ವೆಂಕಟದಾಸರ ಭಾಗವತ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಇಂದುಬಾಯಿ ಟಿ.ಕೆ., ೧೯೮೭, ಹರಿಹರನ ಐದು ರಗಳೆಗಳು, ಯು.ಎಸ್. ಪ್ರಿಂಟರ್ಸ್ ಚಾಮುಂಡಿಪುರಂ ಮೈಸೂರು.

ಲೀಲಾವತಿ ಎಂ.ಎನ್., ೧೯೭೩, ಹರಿಹರನ ಐದು ರಗಳೆಗಳು, ಯು.ಎಸ್. ಪ್ರಿಂಟರ್ಸ್ ಚಾಮುಂಡಿಪುರಂ, ಮೈಸೂರು.

ನಗುವನಹಳ್ಳಿ ಪಿ. ರತ್ನ, ೧೯೮೯, ತಿಲಕಪುರ ಸೋಮ ವಿರಚಿತ ಚತುರಾಚಾರ್ಯ ಪ್ರಬಂಧ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ನಗುವನಹಳ್ಳಿ ಪಿ. ರತ್ನ, ೧೯೯೮, ವೀರಜನಪತಿ ವಿರಚಿತ ವಿಕ್ರಮವಿಲಾಸ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ನಗುವನಹಳ್ಳಿ ಪಿ. ರತ್ನ, ೧೯೯೬, ಮೋದಿರುದ್ರ ವಿರಚಿತ ವಿರಕ್ತರಕಾವ್ಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಕಮಲಾ ಹಂಪನಾ, ಶೇಷಗಿರಿ ಕೆ.ಆರ್., ೧೯೮೩, ಚಾವುಂಡರಾಯ ಪುರಾಣಂ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ವಿಜಯ ಡಿ., ವಿಜಯಲಕ್ಷ್ಮಿ ಆರ್.ಎನ್., ೧೯೭೬, ಸಾನಂದ ಗಣೇಶ ಸಾಂಗತ್ಯ, ಮೈಸೂರು.

ಕಲಬುರ್ಗಿ ಎಂ.ಎಂ., ಚನ್ನಕ್ಕ ಪಾವಟೆ, ಅನ್ನಪೂರ್ಣಹತ್ತಿಮತ್ತೂರು, ೨೦೧೫, ಲಿಂಗಾಯತ ಅಧ್ಯಯನ ಸಂಸ್ಥೆ, ಗದಗ.

ರತ್ನಮ್ಮ ಕೆ.ಎಸ್., ಗಾಯಿತ್ರಿ ಸ.ನ. ೧೯೯೧, ಮದ್ದಗಿರಿ ನಂಜಪ್ಪ ವಿರಚಿತ ವರನಂದಿ ಕಲ್ಯಾಣ, ಸಂವಹನ ಪ್ರಕಾಶನ, ಮೈಸೂರು.

ಶಾಂತ ಟಿ.ಆರ್., ೧೯೭೯, ಮುಮ್ಮಡಿ ಕೃಷ್ಣರಾಜ ವಿರಚಿತ ಎಡತೊರೆ ಅರ್ಕ ಪುಷ್ಕರಿಣೀ ಮಹಾತ್ಮ್ಯೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕಮಲಮ್ಮ ಸಿ.ಆರ್., ೧೯೬೫, ಸುಕುಮಾರ ಚರಿತ್ರೆಯ ಸಂಗ್ರಹ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಅಕ್ಕಮಹಾದೇವಿ, ೨೦೦೩, (ಸಮಗ್ರದಾಸ ಸಾಹಿತ್ಯ ಸಂಪುಟ-೧೨) ಶ್ರೀ ಗೋಪಾಲದಾಸರ ಕೀರ್ತನೆಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ನಾಗರತ್ನ ಟಿ.ಎನ್. ಅಕ್ಕಮಹಾದೇವಿ, ೨೦೦೩, (ಸಮಗ್ರದಾಸ ಸಾಹಿತ್ಯ ಸಂಪುಟ ೧೯) ಹರಪನಹಳ್ಳಿ ಭೀಮವ್ವನ ಕೀರ್ತನೆಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಮಂದಾಕಿನಿ, ೨೦೦೩,(ಸಮಗ್ರದಾಸ ಸಾಹಿತ್ಯ ಸಂಪುಟ.೧೭) ಶ್ರೀ ಶ್ರೀ ಪ್ರಾಣೇಶದಾಸರ ಹಾಡುಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ನಾಗರತ್ನ ಟಿ.ಎನ್., ೨೦೦೩ (ಸಮಗ್ರದಾಸ ಸಾಹಿತ್ಯ ಸಂಪುಟ-೨) ಶ್ರೀ ವಾದಿರಾಜರ ಕೀರ್ತನೆಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಪಾರ್ವತಮ್ಮ ಚಂದ್ರಣ್ಣ, ೧೯೮೨, ಶಿವಶರಣೆಯರ ನಾಲ್ಕು ರಗಳೆಗಳು, ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಮಠ, ಹೊಸಪೇಟೆ.

ನಿರ್ಮಲಾ ಪಟ್ಟಣಶೆಟ್ಟಿ, ೧೯೮೬, ಸಕಲೇಶ ಮಾದರಸನ ವಚನಗಳು, ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳಿ, ಮೂರು ಸಾವಿರ ಮಠ, ಹುಬ್ಬಳ್ಳಿ.

ಚೆನ್ನಕ್ಕ ಎಲಿಗಾರ, ೧೯೮೭, ಮಡಿವಾಳ ಮಾಚಿದೇವರ ವಚನಗಳು, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ ಗದಗ.

ಇಂದುಬಾಯಿ ಟಿ.ಕೆ., ೨೦೦೩(ಸಮಗ್ರದಾಸ ಸಾಹಿತ್ಯ ಸಂ.೮), ಶ್ರೀ ಪ್ರಸನ್ನ ವೆಂಕಟದಾಸರ ಕೀರ್ತನೆಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಲೀಲಾವತಿ ಎಸ್.ಆರ್, ೨೦೦೩(ಸಮಗ್ರದಾಸ ಸಾಹಿತ್ಯ ಸಂಪುಟ ೧೮, ಭಾಗ-೨), ನಿಡಗುರುಕಿ ಜೀವೂಬಾಯಿಯವರ ಕೀರ್ತನೆಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಶೈಲಜಾ ಉಡಚಣ(ಸಂ) ೧೯೯೬(ಮುತ್ತಿಹಾರ), ವಚನಕಾರ್ತಿಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಸುಮಿತ್ರಬಾಯಿ ಬಿ.ಎನ್.(ಸಂ), ೧೯೯೮, ವೈಷ್ಣವ ಕವಯಿತ್ರಿಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಸರೋಜಿನಿ ಚವಲಾರ(ಸಂ), ೧೯೮೬, ನೀಲಾಂಬಿಕೆಯ ವಚನಗಳು, ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳಿ ಮೂರು ಸಾವಿರ ಮಠ, ಹುಬ್ಬಳ್ಳಿ.

ಸರೋಜ ಬಿ.ಎಸ್.(ಸಂ), ೧೯೮೮, ಸಂಪ್ರದಾಯದ ಗೀತೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಮಲ್ಲಿಕಾ ಘಂಟಿ, ೨೦೦೮, ಇಟಗಿ ಭೀಮಮ್ಮ, ಶ್ರೀಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ.

ವಿಮರ್ಶಾ ಕೃತಿಗಳು

ವಸಂತಲಕ್ಷ್ಮಿ, ೨೦೦೯, ಭಾರತೀಯ ಸಂಸ್ಕೃತಿ ಮತ್ತು ಮಹಿಳೆ, ದಿ ಮಿಥಿಕ್ ಸೊಸೈಟಿ, ಬೆಂಗಳೂರು.

ವಾಸವಿ ಎ.ಆರ್., ೨೦೧೧, ಒಳಗನ್ನಡಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿಜಯಶ್ರೀ ಸಬರದ, ೨೦೦೫, ವಿಮರ್ಶಾ ಲೇಖನಗಳು, ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

ಸಬೀಹಾ ಭೂಮಿಗೌಡ, ೨೦೧೨, ದಶಕದ ಮಹಿಳಾ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳು, ಚಿಂತನ ಪುಸ್ತಕ ಪ್ರಕಾಶನ, ಬೆಂಗಳೂರು.

ಸಬೀಹಾ ಭೂಮಿಗೌಡ, ಮಲ್ಲಿಕಾ ಘಂಟಿ, ೨೦೦೬, ಮಹಿಳಾ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಮಲ್ಲಿಕಾ ಘಂಟಿ, ೨೦೦೮, ನಮ್ಮ ಕಣ್ಣಲ್ಲಿ ನೀವು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಸಬೀಹಾ ಭೂಮಿಗೌಡ, ೨೦೦೭, ಮಹಿಳಾ ಆತ್ಮಕಥೆಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಸಬೀಹಾ ಭೂಮಿಗೌಡ, ೨೦೦೮(ಸಂಸ್ಕೃತಿ ಮಹಿಳಾ ಮಾಲಿಕೆ ಸಂಪುಟ–೧), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಮಲ್ಲಿಕಾ ಘಂಟಿ, ೨೦೦೮, ಸಂಸ್ಕೃತಿ ಮಹಿಳಾ ಮಾಲಿಕೆ ಸಂಪುಟ–೫, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ತೇಜಸ್ವಿ ನಿರಂಜನ, ಸೀಮಂತಿನಿ, ನಿರಂಜನ, ೧೯೯೪, ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಕನ್ನಡ ಸಂಘ ಕ್ರೈಸ್ಟ್ ಕಾಲೇಜ್, ಬೆಂಗಳೂರು.

ಪ್ರೀತಿ ಶುಭಚಂದ್ರ, ಸುಮನಾ ಎಂ.ಎನ್., ೨೦೦೫, ಸಾಕಾರ ದತ್ತ ಸಮಾನತೆಯ ಕನಸು, ಲಡಾಯಿ ಪ್ರಕಾಶನ, ಗದಗ.

೨. ಸಹಾಯಕ ಸಾಹಿತ್ಯ

ಅಂಗಡಿ ಎಸ್.ಎಸ್. ೨೦೧೨, ಕನಾಟಕ ಗ್ರಂಥಸಂಪಾದನೆ, ತನುಮನು ಪ್ರಕಾಶನ

ಆರ್ಯಾಂಬ ಪಟ್ಟಾಭಿ, ೨೦೦೪, ಮಹಿಳಾ ಸಾಹಿತ್ಯ ಸಮೀಕ್ಷೆ, ಸಂವಹನ ಪ್ರಕಾಶನ, ಮೈಸೂರು.

ಆಶಾದೇವಿ ಎಂ.ಎಸ್., ೨೦೦೬, ಸ್ತ್ರೀಮತವನುತ್ತರಿಸಲಾಗದೆ? ಅಕ್ಷರ ಪ್ರಕಾಶನ, ಹೆಗ್ಗೋಡು ಸಾಗರ.

ಆಶಾದೇವಿ ಎಂ.ಎಸ್., ೨೦೧೧, ನಡುವೆ ಸುಳಿವ ಆತ್ಮ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ.

ಆಶಾದೇವಿ ಎಂ.ಎಸ್., ೨೦೧೬, ನಾರಿಕೇಳಾ, ಪ್ರಜಾವಣಿ ಪ್ರಕಾಶನ, ಬೆಂಗಳೂರು.

ಇಂದಿರಾ ಆರ್, ೨೦೦೨, ಮಹಿಳೆ ಮತ್ತು ಸಂಸ್ಕೃತಿ, ಪ್ರಸಾರಾಂಗ ಕನ್ನಡ ವಿ.ವಿ, ಹಂಪಿ, ವಿದ್ಯಾರಣ್ಯ.

ಉಷಾ ಎಂ., ೨೦೦೪, ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು, ಪ್ರಸಾರಾಂಗ ಕ.ವಿ.ವಿ, ಹಂಪಿ, ವಿದ್ಯಾರಣ್ಯ.

ಕತ್ರೆ ಎಂ.ಎಸ್., (ಅನುವಾದ) ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ೧೯೬೮, ಹರ್ಷವರ್ಧನ ಪ್ರಕಾಶನ, ಬೆಂಗಳೂರು.

ಕಲಬುರ್ಗಿ ಎಂ.ಎಂ. ೨೦೧೨, ಕನ್ನಡ ಹಸ್ತಪ್ರತಿಶಾಸ್ತ್ರ, ಸಪ್ನ ಬುಕ್‌ಹೌಸ್, ಬೆಂಗಳೂರು.

ಕಲಬುರ್ಗಿ ಎಂ.ಎಂ., ೧೯೭೨, ಕನ್ನಡ ಗ್ರಂಥಸಂಪಾದನಶಾಸ್ತ್ರ, ಸಪ್ನ ಬುಕ್‌ಹೌಸ್, ೩ನೇ ಮುಖ್ಯರಸ್ತೆ, ಬೆಂಗಳೂರು.

ಕಮಲಾ ಹಂಪನಾ, ೨೦೦೩, ಬೊಗಸೆ(ಮಹಿಳೆ ಸುತ್ತಮುತ್ತ), ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

ಕ್ರಿಷ್ಣಪ್ಪ, ೨೦೧೨, ಹಸ್ತಪ್ರತಿ ಲಿಪಿಕಾರರು, ಪ್ರಸಾರಾಂಗ, ಕನ್ನಡ ವಿ.ವಿ, ಹಂಪಿ.

ಗಾಯಿತ್ರಿ ನಾವಡ, ೨೦೦೩, ಮಹಿಳಾ ಸಂಕಥನ, ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ ಚಾಮರಾಜಪೇಟೆ, ಬೆಂಗಳೂರು.

ಗಾಯಿತ್ರಿ ನಾವಡ, ೧೯೯೭, ವಿರಚನೆ, ಎನ್.ಆರ್.ಎ.ಎಂ.ಎಚ್. ಪ್ರಕಾಶನ, ದಕ್ಷಿಣ ಕನ್ನಡ.

ಗೀತಾಚಾರ್ಯ ನಾ., ೨೦೦೬, ಕನ್ನಡದಲ್ಲಿ ಗ್ರಂಥಸಂಪಾದನೆಯ ಇತಿಹಾಸಃ ಒಂದು ಪರಿಶೀಲನೆ, ಪಾದೆಕಲ್ಲು ನರಸಿಂಹ ಭಟ್ಟ(ಸಂ) ಸುಕೃತಿ, ಕೇಶವಭಟ್ಟ ಸಂಸ್ಮರಣ ಸಮಿತಿ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

ಗುರುಲಿಂಗಯ್ಯ ೨೦೧೦, ಸಾಮಾಜಿಕ ಹೊರತಳ್ಳುವಿಕೆಯ ಪರಿಕಲ್ಪನೆ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ

ಚೆನ್ನಕ್ಕ ಎಲಿಗಾರ, ೧೯೯೦, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀಸಮಾಜ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಚೆನ್ನಕ್ಕ ಎಲಿಗಾರ, ೧೯೮೭, ಪ್ರಾಚೀನ ಕರ್ನಾಟಕದ ರಾಣಿಯರು, ಚೆನ್ನಗಂಗಾ ಪ್ರಕಾಶನ, ಧಾರವಾಡ.

ತಿಪ್ಪೇರುದ್ರಸ್ವಾಮಿ ಎಚ್., ೧೯೯೮, ಶರಣರ ಅನುಭಾವ ಸಾಹಿತ್ಯ, ಡಿ.ವಿ.ಕೆ.ಮೂರ್ತಿ, ಪ್ರಕಾಶಕರು, ಮೈಸೂರು–೪.

ತೀ.ನಂ. ಶ್ರೀಕಂಠಯ್ಯ, ೨೦೧೩, ಭಾರತೀಯ ಕಾವ್ಯಮೀಮಾಂಸೆ, ಪ್ರಸಾರಾಂಗ, ಮೈಸೂರು.

ತೇಜಸ್ವಿನಿ ನಿರಂಜನ, ಸೀಮಂತಿನ ನಿರಂಜನ(ಸಂ), ೧೯೯೪, ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಪರಂಪರೆ ಮತ್ತು ಮಹಿಳೆ, ಕನ್ನಡ ಸಂಘ ಕ್ರೈಸ್ಟ್ ಕಾಲೇಜ್, ಬೆಂಗಳೂರು.

ದೇವೀರಪ್ಪ ಎಚ್., ೧೯೭೭, ಕನ್ನಡ ಹಸ್ತಪ್ರತಿಗಳ ಇತಿಹಾಸ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ನರಸಿಂಹಾಚಾರ್ಯ ಡಿ.ಎಲ್., ೧೯೪೪, ಕನ್ನಡ ಗ್ರಂಥಸಂಪಾದನೆ, ಶಾರದಾ ಮಂದಿರ ರಾಮಯ್ಯರ್ ರಸ್ತೆ, ಮೈಸೂರು–೪.

ನಾಗಭೂಷಣ ಸಿ., ೧೯೯೯, ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ, ಅಮೃತವರ್ಷಿಣಿ ಪ್ರಕಾಶನ ನಂದಿಹಳ್ಳಿ, ಸಂಡೂರು.

ನಾರಾಯಣ ಪಿ.ವಿ, ೨೦೦೭, ಅಧಿಕಾರ ಮೀಮಾಂಸೆ, ವಸಂತ ಪ್ರಕಾಶನ, ಬೆಂಗಳೂರು.

ನಿರುಪಮಾ, ೧೯೯೬, ಧರ್ಮಶಾಸ್ತ್ರಗಳು ಸ್ತ್ರೀ ಹಾಗೂ ಶೋಷಣೆ, ಸ್ವತಂತ್ರ ಮುದ್ರಣಾಲಯ, ಬೆಂಗಳೂರು.

ನೂರ್‌ಜಹಾನ್ ಎನ್., ಗನಿಹಾರ್, ಪ್ರೀತಿ ಪಿ. ಭಂಡಾರಕರ, ೨೦೦೮, ಪ್ರಾಚೀನ ಭಾರತದಲ್ಲಿ ಸ್ತ್ರೀ ಶಿಕ್ಷಣದ ಬೆಳವಣಿಗೆ ಮತ್ತು ವಿಕಾಸ, ವಿದ್ಯಾನಿಧಿ ಪ್ರಕಾಶನ, ಗದಗ.

ಪ್ರೀತಿ ಶುಭಚಂದ್ರ, ೨೦೦೨, ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು, ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ.

ಬರಗೂರು ರಾಮಚಂದ್ರಪ್ಪ, ೨೦೦೬, ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು.

ಭಾನುಮತಿ ವೈ.ಸಿ., ೨೦೧೩, ಗ್ರಂಥಸಂಪಾದನ ಸಂಕಥನ, ಸಿವಿಜಿ ಇಂಡಿಯಾ ಪ್ರಕಾಶನ, ಬೆಂಗಳೂರು.

ಭಾನುಮತಿ ವೈ.ಸಿ., ೨೦೦೩, ಗ್ರಂಥಸಂಪಾದನೆ ವಿವಕ್ಷೆ, ರಾಜ್ ಪ್ರಕಾಶನ, ಮೈಸೂರು.

ಭಾನುಮತಿ ವೈ.ಸಿ., ೨೦೧೩, ಗ್ರಂಥಸಂಪಾದನೆ ವ್ಯಾಸಂಗ, ಸಂವಹನ ಪ್ರಕಾಶನ, ಮೈಸೂರು.

ಭಾನುಮತಿ ವೈ.ಸಿ., ೨೦೧೦, ಗ್ರಂಥಸಂಪಾದನೆ ಕೆಲವು ಅಧ್ಯಯನ, ಕೇಶವ ಪ್ರಕಾಶನ, ಮೈಸೂರು.

ಭಾನುಮತಿ ವೈ.ಸಿ., ೨೦೦೯, ಗ್ರಂಥಸಂಪಾದನೆ ಎಳೆಗಳು, ವಿಸ್ಮಯ ಪ್ರಕಾಶನ, ಕುವೆಂಪುನಗರ, ಮೈಸೂರು–೨೩.

ಮಣಿಪಾಲ ಅರ್ಕೆ, ೨೦೦೬, ವಿಮರ್ಶೆಯ ಸವಾಲು, ಸಂವಾದ ಪ್ರಕಾಶನ, ಮಣಿಪಾಲ.

ಮಲ್ಲಿಕಾ ಘಂಟಿ, ೨೦೦೦, ತನುಕರಗದವರಲ್ಲಿ, ಗೌತಮ ಪ್ರಕಾಶನ, ಬಳ್ಳಾರಿ.

ಮುರುಳೀಧರ ೨೦೧೦, ಈ ಪರಿಯ ಸೊಬಗು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮೀನಾಕ್ಷಿ ಬಾಳಿ, ೨೦೧೦, ಮನದ ಸೂತಕ ಹಿಂಗಿದೊಡೆ, ಚಿಂತನ ಪುಸ್ತಕ ಪ್ರಕಾಶ ಬೆಂಗಳೂರು.

ರವೀಂದ್ರನಾಥ ಕೆ., ೨೦೧೪ ಹಸ್ತಪ್ರತಿಗಳ ಕನ್ನಡಿಗರ ಬದುಕು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ರಾಮಲಿಂಗಪ್ಪ ಟಿ., ಬೇಗೂರು, ೨೦೧೪, ಮಹಿಳೆ ಚರಿತ್ರೆ-ಪುರಾಣ, ಅಂಕಿತ ಪುಸ್ತಕ, ಬೆಂಗಳೂರು.

ರೂಪ ಹಾಸನ, ೨೦೧೦, ಮಹಿಳೆ ಮತ್ತು ಆಧುನಿಕತೆಯ ಸವಾಲುಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿಜಯಾದಬ್ಬೆ, ೧೯೯೭, ನಾರಿ: ದಾರಿ–ದಿಗಂತ, ರಚನಾ ಪ್ರಕಾಶನ, ಮೈಸೂರು.

ವಿವಿಧ ಲೇಖಕರು, ೨೦೦೬, ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ವಿವಿಧ ಲೇಖಕರು, ೨೦೦೬, ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ವೀರೇಶ ಶೇ.ಬಡಿಗೇರ, ೧೯೯೯, ಉತ್ತರ ಕರ್ನಾಟಕದ ಜಾನಪದ ಗೀತ ಮೇಳಗಳು, ಒಂದು ಸಾಂಸ್ಕೃತಿಕ ಅಧ್ಯಯನ, ವಿಮೋಚನಾ ದೇವದಾಸಿ ಪುನರ್ವಸತಿ ಸಂಘ ಅಥಣಿ, ಬೆಳಗಾವಿ.

ವೀರೇಶ ಬಡಿಗೇರ, ೨೦೧೪, ಹಸ್ತಪ್ರತಿ ವ್ಯಾಸಂಗ–೧೩, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವೀರೇಶ ಬಡಿಗೇರ, ೨೦೧೪, ಹಸ್ತಪ್ರತಿ ಸಂಕಥನ, ಮಯ ಪ್ರಕಾಶನ, ಕಮಲಾಪುರ.

ವೀರೇಶ ಬಡಿಗೇರ, ಹಲಗೆ ಬಳಪ, ೨೦೦೫, ಮಯ ಪ್ರಕಾಶನ, ಕಮಲಾಪುರ.

ವೀರೇಶ ಬಡಿಗೇರ, ೨೦೦೬, ಹಸ್ತಪ್ರತಿ ವ್ಯಾಸಂಗ–೫, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವೀರೇಶ ಬಡಿಗೇರ, ೨೦೦೬, ಕನ್ನಡ ಹಸ್ತಪ್ರತಿಗಳ ಬಹುಪಠ್ಯೀಯ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವೀರೇಶ ವಿ.ಎಸ್. ಬಡಿಗೇರ, ೨೦೦೦, ಕನ್ನಡ ಹಸ್ತಪ್ರತಿಗಳು ಮತ್ತು ಸಾಫ್ಟ್‌ವೇರ್ ತಂತ್ರಜ್ಞಾನ, ಕನ್ನಡ ವಿ.ವಿ., ಹಂಪಿ.

ವೀರೇಶ ಬಡಿಗೇರ, ಚನ್ನವೀರಪ್ಪ ಎಸ್.ಆರ್., ೨೦೦೩, ಹಸ್ತಪ್ರತಿ ಅಧ್ಯಯನದ ಹೊಸ ಸಾಧ್ಯತೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವೀರಣ್ಣ ದಂಡೆ, ೨೦೧೪, ಕನ್ನಡ ಕಾವ್ಯಮೀಮಾಂಸೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ವೀಣಾ ಶಾಂತೇಶ್ವರ, ೨೦೦೯, ಇಲ್ಲಿಂದ ಮುಂದೆಲ್ಲಿಗೆ?, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವೀರಣ್ಣ ರಾಜೂರ, ೧೯೯೩, ಶಿವಶರಣೆಯರ ವಚನ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ವೆಂಕಟಲಕ್ಷ್ಮಿ, ೧೯೯೧, ಕನ್ನಡ ಲೇಖಕಿಯರ ನೆಲೆ-ಬೆಲೆ, ಎನ್.ಟಿ.ಶ್ಯಾಂ ಪ್ರಕಾಶನ, ಬೆಂಗಳೂರು.

ಶಾಂತಾ ಇಮ್ರಾಪುರ, ೨೦೦೧, ಧರ್ಮ-ಮಹಿಳೆ ಮತ್ತು ಸಮಾಜ, ಚೇತನಾ ಪ್ರಕಾಶನ, ಧಾರವಾಡ.

ಶ್ರೀನಿವಾಸಮೂರ್ತಿ, ಎಂ.ಆರ್., ೧೯೪೪, ವಚನಧರ್ಮಸಾರ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಶ್ರೀಮತಿ ಎಚ್.ಎಸ್., ೨೦೧೦, ಹೆಣ್ಣು ಬರೆಹದ ಒಳಬಂಡಾಯ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.

ಶ್ರೀಮತಿ ಎಚ್.ಎಸ್., ೨೦೦೩, ಸೇರಿಕೊಂಡ ಎಳೆಗಳು, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

ಶ್ರೀಮತಿ ಎಚ್.ಎಸ್., ೨೦೦೬, ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶ್ರೀಮತಿ ಎಚ್.ಎಸ್., ೨೦೦೪, ಹೆಣ್ಣು-ಹೆಂಗಸು, ಬ್ಯಾಲದಕೆರೆ ಪ್ರಕಾಶನ, ಮಂಡ್ಯ ಜಿಲ್ಲೆ.

ಶ್ರೀಮತಿ ಎಚ್.ಎಸ್.(ಸಂ), ೨೦೦೭, ಹೆಣ್ಣು ಮತ್ತು ಭಾಷೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶ್ರೀಮತಿ ಎಚ್.ಎಸ್., ೨೦೦೭, ಮಹಿಳೆ ದುಡಿಮೆ ಮತ್ತು ಬಿಡುವು, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶೈಲಜಾ ಉಡುಚಣ, ೧೯೯೧, ವಚನಕಾರರ ದೃಷ್ಟಿಯಲ್ಲಿ ಸ್ತ್ರೀ, ಗ್ರನೋಬಲ್ಸ ಪ್ರಕಾಶನ ಕಲಬುರ್ಗಿ.

ಶೈಲಜಾ ಹಿರೇಮಠ, ೨೦೦೭, ಮಹಿಳಾ ಅಧ್ಯಯನ ಸಂಪುಟ-೯, ಸಂಚಿಕೆ-೨(ಜುಲೈ-ಡಿಸೆಂಬರ್) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶೈಲಜಾ ಹಿರೇಮಠ, ೨೦೦೯, ಮಹಿಳಾ ಅಧ್ಯಯನ ಸಂಪುಟ-೯, ಸಂಚಿಕೆ-೨(ಜುಲೈ-ಡಿಸೆಂಬರ್) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶೈಲಜಾ ಹಿರೇಮಠ, ೨೦೦೩, ಸ್ತ್ರೀ ಕಥನ, ಭುವನ ಪ್ರಕಾಶನ, ಹೊಸಪೇಟೆ.

ಸತೀಶ ಎಂ.ಈ., ೨೦೧೨, ಸ್ತ್ರೀವಾದ ಮತ್ತು ಭಾರತೀಯತೆ ಕಾಲ ಪ್ರಕಾಶನ, ಬೆಂಗಳೂರು.

ಸಣ್ಣಯ್ಯ ಬಿ.ಎಸ್., ೨೦೦೩, ಪ್ರಾಚೀನ ಕನ್ನಡ ಗ್ರಂಥಸಂಪಾದನೆ, ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಸಣ್ಣಯ್ಯ ಬಿ.ಎಸ್., ೧೯೯೨, ಹಸ್ತಪ್ರತಿಶಾಸ್ತ್ರ ಪರಿಚಯ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

ಸರೋಜಿನಿ ಮಹಿಷಿ, ೧೯೬೫, ಕರ್ನಾಟಕದ ಕವಯಿತ್ರಿಯರು, ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ, ಧಾರವಾಡ.

ಸಾರಾ ಅಬೂಬಕ್ಕರ್, ೨೦೦೭, ಸಾಹಿತ್ಯ ಸಂಸ್ಕೃತಿ ಮತ್ತು ಮಹಿಳೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಿದ್ದಪ್ಪ ಎನ್. ೨೦೦೫, ಕನ್ನಡ ಗ್ರಂಥಸಂಪಾದನೆ, ಡಾ.ಆರ್.ಸಿ.ಹಿರೇಮಠ, ಹಂಸ ಪ್ರಕಾಶನ, ಚಿತ್ರದುರ್ಗ.

ಸಿಮೋನ್ ದ ಬೊವಾ, ದಿ ಸೆಕೆಂಡ್ ಸೆಕ್ಸ್, ಕನ್ನಡಕ್ಕೆ ಶ್ರೀಮತಿ ಎಚ್.ಎಸ್., ೨೦೦೭, ಪ್ರಕಾಶನ ಕೆ.ಬಿ. ಪ್ರಗತಿ, ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು.

ಸೀತಾರಾಮ ಜಾಗೀರದಾರ್, ೨೦೧೨, ಗ್ರಂಥಸಂಪಾದನಾಶಾಸ್ತ್ರ ಪರಿಚಯ, ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ, ಗುಲಬರ್ಗಾ-೧.

ಸೀತಾರಾಮಯ್ಯ ಎಂ.ವಿ. ಚಿದಾನಂದಮೂರ್ತಿ ಎಂ., ೧೯೮೩, ಹಸ್ತಪ್ರತಿಶಾಸ್ತ್ರ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು

ಸೀತಾರಾಮಯ್ಯ ಎಂ.ವಿ, ಶೇಷಶಾಸ್ತ್ರಿ, ೧೯೯೯, ಮಣಿಹ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

ಸುಮಿತ್ರಬಾಯಿ, ೨೦೦೬, ಸ್ತ್ರೀವಾದ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಹಾಲತಿ ಸೋಮಶೇಖರ್, ೨೦೦೭, ಮಹಿಳಾ ಚಳವಳಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ, ವಿಸ್ಮಯ ಪ್ರಕಾಶನ, ಮೈಸೂರು.

ಹಳ್ಳಿಕೇರಿ ಎಫ್.ಟಿ., ರವೀಂದ್ರನಾಥ ಕೆ., ೨೦೦೨, ಸಿರಿಸಂಪದ, ಡಾ.ಬಿ.ವಿ.ಶಿರೂರ ಅಭಿನಂದನ ಸಮಿತಿ, ಯಲಬುರ್ಗಾ.

ಹಳ್ಳಿಕೇರಿ ಎಫ್.ಟಿ., ೨೦೦೩, ಕಂಠಪತ್ರ, ವಿಕಾಸ ಪ್ರಕಾಶನ, ಹೊಸಪೇಟೆ.

ಹಿರೇಮಠ ಬಿ.ಆರ್,೧೯೯೩, ಕನ್ನಡ ಹಸ್ತಪ್ರತಿ ಲಿಪಿಕಾರರು ಪ್ರಶಸ್ತಿಗಳು, ಅರುಣೋದಯ ಪ್ರಕಾಶನ, ಧಾರವಾಡ.

ಹಿರೇಮಠ ಬಿ.ಕೆ, ೧೯೯೨, ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ, ವೀರಶೈವ ಅಧ್ಯಯನ ವೇದಿಕೆ, ಕಸಬಾ ಜಂಬಗಿ.

ಹೇಮಲತಾ ಎಚ್.ಎಂ. ೨೦೧೦, ಮಹಿಳಾ ಅಧ್ಯಯನ, ಸಿಮನ್‌ದ ಬೊವಾ, ದಿ ಸೆಕೆಂಡ್ ಸೆಕ್ಸ್: ಒಂದು ಸಂಕ್ಷಿಪ್ತ ಪರಿಚಯ ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.

೩. ಲೇಖನಗಳು

ಆಶಾದೇವಿ ಎಂ.ಎಸ್. ಭಾನುವಾರ ೧೨ ಅಕ್ಟೋಬರ್ ೨೦೧೪, ಕವಡೆ ಮತ್ತು ಕೌಶಲ, ಪ್ರಜಾವಾಣಿ, ಸಾಪ್ತಾಹಿಕ ಪುರವಣಿ.

ಆಶಾದೇವಿ ಎಂ.ಎಸ್., ೨೦೦೭, ಸ್ತ್ರೀವಾದಿ ಸಾಹಿತ್ಯ ಮೀಮಾಂಸೆ, ಸಬಿಹಾ ಭೂಮಿಗೌಡ(ಸಂ) ಕನ್ನಡ ಸಾಹಿತ್ಯ ಮೀಮಾಂಸೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.

ಚಿದಾನಂದಮೂರ್ತಿ, ೨೦೧೦, ಗ್ರಂಥಸಂಪಾದನೆ, ಹೊಸತು, ಸಪ್ನ ಬುಕ್‌ಹೌಸ್, ಬೆಂಗಳೂರು.

ನಾಗರತ್ನ ಟಿ.ಎನ್., ೨೦೦೬, ಗ್ರಂಥಸಂಪಾದನೆಯ ಸಮಸ್ಯೆಗಳು, ಪಾದೆಕಲ್ಲು ನರಸಿಂಹ ಭಟ್ಟ(ಸಂ), ಸುಕೃತಿ, ಪ್ರೊ.ಟಿ.ಕೇಶವಭಟ್ಟ ಸಂಸ್ಮರಣ ಸಮಿತಿ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

ಭಾನುಮತಿ ವೈ.ಸಿ, ೧೯೯೮, ಕನ್ನಡ ಹಸ್ತಪ್ರತಿ-ಗ್ರಂಥಸಂಪಾದನೆ, ಕಲಬುರ್ಗಿ ಎಂ.ಎಂ., ಮಹಾಮಾರ್ಗ(ಸಂ) ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಮಠ, ಗದಗ.

ಭಾನುಮತಿ ವೈ.ಸಿ., ೨೦೦೪, ಗ್ರಂಥಸಂಪಾದನೆ ಮತ್ತು ಸಂಶೋಧನೆ, ಆರ್ಯಾಂಬ ಪಟ್ಟಾಬಿ(ಸಂ), ಮಹಿಳಾ ಸಾಹಿತ್ಯ ಸಮೀಕ್ಷೆ, ಸಂವಹನ ಪ್ರಕಾಶನ, ಮೈಸೂರು.

ರೋಜಾ ಜೆ., ೨೦೦೬, ಮಹಿಳಾ ಹಸ್ತಪ್ರತಿ ಲಿಪಿಕಾರರು(ಸಂ), ಹಳ್ಳಿಕೇರಿ ಎಫ್.ಟಿ., ಹಸ್ತಪ್ರತಿ ಅಧ್ಯಯನ ಸಂಪುಟ ೩, ಸಂಚಿಕೆ ೨, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿನಯಾ ವಕ್ಕುಂದ, ೨೦೦೭, ವಚನಕಾರರ ಸಾಹಿತ್ಯ ಮೀಮಾಂಸೆ, ಸಬಿಹಾ ಭೂಮಿಗೌಡ (ಸಂ), ಕನ್ನಡ ಸಾಹಿತ್ಯ ಮೀಮಾಂಸೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಸಬೀಹಾ ಭೂಮಿಗೌಡ, ೨೦೦೩, ವ್ಯವಸ್ಥೆ ಮತ್ತು ಮಹಿಳಾ ಬರಹ, ಉಷಾ ಎಂ.(ಸಂ), ಮಹಿಳಾ ಅಧ್ಯಯನ ಸಂಪುಟ ೫, ಸಂಚಿಕೆ ೧-೨, ಜನವರಿ-ಡಿಸೆಂಬರ್ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಣ್ಣಯ್ಯ ಬಿ.ಎಸ್., ೨೦೦೬, ಕನ್ನಡ ಗ್ರಂಥಸಂಪಾದನೆ ವಿವಿಧ ಹಂತಗಳು, ಪಾದೆಕಲ್ಲು ನರಸಿಂಹ ಭಟ್ಟ(ಸಂ), ಸುಕೃತಿ, ಕೇಶವಭಟ್ಟ ಸರಸ್ಮರಣ ಸಮಿತಿ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

ಪಿಎಚ್.ಡಿ. ಅಪ್ರಕಟಿತ ಮಹಾಪ್ರಬಂಧಗಳು

ರಂಗಸ್ವಾಮಿ ಬಿ.ಟಿ., ೨೦೦೩, ಕನ್ನಡ ಗ್ರಂಥಸಂಪಾದನೆ : ಒಂದು ಅಧ್ಯಯನ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು.

೪. ತಿಳುವಳಿಕೆ ನೀಡಿದವರು

ಡಾ.ವೈ.ಸಿ. ಭಾನುಮತಿ, ಸಂದರ್ಶನ(ಮೈಸೂರು) ದಿನಾಂಕ: ೫.೧೦.೨೦೧೩

ಡಾ.ಟಿ.ಎನ್.ನಾಗರತ್ನ, ಸಂದರ್ಶನ(ಮೈಸೂರು) ದಿನಾಂಕ: ೧೯.೩.೨೦೧೭

ಟಿ.ಕೆ.ಇಂದೂಬಾಯಿ, ಸಂದರ್ಶನ(ಮೈಸೂರು) ದಿನಾಂಕ: ೨೦.೩.೨೦೧೭

ಡಾ. ಕಮಲಾ ಹಂಪನಾ, ಸಂದರ್ಶನ(ಬೆಂಗಳೂರು) ದಿನಾಂಕ : ೨೫.೧.೨೦೧೭

ಹಂಪ ನಾಗರಾಜಯ್ಯ, ಸಂದರ್ಶನ(ಬೆಂಗಳೂರು) ದಿನಾಂಕ: ೨೬.೧.೨೦೧೭

ಡಾ. ಎಂ. ಉಷಾ, ಸಂದರ್ಶನ(ಕನ್ನಡ ವಿಶ್ವವಿದ್ಯಾಲಯ, ಹಂಪಿ) ದಿನಾಂಕ: ೧೬.೯.೨೦೧೩

ಡಾ.ಡಿ. ಮೀನಾಕ್ಷಿ, ಸಂದರ್ಶನ(ಕನ್ನಡ ವಿಶ್ವವಿದ್ಯಾಲಯ, ಹಂಪಿ) ದಿನಾಂಕ: ೧೮.೯.೨೦೧೩

ಡಾ. ಶಾರದ, ಸಂದರ್ಶನ(ಕುಪ್ಪಂ) ದಿನಾಂಕ: ೨೨.೬.೨೦೧೬

ವಿಜಯಕುಮಾರಿ ಕರಿಕಲ್, ಸಂದರ್ಶನ(ಮೈಸೂರು ವಿ.ವಿ.) ದಿನಾಂಕ: ೧೪.೧೧.೨೦೧೬

